"ಅಭಿವೃದ್ಧಿ ಮತ್ತು ದುಸ್ಥಿತಿಯ ನೆಲೆಗಳು"

ರಾಯಚೂರು ಜಿಲ್ಲೆಯನ್ನು ಅನುಲಕ್ಷಿಸಿ

(ಕನ್ನಡ ವಿಶ್ವವಿದ್ಯಾಲಯಕ್ಕೆ ಅರ್ಥಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ ಪದವಿಗಾಗಿ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು
ಯಲ್ಲಪ್ಪ ತಾಯಪ್ಪ

ಮಾರ್ಗದರ್ಶಕರು
ಡಾ. ಟಿ.ಆರ್.ಚಂದ್ರಶೇಖರ
ವಿಶ್ರಾಂತ ಪ್ರಾಧ್ಯಾಪಕರು

ಸಮಾಜ ವಿಜ್ಞಾನಗಳ ನಿಕಾಯ
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ- ೫೮೩ ೨೭೬
೨೦೧೬

692

"ಅಭಿವೃದ್ಧಿ ಮತ್ತು ದುಸ್ಥಿತಿಯ ನೆಲೆಗಳು"

ರಾಯಚೂರು ಜಿಲ್ಲೆಯನ್ನು ಅನುಲಕ್ಷಿಸಿ

(ಕನ್ನಡ ವಿಶ್ವವಿದ್ಯಾಲಯಕ್ಕೆ ಅರ್ಥಶಾಸ್ತ್ರ ವಿಷಯದಲ್ಲಿ ಪಿಎಚ್.ಡಿ ಪದವಿಗಾಗಿ ಸಾದರಪಡಿಸುತ್ತಿರುವ ಮಹಾಪ್ರಬಂಧ)

ಸಂಶೋಧಕ

ಯಲ್ಲಪ್ಪ ತಾಯಪ್ಪ

ಮಾರ್ಗದರ್ಶಕರು

ಡಾ. ಟಿ.ಆರ್.ಚಂದ್ರಶೇಖರ

ವಿಶ್ರಾಂತ ಪ್ರಾಧ್ಯಾಪಕರು

ಸಮಾಜ ವಿಜ್ಞಾನಗಳ ನಿಕಾಯ

ಅಭಿವೃದ್ಧಿ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ- ೫೮೩ ೨೭೬

೨೦೧೬

ಮಾರ್ಗದರ್ಶಕರ ದೃಢೀಕರಣ ಪತ್ರ

ಯಲ್ಲಪ್ಪ ಇವರು **ಅರ್ಥಶಾಸ್ತ್ರ** ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ **"ಅಭಿವೃದ್ಧಿ ಮತ್ತು ದುಸ್ಥಿತಿಯ ನೆಲೆಗಳು : ರಾಯಚೂರು ಜಿಲ್ಲೆಯನ್ನು ಅನುಲಕ್ಷಿಸಿ"** ಎಂಬ ಅರ್ಥಶಾಸ್ತ್ರ ವಿಷಯದ ಈ **ಮಹಾಪ್ರಬಂಧವನ್ನು** ಕನ್ನಡ ವಿಶ್ವವಿದ್ಯಾಲಯದ **ಅಭಿವೃದ್ಧಿ ಅಧ್ಯಯನದ** ವಿಭಾಗಕ್ಕೆ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರೆ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಮಾರ್ಗದರ್ಶಕರು
(ಡಾ. ಟಿ.ಆರ್.ಚಂದ್ರಶೇಖರ್)
ವಿಶ್ರಾಂತ ಪ್ರಾಧ್ಯಾಪಕರು
ಅಭಿವೃದ್ಧಿ ಅಧ್ಯಯನ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಸ್ಥಳ: ವಿದ್ಯಾರಣ್ಯ
ದಿನಾಂಕ: / /೨೦೧೬

ಸಂಶೋಧಕರ ಪ್ರಮಾಣ ಪತ್ರ

ಯಲ್ಲಪ್ಪ ತಾಯಪ್ಪ ಆದ ನಾನು **"ಅಭಿವೃದ್ಧಿ ಮತ್ತು ದುಸ್ಥಿತಿಯ ನೆಲೆಗಳು : ರಾಯಚೂರು ಜಿಲ್ಲೆಯನ್ನು ಅನುಲಕ್ಷಿಸಿ"** ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಡಾ.ಟಿ.ಆರ್. ಚಂದ್ರಶೇಖರ ವಿಶ್ರಾಂತ ಪ್ರಾಧ್ಯಾಪಕರು, ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಸಮಾಜ ವಿಜ್ಞಾನಗಳ ನಿಕಾಯದ ಅಭಿವೃದ್ಧಿ ಅಧ್ಯಯನ ವಿಭಾಗಕ್ಕೆ ಅರ್ಥಶಾಸ್ತ್ರ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಉದ್ದೇಶ ಅಥವಾ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ
ದಿನಾಂಕ: / /೨೦೧೬

ಸಂಶೋಧಕರು
ಯಲ್ಲಪ್ಪ ತಾಯಪ್ಪ
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪರಿವಿಡಿ

ಪರಿಶಿಷ್ಟಗಳು

ಕೋಷ್ಟಕಗಳು

ಅಧ್ಯಾಯ–ಒಂದು

ಪ್ರಸ್ತಾವನೆ

ಅಧ್ಯಾಯ–ಒಂದು

ಪ್ರಸ್ತಾವನೆ

ಅಭಿವೃದ್ಧಿಯು ಲಾಗಾಯ್ತಿನಿಂದಲೂ ಆರ್ಥಿಕ ಚಟುವಟಿಕೆಗೆ ಮಾತ್ರ ಸೀಮಿತವಾಗಿತ್ತು. ಭಾರತದಲ್ಲಿಯು ಸಹ ಆರ್ಥಿಕ ಕ್ಷೇತ್ರಕ್ಕೆ ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡಲಾಗುತ್ತಿತ್ತು. ಆರ್ಥಿಕ ಕ್ಷೇತ್ರದಿಂದ ಉತ್ಪಾದನೆ ಹೆಚ್ಚಿಸಿ ವರಮಾನವನ್ನು ವೃದ್ಧಿಸಿದರೆ, ರಾಷ್ಟ್ರದ ವರಮಾನವನ್ನು ದ್ವಿಗುಣಗೊಳಿಸಿದರೆ ದೇಶ, ರಾಷ್ಟ್ರ ಅಭಿವೃದ್ಧಿ ಹೊಂದುತ್ತದೆ ಎಂಬ ಭ್ರಮೆ ಆವರಿಸಿಕೊಂಡಿತು. ಆರ್ಥಿಕ ಚಟುವಟಿಕೆಗಳಿಗಿಂತ ಭಿನ್ನವಾದ ಸಮಸ್ಯೆಗಳಿಂದಾಗಿ ಅಭಿವೃದ್ಧಿ ಕುಂಠಿತವಾಗುವುದನ್ನು ೧೯೯೦ರ ನಂತರ ವ್ಯಾಪಕ ಚರ್ಚೆಗೆ ಒಳಗಾಯಿತು. ಮಾನವ ಅಭಿವೃದ್ಧಿ ಎಂಬ ಪರಿಭಾವನೆ ಪ್ರಚಲಿತ ಸಂದರ್ಭದ ವಿಶ್ವದಲ್ಲಿ ಹಾಗೂ ರಾಷ್ಟ್ರಗಳ ಮಟ್ಟದಲ್ಲಿ ವ್ಯಾಪಕವಾದ ಚರ್ಚೆಗೆ ಒಳಗಾಗಿರುವ ಬಹು ದೊಡ್ಡ ಅಭಿವೃದ್ಧಿಯ ಪರಿಕಲ್ಪನೆಯಾಗಿದೆ. “ಅಭಿವೃದ್ಧಿಯ ಬಹು ಮುಖ್ಯ ಉದ್ದೇಶ ಮಾನವನ ಬದುಕಿನ ಆಯ್ಕೆಗಳ ವ್ಯಾಪ್ತಿಯನ್ನು ವರ್ಧಿಸುವುದಾಗಿದೆ. ಜನತೆ ಸುಖಕರವಾಗಿ ದೃಢಕಾಯರಾಗಿ, ಆರೋಗ್ಯವಾಗಿ, ಅಕ್ಷರಸ್ಥರಾಗಿ ಬಹುಕಾಲ ಬಾಳುವಂತಹ ವಾತಾವರಣವನ್ನು ನಿರ್ಮಿಸುವುದು ಅಭಿವೃದ್ಧಿಯ ಗುರಿಯಾಗಿದೆ”[೧](ಹಕ್, ೧೯೯೬;೧೪) ಪ್ರಸ್ತುತ ಅಧ್ಯಯನದಲ್ಲಿ ರಾಯಚೂರು ಜಿಲ್ಲೆ ಅಭಿವೃದ್ಧಿಯ ಗತಿಶೀಲತೆ ಮತ್ತು ಅಭಿವೃದ್ಧಿಯ ಅಂತರ ಅಸಮಾನತೆಗಳನ್ನು ಮಾನವ ಅಭಿವೃದ್ಧಿ ವಿಚಾರ ಪ್ರನಾಳಿಕೆಯ ನೆಲೆಯಲ್ಲಿ ಹಿಡಿದಿಡಲು ಪ್ರಯತ್ನಿಸಲಾಗಿದೆ.

ಮೊದಲ ಭಾಗವು ಅಧ್ಯಯನದ ವಿಷಯದ ‘ಸಮಸ್ಯೀಕರಣ’ ಕುರಿತಂತೆ ನಿರೂಪಣೆಯನ್ನು ನೀಡುತ್ತದೆ. ಎರಡನೆಯ ಭಾಗದಲ್ಲಿ ಅಭಿವೃದ್ಧಿ ಮತ್ತು ದುಸ್ಥಿತಿಯ ನೆಲೆಗಳ ಬಗ್ಗೆ ತೀವ್ರ ಆಸಕ್ತಿಗೆ ಕಾರಣಗಳೇನು ಎಂಬುದನ್ನು ವಿವರಿಸಲಾಗಿದೆ, ಮೂರನೆ ಭಾಗವು ಅಧ್ಯಯನಕ್ಕೆ ಹುಟ್ಟಿಕೊಂಡ ಪ್ರಶ್ನೆಗಳು ಮತ್ತು ಮಹಾಪ್ರಬಂಧದ ಉದ್ದೇಶಗಳನ್ನು ಒಳಗೊಂಡಿದೆ. ನಾಲ್ಕನೆಯ ಭಾಗದಲ್ಲಿ ಅಧ್ಯಯನ ಸ್ವರೂಪ, ವ್ಯಾಪ್ತಿ ಮತ್ತು ಪ್ರಾಮುಖ್ಯತೆಗಳನ್ನು ವಿವರಿಸುತ್ತದೆ. ಕೊನೆಯ ಭಾಗವು ಅಧ್ಯಯನ ವಿಧಾನ ಮತ್ತು ಅಧ್ಯಾಯಗಳ ವಿನ್ಯಾಸವನ್ನು ವಿಶ್ಲೇಷಿಸಲಾಗಿದೆ.

೧.೨. ಅಧ್ಯಯನ ವಿಷಯದ ಸಮಸ್ಯೀಕರಣ

ಅಭಿವೃದ್ಧಿಯಲ್ಲಿ ಪ್ರಾದೇಶಿಕ ಅಸಮಾನತೆಗಳು ಭಾರತದಂತಹ ರಾಷ್ಟ್ರಕ್ಕೆ ಮತ್ತು ಕರ್ನಾಟಕದಂತಹ ರಾಜ್ಯಕ್ಕೆ ಮಾತ್ರ ಸೀಮಿತವಾದ ವಿಶಿಷ್ಟ ಸಂಗತಿಗಳೇನಲ್ಲ. ಇವು ಜಾಗತಿಕ ಸಂಗತಿಗಳು. ಅಭಿವೃದ್ಧಿಯ ಇತಿಹಾಸವನ್ನು ಅವಲೋಕಿಸಿದಾಗ, ವಿಶ್ವದ ಎರಡು ಗೋಳಗಳಾದ ಉತ್ತರ ಮತ್ತು ದಕ್ಷಿಣ ಗೋಳಗಳೆರಡರಲ್ಲಿಯೂ ಅಭಿವೃದ್ಧಿ ಸಾಮಾನ್ಯವಾಗಿ ಕೆಲವೊಂದು ಪ್ರಶಸ್ತ ಪ್ರದೇಶಗಳಲ್ಲಿ ಮಾತ್ರ ನೆಲೆಗೊಂಡಿರುವ ಹಾಗೂ ಆ ಅಭಿವೃದ್ಧಿ ನೆಲೆಗೊಂಡಿರುವ ಪ್ರದೇಶ ಉಳಿದ ಪ್ರದೇಶಗಳಿಗಿಂತ ತೀವ್ರಗತಿಯಲ್ಲಿ ಬೆಳವಣಿಗೆ ಸಾಧಿಸಿಕೊಳ್ಳುತ್ತಿರುವುದು ಢಾಳಾಗಿ ಗೋಚರಿಸುತ್ತದೆ. ಈ ಬಗೆಯ ಬೆಳವಣಿಗೆ ಗತಿಯಲ್ಲಿನ ಅಸಮಾನತೆಯ ಅಂತರಗಳನ್ನು ಪ್ರಜ್ಞಾಪೂರ್ವಕವಾಗಿ ತಡೆಯದಿದ್ದರೆ ಅವು ಮತ್ತಷ್ಟು ಉಲ್ಬಣಗೊಳ್ಳುವ ಅಪಾಯವಿದೆ. ಈ ಅಪಮಾನತೆಯ ಹಾಗೂ ಅಂತರಗಳ ಅವಾಂತರಗಳು ಬದುಕಿನ ಮೇಲೂ ತೀವ್ರ ಪರಿಣಾಮ ಬೀರಬಲ್ಲವಾಗಿವೆ. "ಅಸಮಾನತೆಯು ಸಾಮಾಜಿಕ ಉದ್ವೇಗ ಮತ್ತು ಹಿಂಸೆಗೂ ಮೂಲವಾಗಬಹುದು"[೨](ಸೇನ್, ೧೯೯೫; ೯೩). ಅಭಿವೃದ್ಧಿಯಲ್ಲಿಯ ಪ್ರಾದೇಶಿಕ ಅಂತರ ಅಸಮಾನತೆಗಳು ಆರ್ಥಿಕ ಸಾಮಾಜಿಕ ಅವಾಂತರ ಹಾಗೂ ಅಪಾಯಗಳನ್ನು ಸೃಷ್ಟಿಸುವ ಸಾಧ್ಯತೆ ಇರುವುದರಿಂದ ಅವುಗಳನ್ನು ಅಲಕ್ಷಿಸಲು ಸಾಧ್ಯವಿಲ್ಲ. ಈ ಅಸಮಾನತೆಗಳು ರಾಜಕೀಯ ಅಖಂಡತೆಗೆ ಧಕ್ಕೆ ತರುವಂಥದ್ದಾಗಿವೆ. ಭಾರತದ ಸಂವಿಧಾನದಲ್ಲಿ ಪ್ರಮುಖ ಗುರಿಗಳಲ್ಲಿ 'ಸಮಾನತೆ' ಸಹ ಒಂದಾಗಿದೆ. "ಸಂವಿಧಾನದ ೪೪ನೆಯ ತಿದ್ದುಪಡಿಯು ಸರಕಾರವು ವಿವಿಧ ಗುಂಪುಗಳ ನಡುವಿನ ಹಾಗೂ ವಿಭಿನ್ನ ವಲಯಗಳ ನಡುವಿನ ವರಮಾನ ಮತ್ತು ಅವಕಾಶಗಳಲ್ಲಿಯ ಅಸಮಾನತೆಯನ್ನು ಕಡಿಮೆ ಮಾಡಲು ಪ್ರಯತ್ನ ಪಡಬೇಕೆಂದು ತಿಳಿಸಿದೆ".[೩](ವ್ಯಾಸಲು, ೧೯೯೭; ೧) ಸಂವಿಧಾನದ ೧೬ನೇ ವಿಧಿ ಸಹ ದೇಶದ, ರಾಜ್ಯದ, ವಿವಿಧ ಗುಂಪು, ವಲಯಗಳ ನಡುವೆ ಸಮಾನತೆ ಇರಬೇಕೆಂಬುದನ್ನು ಸಾರುತ್ತದೆ. ಆದ್ದರಿಂದ ವಿವಿಧ ವಲಯಗಳ ನಡುವಿನ, ಮತ್ತು ಅಂತರ ವಲಯಗಳ ನಡುವಿನ ಅಂತರ ಅಸಮಾನತೆಗಳ ತೀವ್ರತೆಯನ್ನು ಕುಗ್ಗಿಸುವುದು ಸರಕಾರದ ಆದ್ಯ ಕರ್ತವ್ಯಗಳಲ್ಲಿ ಒಂದಾಗಿದೆ. ದೇಶದ ಐಕ್ಯತೆ, ಅಖಂಡತೆಯ ದೃಷ್ಟಿಯಿಂದ, ರಾಜಕೀಯ ಸ್ಥಿರತೆಯ ದೃಷ್ಟಿಯಿಂದ ಅಂತರ ಅಸಮಾನತೆಗಳನ್ನು ಕಡಿಮೆ ಮಾಡುವುದು ಅತ್ಯಂತ ಮಹತ್ವದ್ದು ಅಷ್ಟೇ ಅಲ್ಲ ಅವಶ್ಯಕವಾಗಿರುತ್ತದೆ.

ಜಾಗತಿಕ ಮಟ್ಟದಲ್ಲಿ ಪ್ರಾದೇಶಿಕ ಅಭಿವೃದ್ಧಿ ಕುರಿತಂತೆ ಅಧ್ಯಯನಗಳು ನಡೆದಿವೆ. (ವಿಲಿಯಂಸನ್, ೧೯೬೫; ಹರ್ಷಮನ್, ೧೯೫೮; ಮಿರ್ಡಾಲ್, ೧೯೫೭; ಕುಝುನೆಟ್ಸ್, ೧೯೬೯). ಈ ಅಧ್ಯಯನಗಳ ಮುಖ್ಯ ತಥ್ಯವೆಂದರೆ ಬೆಳವಣಿಗೆಯಾಗುತ್ತಿರುವ ಆರ್ಥಿಕತೆಯಲ್ಲಿ ಪ್ರಾರಂಭ ಹಂತದಲ್ಲಿ ಪ್ರಾದೇಶಿಕ ಅಸಮಾನತೆಗಳ ಅಂತರಗಳು ಹೆಚ್ಚಾಗಿ, ಆರ್ಥಿಕತೆಯು ಉಚ್ಛ್ರಾಯ ಸ್ಥಿತಿಯನ್ನು ತಲುಪಿದ ನಂತರ ಅಂತರದ ಅಸಮಾನತೆಗಳು ಕುಗ್ಗುತ್ತವೆ. ಈ ಸಮಸ್ಯೆಯನ್ನು ಕುರಿತಂತೆ ಭಾರತದಲ್ಲಿ ಅನೇಕ ಅಧ್ಯಯನಗಳು ನಡೆದಿವೆ.[೪](ಮಾಥೂರ್ ೧೯೮೩; ಕುಂಡು, ೧೯೯೬; ನೇರ್, ೧೯೮೨). ಈ ಅಧ್ಯಯನಗಳು ಅಭಿವೃದ್ಧಿಯ ಪ್ರಾದೇಶಿಕ ಅಸಮಾನತೆಗೆ

ಕಾರಣಗಳನ್ನು ತಿಳಿಸಿ, ಅಸಮಾನತೆಯ ಅಂತರಗಳನ್ನು ಕುಗ್ಗಿಸುವುದಕ್ಕಾಗಿ ಅಭಿವೃದ್ಧಿಯಲ್ಲಿ ಪ್ರಾದೇಶಿಕ ಸಮಾನತೆಯನ್ನು ಪ್ರಚೋದಿಸುವ ಕ್ರಿಯೆಗಳನ್ನು ಕೈಗೊಳ್ಳುವಂತೆ ಸಲಹೆ ಮಾಡಿವೆ. "ಭಾರತದಲ್ಲಿ ಸ್ವಾತಂತ್ರ್ಯ ದೊರೆತಾಗಿನಿಂದಲೂ ಪ್ರಾದೇಶಿಕ ಅಸಮಾನತೆಗಳ ತೀವ್ರತೆಯನ್ನು ಕಡಿಮೆ ಮಾಡಲು ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಾಯಿತು. ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ಕುರಿತಂತೆ ೧೯೬೮ರಲ್ಲಿ ಯೋಜನಾ ಆಯೋಗವು ಪಾಂಡೆ ಸಮಿತಿ ಮತ್ತು ವಾಂಚೂ ಸಮಿತಿಗಳನ್ನು ರಚಿಸಿತು. ಈ ಯೋಜನಾ ಅವಧಿಯಲ್ಲಿ ಜಿಲ್ಲಾ ಯೋಜನೆಗಳನ್ನು ತಯಾರಿಸುವ ಕಾರ್ಯವು ಸಹ ಆರಂಭಗೊಂಡಿತ್ತು." (ರಾವ್, ೧೯೮೪). ಪ್ರಾದೇಶಿಕ ಅಸಮಾನತೆಗಳ ತೀವ್ರತೆಯನ್ನು ಕುಗ್ಗಿಸುವುದಕ್ಕಾಗಿಯೇ ೭೦ರ ದಶಕದಲ್ಲಿ ಕ್ಷೇತ್ರಾಧಾರಿತ ಯೋಜನೆಗಳನ್ನು ಕಾರ್ಯಾಚರಣೆಯಲ್ಲಿ ತರಲಾಯಿತು. ಅಲ್ಲಿಂದೀಚೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪ್ರಾದೇಶಿಕ ಅಸಮಾನತೆಯ ಅಂತರವನ್ನು ಕುಗ್ಗಿಸಲು ಹಲವಾರು ನೀತಿ-ನಿರೂಪಣೆಗಳನ್ನು ಜಾರಿಯಲ್ಲಿ ತಂದ ನಂತರವೂ ಕರ್ನಾಟಕವನ್ನು ಒಳಗೊಂಡಂತೆ, ಭಾರತದಲ್ಲಿ ಪ್ರಾದೇಶಿಕ ಅಂತರ-ಅಸಮಾನತೆಗಳು ತೀವ್ರಗೊಳ್ಳುತ್ತಲೇ ನಡೆದಿವೆ. ಕರ್ನಾಟಕವು ಪ್ರಾದೇಶಿಕ ಯೋಜನೆ, ಪ್ರಾದೇಶಿಕ ನೀತಿಗಳಿಗೆ ಸಂಬಂಧಿಸಿದಂತೆ ಸುದೀರ್ಘ ಇತಿಹಾಸವನ್ನೇ ಹೊಂದಿದೆ. ಕರ್ನಾಟಕದಲ್ಲಿ ಸರ್.ಎಂ.ವಿಶ್ವೇಶ್ವರಯ್ಯ, ಸರ್.ಮಿರ್ಜಾ ಇಸ್ಮಾಯಿಲ್‌ರವರ ಕಾಲದಲ್ಲಿಯೇ ಪ್ರಾದೇಶಿಕ ನೀತಿಗಳು ನಿರೂಪಿಸಲ್ಪಟ್ಟಿದ್ದವು. ಕರ್ನಾಟಕ ಅಭಿವೃದ್ಧಿಗೆ ಸಂಬಂಧಿಸಿದ ಪ್ರಾದೇಶಿಕ ಅಂತರ ಅಸಮಾನತೆಗಳು, ಅದರ ಕಾರಣಗಳು ಮತ್ತು ಪರಿಣಾಮಗಳನ್ನು ಅನೇಕ ಅಧ್ಯಯನಗಳು ವಿವರಿಸಲು ಪ್ರಯತ್ನಿಸಿವೆ (ರಾವ್, ೧೯೮೪; ಶೇಷಾದ್ರಿ ೧೯೯೧; ಬಲ್ಲ, ೧೯೯೭; ಸುಧೀರ್ ಕೃಷ್ಣ; ೧೯೯೬). ಆದರೆ ಇವರೆಗೆ ನಡೆದ ಅಧ್ಯಯನಗಳು ಅಭಿವೃದ್ಧಿಗೆ ಸಂಬಂಧಿಸಿದ ಪ್ರಾದೇಶಿಕ ಅಸಮಾನತೆಯನ್ನು ವರಮಾನ, ಬಂಡವಾಳ, ಕೃಷಿ, ಕೈಗಾರಿಕೆ, ಮುಂತಾದ ಮಾನದಂಡಗಳನ್ನು ಒಳಗೊಂಡ ಸೀಮಿತ ನೆಲೆಯಲ್ಲಿ ಪರಿಭಾವಿಸಿಕೊಂಡಿವೆ. ಈ ಮೊದಲ ಅಭಿವೃದ್ಧಿ ಸಿದ್ಧಾಂತ ಅಧ್ಯಯನಗಳು' ವಲಯ, ಬಂಡವಾಳ; ಹೂಡಿಕೆ, ಕಾಲಘಟ್ಟ, ಮುಂತಾದವುಗಳಿಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡಿ ಪ್ರದೇಶವನ್ನು ಕಡೆಗಣಿಸಿದ್ದವು. ಈ ಸಿದ್ಧಾಂತಗಳ ಅಧ್ಯಯನಗಳು ಅಭಿವೃದ್ಧಿಯಲ್ಲಿಯ ಹಲವಾರು ಅಂಶಗಳಾದ ಲಿಂಗಸಂಬಂಧಿ ಆಯಾಮಗಳು, ಜಾತಿಯ ಸ್ವರೂಪ, ನಗರ ಗ್ರಾಮೀಣ ನಡುವಿನ ಅಸಮಾನತೆ ಮತ್ತು ಸಶಕ್ತೀಕರಣ ಮುಂತಾದ ವಿಷಯ ಕುರಿತು ಗಂಭೀರವಾದ ಅಧ್ಯಯನಗಳನ್ನಾಗಲೀ, ಚರ್ಚೆಗಳನ್ನಾಗಲೀ ನಡೆಸಿಲ್ಲ. ಮಾನವ ಅಭಿವೃದ್ಧಿ ಎಂಬುದು ಇತ್ತೀಚೆಗಷ್ಟೇ ಬೆಳವಣಿಗೆಯಾದ ವಿಚಾರ ಪ್ರಣಾಳಿಕೆಯಾಗಿದೆ. ಆದ್ದರಿಂದ ಪ್ರಾದೇಶಿಕ ಅಸಮಾನತೆಗಳನ್ನು ಕುರಿತಂತೆ ಮಾನವ ಅಭಿವೃದ್ಧಿ ನೆಲೆಗಟ್ಟಿನಿಂದ ಅಧ್ಯಯನಗಳ ನಡೆದಿಲ್ಲ. ಇಂದು ಅಭಿವೃದ್ಧಿಗೆ ಸಂಬಂಧಿಸಿದ ಪ್ರಾದೇಶಿಕ ಅಸಮಾನತೆಯ ಅಂತರಗಳನ್ನು ಸೀಮಿತ ವರಮಾನಮುಖಿ ನೆಲೆಯಲ್ಲಿ ಪರಿಭಾವಿಸುವುದಕ್ಕಿಂತಲೂ ಅದನ್ನು ಸಾಮಾಜಿಕ ನೆಲೆಯಲ್ಲಿ, ಲಿಂಗಸಂಬಂಧಿ ನೆಲೆಯಲ್ಲಿ ಮತ್ತು ಮಾನವ ಅಭಿವೃದ್ಧಿ ನೆಲೆಯಲ್ಲಿ ಪರಿಭಾವಿಸಿಕೊಳ್ಳುವುದು

ಅತ್ಯಂತ ಅವಶ್ಯಕವಾಗಿದೆ. ಕೇವಲ ವರಮಾನದಲ್ಲಿನ ಅಸಮಾನತೆಯು ಪ್ರಾದೇಶಿಕ ಅಸಮಾನತೆಗೆ ಕಾರಣವಾಗುವಲ್ಲಿ ಒಂದು ಅಂಶವೇ ಹೊರತು, ಅದೇ ನಿರ್ಣಾಯಕವಲ್ಲ. ವರಮಾನದೊಂದಿಗೆ ಶಿಕ್ಷಣ, ಆರೋಗ್ಯ ಸೌಲಭ್ಯಗಳ ವಿಭಿನ್ನತೆ ಸಹ ಪ್ರಾದೇಶಿಕ ಅಸಮಾನತೆಗೆ ಕಾರಣವಾಗಿರುತ್ತವೆ. ಅಂತರ ಅಸಮಾನತೆ ಕುರಿತಂತೆ ಇದುವರೆಗೂ ನಡೆದುಕೊಂಡು ಬಂದಿರುವ ವರಮಾನ ಕೇಂದ್ರಿತ ಅಭಿವೃದ್ಧಿ ವಿಚಾರ ಪ್ರಣಾಳಿಕೆಯ ಮಿತಿಗಳನ್ನು ಅಮರ್ತ್ಯಸೇನ್ ಹೀಗೆ ಗುರುತಿಸಿದ್ದಾರೆ.

"Economic inequality only Captures a small part of the Social inequalities the relevant dimensions of inequality include not only income but also health achivement, literarcy rate, self esteem, and other aspects of well being and the social divisions to be considred include not only different income groups but also other divisions based on caste, gender, age, accupation, education levels, and related attributes"[೬] (Sen, ೧೯೯೫; ೯೬)

ಇಲ್ಲಿಯವರೆಗೂ ವರಮಾನದ, ಆರ್ಥಿಕ ರಂಗದಲ್ಲಿಯ ಅಸಮಾನತೆಯೇ ಒಟ್ಟು ಪ್ರಾದೇಶಿಕ ಅಸಮಾನತೆಗತೆ ಕಾರಣ ಎಂಬ ಮನೋಭಾವನೆ ಇದ್ದಿತು. ಹೀಗಾಗಿ ಸರಕಾರದ ನೀತಿ ನಿರೂಪಣೆಗಳು ಈ ದೃಷ್ಟಿಯಿಂದಲೇ ರೂಪಿಸಲ್ಪಟ್ಟವು. ಪ್ರಾದೇಶಿಕ ಅಸಮಾನತೆಗೆ ವರಮಾನೇತರ ಅಂಶಗಳು ಕಾರಣವಾಗಿರುತ್ತವೆ. ಹೀಗಾಗಿ ಭಾರತವನ್ನು ಒಳಗೊಂಡಂತೆ ಕರ್ನಾಟಕದಲ್ಲಿ ಪ್ರಾದೇಶಿಕ ಅಸಮಾನತೆಗಳು ಸಂಪೂರ್ಣವಾಗಿ ಕುಗ್ಗಲಿಲ್ಲ.

ಯುಎನ್‌ಡಿಪಿಯು ೧೯೯೦ರಲ್ಲಿ ಪ್ರಕಟಿಸಿದ ಮೊದಲನೆಯ ಮಾನವ ಅಭಿವೃದ್ಧಿ ವರದಿಯು ತಿಳಿಸಿರುವಂತೆ ಹೆಚ್ಚಾದ ವರಮಾನ ತನ್ನಿಂದ ತಾನಾಗಿ ಮಾನವ ಅಭಿವೃದ್ಧಿಯಾಗಿ ಪರಿವರ್ತಿತವಾಗುವುದಿಲ್ಲ. ಪ್ರಪಂಚದ ಹಲವಾರು ರಾಷ್ಟ್ರಗಳಲ್ಲಿ ವರಮಾನ ಹೆಚ್ಚಿದ್ದರೂ, ಮಾನವ ಅಭಿವೃದ್ಧಿಯಲ್ಲಿ ಆ ರಾಷ್ಟ್ರಗಳು ಹಿಂದುಳಿದಿವೆ. ಹಾಗೆಯೇ ೧೯೯೫ರ ಮಾನವ ಅಭಿವೃದ್ಧಿ ವರದಿಯು, ಮಾನವ ಅಭಿವೃದ್ಧಿ ಲಿಂಗ ಸಂವೇದಿಯಾಗಿರದಿದ್ದರೆ ಅದು ಅಭಿವೃದ್ಧಿಗೆ ಅಪಾಯಕರವಾದುದು ಎಂಬುದನ್ನು ಪ್ರಚುರ ಪಡಿಸಿದೆ. ಈ ಎಲ್ಲಾ ಹಿನ್ನೆಲೆಯಲ್ಲಿ ಇಂದು ಅಭಿವೃದ್ಧಿಯನ್ನು ಮಾನವ ಅಭಿವೃದ್ಧಿ ನೆಲೆಯಲ್ಲಿ, ಲಿಂಗಸಂವೇದಿ ನೆಲೆಯಲ್ಲಿ ಅಧ್ಯಯನ ಮಾಡುವುದು ಅವಶ್ಯಕವಾಗಿದೆ. ಮಾನವ ಅಭಿವೃದ್ಧಿಯ ಪ್ರಕ್ರಿಯೆಗಳು ಜನಮುಖಿಯೂ ಲಿಂಗ ವಿಶಿಷ್ಟವೂ ಆಗಿರುತ್ತವೆ. ಅಸಮಾನತೆಯನ್ನು ಆರ್ಥಿಕ ದೃಷ್ಟಿಯಿಂದ ನೋಡುವುದು ನಿಸ್ಸಂದೇಹವಾಗಿಯೂ ಮಹತ್ವವಾದುದು. ಅವಕಾಶಗಳ ದೃಷ್ಟಿಯಿಂದ ಪ್ರಾದೇಶಿಕ ಅಸಮಾನತೆಯನ್ನು ನೋಡುವುದು ಸಹ ಮುಖ್ಯವಾದುದು. ಅಭಿವೃದ್ಧಿಯ ಪ್ರಾದೇಶಿಕ ಅಂತರಗಳನ್ನು, ಮಾನವ ಅಭಿವೃದ್ಧಿ, ಮಾನವ ಧಾರಣಶಕ್ತಿಗಳ ದೃಷ್ಟಿಯಿಂದ ಅಧ್ಯಯನ ಮಾಡುವುದು ಮುಖ್ಯವಾದುದು ಹಾಗೂ ನಿರ್ಣಾಯಕವಾದುದು ಆಗಿದೆ. ಮಾನವನ ಆಯ್ಕೆಯ ವ್ಯಾಪ್ತಿಯನ್ನು ವರ್ಧಿಸುವುದು, ಮಾನವ ಸುಖವಾಗಿ, ಆರೋಗ್ಯವಾಗಿ ಬಹುಕಾಲ ಬದುಕುವಂತೆ ಮಾಡುವುದೇ ಮಾನವ ಅಭಿವೃದ್ಧಿ. ಇಂತಹ

ಅಧ್ಯಯನಗಳು ಜನರ ಧಾರಣಶಕ್ತಿಯನ್ನು ಹೆಚ್ಚಿಸಲು ಬೇಕಾಗುವ ಅಂಶಗಳ ಬಗ್ಗೆ ಅರಿವನ್ನು ಮೂಡಿಸುತ್ತವೆ. ಈ ದೃಷ್ಟಿಯಿಂದ ಮಾನವ ಅಭಿವೃದ್ಧಿ ವಿಚಾರ ಪ್ರಣಾಳಿಕೆಯು, ಹಿಂದಿನ ಅಭಿವೃದ್ಧಿ ಮಾದರಿಗಳಿಂತ ಹೆಚ್ಚು ಪ್ರಸ್ತುತತೆಯನ್ನು ಮಹತ್ವವನ್ನು ಪಡೆದಿದೆ.

೧೯೯೧ರ ನಂತರ ಪ್ರಾದೇಶಿಕ ಅಸಮಾನತೆ ಸಮಸ್ಯೆಗಳು ಹೊಸ ಆಯಾಮವನ್ನು ಪಡೆಯುತ್ತಿವೆ. ಜಾಗತೀಕರಣ ಪ್ರಕ್ರಿಯೆಯಲ್ಲಿ ಸರಕಾರ/ಪ್ರಭುತ್ವವು ನಿಕೃಷ್ಟಗೊಂಡು ಮಾರುಕಟ್ಟೆ ವ್ಯವಸ್ಥೆಯು ಬಲಿಷ್ಠಗೊಳ್ಳುತ್ತಿದೆ. ಮಾರುಕಟ್ಟೆ ವ್ಯವಸ್ಥೆಯು ವ್ಯಾಪಾರ, ವಾಣಿಜ್ಯಗಳಿಗೆ ಹೆಚ್ಚಿನ ಒತ್ತನ್ನು ನೀಡಿ ಸಾಮಾಜಿಕ ವಲಯವನ್ನು ನಿರ್ಲಕ್ಷಿಸುತ್ತವೆ. ಧಾರಣಶಕ್ತಿಗಳ ಅಸಮಾನತೆಗಳು ಪ್ರಾದೇಶಿಕ ಅಸಮಾನತೆಗೆ ಕಾರಣವಾಗಿರುತ್ತದೆ. ಧಾರಣಶಕ್ತಿಯನ್ನು ಹೆಚ್ಚಿಸಬೇಕಾದರೆ, ಸಾಮಾಜಿಕ ವಲಯವನ್ನು ಸದೃಢಗೊಳಿಸಬೇಕಾಗುತ್ತದೆ. ಸಾಮಾಜಿಕ ವಲಯವನ್ನು ಅಭಿವೃದ್ಧಿ ಪಡಿಸಬೇಕಾದರೆ, ಸರ್ಕಾರವೇ ಪ್ರತ್ಯಕ್ಷವಾಗಿ ಈ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಬೇಕು. ಆದರೆ ಪ್ರಸ್ತುತ, ಸರಕಾರವು ನಿಕೃಷ್ಟೀಕರಣಗೊಳ್ಳುತ್ತಿರುವ ಸಂದರ್ಭದಲ್ಲಿ ಪ್ರಾದೇಶಿಕ ಅಸಮಾನತೆಗಳು ತೀವ್ರಗೊಳ್ಳುವ ಪ್ರವೃತ್ತಿಯನ್ನು ತೋರಿಸುತ್ತವೆ. ಆದಾಗ್ಯೂ ಸರಕಾರವು Convergent agent ಆಗಿರುವುದರಿಂದ ಸಾಮಾಜಿಕ ಕಲ್ಯಾಣಕ್ಕಾಗಿ Convergenceಗೆ ಪ್ರಯತ್ನಪಡಬೇಕಾಗುತ್ತದೆ. ಭಾರತ ಮತ್ತು ಅದರ ರಾಜ್ಯಗಳಲ್ಲಿ ಜಾಗತೀಕರಣ ಕ್ರಿಯೆ ಚಾಲ್ತಿಯಲ್ಲಿದೆ. ಪ್ರಾದೇಶಿಕ ಅಸಮಾನತೆಯನ್ನು ವರಮಾನ ಕೇಂದ್ರಿತವಾಗಿ ಹಲವಾರು ಅಧ್ಯಯನಗಳು ನೋಡಿವೆ. ವರಮಾನದಲ್ಲಿಯ ಅಸಮಾನತೆಗಳು ಮಾನವ ಅಭಿವೃದ್ಧಿಯಲ್ಲಿಯ ಪ್ರಾದೇಶಿಕ ಅಸಮಾನತೆಯಂತೆ ಇರುತ್ತದೆ ಎಂದು ಹೇಳಲಿಕ್ಕೆ ಬರುವುದಿಲ್ಲ. ಇಂದು ಪ್ರಾದೇಶಿಕ ಅಸಮಾನತೆಯನ್ನು ವರಮಾನ ಹಾಗೂ ಮಾನವ ಅಭಿವೃದ್ಧಿ ಎರಡು ಮಾನದಂಡಗಳ ನೆಲೆಯಿಂದಲೂ ನೋಡುವ ಅವಶ್ಯಕತೆ ಇದೆ.

ಈ ಎಲ್ಲ ಅಂಶಗಳ ಹಿನ್ನೆಲೆಯಲ್ಲಿ ಅಭಿವೃದ್ಧಿಯ ದುಸ್ಥಿತಿಯ ಅಸಮಾನತೆಗಳನ್ನು ಮಾನವ ಅಭಿವೃದ್ಧಿ ದೃಷ್ಟಿಕೋನದಿಂದ ಅಧ್ಯಯನ ನಡೆಸುವುದು ಅತ್ಯಂತ ಮಹತ್ವದ್ದಾಗಿದೆ."Human development makes significant contribution in resoliving the market versus state controversy and makes it clear to the developing contries that it is for them to go beyond the conoroverey and redssign the rtle of both market and Goverment"[೭] (Seshadri; ೧೯೯೭) ಈ ಹಿನ್ನೆಲೆಗಳ ದೃಷ್ಟಿಯಿಂದ ಅಭಿವೃದ್ಧಿ ದುಸ್ಥಿತಿಯ ಅಸಮಾನತೆಯ ಅಧ್ಯಯನವನ್ನು ಮಾನವ ಅಭಿವೃದ್ಧಿಯ ನೆಲೆಯಲ್ಲಿ ಕೈಗೊಳ್ಳುವುದು ಅತ್ಯಂತ ಸಮಂಜಸವೆಂದು ಭಾವಿಸಲಾಗಿದೆ.

ಪ್ರಸ್ತುತ ಅಧ್ಯಯನವು ಕರ್ನಾಟಕದ ಹಿಂದುಳಿದ ಭಾಗವಾದ ಹೈದ್ರಾಬಾದ್ ಕರ್ನಾಟಕದ ಅತಿ ಹಿಂದುಳಿದ ಜಿಲ್ಲೆಯಾದ ರಾಯಚೂರು ಜಿಲ್ಲೆಯ ಐದು ತಾಲ್ಲೂಕುಗಳನ್ನು ಒಳಗೊಂಡ ಕರ್ನಾಟಕ ರಾಜ್ಯ ಮತ್ತು ಇತರ ಜಿಲ್ಲೆಗಳೊಂದಿಗೆ ತುಲನೆ ಮಾಡುವುದರೊಂದಿಗೆ ಅವುಗಳ ನಡುವಿನ ಅಸಮಾನತೆ ಮತ್ತು ದುಸ್ಥಿತಿಯನ್ನು ತಾಲೂಕು ತಾಲೂಕುಗಳ ನಡುವಿನ ಅಂತರ

ಅಸಮಾನತೆಗಳನ್ನು ಮಾನವ ಅಭಿವೃದ್ಧಿ ನೆಲೆಯಲ್ಲಿ ವಿಶ್ಲೇಷಿಸಿದೆ. ಅಲ್ಲದೇ, ಪ್ರಸ್ತುತ ಅಧ್ಯಯನ ಜನ ಸಾಮಾನ್ಯರ ಕೇಂದ್ರಿತ ಅಭಿವೃದ್ಧಿ ಸಿದ್ಧಾಂತದ ಮೇಲೆ ಪ್ರಾದೇಶಿಕ ಅಸಮಾನತೆ ಮತ್ತು ದುಸ್ಥಿತಿಗಳನ್ನು ಗುರುತಿಸಿ, ಅವುಗಳನ್ನು ನಿವಾರಿಸಲು ಬೇಕಾಗುವ ಜ್ಞಾನವನ್ನು ಒದಗಿಸಬಲ್ಲುದು ಎಂದು ಆಶಿಸಲಾಗಿದೆ.

೧.೩ ವಿಷಯದ ಆಸಕ್ತಿಗೆ ಕಾರಣಗಳು

ಅಭಿವೃದ್ಧಿಯನ್ನು ಮೊದಲು ಆರ್ಥಿಕ ನೆಲೆಗೆ ಮಾತ್ರ ಸಮೀಕರಿಸಿ ವಿಶ್ಲೇಷಿಸಲಾಗುತ್ತಿತ್ತು. ಒಂದು ಅಖಂಡ, ಏಕರೂಪಿ, ಲಿಂಗ ನಿರಪೇಕ್ಷ, ಮೌಲ್ಯ ನಿರಪೇಕ್ಷ ಪ್ರಕ್ರಿಯೆಯಾಗಿ ಪರಿಭಾವಿಸಿಕೊಳ್ಳಲಾಗಿತ್ತು. ಪ್ರಸ್ತುತ ಅಧ್ಯಯನವು ಅಭಿವೃದ್ಧಿ ಪರಿಕಲ್ಪನೆಯಲ್ಲಿ "ಮಾನವ ಅಭಿವೃದ್ಧಿ" ೧೯೯೦ರ ನಂತರ ಯುಎನ್‌ಡಿಪಿ(UNDP) ವ್ಯಾಪಕ ಚರ್ಚೆಗೆ ಒಳಗಾದ ಹೊಸದಾದ ವಿಚಾರ ಪ್ರಣಾಳಿಕೆಯಾಗಿದೆ. ಈ ಹೊಸ ವಿಚಾರ ಪ್ರಣಾಳಿಕೆಯ ಉಗಮದಿಂದಾಗಿ ಇಂದು ಅಭಿವೃದ್ಧಿಯನ್ನು ಲಿಂಗಸಾಪೇಕ್ಷ, ಮೌಲ್ಯ ನಿರ್ಣಯಗಳ ನಿಟ್ಟಿನಲ್ಲಿ ಗುರುತಿಸಲಾಗುತ್ತದೆ. ರಾಯಚೂರು ಜಿಲ್ಲೆಯು ಈಗಾಲೇ ನೀಡಿರುವ ವರದಿಗಳಾದ ಮಾನವ ಅಭಿವೃದ್ಧಿ ವರದಿಗಳು (೧೯೯೯ಮತ್ತು ೨೦೦೫) ಹಾಗೂ ಡಿ.ಎಂ.ನಂಜುಂಡಪ್ಪ ವರದಿಗಳು ರಾಯಚೂರು ಜಿಲ್ಲೆಯನ್ನು ಅತ್ಯಂತ ಹಿಂದುಳಿದ ಜಿಲ್ಲೆಯೆಂದು ಗುರುತಿಸಿವೆ. ಕೆಲವು ಅಧ್ಯಯನಗಳು ಕೂಡ ಹಿಂದುಳಿದಿರುವಿಕೆಯನ್ನು ತೋರಿಸಲಾಗಿದೆ. ಈ ಕಾರಣದಿಂದಾಗಿ ಈ ವಿಷಯದಲ್ಲಿ ಆಸಕ್ತಿ ಉಂಟಾಗಿರುವುದರಿಂದ ಇದನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ.

ಇಲ್ಲಿಯವರೆಗೆ ಅಭಿವೃದ್ಧಿ ಸಿದ್ಧಾಂತಗಳನ್ನು ಕುರಿತ ಚರಿತ್ರೆಯಲ್ಲಿ ಹಲವಾರು ಅಭಿವೃದ್ಧಿ ಮಾದರಿಗಳು ರೂಪುಗೊಂಡಿವೆ. ಪ್ರತಿ ಮಾದರಿ ತನ್ನದೇ ಆದ ವಾದ ಮಂಡಿಸುತ್ತಾ ಆ ವಾದಕ್ಕೆ ಪ್ರತಿವಾದಗಳು ಹುಟ್ಟಿಕೊಂಡು ಈ ಅಭಿವೃದ್ಧಿ ಮಾದರಿಗಳಿಗೆ ಸಂಬಂಧಿಸಿದಂತೆ ವಿಭಿನ್ನ ಸೈದ್ಧಾಂತಿಕ ನೆಲೆಗಟ್ಟುಗಳು ರೂಪುಗೊಂಡಿವೆ. ಹಿಂದಿನ ಅಭಿವೃದ್ಧಿ ಮಾದರಿಗಳು ವರಮಾನ, ಬಂಡವಾಳ, ಹೂಡಿಕೆಯಲ್ಲಿನ ಏರಿಕೆಗಳಿಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡಿದ್ದವು. ಆದರೆ ವರಮಾನದ ಏರಿಕೆಯೇ ಅಭಿವೃದ್ಧಿಯಾಗಲಾರದು. ಆರ್ಥಿಕ ಚಟುವಟಿಕೆಗಳ ಪ್ರಗತಿಯಿಂದುಂಟಾದ ಫಲಗಳ ಹಂಚಿಕೆಯನ್ನು ಹಿಡಿಯುವಲ್ಲಿ ರಾಷ್ಟ್ರೀಯ ಆದಾಯ ವಿಫಲಗೊಂಡಿದೆ. ಹಿಂದುಳಿದ ಬಡರಾಷ್ಟ್ರಗಳಲ್ಲಿರುವ ಬಡತವನ್ನು ನಿವಾರಣೆ ಮಾಡಲು ಆರ್ಥಿಕ ಬೆಳವಣಿಗೆ ಅವಶ್ಯಕ. ಆದರೆ ಬೆಳವಣಿಗೆಯ ಗುಣಮಟ್ಟ ಅದರ ಪರಿಮಾಣದಷ್ಟೇ ಮುಖ್ಯವಾಗಿರುತ್ತದೆ. "ಅಧಿಕವಾದ ವರಮಾನವು ತನ್ನಷ್ಟಕ್ಕೆ ತಾನಾಗಿಯೇ ಜನತೆಗೆ ದೊರೆಗೊಳ್ಳುವುದಿಲ್ಲ"[೮](ಎಚ್.ಡಿ.ಆರ್.೧೯೯೦). ಶ್ರೇಣೀಕೃತ ಸಮಾಜದಲ್ಲಿ ವರಮಾನದಲ್ಲಿಯ ಏರಿಕೆಯು ಜನತೆಗೆ ದೊರಕಬೇಕಾದರೆ ಅಮರ್ತ್ಯಸೇನ್ ಹೇಳುವ ಧಾರಣಶಕ್ತಿ (ಅಭಿವೃದ್ಧಿ ಅವಕಾಶಗಳನ್ನು ಒದಗಿಸುವುದು ಬೇರೆ, ಅವಕಾಶಗಳನ್ನು ಪಡೆದುಕೊಳ್ಳುವುದು ಬೇರೆ, ಅಭಿವೃದ್ಧಿಯು ಒದಗಿಸುವ ಅವಕಾಶಗಳನ್ನು ಪಡೆದುಕೊಳ್ಳಲು ಬೇಕಾದ ಸಾಮರ್ಥ್ಯವೇ 'ಧಾರಣಶಕ್ತಿ')ಯನ್ನು ಜನತೆಗೆ ಒದಗಿಸಬೇಕು ಎಂಬುವುದರ ಸವಿವರವಾದ ವಿವರಣೆಯನ್ನು ನೀಡುತ್ತದೆ.

ಅಭಿವೃದ್ಧಿಯನ್ನು ಅರ್ಥೈಸುವುದು ಇಲ್ಲವೇ ವ್ಯಾಖ್ಯಾನಿಸುವುದು ಒಂದು ಸಂಕೀರ್ಣವಾದ ವಿಷಯವಾಗಿದೆ. ಅಭಿವೃದ್ಧಿಯನ್ನು ಕೇವಲ ಒಂದೇ ಚಲಕದಿಂದ ಅಳೆಯುವುದು ಅಸಾಧ್ಯ. ಅಭಿವೃದ್ಧಿ ಎಂಬುದು ಆರ್ಥಿಕ ಮತ್ತು ಸಾಮಾಜಿಕ ಚಟುವಟಿಕೆಗಳ ಬಲೆ ಇದ್ದಂತೆ. "ವಸ್ತುಗಳ ಉತ್ಪಾದನೆ ಮತ್ತು ವರಮಾನದ ವೃದ್ಧಿಯೇ ಮನುಷ್ಯನ ಪ್ರಗತಿಯಾಗಲಾರದು, ನಿಜಾರ್ಥದಲ್ಲಿ ಮಾನವನ ಧಾರಣಶಕ್ತಿಯನ್ನು ವರ್ಧಿಸುವುದೇ ಮಾನವನ ಪ್ರಗತಿ"(ಶಿವಕುಮಾರ್, ೧೯೯೬; ೮೮೭).

ರಾಷ್ಟ್ರೀಯ ವರಮಾನ ಮತ್ತು ತಲಾ ವರಮಾನಗಳು ಮಾತ್ರವೇ ಅಭಿವೃದ್ಧಿಯನ್ನು ಸೂಚಿಸಲಾರವು. ಅಭಿವೃದ್ಧಿ ಎನ್ನುವುದು ಕೇವಲ ಆರ್ಥಿಕ ಕ್ಷೇತ್ರಕ್ಕೆ ಮಾತ್ರ ಸೀಮಿತವಾದ ಪ್ರಕ್ರಿಯೆಯೇನಲ್ಲ ಅಭಿವೃದ್ಧಿಯು ಕೇವಲ ಏಕರೂಪಿ ಪ್ರಕ್ರಿಯೆಯಲ್ಲ.

ಇದು ಬಹುಳಕಾರಿ ಪ್ರಕ್ರಿಯೆಯಾಗಿದೆ. ಮಾನವನ ಬದುಕಿನ ಪ್ರತಿ ಹಂತದ ಬೆಳವಣಿಗೆಯನ್ನು ಈ ಪ್ರಕ್ರಿಯೆ ಒಳಗೊಳ್ಳುತ್ತದೆ. ಆರ್ಥಿಕ ಅಂಶಗಳೊಂದಿಗೆ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಅಂಶಗಳನ್ನು ಪರಿಗಣಿಸಿದಾಗ ಮಾತ್ರ ಅಭಿವೃದ್ಧಿಯ ಒಳನೋಟಗಳ ಸೂಕ್ಷ್ಮತೆಯನ್ನು ಅರಿಯಲು ಸಾಧ್ಯ. ಮಾನವ ಅಭಿವೃದ್ಧಿಯ ವಿಚಾರ ಪ್ರಣಾಳಿಕೆಯ ವ್ಯಾಪ್ತಿಯು ಕೇವಲ ಆರ್ಥಿಕತೆಗೆ ಮಾತ್ರ ಸೀಮಿತವಾಗಿರದೇ ಸಮಾಜದ ಎಲ್ಲಾ ಅಂಶಗಳನ್ನು ತನ್ನಲ್ಲಿ ಅಡಕ ಮಾಡಿಕೊಂಡಿದೆ. ಆರ್ಥಿಕ ಅಂಶಗಳಿಗೆ ನೀಡುವಂತಹ ಮಹತ್ವವನ್ನು ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಅಂಶಗಳಿಗೂ ಸಹ ಈ ವಿಚಾರ ಪ್ರಣಾಳಿಕೆ ಮಹತ್ವವನ್ನು ನೀಡಿದೆ. ಆರ್ಥಿಕ ಅಂಶಗಳೊಂದಿಗೆ ಆರ್ಥಿಕೇತರ ಅಂಶಗಳನ್ನು ಸಮ್ಮಿಲನ ಮಾಡಿಕೊಂಡಿರುವುದು ಈ ಹೊಸ ವಿಚಾರ ಪ್ರಣಾಳಿಕೆಯ ಮಹತ್ವದ ಗುಣವಾಗಿದೆ. ಈ ಅಂಶವು ಮಾನವ ಅಭಿವೃದ್ಧಿ ವಿಚಾರ ಪ್ರಣಾಳಿಕೆಯ ಆಧಾರದ ಮೇಲೆ ಈ ವಿಷಯದ ಆಸಕ್ತಿಗೆ ಇರುವ ಕಾರಣಗಳಲ್ಲಿ ಒಂದಾಗಿದೆ.

ಆರಂಭದಿಂದಲೂ ರಾಷ್ಟ್ರೀಯ ವರಮಾನ, ತಲಾ ವರಮಾನಗಳನ್ನು ಅಭಿವೃದ್ಧಿಯ ಮಾನದಂಡಗಳನ್ನಾಗಿ ಉಪಯೋಗಿಸುತ್ತಾ ಬರಲಾಗಿದೆ. ಆದರೆ ಈ ಬಗೆಯ ಮಾಪನಗಳು ಅನೇಕ ಟೀಕೆಗಳಿಗೆ ಒಳಪಟ್ಟವು. ನಂತರ ಭೌತಿಕ ಜೀವನ ಗುಣಮಟ್ಟ ಎಂಬ ಸೂಚಿಯ ಮೂಲಕ ಅಭಿವೃದ್ಧಿಯನ್ನು ಮಾಪನ ಮಾಡಲು ಪ್ರಾರಂಭಿಸಲಾಯಿತು. ಆದರೆ ಅದು ಸಹ ಟೀಕೆಗಳಿಂದ ಮುಕ್ತವಾಗಿರಲಿಲ್ಲ. 'ಮಾನವ ಅಭಿವೃದ್ಧಿ'ಯು ಅಭಿವೃದ್ಧಿಯನ್ನು ಅರ್ಥೈಸುವ ಹೊಸ ಸಾಧನವಾಗಿ ಇಂದು ಹುಟ್ಟಿಕೊಂಡಿದೆ. ಅಭಿವೃದ್ಧಿ ಸಂಕಥನಗಳು, ಅನೇಕ ರಾಷ್ಟ್ರಗಳು ಅಳವಡಿಸಿಕೊಂಡಿದ್ದ ಅಭಿವೃದ್ಧಿ ಮಾದರಿಗಳು ನಿರೀಕ್ಷಿತ ಫಲ ನೀಡದೇ ಇರುವುದನ್ನು ತಿಳಿಸಿವೆ. ಹಲವಾರು ಅಭಿವೃದ್ಧಿ ಮಾದರಿಗಳು ಮತ್ತು ಯೋಜನೆಗಳ ಹೊರತಾಗಿಯೂ ಬಡವರ ಬವಣೆಗಳು ನೀಗಿಲ್ಲ. ರಾಜ್ಯ ರಾಜ್ಯಗಳ ನಡುವಿನ ಅಂತರದಲ್ಲಿ ತಾರತಮ್ಯಗಳು ನಿರೀಕ್ಷಿಸಿದ ಮಟ್ಟದಲ್ಲಿ ಕಿರಿದಾಗಿಲ್ಲ. "ದಕ್ಷಿಣ ಏಷ್ಯಾ ರಾಷ್ಟ್ರಗಳಲ್ಲಿ ಸ್ವಾತಂತ್ರ್ಯ ನಂತರದ ನಾಲ್ಕು ದಶಕಗಳಲ್ಲಿ ರಾಷ್ಟ್ರೀಯ ವರಮಾನ ಏರಿಕೆಯಾಗಿದೆ. ಆದರೆ ಬಡತನ ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗಿಲ್ಲ. ವಿದೇಶಿ ಸಹಾಯಧನ ಹೆಚ್ಚಾಗುತ್ತಿದೆ. ಇದರೊಂದಿಗೆ ದಕ್ಷಿಣ ಏಷ್ಯಾ ರಾಷ್ಟ್ರಗಳ ಸಂಪನ್ಮೂಲಗಳು ಸಿರಿವಂತ

ರಾಷ್ಟ್ರಗಳಿಗೆ ಹರಿಯುತ್ತಿದೆ. ಸ್ವವಿಮರ್ಶೆ ರಹಿತವಾದ ಹಿಂದಿನ ಅಭಿವೃದ್ಧಿ ಮಾದರಿಗಳು ಈ ರಾಷ್ಟ್ರಗಳಲ್ಲಿ ಬಡತನ ಪುನಃ ತನ್ನಷ್ಟಕ್ಕೆ ತಾನೇ ಮರುಹುಟ್ಟುವಂತೆ ಮಾಡಿದವು. ಆರ್ಥಿಕ ಅಸಮತೋಲನಗಳು ಸಹ ಹೆಚ್ಚಾದವು"[೧೦](ವಿಘ್ನರಾಜ್, ೧೯೯೧; ೧೧೯). ಅಧಿಕ ರಾಷ್ಟ್ರೀಯ ವರಮಾನವಿರುವ ರಾಷ್ಟ್ರಗಳು ಮಾನವ ಅಭಿವೃದ್ಧಿಯಲ್ಲಿ ಹಿಂದುಳಿದಿರುವುದನ್ನು ಕಡಿಮೆ ರಾಷ್ಟ್ರೀಯ ವರಮಾನ ಇರುವ ಹಲವು ರಾಷ್ಟ್ರಗಳು ಮಾನವ ಅಭಿವೃದ್ಧಿಯಲ್ಲಿ ಮುಂಚೂಣಿಯಲ್ಲಿರುವುದನ್ನು ಮಾನವ ಅಭಿವೃದ್ಧಿ ವರದಿಗಳು ಪ್ರಚುರ ಪಡಿಸಿದ್ದರಿಂದ, ಹೆಚ್ಚಾದ ರಾಷ್ಟ್ರೀಯ ವರಮಾನದಿಂದ, ಜನತೆಯ ಕಲ್ಯಾಣ ತನ್ನಷ್ಟಕ್ಕೆ ತಾನೇ ಹೆಚ್ಚಾಗಲಾರದು ಎಂಬ ತಥ್ಯ ಎಲ್ಲಾ ರಾಷ್ಟ್ರಗಳಿಗೆ ಮನವರಿಕೆಯಾಗಲಾರಂಭಿಸಿತು. ಈ ಹಿನ್ನೆಲೆಯಲ್ಲಿ ಮಾನವ ಕೇಂದ್ರಿತ ಅಭಿವೃದ್ಧಿ ಮಾದರಿಗಳ ಹುಡುಕಾಟ ಪ್ರಾರಂಭವಾಯಿತು. ಈ ರೀತಿಯ ಮಾದರಿಗಳನ್ನು, ಅಮರ್ತ್ಯಸೇನ್, ಜೀನ್‌ಡ್ರೀಜ್, ಮೆಹಬೂಬ್-ಉಲ್-ಹಕ್ ಅವರು ತಮ್ಮ ಬರವಣಿಗೆಗಳ ಮೂಲಕ ಮಾನವ ಅಭಿವೃದ್ಧಿ ವಿಚಾರ ಪ್ರಣಾಳಿಕೆಯನ್ನು ಪ್ರಚುರ ಪಡಿಸಿದರು.

"ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಮಹಿಳೆಯರು, ಮಕ್ಕಳು ಮತ್ತು ಪುರುಷರು ಕೇಂದ್ರಬಿಂದುವಾಗಿರಬೇಕು. ಅಭಿವೃದ್ಧಿ ಇವರ ಸುತ್ತಾ ಸುತ್ತ ಬೇಕೆ ಹೊರತು ಜನತೆ ಅಭಿವೃದ್ಧಿಯನ್ನು ಸುತ್ತುವರಿಯಬಾರದು"[೧೧](ಎಚ್.ಡಿ.ಆರ್.೧೯೯೦;೧). ಮಾನವನ ಕೇಂದ್ರಿತವಾದುದೇ ನಿಜವಾದ ಅಭಿವೃದ್ಧಿ. ಒಂದು ರಾಷ್ಟ್ರದ ಮೌಲ್ಯಾಧಾರಿತ ಸಂಪನ್ಮೂಲವೆಂದರೆ ಅಲ್ಲಿನ ಜನಸಂಖ್ಯೆ. ಜನತೆಯೇ ಅಭಿವೃದ್ಧಿಯ ಮೂಲ ಮತ್ತು ಕೊನೆ. ಮನುಷ್ಯನಿಗಾಗಿ ಅಭಿವೃದ್ಧಿ ಹೊರತು ಅಭಿವೃದ್ಧಿಗಾಗಿ ಜನತೆಯಲ್ಲ. ಮಾನವ ಅಭಿವೃದ್ಧಿಯು, ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಮಾನವನು ಕೇವಲ ಉಪಕರಣದ ದೃಷ್ಟಿಯಲ್ಲಿ ವೀಕ್ಷಿಸದೇ ಮಾನವನೇ ಅಭಿವೃದ್ಧಿಯ ಮೂಲ ಮತ್ತು ಕೊನೆ ಎಂಬ ತತ್ವವನ್ನು ಪ್ರತಿಪಾದಿಸಿದೆ. ಮಾನವ ಅಭಿವೃದ್ಧಿಯು 'ಅಕ್ಷರ-ಆರೋಗ್ಯ-ಆಹಾರ ಕೇಂದ್ರಿತವು, ಮೌಲ್ಯವಿವೇಚನಾ ಶೀಲವೂ, ಲಿಂಗ ವೈಶಿಷ್ಟ್ಯವೂ ಆದ ವಿಚಾರ ಪ್ರಣಾಳಿಕೆಯಾಗಿದೆ.'

೧೯೯೦ರಿಂದ ಯುಎನ್‌ಡಿಪಿಯು ಮಾನವ ಅಭಿವೃದ್ಧಿ ವರದಿಗಳನ್ನು ಪ್ರಕಟಿಸುತ್ತಾ ಬಂದಿದೆ. ಮಾನವ ಅಭಿವೃದ್ಧಿ ಸೂಚ್ಯಂಕವನ್ನು ವಿಶ್ವದ ಹಲವಾರು ರಾಷ್ಟ್ರಗಳಿಗಾಗಿ ರೂಪಿಸಲಾಗಿದೆ.(ನೋಡಿ, ಎಚ್.ಡಿ.ಆರ್. ೧೯೯೦ಮತ್ತು ೧೯೯೯) ಈ ಸೂಚ್ಯಂಕವು ಮಾನವನ ಮೂಲಭೂತ ಅವಶ್ಯಕತೆಗಳಾದ ಅಕ್ಷರ, ಆರೋಗ್ಯ, ವರಮಾನಗಳಿಂದ ರಚಿತವಾದ ವರ್ಧನೆಯನ್ನು ಮಾತ್ರ ತಿಳಿಸುತ್ತದೆ. ಆದರೆ ಮಾನವ ಅಭಿವೃದ್ಧಿ ಸೂಚ್ಯಂಕ ಮಾನವನ ಪ್ರಮುಖ ಆಯ್ಕೆಗಳ ವರ್ಧನೆಯನ್ನು ತಿಳಿಸುತ್ತದೆ. "ಮಾನವನ ಆಯ್ಕೆಗಳನ್ನು ವರ್ಧಿಸುವುದೇ ಮಾನವ ಅಭಿವೃದ್ಧಿ". ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಮರೆಮಾಚಿದ ಮಹಿಳೆಯರು, ಮಹಿಳೆಯರ ಕಾರ್ಯಭಾರ, ರಾಷ್ಟ್ರೀಯ ವರಮಾನಕ್ಕೆ ಮಹಿಳೆಯರ ಕೊಡುಗೆಗಳು ಈ ವಿಚಾರ ಪ್ರಣಾಳಿಕೆಯಲ್ಲಿ ಹೊಸ ಜೀವ ಪಡೆಯುತ್ತವೆ. ಈ ವಿಚಾರ ಪ್ರಣಾಳಿಕೆ, ಕೇವಲ ಅಕ್ಷರಸ್ಥರಿಗೆ ಮಾತ್ರವಲ್ಲದೇ ನಿರಕ್ಷರಸ್ಥರಿಗೆ,

ಅರೆಸಾಕ್ಷರಸ್ಥರಿಗೆ, ನಿಕೃಷ್ಟೀಕರಣಕ್ಕೆ ಒಳಗಾದ ಜನತೆಗೆ ಸಹ ಅನ್ವಯಿಸುತ್ತದೆ. ಅಭಿವೃದ್ಧಿಯ ಎಲ್ಲಾ ನೋಟಗಳನ್ನು ಈ ಪರಿಕಲ್ಪನೆ ಹೊಂದಿದೆ. ಅಭಿವೃದ್ಧಿಯ ಯಾವ ಅಂಶಗಳು ಸಹ ಈ ವಿಚಾರ ಪ್ರಣಾಳಿಕೆಯಿಂದ ಹೊರಗಿರಲು ಸಾಧ್ಯವಿಲ್ಲ.

ಮನುಷ್ಯನು ಜೀವಿಸಲು ಇರುವಂತಹ ಅವಕಾಶಗಳನ್ನು ವಿಸ್ತರಿಸುವುದು, ಹಾಗೂ ಸಮಾಜದಲ್ಲಿರುವ ಅವಕಾಶಗಳನ್ನು ಪಡೆದುಕೊಳ್ಳಲು ಬೇಕಾದ ಧಾರಣಶಕ್ತಿಯನ್ನು ಜನತೆಗೆ ಒದಗಿಸುವುದೇ ಈ ನವ ವಿಚಾರ ಪ್ರಣಾಳಿಕೆಯ ಗುರಿ ಮತ್ತು ಉದ್ದೇಶವಾಗಿದೆ. 'ಅಭಿವೃದ್ಧಿ'ಯನ್ನು ಕೇವಲ ವರಮಾನ ನೆಲೆಗೆ ಸೀಮಿತವಾಗಿರಿಸದೇ, ಅದನ್ನು ಬಹುಳಕರಿ ದೃಷ್ಟಿಯಲ್ಲಿ ಗಮನಿಸುವುದರಿಂದ ಈ ವಿಷಯದ ಆಯ್ಕೆ ಆಸಕ್ತಿಗೆ ಬಹುಮುಖ್ಯ ಕಾರಣವಾಗಿದೆ.

ಸಂಶೋಧನಾ ಪ್ರಶ್ನೆಗಳು

ಈ ಎಲ್ಲಾ ಅಧ್ಯಯನಗಳ ಸಮೀಕ್ಷೆಗಳ ಹಿನ್ನೆಲೆಯಲ್ಲಿ ಈ ಅಧ್ಯಯನಕ್ಕೆ ಸಂಬಂಧಿಸಿದಂತೆ ಹುಟ್ಟಿಕೊಂಡ ಬಹುಮುಖ್ಯ ಸಂಶೋಧನಾ ಪ್ರಶ್ನೆಗಳು.

೧. ಅಭಿವೃದ್ಧಿಯನ್ನು ಕೇವಲ ಆರ್ಥಿಕ ಚಟುವಟಿಕೆ ಎಂದು ಪರಿಗಣಿಸಬಹುದೇ? ಅಧ್ಯಯನದಲ್ಲಿ ಈ ಪ್ರಶ್ನೆಯನ್ನು ಚರ್ಚಿಸಲಾಗಿದೆ.

೨. ಅಭಿವೃದ್ಧಿಯನ್ನು ನಿರ್ಧರಿಸುವ ನಿರ್ಣಾಯಕ ಏಕೈಕ ಸಂಗತಿ ಎಂದರೆ ಬಂಡವಾಳ ಹೂಡಿಕೆಯೇ? ಎಂಬುದನ್ನು ಅಧ್ಯಯನದಲ್ಲಿ ಅರ್ಥಮಾಡಿಕೊಳ್ಳಲು ಪ್ರಯತ್ನಿಸಲಾಗಿದೆ.

೩. ಅಭಿವೃದ್ಧಿಯಲ್ಲಿ ಸಾಮಾಜಿಕ ರಚನೆಯು ಮತ್ತು ರಾಜಕೀಯ ಸಂಗತಿಗಳ ಪಾತ್ರವೇನು? ಎಂಬುದನ್ನು ಕುರಿತು ವಿಶ್ಲೇಷಿಸಲಾಗಿದೆ.

೪. ಆರ್ಥಿಕ ವ್ಯವಸ್ಥೆಯ ಒಳಗಡೆ ಇರುವ ಭೂಮಾಲಿಕತ್ವ, ಬಂಡವಾಳದ ಮಾಲಿಕತ್ವ, ಕಾರ್ಮಿಕರು, ಅಭಿವೃದ್ಧಿಯಲ್ಲಿ ಇವುಗಳ ಪಾತ್ರ ಏನು? ಎಂಬುದನ್ನು ಅರ್ಥಮಾಡಿಕೊಂಡು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

೫. ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಭೌತಿಕ ಬಂಡವಾಳ, ಮಾನವ ಬಂಡವಾಳ, ಸಾಮಾಜಿಕ ಬಂಡವಾಳಗಳ ಪಾತ್ರ ಏನು? ಇವುಗಳನ್ನು ಅರ್ಥಮಾಡಿಕೊಂಡು ಚರ್ಚಿಸಲಾಗಿದೆ.

೬. ಅಭಿವೃದ್ಧಿ ಎಲ್ಲಾ ಭಾಗಗಳಲ್ಲಿ ಅಥವಾ ಎಲ್ಲಾ ಪ್ರದೇಶಗಳಲ್ಲಿ ಏಕ ಕಾಲಕ್ಕೆ ಯಾಕೆ ಸಮಾನವಾಗಿ ಸಂಭವಿಸುವುದಿಲ್ಲ. ಯಾಕೆ ಹೀಗೆ? ಇದನ್ನು ಕುರಿತು ಅಧ್ಯಯನ ಮಾಡಲಾಗಿದೆ.

೭. ರಾಯಚೂರು ಜಿಲ್ಲೆಗೆ ಸಂಬಂಧಪಟ್ಟಂತೆ ಹಿಂದುಳಿದಿರುವಿಕೆಗೆ ಕಾರಣವಾದ ಚಾರಿತ್ರಿಕ ಸಂಗತಿಗಳು ಯಾವುವು? ಎನ್ನುವುದನ್ನು ಕೂಡ ಚರ್ಚಿಸಲಾಗಿದೆ.

೧.೪. ಅಧ್ಯಯನದ ಉದ್ದೇಶಗಳು

ಕರ್ನಾಟಕ ರಾಜ್ಯದಲ್ಲಿ ಕಂಡುಬರುವ ಹೈದ್ರಾಬಾದ್ ಕರ್ನಾಟಕದ ಜಿಲ್ಲೆಯಾದ ರಾಯಚೂರು ಜಿಲ್ಲೆಯ ಪ್ರಾದೇಶಿಕ ಅಂತರ ಅಸಮಾನತೆಗಳನ್ನು ಮತ್ತು ದುಸ್ಥಿತಿಯನ್ನು ಮಾನವ ಅಭಿವೃದ್ಧಿ

ನೆಲೆಯಲ್ಲಿ ಅಧ್ಯಯನ ಮಾಡುವ ಇರಾದೆಯನ್ನು ಪ್ರಸ್ತುತ ಮಹಾಪ್ರಬಂಧವು ಹೊಂದಿದೆ. ಇದುವರೆಗೂ ನಡೆದಿರುವ ಅಧ್ಯಯನಗಳ ಸಮೀಕ್ಷೆಯ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಸಂಶೋಧನಾ ಪ್ರಶ್ನೆಗಳಿಗೆ ಅನುಗುಣವಾಗಿ ಅಧ್ಯಯನದ ಉದ್ದೇಶಗಳನ್ನು ರೂಪಿಸಿಕೊಳ್ಳಲಾಗಿದೆ.

೧. ಕರ್ನಾಟಕದ ಅಭಿವೃದ್ಧಿಗೆ ಸಂಬಂಧಿಸಿದ ಪ್ರಾದೇಶಿಕ ಅಸಮಾನತೆಯ ಹಿನ್ನೆಲೆಯಲ್ಲಿ ರಾಯಚೂರು ಜಿಲ್ಲೆಯ ಸ್ಥಾನವನ್ನು ಗುರುತಿಸುವುದು ಅಧ್ಯಯನದ ಮೊದಲನೆಯ ಉದ್ದೇಶವಾಗಿದೆ.

೨. ರಾಯಚೂರು ಜಿಲ್ಲೆಯ ಸಂದರ್ಭದಲ್ಲಿ ಅಭಿವೃದ್ಧಿ ಪ್ರಕ್ರಿಯೆಯ ನಿರ್ವಹಣೆಯಲ್ಲಿ ಸಾಮಾಜಿಕ ರಚನೆ ಮತ್ತು ರಾಜಕೀಯ ಸಂಗತಿಗಳ ಪಾತ್ರ ಏನು? ಎನ್ನುವುದನ್ನು ಗುರುತಿಸುವುದು ಅಧ್ಯಯನದ ಇನ್ನೊಂದು ಉದ್ದೇಶವಾಗಿದೆ.

೩. ರಾಯಚೂರು ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಅಭಿವೃದ್ಧಿಯಿಂದ ವಂಚಿತವಾದ ಜನವರ್ಗಗಳ ಸ್ಥಿತಿಗತಿಗಳನ್ನು ಗುರುತಿಸುವುದು ಅಧ್ಯಯನದ ಮತ್ತೊಂದು ಉದ್ದೇಶವಾಗಿದೆ.

೪. ರಾಯಚೂರು ಜಿಲ್ಲೆಯ ಸಂದರ್ಭದಲ್ಲಿ ಅಭಿವೃದ್ಧಿಯನ್ನು ಸಾಧಿಸುವ ದೃಷ್ಟಿಯಿಂದ ಸರ್ಕಾರ ಪಾತ್ರ ಏನು? ಎಂಬುದನ್ನು ಮೌಲ್ಯಮಾಪನ ಮಾಡುವುದು ಅಧ್ಯಯನದ ಮಹತ್ವರ ಉದ್ದೇಶವಾಗಿದೆ.

೧.೫. ಅಧ್ಯಯನದ ವಿಧಾನ

ಪ್ರಸ್ತುತ ಪ್ರಬಂಧವು ಕರ್ನಾಟಕ ರಾಜ್ಯದ ಮತ್ತು ಹೈದ್ರಾಬಾದ್ ಕರ್ನಾಟಕ ಜಿಲ್ಲೆಗಳಲ್ಲೊಂದಾದ ರಾಯಚೂರು ಜಿಲ್ಲೆಗೆ ಸಂಬಂಧಿಸಿದ್ದಾಗಿರುತ್ತದೆ. ಈ ಜಿಲ್ಲೆಯ ಅಭಿವೃದ್ಧಿಯ ಅಸಮಾನತೆ ಮತ್ತು ಅಂತರಗಳನ್ನು ಗುರುತಿಸುತ್ತದೆ. ಅಭಿವೃದ್ಧಿಯಲ್ಲಿಯ ಪ್ರಾದೇಶಿಕ ಅಸಮಾನತೆ ಮತ್ತು ಮಾನವ ಅಭಿವೃದ್ಧಿಯಲ್ಲಿ ಅದರ ಸ್ಥಾನ ಏನಾಗಿದೆ ಎಂಬುದನ್ನಷ್ಟೇ ಅಲ್ಲದೆ, ಈ ಅಂತರ ಅಸಮಾನತೆಗಳನ್ನು ತಗ್ಗಿಸಲು ಸೂಕ್ತವಾದ ಕ್ರಮಗಳನ್ನು ಸಹ ಈ ಪ್ರಬಂಧದಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಪ್ರಸ್ತುತ ಪ್ರಬಂಧದಲ್ಲಿ ಮಾನವ ಅಭಿವೃದ್ಧಿಯನ್ನು ಮಾನವ ಕೇಂದ್ರಿತ ಅಭಿವೃದ್ಧಿ, ಜನತೆಗೆ ಮೂಲಭೂತ ಅವಶ್ಯಕತೆಗಳನ್ನು ಪೂರೈಸುವ ಅಭಿವೃದ್ಧಿ, ಜನತೆಗೆ ಅದರಲ್ಲಿಯೂ ಮುಖ್ಯವಾಗಿ ಮಹಿಳೆಯರಿಗೆ ಧಾರಣಶಕ್ತಿಯನ್ನು ಹೆಚ್ಚಿಸುವ ಅಭಿವೃದ್ಧಿ ಜನತೆಯ ದುಸ್ಥಿತಿಯನ್ನು ನಿವಾರಿಸುವ ಜನಪರ, ಅಭಿವೃದ್ಧಿಯೆಂದು ವ್ಯಾಖ್ಯಾನಿಸಲಾಗಿದೆ.

ರಾಯಚೂರು ಜಿಲ್ಲೆಯು ಅಧ್ಯಯನಕ್ಕೆ ಸೂಕ್ತವಾದ ವಾತಾವರಣ ಹೊಂದಿರುವುದರ ಹಿನ್ನೆಲೆಯಿಂದಾಗಿ ಈ ಜಿಲ್ಲೆಯನ್ನು ಆಯ್ಕೆ ಮಾಡಲಾಗಿದೆ. ರಾಯಚೂರು ಜಿಲ್ಲೆಯು ಎಲ್ಲಾ ಜಿಲ್ಲೆಗಳಿಗಿಂತ ಅತ್ಯಂತ ದುಸ್ಥಿತಿಯನ್ನು ಅನುಭವಿಸುತ್ತಿರುವ ಜಿಲ್ಲೆಯಾಗಿದೆ. ಜನಗಣತಿ ವರದಿಗಳ ಪ್ರಕಾರ ಮತ್ತು ನಂಜುಂಡಪ್ಪ ಪ್ರಾದೇಶಿಕ ಅಸಮಾನತೆ ಕುರಿತಂತೆ ನೀಡಿರುವ ವರದಿಯು ಈ ಜಿಲ್ಲೆಯನ್ನು ಅತ್ಯಂತ ದುಸ್ಥಿತಿಯ ಚಿತ್ರಣವನ್ನು ಕೊಟ್ಟಿದೆ. ಸಮಗ್ರ ಸಂಯುಕ್ತ ಅಭಿವೃದ್ಧಿ ಸೂಚ್ಯಂಕದ ಆಧಾರದ ಮೇಲೆ ೧೭೫ ತಾಲ್ಲೂಕುಗಳನ್ನು ಶ್ರೇಣೀಕರಿಸಲಾಗಿದ್ದು, ರಾಯಚೂರಿನ ದೇವದುರ್ಗ

ತಾಲ್ಲೂಕು ಕನಿಷ್ಠ ಸ್ಥಾನದಲ್ಲಿದ್ದರು ಮಡಿಕೇರಿ ಗರಿಷ್ಠ ಸ್ಥಾನದಲ್ಲಿದೆ, ಉತ್ತರ ಕರ್ನಾಟಕದ ಹಿಂದುಳಿದ ಜಿಲ್ಲೆಗಳಿಗೆ ಹೋಲಿಸಿದರೆ ರಾಯಚೂರಿನ ಅಭಿವೃದ್ಧಿ ಮಟ್ಟ ಅತ್ಯಂತ ಕಡಿಮೆಯಿದೆ.

ಮಾನವ ಅಭಿವೃದ್ಧಿ ಸೂಚ್ಯಂಕ ೧೯೯೧ರಂತೆ ಕರ್ನಾಟಕ ರಾಜ್ಯದ ಬೆಂಗಳೂರು ಜಿಲ್ಲೆ ೦.೬೨೩ ಸಂಯುಕ್ತ ಸಮಗ್ರ ಅಭಿವೃದ್ಧಿ ಸೂಚ್ಯಂಕದೊಂದಿಗೆ ೪ನೇ ಶ್ರೇಣಿಯಲ್ಲಿದ್ದರೆ ರಾಯಚೂರು ಜಿಲ್ಲೆ ೨೭ನೇ ಸ್ಥಾನದಲ್ಲಿದೆ. ಮಾನವ ಅಭಿವೃದ್ಧಿ ಸೂಚ್ಯಂಕ ೨೦೦೧ರಂತೆ ಬೆಂಗಳೂರು ನಗರ ೦.೭೫೩ ಅಂಕದೊಂದಿಗೆ ೧ನೇ ಸ್ಥಾನದಲ್ಲಿದ್ದರೆ ರಾಯಚೂರು ಜಿಲ್ಲೆ ೨೭ನೇ ಸ್ಥಾನದಲ್ಲಿದೆ. ಜಿಲ್ಲಾವಾರು ಮಾನವ ಅಭಿವೃದ್ಧಿ ಸೂಚ್ಯಂಕದ ಪ್ರಕಾರ (೨೦೦೫), ರಾಯಚೂರು ಆರೋಗ್ಯ ಸೂಚ್ಯಂಕದಲ್ಲಿ ೧೬ನೇ ಸ್ಥಾನ, ಶಿಕ್ಷಣದಲ್ಲಿ ೨೭ನೇ ಸ್ಥಾನ, ಆದಾಯದಲ್ಲಿ ೨೭ನೇ ಸ್ಥಾನ ಒಟ್ಟಾರೆ ಮಾನವ ಅಭಿವೃದ್ಧಿ ಸೂಚ್ಯಂಕ ೧೮ನೇ ಸ್ಥಾನದಲ್ಲಿದೆ. ಈ ಎಲ್ಲಾ ಅಂಶಗಳು ಈ ಜಿಲ್ಲೆಯ ಆಯ್ಕೆಗೆ ಕಾರಣವಾಗಿದೆ.

ಮಾನವ ಅಭಿವೃದ್ಧಿ ಸೂಚ್ಯಂಕದ ಮೂಲಕ ರಾಯಚೂರು ಜಿಲ್ಲೆಯ ಅಭಿವೃದ್ಧಿಯ ಗತಿಶೀಲತೆಯನ್ನು ಮಾಪನ ಮಾಡಲಾಗಿದೆ. ಸಂದರ್ಭಕ್ಕೆ ತಕ್ಕಂತೆ ಈ ಜಿಲ್ಲೆಯನ್ನು ಬೇರೆ, ಬೇರೆ ಜಿಲ್ಲೆಗಳೊಂದಿಗೆ ಹೋಲಿಸಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಸೂಚ್ಯಂಕಗಳು ಒಂದು ಪ್ರದೇಶ ಹಿಂದುಳಿದುದರ ಬಗ್ಗೆ ವಿವರಣೆಯನ್ನು ನೀಡುತ್ತವೆಯೇ ಹೊರತು ಯಾವ ವಲಯಗಳಲ್ಲಿ ಹಿಂದುಳಿದಿದೆ ಎಂಬುದನ್ನು ತಿಳಿಸುವುದಿಲ್ಲ. ಇದನ್ನು ತಿಳಿಯಬೇಕಾದರೆ ಸೂಚಿಗಳನ್ನು ಅವಲೋಕಿಸಬೇಕಾಗುತ್ತದೆ. ಪ್ರಸ್ತುತ ಸಂದರ್ಭದಲ್ಲಿ ಸೂಚ್ಯಂಕ ಪ್ರಾದೇಶಿಕವಾಗಿ ರಾಯಚೂರು ಜಿಲ್ಲೆ ಯಾವ ಸ್ಥಾನದಲ್ಲಿದೆ ಎಂಬುದನ್ನು ತಿಳಿಸಿದರೆ, ಸೂಚಿಗಳ ಮೂಲಕ ಈ ಜಿಲ್ಲೆಯ ಅಭಿವೃದ್ಧಿಗೆ ಸಲಹೆ ಸೂಚನೆಗಳನ್ನು ನೀಡಲಾಗಿದೆ.

ಈ ಅಧ್ಯಯನಕ್ಕೆ ಪೂರಕವಾದ ಮಾಹಿತಿಯನ್ನು ಪ್ರಾಥಮಿಕ ಮತ್ತು ಆನುಷಂಗಿಕ ಮೂಲಗಳಿಂದ ಪಡೆಯಲಾಗಿದೆ. ಕ್ಷೇತ್ರಕಾರ್ಯದ ಮೂಲಕ ಪ್ರಾಥಮಿಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ರಾಯಚೂರು ಜಿಲ್ಲೆಯು ಐದು ತಾಲೂಕುಗಳನ್ನು ಒಳಗೊಂಡಿದೆ. ಕ್ಷೇತ್ರಕಾರ್ಯಕ್ಕಾಗಿ ೪ ತಾಲೂಕುಗಳನ್ನು ಆಯ್ಕೆ ಮಾಡಿಕೊಂಡಿದ್ದು, ಪ್ರತಿ ತಾಲೂಕಿನಲ್ಲಿ ಒಂದೊಂದು ಗ್ರಾಮಗಳನ್ನು ಆಯ್ದುಕೊಳ್ಳಲಾಗಿದೆ. ಗ್ರಾಮಗಳನ್ನು ಪ್ರಶ್ನಾವಳಿಯ ಮೂಲಕ ಮನೆಗಳನ್ನು ಆಯ್ಕೆ ಮಾಡುವಲ್ಲಿ ರ್‍ಯಾಂಡಮ್ ಪದ್ಧತಿಯನ್ನು ಅನುಸರಿಸಲಾಗಿದೆ. ಸಂದರ್ಶನ, ಚರ್ಚೆಗಳ ಮೂಲಕ ಮಾಹಿತಿಯನ್ನು ಪಡೆಯಲಾಗಿದೆ. ಅದೇ ರೀತಿ ಆರೋಗ್ಯಕೇಂದ್ರದ ಕುರಿತಂತೆ ಸಾರ್ವಜನಿಕರಿಂದಲೂ ವಿಷಯವನ್ನು ಸಂಗ್ರಹಿಸಲಾಗಿದೆ.

ಪ್ರಕಟಿತ ಮತ್ತು ಅಪ್ರಕಟಿತ ಮೂಲಗಳಿಂದ ಆನುಷಂಗಿಕವಾದ ಮಾಹಿತಿಯನ್ನು ಸಂಗ್ರಹ ಮಾಡಲಾಗಿದೆ. ಮಾನವ ಅಭಿವೃದ್ಧಿ ವರದಿಗಳು, ಜನಗಣತಿಯ ವರದಿಗಳು, ಕರ್ನಾಟಕ ಸರಕಾರದ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ

ನಿರ್ದೇಶನಾಲಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ನಿರ್ದೇಶನಾಲಯ, ಸರಕಾರಿ ವರದಿಗಳು, ಪ್ರಾಥಮಿಕ ಶಿಕ್ಷಣದ ನಿರ್ದೇಶನಾಲಯ, ಯೋಜನಾ ಇಲಾಖೆಯ ಪ್ರಕಟಣೆಗಳಿಂದ ಹಾಗೂ ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳ ಕಾರ್ಯಾಲಯದಿಂದ ಜಿಲ್ಲೆಯ ಹಾಗೂ ತಾಲೂಕುಗಳ ಮಾಹಿತಿಯನ್ನು ಪಡೆಯಲಾಗಿದೆ. ಹೀಗೆ ವಿವಿಧ ಮೂಲಗಳಿಂದ ಆನುಷಂಗಿಕ ಮಾಹಿತಿಗಳನ್ನು ಆಯ್ದುಕೊಳ್ಳಲಾಗಿದೆ.

ಸ್ಯಾಂಪ್ಲಿಂಗ್ ಆಯ್ಕೆ ವಿಧಾನ

ರಾಯಚೂರು ಜಿಲ್ಲೆಯ ೪ ತಾಲ್ಲೂಕಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಅವುಗಳೆಂದರೆ ದೇವದುರ್ಗ, ಲಿಂಗಸೂಗೂರು, ಮಾನವಿ ಮತ್ತು ಸಿಂಧನೂರು ಇವುಗಳಲ್ಲಿ ಕ್ರಮವಾಗಿ ಒಂದೊಂದು ಗ್ರಾಮಗಳನ್ನು ಆಯ್ಕೆ ಮಾಡಿಕೊಂಡಿದ್ದು, ಸಾಮಾಜಿಕ ಮತ್ತು ಆರ್ಥಿಕ ಅಂಶಗಳ ಆಧಾರದ ಮೇಲೆ ಈ ಗ್ರಾಮಗಳನ್ನು ಆಯ್ಕೆ ಮಾಡಲಾಗಿದೆ. ಕ್ರಮವಾಗಿ ದೇವದುರ್ಗ ತಾಲೂಕಿನ ಮಲ್ಲಿನಾಯಕನದೊಡ್ಡಿ ಹಾಗೂ ಸಿಂಧನೂರ ತಾಲೂಕಿನ ತಿಮ್ಮಪೂರ ಗ್ರಾಮ, ಲಿಂಗಸೂಗೂರು ತಾಲೂಕಿನ ಗುಡದ್ನಾಳ ಗ್ರಾಮ ಹಾಗೂ ಮಾನವಿ ತಾಲೂಕಿನ ಹಿರೇಕೊಟ್ನೆಕಲ್ ಗ್ರಾಮಗಳನ್ನು ಆಯ್ಕೆ ಮಾಡಿಕೊಂಡು, ಪ್ರತಿ ಗ್ರಾಮದಿಂದ ೧೦೦ ಕುಟುಂಬಗಳನ್ನು ರ್‍ಯಾಂಡಮ್ ಪದ್ಧತಿಯಲ್ಲಿ ತೆಗೆದುಕೊಂಡಿರುತ್ತದೆ. ಒಟ್ಟು ನಮ್ಮ ನಮೂನೆಯಲ್ಲಿರುವ ೪೦೦ ಕುಟುಂಬಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ೪೦೦ ಕುಟುಂಬಗಳಿಗೆ ಪ್ರಶ್ನಾವಳಿಯ ಮೂಲಕ ಸಾಮಾಜಿಕ ಮತ್ತು ಅರ್ಥಿಕ ಅಂಶಗಳಿಗೆ ಸಂಬಂಧಿಸಿದಂತೆ ಶಿಕ್ಷಣಕ್ಕೆ ಸಂಬಂಧಿಸಿದಂತೆ ಆರೋಗ್ಯ, ವರಮಾನ, ಉದ್ಯೋಗ, ಕೂಲಿ, ವ್ಯವಸಾಯ ನೈರ್ಮಲ್ಯೀಕರಣಕ್ಕೆ ಸಂಬಂಧಿಸಿದಂತೆ ಪ್ರಶ್ನೆಗಳನ್ನು ಕೇಳಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಸಂಗ್ರಹಿಸಿದ ಮಾಹಿತಿಯನ್ನು ಈ ಕೆಳಗಿನ ವಿಧಾನದ ಮೂಲಕ ವಿಶ್ಲೇಷಣೆ ಮಾಡಲಾಗಿದೆ.

ಮಾಹಿತಿ ವಿಶ್ಲೇಷಣೆಯ ವಿಧಾನ

ಗಣತಿಯ ಹಾಗೂ ಸಂಖ್ಯಾಶಾಸ್ತ್ರೀಯ ವಿಧಾನಗಳನ್ನು ಬಳಸಿಕೊಂಡು ಸಂಗ್ರಹಿಸಿದ ಮಾಹಿತಿ ವಿಶ್ಲೇಷಣಾ ಕಾರ್ಯವನ್ನು ಮಾಡಲಾಗಿದೆ. ಅದರಲ್ಲಿ ಶೇಕಡವಾರು, ಅನುಪಾತ, ಸೂಚ್ಯಂಕ, ಕೋಷ್ಟಕಗಳಂಥ ಉಪಕರಣಗಳನ್ನು ಬಳಸಿ ವೈಜ್ಞಾನಿಕವಾಗಿ ಅಧ್ಯಯನ ಕೈಗೊಳ್ಳಲಾಗಿದೆ.

ಈ ಮಹಾಪ್ರಬಂಧವು ಮುಖ್ಯವಾಗಿ ಅಂಕಿ-ಅಂಶಗಳ ಮತ್ತು ಕ್ಷೇತ್ರಕಾರ್ಯ ಎರಡನ್ನು ಆಧರಿಸಿದೆ. ಅಂಕಿ-ಅಂಶಗಳ ಆಧಾರವೇ ಹೆಚ್ಚಿರುವುದರಿಂದ ಅಂಕಿ-ಅಂಶಗಳನ್ನು ಕುರಿತಾದ ಅಧ್ಯಯನಕ್ಕೆ ಯಾವ ಮಿತಿ ಇರುತ್ತದೆಯೋ ಈ ಅಧ್ಯಯನಕ್ಕೆ ಅದೇ ಮಿತಿ ಇರುತ್ತದೆ.

೧.೬. ಅಧ್ಯಯನದ ವ್ಯಾಪ್ತಿ, ಮಿತಿಗಳು ಮತ್ತು ಮಹತ್ವ

ವ್ಯಾಪ್ತಿ

ಈ ಅಧ್ಯಯನವು ರಾಯಚೂರು ಜಿಲ್ಲೆಯ ೫ ತಾಲ್ಲೂಕುಗಳನ್ನು ಒಳಗೊಂಡ ಅಧ್ಯಯನವಾಗಿದೆ. ಅದರಲ್ಲಿ ನಾಲ್ಕು ತಾಲೂಕುಗಳಲ್ಲಿನ ನಾಲ್ಕು ಗ್ರಾಮಗಳನ್ನು ಆಯ್ದುಕೊಂಡು

ಅವರ ಸ್ಥಿತಿಗತಿಗಳನ್ನು ಕುರಿತು ವಿಶ್ಲೇಷಿಸಲಾಗಿದೆ. ಪ್ರಸ್ತುತ ಅಧ್ಯಯನವು ರಾಯಚೂರು ಜಿಲ್ಲೆಗೆ ಮಾತ್ರ ಸೀಮಿತಗೊಳಿಸಕೊಳ್ಳಲಾಗಿದೆ. ಈ ಅಧ್ಯಯನವು ೨೦೦೧ ರಿಂದ ೨೦೧೦ರ ಅವಧಿಯಲ್ಲಾದ ಬದಲಾವಣೆ ಅಭಿವೃದ್ಧಿಯ ಮತ್ತು ದುಸ್ಥಿತಿಯ ಚಿತ್ರಣವನ್ನು ನೀಡುತ್ತದೆ.

ಮಿತಿಗಳು

೧. ಈ ಅಧ್ಯಯನವನ್ನು ರಾಯಚೂರು ಜಿಲ್ಲೆಗೆ ಮಾತ್ರ ಸೀಮಿತಗೊಳಿಸಲಾಗಿದೆ.

೨. ಈ ಅಧ್ಯಯನವು ಮಾನವ ಅಭಿವೃದ್ಧಿ ನೆಲೆಯಲ್ಲಿ ಪ್ರಸ್ತುತ ವಸ್ತುಸ್ಥಿತಿಯನ್ನು ಅಧ್ಯಯನ ಮಾಡುವಂತದ್ದಾಗಿದೆ.

೩. ಪ್ರಾದೇಶಿಕ ಅಸಮಾನತೆ ಸಂದರ್ಭದಲ್ಲಿ ರಾಯಚೂರು ಜಿಲ್ಲೆಯ ಸ್ಥಾನವನ್ನು ನೋಡುವಂತಹದ್ದಾಗಿದೆ.

೪. ಈ ಅಧ್ಯಯನವು ಮುಖ್ಯವಾಗಿ ರಾಯಚೂರು ಜಿಲ್ಲೆಯ ಜನಕೇಂದ್ರಿತವಾಗಿದ್ದು, ಅಭಿವೃದ್ಧಿ ಮತ್ತು ದುಸ್ಥಿತಿಯ ಎಲ್ಲ ಮಜಲುಗಳನ್ನು ಅಧ್ಯಯನ ಮಾಡುತ್ತದೆ.

ಮಹತ್ವ

ಈ ಪ್ರಬಂಧವು ತಳಮಟ್ಟದ ಅಭಿವೃದ್ಧಿಯನ್ನು ಕುರಿತು ಅಗತ್ಯವಾದ ಮಾಹಿತಿಯ ಮೂಲಕ ಅಧ್ಯಯನಕ್ಕೆ ಒಳಪಡಿಸಿದೆ. ಜನಕೇಂದ್ರಿತ ಅಭಿವೃದ್ಧಿಯೆಂದೇ ಬಿಂಬಿತವಾದ ಮಾನವ ಅಭಿವೃದ್ಧಿಯ ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ. ಎಲ್ಲಾಕ್ಕಿಂತ ಹೆಚ್ಚಾಗಿ ಅಭಿವೃದ್ಧಿಗೆ ಸಂಬಂಧಿಸಿದಂತೆ ಹೊಸ ಸೈದ್ಧಾಂತಿಕ ನೆಲೆಗಟ್ಟನ್ನು ಒದಗಿಸಿಕೊಡುವುದರಿಂದ ಮಹತ್ವದ್ದಾಗಿದೆ. ಆರ್ಥಿಕ ಅಭಿವೃದ್ಧಿಯಿಂದ ಮಾನವ ಅಭಿವೃದ್ಧಿ ಕಡೆಗೆ ನೀತಿ ನಿರೂಪಣೆಗಳಲ್ಲಿ ಪರಿವರ್ತನೆ ಮಾಡಲು ಅಗತ್ಯವಾದ ಸೈದ್ಧಾಂತಿಕ ಗ್ರಾಸವನ್ನು ನೀಡುತ್ತದೆ. ಒಟ್ಟಾರೆಯಾಗಿ ಈ ಪ್ರಬಂಧವು ಅಭಿವೃದ್ಧಿಯನ್ನು ತಿಳಿದುಕೊಳ್ಳುವವರಿಗೆ ಮತ್ತು ರಾಯಚೂರು ಜಿಲ್ಲೆಯ ಯೋಜನೆಗಳನ್ನು ರೂಪಿಸುವವರಿಗೆ ಮಹತ್ವದ್ದಾಗಿರುತ್ತದೆ.

೧.೭. ಅಧ್ಯಯನಗಳ ವಿನ್ಯಾಸ

ಈ ಸಂಶೋಧನಾ ಪ್ರಬಂಧವು ಒಟ್ಟು ಏಳು ಅಧ್ಯಾಯಗಳನ್ನು ಒಳಗೊಂಡಿದೆ. ಮೊದಲನೆಯ ಅಧ್ಯಯನವಾದ ಪ್ರಸ್ತಾವನೆಯು ವಿಷಯ ಪ್ರವೇಶ, ಸಮಸ್ಯೀಕರಣ, ಉದ್ದೇಶ, ವಿಧಾನ, ವ್ಯಾಪ್ತಿ, ಮಿತಿಗಳು ಹಾಗೂ ಮಹತ್ವವನ್ನು ಕುರಿತು ವಿಶ್ಲೇಷಣೆ ಮಾಡುತ್ತದೆ. ಎರಡನೆಯ ಅಧ್ಯಾಯವು ಇಲ್ಲಿಯವರೆಗೆ ನಡೆದ ಅಧ್ಯಯನಗಳ ಸಮೀಕ್ಷೆಯನ್ನು 'ಸೈದ್ಧಾಂತಿಕ ಮತ್ತು ನಿದರ್ಶನಾತ್ಮಕ ನೆಲೆಗಟ್ಟ'ನಲ್ಲಿ ಮುಖಾಮುಖಿಗೊಳಿಸಲಾಗಿದೆ. ಮೂರನೆಯ ಅಧ್ಯಾಯವು ರಾಯಚೂರು ಜಿಲ್ಲೆಯ ಕ್ಷೇತ್ರ ಪರಿಚಯ ಎಂದಾಗಿದ್ದು, ಇದು ಅಧ್ಯಯನ ಕ್ಷೇತ್ರ ಒಂದು ಸೂಕ್ಷ್ಮ ಚಿತ್ರಣವನ್ನು ನೀಡುತ್ತದೆ. ನಾಲ್ಕನೆಯ ಅಧ್ಯಾಯವು ಅಭಿವೃದ್ಧಿಯ ಪ್ರಾದೇಶಿಕ ಅಸಮಾನತೆಯ ಹಿನ್ನೆಲೆಯಲ್ಲಿ ರಾಯಚೂರು ಜಿಲ್ಲೆಯ ಸ್ಥಾನವನ್ನು ವಿವರಿಸುತ್ತದೆ. ಐದನೆಯ ಅಧ್ಯಾಯವು ರಾಯಚೂರು ಜಿಲ್ಲೆಯ ಸಾಮಾಜಿಕ ರಚನೆ ಮತ್ತು ರಾಜಕೀಯ ಸಂಗತಿಗಳ ಪಾತ್ರ ಏನಾಗಿದೆ ಎಂಬುದನ್ನು ವಿವರಣೆಯ ಮೂಲಕ

ಸಾಧರಪಡಿಸುತ್ತದೆ. ಆರನೆಯ ಅಧ್ಯಾಯವು ಅಭಿವೃದ್ಧಿಯಿಂದ ವಂಚಿತ ಜನವರ್ಗಗಳ ಸ್ಥಿತಿಗತಿಗಳನ್ನು ಅನಾವರಣಗೊಳಿಸಲಾಗಿದೆ. ಈ ಅಧ್ಯಯನದ ಸಂದರ್ಭದಲ್ಲಿ ಕಂಡುಕೊಂಡ ಫಲಿತಗಳನ್ನು ಮತ್ತು ನೀತಿ ನಿರೂಪಣಾ ಸಲಹೆಗಳನ್ನು ಕೊನೆಯ ಏಳನೆಯ ಅಧ್ಯಾಯವು ಒಳಗೊಂಡಿದೆ.

ಕೊನೆ ಟಿಪ್ಪಣಿ

೧. ಹಕ್, ಉಲ್-ಮಹೆಬೂಬ್, ೧೯೯೭, ಹ್ಯೂಮನ್ ಡೆವಲಪ್‌ಮೆಂಟ್ ಇನ್ ಸೌಥ್ ಏಷಿಯಾನ್ ಒಯುಪಿ, ದೆಹಲಿ.

೨. ಶೇಷಾದ್ರಿ ಬಿ, ಇಂಡಸ್ಟ್ರಿಲೈಜೇಷನ್ ಅಂಡ್ ರೀಜನಲ್ ಡೆವಲಪಮೆಂಟ್, ಕನ್ಸೆಪ್ಟ್, ನ್ಯೂ-ದೆಹಲಿ.

೩. ಸೇನ್ ಅಮರ್ತ್ಯ, ೧೯೯೫, ಪಾಪುಲೇಶನ್ ಪಾಲಿಸಿ ಅಂತ್ರೋಟೆರಿಸಿಸಮ್ V/S ಕೋ-ಅಫರೇಷನ್, ಇಂಟರ್‌ನ್ಯಾಷನಲ್ ಲಕ್ಚರ್ ಸಿರೀಜ್ ಇನ್ ಪಾಪುಲೇಷನ್ ಇಷ್ಯೂಸ್ ದಿ. ಜಾನ್ ಡಿ.ಪಿ. ಕಲ್‌ಹಿರಿನ್ಸ್ ಮ್ಯಾಕ್, ಅರ್ಥರ್ ಫೌಂಡೇಷನ್, ನ್ಯೂ-ದೆಹಲಿ ಪು. ೯೩.

೪. ವ್ಯಾಸಲು, ವಿನೋದ ಮತ್ತು ವಾಣಿ ಬಿ.ಪಿ, ೧೯೯೭, ಡೆವಲಪಮೆಂಟ್ ಅಂಡ್ ಡಿಪ್ರೆವೆಷನ್ ಇನ್ ಕರ್ನಾಟಕ, ಎ ಡಿಸ್ಟ್ರಿಕ್ಟ್ ಲೆವೆಲ್ ಸ್ಟಡಿ, ಇಪಿಡಬ್ಲು, ವಾಲ್ಯೂಮ್ ೩೨, ನಂ.೪೬, ಪುಟ-೨೯೭೦-೭೫.

೫. ಮಾಥೂರ್ ಎ, ೧೯೮೩, ರಿಜನಲ್ ಡೆವಲಪಮೆಂಟ್ ಅಂಡ್ ಇನ್‌ಕಮ್ ಡಿಸ್‌ಪ್ಯಾರಿಟಡ್ ಇನ್ ಇಂಡಿಯಾ ಎ ಸೆಕ್ಟರಲ್ ಅನಾಲೈಸಿಸ್, ಎಕೊನೊಮಿಕ್ ಡೆವಲ್ಪಮೆಂಟ್ ಅಂಡ್ ಕಲ್ಚರಲ್ ಚೆಂಜ್, ವ್ಯಾಲ್ಯೂಮ್, ೩೧, ನಂ.೩, ಪುಟ-೪೭೫-೫೦೫.

೬. ಸೇನ್ ಅಮರ್ತ್ಯ, ೧೯೯೫, ಪಾಪುಲೇಶನ್ ಪಾಲಿಸಿ ಅಂತ್ರೋಟೆರಿಸಿಸಮ್ V/S ಕೋ-ಅಫರೇಷನ್, ಇಂಟರ್‌ನ್ಯಾಷನಲ್ ಲಕ್ಚರ್ ಸಿರೀಜ್ ಇನ್ ಪಾಪುಲೇಷನ್ ಇಷ್ಯೂಸ್ ದಿ. ಜಾನ್ ಡಿ.ಪಿ. ಕಲ್‌ಹಿರಿನ್ಸ್ ಮ್ಯಾಕ್, ಅರ್ಥರ್ ಫೌಂಡೇಷನ್, ನ್ಯೂ-ದೆಹಲಿ ಪು. ೯೩.

೭. ರಾವ್ ಹೆಮಲತಾ, ೧೯೮೪, ರಿಜನಲ್ ಡಿಸ್‌ಪ್ಯಾರಿಟಿ ಅಂಡ್ ಡೆವಲಪೆಮೆಂಟ್ ಇನ್ ಇಂಡಿಯಾ, ಆಶಿಷ್, ನ್ಯೂ ದೆಹಲಿ.

೮. ಯುಎನ್‌ಡಿಪಿ, ೧೯೯೦, ಹ್ಯೂಮನ್ ಡೆವಲಪ್ಮೆಂಟ್ ರಿಪೋರ್ಟ್-೧೯೯೦, ಓಯುಪಿ, ನ್ಯೂಯಾರ್ಕ್

೯. ವಿಘ್ನರಾಜ್, ಪೊನ್ನ, ೧೯೯೧, ಗ್ರೌಥ್, ಹೂಮನ್ ಡೆವಲಪ್‌ಮೆಂಟ್ ಅಂಡ್ ಇಕ್ವಿಟಿ, ನೊ ಟ್ರೆಡ್ ಆಫ್ ಇನ್ ಕೆ.ಎಲ್.ದಾಲತ್ (ಸಂ) ಹ್ಯೂಮನ್ ಡೆವಲಪ್‌ಮೆಂಟ್, ಆ್ಯನ್ ಇಂಡಿಯಾ ಪ್ರಾಸ್‌ಪೆಕ್ಟಿವ್ ವಿಕಾಸ್, ನ್ಯೂ ದೆಹಲಿ, ಪು.ಸಂ. ೧೧೩-೧೩೬.

ಅಧ್ಯಾಯ–ಎರಡು

ಅಧ್ಯಯನಗಳ ಸಮೀಕ್ಷೆ

ಅಧ್ಯಾಯ–ಎರಡು

ಅಧ್ಯಯನಗಳ ಸಮೀಕ್ಷೆ

ಅಧ್ಯಯನಗಳ ಸಮೀಕ್ಷೆ ಎನ್ನುವ ಈ ಅಧ್ಯಯದಲ್ಲಿ ಅಧ್ಯಯನಕ್ಕೆ ಸಂಬಂಧಪಟ್ಟ ಗ್ರಂಥಗಳನ್ನು ಪರಾಮರ್ಶಿಸಲಾಗಿದೆ. ಈ ಅಧ್ಯಯನವು ಮುಖ್ಯವಾಗಿ ಇಲ್ಲಿಯವರೆಗೆ ನಡೆದ ಅಧ್ಯಯನಗಳನ್ನು ಮೂರು ಗುಂಪುಗಳಾಗಿ ಸಮೀಕ್ಷೆಯನ್ನು ಮಾಡಿಕೊಳ್ಳಲಾಗಿದೆ. ಮೊದಲನೆಯದು ಅಭಿವೃದ್ಧಿ ಸಿದ್ಧಾಂತಗಳಿಗೆ ಸಂಬಂಧಿಸಿದಂತೆ ಅಧ್ಯಯನಗಳು, ಎರಡನೆಯದು ಪ್ರಾದೇಶಿಕ ಅಸಮಾನತೆಗೆ ಸಂಬಂಧಪಟ್ಟಂತಹ ಅಧ್ಯಯನಗಳು ಕೊನೆಯದು ಶಿಕ್ಷಣ ಆರೋಗ್ಯ ಮತ್ತು ವರಮಾನಗಳಿಗೆ ಸಂಬಂಧಿಸಿದಂತೆ ಅಧ್ಯಯನಗಳ ಅವಲೋಕನವನ್ನು ಒಳಗೊಂಡಿದೆ.

೨.೧. ಅಭಿವೃದ್ಧಿಗೆ ಸಂಬಂಧಿಸಿದ ಸಿದ್ಧಾಂತಗಳ ಅಧ್ಯಯನ

ಪ್ರಪಂಚದ ಇತರ ರಾಷ್ಟ್ರಗಳಂತೆ ಕರ್ನಾಟಕದಲ್ಲಿಯೂ ಸಹ ಅಭಿವೃದ್ಧಿ ಎಂಬುದು ಸಮಾನವಾಗಿ ಎಲ್ಲಾ ಪ್ರದೇಶಗಳಲ್ಲಿ ಏಕರೂಪತೆಯನ್ನು ಕಾಯ್ದುಕೊಂಡಿಲ್ಲ. ಕರ್ನಾಟಕದ ಅಭಿವೃದ್ಧಿಯಲ್ಲಿ ಅದರಲ್ಲಿಯೂ ಮಾನವ ಅಭಿವೃದ್ಧಿಯಲ್ಲಿ ಪ್ರದೇಶವಾರು, ಜಿಲ್ಲಾವಾರು ಅಂತರ ಅಸಮಾನತೆಗಳಿವೆ. ಯೋಜನೆಗಳ ಹೊರತಾಗಿಯೂ ರಾಜ್ಯದಲ್ಲಿ ಶಿಕ್ಷಣ, ಆರೋಗ್ಯ, ಸೌಲಭ್ಯಗಳು, ಮೂಲಭೂತ ಸೌಕರ್ಯಗಳಲ್ಲಿಯ ಅಸಮತೋಲನದಿಂದಾಗಿ ಇನ್ನು ಪ್ರಾದೇಶಿಕ ಅಸಮಾನತೆಗಳು ಉಳಿದುಕೊಂಡು ಬಂದಿವೆ. ಇಂದು ಜಗತ್ತಿನಾದ್ಯಂತ ಅಭಿವೃದ್ಧಿಯನ್ನು ಮಾನವ ಅಭಿವೃದ್ಧಿಯ ಪರಿಪ್ರೇಕ್ಷೆಯಲ್ಲಿ ನಿರ್ವಚಿಸಲಾಗುತ್ತಿದೆ. ಮಾನವ ಅಭಿವೃದ್ಧಿಯ ವಿಚಾರ ಪ್ರಣಾಳಿಕೆಯ ಮೂಲ ಮತ್ತು ಬೆಳವಣಿಗೆಯನ್ನು ಅರಿಯಬೇಕಾದರೆ ಈ ಹಿಂದೆ ಅಸ್ತಿತ್ವದಲ್ಲಿದ್ದ ಅಭಿವೃದ್ಧಿ ಮಾದರಿಗಳ ಅರಿವು ಅತ್ಯವಶ್ಯಕವಾಗಿರುತ್ತದೆ.

'ಅಭಿವೃದ್ಧಿ' ಅರ್ಥವನ್ನು ವಿಶ್ಲೇಷಿಸುವುದು ಒಂದು ಸಂಕೀರ್ಣವಾದ ಸಂಗತಿ. "ಅಭಿವೃದ್ದಿ ಎಂಬ ಏನನ್ನು ತಿಳಿಸುತ್ತದೆ ಎಂಬುವುದರ ಬಗ್ಗೆ ಗಂಭೀರ ಚರ್ಚೆ ನಡೆಯುತ್ತಿವೆ. ಈ ಪದ

ಹಲವಾರು ಮೌಲ್ಯ ನಿರ್ಣಯಗಳನ್ನು ಒಳಗೊಂಡಿರುವುದರಿಂದ ಚರ್ಚೆಯನ್ನು ಮುಕ್ತಾಯಗೊಳಿಸುವುದು ಕಷ್ಟಕರವಾಗಿದೆ". (Hogendorn, 1987;12) 'ಅಭಿವೃದ್ಧಿ', 'ಆರ್ಥಿಕ ಬೆಳವಣಿಗೆ'ಗಳ ಬಗೆಗಿನ ಕಲ್ಪನೆಗಳು ಹಲವಾರು ಶತಮಾನಗಳಿಂದ ವಿಕಸಿತಗೊಳ್ಳುತ್ತಾ, ಇನ್ನು ವಿಕಸಿತಗೊಳ್ಳುತ್ತಲೇ ನಡೆದಿವೆ. ಅಭಿವೃದ್ಧಿ ಕುರಿತಾದ ಮೀಮಾಂಸೆಗಳು 'ಅಭಿವೃದ್ಧಿ ಅರ್ಥಶಾಸ್ತ್ರ'ವೆಂಬ ಜ್ಞಾನಶಿಸ್ತುವಿನಲ್ಲಿ ಹೆಚ್ಚು ಮಂಡಿತವಾಗುತ್ತಿವೆ.

ಅಭಿವೃದ್ಧಿ ಅರ್ಥಶಾಸ್ತ್ರ ಎಂಬುದೇನೋ ಹೊಸದಾದ ಜ್ಞಾನ ಶಿಸ್ತುವೇನಲ್ಲ. ಈಗಾಗಲೇ ಅಸ್ತಿತ್ವದಲ್ಲಿದ್ದ ಜ್ಞಾನ ಶಿಸ್ತುವಿನ ಒಂದು ಅಂಗ ಮಾತ್ರ. ೧೯೪೦ ಮತ್ತು ೧೯೫೦ರ ದಶಕದಲ್ಲಿ, ಅದರಲ್ಲಿಯೂ ಎರಡನೇ ಪ್ರಪಂಚ ಯುದ್ಧದ ನಂತರ ಅಭಿವೃದ್ಧಿ ಅರ್ಥಶಾಸ್ತ್ರ ಕುರಿತಂತೆ ಚಿಂತನೆಗಳು ಪ್ರಾರಂಭಗೊಂಡವು. ಈ ಹಿಂದಿನ ಅರ್ಥಶಾಸ್ತ್ರಜ್ಞರಿಗಿಂತ ಈ ಅವಧಿಯ ಅರ್ಥಶಾಸ್ತ್ರಜ್ಞರ ಚಿಂತನೆಗಳು ಭಿನ್ನವಾಗಿದ್ದವು.

ಲಾಗಾಯ್ತಿನಿಂದಲೂ ಅಭಿವೃದ್ಧಿ ಎಂದರೆ 'ಆರ್ಥಿಕ ಬೆಳವಣಿಗೆ', ಎಂಬ ಸೀಮಿತನೆಲೆಯಲ್ಲಿ ಅಭಿವೃದ್ಧಿಯನ್ನು ಅನೇಕ ಅರ್ಥಶಾಸ್ತ್ರಜ್ಞರು ಅರ್ಥೈಸಿದ್ದಾರೆ. "ಪ್ರಜ್ಞಾಪೂರ್ವಕವಾಗಿ ಉದ್ದೇಶ ಪೂರ್ವಕವಾಗಿ ಬೆಳವಣಿಗೆಯನ್ನು ಉದ್ದೀಪನಗೊಳಿಸುವುದೇ ಅಭಿವೃದ್ಧಿ""(Brenner,೧೯೬೬) ಆರ್ಥಿಕ ಬೆಳವಣಿಗೆಯೇ ಆರ್ಥಿಕ ಅಭಿವೃದ್ಧಿ ಎನ್ನುವುದರ ಮೂಲಕ ಅಭಿವೃದ್ಧಿಯನ್ನು ಆರ್ಥಿಕ ಕ್ಷೇತ್ರವೇ ಗುತ್ತಿಗೆ ಹಿಡಿದಿತ್ತು.

ವ್ಯಕ್ತಿಯ ಜೀವನದಲ್ಲಿ ಕೇವಲ ಭೌತಿಕ ಅಂಶಗಳು ಮಾತ್ರ ಮುಖ್ಯವಲ್ಲ. ಅಂತಸ್ಥ ಗುಣಗಳಿಗೆ (Intrinsic Value) ನಾವು ಮನ್ನಣೆಯನ್ನು ನೀಡಬೇಕಾಗುತ್ತದೆ. ಅಭಿವೃದ್ಧಿ ಎಂಬುದು ಕೇವಲ ಆರ್ಥಿಕ ಮತ್ತು ಸಾಮಾಜಿಕ ನೆಲೆಗಳಿಗೆ ಮಾತ್ರ ಸೀಮಿತವಾಗಿರದೇ ಮಾನವನ ಜೀನದ ಪ್ರತಿಯೊಂದು ಅಂಶವನ್ನು ಒಳಗೊಂಡಿರುತ್ತದೆ. "ಅಭಿವೃದ್ಧಿ ಎಂಬುದು ಸಮಾಜ ಮತ್ತು ಸಮಾಜದಲ್ಲಿಯ ಆರ್ಥಿಕತೆ, ಸಾಮಾಜಿಕ, ರಾಜಕೀಯ, ಭೌತಿಕ ರಚನೆಯಲ್ಲಿ ಮತ್ತು ಜನತೆಯ ಮೂಲಭೂತವಾದ ಬದಲಾವಣೆಯನ್ನು ತರುವ ಪ್ರಕ್ರಿಯೆಯಾಗಿದೆ."(Weilz, ೧೯೭೭, ಉದ್ಧೃತ: ಅಲೆಗ್ಸಾಂಡರ್, ೧೯೯೧), ಆದ್ದರಿಂದ ಅಭಿವೃದ್ಧಿಯನ್ನು ಕೇವಲ ಸೀಮಿತ ನೆಲೆಯಲ್ಲಿ ಗುರುತಿಸದೇ ವಿಶಾಲ ದೃಷ್ಟಿಕೋನದಿಂದ ನೋಡುವುದು ಅವಶ್ಯವಾಗಿದೆ.

ಅಭಿವೃದ್ಧಿ, ಆರ್ಥಿಕ ಬೆಳವಣಿಗೆಯ ಬಗೆಗಿನ ಕುರಿತಾದ ಚಿಂತನ-ಮಂಥನಗಳು ಸಾಂಪ್ರದಾಯಿಕ ಪಂಥದವರಿಂದ ಪ್ರಚುರಗೊಂಡಿದ್ದರೂ ಇವರಿಗಿಂತ ಹಿಂದಿನ ೧೮ನೇ ಶತಮಾನದಲ್ಲಿದ್ದ ವ್ಯವಸಾಯ ಪಂಥದವರು ಆರ್ಥಿಕ ಬೆಳವಣಿಗೆ ಬಗ್ಗೆ ಅಧ್ಯಯನ ನಡೆಸಿದ್ದರು. ಇವರು ಭೂಮಿ ಮತ್ತು ಅದರ ಸಾಗುವಳಿಗೆ ಹೆಚ್ಚಿನ ಮಹತ್ವ ನೀಡಿದ್ದರು. ವ್ಯವಸಾಯ ವಲಯ ಮಾತ್ರ ಉತ್ಪಾದನೆಯ ಹೆಚ್ಚಳಕ್ಕೆ, ಆರ್ಥಿಕ ಬೆಳವಣಿಗೆಗೆ ಪ್ರಮುಖ ಮೂಲವೆಂಬುದು ಇವರ ವಾದ ಸರಣಿಯಾಗಿತ್ತು. ಈ ಚಿಂತಕರಲ್ಲಿ ಪ್ರಮುಖರೆಂದರೆ ಕ್ವೆಸ್ನೆ ಮತ್ತು ಟರ್ಗಾಟ್. ಶ್ರಮಿಕರನ್ನು ಭೂಮಿಯ ಸಾಗುವಳಿಯಲ್ಲಿ ತೊಡಗಿಸಿಕೊಂಡಾಗ ಮಾತ್ರ ಹೆಚ್ಚುವರಿ ಉತ್ಪಾದನೆ ಪಡೆಯಬಹುದೆಂಬುದು

ಇವರ ಚಿಂತನೆಯ ತಿರುಳಾಗಿತ್ತು. ಕೃಷಿ ಉತ್ಪನ್ನವು ಇತರ ವಲಯಗಳಲ್ಲಿಯ ಕಚ್ಚಾ ವಸ್ತುಗಳ, ಆಹಾರದ ಹೆಚ್ಚಳಕ್ಕೆ ತಿರುಳಾಗಿತ್ತು. ಕಾರಣವಾಗಿ ಕೈಗಾರಿಕಾ (Manufacturing) ವಲಯದಲ್ಲಿಯ ಉತ್ಪನ್ನದ ಹೆಚ್ಚಳಕ್ಕೂ ಕಾರಣವಾಗುತ್ತದೆ ಎಂಬುದು ಇವರ ಅಭಿಪ್ರಾಯವಾಗಿದ್ದಿತು. ಆದರೆ ಕೈಗಾರಿಕಾ (Manufacturing) ವಲಯವೇ ಏಕಾಂಗಿಯಾಗಿ ಆರ್ಥಿಕ ಬೆಳವಣಿಗೆಯನ್ನು ಉತ್ಪತ್ತಿ ಮಾಡಲಾರದು ಎಂಬುದು ಇವರ ನಂಬಿಕೆಯಾಗಿತ್ತು. ಇವರ ವಾದಗಳನ್ನು ಗಮನಿಸಿದಾಗ, ಇವರು ವರಮಾನ, ಉತ್ಪಾದನೆಗಳಿಗೆ ಮಾತ್ರ ಆದ್ಯತೆಯನ್ನು ನೀಡಿ ಬೆಳವಣಿಗೆ ಹಾಗೂ ಅಭಿವೃದ್ಧಿಯ ಮೂಲ ಮತ್ತು ಅಂತ್ಯ ಎಂದು ಪರಿಗಣಿಸಿರುವ ಮಾನವನನ್ನೇ ನಿರ್ಲಕ್ಷಿಸಿರುವುದು ತಿಳಿಯುತ್ತದೆ.

ವ್ಯವಸಾಯ ಪಂಥದವರ ನಂತರ, ವಾಣಿಜ್ಯ ಪಂಥದವರು, ಅಭಿವೃದ್ಧಿಯನ್ನು ತಮ್ಮದೇ ಆದ ರೀತಿಯಲ್ಲಿ ವ್ಯಾಖ್ಯಾನಿಸಿದರು. "ಅಭಿವೃದ್ಧಿ ಬಗೆಗಿನ ಇಂದಿನ ಅರ್ಥದ ಮೊದಲ ಹಂತ ಆರಂಭವಾದದ್ದು ಅರ್ಥಶಾಸ್ತ್ರದ ವ್ಯಾಪಾರೀ ದೃಷ್ಟಿಕೋನದಿಂದ, ಚಿನ್ನ, ಬೆಳ್ಳಿ ಮತ್ತು ಮುತ್ತು ರತ್ನಗಳನ್ನು ಕಲೆಹಾಕುವುದು ದೇಶದ ಅಭಿವೃದ್ಧಿ ಮತ್ತು ಶಕ್ತಿಗೆ ಬಹುಮುಖ್ಯ ಎಂಬ ಕಲ್ಪನೆಯೂ ಈ ಹೊತ್ತಿನಲ್ಲಿ ಗಟ್ಟಿಯಾಗಲಾರಂಭಿಸಿತು. ರಾಷ್ಟ್ರೀಯ ವರಮಾನ ಮತ್ತು ರಾಷ್ಟ್ರೀಯ ಆಸ್ತಿಯ ಪರಿಕಲ್ಪನೆಗಳು ಇದರಿಂದಲೇ ಹುಟ್ಟಿಕೊಂಡಿದ್ದು".(ಡೊಂಕ್ರಿ, ೧೯೯೨;೨೪)

ಅರ್ಥಶಾಸ್ತ್ರದ ಪಿತಾಮಹರಾದ ಆಡಂಸ್ಮಿತ್ ಮತ್ತು ಆತನ ಅನುಚರರೆಲ್ಲರೂ ವ್ಯಕ್ತಿಯ ಮತ್ತು ಆ ಮೂಲಕ ದೇಶದ ಸೊತ್ತನ್ನು ಅಭಿವೃದ್ಧಿಗೊಳಿಸುವ ಬಗೆಗೆ ಯೋಚಿಸಿದವರು. ರಾಷ್ಟ್ರದ ವರಮಾನ ಹೆಚ್ಚಿದೆಂತೆಲ್ಲಾ ಜನರ ಸುಖ ಸಂತೋಷಗಳು ವೃದ್ಧಿಸುತ್ತವೆ ಎಂದು ಈ ಅರ್ಥಶಾಸ್ತ್ರಜ್ಞರು ನಂಬಿದ್ದರು. ಹೀಗಾಗಿ ಅಭಿವೃದ್ಧಿ ಎಂದರೆ ಒಂದು ದೇಶ ಸಾಧಿಸುವ ಬೆಳವಣಿಗೆ ಎಂಬ ಅರ್ಥ ಬಲವಾಗಿ ಬೇರೂರಿತು. ೧೮ನೇ ಮತ್ತು ೧೯ನೇ ಶತಮಾನದ ಮಧ್ಯಭಾಗದವರೆಗಿದ್ದ ಸಾಂಪ್ರದಾಯಿಕ ಅರ್ಥಶಾಸ್ತ್ರಜ್ಞರಿಂದ ವಿಸ್ತೃತವಾದ, ಬೆಳವಣಿಗೆ ಅಭಿವೃದ್ಧಿಯ ವಿಚಾರ ಪ್ರಣಾಳಿಕೆಗಳು ರೂಪುಗೊಳ್ಳಲಿಲ್ಲ. ಇವರ ವಿವರಣೆಗಳು ಹೆಚ್ಚಾಗಿ ದೀರ್ಘಾವಧಿಯ ಆರ್ಥಿಕ ಬೆಳವಣಿಗೆಗೆ ಸಂಬಂಧಿಸಿದ್ದಾಗಿದ್ದವು. ಇವರ ರಾಜಕೀಯ ಅರ್ಥಶಾಸ್ತ್ರದ ಹಿನ್ನೆಲೆಯಲ್ಲಿ ತಮ್ಮ ವಿಚಾರ ಪ್ರಣಾಳಿಕೆಗಳನ್ನು ಮಂಡಿಸಿದರು. ಸಾಂಪ್ರದಾಯಿಕ ಚಿಂತನೆಯನ್ನು ಅಭಿವೃದ್ಧಿಪಡಿಸಿದವರಲ್ಲಿ ಆಡಂಸ್ಮಿತ್, ರಿಕಾರ್ಡೋ, ಮಾಲ್ಥಸ್ ಮತ್ತು ಮಾರ್ಕ್ಸ್ ಪ್ರಮುಖರು. ಮಾರ್ಕ್ಸ್‌ರವರ ಸೈದ್ಧಾಂತಿಕ ನಿಲುವು ಇನ್ನುಳಿದ ಸಾಂಪ್ರದಾಯಿಕ ಅರ್ಥಶಾಸ್ತ್ರದ ಚಿಂತನೆಗಿಂತ ವಿಭಿನ್ನವಾಗಿತ್ತು. ಅವರು ಬಂಡವಾಳಶಾಹಿತ್ವ ಸಿದ್ಧಾಂತವನ್ನು ಪ್ರಚುರಪಡಿಸಿದರು.

ಸಾಂಪ್ರದಾಯಿಕ ಮೀಮಾಂಸೆಯ ಪ್ರಕಾರ ಜನಸಂಖ್ಯಾ ಬೆಳವಣಿಗೆ ಮತ್ತು ತಾಂತ್ರಿಕ ಪ್ರಗತಿಯ ಹೊಯ್ದಾಟದ ಮೂಲಕ ಬೆಳವಣಿಗೆ ಉಂಟಾಗಿ ರಾಷ್ಟ್ರವು ಕೊನೆಯ ಹಂತದಲ್ಲಿ 'ಸ್ಟೇಷನ್ನರಿ ಸ್ಟೇಟ್' ಸ್ಥಿತಿಯನ್ನು ತಲುಪುತ್ತದೆ. ಇವರ ಪ್ರಕಾರ ಬಂಡವಾಳ ಸಂಗ್ರಹ, ಹೂಡಿಕೆ, ಶ್ರಮವಿಭಜನೆಗಳು ಆರ್ಥಿಕ ಬೆಳವಣಿಗೆಯಲ್ಲಿ ಮಹತ್ತರವಾದ ಪಾತ್ರವನ್ನು ವಹಿಸುತ್ತವೆ. ವ್ಯವಸಾಯ

[illegible]

ಪಂಥದವರು ಕೇವಲ ಕೃಷಿ ವಲಯದಿಂದ ಮಾತ್ರ ಬೆಳವಣಿಗೆ ಸಾಧ್ಯ ಎಂದು ಅರುಹಿದ್ದಾರೆ. ಈ ಮೀಮಾಂಸೆಯು ಕೃಷಿ ಒಳಗೊಂಡಂತೆ ತಯಾರಿಕ ವಲಯ(Manufacturing)ದಲ್ಲಿ ಸಹ ಬೆಳವಣಿಗೆ ಉಂಟಾಗಬಲ್ಲದು ಎಂದು ವಾದಿಸಿದರು.

ಸಾಂಪ್ರದಾಯಿಕ ಚಿಂತನೆಗಳನ್ನು ಈ ರೀತಿಯಲ್ಲಿ ಕ್ರೋಢೀಕರಿಸಬಹುದಾಗಿದೆ. ಮುಕ್ತವಾದ ಅಂತರರಾಷ್ಟ್ರೀಯ ವ್ಯಾಪಾರವು ಮಾರುಕಟ್ಟೆ ವಿಸ್ತರಣೆಗೆ ಒಂದು ಸಾಧನ ಆಗಿದೆ (ಸ್ಮಿತ್). ಅಂತರರಾಷ್ಟ್ರೀಯ ವ್ಯಾಪಾರದಿಂದ ತುಲನಾತ್ಮಕ ಲಾಭ ಸಾಧ್ಯ. ಇದು ಆರ್ಥಿಕ ಬೆಳವಣಿಗೆಗೆ ಪೂರಕವಾಗುತ್ತದೆ (ರಿಕಾರ್ಡೋ). ಈ ವಿಧದಲ್ಲಿ ನಿರೂಪಿಸಲ್ಪಟ್ಟ ಸಾಂಪ್ರದಾಯಿಕ ಮೀಮಾಂಸೆಯು ಟೀಕೆಗಳಿಗೆ ಒಳಪಟ್ಟಿತು. ಆರ್ಥಿಕ ಬೆಳವಣಿಗೆಯು ಕೇವಲ ಉತ್ಪಾದಕತೆ, ವರಮಾನವೃದ್ಧಿ, ಬಂಡವಾಳ ಹೂಡಿಕೆ, ತಾಂತ್ರಿಕ ಪ್ರಗತಿ, ಅಂತರರಾಷ್ಟ್ರೀಯ ವ್ಯಾಪಾರಗಳನ್ನು ಮಾತ್ರವೇ ಅವಲಂಬಿಸದೇ, ಜನರ ನಡೆನುಡಿ, ಸಂಪ್ರದಾಯ, ಆಚರಣೆಗಳು, ಧಾರ್ಮಿಕ ಮೌಲ್ಯಗಳನ್ನು ಸಹ ಅವಲಂಬಿಸಿರುತ್ತದೆ. ಈ ಎಲ್ಲಾ ಅಂಶಗಳು ಈ ಮೀಮಾಂಸೆಯಲ್ಲಿ ಗೌಣವಾಗಿದೆ.

ಜಾಗತಿಕ ಮಟ್ಟದಲ್ಲಿ ಬಹುತೇಕ ಅರ್ಥಶಾಸ್ತ್ರಜ್ಞರ ಗಮನವನ್ನು ಸೆಳೆದ ಕಾರ್ಲ್‌ಮಾರ್ಕ್ಸ್‌ರ ಚಿಂತನೆಗಳು ಮಾರ್ಕ್ಸ್‌ವಾದವೆಂದೇ ಪ್ರಸಿದ್ಧಿ ಹೊಂದಿದೆ. ಮಾರ್ಕ್ಸ್ ಸಮಾಜೋ ಐತಿಹಾಸಿಕ ಅಂಶಗಳ ಹಿನ್ನೆಲೆಯಲ್ಲಿ ರಾಜಕೀಯ ಅರ್ಥಶಾಸ್ತ್ರದ ತಳಹದಿಯ ಮೇಲೆ ಆರ್ಥಿಕ ಬೆಳವಣಿಗೆಯನ್ನು ವಿಶ್ಲೇಷಿಸಿದ್ದಾರೆ. ಇವರ ವಿಶ್ಲೇಷಣೆಯು ಅರ್ಥಶಾಸ್ತ್ರ, ಸಮಾಜಶಾಸ್ತ್ರ, ಇತಿಹಾಸ, ರಾಜಕೀಯಶಾಸ್ತ್ರ ಮತ್ತು ತತ್ವಶಾಸ್ತ್ರಗಳ ಮಿಶ್ರಣವಾಗಿದೆ.

ಮಾರ್ಕ್ಸ್‌ರವರ ಆರ್ಥಿಕ ಬೆಳವಣಿಗೆಯ ಮಾದರಿಯ ಕೆಲವು ನಿಯಮಗಳನ್ನು ಆಧಾರಿಸಿದೆ. ಅವುಗಳೆಂದರೆ ಬಂಡವಾಳ ಕೇಂದ್ರೀಕರಣ ನಿಯಮ, ಲಾಭದ ದರ ಕಡಿಮೆಯಾಗುವ ಪ್ರವೃತ್ತಿಯ ನಿಯಮ, ಬಂಡವಾಳ ಕೇಂದ್ರೀಕರಣದಲ್ಲಿಯ ಏರಿಕೆಯ ನಿಯಮ. ಈ ನಿಯಮಗಳ ಮೂಲಕ 'ಉಳ್ಳವರು ಮತ್ತು ಉಳ್ಳದೇ ಇರುವವರು' ಅಥವಾ 'ಬಂಡವಾಳಗಾರರು ಮತ್ತು ಕೆಲಸಗಾರರ' ನಡುವಿನ ವರ್ಗ ಸಂಘರ್ಷ ತೀವ್ರಗೊಂಡು, ಈ ವರ್ಗ ಸಂಘರ್ಷದಲ್ಲಿ ಬಂಡವಾಳಶಾಹಿತ್ವ ನಿರ್ನಾಮ ಹೊಂದಿ, ಸಮಾಜವಾದವು ಅಸ್ತಿತ್ವದಲ್ಲಿ ಬರುತ್ತದೆ. ಸಮಾಜದಲ್ಲಿ ವಾದ–ಪ್ರತಿವಾದಗಳ ಮೂಲಕ ಒಂದು ರೀತಿಯ ಆರ್ಥಿಕ ಬೆಳವಣಿಗೆ ಉಂಟಾಗುತ್ತದೆ. ಇದಕ್ಕೆ ಪ್ರತಿವಾದಿಗಳು ಹುಟ್ಟಿಕೊಂಡು ಸಂಯೋಗವಾದ (Sythesis) ಉಂಟಾಗುತ್ತದೆ. ಪ್ರತಿ ಸಂಯೋಗವಾದದಲ್ಲಿಯೂ ಸಮಾಜದ ಉನ್ನತ ಹಂತಕ್ಕೆ ತಲುಪುತ್ತಿರುತ್ತದೆ. ["Marxist Scholars emphasised the incorporation of marginalised & powerless sections of the society into Societal process as the objective of development. Accordingly, development has been defined as the process by which powerless people every where are free from all forms of dependancy, social, cultural & political so that they can create a personal sense of history of themselves and there by express their full potential of human beings"

(Kim, 1973;468)] ಮಾರ್ಕ್ಸ್‌ರವರ ಸಿದ್ಧಾಂತವು ರೋಸ್ಟೋ, ಸ್ವಿಝೀ ಮುಂತಾದವರಿಂದ ತೀವ್ರ ಟೀಕೆಗೆ ಒಳಪಟ್ಟಿದೆ. ರೋಸ್ಟೋರವರು ಮಾರ್ಕ್ಸ್ ಸಿದ್ಧಾಂತಗಳಿಗೆ ಪ್ರತಿಯಾಗಿ ವಾದಿಸುವ 'Neo-Communist Manifesto' ಗ್ರಂಥವನ್ನೇ ರಚಿಸಿದ್ದಾರೆ.

ನಂತರ ಬಂದ ನವಸಾಂಪ್ರದಾಯಿಕ ಅರ್ಥಶಾಸ್ತ್ರಜ್ಞರು ಉತ್ಪಾದಕತೆ, ಮಾರುಕಟ್ಟೆ ವ್ಯವಸ್ಥೆ, ಬಂಡವಾಳ ಕ್ರೋಢೀಕರಣಗಳೇ, ಅಭಿವೃದ್ಧಿಯನ್ನು ಪ್ರೇರೇಪಿಸುವ ಅಂಶಗಳೆಂದು ತಿಳಿಸುವುದರ ಮೂಲಕ ಅಭಿವೃದ್ಧಿಯ ಮೂಲ ಮತ್ತು ಕೊನೆಯಾಗಿರುವ ಮಾನವನನ್ನೇ ತಮ್ಮ ಚಿಂತನೆಯಿಂದ ದೂರವಿರಿಸಿದವು. "ಮೂಲಧಾರೆ ಅರ್ಥಶಾಸ್ತ್ರವೆಂದು ಪರಿಗಣಿಸಲಾಗಿರುವ ನವ ಅಭಿಜಾತ ಅರ್ಥಶಾಸ್ತ್ರವು ಪಾಶ್ಚಿಮಾತ್ಯ ಬಂಡವಾಳಶಾಹಿ ವ್ಯವಸ್ಥೆ ಹಿನ್ನೆಲೆಯಲ್ಲಿ ಬೆಳೆದುಬಂತು. ಈ ಮೂಲಧಾರೆ ಅರ್ಥಶಾಸ್ತ್ರವು ಅನುಭೋಗಿ, ಸಾರ್ವಭೌಮತ್ವ, ಪರಿಪೂರ್ಣ ಪೈಪೋಟಿ, ವಿವೇಚನಾಶೀಲ ವರ್ತನೆ, ಗರಿಷ್ಠ ತೃಪ್ತಿ, ಗರಿಷ್ಠ ಲಾಭ, ಮಾರುಕಟ್ಟೆ ಸಮತೋಲನ, ಪರಿಮಿತಿ ಸಂಪನ್ಮೂಲ, ಅಪರಿಮಿತ ಬಯಕೆಗಳು ಮುಂತಾದ ಕಲ್ಪನೆಗಳ ಮೇಲೆ ನಿಂತಿದೆ. ಇದು ಮಾರುಕಟ್ಟೆ ವ್ಯವಸ್ಥೆಯನ್ನು ಆಧಾರವಾಗಿಟ್ಟುಕೊಂಡು ಬೆಳೆದು ಬಂದಿದೆ. ಆರ್ಥಿಕತೆಗಳ ಸಾಮಾನ್ಯ ಮೂಲಭೂತ ಸಮಸ್ಯೆಗಳಾದ ಏನನ್ನು ಉತ್ಪಾದಿಸಬೇಕ, ಹೀಗೆ ಉತ್ಪಾದಿಸಬೇಕು ಹಾಗೂ ಯಾರಿಗಾಗಿ ಉತ್ಪಾದಿಸಬೇಕು ಎಂಬುದನ್ನು ಮಾರುಕಟ್ಟೆಯ ಸಹಜ ನಿರ್ದೇಶನಗಳಿಗನುಗುಣವಾದ ಕ್ರಮದಿಂದ ಪರಿಹಾರವಾಗುತ್ತದೆ ಎಂಬುದೇ ಮೂಲಧಾರೆ ಅರ್ಥಶಾಸ್ತ್ರದ ತಿರುಳಾಗಿದೆ. ಇಡೀ ಆರ್ಥಿಕತೆಯು ಮಾರುಕಟ್ಟೆಯ ಸಹಜ-ಸ್ವತಂತ್ರ ನಿರ್ದೇಶನಕ್ಕೆ ಅನುಗುಣವಾಗಿ ಕೆಲಸ ಮಾಡುತ್ತವೆ ಎಂಬ ಕಾರಣಕ್ಕೆ ಈ ಆರ್ಥಿಕತೆಗಳನ್ನು ಮುಕ್ತಮಾರುಕಟ್ಟೆ ಆರ್ಥಿಕತೆ ಎಂದು ಕರೆಯಲಾಗಿದೆ. ಸರ್ಕಾರದ ಹಸ್ತಕ್ಷೇಪವಿಲ್ಲದಿದ್ದರೆ ಮಾರುಕಟ್ಟೆಯು ಹಡೆದ ಅಗೋಚರ ಹಸ್ತದ ನಿರ್ದೇಶನಗಳಿಗೆ ಅನುಗುಣವಾಗಿ ಆರ್ಥಿಕತೆಯೊಂದು ತನ್ನ ಸಹಜ ಸಮತೋಲನವನ್ನು ಕಂಡುಕೊಳ್ಳುತ್ತದೆ ಎಂದು ಈ ಪಂಥದಲ್ಲಿ ವಾದಿಸಲಾಯಿತು"[೨] (ಚಂದ್ರಶೇಖರ್, ೧೯೯೩;೩೭)

ಅಭಿವೃದ್ಧಿ, ಆರ್ಥಿಕ ಬೆಳವಣಿಗೆಗಳನ್ನು ಕುರಿತಾದ ಸರಿಸುಮಾರು ಎಲ್ಲಾ, ಸಿದ್ಧಾಂತಗಳು ಪಾಶ್ಚಿಮಾತ್ಯ ನೆಲೆಗಟ್ಟಿನಲ್ಲಿ ರೂಪುಗೊಂಡಿರುವಂತಾಗಿವೆ. ಸಾಂಪ್ರದಾಯಿಕ ಸಿದ್ಧಾಂತವಾಗಿರಬಹುದು ಇಲ್ಲವೇ ನವ ಸಾಂಪ್ರದಾಯ ಸಿದ್ಧಾಂತಗಳು ಆಗಿರಬಹುದು ಅವು ಭಾರತದಂತಹ ಅಭಿವೃದ್ಧಿಶೀಲ ಆರ್ಥಿಕತೆಗಳ ಅಭಿವೃದ್ಧಿ ಗತಿಶೀಲತೆಯನ್ನು ಗುರುತಿಸುವಲ್ಲಿ ವಿಫಲಗೊಂಡಿವೆ. ಸೇನ್‌ರವರು ಸಾಂಪ್ರದಾಯಿಕ ಅಭಿವೃದ್ಧಿ ಸಿದ್ಧಾಂತಗಳನ್ನು ಈ ರೀತಿ ಟೀಕಿಸಿದ್ದಾರೆ.

ಭಾರತದಂತಹ ದೇಶದಲ್ಲಿ ಜನತೆಯ ನಡವಳಿಕೆ, ಮನೋವೃತ್ತಿ, ಮೌಲ್ಯಗಳು ಅಭಿವೃದ್ಧಿಯ ಮೇಲೆ ತೀವ್ರ ಪರಿಣಾಮ ಬೀರುತ್ತವೆ. ಈ ಅಂಶಗಳನ್ನು ಈ ಹಿಂದಿನ ಸಿದ್ಧಾಂತಗಲ್ಲಿ ಮರೆಯಲಾಗಿದೆ. "ಯಾವ ಜನತೆಗಾಗಿ ಅಭಿವೃದ್ಧಿ ಯೋಜನೆ ಮತ್ತು ಕೌಶಲ್ಯಗಳನ್ನು ನಿರೂಪಿಸುತ್ತೆವೆಯೋ ಅವು ಆ ಜನತೆಯ ಸಾಮಾಜಿಕ ಮನೋವೃತ್ತಿ ಮತ್ತು ಮೌಲ್ಯಗಳಿಗೆ ಬದ್ಧವಾಗಿರಬೇಕು. ಒಂದು ಸಮಾಜದಲ್ಲಿ ಅನುಕೂಲಕರವಾದ ಬದಲಾವಣೆಯನ್ನು ತರಬೇಕಾದರೆ

ಜನತೆಯ ಮೌಲ್ಯ ಮತ್ತು ಮನೋವೃತ್ತಿಗಳನ್ನು ಸಮಂಜಸವಾಗಿ ಗುರುತಿಸಬೇಕಾಗುತ್ತದೆ. ಯೋಜನೆಗಳು ನಿಗದಿತ ಫಲ ನೀಡದೇ ಇರುವುದಕ್ಕೆ ಜನತೆಯ ಮನೋವೃತ್ತಿ ಮತ್ತು ಮೌಲ್ಯಗಳ ಬಗೆಗಿನ ತಪ್ಪು ಗ್ರಹಿಕೆಗಳೇ ಕಾರಣವಾಗಿವೆ".[೨](ಬೇಗಮ್, ೧೯೮೮;೭೧).

ಅಭಿವೃದ್ಧಿಯ ಉದ್ದೇಶವೇ 'ಜನತೆಯ ಕಲ್ಯಾಣ' ಎಂದಾದರೆ ನಾವು ಜನತೆಯ ಮೌಲ್ಯಗಳನ್ನು ಕುರಿತು ನಿರ್ಲಕ್ಷ್ಯ ತಾಳುವಂತಿಲ್ಲ. ಮೌಲ್ಯ ಮತ್ತು ನಡವಳಿಕೆಗಳು ಜನತೆಯನ್ನು ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವಂತೆ ಮಾಡುತ್ತವೆ. ಜನತೆಯ ಭಾಗವಹಿಸುವಿಕೆಯಿಂದ ಮಾತ್ರ ಅಭಿವೃದ್ಧಿ ಸಾಧ್ಯ.

"ವರಮಾನಗಳ ಬೆಳವಣಿಗೆಯ ಉನ್ನತ ಪ್ರಮಾಣದಿಂದ ಸಾಮಾಜಿಕ ಅವನತಿ ಉಂಟಾಗಿದೆ ಹಾಗೂ ಅದರಿಂದ ಜೀವನದ ಗುಣಮಟ್ಟದ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗಿದೆ. ಕೇವಲ ವರಮಾನವನ್ನು ಹೆಚ್ಚಿಸುವುದರ ಮೂಲಕ ಜನರ ಜೀವನಮಟ್ಟ ಸುಧಾರಿಸುವುದಕ್ಕೆ ಮಿತಿಗಳಿವೆ. ಜೀವನದ ಮೌಲ್ಯಗಳು ಜೀವನ ಗುಣಮಟ್ಟವನ್ನು ಮಿತಿಯಿಲ್ಲದೇ ಸುಧಾರಿಸಬಲ್ಲವು. ಜೀವನದ ಮೌಲ್ಯಗಳು ಸಂಪೂರ್ಣ ಬೆಳವಣಿಗೆಗೆ ಅವಕಾಶ ಕಲ್ಪಿಸುತ್ತವೆ. ಹಾಗೂ ಇದರಿಂದಾಗಿ ವರಮಾನಗಳು ಹೆಚ್ಚಾಗುತ್ತವೆ. ಜೀವನದ ಗುಣಮಟ್ಟ ಉತ್ತಮಗೊಳ್ಳುತ್ತದೆ"(ನಂಜುಂಡಪ್ಪ, ೧೯೯೯). ಆದ್ದರಿಂದ ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಮೌಲ್ಯ ಮತ್ತು ನಡವಳಿಕೆಗಳನ್ನು ಕುರಿತಂತೆ ಹೆಚ್ಚಿನ ಚಿಂತನೆಯ ಅವಶ್ಯಕೆ ಹಿಂದೆಂದಿಗಿಂತಲೂ ಇಂದು ಹೆಚ್ಚು ಅವಶ್ಯಕವಾಗಿದೆ. ಸಾಂಪ್ರದಾಯಿಕ ಚಿಂತಕರಿಂದ ಮೊದಲಗೊಂಡು ಕಳೆದೆರಡು ದಶಕಗಳವರೆಗಿನ ಅಭಿವೃದ್ಧಿ ಚಿಂತಕರೆಲ್ಲರೂ ಮಾನವನನ್ನು ಅಭಿವೃದ್ಧಿಯ ಸಾಧನ ಎಂದು ಪರಿಗಣಿಸಿದರೆ ಹೊರತು, ಜನತೆಯೇ ಅಭಿವೃದ್ಧಿಯ ಸಾಧನದೊಂದಿಗೆ ಕೊನೆಯು ಸಹ ಎಂಬುವುದನ್ನು ದೂರವಿರಿಸಿದ್ದರು. ಈ ಚಿಂತನೆಗಳಲ್ಲಿ ವರಮಾನ, ಕೈಗಾರಿಕಾ ಉತ್ಪಾದನೆಗಳೇ ಮುಖ್ಯವಾಗಿ ಜನರ ಬದುಕು ಆನುಷಂಗಿಕವಾಗಿತ್ತು.

ಅಭಿವೃದ್ಧಿಯಲ್ಲಿ ಆರ್ಥಿಕೇತರ ಅಂಶಗಳ ಪ್ರಭಾವವನ್ನು ಗುರುತಿಸಿದವರು ಕೆಲವೇ ಚಿಂತಕರು. ಜೆ.ಎಸ್.ಮಿಲ್, ಬೋಕೆ ಮುಂತಾದವರು. "ಮಾನಸಿಕ ಮತ್ತು ಸಾಮಾಜಿಕ ಅಗತ್ಯಗಳು ಅಭಿವೃದ್ಧಿಗೆ ಆರ್ಥಿಕ ಅಗತ್ಯಗಳಷ್ಟೇ ಪ್ರಮುಖವಾಗಿವೆ." ಜಿ.ಎಮ್.ಮೀಯರ್ ಮತ್ತು ಬಾಲ್ಡ್‌ವಿನ್(೧೯೫೭) ಅವರ ಈ ಮತುಗಳು ಈ ಚಿಂತಕರು ಅಭಿವೃದ್ಧಿಯಲ್ಲಿ ಆರ್ಥಿಕೇತರ ಅಂಶಗಳು ಸಹ ಪ್ರಮುಖ ಪಾತ್ರವನ್ನು ವಹಿಸುತ್ತವೆ ಎಂಬುವುದನ್ನು ಅರುಹಿದರು ಎಂಬುದು ತಿಳಿಯುತ್ತದೆ. "ಅಭಿವೃದ್ಧಿಯ ಅರ್ಥ ಜನತೆಯ ಅಭಿವೃದ್ಧಿ. ರಸ್ತೆ, ಕಟ್ಟಡ, ಉತ್ಪನ್ನದಲ್ಲಿ ಹೆಚ್ಚಳ ಇತರೆ ಕ್ರಿಯೆಗಳು ಅಭಿವೃದ್ಧಿಯಲ್ಲ. ಇವು ಅಭಿವೃದ್ಧಿಯ ಕೇವಲ ಉಪಕರಣಗಳು ಮಾತ್ರ. ಪ್ರತಿಯೊಂದು ಯೋಜನೆ ಅಥವಾ ಪ್ರಸ್ತಾವಗಳು ಅವು ಅಭಿವೃದ್ಧಿಯ ಉದ್ದೇಶವನ್ನು ಈಡೇರಿಸಿವೆಯೇ ಎಂಬುವುದರಿಂದ ನಿರ್ಧರಿತವಾಗುತ್ತವೆ. ಅಭಿವೃದ್ಧಿಯ ಉದ್ದೇಶ ಜನತೆಯ ಯೋಗಕ್ಷೇಮ" (Nyerere, ೧೯೬೮;೫೯–೬೦). ಅಭಿವೃದ್ಧಿಯಲ್ಲಿ ಆರ್ಥಿಕ ಚಲಕಗಳ ಪಾತ್ರ ಮಹತ್ವವಾದುದು ನಿಜ. ಆದರೆ ಅಭಿವೃದ್ಧಿಗೆ ಅದಷ್ಟೇ ಸಾಕಾಗುವುದಿಲ್ಲ. ಆರ್ಥಿಕೇತರ ಅಂಶಗಳು ಸಹ ಅಭಿವೃದ್ಧಿಯ ಮೇಲೆ

ನಿರ್ಣಾಯಕ ಪ್ರಭಾವ ಬೀರಬಲ್ಲವಾಗಿವೆ. "ಬದುಕಿನ ಬಗೆಗಿನ ಧೋರಣೆ, ದುಡಿಮೆ, ಅಧಿಕಾರ, ನೌಕರಶಾಹಿ ಆಡಳಿತ ವ್ಯವಸ್ಥೆ, ಕುಲಸಂಬಂಧಿ ಅಂಶಗಳು, ಸಾಮಾಜಿಕ ವ್ಯವಸ್ಥೆ, ನ್ಯಾಯವ್ಯವಸ್ಥೆ, ಭೂಮಾಲೀಕತ್ವ, ಮೌಲ್ಯ ವ್ಯವಸ್ಥೆ ಯಥಾ ಸ್ಥಿತಿವಾದ ಹಾಗೂ ಕ್ರಿಯಾಶೀಲ ಪ್ರಜ್ಞೆ ಮುಂತಾದ ನೂರಾರು ಸಾಮಾಜಿಕ ಸಾಂಸ್ಕೃತಿಕ ಅಂಶಗಳು ಅಭಿವೃದ್ಧಿಯನ್ನು ನಿರ್ಧರಿಸುವ ಅಂಶಗಳಾಗಿವೆ"[೪](ಚಂದ್ರಶೇಖರ್, ೧೯೯೩).

ಆರ್ಥಿಕ ವ್ಯವಸ್ಥೆಯನ್ನು ಸಾಮಾಜಿಕ ವ್ಯವಸ್ಥೆಯಿಂದ ಬೇರ್ಪಡಿಸಿ ಅಭ್ಯಸಿಸುವುದು ಸಾಧ್ಯವೇ ಇಲ್ಲ. ಕೆಲವು ಚಿಂತಕರು ಮಾತ್ರ ಸಾಮಾಜಿಕ, ಸಾಂಸ್ಕೃತಿಕ, ಮಾನಸಿಕ ಅಂಶಗಳ ತಳಹದಿಯ ಮೇಲೆ ಅಭಿವೃದ್ಧಿ ಸಿದ್ಧಾಂತಗಳನ್ನು ರೂಪಿಸುವ ಸಾಹಸ ತೋರಿದರು. ಅಭಿವೃದ್ಧಿಯನ್ನು ನಿರ್ಧರಿಸುವ ಅಂಶಗಳಲ್ಲಿ ಆರ್ಥಿಕ ಸಾಮಾಜಿಕ ಅಂಶಗಳಷ್ಟೇ ಸಾಂಸ್ಕೃತಿಕ ಅಂಶಗಳು ಸಹ ಅಷ್ಟೆ ಮಹತ್ವ ಪಡೆದಿವೆ.

["Culture and development are vitally related. Three kinds of cultures may be relevent for development; Societal culture, political culture & organisational cullture. pThe three cultures are interrelated. Political culturel creates the enabling climate for development. Societal culture helps in shaping the strategy of development and organisational culture helps in developing behaviour norms which faciliate and accelerate development"(Udai, ೧೯೮೮;೧೭೫–೭೬).]"ಅಭಿವೃದ್ಧಿಯನ್ನು ಉದ್ದೀಪನಗೊಳಿಸುವಲ್ಲಿ, ಪೋಷಿಸುವಲ್ಲಿ ಸಂಸ್ಕೃತಿ ಪ್ರಮುಖವಾದ ಪಾತ್ರವನ್ನು ವಹಿಸುತ್ತದೆ. ಜನತೆಯ ಆರ್ಥಿಕ ನಡವಳಿಕೆಯ ಮೇಲೆ, ಸಂಸ್ಕೃತಿ ಪ್ರಭಾವ ಬೀರುತ್ತದೆ. ಸಮಾಜೋ ಆರ್ಥಿಕಾಭಿವೃದ್ಧಿಯನ್ನು ನಿರ್ಧರಿಸುವಲ್ಲಿ ಸಾಂಸ್ಕೃತಿಕ ಪ್ರವೃತ್ತಿಯು ನಿರ್ಣಾಯಕ ಪಾತ್ರವಹಿಸುತ್ತದೆ".[೫](ಅಲೆಕ್ಸಾಂಡರ್, ೧೯೯೧)

ಹೀಗೆ ಸಾಮಾಜಿಕ, ಸಾಂಸ್ಕೃತಿಕ ಅಂಶಗಳು ಆರ್ಥಿಕ ಅಂಶಗಳಷ್ಟೇ ಮುಖ್ಯವಾಗಿದ್ದರೂ ಅಭಿವೃದ್ಧಿಯ ಮೂಲ ಚಿಂತನೆಧಾರೆಯು ಇವುಗಳನ್ನು ನಿರ್ಲಕ್ಷಿಸಿ ತೀವ್ರತರವಾದ ಟೀಕೆಗಳಿಗೆ ಒಳಪಟ್ಟಿತು. "ನೊಬಲ್ ಪ್ರಶಸ್ತಿ ವಿಜೇತರಾದ ಲೇವಿಸ್ ಅವರು ಅಭಿವೃದ್ಧಿಯ ಮುಖ್ಯ ಉದ್ದೇಶ ಮಾನವನ ಆಯ್ಕೆಗಳನ್ನು ವರ್ಧಿಸುವುದೇ ಆಗಿದೆ ಎಂದು ತಿಳಿಸಿದ್ದರು. ಇದನ್ನೇ ೯೦ರ ದಶಕದಲ್ಲಿ ಮಾನವ ಅಭಿವೃದ್ಧಿ ವರದಿಗಳು ಪ್ರಚುರ ಪಡಿಸಿವೆ. ಆದರೆ ವ್ಯತ್ಯಾಸವೆಂದರೆ ಆರ್ಥಿಕ ಬೆಳವಣಿಗೆ ಈ ಉದ್ದೇಶವನ್ನು ಪೂರೈಸುತ್ತದೆ ಎಂದು ಅವರು ನಂಬಿದ್ದರು".(ಸ್ಟ್ರೀಟನ್, ೧೯೯೮:೧೦೯)

೧೯೪೫ರ ಅವಧಿಯಲ್ಲಿ ಹಲವಾರು ರಾಷ್ಟ್ರಗಳಲ್ಲಿ ರಾಷ್ಟ್ರೀಯ ಉತ್ಪನ್ನ ಏರಿಕೆಯಾಗಿತ್ತು. ಅದೇ ವೇಳೆಗೆ ಹಲವಾರು ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಬೆಳವಣಿಗೆಯಲ್ಲಿ ವೈವಿಧ್ಯತೆ ಹೆಚ್ಚಾಗಿತ್ತು. ಹೆಚ್ಚಿನ ಕೈಗಾರಿಕಾ ಉತ್ಪಾದನೆ ಮತ್ತು ಆರ್ಥಿಕ ಬೆಳವಣಿಗೆ ಇದ್ದಾಗಿಯೂ, ಹೆಚ್ಚುತ್ತಿರುವ ಕಾರ್ಮಿಕ ಶಕ್ತಿಗೆ ಸಾಕಷ್ಟು ಉದ್ಯೋಗ ಒದಗಿಸಲಾಗಿಲಿಲ್ಲ. ಅಲ್ಲದೇ ಆರ್ಥಿಕ ಬೆಳವಣಿಗೆಯಲ್ಲಿನ ಲಾಭಗಳು ಕಡಿಮೆ ವರಮಾನದ ಗುಂಪುಗಳಿಗೆ ಹೆಚ್ಚಾಗಿ ದೊರೆಯಲಿಲ್ಲ. ೧೯೭೦ರ ದಶಕದಲ್ಲಿನ ಹೆಚ್ಚಾದ ವರಮಾನದ ಏರಿಕೆಯು ವರಮಾನದ ಹಂಚಿಕೆಯನ್ನು ನಿರ್ಲಕ್ಷಿಸಿದೆ, ಉದ್ಯೋಗ, ನ್ಯಾಯಬದ್ಧತೆಗಳನ್ನು

ನಿರ್ಲಕ್ಷಿಸಿದೆ ಎಂಬ ಕಾರಣಕ್ಕಾಗಿ ಕೆಲವರು ರಾಷ್ಟ್ರೀಯ ಉತ್ಪನ್ನವನ್ನು ಅಭಿವೃದ್ಧಿಯ ಮಾಪನವಾಗಿ ಕೈಬಿಡಲು ಬಯಸಿದ್ದರು.

ರಾಷ್ಟ್ರೀಯ ವರಮಾನ, ಕೈಗಾರಿಕಾ ಉತ್ಪಾದನೆ ಇವುಗಳ ಮೂಲಕ ಅಭಿವೃದ್ಧಿಯ ಮಾಪನ ಮಾಡಿದ ನಂತರ ಮೋರಿಸ್ ಅವರು ಅಭಿವೃದ್ಧಿಪಡಿಸಿದ ಭೌತಿಕ ಗುಣಾತ್ಮಕ ಜೀವನ ಸೂಚ್ಯಂಕದ ಮೂಲಕ ಅಭಿವೃದ್ಧಿಯ ಮಾಪನ ಪ್ರಾರಂಭಗೊಂಡಿತು. ಈ ಸೂಚ್ಯಂಕವು ಜೀವನ ಆಯುರ್ಮಾನ, ಶಿಶುಮರಣ ಪ್ರಮಾಣ ಮತ್ತು ಸಾಕ್ಷರತೆಯನ್ನು ಒಳಗೊಂಡ ಒಂದು ಸಂಯುಕ್ತ ಸೂಚ್ಯಂಕ. ಈ ರೀತಿಯ ಅಭಿವೃದ್ಧಿಯ ಮಾಪನವು ಅಭಿವೃದ್ಧಿಯನ್ನು ಅರ್ಥೈಸುವ ಒಂದು ಉತ್ತಮ ಮಾಪನವಾಗಿದ್ದರೂ. ಅದರಲ್ಲಿ ವರಮಾನವನ್ನು ನಿರ್ಲಕ್ಷ ಮಾಡಿದ್ದರಿಂದ, ಅದು ಅಭಿವೃದ್ಧಿಯನ್ನು ಸೂಚಿಸುವ ಪ್ರಬಲ ಮಾಪನವಾಗಿ ಹೊರಸೂಸಲಿಲ್ಲ. ತರುವಾಯದ ಅವಧಿಯಲ್ಲಿ ಗ್ರಿಫನ್ ಅವರು ರೂಪಿಸಿದ ಮೂಲ ಅಗತ್ಯ ವಿಶ್ಲೇಷಣೆ(Bsic needs approach) ಅಭಿವೃದ್ಧಿಯ ಮಾಪನದ ನಂತರದ ಹೆಜ್ಜೆಯಾಗಿ ಗುರುತಿಸಲ್ಪಟ್ಟಿತು. ಈ ವಿಶ್ಲೇಷಣೆಯು ವರಮಾನದ ಹೆಚ್ಚಳದಿಂದ ಮಾತ್ರವೇ ಬಡತನ ಕಡಿಮೆಯಾಗುವುದಿಲ್ಲ ಎಂಬುದನ್ನು ಒತ್ತಿ ಹೇಳುತ್ತದೆ. 'The basic needs approach has also always called for participatory community involvement and self-governing institutions in the design and implemention of projects and programmes. The best short-hand way of describing the basic needs approach is income, public services & participation. The basic needs concept is a reminder that the objective of development is to provide all human beings with the opportunity for a all full life. The basic needs approach recalled the fundamental concern of development, which is human being &their needs. This approach went behond abstractions such as money, income or employment. Basic needs is to move from the abstract to the canrete, from the agreegate to the specific, from goods to people. The basic needs approach has great organising and integrating power intellectually as well as politically. Basic needs comprises more than economic benefits"[6]**(Streeten, Paul 1998, Slifting Faslions in Development Dialogue, Political Economy Journal of India, Vol,7, No.2, pg-109, 123)**

ಮೂಲ ಅಗತ್ಯ ವಿಶ್ಲೇಷಣೆಯು ಈ ಹಿಂದಿನ ಅಭಿವೃದ್ಧಿ ಪರಿಕಲ್ಪನೆಗಳಿಗಿಂತ ಭಿನ್ನವಾಗಿ ಅಭಿವೃದ್ಧಿಯನ್ನು ಅರ್ಥೈಸಿತು. ಇದು ಜನತೆಗೆ ಬೇಕಾಗುವ ಮೂಲ ಅವಶ್ಯಕತೆಗಳಿಗೆ ಹೆಚ್ಚಿನ ಮಹತ್ವವನ್ನು ನೀಡಿತು. ಇದುವರೆಗೂ ವಸ್ತುಗಳ ಉತ್ಪಾದನೆ, ವರಮಾನಗಳಷ್ಟಕ್ಕೆ ಮಾತ್ರ ಸೀಮಿತವಾಗಿದ್ದ ಅಭಿವೃದ್ಧಿ ವ್ಯಾಖ್ಯಾನವು ವಿಸ್ತೃತಗೊಂಡು ಜನತೆಗಾಗಿ ಅಭಿವೃದ್ಧಿ ಎಂಬ ತಥ್ಯವನ್ನು ಈ ವಿಶ್ಲೇಷಣೆ ನೀಡಿತು. ಆರ್ಥಿಕೇತರ ಅಂಶಗಳು ಸಹ ಈ ವಿಶ್ಲೇಷಣೆಯಲ್ಲಿ ಜೀವಂತಿಕೆಯನ್ನು ಪಡೆದವು. ಇಷ್ಟೆಲ್ಲಾ ಒಳಿತುಗಳನ್ನು ಒಳಗೊಂಡಿದ್ದರೂ, ಈ ವಿಶ್ಲೇಷಣೆ ಕೆಲವು ಮೂಲಭೂತ

ಟೀಕೆಗಳಿಗೆ ಒಳಗಾಯಿತು. ಇದು ಸಮಾಜದ ಎಲ್ಲಾ ವರ್ಗದ ಜನತೆಯನ್ನು ತನ್ನ ದೃಷ್ಟಿಯಲ್ಲಿ ಇಟ್ಟುಕೊಳ್ಳಲಿಲ್ಲ ಎನ್ನಬಹುದು. ಇದು ಜನತೆಗೆ ಮೂಲಭೂತ ಸೌಕರ್ಯ ನೀಡಬೇಕೆಂದು ತಿಳಿಸುತ್ತದೆ. ಹೊರತಾಗಿ, ಒದಗಿಸಿದ ಸೌಕರ್ಯಗಳನ್ನು ತನ್ನದಾಗಿಸಿಕೊಳ್ಳಲು ಬೇಕಾದ ಧಾರಣಶಕ್ತಿ ಕುರಿತಂತೆ ಇದು ಏನನ್ನು ಹೇಳಲಿಲ್ಲ. ಸೌಕರ್ಯಗಳನ್ನು ಒದಗಿಸುವುದಕ್ಕಿಂತ, ಜನತೆ ಅದನ್ನು ಪಡೆದುಕೊಳ್ಳುವುದು ಮುಖ್ಯವಾಗಿರುತ್ತದೆ. ಈ ವಿಶ್ಲೇಷಣೆಯು ಈಗಿನ ಜನತೆಯನ್ನು ಮಾತ್ರ ದೃಷ್ಟಿಯಲ್ಲಿಟ್ಟುಕೊಂಡು, ಭಾವಿ ಜನಾಂಗದ ಕುರಿತು ಇದು ಚಕಾರವೆತ್ತದೆ ಇರುವುದನ್ನು ಕಾಣಬಹುದು.

೧೯೭೦ ಮತ್ತು ೮೦ರ ದಶಕಗಳಲ್ಲಿ ಜಗತ್ತಿನ ಹಲವಾರು ರಾಷ್ಟ್ರಗಳಲ್ಲಿ ರಾಷ್ಟ್ರೀಯ ಉತ್ಪನ್ನ ಹೆಚ್ಚಾಗಿದ್ದರೂ, ಹೆಚ್ಚಾದ ಉತ್ಪನ್ನದಿಂದ ಜನತೆಯ ದುಸ್ಥಿತಿ ತೀವ್ರತರದಲ್ಲಿ ಕಡಿಮೆಯಾಗಿದ್ದಿಲ್ಲ. ಈ ನಿಟ್ಟಿನಲ್ಲಿ ಹೆಚ್ಚಾದ ವರಮಾನ ತನ್ನಿಂದ ತಾನಾಗಿಯೇ ಸಮಾಜದ ಜನತೆಗೆ ದೊರೆಗೊಳ್ಳಲಾರದು ಎಂಬುದು ಮನವರಿಕೆಯಾಗಲಾರಂಭಿಸಿತು. ಜನತೆಗಾಗಿ, ಜನತೆಗೋಸ್ಕರ, ಜನರಿಂದ ಹಂಬಲಿಸುವ ಅಭಿವೃದ್ಧಿ ಮಾದರಿಗಳ ಬೆಳವಣಿಗೆ ಕಡೆಗೆ ಹಾಗೂ Trickle downಗೆ ಬದಲಾಗಿ Bottom up ಮಾದರಿಗಳ ಕಡೆಗೆ ಚಿಂತಕರು ಗಮನ ಹರಿಸಲಾರಂಭಿಸಿದರು. ಅಲ್ಲದೇ ಹಿಂದಿನ ಅಭಿವೃದ್ಧಿ ಚಿಂತನೆಗಳು ಲಿಂಗನಿರಪೇಕ್ಷ, ವರ್ಗ ನಿರಪೇಕ್ಷಗಳಿಂದ ಕೂಡಿದ್ದರಿಂದ, ಲಿಂಗ ಸಾಪೇಕ್ಷ, ವರ್ಗ ಸಾಪೇಕ್ಷ ಕುರಿತಾದ ವಿಚಾರ ಪ್ರಣಾಳಿಕೆಗಳ ಕಡೆಗೂ ಸಹ ಚಿಂತನೆಗಳು ಪ್ರಾರಂಭಗೊಂಡವು. ಹೀಗಾಗಿ ೧೯೮೦ರ ದಶಕದಲ್ಲಿ ಮಹಿಳೆಯರು, ಮಕ್ಕಳು, ಭೌತಿಕ ವಾತಾವರಣ ಮಾನವ ಹಕ್ಕುಗಳು, ರಾಜಕೀಯ ಸ್ವಾತಂತ್ರ್ಯ, ಸಶಕ್ತಿಕರಣ ಮುಂತಾದವುಗಳು ಅಭಿವೃದ್ಧಿಯ ವ್ಯಾಖ್ಯಾನಗಳಲ್ಲಿ ಮೂರ್ತಿಕರಿಸಿದವು. ಕಳೆದೆರಡು ದಶಕಗಳಲ್ಲಿ ಅಭಿವೃದ್ಧಿಯ ಉದ್ದೇಶ ಕುರಿತಂತೆ ನಡೆಯುವ ಚರ್ಚೆಗಳು ಹೊಸ ರೂಪ ಪಡೆಯುತ್ತಿವೆ. ಅಭಿವೃದ್ಧಿಯ ವ್ಯಾಖ್ಯಾನಗಳು ಕೇವಲ ವರಮಾನ ಮತ್ತು ವರಮಾನ ಹಂಚಿಕೆಗೆ ಮಾತ್ರ ಇಂದು ಸೀಮಿತವಾಗಿಲ್ಲ. ಪ್ರಸ್ತುತ ಆರೋಗ್ಯ, ಜೀವನ ಆಯುರ್ಮಾನ, ಶಿಕ್ಷಣ, ಲಿಂಗಸಂಬಂಧಿ ಆಯಾಮಗಳು, ಸರ್ಕಾರ ನೀತಿಗಳ ಅಧ್ಯಯನಗಳು ಅಭಿವೃದ್ಧಿಯ ಚಿಂತನೆಗಳಲ್ಲಿ ಸೇರಲ್ಪಡುತ್ತಿವೆ.

೧೯೯೦ರ ದಶಕದಲ್ಲಿ ಮಾನವ ಅಭಿವೃದ್ಧಿ ವಿಚಾರ ಪ್ರಣಾಳಿಕೆಯ ಅಭಿವೃದ್ಧಿ ಸಿದ್ಧಾಂತಗಳಲ್ಲಿ ಹೊಸ ವಿಚಾರ ಪ್ರಣಾಳಿಕೆಯೂ ಹೊರಸೂಸಿತು. ಮಾನವ ಅಭಿವೃದ್ಧಿ ಎಂಬ ವಿಚಾರ ಪ್ರಣಾಳಿಕೆಯನ್ನು ರೂಪಿಸಿದವರು ಅಮರ್ತ್ಯಸೇನ್ ಅವರು ಮತ್ತು ಮೆಹಬೂಬ್-ಉಲ್-ಹಕ್ ಅವರು. ಯುಎನ್‌ಡಿಪಿಯು ೧೯೯೦ರಿಂದ ವಿಶ್ವದ ೧೭೪ ದೇಶಗಳಿಗೆ ಸಂಬಂಧಿಸಿದಂತೆ ಮಾನವ ಅಭಿವೃದ್ಧಿ ವರದಿಗಳನ್ನು ಪ್ರಕಟಿಸುತ್ತಾ ಬಂದಿದೆ. ವರಮಾನದ ಹೆಚ್ಚಳವೇ ಅಭಿವೃದ್ಧಿಯಲ್ಲ, ಮಾನವ ಅಭಿವೃದ್ಧಿ ಎಂದರೆ ದೀರ್ಘವಾದ ಆಯುರ್ಮಾನ, ಆರೋಗ್ಯವಂತ ಜೀವನ, ದೃಢಕಾಯರಾಗಿರುವುದು ಮತ್ತು ತಮ್ಮ ಆಯ್ಕೆಗಳನ್ನು ನಿರ್ಧರಿಸುವಲ್ಲಿ ಸ್ವತಂತ್ರರಾಗಿರುವುದು. ಈ ಬಗೆಯ ಅಭಿವೃದ್ಧಿಯ ಹೃದಯ ಭಾಗಗಳೆಂದರೆ, ಪ್ರಾಥಮಿಕ ಶಿಕ್ಷಣ ಮತ್ತು ಪ್ರಾಥಮಿಕ ಆರೋಗ್ಯಗಳಾಗಿವೆ. ಈ ಹಿಂದಿನ

ಅಭಿವೃದ್ಧಿ ಸಿದ್ಧಾಂತಗಳು ಲಿಂಗ ತಟಸ್ಥ, ಮೌಲ್ಯನಿರಪೇಕ್ಷ, ವರ್ಗ ತಟಸ್ಥತೆಯಿಂದ ಕೂಡಿದ್ದರೆ. ಈ ವಿಚಾರ ಪ್ರಣಾಳಿಕೆಯು ಲಿಂಗಸಾಪೇಕ್ಷ, ವರ್ಗ ಸಾಪೇಕ್ಷಗಳಿಂದ ಕೂಡಿದೆ. ಇಲ್ಲಿಯವರೆಗೂ ಮರೆಮಾಚಿದ್ದ ಮಹಿಳೆಯರು ಮಕ್ಕಳು, ಆರೋಗ್ಯದಂಥ ವಿಷಯಗಳು ಈ ವಿಚಾರ ಪ್ರಣಾಳಿಕೆಯಲ್ಲಿ ಕೇಂದ್ರ ಸ್ಥಾನದಲ್ಲಿವೆ. ವರಮಾನಕ್ಕೆ ಮಾತ್ರ ಸೀಮಿತವಾಗಿದ್ದ ವಿಚಾರ ಪ್ರಣಾಳಿಕೆಗಳನ್ನು ಮಾವನ ಕೇಂದ್ರಿತ ವಿಚಾರ ಪ್ರಣಾಳಿಕೆಗೆ ಮಾನವ ಅಭಿವೃದ್ಧಿ ವಿಚಾರ ಪ್ರಣಾಳಿಕೆಯು ಸ್ಥಿತ್ಯಂತರಗೊಳಿಸಿದೆ. ಆರ್ಥಿಕ ಅಂಶಗಳೊಂದಿಗೆ ಆರ್ಥಿಕೇತರ ಅಂಶಗಳನ್ನು ಮೇಳೈಸಿಕೊಂಡಿರುವುದು ಇದರ ವೈಶಿಷ್ಟ್ಯವಾಗಿದೆ. "ಮಾನವ ಅಭಿವೃದ್ಧಿ ವಿಚಾರ ಪ್ರಣಾಳಿಕೆಯು ಅಭಿವೃದ್ಧಿಯನ್ನು ಮಾನವ ಧಾರಣಶಕ್ತಿಗಳ ಮೂಲಕ ಅರ್ಥೈಸುತ್ತದೆ. ಇದು ಜನತೆ ಯಾವ ರೀತಿ ಜೀವಿಸುತ್ತಿದ್ದಾರೆ? ಅವರು ದೀರ್ಘಕಾಲ ಬಾಳುತ್ತಿದ್ದಾರೆಯೇ, ಜನತೆ ಅನಾರೋಗ್ಯವನ್ನು ತಡೆಯುವ ನಿರೋಧಕ ಶಕ್ತಿಯನ್ನು ಪಡೆದಿದ್ದಾರೆಯೇ? ಶಿಶು ಮತ್ತು ಮಕ್ಕಳು ಮರಣ ಹೊಂದುವುದನ್ನು ತಪ್ಪಿಸುತ್ತಿದ್ದಾರೆಯೇ? ಜನರು ಸಾಕ್ಷರರಾಗಿದ್ದರೆಯೇ? ತಮ್ಮ ಸಮುದಾಯದ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಿದ್ದಾರೆಯೇ? ಸ್ವತಂತ್ರವಾಗಿ ಸಂತೋಷವಾಗಿದ್ದಾರೆಯೇ? ಎಂಬುವುದನ್ನು ತಿಳಿಸುತ್ತದೆ"[೬](ಆನಂದ, ೧೯೯೪;೭೬). ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಜನತೆ, ಜನತೆಯ ಆಯ್ಕೆಗಳು, ಜನತೆಯ ಆಶೋತ್ತರಗಳು ಮುಖ್ಯವಾಗಿರಬೇಕೆಂಬುದನ್ನು ಇದು ಪ್ರತಿಪಾದಿಸುತ್ತದೆ.

ಮೊದಲ ಮಾನವ ಅಭಿವೃದ್ಧಿ ವರದಿಯು "ಮಾನವನ ಆಯ್ಕೆಗಳನ್ನು ವರ್ಧಿಸುವುದೇ ಅಭಿವೃದ್ಧಿ" ಎಂದು ವ್ಯಾಖ್ಯಾನಿಸಿದೆ. ಮೊದಲ ಮಾನವ ಅಭಿವೃದ್ಧಿ ವರದಿಯ ಮೊದಲ ಸಾಲುಗಳು ಈ ರೀತಿಯಿವೆ. "ಜನತೆಯೇ ದೇಶದ ನಿಜವಾದ ಸಂಪತ್ತು. ಜನತೆಯು ದೃಢಕಾಯರಾಗಿ, ಆರೋಗ್ಯದಿಂದ ಸಂತೋಷವಾಗಿ ಜೀವನ ನಡೆಸಲು ಬೇಕಾಗಿರುವ ವಾತಾವರಣವನ್ನು ನಿರ್ಮಿಸುವುದೇ ಅಭಿವೃದ್ಧಿಯ ಮುಖ್ಯ ಉದ್ದೇಶ. ಇಂಥ ಸರಳ ಮತ್ತು ಬಲಯುತವಾದ ಸತ್ಯವನ್ನು ಭೌತಿಕ ಮತ್ತು ಹಣಕಾಸಿನ ಸಂಪತ್ತಿನ ಚಿಂತನೆಗಳಲ್ಲಿ ಮರೆಯಲಾಗಿತ್ತು"(ಹೆಚ್.ಡಿ.ಆರ್, ೧೯೯೦;೧) ಜನತೆಯ ಆಯ್ಕೆಗಳನ್ನು ವಿಸ್ತರಿಸುವುದೇ ಮಾನವ ಅಭಿವೃದ್ಧಿ, ಇದು ಕೇವಲ ಬಡಜನತೆ ಬಡರಾಷ್ಟ್ರಗಳಿಗೆ ಅಷ್ಟೇ ಅಲ್ಲದೇ ಎಲ್ಲಿಯೂ ಅನ್ವಯಿಸುತ್ತದೆ"[೮](ಹಕ್, ೧೯೯೬) "ಮಾನವ ಅಭಿವೃದ್ಧಿಯು ಆರ್ಥಿಕ ಬೆಳವಣಿಗೆಯನ್ನು ಉದ್ದೀಪನಗೊಳಿಸುವುದರ ಜೊತೆಗೆ, ಅದರ ಫಲಿತಗಳನ್ನು ಸಮಾನವಾಗಿ ಹಂಚುತ್ತದೆ. ಇದು ಪರಿಸರವನ್ನು ವಿನಾಶಗೊಳಿಸದೇ ಅದನ್ನು ವಿಕಸಿತಗೊಳಿಸುತ್ತದೆ; ಜನತೆಯನ್ನು ಅಂಚಿಗೆ ನೂಕದೇ, ಅವರನ್ನು ಸಶಕ್ತಗೊಳಿಸುತ್ತದೆ; ಮಾನವ ಅಭಿವೃದ್ಧಿ ಬಡ ಜನತೆಗೆ, ಅವರ ಆಯ್ಕೆಗಳಿಗೆ, ಅವರ ಅವಕಾಶಗಳಿಗೆ ಆದ್ಯತೆಯನ್ನು ನೀಡುತ್ತದೆ. ಇದು ಜನಪರ ನಿಸರ್ಗಪರ, ಉದ್ಯೋಗಪರ, ಮಹಿಳಾಪರವಾಗಿದೆ"(ಹೆಚ್.ಡಿಆರ್, ೧೯೯೪). "ಮಾನವನ ಆಯ್ಕೆಗಳನ್ನು ವರ್ಧಿಸುವದೇ ಮಾನವ ಅಭಿವೃದ್ಧಿ, ತಾತ್ವಿಕವಾಗಿ ಮಾನವನ ಆಯ್ಕೆಗಳು ಅಸಂಖ್ಯಾತ ಹಾಗೂ ಅವು ಕಾಲಕಾಲಕ್ಕೆ ಬದಲಾಗುತ್ತಿರುತ್ತವೆ. ಆದರೆ ಮಾನವನ ಸಂಪೂರ್ಣ ಅಭಿವೃದ್ಧಿಗೆ ಮೂರು ಅಂಶಗಳು ಅತ್ಯಾವಶ್ಯಕ ಜನತೆ ದೃಢಕಾಯರಾಗಿ ಬಾಳಲು

[illegible]

ಒಳ್ಳೆಯ ಆರೋಗ್ಯ, ಶಿಕ್ಷಣ, ಸುಧಾರಿತ ಜೀವನ ನಡೆಸಲು ಸಂಪನ್ಮೂಲಗಳು ಮುಖ್ಯವಾಗಿ ಈ ಆಯ್ಕೆ ಅಥವಾ ಅವಕಾಶಗಳು ಜನತೆಗೆ ದೊರೆಯದಿದ್ದರೆ ಇತರ ಅನೇಕ ಅವಕಾಶಗಳು ದೊರೆಯದೇ ಹೋಗುತ್ತವೆ."(**ಹೆಚ್.ಡಿ.ಆರ್, ೧೯೯೦**). ಮಾನವ ಅಭಿವೃದ್ಧಿ ಎರಡು ಬದಿಯನ್ನು ಹೊಂದಿದೆ. ಒಂದೆಡೆ ಅವಕಾಶಗಳನ್ನು ವೃದ್ಧಿಸುವುದು. ಮತ್ತೊಂದೆಡೆ ಜನತೆಯಲ್ಲಿ ಧಾರಣಶಕ್ತಿಯನ್ನು ರೂಪಿಸುವುದು ಆರೋಗ್ಯ ಸುಧಾರಣೆ, ಜನತೆಗೆ ಶಿಕ್ಷಣ ಮತ್ತು ಕೌಶಲ್ಯಗಳನ್ನು ನೀಡುವುದು ಹಾಗೂ ಈ ಧಾರಣಶಕ್ತಿಯನ್ನು ಉಪಯೋಗಿಸಿಕೊಂಡು ತಮ್ಮನ್ನು ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ, ಉತ್ಪಾದಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಂತೆ ಮಾಡುವುದು. ಈ ಹೊಸ ವಿಚಾರ ಪ್ರಣಾಳಿಕೆ ಪ್ರಕಾರ, 'ವರಮಾನ' ಜನತೆಗೆ ಬೇಕಾಗಿರುವ ಹಲವಾರು ಆಯ್ಕೆಗಳಲ್ಲಿ ಒಂದು ಮಾತ್ರ. ಅದು ಮುಖ್ಯವಾದುದು ಸಹ. ಆದರೆ ಅದೇ ಅಂತಿಮವಲ್ಲ. ಆರೋಗ್ಯ, ಶಿಕ್ಷಣ ಮತ್ತು ಸ್ವಾತಂತ್ರ್ಯಗಳು ಮಾನವನಿಗೆ ವರಮಾನದಷ್ಟೆ ಅವಶ್ಯಕವಾಗಿರುವ ಇತರ ಆಯ್ಕೆಗಳಾಗಿವೆ. ಅಭಿವೃದ್ಧಿ ಎಂಬುದು ವರಮಾನ ಮತ್ತು ಸಂಪತ್ತಿಗಿಂತಲೂ ಮಿಗಿಲಾದುದು. ಇದರ ಕೇಂದ್ರ ಬಿಂದು ಜನತೆ.

ಬಹುಮುಖ ವ್ಯಕ್ತಿತ್ವವನ್ನು ಹೊಂದಿದ ಮೆಹಬೂಬ್-ಉಲ್-ಉಕ್‌ರವರು ವಿಶ್ವದ ಉನ್ನತ ಹುದ್ದೆಗಳನ್ನು ಅಲಂಕರಿಸಿದ್ದರು. ಅವರು ಇಂದು ನಮ್ಮೊಂದಿಗೆ ಇಲ್ಲದಿರಬಹುದು. ಆದರೆ ಅವರು ರೂಪಿಸಿದ ವಿಚಾರ ಪ್ರಣಾಳಿಕೆಗಳು ಅವರನ್ನು ಜೀವಂತಗೊಳಿಸಿವೆ. ಹಕ್ ಅಭಿವೃದ್ಧಿ ಅರ್ಥಶಾಸ್ತ್ರಕ್ಕೆ 'ಮಾನವ ಅಭಿವೃದ್ಧಿ', 'ಮಾನವ ದುಸ್ಥಿತಿ'ಗಳ ಪರಿಕಲ್ಪನೆಯನ್ನು ಪರಿಚಯಿಸುವುದರ ಮೂಲಕ ಸ್ಥಿರ ಸ್ಥಾಯಿಯಾಗಿದ್ದಾರೆ. ಮೆಹಬೂಬ್-ಉಲ್-ಉಕ್‌ರವರು ಸೇನ್, ಮೇಘನಂದ್ ದೇಸಾಯಿ, ಸುಧೀರ್ ಆನಂದರೊಡಗೂಡಿ ಸಂಯುಕ್ತ ರಾಷ್ಟ್ರಗಳ ಅಭಿವೃದ್ಧಿ ಕಾರ್ಯಕ್ರಮ(UNDP)ದ ಮೂಲಕ ಹೊರತಂದಿರುವ 'ಮಾನವ ಅಭಿವೃದ್ಧಿ ವರದಿಗಳು' ವಿಶ್ವ ಮನ್ನಣೆಯನ್ನು ಪಡೆದಿವೆ. ಈ ವರದಿಗಳ ಮೂಲಕ ಹಕ್ ಮತ್ತು ಸೇನ್‌ರವರು ಹಿಂದಿನಿಂದಲೂ ನಂಬಲಾಗಿದ್ದ 'ವರಮಾನ ಕೇಂದ್ರಿತ ಅಭಿವೃದ್ಧಿ'ಯನ್ನು "ಮಾನವ ಕೇಂದ್ರಿತ ಅಭಿವೃದ್ಧಿ"ಯನ್ನಾಗಿ ಪರಿವರ್ತಿಸಿದುದು ಈ ಶತಮಾನದ ಬಹುಮುಖ್ಯ ಬೆಳವಣಿಗೆಗಳಲ್ಲಿ ಒಂದೆಂದು ಹೇಳಬಹುದಾಗಿದೆ.

ಕೇವಲ ಅರ್ಥಶಾಸ್ತ್ರಕ್ಕೆ, ಅಲ್ಲಿಯ ಸೂತ್ರಗಳ ಚೌಕಟ್ಟಿಗೆ ಮಾತ್ರ ಸೀಮಿತವಾಗಿದ್ದ, 'ಅಭಿವೃದ್ಧಿ' ಪರಿಕಲ್ಪನೆಯನ್ನು, ಮಾನವ ಅಭಿವೃದ್ಧಿ ವಿಚಾರ ಪ್ರಣಾಳಿಕೆಯು ಸಾಮಾಜಿಕ ನೆಲೆಯಲ್ಲಿ, ಲಿಂಗಸಂಬಂಧಿ ನೆಲೆಯಲ್ಲಿ, ಮಾನವೀಯ ನೆಲೆಯಲ್ಲಿ, ಪರಿಚಯಿಸಿದೆ. ಇಲ್ಲಿಯವರೆಗೆ ಸಾರ್ವತ್ರಿಕತೆ, ಏಕಕಾರಿ ಸ್ವರೂಪ, ಮೌಲ್ಯ ನಿರಪೇಕ್ಷತೆಯಾಗಿದ್ದ ಅಭಿವೃದ್ಧಿ ಮೀಮಾಂಸೆಯನ್ನು, ಮಾನವ ಅಭಿವೃದ್ಧಿಯು ಬಹುಳಕಾರಿ, ಮೌಲ್ಯ ಸಾಪೇಕ್ಷ ಹಿನ್ನೆಲೆಯಲ್ಲಿ 'ಅಭಿವೃದ್ಧಿಯನ್ನು' ವ್ಯಾಖ್ಯಾನಿಸುತ್ತವೆ.

"ಮಾನವ ಅಭಿವೃದ್ಧಿಯ ಚೌಕಟ್ಟು ಸರಕಾರದ ಸಾಧನೆಗಳೇನು ಮತ್ತು ಸೂತ್ರಗಳನ್ನು ವಾಡಿಕೆಯಾಗಿ ಪಟ್ಟಿಮಾಡಿರುವುದಕ್ಕೆ ಹೊರತಾಗಿದೆ. ಸರಕಾರದ ಸಾಧಾರಣಾ ಕಾರ್ಯಾಚರಣೆಯಾಚೆ, ರಾಜ್ಯದ ಅಭಿವೃದ್ಧಿಯನ್ನು ಸಮಗ್ರತಾ ದೃಷ್ಟಿಯಿಂದ ಹೊಸದಾಗಿ ಅವಲೋಕಿಸಿ, ಪ್ರಸ್ತುತ

ಧೋರಣೆಗಳ ಲೋಪದೋಷಗಳನ್ನು ಮತ್ತು ಬಲಗಳನ್ನು ಗುರುತಿಸುವಲ್ಲಿ ಇದು ನೆರವಾಗುತ್ತದೆ. (ಕರ್ನಾಟಕದಲ್ಲಿ ಮಾನವ ಅಭಿವೃದ್ಧಿ, ೧೯೯೯:Viii) ಕ್ಷೇತ್ರಾಧಾರಿತ, ವಲಯಧಾರಿತ ನೀತಿ ನಿರೂಪಣೆಗಳನ್ನು ರೂಪಿಸುವಲ್ಲಿ ಇದು ಹೊಸ ಬೆಳಕನ್ನು ಚೆಲ್ಲುತ್ತದೆ.

ದೇಶದ ಅತ್ಯಮೂಲ್ಯ ಸಂಪನ್ಮೂಲವೆಂದರೆ ಜನತೆ. ಜನತೆಯೇ ಅಭಿವೃದ್ಧಿಯ ಮೂಲ ಮತ್ತು ಕೊನೆ. "ಪುರುಷ, ಮಹಿಳೆ ಮತ್ತು ಮಕ್ಕಳು ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಕೇಂದ್ರಬಿಂದುವಾಗಿಬೇಕು. ಅಭಿವೃದ್ಧಿ ಇವರ ಸುತ್ತಾ ಸುತ್ತಬೇಕೆ ಹೊರತು, ಇವರು ಅಭಿವೃದ್ಧಿಯನ್ನು ಸುತ್ತುವಂತಿರಬಾರದು" (**ಹೆಚ್‌ಡಿಆರ್**, ೧೯೯೧;೧). ಸೇನ್‌ರವರ ಮೂಲ ವಿಚಾರವೆಂದರೆ ಮನುಷ್ಯನಿಗಾಗಿ ಅಭಿವೃದ್ಧಿಯೆ ವಿನಾ ಅಭಿವೃದ್ಧಿಗಾಗಿ ಮನುಷ್ಯನಲ್ಲ. ಅಭಿವೃದ್ಧಿ ಮಾನವನ ಬದುಕಿಗೆ ಸಂಬಂಧಿಸಿದ ಒಂದು ಕ್ರಿಯೆ. ಸೇನ್ ರವರು ವರಮಾನಕ್ಕೆ ಪ್ರತಿಯಾಗಿ, ಶಿಕ್ಷಣ, ಆರೋಗ್ಯ, ಆಯಸ್ಸು, ಆಹಾರ, ಅವಾಸ ಮುಂತಾದ ಅಂತಸ್ಥವಾದಿ ಗುಣಗಳನ್ನು ಮಾನದಂಡವನ್ನಾಗಿ ಬಳಸುತ್ತಾರೆ. ಸೇನ್‌ಅವರು ರೂಪಿಸುವ ಮಾನವ ಅಭಿವೃದ್ಧಿಯು ಅಕ್ಷರ ಆರೋಗ್ಯ-ಆಹಾರ ಕೇಂದ್ರಿತವೂ ಮೌಲ್ಯ ವಿವೇಚನಾಶೀಲವೂ, ಲಿಂಗ ವೈಶಿಷ್ಟ್ಯವೂ ಆದ ವಿಚಾರ ಪ್ರಣಾಳಿಕೆಯಾಗಿದೆ. ಮಾನವನನ್ನು, ಆರ್ಥಿಕ ಉನ್ನತಿಯನ್ನು ಸಾಧಿಸಲು, ವಸ್ತುಗಳನ್ನು ಉತ್ಪಾದಿಸುವ ಉಪಕರಣದ ದೃಷ್ಟಿಯಿಂದ ನೋಡದೇ, ಜನತೆಯೇ ದೇಶದ ಸಂಪತ್ತು, ಜನತೆಯ ಅಭಿವೃದ್ಧಿಯೇ ನೈಜ ಅಭಿವೃದ್ಧಿ ಎಂಬುವುದನ್ನು ಪ್ರಚುರ ಪಡಿಸಿರುವುದು ಮಾನವ ಅಭಿವೃದ್ಧಿ ವಿಚಾರ ಪ್ರಣಾಳಿಕೆಯ ಅತಿಮುಖ್ಯ ಗುಣವೆಂದು ಹೇಳಬೇಕಾಗುತ್ತದೆ.

"ಏಷಿಯಾ ಮತ್ತು ಪೆಸಿಫಿಕ್ ರಾಷ್ಟ್ರಗಳ ಸಂಯುಕ್ತ ಆರ್ಥಿಕ ಮತ್ತು ಸಾಮಾಜಿಕ ಕಮೀಷನ್ (Escap)ನ ಏಪ್ರಿಲ್ ೧೯೮೮ರಲ್ಲಿ ನಡೆದ ಅಧಿವೇಶನದಲ್ಲಿ ಜಕಾರ್ತ ಕ್ರಿಯಾ ಯೋಜನೆಯ ಪ್ರಕಾರ, ಈ ದೇಶಗಳು ಮಾನವ ಸಂಪನ್ಮೂಲ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆಯನ್ನು ನೀಡಲು ಪ್ರಾರಂಭಿಸಿದವು."[೯] (**ಮಾಥೂರ್**, ೧೯೯೨;೨೧). ಆಗಿನಿಂದಲೇ ಮಾನವ ಕೇಂದ್ರಿತ ವಿಷಯಗಳಿಗೆ ಹೆಚ್ಚಿನ ಒಲವು ನೀಡಲು ಪ್ರಾರಂಭವಾಯಿತು. ಮಾನವ ಸಂಪನ್ಮೂಲ ಅಭಿವೃದ್ಧಿಯು, ಆರ್ಥಿಕ ಉನ್ನತಿಯನ್ನು ಮನುಷ್ಯನನ್ನು ಉಪಕರಣವಾದಿ ದೃಷ್ಟಿಯಿಂದ ನೋಡುತ್ತದೆ. ಆದರೆ ಮಾನವ ಕೇಂದ್ರಿತ, ಮಾನವ ಅಭಿವೃದ್ಧಿಯು ಮನುಷ್ಯನನ್ನು ಅಂತಸ್ಥವಾದಿ ದೃಷ್ಟಿಯಿಂದ ನೋಡುತ್ತದೆ.

ಮಾನವ ಸಂಪನ್ಮೂಲ ಅಭಿವೃದ್ಧಿಯಲ್ಲಿ "ಆರ್ಥಿಕತೆ" ಮುಖ್ಯವೆನಿಸಿದರೆ, ಮಾನವ ಅಭಿವೃದ್ಧಿಯಲ್ಲಿ ಸಮಾಜವು ಮುಖ್ಯವೆನಿಸಿದೆ.

ಅಭಿವೃದ್ಧಿಯ ಯೋಜನೆಗಳೆಲ್ಲವೂ ಮಾನವ ಅಭಿವೃದ್ಧಿ ಪರಿಪ್ರೇಕ್ಷೆಯಿಂದ ಕೈಗೊಂಡಾಗ ಮಾತ್ರ ಒಂದು ಪ್ರದೇಶದ ಅಭಿವೃದ್ಧಿ ಸಾಧ್ಯ. ಗ್ರಿಫಿನ್ (೧೯೯೧;೧೧) ಅವರು ಎಚ್ಚರಿಸಿದಂತೆ, "ರಾಷ್ಟ್ರಗಳು ಮಾನವ ಅಭಿವೃದ್ಧಿಯನ್ನು ನಿರ್ಲಕ್ಷಿಸಿದರೆ ಜನತೆಯ ಧಾರಣಶಕ್ತಿಯನ್ನು ವಿಸ್ತರಿಸುವಲ್ಲಿ ವಿಳಂಬ ಮಾಡಿದಂತೆ ವಿಸ್ತೃತ ಅರ್ಥದಲ್ಲಿ ದೀರ್ಘಾವಧಿಯ ಆರ್ಥಿಕ ಬೆಳವಣಿಗೆಯನ್ನು ಸಹ ವಿಳಂಬ ಮಾಡಿದಂತಾಗುತ್ತದೆ".[೧೦]

ಆರ್ಥಿಕ ಅಭಿವೃದ್ಧಿ, ಜನತೆಗೆ ಅವಶ್ಯವಿರುವ ಹಲವಾರು ಆಯ್ಕೆಗಳಲ್ಲಿ ಒಂದು. ಆದರೆ ಅದೇ ಅಂತಿಮವಾದುದಲ್ಲ. ಆರ್ಥಿಕ ಅಭಿವೃದ್ಧಿಯೊಂದಿಗೆ, ಜನತೆ ಆರೋಗ್ಯಯುತವಾಗಿ ಜೀವನ ನಡೆಸುತ್ತಿದ್ದಾರೆಯೇ? ಜನತೆ ಪೌಷ್ಠಿಕರಾಗಿದ್ದಾರೆಯೇ? ಅವರು ಅಕ್ಷರಸ್ಥರಾಗಿದ್ದಾರೆಯೇ ಎಂಬ ಪ್ರಶ್ನೆಗಳು ಸಹ ಮುಖ್ಯವೆನಿಸುತ್ತವೆ. ಈ ಎಲ್ಲಾ ಪ್ರಶ್ನೆಗಳಿಗೆ ಆರ್ಥಿಕ ಅಭಿವೃದ್ಧಿ ಉತ್ತರ ಕೊಡಲಾರದು. ಜನತೆಯ ಹಲವಾರು ಬಯಕೆ, ಆಸೆ, ಆಯ್ಕೆಗಳು ಕೇವಲ ವರಮಾನದಿಂದ ಪೂರೈಸಲು ಸಾಧ್ಯವಿಲ್ಲ. ವರಮಾನದ ಅಭಿವೃದ್ಧಿಯು ಜನತೆಗೆ ಅವಶ್ಯವಿರುವ ಒಂದು ಆಯ್ಕೆಯ ವಿಸ್ತರಣೆಯನ್ನು ತಿಳಿಸಿದರೆ, ಮಾನವ ಅಭಿವೃದ್ಧಿಯು ವರಮಾನದೊಂದಿಗೆ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಅಂಶಗಳನ್ನು ಒಳಗೊಂಡ ಆಯ್ಕೆಗಳನ್ನು ವರ್ಧಿಸುತ್ತದೆ. ಈ ನಿಟ್ಟಿನಲ್ಲಿ ಮಾನವ ಅಭಿವೃದ್ಧಿಯು ಹಿಂದಿನ ಯಾವುದೇ ಸೂಚ್ಯಂಕಗಳಿಗಿಂತಲೂ ವಿಸ್ತೃತವೂ, ವಿಫುಲವೂ ಆಗಿದೆ.

ಮಾನವ ಅಭಿವೃದ್ಧಿ ವಿಚಾರ ಪ್ರಣಾಳಿಕೆ ಕುರಿತಂತೆ, ಚರ್ಚೆ, ವಿಚಾರ ಮಂಥನಗಳು ನಡೆಯುತ್ತಿವೆ. ಹಕ್, ಸೇನ್, ಸ್ಟ್ರೀಟನ್, ಮೇಘ್‌ನಂದ್ ದೇಸಾಯಿ ಮೊದಲಾದವರು ಈ ವಿಚಾರ ಪ್ರಣಾಳಿಕೆಯನ್ನು ಸ್ವಾಗತಿಸಿದರೆ, ಇನ್ನು ಕೆಲವರು "ಸಿಂಗರ್ (೧೯೯೪), ಶ್ರೀನಿವಾಸನ್ (೧೯೯೪) ಮೊದಲಾದವರು ಈ ಮೀಮಾಂಸೆ ಕುರಿತಂತೆ ಅಸಂತೃಪ್ತಿ ವ್ಯಕ್ತಪಡಿಸಿದ್ದಾರೆ. ಸಿಂಗರ್ ಅವರು ಈ ವಿಚಾರ ಪ್ರಣಾಳಿಕೆಯು ರಾಷ್ಟ್ರೀಯ ನಿವ್ವಳ ಉತ್ಪನ್ನಕ್ಕೆ ಪರ್ಯಾಯವಾದ ಮಾದರಿ ಎಂದರೆ, ಶ್ರೀನಿವಾಸನ್ ಅವರು 'ಹಳೆಯ ಬ್ರಾಂದಿಯನ್ನು ಹೊಸ ಸೀಸೆಯಲ್ಲಿ ಹಾಕಲಾಗಿದೆ' ಎಂದು ಈ ವಿಚಾರ ಪ್ರಣಾಳಿಕೆಯನ್ನು ಟೀಕಿಸಿದ್ದಾರೆ. ಅಲ್ಲದೇ ಈ ವಿಚಾರ ಪ್ರಣಾಳಿಕೆಯು ಆರ್ಥಿಕ ಅಭಿವೃದ್ಧಿಗೆ ಹೆಚ್ಚಿನ ಒತ್ತನ್ನು ನೀಡಿಲ್ಲ. ಇದು ಕೇವಲ ಸಾಮಾಜಿಕ ವೆಚ್ಚಗಳಿಗೆ, ಕಲ್ಯಾಣದಂತಹ ವಿಷಯಗಳಿಗೆ ಮನ್ನಣೆ ನೀಡಿ, ಅನುಭೋಗ, ಉಳಿತಾಯ, ಹೂಡಿಕೆ, ವ್ಯಾಪಾರ ಮತ್ತು ತಾಂತ್ರಿಕತೆಯಂಥ ವಿಷಯಗಳನ್ನು ನಿಕೃಷ್ಟೀಕರಿಸಿದೆ ಎಂಬ ಟೀಕೆಗಳಿವೆ"[೧೧] (ಹಕ್, ೧೯೯೬) ಮಾನವ ಅಭಿವೃದ್ಧಿ ಸೂಚ್ಯಂಕವು ರಾಜಕೀಯ ಸ್ವಾತಂತ್ರ್ಯ, ಧಾರ್ಮಿಕ ಮೌಲ್ಯಗಳು, ಪರಿಸರ ಇತರೆ ವಿವಿಧ ಆಯಾಮಗಳನ್ನು ಗಣನೆಗೆ ತೆಗೆದುಕೊಂಡಿಲ್ಲ ಎಂಬ ಟೀಕೆಗಳಿವೆ.

ಈ ಎಲ್ಲಾ ಟೀಕೆಗಳನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಮಾನವ ಅಭಿವೃದ್ಧಿಯ ವಿಚಾರ ಪ್ರಣಾಳಿಕೆಯು ಇತ್ತೀಚೆಗಷ್ಟೇ ಅಭಿವೃದ್ಧಿ ಹೊಂದಿರುವ ಮಾದರಿಯಾಗಿರುವುದರಿಂದ ಅಭಿವೃದ್ಧಿಯ ಎಲ್ಲಾ ಆಯಾಮಗಳನ್ನು ಒಳಗೊಳ್ಳದೇ ಇರಬಹುದು. ಆದರೆ ಹಿಂದಿನ ಎಲ್ಲಾ ಅಭಿವೃದ್ಧಿ ಮಾದರಿಗಿಂತ ಇದು ಸುಧಾರಿತ ಮಾದರಿ ಎಂದೇ ಹೇಳಬಹುದು. ರಾಜಕೀಯ ಅಂಶಗಳನ್ನು ಈ ಮಾದರಿ ಒಳಗೊಂಡಿಲ್ಲ ಎಂಬ ಟೀಕೆಯಲ್ಲಿ ಹುರುಳಿಲ್ಲ. ಏಕೆಂದರೆ, ಈ ಮಾದರಿಯು ಲಿಂಗಸಶಕ್ತೀಕರಣ ಮಾಪನ(GEM) ಎಂಬ ಸೂಚ್ಯಂಕ ಅಭಿವೃದ್ಧಿ ಪಡಿಸಿದ್ದು, ಮುಖ್ಯವಾಗಿ ಮಹಿಳೆಯು ರಾಜಕೀಯ ಚಟುವಟಿಕೆಯಲ್ಲಿ ಎಷ್ಟು ಭಾಗವಹಿಸುತ್ತಿದ್ದಾಳೆ ಎಂಬುವುದರ ಮೂಲಕ ಅಭಿವೃದ್ಧಿಯಲ್ಲಿ ಆಕೆಯ ಪಾಲ್ಗೊಳುವಿಕೆಯನ್ನು ಇದು ತಿಳಿಸುತ್ತದೆ. ಅಲ್ಲದೆ ಹಕ್‌ಅವರು (೧೯೯೬)

[illegible]

[illegible]

ತಮ್ಮ ಗ್ರಂಥದಲ್ಲಿ ರಾಜಕೀಯ ಸ್ವಾತಂತ್ರ್ಯ ಸೂಚ್ಯಂಕವನ್ನು(Political Freedom Index) ಅಭಿವೃದ್ಧಿಪಡಿಸಿದ್ದಾರೆ. ಆದರೆ ಈ ಸೂಚ್ಯಂಕವನ್ನು ಪ್ರಪಂಚದ ಎಲ್ಲಾ ರಾಷ್ಟ್ರಗಳಿಗೆ ತಯಾರಿಸುವಲ್ಲಿ ಹಲವಾರು ತೊಂದರೆಗಳು ಎದುರಾದ್ದರಿಂದ ಇದನ್ನು ಕೈಬಿಡಲಾಗಿದೆ. ಹಕ್ ಅವರ ಗ್ರಂಥದಲ್ಲಿ ಈ ಸೂಚ್ಯಂಕ ಕುರಿತಂತೆ ಅಧ್ಯಯನ ಕ್ರಮ(Methodolgy) ಇದೆ. ಮುಂದಿನ ಸಂಶೋಧನಾ ಅಧ್ಯಯನಗಳು ಈ ನಿಟ್ಟಿನಲ್ಲಿ ಪ್ರಯತ್ನ ಕೈಗೊಳ್ಳಬಹುದಾಗಿದೆ. ಧಾರ್ಮಿಕತೆಯಂಥ ವಿಷಯಗಳನ್ನು ಪ್ರಮಾಣಾತ್ಮಕವಾಗಿ ಅಳೆಯಲು ಅಸಾಧ್ಯವಾದ್ದರಿಂದ ಅದನ್ನು ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಸೇರಿಸಲಾಗಿಲ್ಲ. ಮಾನವ ಅಭಿವೃದ್ಧಿ ಸೂಚ್ಯಂಕವು ಎಲ್ಲಾ ಆಯಾಮಗಳನ್ನು ಗಣನೆಗೆ ತೆಗೆದುಕೊಂಡಿಲ್ಲವೆಂಬುದೆನೋ ನಿಜ. ಈ ಸೂಚ್ಯಂಕವು ಇತ್ತೀಚೆಗಷ್ಟೇ ರೂಪುಗೊಂಡ ಸೂಚ್ಯಂಕವಾಗಿರುವುದರಿಂದ ಇದರಲ್ಲಿ ರಾಜಕೀಯ, ಧಾರ್ಮಿಕ, ಪರಿಸರ ಸಂಬಂಧೀ ಅಂಶಗಳನ್ನು ಸೇರಿಸುವುದರ ಕುರಿತಂತೆ ಇನ್ನು ಪ್ರಯತ್ನಗಳು ನಡೆಯುತ್ತಿವೆ.

ಮಾನವ ಅಭಿವೃದ್ಧಿ ವಿಚಾರ ಪ್ರಣಾಳಿಕೆಯು, ಕೇವಲ ಸಾಮಾಜಿಕ ಅಭಿವೃದ್ಧಿಯನ್ನು ಪರಿಗಣಿಸಿದ್ದು, ಇದು ಬೆಳವಣಿಗೆಗೆ ವಿರೋಧ (Anti-growth)ವಾದುದು ಎಂಬ ಅಭಿಪ್ರಾಯವು ಸತ್ಯಕ್ಕೆ ದೂರವಾದುದೆಂದು ಹೇಳಬಹುದು. ಮಾನವ ಅಭಿವೃದ್ಧಿ ಎಂದರೆ 'ಮಾನವನು ಜೀವಿಸಲು ಇರುವ ಆಯ್ಕೆ ಅವಕಾಶಗಳನ್ನು ಹೆಚ್ಚಿಸುವುದೇ ಆಗಿದೆ. ಅದರಲ್ಲಿ ವರಮಾನ ಒಂದು ಆಯ್ಕೆ ಎಂಬುವುದನ್ನು ತಿಳಿಸುವುದರ ಮೂಲಕ ಈ ಅಭಿವೃದ್ಧಿ ಮಾದರಿಯು ಇಡೀ ಸಮಾಜದ ಒಳಿತನ್ನು ಬಯಸುವ ವಿಚಾರವನ್ನು ಇಟ್ಟುಕೊಂಡಿದೆ ಎಂಬುದು ತಿಳಿಯುತ್ತದೆ. ಮಾನವ ಅಭಿವೃದ್ಧಿಯು ಆರ್ಥಿಕ ಬೆಳವಣಿಗೆಯನ್ನು ತಿರಸ್ಕರಿಸಿಲ್ಲ. ಬದಲಾಗಿ, ಸ್ವಯಂಪೋಷಿತ ಅಭಿವೃದ್ಧಿಗೆ ಆರ್ಥಿಕ ಬೆಳವಣಿಗೆ ಅತ್ಯಾವಶ್ಯಕ ಎಂಬುವುದನ್ನು ತಿಳಿಸಿದೆ. ಈ ವಿಷಯವನ್ನು ಕುರಿತಂತೆ ಎರಡನೆಯ ಮಾನವ ಅಭಿವೃದ್ಧಿ ವರದಿಯು ಈ ರೀತಿ ಹೇಳುತ್ತದೆ. "ಮಾನವ ಅಭಿವೃದ್ಧಿಗೆ ಆರ್ಥಿಕ ಬೆಳವಣಿಗೆಯ ಅವಶ್ಯಕತೆ ಇದೆ. ಇದಿಲ್ಲದೇ ಜನಹಿತದ ಸ್ವಯಂ ಪೋಷಿತ ಸುಧಾರಣೆ ಅಸಾಧ್ಯ. ಮಾನವ ಅಭಿವೃದ್ಧಿಗೆ ಆರ್ಥಿಕ ಬೆಳವಣಿಗೆಯ ಅವಶ್ಯಕತೆ ಇದೆ. ಆದರೆ ಇದಷ್ಟೇ ಸಾಕಾಗುವುದಿಲ್ಲ. ಹೆಚ್ಚಿನ ಬೆಳವಣಿಗೆಯ ಪ್ರಮಾಣಗಳು ತನ್ನಿಂದ ತಾನಾಗಿಯೆ ಹೆಚ್ಚಿನ ಮಾನವ ಅಭಿವೃದ್ಧಿಗೆ ಪರಿವರ್ತಿತವಾಗಲಾರವು. ಆರ್ಥಿಕ ಬೆಳವಣಿಗೆ ಮತ್ತು ಮಾನವ ಅಭಿವೃದ್ಧಿಗಳ ನಡುವಿನ ಕೊಂಡಿಗೆ ನೀತಿ-ನಿರೂಪಕಗಳ ಅವಶ್ಯಕತೆ ಇದೆ. ಮಾನವ ಅಭಿವೃದ್ಧಿಗೆ ಆರ್ಥಿಕ ಬೆಳವಣಿಗೆಯು, ಆರ್ಥಿಕ ಬೆಳವಣಿಗೆಗೆ ಮಾನವ ಅಭಿವೃದ್ಧಿಯು ಅವಶ್ಯಕವು, ಅಗತ್ಯವೂ ಆಗಿದೆ(ಹೆಚ್‌ಡಿಆರ್, ೧೯೯೧; ೧-೨). ಈ ಹೊಸ ಅಭಿವೃದ್ಧಿ ವಿಚಾರ ಪ್ರಣಾಳಿಕೆಯ ಎಲ್ಲ ಟೀಕೆಗಳನ್ನು ನಿಜವೆನ್ನಾಲಿಕ್ಕಾಗುವುದಿಲ್ಲ. "ಉತ್ಪಾದನಾ ಕೇಂದ್ರಿತ ಚಿಂತನೆಗಳು ಮಾನವ ಅಭಿವೃದ್ಧಿಯನ್ನು ಅಪಾರ್ಥ ಮಾಡಿಕೊಂಡು ಈ ವಿಚಾರಪ್ರಣಾಳಿಕೆಯನ್ನು ಟೀಕಿಸುತ್ತಿವೆ."(ಹಕ್, ೧೯೯೬; ೨೨)

"ಆರ್ಥಿಕ ಬೆಳವಣಿಗೆಯನ್ನು ನಾಲ್ಕು ಮಾರ್ಗಗಳ ಮೂಲಕ ಮಾನವ ಅಭಿವೃದ್ಧಿಗೆ ಹೊಂದಾಣಿಕೆ ಮಾಡಿಕೊಳ್ಳಬಹುದಾಗಿದೆ"(ಹಕ್, ೧೯೯೬;೨೨). ಮೊದಲನೆಯದಾಗಿ ಶಿಕ್ಷಣ,

ಆರೋಗ್ಯ, ಜನತೆಯ ಕೌಶಲ್ಯಗಳನ್ನು ಹೆಚ್ಚಿಸುವ ರಂಗಗಳಲ್ಲಿ ಬಂಡವಾಳವನ್ನು ಹೂಡಿ, ಜನತೆ ಬೆಳವಣಿಗೆಯ ಪ್ರಕ್ರಿಯೆಯಲ್ಲಿ ಪಾಲ್ಗೊಂಡು, ಅದರ ಫಲಗಳನ್ನು ಪಡೆಯುವಂತೆ ಮಾಡುವುದು. ಈ ಕ್ರಮವನ್ನು ಅಳವಡಿಸಿಕೊಂಡ ರಾಷ್ಟ್ರಗಳೆಂದರೆ, ಚೀನಾ, ಹಾಂಕಾಂಗ್, ಜಪಾನ, ಮಲೇಸಿಯಾ ಇತ್ಯಾದಿ. ಭಾರತದಲ್ಲಿ ಕೇರಳ ರಾಜ್ಯ ಇದಕ್ಕೆ ತಕ್ಕ ಉದಾಹರಣೆಯಾಗಿದೆ.

ಎರಡನೆಯ ಕ್ರಮವೆಂದರೆ ದೇಶದಲ್ಲಿ ಲಭ್ಯವಿರುವ ವರಮಾನ, ಆಸ್ತಿ, ಸಂಪತ್ತನ್ನು ಸಮಾನವಾಗಿ ಹಂಚುವುದರ ಮೂಲಕ, ವರಮಾನ ಮತ್ತು ಮಾನವ ಅಭಿವೃದ್ಧಿಗಳ ನಡುವೆ ಹೊಂದಾಣಿಕೆ ಮಾಡಬಹುದಾಗಿದೆ. ಬ್ರೆಜಿಲ್, ನೈಜರೀಯಾ, ಪಾಕಿಸ್ತಾನದಂತಹ ರಾಷ್ಟ್ರಗಳಲ್ಲಿ ವರಮಾನ ಹೆಚ್ಚಿದರೂ, ಅಲ್ಲಿ ಅದರ ವಿತರಣೆಯಲ್ಲಿ ಸಮಾನತೆಯಿಲ್ಲದ ಕಾರಣ ವರಮಾನದಲ್ಲಿಯ ಹೆಚ್ಚಳವು ಮಾನವ ಅಭಿವೃದ್ಧಿಯಾಗಿ ಪರಿವರ್ತಿತಗೊಂಡಿಲ್ಲ. ಭಾರತದಲ್ಲಿ ಇದಕ್ಕೆ ತಕ್ಕ ಉದಾಹರಣೆ ಪಂಜಾಬ್ ರಾಜ್ಯವಾದರೆ, ಕರ್ನಾಟಕದಲ್ಲಿ ಬಳ್ಳಾರಿ ಜಿಲ್ಲೆಯನ್ನು ಉದಾಹರಿಸಬಹುದಾಗಿದೆ.

ಒಳ್ಳೆಯ ಆರ್ಥಿಕ ಬೆಳವಣಿಗೆ ಮತ್ತು ಒಳ್ಳೆಯ ವರಮಾನ ವಿತರಣೆಯ ಹೊರತಾಗಿಯೂ ಸರಕಾರವೂ ರಚನಾತ್ಮಕವಾಗಿ, ಸುವ್ಯವಸ್ಥಿತವಾಗಿ ಸಾಮಾಜಿಕ ವೆಚ್ಚಗಳನ್ನು ಮಾಡುವುದರ ಮೂಲಕ ಮಾನವ ಅಭಿವೃದ್ಧಿಯನ್ನು ಸಾಧಿಸಬಹುದಾಗಿದೆ. ಇದು ಮೂರನೆಯ ಮಾರ್ಗ. ಇದಕ್ಕೆ ಉದಾಹರಣೆ ಎಂದರೆ ಕ್ಯೂಬಾ, ಜಮೈಕಾ, ಶ್ರೀಲಂಕಾ ಇತ್ಯಾದಿ ದೇಶಗಳು. ಆದರೆ ಮಾನವ ಅಭಿವೃದ್ಧಿ ಸ್ವಯಂ ಪೋಷಿತವಾಗಬೇಕಾದರೆ ಆರ್ಥಿಕ ಬೆಳವಣಿಗೆ ಅತ್ಯವಶ್ಯಕವಾಗಿ ಬೇಕಾಗುತ್ತದೆ. ಮುಖ್ಯವಾಗಿ ಮಹಿಳೆಯನ್ನು ಒಳಗೊಂಡು ಜನತೆಯನ್ನು ಸಶಕ್ತೀಕರಣಗೊಳಿಸುವುದರ ಮೂಲಕ ವರಮಾನ ಮತ್ತು ಮಾನವ ಅಭಿವೃದ್ಧಿಗಳ ನಡುವೆ ಹೊಂದಾಣಿಕೆ ಸಾಧಿಸಬಹುದಾಗಿದೆ. ಇದು ನಾಲ್ಕನೆಯ ಮಾರ್ಗವಾಗಿದೆ.

ಸಮಗ್ರ ವಿಚಾರ ಪ್ರಣಾಳಿಕೆಯಾದ ಮಾನವ ಅಭಿವೃದ್ಧಿಯು ಉತ್ಪಾದಕತೆ ಮತ್ತು ಸಮಾನತೆ, ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿ, ಭೌತಿಕ ವಸ್ತುಗಳು ಮತ್ತು ಮಾನವ ಕಲ್ಯಾಣ ಒಳಗೊಂಡಂತೆ ಎಲ್ಲಾ ಅಂಶಗಳನ್ನು ತನ್ನಲ್ಲಿ ಅಡಕ ಮಾಡಿಕೊಂಡಿವೆ. ಆರ್ಥಿಕ ಅಂಶಗಳೊಂದಿಗೆ ಆರ್ಥಿಕೇತರ ಅಂಶಗಳನ್ನು ಸಮ್ಮಿಲಿಸಿಕೊಂಡಿರುವುದು ಈ ಹೊಸ ಅಭಿವೃದ್ಧಿ ಮಾದರಿಯ ಆಕರ್ಷಣೆಯ ವಿಷಯವಾಗಿದೆ. ಆರ್ಥಿಕ ಆಭಿವೃದ್ಧಿಯು ತನ್ನಿಂದ ತಾನಾಗಿಯೇ ಜನತೆಯ ಹಿತಕ್ಕೆ ಪರಿವರ್ತಿತವಾಗಲಾರದು. ಅದನ್ನು ಜನತೆಯ ಜೀವನಕ್ಕೆ ಪರಿವರ್ತಿಸಬೇಕಾದ ಅವಶ್ಯಕತೆ ಇದೆ ಎಂಬುದನ್ನು ಮಾನವ ಅಭಿವೃದ್ಧಿಯು ಸಾದರಪಡಿಸಿದೆ. "ಬಡರಾಷ್ಟ್ರಗಳಲ್ಲಿ ಬಡತನವನ್ನು ಕಡಿಮೆ ಮಾಡಲು ಇಲ್ಲವೇ ನಿವಾರಿಸಲು ಆರ್ಥಿಕ ಅಭಿವೃದ್ಧಿ ಅತ್ಯಾವಶ್ಯಕವಾಗಿದೆ. ವರಮಾನದ ಬೆಳವಣಿಗೆಯಲ್ಲಿಯ ಪರಿಮಾಣಾತ್ಮಕ ಬೆಳವಣಿಗೆಯಷ್ಟೇ, ಅದರ ಗುಣಾತ್ಮಕ ಬೆಳವಣಿಗೆಯು ಸಹ ಮುಖ್ಯವೆನಿಸುತ್ತದೆ. ವರಮಾನದಲ್ಲಿಯ ಏರಿಕೆಯು ಜನತೆಗೆ ದೊರೆಕಬೇಕಾದರೆ ಭೂಸುಧಾರಣೆ, ಪ್ರಗತಿಪರ ತೆರಿಗೆ ಪದ್ಧತಿ, ಸಾಮಾಜಿಕ ಸೇವೆ, ಸ್ವಾತಂತ್ರ್ಯ, ಅವಕಾಶಗಳ ವಿಸ್ತರಣೆ, ಸಾಮಾಜಿಕ ಭದ್ರತಾ ಯೋಜನೆಗಳು ಅಗತ್ಯವಾಗಿರುತ್ತವೆ."(ಹಕ್, ೧೯೯೬;೧೫)

[illegible]

ಸಾಂಪ್ರದಾಯಿಕ ಅಭಿವೃದ್ಧಿ ಸಂಕಥನದಲ್ಲಿ ಪುರುಷಶಾಹಿತ್ವ ಹೆಚ್ಚಾಗಿ ಕಾಣುತ್ತದೆ. ಅಭಿವೃದ್ಧಿಯು ಲಿಂಗ ನಿರಪೇಕ್ಷವಾಗಿದ್ದು, ಅದರ ಫಲಗಳೆಲ್ಲವೂ ಲಿಂಗಭೇದವೆನಿಸದೇ ಎಲ್ಲರಿಗೂ ದೊರೆಯುತ್ತದೆ ಎಂದು ಅದು ಭಾವಿಸುತ್ತದೆ. ಆದರೆ ಶ್ರೇಣೀಕೃತ ಸಮಾಜದಲ್ಲಿ ಅಭಿವೃದ್ಧಿ ಫಲಗಳು ಹೆಚ್ಚಾಗಿ ಪುರುಷರ ಪಾಲಾಗುತ್ತಿವೆ ಎಂಬುವುದನ್ನು ಹಾಗೂ ಕುಟುಂಬದಲ್ಲಿಯ ಅವಕಾಶಗಳಲ್ಲಿ ಸಹ ಲಿಂಗಭೇದ ಇರುವುದನ್ನು ಸೇನ್(೧೯೮೪)ರವರ ಅಧ್ಯಯನಗಳು ಧೃಡಪಡಿಸಿವೆ. ಅನಾದಿ ಕಾಲದಿಂದಲೂ ಮಹಿಳೆಯರನ್ನು ಸಮಾಜವು ನಿರ್ಲಕ್ಷಿಸುತ್ತಾ ಬಂದಿದೆ. ಹಲವಾರು ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಮಹಿಳೆಯರು ಪುರುಷರಿಗಿಂತ ನಿರಕ್ಷರಸ್ಥರು, ನಿರುದ್ಯೋಗಿಗಳು, ಅಧಿಕಾರ ರಹಿತರು ಆಗಿದ್ದಾರೆ. ಆರೋಗ್ಯ ಮತ್ತು ಪೌಷ್ಟಿಕತೆಯಂಥ ವಿಷಯಗಳು ಸಹ ಇದರಿಂದ ಹೊರತಾಗಿಲ್ಲ. ಇಲ್ಲಿಯವರೆಗೂ ಅಧೀನಳೂ, ಅಪ್ರಧಾನಳೂ, ಕ್ರಯ ರಹಿತಳೂ ಆಗಿದ್ದ ಹಾಗೂ ಸಕೃಷ್ಟೀಕರಣಕ್ಕೆ ಒಳಗಾಗಿದ್ದ ಮಹಿಳೆ, ಮಾನವ ಅಭಿವೃದ್ಧಿ ವಿಚಾರ ಪ್ರಣಾಳಿಕೆಯಲ್ಲಿ ಕೇಂದ್ರಬಿಂದುವಿನಲ್ಲಿದ್ದಾಳೆ.. ಮಹಿಳೆಯರು ರಾಜಕೀಯ ಮತ್ತು ಆರ್ಥಿಕ ಬದಲಾವಣೆಯ ಪ್ರಮುಖ ನಿಯೋಗಿಗಳಾಗಿದ್ದಾರೆ. ಮಾನವ ಅಭಿವೃದ್ಧಿ ಸಂಕಥನವು ಲಿಂಗಸಂಬಂಧಿಗಳ ಬಗ್ಗೆ ಸಂವೇದನಾಶೀಲವಾಗಿದೆ. ೧೯೯೫ರ ಮಾನವ ಅಭಿವೃದ್ಧಿ ವರದಿಯು ಅಭಿವೃದ್ಧಿ ಲಿಂಗಸಂವೇದಿಯಾಗಿರದಿದ್ದರೆ, ಅದು ಅಪಾಯಕಾರಿಯಾದುದು ಎಂಬ ಘೋಷಣೆಯನ್ನು ನೀಡಿದೆ. "ಮಾನವ ಅಭಿವೃದ್ಧಿಯು ಲಿಂಗಸಂವೇದಿಯಾಗಿರಬೇಕು. ಎಲ್ಲಾ ಜನತೆಯ ಆಯ್ಕೆಗಳನ್ನು ವಿಸ್ತರಿಸುವುದೇ ಅಭಿವೃದ್ಧಿ ಎಂದಾದರೆ, ಅವಕಾಶಗಳಲ್ಲಿ ಮಹಿಳೆಯರನ್ನು ಹೊರಗಟ್ಟಿದ್ದೆ ಆದರೆ, ಅಭಿವೃದ್ಧಿಯ ಪ್ರಕ್ರಿಯೇ ಡೊಂಕಾಗುತ್ತದೆ."(Speth, 1995;iii). "ಮಹಿಳೆಯರ ಧಾರಣಶಕ್ತಿ ಮತ್ತು ಸಶಕ್ತೀಕರಣದಂಥ ಸಂಗತಿಗಳಲ್ಲಿಯ ಬಂಡವಾಳ ಹೂಡಿಕೆಯ ಕ್ರಿಯೆಯು ಮಹಿಳೆಯರಿಗೆ ಅನುಕೂಲವಾಗುತ್ತದೆಯಲ್ಲದೇ, ಅದು ಆರ್ಥಿಕ ಬೆಳವಣಿಗೆಯೊಂದಿಗೆ ಸರ್ವಾಂಗೀಣ ಅಭಿವೃದ್ಧಿಗೆ ಮಹತ್ವಪೂರ್ಣ ಕೊಡುಗೆಯನ್ನು ನೀಡುತ್ತದೆ"(ಹೆಚ್‌ಡಿಆರ್, ೧೯೯೫;೦೨) ಅಭಿವೃದ್ಧಿಯ ಧ್ಯೇಯವು ಮಹಿಳೆಯರಿಗೆ ನ್ಯಾಯವನ್ನು ದೊರಕಿಸಿಕೊಡಬೇಕೆ ಹೊರತು ದಾನವಾದ ಅನುಕಂಪವನ್ನಲ್ಲ ಮತ್ತು ಮಹಿಳೆಯರು ಬದಲಾವಣೆಗಳನ್ನು ಮೂಡಿಸಬೇಕಾದ ಮತ್ತು ಬದಲಾವಣೆಗಳನ್ನು ಪಡೆಯಬೇಕಾದ ಫಲಾನುಭವಿಗಳೆಂದು ಭಾವಿಸಬೇಕೆಂದು ೧೯೯೫ರ ಮಾನವ ಅಭಿವೃದ್ಧಿಯು ಒತ್ತಿ ಹೇಳಿದೆ. ಕೈರೋದಲ್ಲಿ ಸೆಪ್ಟೆಂಬರ್ ೧೯೯೪ರಲ್ಲಿ ನಡೆದ ಜನಸಂಖ್ಯೆ ಮತ್ತು ಅಭಿವೃದ್ಧಿ ಕುರಿತಾದ ಅಂತರರಾಷ್ಟ್ರೀಯ ಸಮ್ಮೇಳನವೂ ಲಿಂಗಸಮಾನತೆ, ಮಹಿಳೆಯನ್ನು ಸಶಕ್ತಿಗೊಳಿಸುವುದು, ಮಹಿಳೆಯ ಮೇಲಿನ ದೌರ್ಜನ್ಯವನ್ನು ತಡೆಯುವುದು, ತಮ್ಮ ಫಲವಂತಿಕೆಯನ್ನು ತಾವೇ ತಡೆಯುವ ಸಾಮರ್ಥ್ಯವನ್ನು ನೀಡುವುದು ಈ ಮೊದಲಾದ ಅಂಶಗಳನ್ನು ಸಮ್ಮೇಳನ ಜಾರಿಗೊಳಿಸಿತು. ಇವು ಜನಸಂಖ್ಯೆ ಮತ್ತು ಅಭಿವೃದ್ಧಿ ಸಂಬಂಧಿ ಕಾರ್ಯಕ್ರಮಗಳ Cornerstone ಎಂದೇ ಹೇಳಿದೆ. ಮಾನವ ಅಭಿವೃದ್ಧಿಯಲ್ಲಿ ಮಹಿಳೆಯರಿಗೆ, ಪುರುಷರಿಗಿಂತಲೂ ಹೆಚ್ಚಿನ ಒತ್ತನ್ನು ನೀಡಲಾಗಿದೆ. ಜನತೆಯ ಧಾರಣಶಕ್ತಿ ವೃದ್ಧಿಯಾಗಬೇಕಾದರೆ ಮೊದಲು ಮಹಿಳೆಯರ ಧಾರಣಶಕ್ತಿ ವೃದ್ಧಿಯಾಗಬೇಕೆಂಬುದನ್ನು ಮಾನವ ಅಭಿವೃದ್ಧಿಯು ಒತ್ತಿ ಹೇಳಿದೆ.

[illegible]

"ಮಾನವ ಅಭಿವೃದ್ಧಿ ಸಂಕಥನದ ರೂವಾರಿಗಳಾದ ಅಮರ್ತ್ಯಸೇನ್ ಮತ್ತು ಮೆಹಬೂಬ್-ಉಲ್-ಹಕ್ ಅವರುಗಳು ಅಭಿವೃದ್ಧಿಯನ್ನು ವರಮಾನದ ವರ್ಧನೆಯ ನೆಲೆಯಲ್ಲಿ ಪರಿಭಾವಿಸುವುದಕ್ಕೆ ಪ್ರತಿಯಾಗಿ ಬದುಕುವ ಅವಕಾಶಗಳ ಹಾಗೂ ಆ ಅವಕಾಶಗಳಲ್ಲಿ ಆಯ್ಕೆಯ ವ್ಯಾಪ್ತಿ ವರ್ಧನೆಯ ನೆಲೆಯಲ್ಲಿ ನಿರ್ವಚಿಸುತ್ತಾರೆ. 'ಜನರು ಏನಾಗಿದ್ದಾರೆ' ಮತ್ತು 'ಏನು ಮಾಡುತ್ತಿದ್ದಾರೆ' ಎಂಬ ಸಂಗತಿಗಳು ಅಭಿವೃದ್ಧಿಯ ದೃಷ್ಟಿಯಿಂದ ಮುಖ್ಯವಾಗಿದ್ದಾವೆ. ವರಮಾನದ ಪ್ರಮಾಣವೆಷ್ಟು ಮತ್ತು ವರಮಾನದ ಬೆಳವಣಿಗೆ ಎಷ್ಟು ಎಂಬ ಸಂಗತಿಗಳು ಅಭಿವೃದ್ಧಿಯ ದೃಷ್ಟಿಯಿಂದ ಮಹತ್ವವಾಗಿದ್ದರೂ ಸಹ ಅವೇ ಅಭಿವೃದ್ಧಿಯಲ್ಲ ಎಂದು ಮಾನವ ಅಭಿವೃದ್ಧಿ ಸಂಕಥನವು ಪ್ರತಿಪಾದುಸುತ್ತದೆ. ವರಮಾನದ ಪ್ರಮಾಣ ಹಾಗೂ ಅದರ ಬೆಳವಣಿಗೆ ಗತಿ ಇವು ಅಭಿವೃದ್ಧಿಯಲ್ಲಿ ಉಪಕರಣವಾದಿ ಮಹತ್ವ ಹೊಂದಿದ್ದಾವೆ ವಿನಾ ಅಭಿವೃದ್ಧಿಯ ಅಂತಸ್ಥ ಗುಣವಾಗುವುದಿಲ್ಲ. ಸಾಂಪ್ರದಾಯಿಕ ಅಭಿವೃದ್ಧಿ ಸಂಕಥನವು ಅಭಿವೃದ್ಧಿಯ ಲಿಂಗಸ್ವರೂಪದ ಬಗ್ಗೆ ಕುರುಡಾಗಿದ್ದರೇ, ಮಾನವ ಅಭಿವೃದ್ಧಿ ಸಂಕಥನವು ಲಿಂಗಸಂಬಂಧಗಳ ಬಗ್ಗೆ ಸಂವೇದನಾಶೀಲವಾಗಿದೆ(**ಚಂದ್ರಶೇಖರ್ ಟಿ.ಆರ್, ೧೯೯೯**).

ಸಮಾನತೆ, ಸ್ವಯಂಪೋಷಕತೆ(Snstainablity), ಉತ್ಪಾದಕತೆ ಮತ್ತು ಸಶಕ್ತೀಕರಣಗಳು, ಮಾನವ ಅಭಿವೃದ್ಧಿಯ ನಾಲ್ಕು ಬಹುಮುಖ್ಯ ಉಪಾಂಗಗಳಾಗಿವೆ. ಜನತೆಯ ಜೀವನದ ಆಯ್ಕೆ ಅವಕಾಶಗಳನ್ನು ವಿಸ್ತರಿಸುವುದೇ ಅಭಿವೃದ್ಧಿ ಎಂದಾದರೆ, ಜನತೆಯು ಅವಕಾಶಗಳನ್ನು ಸಮಾನ ರೀತಿಯಲ್ಲಿ ಪಡೆದಿರಬೇಕಾಗುತ್ತದೆ. ರಾಜಕೀಯ ಮತ್ತು ಅರ್ಥಿಕ ಅವಕಾಶಗಳು ಜನತೆಗೆ ಸಮಾನವಾಗಿ ದೊರೆಗೊಳ್ಳಬೇಕೆಂದು ಮಾನವ ಅಭಿವೃದ್ಧಿಯು ಪ್ರತಿಪಾದಿಸುತ್ತದೆ. ಸಮಾನತೆಯು ಮಾನವ ಅಭಿವೃದ್ಧಿಯ ಹೃದ್ಯ ಭಾಗವಾಗಿದೆ. ನಾವು ಇಂದು ಪಡೆಯುತ್ತಿರುವ ಅವಕಾಶಗಳು ಮುಂದಿನ ಭಾವಿ ಜನಾಂಗಕ್ಕೂ ಸಹ ದೊರೆಗೊಳ್ಳಬೇಕೆಂಬ 'ಸ್ವಯಂಪೋಷಕತೆ' ಮಾನವ ಅಭಿವೃದ್ಧಿಯ ಮತ್ತೊಂದು ಪ್ರಮುಖ ಅಂಶವಾಗಿದೆ. ಅಭಿವೃದ್ಧಿಯ ಅವಕಾಶಗಳು ಇಂದಿನ ಮತ್ತು ಮುಂದಿನ ಜನಾಂಗಕ್ಕೆ ಅನುಕೂಲವಾಗಿರುವಂತೆ ನಮ್ಮ ಅಭಿವೃದ್ಧಿ ಮಾದರಿಗಳನ್ನು ರೂಪಿಸಬೇಕೆಂಬ ಅಂಶವನ್ನು ಮಾನವ ಅಭಿವೃದ್ಧಿ ವಿಚಾರ ಪ್ರಣಾಳಿಕೆಯು 'ಸ್ವಯಂಪೋಷಕತೆ'ಯ ಮೂಲಕ ಪ್ರತಿಪಾದಿಸಿದೆ. 'ಉತ್ಪಾಕತೆ ಮತ್ತು 'ಸಶಕ್ತೀಕರಣ'ಗಳು, ನವ ವಿಚಾರ ಪ್ರಣಾಳಿಕೆಯ ಮತ್ತೆರಡು ಮುಖ್ಯ ಅಂಶಗಳಾಗಿವೆ. "A Comprehensive concept, empowerment means that people are in a position to exercise choices of their own free will. It implices a political democracy in which people can influence decisions about their lives"(Haq, 1996:20). ಜನತೆ ತಮ್ಮ ಆಯ್ಕೆಗಳನ್ನು ನಿರ್ಧರಿಸುವಲ್ಲಿ, ಸಮರ್ಥರು ಮತ್ತು ಸ್ವತಂತ್ರರು ಆಗಿರಬೇಕು. ಸರಕಾರದ ನೀತಿ-ನಿರೂಪಣೆಗಳು ಜನತೆಯ ಆಶೋತ್ತರಗಳಿಗೆ ಸ್ಪಂದಿಸುವಂತಿರಬೇಕು. ಜನತೆಯು ಅಭಿವೃದ್ಧಿ ಪ್ರಕ್ರಿಯೆಯಲ್ಲಿ, ನೀತಿ-ನಿರೂಪಣೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಜನತೆಯ ಮನೆಬಾಗಿಲಿಗೆ ಆಡಳಿತವನ್ನು ತರುವಂತೆ ಅಧಿಕಾರವು ವಿಕೇಂದ್ರಿಕರಣಗೊಳ್ಳಬೇಕು. ಅಭಿವೃದ್ಧಿಯು ಜನತೆಯಿಂದ ಜನರಿಗಾಗಿ, ಜನರಿಗೋಸ್ಕರವಾಗಿ ಇರಬೇಕು ಎಂಬುದನ್ನು ಸಶಕ್ತೀರಣ ಅಂಶವು ಪ್ರತಿಪಾದಿಸುತ್ತದೆ.

"ಇಂದಿನ ಅಭಿವೃದ್ಧಿ ಮಾದರಿಗಳಲ್ಲಿ, ಮಾನವ ಅಭಿವೃದ್ಧಿ ವಿಚಾರ ಪ್ರಣಾಳಿಕೆ ಸಮಗ್ರವಾದ ಅಭಿವೃದ್ಧಿ ಮಾದರಿಯಾಗಿದೆ. ಆರ್ಥಿಕ ಬೆಳವಣಿಗೆ, ಸಾಮಾಜಿಕ ಹೂಡಿಕೆ, ಜನರ ಸಶಕ್ತೀರಣ, ಮೂಲ ಅಗತ್ಯಗಳು ಮತ್ತು ಸಾಮಾಜಿಕ ಸುರಕ್ಷೆಗಳನ್ನು ಒದಗಿಸುವುದು, ರಾಜಕೀಯ ಮತ್ತು ಸಾಂಸ್ಕೃತಿಕ ಸ್ವಾತಂತ್ರ್ಯ ಮತ್ತು ಜನತೆಯ ಜೀವನ ಮತ್ತು ಇತರೆ ಆಯಾಮಗಳೊಂದಿಗೆ, ಅಭಿವೃದ್ಧಿಯ ಪ್ರತಿಯೊಂದು ವಿಷಯವನ್ನು ಇದು ತನ್ನಲ್ಲಿ ಅಡಕಮಾಡಿಕೊಂಡಿದೆ. ಮಾನವ ಅಭಿವೃದ್ಧಿಯು ಜನತೆ ಜೀವನದ ನೈಜ ಪ್ರತಿಬಿಂಬವನ್ನು ನೀಡುತ್ತದೆ"(ಹಕ್,೧೯೯೬;೨೩).

ಮಾನವ ಸುಭದ್ರತೆಯ ಬಗ್ಗೆ ಆಸಕ್ತಿ ಹೊಂದಿರುವ ಮಾನವ ಅಭಿವೃದ್ಧಿ ವಿಚಾರ ಪ್ರಣಾಳಿಕೆಯು ಅಭಿವೃದ್ಧಿಶೀಲ ದೇಶಗಳು, ತಮ್ಮ ರಕ್ಷಣೆಗಾಗಿ ಮಿಲಿಟರಿಯ ಮೇಲೆ ಮಾಡುವ ವೆಚ್ಚವನ್ನು ತಗ್ಗಿಸಿ, ಆ ಸಂಪನ್ಮೂಲಗಳನ್ನು ಸಾಮಾಜಿಕ ಅಭಿವೃದ್ಧಿಯಂಥ ವಿಷಯಗಳಿಗೆ ವರ್ಗಾಂತರಿಸುವುದರ ಮೂಲಕ ಮಾನವ ಅಭಿವೃದ್ಧಿಯನ್ನು ಸಾಧಿಸಬಹುದು ಎಂಬುವುದನ್ನು ಸಾಬೀತು ಪಡಿಸಿದೆ. ಮುಖ್ಯವಾಗಿ ಅಭಿವೃದ್ಧಿಶೀಲ ದೇಶಗಳು ತಮ್ಮ ಮಿಲಿಟರಿ ವೆಚ್ಚಕ್ಕಾಗಿ ಅನಿಯಂತ್ರಣವಾಗಿ ತಮ್ಮ ಸಂಪನ್ಮೂಲಗಳನ್ನು ಬಳಸುತ್ತಿವೆ. ಈ ದೇಶಗಳು ಭೌಗೋಳಿಕ ರೇಖೆಗಳ ರಕ್ಷಣೆಗಳಿಗಿಂತ, ತಮ್ಮ ದೇಶಗಳಲ್ಲಿಯ ಜನತೆಗೆ ರಕ್ಷಣೆ/ಸುಭದ್ರತೆಯನ್ನು ನೀಡಬೇಕಾಗಿದೆ. ಇಂಥ ಸಂದರ್ಭದಲ್ಲಿ ಮಾನವ ಅಭಿವೃದ್ಧಿ ವಿಚಾರ ಪ್ರಣಾಳಿಕೆಯು ಅಭಿವೃದ್ಧಿಶೀಲ ದೇಶಗಳಿಗೆ ದಾರಿದೀಪವಾಗಬಹುದಾಗಿದೆ. ಈವರೆಗೂ ಅಭಿವೃದ್ಧಿಯ ವಿಚಾರಧಾರೆಯಲ್ಲಿ ಮರೆಮಾಚಿದ್ದ ಮಾನವನ ಸುರಕ್ಷತೆ/ಭದ್ರತೆಯಂಥ ವಿಷಯಗಳಿಗೆ ಹೊಸ ತಿರುವನ್ನು ನೀಡಿರುವ ಮಾನವ ಅಭಿವೃದ್ಧಿ ವಿಚಾರ ಪ್ರಣಾಳಿಕೆಯು ಇತರ ಅಭಿವೃದ್ಧಿ ಮಾದರಿಗಳಿಗಿಂತ ವಿಶಿಷ್ಟವಾಗಿ ತೋರುವುದರಲ್ಲಿ ಆಶ್ಚರ್ಯಪಡಬೇಕಾಗಿಲ್ಲ. ಬಡವರ ಪರ, ಮಹಿಳೆಯರ ಪರ, ನಿಸರ್ಗಪರವಾಗಿರುವ ಈ ಅಭಿವೃದ್ಧಿ ಮೀಮಾಂಸೆಯು ೨೦ನೇ ಶತಮಾನದ ಬಹುಮುಖ್ಯ ಬೆಳವಣಿಗೆಗಳಲ್ಲಿ ಒಂದೆಂದು ಹೇಳಬಹುದಾಗಿದೆ.

೨.೨. ಪ್ರಾದೇಶಿಕ ಅಸಮಾನತೆ ಕುರಿತ ಸಿದ್ಧಾಂತಗಳು

ಪ್ರಾದೇಶಿಕ ಅಸಮಾನತೆಯನ್ನು ಕುರಿತ ಚರಿತ್ರೆಯ ಮೂಲವನ್ನು ೧೯ನೆಯ ಶತಮಾನದ ಭೌಗೋಳಿಕ ಅನ್ವೇಷಣೆಯಲ್ಲಿ ಕಂಡುಕೊಳ್ಳಬಹುದು. ಆದರೆ ಅದನ್ನು ಕುರಿತಂತೆ ಅರಿವು ಮತ್ತು ಸಾರ್ವಜನಿಕ ಆಸಕ್ತಿ ಉಂಟಾದುದು ಕೇವಲ ೧೯೩೦ರ ಮಹಾ ಆರ್ಥಿಕ ದುಸ್ಥಿತಿಯ ಸಂದರ್ಭದಲ್ಲಿ ಎಂಬುದು ಈಗ ಸ್ಪಷ್ಟವಾಗಿದೆ. ಇಂಗ್ಲೆಂಡಿನಲ್ಲಿ ೧೯೩೦ರ ಸಂದರ್ಭದಲ್ಲಿ ನಿರುದ್ಯೋಗ ಮತ್ತು ಆರ್ಥಿಕ ಸಂಕಷ್ಟಗಳು ಉಲ್ಬಣಗೊಂಡ ಕಾಲದಲ್ಲಿ ಹಿಂದುಳಿದ ಪ್ರದೇಶಗಳ ಸಮಸ್ಯೆಗಳ ಬಗ್ಗೆ ಅರಿವು ಮೂಡತೊಡಗಿತು. ಈ ಅರಿವಿನ ಪರಿಣಾಮವಾಗಿ ೧೯೩೬ರಲ್ಲಿ ಇಂಗ್ಲೆಂಡ್ ಸಮಸ್ಯೆಯ ಅಧ್ಯಯನಕ್ಕಾಗಿ ಬಾರ್‌ಲೊ ಆಯೋಗವನ್ನು ನೇಮಿಸಿತು. ಇದೇ ಕಾಲದಲ್ಲಿ ಅಮೆರಿಕೆಯು 'ಟೆನ್ನಿಸ್ ಕಣಿವೆ ಪ್ರಾಧಿಕಾರ'ವನ್ನು ೧೯೪೧ರಲ್ಲಿ ರೂಪಿಸಿತು. ಇವು ಪ್ರದೇಶವಾರು

ಅಂತರಗಳನ್ನು ಕುರಿತಂತೆ ನೇಮಕಗೊಂಡ ಪ್ರಥಮ ಆಯೋಗಗಳಾಗಿವೆ. ಇಷ್ಟಾದರೂ ಸಹ 'ಪ್ರದೇಶ'ವನ್ನು ಅಧ್ಯಯನದ ಒಂದು ಘಟಕವೆಂದು ಆರ್ಥಿಕ ಸಿದ್ಧಾಂತಗಳು ಪರಿಗಣಿಸಲು ಸಿದ್ಧವಿರಲಿಲ್ಲ. ನೀತಿ-ನಿರೂಪಣೆಯಲ್ಲು 'ಪ್ರದೇಶ'ವು ಸೂಕ್ತ ಸ್ಥಾನವನ್ನು ಪಡೆಯಲಿಲ್ಲ. 'ಉತ್ತರ-ದಕ್ಷಿಣ' ಅಸಮತೋಲನವನ್ನು ಕುರಿತಂತೆ ನಿಜವಾದ ಅರಿವು ಎರಡನೆಯ ಮಹಾಯುದ್ಧದ ನಂತರ ಸ್ಫೋಟಗೊಂಡಿತೆಂದು ಹೇಳಬಹುದು. 'ಉತ್ತರ-ದಕ್ಷಿಣ' ಬಿರುಕು ಸಾರ್ವಜನಿಕವಾಗಿ ಆದ್ಯ ಗಮನವನ್ನು ಸೆಳೆಯಲು ಇಟಲಿಯಲ್ಲಿ ಉಂಟಾದ ಪರಿಸ್ಥಿತಿಯು ಕಾರಣವಾಯಿತು. ಎರಡನೆಯ ಮಹಾಯುದ್ಧದ ನಂತರ ಕೈಗಾರಿಕೀಕರಣಗೊಂಡ ಉತ್ತರ ಮತ್ತು ಹಿಂದುಳಿದ ದಕ್ಷಿಣ ಎಂಬ ರೀತಿಯಲ್ಲಿ ಅಂತಕರ ತೀವ್ರಗೊಂಡಿರುವುದು ಇಟಲಿಯ ಗಮನಕ್ಕೆ ಬಂದಿತು. ಅಲ್ಲಿಂದ ಪ್ರಾದೇಶಿಕ ಅಸಮಾನತೆಯನ್ನು ಕುರಿತ ಚರ್ಚೆಯಲ್ಲಿ 'ಉತ್ತರ-ದಕ್ಷಿಣ' ಬಿರುಕು ಎಂಬ ಪದಗುಚ್ಛ ಚಲಾವಣೆಗೆ ಬಂದಿತು.

ಪ್ರದೇಶ-ಪ್ರದೇಶಗಳ ನಡುವೆ ಅಭಿವೃದ್ಧಿಯಲ್ಲಿ ಅಂತರಗಳು ಹೇಗೆ ಉಂಟಾಗುತ್ತವೆ, ಅವು ಏಕೆ ಉಲ್ಬಣಗೊಳ್ಳುತ್ತವೆ ಮತ್ತು ಅವು ಕಡಿಮೆಯಾಗುವುದು ಹೇಗೆ? ಎಂಬ ವಿಷಯಗಳು ಅರ್ಥಶಾಸ್ತ್ರಜ್ಞರ ಆಸಕ್ತಿಯನ್ನು ಸೆಳೆದದ್ದು ಕೇವಲ ಇತ್ತೀಚೆಗೆ ಕೈಗಾರಿಕೀಕರಣ ಪ್ರಕ್ರಿಯೆಯಲ್ಲಿ ಪ್ರಾದೇಶಿಕ ಅಂತರಗಳು ಅನಿವಾರ್ಯ ಎಂಬ ಸಂಗತಿಯನ್ನು ಎಲ್ಲಾ ಸಿದ್ಧಾಂತಗಳೂ ಒಕ್ಕೊರಲಿನಿಂದ ಒಪ್ಪಿಕೊಳ್ಳುತ್ತವೆ. ಆದರೆ ಅದರ ಕಾರಣ ಪ್ರವೃತ್ತಿ ಕಾಲಾವಧಿ ಮತ್ತು ಅವರು ಪರಿಹಾರವಾಗುವ ಬಗೆಯನ್ನು ಕುರಿತಂತೆ ಏಕಾಭಿಪ್ರಾಯವಿಲ್ಲ.

ಈ ಕುರಿತಂತೆ ವಿಲಿಯಮ್ ಅಲೋನಸೊ ಎಂಬುವವರ ಮಾತುಗಳು ತುಂಬಾ ಅರ್ಥಗಭಿತವಾಗಿವೆ. ಅವನ ಪ್ರಕಾರ "ರಾಷ್ಟ್ರದ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಉಂಟಾಗುವ ಪ್ರಾದೇಶಿಕ ಅಸಮಾನತೆ ಬಗ್ಗೆ ಬಹಳಷ್ಟು ತಜ್ಞರು ಬರೆದಿದ್ದಾರೆ. ಕೆಲವರ ಪ್ರಕಾರ ಅಭಿವೃದ್ಧಿಯ ಆರಂಭದ ಹಂತದಲ್ಲಿ ಪ್ರಾದೇಶಿಕ ಅಂತರವು ಉಲ್ಬಣಗೊಂಡು ಅಭಿವೃದ್ಧಿಯು ತೀವ್ರಗೊಂಡ ಸಂದರ್ಭದಲ್ಲಿ ಅವು ಪರಿಹಾರವಾಗುತ್ತವೆ. ಇನ್ನೊಂದು ಗುಂಪಿನ ಪ್ರಕಾರ ಪ್ರಾದೇಶಿಕ ಅಸಮಾನತೆಯೆನ್ನುವುದು ವಿಷ ಚಕ್ರದ ಸ್ವರೂಪವನ್ನು ತೆಗೆದುಕೊಂಡು ಬಿಡುತ್ತದೆ. ಕೇಂದ್ರವು ಹೆಚ್ಚು ಶಕ್ತಿಶಾಲಿಯಾಗುವುದರಿಂದ ಪರಿಧಿಯು ಬಲಹೀನವಾಗುತ್ತದೆ. ಮತ್ತೊಂದು ಗುಂಪಿನ ಪ್ರಕಾರ ಪ್ರಾದೇಶಿಕ ಅಸಮಾನತೆಯ ಪ್ರವೃತ್ತಿಯಲ್ಲಿ ನಿರ್ದಿಷ್ಟವಾದ ಲಕ್ಷಣವೆನ್ನುವುದು ಇರುವುದಿಲ್ಲ. ಅದೊಂದು ರಾಷ್ಟ್ರೀಯ ರಾಜಕೀಯ ಪ್ರಶ್ನೆಯಾಗಿದೆ" (**ಮಿಲಯಂ ಅಲೋನಸೊ, ೧೯೬೮**). ವಿವಿಧ ಗುಂಪಿನ ತಜ್ಞರು ಪ್ರಾದೇಶಿಕ ಅಸಮಾನತೆ ಬಗ್ಗೆ ತಿಳಿದ ವಿವಿಧ ಧೋರಣೆಗಳಿಗೆ ಅನುಗುಣವಾಗಿ ವಿವಿಧ ಪ್ರಮೇಯಗಳು ರೂಪುಗೊಂಡಿವೆ.

ಅಭಿಜಾತ ಅರ್ಥಶಾಸ್ತ್ರಜ್ಞರ ಪ್ರಕಾರ ಉತ್ಪಾದನಾಂಗಗಳು ಸಂಪೂರ್ಣವಾಗಿ ಅನಿರ್ಬಧಿತವಾಗಿ ಸಂಚಲನೆಯಲ್ಲಿದ್ದಾಗ ಹಾಗೂ ಆರ್ಥಿಕತೆಯ ಸ್ವಯಂಚಾಲಿತ ಕಾರ್ಯಾಚರಣೆಯಿಂದಾಗಿ ಪ್ರಾದೇಶಿಕ ಅಸಮಾನತೆಯೆಂಬುದು ಉಂಟಾಗಲು ಸಾಧ್ಯವೇ ಇಲ್ಲ. ಎಸ್.ಸಿ.ಪಾಟ್ನಾಯಕ್

[illegible]

(೧೯೮೧;೧) ಪ್ರಕಾರ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಶ್ರಮ ಶಕ್ತಿಯು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಚಲಿಸಬಹುದು. ಉದ್ಯೋಗದ ಅವಕಾಶಗಳು ಹಾಗೂ ದುಡಿಮೆಯ ಪ್ರಮಾಣ ಎಲ್ಲಿ ಅಧಿಕವಾಗಿರುತ್ತದೋ ಅಂಥ ಪ್ರದೇಶಗಳಿಗೆ ಶ್ರಮಶಕ್ತಿಯು ವಲಸೆ ಹೋಗುವುದು ಸಾಮಾನ್ಯ. ದೀರ್ಘಾವಧಿಯಲ್ಲಿ ಬದಲಾವಣೆಗಳು ಸಮಸ್ಥಿತಿಗೆ ಬಂದು ಸಮತೋಲನ ಸಾಧ್ಯವಾಗುತ್ತದೆ. ಆದ್ದರಿಂದ ಅವರ ಪ್ರಕಾರ ಪ್ರಾದೇಶಿಕ ಅಸಮತೋಲನವೆನ್ನುವುದು ಕೇವಲ ತಾತ್ಪೂರ್ತಿಕ ಹಾಗೂ ತಾತ್ಕಾಲಿಕವಾದ ಒಂದು ಸಮಸ್ಯೆಯಾಗಿದೆ.

ನವ ಅಭಿಜಾತ ಅರ್ಥಶಾಸ್ತ್ರದ ಪ್ರಕಾರ ಆರ್ಥಿಕತೆಯ ವಿಕೃತ ಕಾರ್ಯಾಚರಣೆಯಿಂದಾಗಿ ಪ್ರಾದೇಶಿಕ ಅಸಮತೋಲನ ಉಂಟಾಗುತ್ತವೆ. ಈ ಬಗೆಯ ವಿಕೃತಿಗಳಿಗೆ ಮಾರುಕಟ್ಟೆ ದೋಷಗಳು ಹಾಗೂ ಸಾಂಸ್ಥಿಕ ಬಿಕ್ಕಟ್ಟುಗಳೇ ಕಾರಣಗಳಾಗಿವೆ. ಏಕೆಂದರೆ ಈ ದೋಷಗಳು ಹಾಗೂ ಬಿಕ್ಕಟ್ಟುಗಳು ಸಂಪನ್ಮೂಲಗಳ ಸಂಚಲನೆಗೆ ತೊಡಕನ್ನು ಉಂಟು ಮಾಡುತ್ತವೆ. ಇದರಿಂದ ಅಸಮತೋಲನ ಉಂಟಾಗುತ್ತದೆ. ಮಾರುಕಟ್ಟೆಗಳು ಪರಿಪೂರ್ಣ ಸ್ಥಿತಿ ತಲುಪಿದ ಹಾಗೆ ಹಾಗೂ ಸಾಂಸ್ಥಿಕ ವ್ಯವಸ್ಥೆಯು ಪರಿಪೂರ್ಣಗೊಂಡಾಗ ಪ್ರಾದೇಶಿಕ ಸಮಾನತೆ ಸಾಧ್ಯವಾಗುತ್ತದೆ ಎಂಬುದು ನವಅಭಿಜಾತ ಅರ್ಥಶಾಸ್ತ್ರಜ್ಞರ ಧೋರಣೆಯಾಗಿದೆ. ಕೆಲವು ಲೊಕೇಶನ್ ಸಿದ್ಧಾಂತಗಳ ನಿಲುವೂ ಇದೇ ಆಗಿದೆ. ಪ್ರಾದೇಶಿಕ ಅಸಮಾನತೆಯನ್ನು ಸಂಹರಿಸಿಕೊಳ್ಳುವ ದಿಶೆಯಲ್ಲಿ ಅಭಿಜಾತ ಹಾಗೂ ನವ ಅಭಿಜಾತ ಆರ್ಥಿಕ ಸಿದ್ಧಾಂತಗಳು ಹೆಚ್ಚು ಉಪಯುಕ್ತವಾಗಿಲ್ಲ.

"ಅಭಿವೃದ್ಧಿಯ ಮೂಲದಲ್ಲೇ ಪ್ರಾದೇಶಿಕ ಅಸಮಾನತೆ ಅಂತರ್ಗತಗೊಂಡಿದೆ ಎಂಬ ಬೀಜ ಸಿದ್ಧಾಂತವನ್ನು 'ಬೆಳವಣಿಗೆ ಧ್ರುವ' ಎಂಬ ಸಿದ್ಧಾಂತಕ್ಕೆ ಒಯ್ಯಬಹುದಾಗಿದೆ. ಇದನ್ನು ರೂಪಿಸಿದವರು ಫ್ರಾನ್ಸ್ ದೇಶದ ಫೆರೋಕ್ಸ್ ಮತ್ತು ಬೋರವಿಲ್ಲೆ. ಎಫ್, ಫೆರೋಕ್ಸ್‌ನು ೧೯೫೫ರಲ್ಲಿ 'ಅಭಿವೃದ್ಧಿ ಧ್ರುವಗಳು' ಎಂಬ ಪರಿಭಾವನೆಯನ್ನು ರೂಪಿಸಿದ. ಇದರ ಮೂಲಕ ಪ್ರಾದೇಶಿಕ ಅಸಮಾನತೆಯನ್ನು ಗುರುತಿಸುವುದು ಸುಲಭವಾಯಿತು. ಅವರ ಪ್ರಕಾರ ಅಭಿವೃದ್ಧಿಯೆನ್ನುವುದು ಎಲ್ಲ ಪ್ರದೇಶದಲ್ಲೂ ಚಿಗುರೊಡೆಯುವುದಿಲ್ಲ. ಅದು ಕೆಲವು ನಿರ್ದಿಷ್ಟ ಧ್ರುವಗಳಲ್ಲಿ ಒಡಮೂಡುತ್ತದೆ. ತದನಂತರ ಅದು ಹರಡಲು ತೊಡಗುತ್ತದೆ. ಸ್ವಲ್ಪ ಕಾಲಾನಂತರ ಅದು ಇಡೀ ಆರ್ಥಿಕತೆಯನ್ನು ವ್ಯಾಪಿಸುತ್ತದೆ. ಇದನ್ನು ಮುಂದುವರಿಸಿದ ಬೋದವಿಲ್ಲೆಯು ಧ್ರುವಗಳಲ್ಲಿ ಅಭಿವೃದ್ಧಿಯು ಮಡುಗಟ್ಟಿಕೊಳ್ಳುವ ಬಗೆಯನ್ನು ಕುರಿತಂತೆ ನಿರ್ಣಾಯಕವಾದ ಕೆಲವು ವಿಚಾರಗಳನ್ನು ಬೆಳೆಸಿದ"(**ಶೇಷಾದ್ರಿ ೧೯೯೪;೪೬**). ಅಭಿವೃದ್ಧಿ ಧ್ರುವಗಳು ಹೇಗೆ ರೂಪುಗೊಳ್ಳುತ್ತವೆ ಎಂಬುದರ ಬಗೆಗೆ ಇವರಿಬ್ಬರ ಸಿದ್ಧಾಂತಗಳು ಅತ್ಯಂತ ಸ್ಪಷ್ಟವಾಗಿವೆ. ಪ್ರಾದೇಶಿಕ ಅಸಮಾನತೆ ಎನ್ನುವುದು ಅಭಿವೃದ್ಧಿಯ ಮೂಲದಲ್ಲಿ ಅಂತರ್ಗತಗೊಂಡಿರುತ್ತೆ ಎಂಬ ಸಂಗತಿ ಇವರಿಬ್ಬರ ಸಿದ್ಧಾಂತಗಳಿಂದ ನಿರೂಪಗೊಂಡಿತು. ಆದರೆ ಪ್ರಾದೇಶಿಕ ಅಸಮಾನತೆ ಕುರಿತ ಸಿದ್ಧಾಂತಗಳು ಪರಿಪೂರ್ಣ ರೂಪವನ್ನು ಗುನ್ನಾರು ಮಿರ್ಡಾಲ್, ಹರ್ಷ್‌ಮನ್, ಜೆ.ಆರ್.ಹಿಕ್ಸ್, ವಿಲಿಯಮ್ಸನ್ ಮತ್ತು ಅಲೋನಸೊ ಅವರುಗಳ ಕೃತಿಗಳಲ್ಲಿ ಪಡೆದುಕೊಂಡಿತು.

[illegible]

ಪ್ರಾದೇಶಿಕ ಅಸಮಾನತೆ ಕುರಿತಂತೆ ಅಭಿಜಾತ ಮತ್ತು ನವ ಅಭಿಜಾತ ಅರ್ಥಶಾಸ್ತ್ರಜ್ಞರು ತಳೆದ ಮುಗ್ಧ ನಿಲುವುಗಳನ್ನು ಪ್ರಶ್ನಿಸಿದವರು ಗುನ್ನಾರ್ ಮಿರ್ಡಾಲ್ (೧೯೫೭). ಆರ್ಥಿಕತೆಗಳು ತಮ್ಮಷ್ಟಕ್ಕೆ ತಾವು ಸಮತೋಲನ ಕಂಡುಕೊಳ್ಳುತ್ತವೆ ಎಂಬ ಅಭಿಜಾತ ಮತ್ತು ನವ ಅಭಿಜಾತ ತಜ್ಞರ ನಿಲುವನ್ನು ಮಿರ್ಡಾಲ್ ಪ್ರಶ್ನಿಸುತ್ತಾರೆ. ಪ್ರಾದೇಶಿಕ ಅಸಮಾನತೆಗಳು ತಮ್ಮಷ್ಟಕ್ಕೆ ತಾವೆ ಪರಿಹಾರಗೊಳ್ಳುವುದಿಲ್ಲ ಎಂಬ ಸಂಗತಿಯನ್ನು ಮಿರ್ಡಾಲ್ ಸ್ಪಷ್ಟಪಡಿಸಿದರು. ಮಾರುಕಟ್ಟೆ ಶಕ್ತಿಗಳ ಮೂಲ ಲಕ್ಷಣವೇ ಅಸಮತೋಲನವನ್ನು ಉಲ್ಬಣಗೊಳಿಸುವುದಾಗಿದೆ. ಅವು ಸಮತೋಲನವಾದಿ ಶಕ್ತಿಗಳಲ್ಲ. ಹಿಂದುಳಿದ ಪ್ರದೇಶಗಳ ಹಿತಾಸಕ್ತಿಗಳನ್ನು ಬಲಿಗೊಟ್ಟು ಮುಂದುವರಿದ ಪ್ರದೇಶಗಳು ಸಂಪನ್ಮೂಲಗಳನ್ನೆಲ್ಲಾ ಆಕರ್ಷಿಸಿಕೊಂಡು ವೇಗವಾಗಿ ಬೆಳೆದುಬಿಡುತ್ತವೆ. ಇದರಿಂದಾಗಿ ಆದಾಯದಲ್ಲಿ ಪ್ರಾದೇಶಿಕ ಅಸಮತೋಲನ ಉಂಟಾಗುತ್ತದೆ. ಇವು ಕಾಲಾನಂತರ ಹೆಚ್ಚು ಶಕ್ತಿ ಪಡೆದುಕೊಂಡು ಸಮಸ್ಯೆಯನ್ನು ತೀವ್ರಗೊಳಿಸಿಬಿಡುತ್ತವೆ. ಮಿರ್ಡಾಲ್‌ರ ಕೆಳಕಂಡ ಮಾತುಗಳು ತುಂಬಾ ಮಾರ್ಮಿಕವಾಗಿವೆ. "ಮಾರುಕಟ್ಟೆ ಶಕ್ತಿಗಳನ್ನು ಮುಕ್ತವಾಗಿ ಬಿಟ್ಟುಬಿಟ್ಟರೆ ಕೈಗಾರಿಕೆ, ವಾಣಿಜ್ಯ, ಬ್ಯಾಂಕಿಂಗ್ ವಿಮೆ, ಹಡಗು, ಸಾರಿಗೆ ಮುಂತಾದ ಎಲ್ಲ ವಲಯ ಅಥವಾ ಚಟುವಟಿಕೆಗಳು ಅತ್ಯಂತ ವೇಗವಾಗಿ ಬೆಳೆಯುತ್ತವೆ. ಇದರ ಜೊತೆಯಲ್ಲಿ ವಿಜ್ಞಾನ, ಕಲೆ, ಸಾಹಿತ್ಯ, ಶಿಕ್ಷಣ, ಸಂಸ್ಕೃತಿ ಮುಂತಾದವುಗಳೆಲ್ಲ ಒಂದು ಪ್ರದೇಶದಲ್ಲಿ ಮಡುಗಟ್ಟಿಕೊಂಡು ಬಿಡುತ್ತವೆ. ಇದರಿಂದಾಗಿ ಹಿಂದುಳಿದ ಪ್ರದೇಶಗಳು ಮತ್ತಷ್ಟು ಹಿಂದುಳಿದು ಬಿಡುತ್ತವೆ."[೧೨](ಮಿರ್ಡಾಲ್, ೧೯೫೭;೫೭) ಮಿರ್ಡಾಲ್‌ರ ಪ್ರಕಾರ ಒಂದು ನಿರ್ದಿಷ್ಟ ಪ್ರದೇಶವು ಅಭಿವೃದ್ಧಿ ಹೊಂದಲು ತೊಡಗಿದರೆ ಅದು ಅತ್ಯಂತ ವೇಗದಲ್ಲಿ ಬೆಳೆಯ ತೊಡಗುತ್ತದೆ. ಆದರ ಬೆಳವಣಿಗೆ ಪ್ರಮಾಣವು ಉನ್ನತಗೊಂಡು ಬಿಡುತ್ತದೆ. ಕೆಲವು ಆಂತರಿಕ ಹಾಗೂ ಬಾಹ್ಯ ಆರ್ಥಿಕ ಅನುಕೂಲಗಳು ಬೆಳೆಯುತ್ತಿರುವ ಪ್ರದೇಶಕ್ಕೆ ಪ್ರಾಪ್ತವಾಗುತ್ತವೆ. ಬೆಳೆಯುತ್ತಿರುವ ಪ್ರದೇಶಗಳು ಹೆಚ್ಚು ಬೆಳೆಯುತ್ತವೆ. ಕ್ಷಯಿಸುತ್ತಿರುವ ಪ್ರದೇಶಗಳು ಹೆಚ್ಚು ಕ್ಷಯಿಸುತ್ತವೆ. ಮಿರ್ಡಾಲ್‌ರ ವಿಚಾರಗಳನ್ನು ಮುಂದೆ ಆರ್.ಬಿ.ಹೂಸ್ಸ ಎಂಬುವ ತಜ್ಞನು ಮತ್ತಷ್ಟು ಬೆಳೆಸಿದರು.

ಪ್ರಾದೇಶಿಕ ಅಸಮಾನತೆ ಎಂಬುದು ಹೇಗೆ ವಿಷ ಚಕ್ರದ ರೂಪ ಪಡೆದು ವರಮಾನ ಅಸಮಾನತೆಗೆ ದಾರಿಮಾಡಿ ಕೊಡುತ್ತದೆ ಎಂಬುದನ್ನು ವಿವರಿಸಲು ಮಿರ್ಡಾಲರು ಎರಡು ಮಹತ್ವದ ಪರಿಭಾವನೆಗಳನ್ನು ರೂಪಿಸಿದ. ಅವುಗಳಲ್ಲಿ ಮೊದಲನೆಯದು 'ವಿಸ್ತರಣಾ ಪರಿಣಾಮ' (Spread Effect) ಮತ್ತು ಎರಡನೆಯದು 'ಕ್ಷಯಗುಣ ಪರಿಮಾಣ' (Backwash Effect). ಪ್ರಾದೇಶಿಕ ಅಸಮಾನತೆಯನ್ನು ಉಂಟು ಮಾಡುವ ಹಾಗೂ ತೀವ್ರಗೊಳಿಸುವ ಸಂಗತಿಗಳನ್ನು 'ಕ್ಷಯಗುಣ ಪರಿಣಾಮ'ಗಳೆಂದು ಮತ್ತು ಪ್ರದೇಶವಾರು ಅಂತರಗಳನ್ನು ನಿವಾರಿಸುವ ಗುಣಗಳನ್ನು ಹೊಂದಿರುವ ಸಂಗತಿಗಳನ್ನು 'ವಿಸ್ತರಣಾ ಪರಿಣಾಮ'ಗಳೆಂದು ಮಿರ್ಡಾಲ್ ವಿವರಿಸಿದ್ದಾರೆ. ಪ್ರಾದೇಶಿಕ ಸಮತೂಕ ಅಭಿವೃದ್ಧಿಗೆ ವಿಸ್ತರಣಾ ಪರಿಣಾಮಗಳು ಅನುಕೂಲವಾಗಿದ್ದರೆ ಪ್ರಾದೇಶಿಕ ಅಸಮಾನತೆಯ ಮೂಲದಲ್ಲಿ ಕ್ಷಯಗುಣ ಪರಿಣಾಮಗಳು ಕ್ರಿಯಾಶೀಲವಾಗಿರುತ್ತವೆ. ಮಿರ್ಡಾಲನ

ಪ್ರಕಾರ ಕ್ಷಯಗುಣ ಪರಿಣಾಮಗಳು ವಿಸ್ತರಣಾ ಪರಿಣಾಮಗಳಿಗಿಂತ ಹೆಚ್ಚು ಪ್ರಬಲವಾಗಿರುತ್ತವೆ. ಆದ್ದರಿಂದ ಸರ್ಕಾರದ ಮಧ್ಯೆ ಪ್ರವೇಶವಿಲ್ಲದೆ ಪ್ರಾದೇಶಿಕ ಅಸಮಾನತೆಯನ್ನು ಪರಿಹರಿಸುವುದು ಸಾಧ್ಯವಿಲ್ಲ. ಮಿರ್ಡಾಲನು ಕಂಡು ಹಿಡಿದ ಮತ್ತೊಂದು 'ಸತ್ಯ'ವೂ ನಮ್ಮ ಅಧ್ಯಯನದ ಸಂದರ್ಭದಲ್ಲಿ ಹೆಚ್ಚು ಭಾವಗರ್ಭಿತವಾದುದಾಗಿದೆ. ಅವರ ಪ್ರಕಾರ ಪ್ರಾದೇಶಿಕ ಅಸಮಾನತೆಯು ಬಡ ಹಿಂದುಳಿದ ದೇಶಗಳಲ್ಲಿ ಹೆಚ್ಚು ತೀವ್ರವಾಗಿರುತ್ತವೆ. ಮುಂದುವರಿದ ದೇಶಗಳಲ್ಲಿ ಪ್ರದೇಶವಾರು ಅಂತರಗಳು ಸಂಕುಚಿತಗೊಳ್ಳುತ್ತಿದ್ದರೆ ಹಿಂದುಳಿದ ದೇಶಗಳಲ್ಲಿ ಅವು ಉಲ್ಬಣಗೊಳ್ಳುತ್ತವೆ.

ಪ್ರಾದೇಶಿಕ ಅಭಿವೃದ್ಧಿ ಕುರಿತ ಅಧ್ಯಯನಗಳಲ್ಲಿ ಮತ್ತೊಂದು ದೊಡ್ಡ ಹೆಸರೆಂದರೆ ಎ.ಒ.ಹರ್ಷಮನ್ (೧೯೫೮) ಅವರ ಪ್ರಕಾರ ಅಭಿವೃದ್ಧಿಯು ಕೆಲವು ಪ್ರಶಸ್ತ ಪ್ರದೇಶಗಳಲ್ಲಿ ನೆಲೆಗೊಳ್ಳುತ್ತದೆ. ಆರಂಭದಲ್ಲಿ ಅಭಿವೃದ್ಧಿಯು ಹೀಗೆ ಕೆಲವು ಪ್ರಶಸ್ತ ಪ್ರದೇಶಗಳಲ್ಲಿ ನೆಲೆಗೊಳ್ಳುವುದು ಅತ್ಯಂತ ಸಹಜವಾಗಿದೆ. ಅವರ ಪ್ರಕಾರ ಭೌಗೋಳಿಕವಾಗಿ ಅಭಿವೃದ್ಧಿಯ ಮೂಲ ಲಕ್ಷಣವೆಂದರೆ ಪ್ರಾದೇಶಿಕ ಅಸಮಾನತೆಯಾಗಿದೆ. 'ಅಭಿವೃದ್ಧಿಯ ಬಿಂದುಗಳು' ಅಥವಾ 'ಅಭಿವೃದ್ಧಿಯ ಧ್ರುವಗಳು' ಎಂಬ ಪರಿಭಾವನೆಗಳನ್ನು ಅವರು ಬಳಸುತ್ತಾನೆ. ಪ್ರಾದೇಶಿಕ ಅಸಮಾನತೆಗಳು ಶಾಶ್ವತವಾಗಿ ಉಳಿದುಬಿಡುವುದಿಲ್ಲ. ಉತ್ತರದ ಭಾಗದಲ್ಲಿ ಸಂಚಯನಗೊಳ್ಳುವ ಬಂಡವಾಳ, ತಂತ್ರಜ್ಞಾನ ದಕ್ಷಿಣ ಭಾಗಕ್ಕೆ ಹರಿಯಲೇಬೇಕು ಇದರಿಂದ ಉತ್ತರ–ದಕ್ಷಿಣಗಳ ನಡುವಿನ ಬಿರುಕು ಅಂತ್ಯವಾಗುತ್ತದೆ. ಇದನ್ನು ಅಂತ್ಯಗೊಳಿಸುವ ಶಕ್ತಿಗಳನ್ನು ಹರ್ಷಮನ್ 'ಕೆಳಮುಖಿಯಾಗಿ ಹರಿಯುವ ಪರಿಣಾಮಗಳು' ಎಂದು ಕರೆದಿದ್ದಾನೆ. ಅಭಿವೃದ್ಧಿಯಲ್ಲಿ ಅಂತರಗಳನ್ನು ಉಂಟು ಮಾಡುವ ಶಕ್ತಿಗಳನ್ನು 'ಧೃವೀಕರಣ ಪರಿಣಾಮ'ವೆಂದು ಕರೆದಿದ್ದಾನೆ. ಕೈಗಾರಿಕೆಯಲ್ಲಿ ಅತ್ಯಂತ ಮುಂದುವರಿದ ಉತ್ತರ ಮತ್ತು ಹಿಂದುಳಿದ ದಕ್ಷಿಣಗಳ ನಡುವಿನ ಅಸಮ ಪೈಪೋಟಿ ಹಾಗೂ ಸಂಪನ್ಮೂಲಗಳ ಸಂಚಲನೆ– ಇವು ಪ್ರಾದೇಶಿಕ ಅಸಮಾನತೆಯನ್ನು ಉಲ್ಬಣಗೊಳಿಸುವ ಶಕ್ತಿಗಳು ಯಾವ ಸಂದರ್ಭದಲ್ಲಿ 'ಕೆಳಮುಖಿಯಾಗಿ ಹರಿಯುವ ಪರಿಣಾಮಗಳು' ಧ್ರುವೀಕರಣ ಪರಿಣಾಮಗಳಿಗಿಂತ ಹೆಚ್ಚಿನ ಬಲವನ್ನು ಪಡೆಯುತ್ತವೋ ಅಂತ ಸಂದರ್ಭದಲ್ಲಿ ಪ್ರಾದೇಶಿಕ ಅಸಮಾನತೆಗಳು ಪರಿಸಮಾಪ್ತಿಗೊಳ್ಳುತ್ತವೆ ಎಂಬುದು ಹರ್ಷಮನ್ ಅವರ ಅಭಿಮತವಾಗಿದೆ.

ಜೆ.ಆರ್.ಹಿಕ್ಸ್ (೧೯೫೮) ಪ್ರಕಾರ ಯಾವ ಪ್ರದೇಶದಲ್ಲಿ ಪ್ರಾಕೃತಿಕ ಸಂಪನ್ಮೂಲಗಳು ಅಧಿಕವಾಗಿ ದೊರೆಯುತ್ತವೊ ಅಲ್ಲಿ ಅಭಿವೃದ್ಧಿಯು ಮಡುಗಟ್ಟಿಕೊಳ್ಳುತ್ತದೆ. ಆರ್ಥಿಕ ಚಟುವಟಿಕೆಗಳು ಪ್ರಶಸ್ತ ಸ್ಥಳಗಳಲ್ಲಿ ನೆಲೆಗೊಳ್ಳುವುದರಿಂದ ಪ್ರಾದೇಶಿಕ ಅಸಮಾನತೆಗಳು ತೀವ್ರಗೊಳ್ಳುತ್ತವೆ. ಆದರೆ ಕಾಲಾನಂತರ ಅಭಿವೃದ್ಧಿಯು ಮುಂದುವರಿದ ಪ್ರದೇಶಗಳಿಂದ ಹಿಂದುಳಿದ ಪ್ರದೇಶಗಳಿಗೆ ಹರಿಯ ತೊಡಗುತ್ತದೆ. ಇದರಿಂದ ಪ್ರಾದೇಶಿಕ ಅಸಮಾನತೆ ಪರಿಹಾರಗೊಳ್ಳುತ್ತದೆ. ಹಿಕ್ಸ್ ಬಳಸುವ ಎರಡು ಪರಿಭಾವನೆಗಳೆಂದರೆ 'ಕೇಂದ್ರಾಭಿಮುಖಿ ಶಕ್ತಿಗಳು'(Centrifugal Forces) ಮತ್ತು 'ಕೇಂದ್ರ ವಿಮುಖಿ ಶಕ್ತಿಗಳು'(Centrifugal Forces). ಸರ್ಕಾರದ ಮಧ್ಯ ಪ್ರವೇಶದಿಂದ ಅಭಿವೃದ್ಧಿಯಲ್ಲಿನ ಪ್ರಾದೇಶಿಕ ಅಂತರಗಳನ್ನು ಪರಿಹರಿಸಬಹುದು ಎಂಬುದು ಹಿಕ್ಸ್ ಅವರ ಅಭಿಪ್ರಾಯವಾಗಿದೆ. ಪ್ರದೇಶ ಪ್ರದೇಶಗಳ ನಡುವೆ ಅಭಿವೃದ್ಧಿಗೆ ಸಂಬಂಧಿಸಿದಂತೆ ಅಂತರಗಳು ಒಡಮೂಡುವುದು, ಅವು

ಉಲ್ಬಣಗೊಳ್ಳುವುದು ಮತ್ತು ತದನಂತರ ಅವು ಪರಿಹಾರವಾಗುವ ಪ್ರಕ್ರಿಯೆಯನ್ನು ಕುರಿತಂತೆ ಅತ್ಯಂತ ಸ್ಪಷ್ಟವಾದ ಸೈದ್ಧಾಂತಿಕ ಹಾಗೂ ನಿದರ್ಶನಾತ್ಮಕ ವಿಶ್ಲೇಷಣೆಯನ್ನು ಒದಗಿಸಿದರೆಂದರೆ ಜೆ.ಜಿ.ವಿಲಿಯಂಸನ್ (೧೯೬೫). ಅವರ ಪ್ರಕಾರ ಅಭಿವೃದ್ಧಿಯು ಮೊದಲು ಪ್ರಶಸ್ತ ಪ್ರದೇಶಗಳಲ್ಲಿ ಚಿಗುರೊಡೆಯುತ್ತದೆ. ಹೀಗೆ ಪ್ರಾರಂಭವಾದುದು ಮುಂದೆ ತೀವ್ರ ಅಸಮಾನತೆಗಳಿಗೆ ಕಾರಣವಾಗುತ್ತದೆ. ಎರಡು ಪ್ರದೇಶಗಳು ಒಂದೇ ಗತಿಯಲ್ಲಿ ಬೆಳವಣಿಗೆಗೆ ಸಾಧಿಸಿಕೊಂಡರೂ ಪ್ರಾರಂಭದಲ್ಲಿನ ಅಂತರದಿಂದಾಗಿ ಪ್ರಾದೇಶಿಕ ಅಸಮಾನತೆ ಮುಂದುವರಿಯುತ್ತದೆ.

ವಿಲಿಯಂಸನ್ ಪ್ರಕಾರ ಅಭಿವೃದ್ಧಿಯ ಆದಿ ಭಾಗದಲ್ಲಿ ಕೇಂದ್ರಾಭಿಮುಖಿ ಶಕ್ತಿಗಳು ಪ್ರಬಲವಾಗಿರುವುದರಿಂದ ಪ್ರಾದೇಶಿಕ ಅಸಮಾನತೆ ತೀವ್ರಗೊಳ್ಳುತ್ತದೆ. ಆದರೆ ಅಭಿವೃದ್ಧಿಯು ಒಂದು ಹಂತ ತಲುಪಿದ ಮೇಲೆ ಕೇಂದ್ರಾಭಿಮುಖಿ ಶಕ್ತಿಯು ಕ್ಷೀಣಿಸಿ ಕೇಂದ್ರವಿಮುಖಿ ಶಕ್ತಿಯು ಪ್ರಬಲವಾಗುತ್ತದೆ. ಹೀಗೆ ಪ್ರಾದೇಶಿಕ ಅಸಮಾನತೆಯು ಪರಿಹಾರವಾಗಿ ಬಿಡುತ್ತದೆ. ಪ್ರದೇಶ–ಪ್ರದೇಶಗಳ ನಡುವಿನ ಅಂತರಗಳು ಮುಂದೆ ಸಮವಾಗುವ ಸಲುವಾಗಿಯೇ ಪ್ರಾರಂಭದಲ್ಲಿ ಅಸಮವಾಗಿರುತ್ತವೆ.

ಪ್ರಾದೇಶಿಕ ಅಸಮಾನತೆ ಕುರಿತಂತೆ ಅನೇಕ ಅರ್ಥಶಾಸ್ತ್ರಜ್ಞರು ಸಿದ್ಧಾಂತಗಳನ್ನು, ಪ್ರಮೇಯಗಳನ್ನು ರೂಪಿಸಿದ್ದಾರೆ. ಇವು ಪ್ರಾದೇಶಿಕ. ಅಸಮಾನತೆಯ ವಿವಿಧ ಮುಖಗಳನ್ನು ಪರಿಚಯಿಸಿಕೊಡುತ್ತವೆ. ಅಸಮಾನತೆ ಮತ್ತು ಸಮಾನತೆಗಳು ಒಂದೇ ಪ್ರಕ್ರಿಯೆಯ ಎರಡು ಮುಖಗಳು ಎಂಬುದನ್ನು ಇಲ್ಲಿ ಚರ್ಚಿಸಿರುವ ಸಿದ್ಧಾಂತಗಳು ತೋರಿಸಿಕೊಟ್ಟಿವೆ.

ಮಾನವ ಅಭಿವೃದ್ಧಿ ವಿಚಾರ ಪ್ರಣಾಳಿಕೆಯು, ಅಭಿವೃದ್ಧಿಯ ಕುರಿತ ಸಿದ್ಧಾಂತಗಳಲ್ಲಿ ಹೊಸ ಬೆಳಕನ್ನು ಚೆಲ್ಲಿದೆ. ಇದರಿಂದಾಗಿ ಮಾನವ ಅಭಿವೃದ್ಧಿ–ದುಸ್ಥಿತಿಗಳ ವಿಚಾರ ಪ್ರಣಾಳಿಕೆಗಳಿಗೆ ಹೆಚ್ಚಿನ ಮನ್ನಣೆ ಪ್ರೋತ್ಸಾಹಗಳು ದೊರೆಯುತ್ತಿವೆ. ೧೯೯೦ರಿಂದ ಯುಎನ್‌ಡಿಪಿ ಮಾನವ ಅಭಿವೃದ್ಧಿ ವರದಿಗಳನ್ನು ಪ್ರಕಟಣೆಗೊಳಿಸಲು ಪ್ರಾರಂಭಿಸಿದ ನಂತರ ಹಲವಾರು ರಾಷ್ಟ್ರಗಳು ಅದೇ ನಿಟ್ಟಿನಲ್ಲಿ ತಮ್ಮ ರಾಷ್ಟ್ರ, ರಾಜ್ಯಗಳಿಗೆ ಸಂಬಂಧಿಸಿದಂತೆ ಮಾನವ ಅಭಿವೃದ್ಧಿ ಸೂಚ್ಯಂಕಗಳನ್ನು ಸಿದ್ಧಪಡಿಸಲು ಪ್ರಾರಂಭಿಸಿವೆ. ಇಲ್ಲಿಯವರೆಗೆ ಮಾನವ ಅಭಿವೃದ್ಧಿ ಮತ್ತು ದುಸ್ಥಿತಿಗಳ ವಿಚಾರ ಪ್ರಣಾಳಿಕೆ ಮತ್ತು ಅವುಗಳ ಚಾಲಕ ಶಕ್ತಿಗಳಾಗಿರುವ ಆರೋಗ್ಯ, ಸಾಕ್ಷರತೆ, ಶಿಕ್ಷಣ, ವರಮಾನ, ಬಡತನಗಳನ್ನು ಕುರಿತಂತೆ ನಡೆದಿರುವ ಕೆಲವು ಮುಖ್ಯ ಅಧ್ಯಯನಗಳನ್ನು ಈ ಭಾಗದಲ್ಲಿ ಸಮೀಕ್ಷಿಸಲಾಗಿದೆ.

೨.೩. ಮಾನವ ಅಭಿವೃದ್ಧಿ ಸಂಬಂಧಿ ಅಧ್ಯಯನಗಳ ಸಮೀಕ್ಷೆ

೧೯೯೦ರಿಂದ ಯುಎನ್‌ಡಿಪಿಯು ಮಾನವ ಅಭಿವೃದ್ಧಿ ವರದಿಗಳನ್ನು ಪ್ರಕಟಪಡಿಸುತ್ತಾ, ಆರ್ಥಿಕ ಬೆಳವಣಿಗೆಯು ತನ್ನಿಂದ ತಾನೇ ಮಾನವ ಅಭಿವೃದ್ಧಿಯಾಗಿ ಪರಿವರ್ತನೆಗೊಳ್ಳುವುದಿಲ್ಲ. ಅದಕ್ಕಾಗಿ ಸರ್ಕಾರಗಳ ಪ್ರಜ್ಞಾಪೂರ್ವಕ ಮಧ್ಯಸ್ಥಿಕೆ ಬೇಕು ಎನ್ನುವ ಸಂದೇಶವನ್ನು ಸಾರುತ್ತಲೇ ಬಂದಿವೆ. ೧೯೯೫ರ ಮಾನವ ಅಭಿವೃದ್ಧಿ ವರದಿಯು ಅಭಿವೃದ್ಧಿಯ ಲಿಂಗಸಂವೇದಿಯಾಗಿರದಿದ್ದರೆ ಅದು ಅಪಾಯಕಾರಿಯಾಗುತ್ತದೆ ಎಂಬ ಎಚ್ಚರಿಕೆಯನ್ನು ನೀಡಿದೆ. "Eradicating poverty every

where is more than a moral imperative it is a practical possiblity"ಎಂಬುದು ೧೯೯೭ರ ಮಾನವ ಅಭಿವೃದ್ಧಿ ವರದಿಯ ಸಂದೇಶವಾಗಿದೆ.

ಮಾನವ ಅಭಿವೃದ್ಧಿ ವರದಿಗಳಲ್ಲಿ ಇದುವರೆವಿಗೂ ಮೂರು ಬಗೆಯ ಸೂಚ್ಯಂಕಗಳನ್ನು ರೂಪಿಸಿ ಅಭಿವೃದ್ಧಿಯನ್ನು ಮಾಪನ ಮಾಡುತ್ತಾ ಬರಲಾಗಿದೆ. ಅವುಗಳು ಯಾವುವೆಂದರೆ, ೧. ಮಾನವ ಅಭಿವೃದ್ಧಿ ಸೂಚ್ಯಂಕ (ಎಚ್.ಡಿ.ಐ), ೨. ಲಿಂಗಸಂಬಂಧಿ ಅಭಿವೃದ್ಧಿ ಸೂಚ್ಯಂಕ (ಜಿಡಿಐ) ಮತ್ತು ೩. ರಾಜಕೀಯ ಸಶಕ್ತೀರಣದ ಮಾಪನ.

೧೯೯೭ರ ಮಾನವ ಅಭಿವೃದ್ಧಿ ವರದಿಯಲ್ಲಿ ಜಗತ್ತಿನ ೧೭೫ ರಾಷ್ಟ್ರಗಳಿಗೆ ಸಂಬಂಧಿಸಿದಂತೆ ಮಾನವ ಅಭಿವೃದ್ಧಿ ಸೂಚ್ಯಂಕಗಳನ್ನು ನೀಡಲಾಗಿದೆ. ಅದರಲ್ಲಿ ಕೆನಡಾ, ಫ್ರಾನ್ಸ್, ನಾರ್ವೆ, ಯುಎಸ್ಎ ಮತ್ತು ಐರ್ಲ್ಯಾಂಡ್ ರಾಷ್ಟ್ರಗಳು ಕ್ರಮವಾಗಿ ಮೊದಲ ಐದು ಸ್ಥಾನಗಳನ್ನು ಹೊಂದಿದ್ದರೆ (Mali) ಮಾಲಿ, ಬುರ್ಕಿನಾ (Burkina) ನೈಜರ್ (Niger) ರೆವೆಂಡಾ, ಸಿಯಿರಾ ರಾಷ್ಟ್ರಗಳು ಕೊನೆಯ ಐದು ಸ್ಥಾನಗಳನ್ನು ಹೊಂದಿರುವ ರಾಷ್ಟ್ರಗಳಾಗಿವೆ. ಈ ವರದಿಯಲ್ಲಿ ಜಾಗತಿಕ ರಾಷ್ಟ್ರಗಳನ್ನು ಅಧಿಕ, ಮಧ್ಯಮ, ಕಡಿಮೆ ಮಾನವ ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳಾಗಿ ವಿಭಾಗಿಸಲಾಗಿದೆ. ೧೭೫ ರಾಷ್ಟ್ರಗಳಲ್ಲಿ ೬೪ ರಾಷ್ಟ್ರಗಳು ಅಧಿಕ ಮಾನವ ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳಾಗಿದ್ದರೆ, ೬೬ ದೇಶಗಳು ಮಧ್ಯಮ ಮಾನವ ಅಭಿವೃದ್ಧಿ ಸಾಧಿಸಿರುವ ರಾಷ್ಟ್ರಗಳ ಪಂಕ್ತಿಯಲ್ಲಿ ಬರುತ್ತವೆ. ಭಾರತ ೧೩೮ನೇ ಸ್ಥಾನ ಪಡೆದು, ಕಡಿಮೆ ಮಾನವ ಅಭಿವೃದ್ಧಿ ಹೊಂದಿರುವ ೪೫ ರಾಷ್ಟ್ರಗಳ ಪೈಕಿ ಒಂದಾಗಿದೆ(ಹೆಚ್‌ಡಿಆರ್, ೧೯೯೭; ೧೪೬-೪೭). ಮಾನವ ಅಭಿವೃದ್ಧಿ ವರದಿಗಳಲ್ಲಿ ಜಗತ್ತಿನ ೧೪೬ ರಾಷ್ಟ್ರಗಳಿಗೆ ಲಿಂಗಸಂಬಂಧಿ ಅಭಿವೃದ್ಧಿ ಸೂಚ್ಯಂಕವನ್ನು ನೀಡಲಾಗಿದೆ. ೧೯೯೭ರ ಮಾನವ ಅಭಿವೃದ್ಧಿ ವರದಿಯಲ್ಲಿರುವ ೫೫,೫೫ ಮತ್ತು ೩೬ ರಾಷ್ಟ್ರಗಳು ಕ್ರಮವಾಗಿ ಉತ್ತಮ, ಮಧ್ಯ, ಮತ್ತು ಕಡಿಮೆ ಲಿಂಗಸಂಬಂಧಿ ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳಾಗಿವೆ. ಇದರಲ್ಲಿ ಭಾರತದ ಸ್ಥಾನ ೧೧೮ನೆಯದ್ದಾಗಿದೆ (ಹೆಚ್‌ಡಿಆರ್, ೧೯೯೭;೧೫೧). ಇದೇ ವರದಿಯಲ್ಲಿ ವಿಶ್ವದ ೯೪ ರಾಷ್ಟ್ರಗಳ ಲಿಂಗ ಸಶಕ್ತೀಕರಣ ಮಾಪನ(GEM)ವನ್ನು ನೀಡಲಾಗಿದೆ. ಈ ೯೪ ರಾಷ್ಟ್ರಗಳಲ್ಲಿ ಸಿಯಾರ್ ಕೊನೆಯ ಸ್ಥಾನದಲ್ಲಿದ್ದರೆ, ನಾರ್ವೆ ಮೊದಲ ಸ್ಥಾನದಲ್ಲಿದೆ. ೪೫ ರಾಷ್ಟ್ರಗಳು ಉನ್ನತ ಮಟ್ಟದ ಲಿಂಗ ಸಶಕ್ತೀಕರಣ ಹೊಂದಿರುವ ೩೧ ರಾಷ್ಟ್ರಗಳು ಕಡಿಮೆ ಲಿಂಗ ಸಶಕ್ತೀಕರಣ ಹೊಂದಿರದ ರಾಷ್ಟ್ರಗಳಾಗಿವೆ. ಇದರಲ್ಲಿ ಭಾರತವು ೮೬ನೇ ಸ್ಥಾನ ಪಡೆದಿದೆ.

ಮಾನವ ಅಭಿವೃದ್ಧಿ ವಿಚಾರ ಪ್ರಣಾಳಿಕೆಯ ಪ್ರವರ್ತಕ ಮೆಹಬೂಬ್-ಉಲ್-ಹಕ್ ಅವರ ನೇತೃತ್ವದಲ್ಲಿ ದಕ್ಷಿಣ ಏಷ್ಯಾ ರಾಷ್ಟ್ರಗಳಿಗೆ ಮಾನವ ಅಭಿವೃದ್ಧಿ ವರದಿಗಳನ್ನು ರಚಿಸಲಾಗಿದೆ. "ದಕ್ಷಿಣ ಏಷ್ಯಾದಲ್ಲಿ ಮಾನವ ಅಭಿವೃದ್ಧಿ-೧೯೯೭"ರಲ್ಲಿ ದಕ್ಷಿಣ ಏಷ್ಯಾದ ೭ ರಾಷ್ಟ್ರಗಳಿಗೆ ಮಾನವ ಅಭಿವೃದ್ಧಿ ಸೂಚ್ಯಂಕಗಳನ್ನು ಅಭಿವೃದ್ಧಿಪಡಿಸಲಾಗಿದೆ.

ಈ ಏಳು ರಾಷ್ಟ್ರಗಳಲ್ಲಿ ಶ್ರೀಲಂಕಾ ಮಾನವ ಅಭಿವೃದ್ಧಿಯಲ್ಲಿ (೦.೬೯೮ರಷ್ಟು ಮೌಲ್ಯ) ಮೊದಲ ಸ್ಥಾನದಲ್ಲಿದ್ದರೆ, ನೆಪಾಳ (೦.೩೩೫) ಕೊನೆಯ ಸ್ಥಾನದಲ್ಲಿದೆ (ಹಕ್, ೧೯೯೭;೨೮). ಈ ವರದಿಯು ತಿಳಿಸುವಂತೆ, ಜನಸಂಖ್ಯಾ ಬೆಳವಣಿಗೆಯ ನಡುವೆ ದಕ್ಷಿಣ ಏಷ್ಯಾ ದೇಶಗಳಲ್ಲಿ ವರಮಾನವು ವೃದ್ಧಿಗೊಂಡಿದೆ. ಆದರೆ ಸರಕಾರದ ನೀತಿಗಳ ದೋಷದಿಂದಾಗಿ, ಅಧಿಕ ವರಮಾನ ಅಥವಾ ಉಚ್ಛ್ರಾಯ ಸ್ಥಿತಿ ಜನಸಾಮಾನ್ಯರ ಬಾಳಿನಲ್ಲಿ ಪ್ರತಿಫಲನಗೊಂಡಿಲ್ಲ. ಈ ರಾಷ್ಟ್ರಗಳು ವರಮಾನದ ಏರಿಕೆಯಲ್ಲಿ ತೋರಿಸಿದ ಸ್ಥಿತಿಸ್ಥಾಪಕತೆಯನ್ನು ಮಾನವ ಅಭಿವೃದ್ಧಿಯಲ್ಲಿ ತೋರಿಸಿಲ್ಲ (ಶ್ರೀಲಂಕ ಹೊರತುಪಡಿಸಿ). ಈ ರಾಷ್ಟ್ರಗಳಲ್ಲಿ ಲಿಂಗತಾರತಮ್ಯವು ಅಧಿಕವಿದ್ದು, ಅದನ್ನು ಹೋಗಲಾಡಿಸಬೇಕೆಂದು ಈ ವರದಿಯು ಒತ್ತಿ ಹೇಳಿದೆ. ದಕ್ಷಿಣ ಏಷ್ಯಾ ರಾಷ್ಟ್ರಗಳ ವರಮಾನದಷ್ಟೆ ವರಮಾನ ಹೊಂದಿರುವ ರಾಷ್ಟ್ರಗಳು, ಈ ರಾಷ್ಟ್ರಗಳಿಗಿಂತಲೂ ಅಧಿಕ ಮಾನವ ಅಭಿವೃದ್ಧಿ ಹೊಂದಿರುವುದನ್ನು ಈ ವರದಿಯು ತಿಳಿಸುತ್ತಾ (ಉದಾಹರಣೆಗೆ ಭಾರತ–ವಿಯಟ್ನಾಂ ಪಾಕಿಸ್ತಾನ–ಗಾಯಾನ) ಕೆಲವು ರಾಷ್ಟ್ರಗಳ ವರಮಾನವು ಮಾನವ ಅಭಿವೃದ್ಧಿಯಾಗಿ ಪರಿವರ್ತನೆಯಾಗಬೇಕಾದ ಅವಶ್ಯಕತೆಯನ್ನು ಎತ್ತಿ ತೋರಿಸಿದೆ.

ಇದೇ ವರದಿಯಲ್ಲಿ ಭಾರತದ ೧೫ ರಾಜ್ಯಗಳಿಗೆ ೧೯೯೩ರ ಅಂಕಿ–ಅಂಶಗಳನ್ನು ಬಳಸಿ ಮಾನವ ಅಭಿವೃದ್ಧಿ ಸೂಚ್ಯಂಕಗಳನ್ನು ಅಭಿವೃದ್ಧಿಪಡಿಸಲಾಗಿದೆ (ಪು.೧೧೬). ಕೇರಳ ಅಧಿಕ ಮಾನವ ಅಭಿವೃದ್ಧಿ ಸೂಚ್ಯಂಕ (೦.೫೯೭)ದೊಂದಿಗೆ, ದೇಶದ ರಾಜ್ಯಗಳಲ್ಲಿ ಪ್ರಥಮ ಸ್ಥಾನದಲ್ಲಿದೆ. ಇದು ಅಂತರರಾಷ್ಟ್ರೀಯ ಮಟ್ಟದಲ್ಲಿ ಚೀನಾ ದೇಶಕ್ಕಿಂತಲೂ ಉತ್ತಮ ಸ್ಥಾನ ಪಡೆದಿದೆ. ಮಧ್ಯಪ್ರದೇಶ, ಮಾನವ ಅಭಿವೃದ್ಧಿಯಲ್ಲಿ ೦.೩೪೧ ಮೌಲ್ಯ ಪಡೆದು, ಭಾರತದಲ್ಲಿ ಅತ್ಯಂತ ಕಡಿಮೆ ಮಾನವ ಅಭಿವೃದ್ಧಿ ಸೂಚ್ಯಂಕ ಹೊಂದಿರುವ ರಾಜ್ಯವಾಗಿದ್ದು, ಇದು ಅಂತರರಾಷ್ಟ್ರೀಯ ಮಟ್ಟದಲ್ಲಿ ರುವಾಂಡಾ ದೇಶದ ಸ್ಥಾನಕ್ಕೆ ಬರುತ್ತದೆ. ಕರ್ನಾಟಕ ೦.೪೪೨ ಮಾನವ ಅಭಿವೃದ್ಧಿ ಸೂಚ್ಯಂಕದ ಮೌಲ್ಯದೊಂದಿಗೆ ೮ನೇ ಸ್ಥಾನದಲ್ಲಿದೆ. ೧೯೯೭ರ ದಕ್ಷಿಣ ಏಷ್ಯಾಗಳಲ್ಲಿಯ ಮಾನವ ಅಭಿವೃದ್ಧಿ ಅಧ್ಯಯನದಲ್ಲಿ ಭಾರತದಲ್ಲಿಯ ಪ್ರಜಾಪ್ರಭುತ್ವ ಭೂಸುಧಾರಣೆ, ಪರಿಶಿಷ್ಟರಿಗೆ ನೀಡಿರುವ ಅವಕಾಶಗಳ ಬಗ್ಗೆ ಮೆಚ್ಚುಗೆಯನ್ನು ಸೂಚಿಸಲಾಗಿದೆ. ಅದೇ ವೇಳೆಗೆ ಇಲ್ಲಿರುವ ದುಸ್ಥಿತಿಯನ್ನು ಸಹ ವಿವರಿಸಿದೆ. ಉದಾಹರಣೆಗೆ ಜಗತ್ತಿನಲ್ಲಿಯೇ ಅತ್ಯಧಿಕ ಅನಕ್ಷರಸ್ಥರನ್ನು ಹೊಂದಿರುವ ರಾಷ್ಟ್ರವೆಂದರೆ ಭಾರತ (ಪು.೩೧). ಭಾರತದಲ್ಲಿರುವ ಉದ್ಯೋಗ ರಹಿತ ಬೆಳವಣಿಗೆ (Jobless growth) ಬಗ್ಗೆ ಕಳವಳ ವ್ಯಕ್ತಪಡಿಸಿರುವ ಈ ಅಧ್ಯಯನವು, ಭಾರತದಲ್ಲಿ ಆರ್ಥಿಕ ಬೆಳವಣಿಗೆಯು–ಮಾನವ ಅಭಿವೃದ್ಧಿಯಾಗಿ ಪರಿವರ್ತಿತಗೊಳ್ಳಬೇಕಾದರೆ, ಉದ್ಯೋಗಾವಕಾಶಗಳು ಸೃಷ್ಟಿಯಾಗಬೇಕು ಮತ್ತು ಶಿಕ್ಷಣ, ಆರೋಗ್ಯಗಳ ಮೇಲೆ ಅಧಿಕ ಬಂಡವಾಳ ವಿನಿಯೋಗವಾಗಬೇಕಾಗಿದೆ ಎಂಬುವುದನ್ನು ಒತ್ತಿ ಹೇಳಿದೆ.

ಶ್ರೀಲಂಕಾವು ಮಾನವ ಅಭಿವೃದ್ಧಿಯಲ್ಲಿ ಪವಾಡ ಸದೃಶ್ಯ ಸಾಧನೆಯನ್ನು ಮಾಡಿದೆ. ಈ ಸಾಧನೆಯ ಹಿಂದಿರುವ ಸಂಗತಿಗಳನ್ನು 'ದಕ್ಷಿಣ ಏಷ್ಯಾ ರಾಷ್ಟ್ರಗಳಲ್ಲಿ ಮಾನವ ಅಭಿವೃದ್ಧಿ ವರದಿ

೧೯೯೭'ರಲ್ಲಿ ಗುರುತಿಸಲಾಗಿದೆ. ಮಾನವ ಅಭಿವೃದ್ಧಿಯ ದೃಷ್ಟಿಯಲ್ಲಿ 'ಶ್ರೀಲಂಕಾ' ದಕ್ಷಿಣ ಏಷ್ಯಾ ರಾಷ್ಟ್ರಗಳಲ್ಲಿಯೇ ಅಗ್ರಸ್ಥಾನದಲ್ಲಿದೆ. ಶ್ರೀಲಂಕಾವು ಮಾನವ ಅಭಿವೃದ್ಧಿಯಲ್ಲಿ ಇತರ ರಾಷ್ಟ್ರಗಳಿಗೆ ಮಾದರಿಯಾಗಿದೆ. "ಇಲ್ಲಿಯ ಸಾಕ್ಷರತಾ ಪ್ರಮಾಣ ಶೇ.೯೦. ಪ್ರಾಥಮಿಕ ಶಾಲೆಗಳಲ್ಲಿ ದಾಖಲಾತಿ ಪ್ರಮಾಣ ಶೇ.೯೦ ಸಾಕ್ಷರತೆ, ಶಾಲಾ ದಾಖಲಾತಿಗಳಲ್ಲಿ ಅಧಿಕ ಲಿಂಗ ತಾರತಮ್ಯಗಳಿಲ್ಲ. ಶೇ.೯೩ರಷ್ಟು ಜನತೆಗೆ ಆರೋಗ್ಯ ಸೌಲಭ್ಯಗಳು ದೊರೆಯುತ್ತಿವೆ" ಇವೆಲ್ಲವೂ ಅಲ್ಲಿಯ ಸರಕಾರಗಳ ಪ್ರಜ್ಞಾಪೂರ್ವಕ ನೀತಿಗಳಿಂದ ಸಾಧ್ಯವಾಗಿದೆ. ಇಲ್ಲಿಯ ಪ್ರಭುತ್ವಗಳು ಕಳೆದ ಐದು ದಶಕಗಳಿಂದಲೂ ಸಾಮಾಜಿಕ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಅಧಿಕ ಬಂಡವಾಳವನ್ನು ವಿನಿಯೋಗ ಮಾಡುತ್ತಿವೆ. ತಮಿಳರು ಸಿಂಹಳೀಯರ ನಡುವೆ ೧೯೫೦ರಿಂದಲೂ ಜನಾಂಗೀಯ ಘರ್ಷಣೆಗಳಿದ್ದಾಗಿಯೂ ಈ ದೇಶ ಮಾನವ ಅಭಿವೃದ್ಧಿಯಲ್ಲಿ ಪ್ರಗತಿ ಸಾಧಿಸಿರುವುದು ಒಂದು ಅದ್ಭುತವೆಂದೇ ಹೇಳಬಹುದು. ಆದರೆ ದುರಾದೃಷ್ಟವೆಂದರೆ, ಹೆಚ್ಚಾದ ಮಾನವ ಅಭಿವೃದ್ಧಿಯನ್ನು ಕಾಯ್ದುಕೊಳ್ಳಲು, ಅಲ್ಲಿ ವರಮಾನವು ಸಾಕಷ್ಟು ಪ್ರಮಾಣದಲ್ಲಿ ಅಧಿಕಗೊಳ್ಳುತ್ತಿಲ್ಲ. ಶ್ರೀಲಂಕಾ ರಾಷ್ಟ್ರಕ್ಕೆ ಮಾನವ ಅಭಿವೃದ್ಧಿ ಮತ್ತು ಆರ್ಥಿಕ ಬೆಳವಣಿಗೆ ನಡುವೆ ಸಮತೋಲನ ಕಾಯ್ದುಕೊಂಡು ಬರಲು ಆಗುತ್ತಿಲ್ಲ. ಶ್ರೀಲಂಕಾ ದೇಶ ಮಾನವ ಅಭಿವೃದ್ಧಿ ಮತ್ತು ಆರ್ಥಿಕ ಬೆಳವಣಿಗೆ ನಡುವೆ ಸಮತೋಲನ ಕಾಯ್ದುಕೊಳ್ಳಬೇಕಾದ ಅವಶ್ಯಕತೆಯನ್ನು ಈ ವರದಿ ತಿಳಿಸಿದೆ.

ಪಾಪುಲೇಶನ್ ಪೌಂಡೇಷನ್ ಆಫ್ ಇಂಡಿಯಾ (೧೯೯೮)ದವರು ಭಾರತದ ೧೫ ರಾಜ್ಯಗಳಿಗೆ ಮಾನವ ಅಭಿವೃದ್ಧಿ ಸೂಚ್ಯಂಕ, ಲಿಂಗಸಂಬಂಧಿ ಆರೋಗ್ಯ ಸೂಚ್ಯಂಕ, ಪ್ರಜನೋತ್ಪತ್ತಿ ಆರೋಗ್ಯ ಸೂಚ್ಯಂಕಗಳನ್ನು ಅಭಿವೃದ್ಧಿಪಡಿಸಿದ್ದಾರೆ. ಈ ಅಧ್ಯಯನದಲ್ಲಿ, ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಭಾರತದ ರಾಜ್ಯಗಳಲ್ಲಿ ಕೇರಳ ಮೊದಲ ಸ್ಥಾನದಲ್ಲಿದೆ. ಹರಿಯಾಣ, ಹಿಮಾಚಲ ಪ್ರದೇಶ, ಮಹಾರಾಷ್ಟ್ರ, ಪಂಜಾಬ್, ತಮಿಳುನಾಡು ರಾಜ್ಯಗಳು ಮಧ್ಯಮ ಮಾನವ ಅಭಿವೃದ್ಧಿ ಸಾಧಿಸಿರುವ ರಾಜ್ಯಗಳಾಗಿವೆ. ಉಳಿದ ರಾಜ್ಯಗಳು ಕಡಿಮೆ ಮಾನವ ಅಭಿವೃದ್ಧಿ ಹೊಂದಿರುವ ರಾಜ್ಯಗಳಾಗಿವೆ. ಅಸ್ಸಾಂ, ಹಿಮಾಚಲ ಪ್ರದೇಶ, ಕೇರಳ, ಓರಿಸ್ಸಾ, ತಮಿಳುನಾಡು ಮತ್ತು ಪಶ್ಚಿಮ ಬಂಗಾಳ ರಾಷ್ಟ್ರಗಳು ರಾಜ್ಯ ಆಂತರಿಕ ಉತ್ಪನ್ನದಲ್ಲಿ ಹೊಂದಿರುವ ಸ್ಥಾನಗಳಿಗಿಂತಲೂ ಮಾನವ ಅಭಿವೃದ್ಧಿಯಲ್ಲಿ ಉನ್ನತ ಸ್ಥಾನ ಪಡೆದಿದೆ. ಬಿಹಾರ, ಉತ್ತರ ಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯಗಳು ಮಾನವ ಅಭಿವೃದ್ಧಿ ಮತ್ತು ರಾಜ್ಯ ಆಂತರಿಕ ಉತ್ಪನ್ನಗಳೆರಡರಲ್ಲಿಯೂ ಏಕರೂಪವಾದ ಸ್ಥಾನ ಪಡೆದಿವೆ. ಆಂಧ್ರಪ್ರದೇಶ, ಗುಜರಾತ್, ಹರಿಯಾಣ, ಕರ್ನಾಟಕ, ಮಧ್ಯಪ್ರದೇಶ, ಪಂಜಾಬ್ ಮತ್ತು ರಾಜಸ್ಥಾನ ರಾಜ್ಯಗಳು ರಾಜ್ಯ ಆಂತರಿಕ ಉತ್ಪನ್ನದಲ್ಲಿ ಉನ್ನತ ಸ್ಥಾನ ಪಡೆದಿದ್ದರೂ, ಮಾನವ ಅಭಿವೃದ್ಧಿಯಲ್ಲಿ ಈ ರಾಜ್ಯಗಳು ಕೆಳಸ್ಥಾನದಲ್ಲಿವೆ. ಹಕ್‌ರವರ (೧೯೯೭)ದಕ್ಷಿಣ ಏಷ್ಯಾ ರಾಷ್ಟ್ರಗಳಲ್ಲಿ ಮಾನವ ಅಭಿವೃದ್ಧಿಯ ಅಧ್ಯಯನದಲ್ಲಿ, ಭಾರತದ ರಾಜ್ಯಗಳ ಮಾನವ ಅಭಿವೃದ್ಧಿಯಲ್ಲಿ ಮಧ್ಯಪ್ರದೇಶ ಕೊನೆಯ ಸ್ಥಾನದಲ್ಲಿದ್ದರೆ, ಪಾಪುಲೇಶನ್ ಪೌಂಡೇಶನ್ ಆಫ್ ಇಂಡಿಯಾದವರು ಅಭಿವೃದ್ಧಿ ಪಡಿಸಿದ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಬಿಹಾರ ರಾಜ್ಯವು

ಭಾರತದ ರಾಜ್ಯಗಳಲ್ಲಿ ಕೊನೆಯ ಸ್ಥಾನದಲ್ಲಿದೆ. ಪಾಪುಲೇಶನ್ ಪೌಂಡೇಶನ್ ಆಫ್ ಇಂಡಿಯಾದವರ ಅಧ್ಯಯನದ ಪ್ರಕಾರ ಕರ್ನಾಟಕ ರಾಜ್ಯವು ಸಾಪೇಕ್ಷವಾಗಿ ಭಾರತಕ್ಕಿಂತಲೂ ಉತ್ತಮ ಸ್ಥಿತಿಯಲ್ಲಿದೆ.

ಲಿಂಗಸಂಬಂಧಿ ಆರೋಗ್ಯ ಸೂಚ್ಯಂಕದಲ್ಲಿ ಯಥಾವತ್ತಾಗಿ, ಕೇರಳ ರಾಜ್ಯ ಭಾರತದ ರಾಜ್ಯಗಳಲ್ಲಿಯೆ ಮೊದಲ ಸ್ಥಾನದಲ್ಲಿದ್ದರೆ, ಮಧ್ಯಪ್ರದೇಶ ಮತ್ತು ಒರಿಸ್ಸಾಗಳು ಕೊನೆಯ ಸ್ಥಾನದಲ್ಲಿರುವ ಎರಡು ರಾಜ್ಯಗಳಾಗಿವೆ. ಅಧ್ಯಯನ ತಿಳಿಸುವಂತೆ ಶಿಶುಮರಣ ಪ್ರಮಾಣವು ಅತ್ಯಾಧಿಕವಾಗಿರುವುದೇ ಈ ರಾಜ್ಯಗಳು ಲಿಂಗಸಂಬಂಧಿ ಆರೋಗ್ಯ ಸೂಚ್ಯಂಕದಲ್ಲಿ ಕೆಳಸ್ಥಾನ ಹೊಂದಿರುವುದಕ್ಕೆ ಕಾರಣವಾಗಿದೆ. ಹಿಮಾಚಲ ಪ್ರದೇಶ, ಮಹಾರಾಷ್ಟ್ರ, ಪಂಜಾಬ್, ತಮಿಳುನಾಡು, ಪಶ್ಚಿಮ ಬಂಗಾಳ ರಾಜ್ಯಗಳು ಅಧಿಕ ಲಿಂಗಸಂಬಂಧಿ ಆರೋಗ್ಯ ಸೂಚ್ಯಂಕ ಹೊಂದಿದ್ದರೂ, ಅದು ಕೇರಳ ರಾಜ್ಯದಷ್ಟು ಅಧಿಕವಾಗಿಲ್ಲ. ಬಿಹಾರ, ರಾಜಸ್ಥಾನ, ಉತ್ತರ ಪ್ರದೇಶ ರಾಜ್ಯಗಳಲ್ಲಿ ಲಿಂಗ ಸಂಬಂಧಿ ಆರೋಗ್ಯ ಸೂಚ್ಯಂಕದ ಮೌಲ್ಯವು ಕಡಿಮೆ ಇದೆ. ಗುಜರಾತ್ ಮತ್ತು ಕರ್ನಾಟಕ, ಅದೇ ರೀತಿ ಆಂಧ್ರಪ್ರದೇಶ ಮತ್ತು ಅಸ್ಸಾಂ ರಾಜ್ಯಗಳ ಮೌಲ್ಯಗಳು ಏಕರೂಪವಾಗಿವೆ(ಪು.೫).

ಜನಸಂಖ್ಯಾ ಪೌಂಡೇಶನ್ ಹೊಸದಾಗಿ ಸಂತಾನೋತ್ಪತ್ತಿ ಆರೋಗ್ಯ ಸೂಚ್ಯಂಕ(Reproductine Health Index) ವನ್ನು ಅಭಿವೃದ್ಧಿ ಪಡಿಸಿದೆ. ಇದಕ್ಕಾಗಿ ಆರೋಗ್ಯಕ್ಕೆ ಸಂಬಂಧಿಸಿ ಏಳು ಅಂಶಗಳನ್ನು ಪರಿಗಣೆನೆಗೆ ತೆಗೆದುಕೊಂಡಿದೆ. "Reproduction Health implies that people have the capacity to reproduce the freedom to decide if, when and how often to do"(ಪು.೬). ಸಂತಾನೋತ್ಪತ್ತಿ ಆರೋಗ್ಯ ಸೂಚ್ಯಂಕ ಕುರಿತಂತೆ ಭಾರತದ ರಾಜ್ಯಗಳಲ್ಲಿ ಕರ್ನಾಟಕ ೭ನೇ ಸ್ಥಾನದಲ್ಲಿದೆ. ಒಟ್ಟು ೧೫ ರಾಜ್ಯಗಳ ಪೈಕಿ ಕೇರಳ ಉನ್ನತ ಸ್ಥಾನದಲ್ಲಿದ್ದರೆ, ಕೊನೆಯ ಸ್ಥಾನದಲ್ಲಿ ಉತ್ತರ ಪ್ರದೇಶ ರಾಜ್ಯವಿದೆ. ನಂತರ ಬಿಹಾರ ಮತ್ತು ರಾಜಸ್ಥಾನ ರಾಜ್ಯಗಳು ಬರುತ್ತವೆ. ಸಂತಾನೋತ್ಪತ್ತಿ ಆರೋಗ್ಯ ಸೂಚ್ಯಂಕದಲ್ಲಿ ರಾಜ್ಯಗಳು ಕಡಿಮೆ ಮೌಲ್ಯ ಹೊಂದಿರುವುದಕ್ಕೆ ಯಾವ ಅಂಶಗಳು ಕಾರಣಗಳಾಗಿವೆ ಎಂಬುದನ್ನು ಈ ಅಧ್ಯಯನವು ವಿವರವಾಗಿ ತಿಳಿಸಿದೆ. ಪೌಂಡೇಶನ್ ಸಿದ್ಧಪಡಿಸಿದ, ಹೆಚ್.ಡಿ.ಐ, ಬಿ.ಹೆಚ್.ಐ ಮತ್ತು ಆರ್.ಎಚ್.ಐಗಳಿಗೆ ಸಂಬಂಧಿಸಿದಂತೆ ರಾಷ್ಟ್ರದ ೧೫ ರಾಜ್ಯಗಳಲ್ಲಿ ಕರ್ನಾಟಕವು ಕ್ರಮವಾಗಿ ೮,೮,೭ನೆಯ ಸ್ಥಾನ ಪಡೆದಿದ್ದು, ಮೂರು ಸೂಚ್ಯಂಕಗಳಲ್ಲಿ ಕರ್ನಾಟಕದ ಸ್ಥಿತಿಯು ಅಖಿಲ ಭಾರತ ಮಟ್ಟದಲ್ಲಿನ ಸ್ಥಿತಿಗಿಂತಲೂ ಉತ್ತಮವಾಗಿದೆ(**ನೋಡಿ ಸ್ಟೇಟ್ ಆಫ್ ಇಂಡಿಯಾನ್ ಪಾಪುಲೇಶನ್, ೧೯೯೮**).

ಶಿವಕುಮಾರ ಅವರು (೧೯೯೬), ಭಾರತ ಮತ್ತು ಅದರ ೧೫ ರಾಜ್ಯಗಳಿಗೆ ಮಾನವ ಅಭಿವೃದ್ಧಿ ಸೂಚ್ಯಂಕ ಮತ್ತು ಲಿಂಗ ಸಂಬಂಧಿ ಅಭಿವೃದ್ಧಿ ಸ್ಯೂಚಂಕ(ಜಿಡಿಐ)ಗಳನ್ನು ರಚಿಸಿದ್ದಾರೆ. ಲಿಂಗ ಸಂಬಂಧಿ ಅಭಿವೃದ್ಧಿ ಸೂಚ್ಯಂಕವನ್ನು ಜಗತ್ತಿನ ೧೩೦ ರಾಷ್ಟ್ರಗಳೊಂದಿಗೆ ಹೋಲಿಕೆ ಮಾಡಿದ್ದಾರೆ. ಅವರ ಅಧ್ಯಯನದಿಂದ ಹೊರಬಂದ ತಥ್ಯಗಳೆಂದರೆ, ಮಾನವ ಅಭಿವೃದ್ಧಿ ಸೂಚ್ಯಂಕ ಮತ್ತು ಲಿಂಗಸಂಬಂಧಿ ಅಭಿವೃದ್ಧಿ ಸೂಚ್ಯಂಕದ ಮೌಲ್ಯಗಳಲ್ಲಿ ಭಾರತದ ರಾಜ್ಯಗಳಲ್ಲಿ ಅಂತರ ಅಸಮಾನತೆಗಳಿವೆ. ಕೇರಳ, ಮಹಾರಾಷ್ಟ್ರ, ಗುಜರಾತ್ ರಾಜ್ಯಗಳು ಲಿಂಗಸಂಬಂಧಿ ಅಭಿವೃದ್ಧಿ

ಸೂಚ್ಯಂಕದಲ್ಲಿ ಗರಿಷ್ಟ ಮೌಲ್ಯ ಹೊಂದಿದ್ದರೆ, ಉತ್ತರ ಪ್ರದೇಶ, ಬಿಹಾರ, ಮಧ್ಯಪ್ರದೇಶ ಮತ್ತು ರಾಜಸ್ಥಾನಗಳು ಕನಿಷ್ಟ ಜಿಡಿಐ ಮೌಲ್ಯ ಹೊಂದಿದ್ದು, ಈ ರಾಜ್ಯಗಳು ತೀವ್ರತರವಾದ ಲಿಂಗಸಂಬಂಧಿ ತಾರತಮ್ಯದ ಸಮಸ್ಯೆಯನ್ನು ಎದುರಿಸುತ್ತಿವೆ. ಜಗತ್ತಿನ ೧೩ ರಾಷ್ಟ್ರಗಳು ಮಾತ್ರ ಬಿಹಾರ ಮತ್ತು ಉತ್ತರ ಪ್ರದೇಶಗಳಿಗಿಂತ ಕಡಿಮೆ ಜಿಡಿಐ ಮೌಲ್ಯ ಹೊಂದಿವೆ. ಜಗತ್ತಿನ ೧೭೫ ರಾಷ್ಟ್ರಗಳಲ್ಲಿ ೬೪ ರಾಷ್ಟ್ರಗಳು ಕೇರಳದ ಎಚ್‌ಡಿಐ ಮೌಲ್ಯಕ್ಕಿಂತ ಕಡಿಮೆ ಮೌಲ್ಯ ಪಡೆದಿವೆ. ಹಾಗೂ ಕೇವಲ ೨೪ ರಾಷ್ಟ್ರಗಳಲ್ಲಿ ಮಾತ್ರ ಹೆಚ್‌ಡಿಐ ಮೌಲ್ಯ ಉತ್ತರ ಪ್ರದೇಶದ ಹೆಚ್‌ಡಿಐ ಮೌಲ್ಯಕ್ಕಿಂತ ಕಡಿಮೆ ಇದೆ.[೧೩]

ಈ ಅಧ್ಯಯನ ತಿಳಿಸುವಂತೆ ಹಿಮಾಚಲ ಪ್ರದೇಶ, ಮಹಾರಾಷ್ಟ್ರ, ಕೇರಳ, ಗುಜರಾತ ಮತ್ತು ಕರ್ನಾಟಕ ರಾಜ್ಯಗಳಲ್ಲಿ ಮಾನವ ಅಭಿವೃದ್ಧಿ ಮತ್ತು ಲಿಂಗಸಂಬಂಧಿ ಅಭಿವೃದ್ಧಿ ಸೂಚ್ಯಂಕಗಳ ಮೌಲ್ಯದ ನಡುವೆ ಕನಿಷ್ಟ ಅಂತರವಿದೆ. ಆದರೆ ಹರಿಯಾಣ, ಪಂಜಾಬ್, ಉತ್ತರ ಪ್ರದೇಶ, ಬಿಹಾರ ಮತ್ತು ಪಶ್ಚಿಮಬಂಗಾಳ ರಾಜ್ಯಗಳಲ್ಲಿ ಈ ಎರಡು ಮೌಲ್ಯಗಳ ನಡುವೆ ಗರಿಷ್ಟಮಟ್ಟದ ಅಂತರವಿದೆ. ಹರಿಯಾಣ, ಪಂಜಾಬ್ ಮತ್ತು ಪಶ್ಚಿಮಬಂಗಾಳ ರಾಜ್ಯಗಳಲ್ಲಿ ವರಮಾನ ಗರಿಷ್ಠ ಪ್ರಮಾಣದಲ್ಲಿದ್ದರೂ, ಇವು ಲಿಂಗತಾರತಮ್ಯದ ಸಮಸ್ಯೆಯಿಂದ ಬಳಲುತ್ತಿವೆ. ಪಶ್ಚಿಮಬಂಗಾಳ ರಾಜ್ಯದಲ್ಲಿ ಪುರುಷ ಮಹಿಳೆಯರ ಅನುಪಾತ ಕಡಿಮೆಯಿರುವುದು ಮತ್ತು ಕೃಷಿಯೇತರ ವಲಯಗಳಲ್ಲಿ ಪುರುಷ ಮಹಿಳೆಯರ ಸರಾಸರಿ ಕೂಲಿಯಲ್ಲಿ ತಾರತಮ್ಯ ಇರುವುದರಿಂದ ಮೇಲಿನ ಎರಡು ಮೌಲ್ಯಗಳ ನಡುವೆ ಗರಿಷ್ಟ ಅಂತರವಿರುವುದಕ್ಕೆ ಪ್ರಮುಖ ಕಾರಣವಾಗಿದೆ ಎಂಬುದನ್ನು ಅಧ್ಯಯನ ಗುರುತಿಸಿದೆ. ಭಾರತದಲ್ಲಿ ಮಾನವ ಅಭಿವೃದ್ಧಿ ಮತ್ತು ಆರ್ಥಿಕ ಪ್ರಗತಿ ಸಾಧಿಸಬೇಕಾದರೆ, ಸಹಭಾಗಿತ್ವ ಅಭಿವೃದ್ಧಿಯನ್ನು ಪ್ರೋತ್ಸಾಹಿಸಿ, ಲಿಂಗತಾರತಮ್ಯವನ್ನು ಕಡಿಮೆ ಮಾಡಬೇಕೆಂದು ಈ ಅಧ್ಯಯನವು ತಿಳಿಸಿದೆ.

ಶಿವಕುಮಾರ್ ಅವರು ಭಾರತ ರಾಜ್ಯಗಳಿಗೆ ಲಿಂಗಸಂಬಂಧಿ ಅಭಿವೃದ್ಧಿ ಸೂಚ್ಯಂಕಗಳನ್ನು ರಚಿಸಿರುವಂತೆ ಮಾನವ ಅಭಿವೃದ್ಧಿ ಸೂಚ್ಯಂಕಗಳನ್ನು ಸಹ ರಚಿಸಿದ್ದಾರೆ. ಇಲ್ಲಿಯೂ ಸಹ ಕೇರಳ ಭಾರತದ ರಾಜ್ಯಗಳಲ್ಲಿ ಮೊದಲ ಸ್ಥಾನದಲ್ಲಿದೆ. ಬಿಹಾರ(೧೩ನೇ ಸ್ಥಾನ) ಮಧ್ಯಪ್ರದೇಶ (೧೪ನೇ ಸ್ಥಾನ) ಮತ್ತು ಉತ್ತರ ಪ್ರದೇಶ (೧೫ನೇ ಸ್ಥಾನ) ರಾಜ್ಯಗಳು ಕೊನೆಯ ಸ್ಥಾನದಲ್ಲಿದೆ.

೧೯೯೫ರ ಮಾನವ ಅಭಿವೃದ್ಧಿ ವರದಿಯು ಲಿಂಗ ಸಶಕ್ತೀಕರಣ ಮಾಪನ(GEM) ಅಭಿವೃದ್ಧಿ ಪಡಿಸಿದ ನಂತರ, ಭಾರತದ ರಾಜ್ಯಗಳಿಗೆ ಆ ರೀತಿಯ ಮಾಪನಗಳನ್ನು ರಚಿಸುವ ಪ್ರಯತ್ನಗಳು ನಡೆದಿವೆ. ಇವುಗಳಲ್ಲಿ ಇಂದಿರಾ (೧೯೯೬) ಆಶಾ(೧೯೯೬)ರವರ ಸಂಶೋಧನಾ ಅಧ್ಯಯನಗಳು ಪರ್ಯಾಯ ಲಿಂಗಸಶಕ್ತೀಕರಣ ಮಾಪನ ನೀಡಲು ಪ್ರಯತ್ನಿಸಿವೆ.

ಎರಡು ದಶಕಗಳ (೧೯೭೦-೯೧) ಅವಧಿಯಲ್ಲಿ ಭಾರತ ರಾಜ್ಯಗಳ ಮಾನವ ಅಭಿವೃದ್ಧಿಯಲ್ಲಿಯ ಅನುಭವಗಳನ್ನು ದತ್ತ (೧೯೯೭)ರವರ ಅಧ್ಯಯನವು ತಿಳಿಸುತ್ತದೆ. ಈ ಅಧ್ಯಯನವು ೧೯೭೦-೯೦ರ ಅವಧಿಯಲ್ಲಿ ರಾಷ್ಟ್ರದ ೧೭ ರಾಜ್ಯಗಳಲ್ಲಿಯ ಮಾನವ ಅಭಿವೃದ್ಧಿ

ಪ್ರವೃತ್ತಿಯನ್ನು (Pattern) ತಿಳಿಯುವ ಪ್ರಯತ್ನ ಮಾಡಿದೆ. ಈ ಅಧ್ಯಯನದ ತಥ್ಯಗಳೆಂದರೆ, ಎರಡು ದಶಕಗಳ ಅವಧಿಯಲ್ಲಿ ಭಾರತದ ರಾಜ್ಯಗಳು ಆರೋಗ್ಯ ಮತ್ತು ಶಿಕ್ಷಣ ರಂಗಗಳಲ್ಲಿ ಗಣನೀಯ ಮಟ್ಟದಲ್ಲಿ ಸಾಧನೆ ಮಾಡಿವೆ. ಕೇರಳ ರಾಜ್ಯವು ವರಮಾನದ ದೃಷ್ಟಿಯಲ್ಲಿ ಕೆಳಹಂತದಲ್ಲಿದ್ದರೂ, ಆರೋಗ್ಯ ಮತ್ತು ಶಿಕ್ಷಣಗಳ ಸಾಧನೆಯಲ್ಲಿ ಪ್ರಧಾನ ಸ್ಥಾನವನ್ನು ಪಡೆದಿವೆ. ಆರೋಗ್ಯ ಶಿಕ್ಷಣಗಳಲ್ಲಿಯ ಸಾಧನೆ ಮತ್ತು ತಲಾ ವರಮಾನಗಳ ನಡುವೆ ಕಡಿಮೆ ಸಹ-ಸಂಬಂಧ ಇರುವುದನ್ನು ಈ ಅಧ್ಯಯನ ದೃಢಪಡಿಸಿದೆ. ಆರೋಗ್ಯ ಮತ್ತು ಶಿಕ್ಷಣ ರಂಗಗಳ ಮೇಲಿನ ವೆಚ್ಚವು ಮಾನವ ಅಭಿವೃದ್ಧಿಯ ಸುಧಾರಣೆಯಲ್ಲಿ ಮಹತ್ತರವಾದುದು ಎಂಬುದನ್ನು ಈ ಅಧ್ಯಯನದ ರಿಗ್ರೇಷನ್ ವಿಶ್ಲೇಷಣೆ ತೋರಿಸುತ್ತದೆ.

ರಾಷ್ಟ್ರಮಟ್ಟದಲ್ಲಿ ಮಾನವ ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಜಡತೆ ಪ್ರವೃತ್ತಿ ಇರುವುದನ್ನು ಈ ಅಧ್ಯಯನ ಗುರುತಿಸಿದೆ. ಪ್ರಾದೇಶಿಕವಾಗಿ, ಪಶ್ಚಿಮ ರಾಜ್ಯಗಳಲ್ಲಿ, ಪಶ್ಚಿಮ ಬಂಗಾಳ ರಾಜ್ಯ ಮಾನವ ಅಭಿವೃದ್ಧಿಯಲ್ಲಿ ಮಧ್ಯಮ ಸ್ಥಾನದಲ್ಲಿದ್ದರೆ, ಇತರ ರಾಜ್ಯಗಳಾದ ಅಸ್ಸಾಂ, ಬಿಹಾರಗಳು ಮಾನವ ಅಭಿವೃದ್ಧಿಯಲ್ಲಿ ಕೆಳಹಂತದಲ್ಲಿವೆ. ದಕ್ಷಿಣ ರಾಜ್ಯಗಳು ನಂತರದ ಸ್ಥಾನದಲ್ಲಿ ಬರುತ್ತವೆ. ಎರಡು ದಶಕಗಳ ಅವಧಿಯಲ್ಲಿ ರಾಜ್ಯಗಳ ಸಾಪೇಕ್ಷ ಸ್ಥಿತಿಗಳಲ್ಲಿ ಕ್ಲಿಷ್ಟ ಬದಲಾವಣೆಯಾಗಿರುವುದನ್ನು ಈ ಅಧ್ಯಯನವು ತಿಳಿಸಿದೆ(The relative positions of the states have hardly changed over the decades) ಈ ಅಧ್ಯಯನದ ಪ್ರಕಾರ ಮಾನವ ಅಭಿವೃದ್ಧಿಯಲ್ಲಿ, ಭಾರತದ ೧೭ ರಾಜ್ಯಗಳಲ್ಲಿ, ಕರ್ನಾಟಕ ರಾಜ್ಯ ೮ನೇ ಸ್ಥಾನದಲ್ಲಿದೆ.

ಭಟ್ಟಾಚಾರ್ಯರರು (೧೯೯೮) ಸಾಕ್ಷರತೆ, ಶಿಶುಮರಣ ಪ್ರಮಾಣ ಮತ್ತು ವರಮಾನಗಳ ಮೂಲಕ ಪಶ್ಚಿಮ ಬಂಗಾಳದ ೧೬ ಜಿಲ್ಲೆಗಳಿಗೆ ಮತ್ತು ರಾಷ್ಟ್ರದ ೧೬ ರಾಜ್ಯಗಳಿಗೆ ಮಾನವ ಅಭಿವೃದ್ಧಿ ಸೂಚ್ಯಂಕಗಳನ್ನು ಪಶ್ಚಿಮಬಂಗಾಳ ರಾಜ್ಯದ ಜಿಲ್ಲೆ ಜಿಲ್ಲೆಗಳ ನಡುವೆ ಮಾನವ ಅಭಿವೃದ್ಧಿಯಲ್ಲಿ ಇರುವ ಪ್ರಾದೇಶಿಕ ಅಸಮಾನತೆಗಳನ್ನು ತಿಳಿಯುವುದು ಇವರ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ. ಈ ಅಧ್ಯಯನದ ಪ್ರಮುಖ ಫಲಿತಗಳೆಂದರೆ, ಭಾರತದ ರಾಜ್ಯಗಳಲ್ಲಿ ಮತ್ತು ಪಶ್ಚಿಮ ಬಂಗಾಳದ ಜಿಲ್ಲೆಗಳಲ್ಲಿ ಮಾನವ ಅಭಿವೃದ್ಧಿಗೆ ಸಂಬಂಧಿಸಿದಂತೆ ಪ್ರಾದೇಶಿಕ ಅಸಮಾನತೆಗಳಿವೆ. ಪಶ್ಚಿಮ ಬಂಗಾಳ ರಾಜ್ಯದಲ್ಲಿ (೧೯೯೧ಕ್ಕೆ) ಕಲ್ಕತ್ತ, ಹೌರಾ, ಹೂಗ್ಲಿ, ಬೂರ್ಡ್ವಾನ್ (Burdhan)ಜಿಲ್ಲೆಗಳು ಮಾನವ ಅಭಿವೃದ್ಧಿಯಲ್ಲಿ ಮೊದಲ ೪ ಸ್ಥಾನಗಳನ್ನು ಹೊಂದಿದ್ದರೆ, ಮಾಲಾಡಿ, ಮುರ್ಷಿದಾಬಾದ್, ಕೋಚ್‌ಬೇಹಾರ (Coachbehar) ಮತ್ತು ಪಶ್ಚಿಮ ದಿನಾಜಪುರ ಜಿಲ್ಲೆಗಳು ಕೊನೆಯ ೪ ಸ್ಥಾನಗಳನ್ನು ಪಡೆದಿವೆ. ಪಶ್ಚಿಮ ಬಂಗಾಳ ರಾಜ್ಯದ ಜಿಲ್ಲೆಗಳಲ್ಲಿ ವರಮಾನ ಮತ್ತು ಮಾನವ ಅಭಿವೃದ್ಧಿ ಎರಡರಲ್ಲಿಯೂ ದುಸ್ಥಿತಿ ಇರುವುದನ್ನು ಈ ಅಧ್ಯಯನ ಗುರುತಿಸಿದೆ. ಈ ಅಧ್ಯಯನದ ಪ್ರಕಾರ ೧೯೮೧-೯೧ರ ಅವಧಿಯಲ್ಲಿ ಮಾನವ ಅಭಿವೃದ್ಧಿ ಮತ್ತು ಆಂತರಿಕ ಉತ್ಪನ್ನದ ತಲಾವರಮಾನ (PCDP)ಗಳ ನಡುವಿನ ಸಂಬಂಧ ಕಡಿಮೆಯಾಗಿದೆ.

ಇವರ ಅಧ್ಯಯನದಿಂದ ಹೊರಬಂದ ಪ್ರಮುಖ ತಥ್ಯವೆಂದರೆ, ಗ್ರಾಮೀಣ ಜನಸಂಖ್ಯೆಯನ್ನು ಅಧಿಕ ಹೊಂದಿರುವ ಜಿಲ್ಲೆಗಳಲ್ಲಿ ಮಾನವ ಅಭಿವೃದ್ಧಿಯ ಮಟ್ಟ ಕಡಿಮೆ ಇರುತ್ತದೆ. ಭಾರತದಲ್ಲಿಯ ರಾಜ್ಯಗಳಿಗೆ ಸಂಬಂಧಿಸಿದಂತೆ ೧೯೮೧-೯೧ರ ಅವಧಿಯಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕ ಮತ್ತು ನಗರೀಕರಣ, ಪ್ರಾಥಮಿಕ ವಲಯದ ಕೊಡುಗೆಗಳೊಂದಿಗಿನ ಸಂಬಂಧವು ವಿಲೋಮವಾಗಿದೆ. ಆದರೆ ಪಶ್ಚಿಮ ಬಂಗಾಳದ ಜಿಲ್ಲೆಗಳಲ್ಲಿ ನಗರೀಕರಣ ಮತ್ತು ಮಾನವ ಅಭಿವೃದ್ಧಿಗಳ ನಡುವಿನ ಸಂಬಂಧವು ಅನುಲೋಮವಾಗಿದೆ. ಅಂದರೆ ಪಶ್ಚಿಮ ಬಂಗಾಳದ ಜಿಲ್ಲೆಗಳಲ್ಲಿ ಹೆಚ್ಚು ನಗರೀಕರಣ ಹೊಂದಿರುವ ಜಿಲ್ಲೆಗಳು ಗರಿಷ್ಠಮಟ್ಟದ ಮಾನವ ಅಭಿವೃದ್ಧಿ ಸೂಚ್ಯಂಕವನ್ನು ಹೊಂದಿದೆ. ತಲಾವರಮಾನ ಮತ್ತು ಮಾನವ ಅಭಿವೃದ್ಧಿ ಸೂಚ್ಯಂಕಗಳ ನಡುವಿನ ಸಹ ಸಂಬಂಧ ಗಟ್ಟಿಯಾಗಿಲ್ಲವೆಂದೂ, ದ್ವಿತೀಯ ಮತ್ತು ತೃತೀಯ ವಲಯಗಳು ಮತ್ತು ಮಾನವ ಅಭಿವೃದ್ಧಿಗಳ ನಡುವಿನ ಸಹ ಸಂಬಂಧ ಅನುಲೋಮವಾಗಿದೆ ಎಂಬುದನ್ನು ಈ ಅಧ್ಯಯನವು ತಿಳಿಸಿದೆ.

ಒಟ್ಟಿನಲ್ಲಿ ಈ ಎಲ್ಲಾ ಅಧ್ಯಯನಗಳಲ್ಲಿ ಕೇರಳ ರಾಜ್ಯ ಮಾನವ ಅಭಿವೃದ್ಧಿಯ ದೃಷ್ಟಿಯಿಂದ ರಾಷ್ಟ್ರದಲ್ಲಿ ಅಗ್ರಸ್ಥಾನದಲ್ಲಿದ್ದರೆ, ಬಹುತೇಕ BIMARU ರಾಜ್ಯಗಳು ಮಾನವ ಅಭಿವೃದ್ಧಿಯಲ್ಲಿ ಕೆಳಹಂತದಲ್ಲಿವೆ.

ಕರ್ನಾಟಕದಲ್ಲಿ ಮಾನವ ಅಭಿವೃದ್ಧಿ ಕುರಿತಂತೆ ಮುಖ್ಯವಾಗಿ ಎರಡು ಅಧ್ಯಯನಗಳು ನಡೆದಿವೆ. ಮೊದಲನೆಯದಾಗಿ ಕರ್ನಾಟಕ ಸರಕಾರದ ಯೋಜನಾ ವಿಭಾಗವು ರಾಜ್ಯದ ಜಿಲ್ಲೆಗಳಿಗೆ ಮಾನವ ಅಭಿವೃದ್ಧಿ ಸೂಚ್ಯಂಕಗಳನ್ನು ರಚಿಸಿದೆ. ಎರಡನೆಯದಾಗಿ ವಿನೋದ್ ವ್ಯಾಸಲು (೧೯೯೬)ರವರು ಸ್ವತಂತ್ರವಾಗಿ ರಾಜ್ಯದ ಜಿಲ್ಲೆಗಳಿಗೆ ಮಾನವ ಅಭಿವೃದ್ಧಿ ಸೂಚ್ಯಂಕಗಳನ್ನು ಅಭಿವೃದ್ಧಿಪಡಿಸಿದ್ದಾರೆ.

ವಾಣಿ ಮತ್ತು ವ್ಯಾಸಲು (೧೯೯೬)ರವರು ಕರ್ನಾಟಕದ ೧೯ ಜಿಲ್ಲೆಗಳಿಗೆ ಮಾನವ ಅಭಿವೃದ್ಧಿ ಸೂಚ್ಯಂಕಗಳನ್ನು ರಚಿಸಿದ್ದಾರೆ. ಸಾಕ್ಷರತೆ, ಜೀವನಾಯುಷ್ಯ ಮತ್ತು ವರಮಾನಗಳ ಕನಿಷ್ಠ ಮತ್ತು ಗರಿಷ್ಠ ಮೌಲ್ಯಗಳನ್ನು ಕರ್ನಾಟಕದ ಜಿಲ್ಲೆಗಳಿಂದ ಆಯ್ದು ಒಂದು ರೀತಿಯ ಮಾನವ ಅಭಿವೃದ್ಧಿಯ ಸೂಚ್ಯಂಕ ಅಭಿವೃದ್ಧಿ ಪಡಿಸಿದ್ದು, ಈ ಮೂರು ಚಲಕಗಳ ಮೌಲ್ಯಗಳನ್ನು ರಾಷ್ಟ್ರೀಯ ಮಟ್ಟದಿಂದ ಆರಿಸಿಕೊಂಡು ಎರಡನೆಯ ಮಾನವ ಅಭಿವೃದ್ಧಿ ಸೂಚ್ಯಂಕ ರಚಿಸಿದ್ದಾರೆ. ಇವರು ಒಟ್ಟು ಆರು ಪರ್ಯಾಯ ಮಾನವ ಅಭಿವೃದ್ಧಿ ಸೂಚ್ಯಂಕಗಳನ್ನು ರಚಿಸಿದ್ದಾರೆ. ಇವರ ಅಧ್ಯಯನದಿಂದ ಬಂದ ತಥ್ಯವೆಂದರೆ, ಮಾನವ ಅಭಿವೃದ್ಧಿಯಲ್ಲಿ ಕರ್ನಾಟಕ ರಾಜ್ಯದ ಜಿಲ್ಲೆ ಜಿಲ್ಲೆಗಳ ನಡುವೆ ಅಂತರಗಳಿವೆ. ಮಾನವ ಅಭಿವೃದ್ಧಿಯಲ್ಲಿ ದಕ್ಷಿಣ ಕನ್ನಡ ಮತ್ತು ಬೆಂಗಳೂರು ಜಿಲ್ಲೆಗಳು ರಾಜ್ಯದಲ್ಲಿ ಪ್ರಥಮ ಮತ್ತು ದ್ವಿತೀಯ ಸ್ಥಾನದಲ್ಲಿದ್ದರೆ, ಹೈದ್ರಾಬಾದ್-ಕರ್ನಾಟಕ ಪ್ರದೇಶದ ಗುಲ್ಬರ್ಗಾ, ಬಳ್ಳಾರಿ, ಬೀದರ್ ಮತ್ತು ರಾಯಚೂರು ಜಿಲ್ಲೆಗಳನ್ನು ಕ್ರಮವಾಗಿ ೧೫, ೧೭, ೧೮ ಮತ್ತು ೧೯ನೇ ಸ್ಥಾನದಲ್ಲಿವೆ. ಆರು ಪರ್ಯಾಯ ಮಾನವ ಅಭಿವೃದ್ಧಿ ಸೂಚ್ಯಂಕಗಳಲ್ಲಿ ಇವುಗಳ ಸ್ಥಾನ ಸರಿಸಮಾನವಾಗಿ ಏಕರೂಪತೆಯಿಂದ ಕೂಡಿದೆ. ಕರ್ನಾಟಕದಲ್ಲಿ ಅತಿಹೆಚ್ಚು

ಮಾನವ ಅಭಿವೃದ್ಧಿ ಮೌಲ್ಯ ಹೊಂದಿರುವ ಜಿಲ್ಲೆಗಳು, ರಾಷ್ಟ್ರದಲ್ಲಿಯೇ ಹೆಚ್ಚು ಮಾನವ ಅಭಿವೃದ್ಧಿ ಸೂಚ್ಯಂಕ ಮೌಲ್ಯ ಪಡೆದಿರುವ ಕೇರಳ ರಾಜ್ಯಕ್ಕೆ ಹೋಲಿಸಿದರೆ, ಅವು ಸಾಮಾನ್ಯ ಜಿಲ್ಲೆಗಳಾಗಿ ಬಿಡುತ್ತವೆ. ಈ ಜಿಲ್ಲೆಗಳನ್ನೇ ಜಾಗತಿಕ ಮಟ್ಟಕ್ಕೆ ಹೋಲಿಸಿದರೆ ತುಂಬಾ ಹಿಂದುಳಿದ ಜಿಲ್ಲೆಗಳಾಗಿ ಗೋಚರಿಸುತ್ತವೆ. ಮಾನವ ಅಭಿವೃದ್ಧಿಯಲ್ಲಿ ಕೆಳಹಂತದಲ್ಲಿರುವ ಜಿಲ್ಲೆಗಳನ್ನು ಕನಿಷ್ಠ ರಾಜ್ಯಮಟ್ಟಕ್ಕಾದರೂ ತರುವ ಅಗತ್ಯವಿದೆ ಎಂಬುದನ್ನು ಈ ಅಧ್ಯಯನ ಒತ್ತಿ ಹೇಳಿದೆ. ಇದಕ್ಕಾಗಿ ಮಾನವ ಅಭಿವೃದ್ಧಿಯ ಚಾಲಕಶಕ್ತಿಯಾಗಿರುವ ಶಿಕ್ಷಣದಲ್ಲಿ ಹೆಚ್ಚಿನ ಬಂಡವಾಳ ವಿನಿಯೋಗವಾಗಬೇಕಾಗಿದೆ. ಅದೇ ವೇಳೆಗೆ ಕಲ್ಯಾಣ ಯೋಜನೆಗಳ ನಡುವೆ ಅಗತ್ಯ ಸಂಯೋಜನೆ ಅವಶ್ಯಕತೆ ಇದೆ. ರಾಜ್ಯದಲ್ಲಿ ಮಾನವ ಅಭಿವೃದ್ಧಿ ಸುಧಾರಿಸಬೇಕಾದರೆ ರಾಜಕೀಯವಾಗಿ ನಿರಂತರವಾದ ಉತ್ತಮ ಬೆಂಬಲವು ಅವಶ್ಯಕ ಎಂದು ಈ ಅಧ್ಯಯನವು ಅಭಿಪ್ರಾಯಪಟ್ಟಿದೆ.[೧೪]

ಕರ್ನಾಟಕದಲ್ಲಿ ಮಾನವ ಅಭಿವೃದ್ಧಿ-೧೯೯೯ ವರದಿಯನ್ನು ಕರ್ನಾಟಕ ಸರಕಾರ ಪ್ರಕಟಿಸಿದೆ. ಈ ವರದಿಯು ರಾಜ್ಯದ ೨೦ ಜಿಲ್ಲೆಗಳಿಗೆ ಮಾನವ ಅಭಿವೃದ್ಧಿ ಮತ್ತು ಲಿಂಗಸಂಬಂಧಿ ಅಭಿವೃದ್ಧಿ ಸೂಚ್ಯಂಕಗಳನ್ನು ಸಿದ್ಧಪಡಿಸಿದೆ. ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಕೊಡಗು, ಬೆಂಗಳೂರು ನಗರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳು ಕ್ರಮವಾಗಿ ಮೊದಲ ಮೂರು ಸ್ಥಾನದಲ್ಲಿದ್ದರೆ, ಹೈದ್ರಾಬಾದ್ ಕರ್ನಾಟಕ ಪ್ರದೇಶದ ಬಳ್ಳಾರಿ, ಬೀದರ್, ಗುಲ್ಬರ್ಗಾ ಮತ್ತು ರಾಯಚೂರು ಜಿಲ್ಲೆಗಳು ಕೊನೆಯ ಸ್ಥಾನಗಳನ್ನು ಪಡೆದುಕೊಂಡಿವೆ. ಜಿಡಿಐ ದರ್ಜೆಗಳು, ಹೆಚ್‌ಡಿಐ ದರ್ಜೆಗಳನ್ನೇ ಬಹುತೇಕವಾಗಿ ಅನುಸರಿಸಿವೆ. ಉಪ ಸಹರಾ ಆಫ್ರಿಕನ್ ದೇಶಗಳ ಸಾಕ್ಷರತೆಗಿಂತಲೂ, ಹೈದ್ರಾಬಾದ್-ಕರ್ನಾಟಕ ಪ್ರದೇಶದ ಸಾಕ್ಷರತಾ ಪ್ರಮಾಣ ಕಡಿಮೆ ಎಂಬ ಸತ್ಯವನ್ನು ಈ ವರದಿ ಹೊರಹಾಕಿದೆ. ಮಾನವ ಅಭಿವೃದ್ಧಿಗೆ ಸಂಬಂಧಿಸಿದಂತೆ, ಜಾಗತಿಕ ಮಟ್ಟದಲ್ಲಿ ಭಾರತ ೧೩೪ನೇ ಸ್ಥಾನದಲ್ಲಿದ್ದರೆ, ಕರ್ನಾಟಕ ರಾಜ್ಯ ೧೩೧ನೇ ಸ್ಥಾನದಲ್ಲಿ ನಿಲ್ಲುತ್ತದೆ. ಜಾಗತಿಕ ಮಟ್ಟದಲ್ಲಿ ಹೈದ್ರಾಬಾದ್ ಕರ್ನಾಟಕ ಪ್ರದೇಶದ ನಾಲ್ಕು ಜಿಲ್ಲೆಗಳು ಅತ್ಯಂತ ಕೆಳಮಟ್ಟದ ಸ್ಥಾನಗಳನ್ನು ಪಡೆದಿರುವ ಜಿಲ್ಲೆಗಳಾಗಿವೆ ಎಂಬ ಕಳವಳಕಾರಿ ಸಂಗತಿಯನ್ನು ಕರ್ನಾಟಕದ ಮಾನವ ಅಭಿವೃದ್ಧಿ ವರದಿ ತೋರಿಸಿಕೊಟ್ಟಿದೆ. ಇದೇ ರೀತಿ ಜಿಡಿಐಗೆ ಸಂಬಂಧಿಸಿದಂತೆ ಕೊಡಗು ಜಾಗತಿಕ ಮಟ್ಟದಲ್ಲಿ ೬೫ನೇ ಸ್ಥಾನ ಪಡೆದಿದ್ದರೆ, ರಾಯಚೂರು ೧೦೧ನೇ ಸ್ಥಾನದಲ್ಲಿದೆ. ಕೊಡಗು, ಬೆಂಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳು ಕರ್ನಾಟಕದ ಮಟ್ಟಿಗೆ ಮೊದಲ ಸ್ಥಾನಗಳಲ್ಲಿ ಇರಬಹುದು. ಆದರೆ ಜಾಗತಿಕ ಮಟ್ಟದಲ್ಲಿ ಇವು 'ಮಧ್ಯಮ ಮಾನವ ಅಭಿವೃದ್ಧಿ' ಇರುವ ರಾಷ್ಟ್ರಗಳ ಗುಂಪಿಗೆ ಸೇರುತ್ತವೆ. ಹೈದ್ರಾಬಾದ್ ಕರ್ನಾಟಕ ಪ್ರದೇಶದ ಜಿಲ್ಲೆಗಳು ಕಡಿಮೆ ಮಾನವ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಸಾಲಿಗೆ ಸೇರ್ಪಡೆಗೊಳ್ಳುತ್ತವೆ. ಕರ್ನಾಟಕ ಸರಕಾರ ಹೊರತಂದಿರುವ ಮಾನವ ಅಭಿವೃದ್ಧಿ-೧೯೯೯ ವರದಿಯು ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಮಾನವ ಅಭಿವೃದ್ಧಿಯಲ್ಲಿ ಪ್ರಾದೇಶಿಕ ಅಸಮಾನತೆಗಳಿವೆ ಎಂಬುವುದನ್ನು ಸ್ಪಷ್ಟವಾಗಿ ತೋರಿಸಿವೆ. ಈ ವರದಿ ತಿಳಿಸುವಂತೆ, ಬೆಳಗಾವಿ ವಿಭಾಗದ ವಿಜಾಪುರ ಜಿಲ್ಲೆ ಗುಲ್ಬರ್ಗಾ ವಿಭಾಗದ ನಾಲ್ಕು ಜಿಲ್ಲೆಗಳು ಜನಸಂಖ್ಯೆ ಸಂಬಂಧಪಟ್ಟ

ಸಾಮಾಜಿಕ ಮತ್ತು ಆರೋಗ್ಯ ಸೂಚ್ಯಂಕಗಳಲ್ಲಿ ಅತ್ಯಂತ ಹಿಂದುಳಿದ ಪ್ರದೇಶಗಳಾಗಿವೆ. ಈ ವರದಿಯು ರಾಜ್ಯದಲ್ಲಿ ಆರೋಗ್ಯ ಕುರಿತಂತೆ ೧೧ ಸಮಸ್ಯೆಗಳನ್ನು ಗುರುತಿಸಿದ್ದು, ಅವುಗಳ ಸುಧಾರಣೆಗೆ ಶಿಫಾರಸ್ಸು ಸಹ ನೀಡಿದೆ.[೧೫]

ವಿನೋದ್ ವ್ಯಾಸಲು ಅಭಿವೃದ್ಧಿ ಪಡಿಸಿರುವ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ದಕ್ಷಿಣ ಕನ್ನಡ ಜಿಲ್ಲೆ ರಾಜ್ಯದಲ್ಲಿ ಮೊದಲ ಸ್ಥಾನದಲ್ಲಿದ್ದರೆ, ಕರ್ನಾಟಕದ ಮಾನವ ಅಭಿವೃದ್ಧಿ ವರದಿಯಲ್ಲಿ ಕೊಡಗು ಜಿಲ್ಲೆ ಮೊದಲ ಸ್ಥಾನದಲ್ಲಿದೆ. ವ್ಯಾಸಲು ಅವರ ಅಧ್ಯಯನದಲ್ಲಿ ಕೊಡಗು ಮೂರನೇ ಸ್ಥಾನದಲ್ಲಿದೆ. ಹೀಗೆ ಈ ಎರಡು ಅಧ್ಯಯನಗಳ ನಡುವೆ ರಾಜ್ಯದ ಸ್ಥಾನಗಳಲ್ಲಿ ಕೆಲವೊಂದು ವ್ಯತ್ಯಾಸಗಳು ಕಂಡುಬಂದಿವೆ.

ಆರೋಗ್ಯ ಸಂಬಂಧಿ ಅಧ್ಯಯನಗಳ ಸಮೀಕ್ಷೆ

ಮಾನವ ಅಭಿವೃದ್ಧಿ ವಿಚಾರ ಪ್ರಣಾಳಿಕೆಯಲ್ಲಿ ಆರೋಗ್ಯ ಮಹತ್ವದ ಸ್ಥಾನವನ್ನು ಪಡೆದಿದೆ. ಜೀವನಾಯುಷ್ಯ, ಶಿಶುಗಳ ಮರಣ ಪ್ರಮಾಣ ಮುಂತಾದವುಗಳು ಆರೋಗ್ಯ ಭಾಗ್ಯವನ್ನು ತಿಳಿಸುವ ಪ್ರಮುಖ ಸೂಚಿಗಳಾಗಿವೆ. ಆರೋಗ್ಯವು ಎಲ್ಲ ಪ್ರದೇಶ, ಕಾಲಗಳಲ್ಲಿ ಏಕರೂಪತೆಯಿಂದ ಕೂಡಿರುವುದಿಲ್ಲ. ಆರೋಗ್ಯಕ್ಕೆ ಸಂಬಂಧಿಸಿದ ಹಲವು ಸೂಚಿಗಳಲ್ಲಿ ಪ್ರಾದೇಶಿಕ ಅಂತರಗಳಿರುವುದನ್ನು ಮತ್ತು ಅವುಗಳ ಪ್ರವೃತ್ತಿಯನ್ನು ಅಧ್ಯಯನಗಳು ತಿಳಿಸಿವೆ. ಅಂತಹ ಕೆಲವು ಪ್ರಮುಖ ಅಧ್ಯಯನಗಳ ಫಲಿತಗಳನ್ನು ಇಲ್ಲಿ ನೀಡಲಾಗಿದೆ.

ಮಾನವ ಅಭಿವೃದ್ಧಿ ವರದಿ ೧೯೯೭ರಲ್ಲಿ ಜಗತ್ತಿನ ವಿವಿಧ ರಾಷ್ಟ್ರಗಳಲ್ಲಿಯ ಆರೋಗ್ಯದ ಕೆಲವು ಮುಖ್ಯ ಸೂಚಿಗಳೊಂದಿಗೆ ಅವುಗಳಲ್ಲಿ ಉಂಟಾಗುತ್ತಿರುವ ಪ್ರವೃತ್ತಿ ಮತ್ತು ಬದಲಾವಣೆಗಳನ್ನು ಸಹ ನೀಡಲಾಗಿದೆ. ಈ ವರದಿಯ ಪ್ರಕಾರ ೧೯೬೦-೧೯೯೫ರ ಅವಧಿಯಲ್ಲಿ ಜೀವನಾಯುಷ್ಯ ಮತ್ತು ಶಿಶುಮರಣ ಪ್ರಮಾಣ ಕುರಿತಂತೆ, 'ಕೈಗಾರಿಕಾಭಿವೃದ್ಧಿ ಹೊಂದಿದ ರಾಷ್ಟ್ರಗಳು ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳ ನಡುವೆ; ಮತ್ತು ಕನಿಷ್ಟ ಅಭಿವೃದ್ಧಿ ಹೊಂದಿದ ಮತ್ತು ಕೈಗಾರಿಕಾಭಿವೃದ್ಧಿ ಹೊಂದಿರುವ ರಾಷ್ಟ್ರಗಳ ನಡುವಿನ ಅಂತರಗಳು ಕಡಿಮೆಯಾಗಿವೆ. ಆದರೆ, ಪಶ್ಚಿಮ ಏಷ್ಯಾ ಮತ್ತು ದಕ್ಷಿಣ ಏಷ್ಯಾ ರಾಷ್ಟ್ರಗಳ ನಡುವಿನ ಅಂತರಗಳು ತೀವ್ರಗೊಂಡಿವೆ(ಹೆಚ್‌ಡಿಆರ್, ೧೯೯೭; ೨೨೪).

ಮಾನವ ಅಭಿವೃದ್ಧಿ ವರದಿ ೧೯೯೭ರ ಪ್ರಕಾರ ಶಿಶುಮರಣ ಪ್ರಮಾಣ ಕುರಿತಂತೆ, ೧೯೬೦-೧೯೯೫ರ ಅವಧಿಯಲ್ಲಿ ದಕ್ಷಿಣಾ ಏಷ್ಯಾ ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳ ನಡುವಿನ ಅಂತರಗಳು ಕಡಿಮೆಯಾಗುತ್ತ ನಡೆದಿವೆ. ಆದರೆ ಹಕ್ ಅವರ ೧೯೯೭ ಮತ್ತು ೧೯೯೮ರ ದಕ್ಷಿಣಾ ಏಷ್ಯಾ ರಾಷ್ಟ್ರಗಳ ಮಾನವ ಅಭಿವೃದ್ಧಿ ಕುರಿತಾದ ಅಧ್ಯಯನಗಳಲ್ಲಿ ಅಭಿವೃದ್ಧಿ ಶೀಲ ರಾಷ್ಟ್ರಗಳು ಮತ್ತು ದಕ್ಷಿಣಾ ಏಷ್ಯಾ ರಾಷ್ಟ್ರಗಳ ನಡುವೆ ಅಂತರಗಳು ಶಿಶುಮರಣ ಪ್ರಮಾಣಕ್ಕೆ ಸಂಬಂಧಿಸಿದಂತೆ ಹೆಚ್ಚಾಗಿವೆ(ಹಕ್, ೧೯೯೭;೧೪೭ ಮತ್ತು ೧೭೯).

ಎಕಾನಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ ಫೌಂಡೇಶನ್ (೧೯೯೪)ರವರು ಭಾರತದಲ್ಲಿ ವಿವಿಧ ಕಾಲಾವಧಿಯಲ್ಲಿರುವ ಆರ್ಥಿಕ, ಸಾಮಾಜಿಕ ಅಭಿವೃದ್ಧಿಯ ಅಂಕಿ-ಅಂಶಗಳನ್ನು ನೀಡಿದ್ದಾರೆ. ಇದರ ಪ್ರಕಾರ ೧೯೫೦-೫೧ಕ್ಕೆ ಮಹಿಳೆಯರಿಗಿಂತ ಪುರುಷರೇ ಅಧಿಕ ವರ್ಷ ಜೀವಿಸುತ್ತಿದ್ದರು. ಆದರೆ ೯೧-೯೨ರ ವೇಳೆಗೆ ಮಹಿಳೆಯರೇ ಪುರುಷರಿಗಿಂತ ಹೆಚ್ಚು ಕಾಲ ಬದುಕುಳಿಯುತ್ತಿದ್ದಾರೆ. ೧೯೭೦-೭೧ ಮತ್ತು ೧೯೯೪-೯೫ರ ಅವಧಿಯಲ್ಲಿ, ಶಿಶುಮರಣ ಪ್ರಮಾಣದಲ್ಲಿ ಗ್ರಾಮೀಣ-ನಗರ ಅಸಮಾನತೆಗಳು ಕಡಿಮೆಯಾಗಿವೆ. ಆದರೆ ಇದೇ ಅವಧಿಯಲ್ಲಿ, ಸಂತಾನೋತ್ಪತ್ತಿ ಪ್ರಮಾಣಕ್ಕೆ ಸಂಬಂಧಿಸಿದಂತೆ, ನಗರ-ಗ್ರಾಮೀಣ ಅಸಮಾನತೆಗಳು ತೀವ್ರಗೊಂಡಿವೆ.

ನಾರಾಯಣ (೧೯೯೭) ಅವರು ಭಾರತದ ರಾಜ್ಯಗಳಲ್ಲಿ ಆರೋಗ್ಯ ಮತ್ತು ಶಿಕ್ಷಣದಲ್ಲಿರುವ ಪ್ರಾದೇಶಿಕ ಅಸಮಾನತೆಗಳ ಅಧ್ಯಯನ ನಡೆಸಿದ್ದಾರೆ. ಅಧ್ಯಯನಕ್ಕಾಗಿ ೧೯೬೧-೧೯೮೧ರ ಅವಧಿಯನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಇವರು ಆರೋಗ್ಯ ಅಭಿವೃದ್ಧಿಯ ಸಂಯುಕ್ತ ಸೂಚ್ಯಂಕವನ್ನು (Composite Index of Health Development) ರಚಿಸಿದ್ದಾರೆ. ಇವರ ಅಧ್ಯಯನವು "ಭಾರತದಲ್ಲಿ ಆರೋಗ್ಯ ಸೇವಾ ವಲಯದಲ್ಲಿ ಅಧಿಕ ಪ್ರಾದೇಶಿಕ ಅಸಮಾನತೆಗಳಿದ್ದು, ೧೯೬೧-೮೧ರ ಅವಧಿಯಲ್ಲಿ ಆರೋಗ್ಯ ವಲಯದಲ್ಲಿರುವ ಅಸಮಾನತೆಯ ಅಂತರಗಳು ತೀವ್ರಗೊಂಡಿದೆ ಎಂಬುದನ್ನು ತಿಳಿಸಿದೆ" (ನಾರಾಯಣ, ೧೯೯೭:೧೧೮). "ಎರಡು ದಶಕಗಳ ಅವಧಿಯಲ್ಲಿ (೧೯೭೦-೯೦) ಭಾರತದಲ್ಲಿಯ ರಾಜ್ಯಗಳಲ್ಲಿ ಆರೋಗ್ಯಕ್ಕೆ ಸಂಬಂಧಿಸಿದ ಪ್ರಾದೇಶಿಕ ಅಸಮಾನತೆಗಳು ಕಿರಿದಾಗುವಂತೆ ತೋರುತ್ತಿಲ್ಲ" ಎಂಬುದು ದತ್ತ (೧೯೯೧) ಅವರ ಅಧ್ಯಯನದ ಫಲಿತವಾಗಿದೆ. ರಾವ್ (೧೯೯೯)ರವರು ಪ್ರತಿ ಜನಸಂಖ್ಯೆಗೆ ಆಸ್ಪತ್ರೆಗಳು, ವೈದ್ಯರುಗಳು ಮತ್ತು ಹಾಸಿಗೆಗಳ ಸಂಖ್ಯೆಗಳನ್ನು ಆರೋಗ್ಯ ಸೂಚಿಯಾಗಿ ಆಯ್ದುಕೊಂಡು, ಆಂಧ್ರಪ್ರದೇಶ ರಾಜ್ಯದಲ್ಲಿ ಪ್ರಾದೇಶಿಕ ಅಸಮಾನತೆಯ ಅಧ್ಯಯನ ಮಾಡಿದ್ದಾರೆ. ೧೯೮೦-೮೧ರಿಂದ ೧೯೯೫-೯೬ ಇವರ ಅಧ್ಯಯನ ಅವಧಿಯಾಗಿದೆ. ಈ ಅವಧಿಯಲ್ಲಿ ಆಂಧ್ರಪ್ರದೇಶದ ಜಿಲ್ಲೆ, ಜಿಲ್ಲೆಗಳ ನಡುವಿನ ಅಂತರಗಳು ಕಡಿಮೆಯಾಗುತ್ತಿದ್ದು, ರಾಜ್ಯದ ಆರು ವಲಯಗಳ ನಡುವಿರುವ ಅಂತರಗಳಲ್ಲಿ ಯಾವ ಬದಲಾವಣೆಗಳು ಆಗಿಲ್ಲ. ಮನ್ನ (೧೯೯೮) ೧೯೬೧-೬೬ರಿಂದ ೧೯೯೦-೯೨ರವರೆಗಿನ ಭಾರತದ ೧೫ ರಾಜ್ಯಗಳ ಸಂತಾನೋತ್ಪತ್ತಿ ಪ್ರಮಾಣದ ಪ್ರವೃತ್ತಿಯ ಅಧ್ಯಯನದೊಂದಿಗೆ, ಸಂತಾನೋತ್ಪತ್ತಿ ಪ್ರಮಾಣದ ಇಳಿಕೆಯಲ್ಲಿ ಪ್ರಭಾವ ಬೀರುವ ಅಂಶಗಳನ್ನು ಗುರುತಿಸುವ ಪ್ರಯತ್ನ ಮಾಡಿದ್ದಾರೆ. ಈ ಅಧ್ಯಯನದ ಪ್ರಕಾರ ಭಾರತದ ರಾಜ್ಯಗಳಲ್ಲಿ ೧೯೯೧-೯೨ರ ಅವಧಿಯಲ್ಲಿ ಒಟ್ಟು ಸಂತಾನೋತ್ಪತ್ತಿ ಪ್ರಮಾಣದಲ್ಲಿ ಇಳಿಮುಕವಾಗುತ್ತ ನಡೆದಿದೆ. ಆದರೆ ಇಳಿಮುಖ ಪ್ರಮಾಣದಲ್ಲಿ ಪ್ರಾದೇಶಿಕ ಅಸಮಾನತೆಗಳಿವೆ. ಕೇರಳ ಮತ್ತು ತಮಿಳುನಾಡುಗಳಲ್ಲಿ ಸಂತಾನೋತ್ಪತ್ತಿ ಪ್ರಮಾಣ ತೀವ್ರಗತಿಯಲ್ಲಿ ಇಳಿಮುಖವಾಗುತ್ತಿದ್ದರೆ BIMARU ರಾಜ್ಯಗಳಲ್ಲಿ ಇಳಿಕೆಯ ಪ್ರಮಾಣ ಮಂದಗತಿಯಲ್ಲಿದೆ. ಇಲ್ಲಿ ಪ್ರಾದೇಶಿಕ ಅಸಮಾನತೆಗಳು ತೀವ್ರವಾಗುತ್ತಿವೆಯೋ ಅಥವಾ ಕುಗ್ಗುತ್ತವೆಯೋ ಎಂಬುವುದರ ಬಗ್ಗೆ ಸ್ಪಷ್ಟವಾಗಿ ಹೇಳಿಲ್ಲವಾದರೂ, ಸಂತಾನೋತ್ಪತ್ತಿ ಪ್ರಮಾಣದಲ್ಲಿ ಅಭಿವೃದ್ಧಿ ಹೊಂದಿದ ಮತ್ತು

ಹಿಂದುಳಿದ ರಾಜ್ಯಗಳ ನಡುವಿನ ಪ್ರಾದೇಶಿಕ ಅಸಮಾನತೆಗಳು ತೀವ್ರಗೊಳ್ಳುತ್ತಿವೆ ಎಂಬುದು ಪರೋಕ್ಷವಾಗಿ ತಿಳಿಯುತ್ತದೆ.

ಅಂಥೋನಿ ಮತ್ತಿತರರು (೧೯೯೯) ೧೯೭೪-೯೦ರ ಅವಧಿಯಲ್ಲಿ ಭಾರತದ ರಾಜ್ಯಗಳಲ್ಲಿ ಸಂತಾನೋತ್ಪತ್ತಿ ಮತ್ತು ಶಿಶು ಪ್ರಮಾಣದಲ್ಲಿಯ (ಪ್ರವೃತ್ತಿ) ಬದಲಾವಣೆಗಳನ್ನು ಗುರುತಿಸಿದ್ದಾರೆ. ಇವರ ಅಧ್ಯಯನದ ಫಲಿತಗಳು ಸಹ ಮನ್ನರವರ ಅಧ್ಯಯನದ ಫಲಿತಕ್ಕೆ ಪೂರಕವಾಗಿವೆ. ಇವರು ರಾಜ್ಯಗಳನ್ನು, ಅಧಿಕ, ಮಧ್ಯಮ ಮತ್ತು ಕಡಿಮೆ ಸಂತಾನೋತ್ಪತ್ತಿ ಪ್ರಮಾಣ ಮತ್ತು ಶಿಶುಮರಣ ಪ್ರಮಾಣವಿರುವ ರಾಜ್ಯಗಳೆಂದು ವಿಂಗಡಿಸಿದ್ದಾರೆ. ೧೯೭೪-೯೦ರ ಅವಧಿಯಲ್ಲಿ ಅಧಿಕ ಶಿಶುಮರಣ ಮತ್ತು ಸಂತಾನೋತ್ಪತ್ತಿ ಪ್ರಮಾಣ ಹೊಂದಿರುವ ರಾಜ್ಯಗಳ ನಿರ್ವಹಣೆ ಕೀಳಾಗಿದ್ದರೆ, ಮಧ್ಯಮದಲ್ಲಿರುವ ರಾಜ್ಯಗಳ ನಿರ್ವಹಣೆಯಲ್ಲಿ ವ್ಯತ್ಯಾಸಗಳಿವೆ. ಕಡಿಮೆ ಶಿಶುಮರಣ ಮತ್ತು ಸಂತಾನೋತ್ಪತ್ತಿ ಪ್ರಮಾಣ ಹೊಂದಿರುವ ಕೇರಳ ರಾಜ್ಯದ ನಿರ್ವಹಣೆ ಮಾತ್ರ ಅತ್ಯುತ್ತಮವಾದ್ದಾಗಿದೆ. ಅಧ್ಯಯನ ಅವಧಿಯಲ್ಲಿ ವರಮಾನದ ಹೆಚ್ಚಳವು, ಶಿಶುಮರಣ ಪ್ರಮಾಣದಲ್ಲಿ ಶೇ.೨೬ರಷ್ಟು, ಸಂತಾನೋತ್ಪತ್ತಿಯಲ್ಲಿ ಶೇ.೪೦ರಷ್ಟು ಕಡಿಮೆ ಮಾಡಲು ಸಾಧ್ಯವಾಗಿದೆ. ಕೊಯ್ಲಿ (೧೯೭೭)ರವರ ಅಧ್ಯಯನವು ೧೯೫೧-೭೧ರ ಅವಧಿಯಲ್ಲಿ ಭಾರತದ ರಾಜ್ಯಗಳ ನಡುವೆ ಇರುವ ಮರಣ ಪ್ರಮಾಣ ಮತ್ತು ಜೀವಾನುಯುಷ್ಯಗಳಲ್ಲಿ ವ್ಯತ್ಯಾಸವಿರುವುದನ್ನು ತಿಳಿಸಿದೆ. ಭಾರತದಲ್ಲಿ ಅಸ್ಸಾಂ, ಬಿಹಾರ್, ಉತ್ತರ ಪ್ರದೇಶ ಮತ್ತು ಆಂಧ್ರಪ್ರದೇಶಗಳಲ್ಲಿ ಮರಣ ಪ್ರಮಾಣ ಅಧಿಕವಿದ್ದರೆ, ಪಂಜಾಬ್, ರಾಜಸ್ಥಾನ, ಕೇರಳ, ಮಹಾರಾಷ್ಟ್ರ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ಅದು ಕಡಿಮೆ ಇದೆ. ಭಾರತದ ರಾಜ್ಯಗಳಲ್ಲಿ ಮರಣ ಪ್ರಮಾಣ ಕಡಿಮೆಯಾಗುತ್ತಿದ್ದು, ಜೀವಾನುಯುಷ್ಯ ಅಧಿಕಗೊಳ್ಳುತ್ತಿದೆ. ಈ ಅಧ್ಯಯನವು ಮರಣ ಪ್ರಮಾಣ ಮತ್ತು ಜೀವಾನುಯುಷ್ಯಗಳಲ್ಲಿ ಪ್ರಾದೇಶಿಕ ಅಸಮಾನತೆಗಳು ಕುಗ್ಗುತ್ತಿವೆಯೋ ಅಥವಾ ತೀವ್ರಗೊಳ್ಳುತ್ತಿವೆಯೋ ಎಂಬುವುದರ ಬಗ್ಗೆ ಏನನ್ನು ಹೇಳಿಲ್ಲ.

ಜೇಮ್ಸ್(೧೯೯೯)ರವರ ಅಧ್ಯಯನ ಆಂಧ್ರಪ್ರದೇಶ ರಾಜ್ಯದಲ್ಲಿರುವ ಪ್ರಾದೇಶಿಕ ಅಸಮಾನತೆಗಳನ್ನು ಗುರುತಿಸಿದೆ. ಈ ಅಧ್ಯಯನ ಪ್ರಕಾರ ಈ ರಾಜ್ಯದ ತೆಲಂಗಾಣ ಮತ್ತು ರಾಯಲ್ ಸೀಮಾ ಪ್ರದೇಶಗಳು, ಕರಾವಳಿ ಆಂಧ್ರಪ್ರದೇಶಕ್ಕಿಂತಲೂ ಹಿಂದುಳಿದ ಪ್ರದೇಶಗಳಾಗಿವೆ. ಈ ಮೂರು ಪ್ರದೇಶಗಳಲ್ಲಿ ಸಂತಾನೋತ್ಪತ್ತಿ ಪ್ರಮಾಣವು ೧೯೭೪-೯೦ರ ಅವಧಿಯಲ್ಲಿ ಇಳಿಕೆಯಾಗಿದೆ. ಕರಾವಳಿ ಆಂಧ್ರಪ್ರದೇಶದಲ್ಲಿ ಅನಕ್ಷರಸ್ಥ ಮಹಿಳೆಯರಲ್ಲಿಯೂ ಸಹ ಸಂತಾನೋತ್ಪತ್ತಿಯ ಪ್ರಮಾಣದಲ್ಲಿ ಇಳಿಕೆ ಕಂಡುಬಂದಿದೆ. ಈ ಪ್ರದೇಶದಲ್ಲಿ ಸಮೂಹ ಮಾಧ್ಯಮಗಳು ಸುದ್ಧಿಮಾಧ್ಯಮಗಳು ಮತ್ತು ಆಸ್ತಿಯ ಒಡೆತನಗಳು ಸಂತಾನೋತ್ಪತ್ತಿಯ ಇಳಿಕೆಯಲ್ಲಿ ಪ್ರಭಾವ ಬೀರಿರುವ ಅಂಶಗಳಾಗಿವೆ. ಆದರೆ ತೆಲಂಗಾಣ ಮತ್ತು ರಾಯಲ್ ಸೀಮಾ ಪ್ರದೇಶಗಳಲ್ಲಿ ತಾಯಂದಿರ ಶಿಕ್ಷಣ, ಮಹಿಳೆಯರ ದುಡಿಮೆಯ ಸಹಭಾಗಿತ್ವ, ಕಾರ್ಮಿಕ ಸಂಘಟನೆಗಳು ಸಂತಾನೋತ್ಪತ್ತಿ ಪ್ರಮಾಣದಲ್ಲಿ ಇಳಿಕೆಯಾಗಲು ಪ್ರಭಾವ ಬೀರಿರುವ ಸಂಗತಿಗಳಾಗಿವೆ. ಆದರೆ ಈ ಅಧ್ಯಯನ ಸಹ ಆಂಧ್ರಪ್ರದೇಶದಲ್ಲಿ ಪ್ರಾದೇಶಿಕ ಅಸಮಾನತೆಗಳು ಏನಾಗುತ್ತಿವೆ ಎಂಬುವುದನ್ನು ತಿಳಿಸಿಲ್ಲ.

ರಾಜೇಶ್ವರಿ(೧೯೯೬)ರವರ ಪ್ರಬಂಧವು ಆರೋಗ್ಯಕ್ಕೆ ಸಂಬಂಧಿಸಿದಂತೆ ಹರಿಯಾಣ ರಾಜ್ಯದಲ್ಲಿರುವ ಅಂತರ-ಅಸಮಾನತೆಗಳ ಕುರಿತಂತೆ ಆಗಿದೆ. ಹರಿಯಾಣ ರಾಜ್ಯದ ಪಶ್ಚಿಮ ಜಿಲ್ಲೆಗಳು ಉತ್ತಮ ಆರೋಗ್ಯ ಸೌಲಭ್ಯಗಳನ್ನು ಹೊಂದಿದ್ದರೆ, ಹೆಚ್ಚು ಕೃಷಿಯಾಧಾರಿತ ಇತರೆ ಜಿಲ್ಲೆಗಳು ಆರೋಗ್ಯದ ದೃಷ್ಟಿಯಿಂದ ಹೆಚ್ಚು ಉತ್ತಮ ಸ್ಥಿತಿಯಲ್ಲಿಲ್ಲ. ಈ ಪ್ರಬಂಧವು ಪ್ರಾದೇಶಿಕ ಅಸಮಾನತೆಯ ಪ್ರವೃತ್ತಿ ಕುರಿತಂತೆ ಹೆಚ್ಚಿನ ಬೆಳಕನ್ನು ಚೆಲ್ಲಿಲ್ಲ.೧೬ ಜಾರ್ಜ್ (೧೯೯೩)ರವರ ಅಧ್ಯಯನವು ಮಹಾರಾಷ್ಟ್ರ ರಾಜ್ಯದ ಅಭಿವೃದ್ಧಿಯಲ್ಲಿ ಪ್ರಾದೇಶಿಕ ಅಸಮಾನತೆಗಳಿರುವುದನ್ನು ಪ್ರಕಟಪಡಿಸಿದೆ. ಮರಾಠವಾಡ ಮತ್ತು ವಿದರ್ಭ ವಲಯಗಳಲ್ಲಿ ಬರುವ ಔರಂಗಬಾದ್, ಅಮರಾವತಿ ಮತ್ತು ನಾಘಪುರ ವಿಭಾಗಗಳು ಸಾಪೇಕ್ಷವಾಗಿ, ದಕ್ಷಿಣ ಮಹಾರಾಷ್ಟ್ರ ವಲಯದಲ್ಲಿ ಬರುವ ಕೊಂಕಣ, ನಾಸಿಕ್ ಮತ್ತು ಪುಣೆ ವಿಭಾಗಗಳಿಗಿಂತಲೂ ಆರ್ಥಿಕವಾಗಿ ಹಿಂದುಳಿದಿವೆ. ರಸ್ತೆ ಸಾರಿಗೆ ಮತ್ತು ಭೂ ಹಿಡುವಳಿಗಳ ಸ್ವರೂಪವು ಈ ಅಸಮತೋಲನ ಅಭಿವೃದ್ಧಿಗೆ ಕಾರಣವೆಂದು ಈ ಅಧ್ಯಯನ ಗುರುತಿಸಿದೆ. ಈ ಅಧ್ಯಯನವು ಪ್ರಾದೇಶಿಕ ಅಸಮಾನತೆಗಳಿಗೆ ಕಾರಣ ಮತ್ತು ಪರಿಹಾರಗಳನ್ನು ಹುಡುಕಲು ಪ್ರಯತ್ನಪಟ್ಟಿದೆ ಹೊರತು, ಅಸಮಾನತೆಯ ಅಂತರಗಳು ಕುಗ್ಗುತ್ತಿವೆಯೋ ಅಥವಾ ತೀವ್ರವಾಗುತ್ತಿವೆಯೋ ಎಂಬುವುದರ ಬಗ್ಗೆ ಹೆಚ್ಚಿನ ಸ್ಪಷ್ಟತೆಯನ್ನು ನೀಡಿಲ್ಲ.

ಭಾರತದಲ್ಲಿ ಮಾನವ ಅಭಿವೃದ್ಧಿ ದೃಷ್ಟಿಯಿಂದ ಮುಂಚೂಣಿಯಲ್ಲಿರುವ ರಾಜ್ಯವೆಂದರೆ ಕೇರಳ, ಭಾರತ ಮತ್ತು ಕೇರಳ ರಾಜ್ಯಗಳ ನಡುವೆ ೧೯೧೧-೨೦, ೧೯೯೦-೯೨ ಅವಧಿಯಲ್ಲಿ ಪುರುಷ ಮತ್ತು ಮಹಿಳೆಯರ ಜೀವಾನುಯುಷ್ಯ ಮತ್ತು ಶಿಶುಮರಣ ಪ್ರಮಾಣದಲ್ಲಿಯ ಅಂತರಗಳು ತೀವ್ರಗೊಂಡಿವೆ (**ನೋಡಿ: ಡ್ರೀಜೆ ಮತ್ತು ಸೇನ್, ೧೯೯೬; ೨೨೯, ಕೋಷ್ಟಕ ೧೦**) ಆದರೆ ಕೇರಳ ಭಾರತಗಳ ನಡುವೆ ಒಟ್ಟು ಶಿಶುಮರಣ ಪ್ರಮಾಣಕ್ಕೆ ಸಂಬಂಧಿಸಿರುವ ೧೯೬೦-೧೯೯೧ರ ಅವಧಿಯಲ್ಲಿ ಅಸಮಾನತೆ ಅಂತರಗಳು ಕುಗ್ಗಿವೆ(**ನೋಡಿ: ಡ್ರೀಜೆ ಮತ್ತು ಸೇನ್, ೧೯೯೫;೭೧, ಕೋಷ್ಟಕ ೪.೩**)

ಇಲ್ಲಿ ಸಮೀಕ್ಷೆಗೆ ಒಳಪಟ್ಟ ಆರೋಗ್ಯಕ್ಕೆ ಸಂಬಂಧಿಸಿದ ಅಧ್ಯಯನಗಳು ಈ ಕೆಳಗಿನ ಸಂಗತಿಗಳನ್ನು ತಿಳಿಸುತ್ತವೆ.

೧. ಆರೋಗ್ಯಕ್ಕೆ ಸಂಬಂಧಿಸಿದಂತೆ ಜಗತ್ತಿನ ಶ್ರೀಮಂತ ರಾಷ್ಟ್ರಗಳು ಮತ್ತು ಅಭಿವೃದ್ಧಿ ಶೀಲ ರಾಷ್ಟ್ರಗಳ ನಡುವಿನ ಅಸಮಾನತೆಯ ಅಂತರಗಳು ಕುಗ್ಗುತ್ತವೆ. ಆದರೆ (ಪಶ್ಚಿಮ ಮತ್ತು ದಕ್ಷಿಣಾ) ಏಷ್ಯಾ ರಾಷ್ಟ್ರಗಳಲ್ಲಿಯ ಅಂತರಗಳು ತೀವ್ರವಾಗುತ್ತಿವೆ.

೨. ಭಾರತ ಮತ್ತು ಅದರ ರಾಜ್ಯಗಳಲ್ಲಿ ಆರೋಗ್ಯ ಕ್ಷೇತ್ರದಲ್ಲಿ ಸುಧಾರಣೆಗಳು ಆಗುತ್ತಿವೆ. ಆರೋಗ್ಯದ ದೃಷ್ಟಿಯಿಂದ ಸುಸ್ಥಿತಿಯಲ್ಲಿರುವ ಪ್ರದೇಶಗಳಲ್ಲಿಯೇ ಆರೋಗ್ಯವು ಹೆಚ್ಚು ಹೆಚ್ಚು ಉತ್ತಮಗೊಳ್ಳುತ್ತಿದೆ. ಹಿಂದುಳಿದ ಪ್ರದೇಶಗಳಲ್ಲಿ ಆರೋಗ್ಯ ಭಾಗ್ಯವು ಸುಧಾರಿಸುತ್ತಿದೆಯಾದರೂ ಅದು ಸಾಪೇಕ್ಷವಾಗಿ ಆರೋಗ್ಯದ ದೃಷ್ಟಿಯಿಂದ ಮುಂದುವರಿದ ರಾಷ್ಟ್ರಗಳಷ್ಟು ಸುಧಾರಿಸುತ್ತಿಲ್ಲ.

೩. ಈ ಅಧ್ಯಯನಗಳಲ್ಲಿ ಹೆಚ್ಚು ಅಧ್ಯಯನಗಳು ಭಾರತದಲ್ಲಿ ಆರೋಗ್ಯ ಭಾಗ್ಯದಲ್ಲಿಯ ಅಸಮಾನತೆಯ–ಅಂತರಗಳು ತೀವ್ರಗೊಳ್ಳುತ್ತವೆ ಎಂಬುವುದನ್ನು ತಿಳಿಸುತ್ತವೆ.

ಶಿಕ್ಷಣ–ಸಾಕ್ಷರತೆ ಸಂಬಂಧಿ ಅಧ್ಯಯನಗಳ ಸಮೀಕ್ಷೆ

ಮಾನವ ಅಭಿವೃದ್ಧಿ ವಿಚಾರ ಪ್ರಣಾಳಿಕೆಯಲ್ಲಿ ಆರೋಗ್ಯದ ನಂತರದ ಪ್ರಮುಖ ಸ್ಥಾನವನ್ನು ಪಡೆದಿರುವುದು ಶಿಕ್ಷಣ. ಸಾಕ್ಷರತೆ ಅಥವಾ ಶಿಕ್ಷಣ ಎಲ್ಲಾ ಪ್ರದೇಶಗಳಲ್ಲಿ ಮತ್ತು ಎಲ್ಲ ಜನವರ್ಗಗಳಲ್ಲಿ ಸಮಾನವಾಗಿರುವುದಿಲ್ಲ. ಶಿಕ್ಷಣ ಅಥವಾ ಸಾಕ್ಷರತಾ ಪ್ರಮಾಣದಲ್ಲಿ ಸಹ ಪ್ರಾದೇಶಿಕ ಅಂತರ ಅಸಮಾನತೆಗಳಿವೆ. ಶಿಕ್ಷಣ ಸಂಬಂಧಿ ಪ್ರಾದೇಶಿಕ ಅಸಮಾನತೆಗಳನ್ನು ಅನೇಕ ಅಧ್ಯಯನಗಳು ಗುರುತಿಸಿವೆ. ಇದೇ ರೀತಿ ಶಿಕ್ಷಣ ಅಥವಾ ಸಾಕ್ಷರತೆಯಲ್ಲಿಯ ಪ್ರಾದೇಶಿಕ ಅಸಮಾನತೆಯ ಅಂತರಗಳು ತೀವ್ರವಾಗುತ್ತವೆಯೋ ಅಥವಾ ಕುಗ್ಗುತ್ತಿವೆಯೋ ಎನ್ನುವುದನ್ನು ತಿಳಿಯಲು ಹಲವು ಅಧ್ಯಯನಗಳು ಪ್ರಯತ್ನಿಸಿವೆ. ಪ್ರಸ್ತುತ ಭಾಗದಲ್ಲಿ ಶಿಕ್ಷಣ ಮತ್ತು ಪ್ರಾದೇಶಿಕ ಅಸಮಾನತೆಗೆ ಸಂಬಂಧಿಸಿದ ಕೆಲ ಅಧ್ಯಯನಗಳ ಸಮೀಕ್ಷೆ ಮಾಡಲಾಗಿದೆ.

ಮಾನವ ಅಭಿವೃದ್ಧಿ ವರದಿ ೧೯೯೭ರ ಪ್ರಕಾರ, ಅಭಿವೃದ್ಧಿಶೀಲ ಮತ್ತು ದಕ್ಷಿಣ ಏಷ್ಯಾ ರಾಷ್ಟ್ರಗಳ ನಡುವೆ, ೧೯೭೦–೧೯೯೪ರ ಅವಧಿಯಲ್ಲಿ ಒಟ್ಟು ವಯಸ್ಕ ಸಾಕ್ಷರತೆಯ ಅಂತರಗಳು ತೀವ್ರಗೊಂಡಿವೆ (ಪುಟ ೨೨೪). ಹಕ್‌ರವರ ಅಧ್ಯಯನದ ಪ್ರಕಾರ ಅಭಿವೃದ್ಧಿಶೀಲ ರಾಷ್ಟ್ರಗಳು ಮತ್ತು ದಕ್ಷಿಣಾ ಏಷ್ಯಾ ರಾಷ್ಟ್ರಗಳ ನಡುವೆ ಪುರುಷ ವಯಸ್ಕ ಸಾಕ್ಷರತಾ ಪ್ರಮಾಣದಲ್ಲಿಯ ಅಂತರಗಳು ತೀವ್ರಗೊಂಡಿವೆ. ಇದೇ ಪ್ರವೃತ್ತಿ ಮಹಿಳಾ ಸಾಕ್ಷರತಾ ಪ್ರಮಾಣದಲ್ಲಿ ಸಹ ಕಂಡುಬರುತ್ತದೆ(ಹಕ್, ೧೯೯೭:೧೪೪). ಇದೇ ಅವಧಿಯಲ್ಲಿ ಈ ರಾಷ್ಟ್ರಗಳ ನಡುವೆ ಪ್ರಾಥಮಿಕ ಶಾಲಾ ದಾಖಲಾತಿಯಲ್ಲಿಯ ಅಂತರಗಳು ಕುಗ್ಗಿವೆ(ಹಕ್,೧೯೯೮,೧೭೮).

ಮಾನವ ಅಭಿವೃದ್ಧಿಯಲ್ಲಿ ಯಶಸ್ಸನ್ನು ಸಾಧಿಸಿದ ಹಲವು ರಾಷ್ಟ್ರಗಳಲ್ಲಿ ದಕ್ಷಿಣ–ಕೋರಿಯಾ ಒಂದಾಗಿದೆ. ಭಾರತ ಮತ್ತು ದಕ್ಷಿಣ ಕೋರಿಯಾಗಳ ನಡುವೆ ೧೯೬೦–೧೯೯೨ರ ಅವಧಿಯಲ್ಲಿ ಒಟ್ಟು ವಯಸ್ಕ ಸಾಕ್ಷರತಾ ಪ್ರಮಾಣದಲ್ಲಿಯ ಅಂತರಗಳು ತೀವ್ರಗೊಂಡಿವೆ(**ನೋಡಿ ಡ್ರೀಜೆ ಮತ್ತು ಸೇನ್, ೧೯೯೬;೨೧ ಕೋಷ್ಟಕ ೯**). ಭಾರತದ ರಾಜ್ಯಗಳಲ್ಲಿ 'ಕೇರಳ' ಅಭಿವೃದ್ಧಿಯ ದೃಷ್ಟಿಯಿಂದ ಪ್ರತ್ಯೇಕವಾಗಿ ನಿಲ್ಲುತ್ತದೆ. ಮಾನವ ಅಭಿವೃದ್ಧಿಯಲ್ಲಿ ಗಣನೀಯ ಸಾಧನೆಗೈದ ಕೇರಳ ಮತ್ತು ಭಾರತಗಳ ನಡುವೆ ಒಟ್ಟು ವಯಸ್ಕ ಸಾಕ್ಷರತೆಯ ಅಂತರಗಳು ೧೯೬೧–೯೧ರ ಅವಧಿಯಲ್ಲಿ ಅಧಿಕಗೊಂಡಿದೆ. ಇದೇ ರೀತಿ ಕೇರಳ ಮತ್ತು ಭಾರತಗಳ ನಡುವೆ ಪರಿಶಿಷ್ಟಜಾತಿಯಲ್ಲಿನ ಸಾಕ್ಷರತೆಯ ಅಂತರಗಳು ಸಹ ವಿಸ್ತೃತಗೊಂಡಿವೆ(**ನೋಡಿ ಡ್ರೀಜೆ ಮತ್ತು ಸೇನ್, ೧೯೯೬; ೨೫೬ ಕೋಷ್ಟಕ ೨೦,೨೨**).

ನಾರಾಯಣ(೧೯೯೭)ರವರು ಶಿಕ್ಷಣಕ್ಕೆ ಸಂಬಂಧಿಸಿದ ಐದು ಚಲಕಗಳಿಂದ ಶಿಕ್ಷಣಾಭಿವೃದ್ಧಿ ಸಂಯುಕ್ತ ಸೂಚ್ಯಂಕವನ್ನು ೧೯೬೧, ೧೯೭೧, ೧೯೮೧ ವರ್ಷಗಳಿಗೆ ಸಿದ್ಧಪಡಿಸಿದ್ದಾರೆ. ಇವರ ಅಧ್ಯಯನದ ಪ್ರಕಾರ, ಭಾರತದ ರಾಜ್ಯಗಳಲ್ಲಿ ಶೈಕ್ಷಣಿಕ ಅಭಿವೃದ್ಧಿಗೆ ಸಂಬಂಧಿಸಿದಂತೆ ಇರುವ

ಅಂತರಗಳು ಮೂರು ದಶಕಗಳ ಕಾಲಾವಧಿಯಲ್ಲಿ ಕಡಿಮೆಯಾಗಿವೆ. ಆದರೆ ಘೋಷ(೧೯೮೮)ರವರ ಅಧ್ಯಯನವು ೧೯೮೧-೯೧ರ ಅವಧಿಯಲ್ಲಿ ಶೈಕ್ಷಣಿಕ ಸ್ಥಿತಿ(Educational Status)ಯಲ್ಲಿನ ವಿಚಾರಗಳು ತೀವ್ರಗೊಂಡಿರುವುದನ್ನು ತಿಳಿಸುತ್ತದೆ. ಜಿಲ್ಲಾಮಟ್ಟದಲ್ಲಿ ಶಿಕ್ಷಣದಲ್ಲಿಯ ಅಮತರ ಸಮಾನತೆಗಳನ್ನು ತಿಳಿಸುವ ಅಧ್ಯಯನಗಳು ನಡೆದಿವೆ. ೧೯೬೦-೬೧ ಮತ್ತು ೧೯೮೦-೮೧ರ ಅವಧಿಯಲ್ಲಿ ಉತ್ತರ ಪ್ರದೇಶ ರಾಜ್ಯದಲ್ಲಿ ಜಿಲ್ಲಾವಾರು ಸಾಕ್ಷರತಾ ಪ್ರಮಾಣದಲ್ಲಿಯ ಅಂತರಗಳು ಕೈಗೊಂಡಿರುವುದನ್ನು ಜೋಷಿ (೧೯೯೬)ಯವರ ಅಧ್ಯಯನವು ತಿಳಿಸುತ್ತದೆ. ಆದರೆ ಗುಜರಾತ್ ರಾಜ್ಯದಲ್ಲಿಯ ಭವನ್ (೧೯೯೨)ರವರ ಅಧ್ಯಯನದ ಪ್ರಕಾರ ೧೯೭೧-೮೧ರ ಅವಧಿಯಲ್ಲಿ ಶಿಕ್ಷಣದಲ್ಲಿಯ ಜಿಲ್ಲಾವಾರು ಅಂತರಗಳು ಕುಗ್ಗಿವೆ (ಭವನ್ ಮತ್ತು ಇತರರು, ೧೯೯೨;೨೨). ಡಿಸೋಜ (೧೯೯೬)ರವರ ಅಧ್ಯಯನವು ತಿಳಿಸುವಂತೆ ಅಧಿಕ ಪರಿಶಿಷ್ಟರ ಸಾಕ್ಷರತಾ ಪ್ರಮಾಣ ಹೊಂದಿರುವ ರಾಜ್ಯಗಳು ಮತ್ತು ಕಡಿಮೆ ಪರಿಶಿಷ್ಟರ ಸಾಕ್ಷರತಾ ಪ್ರಮಾಣ ಹೊಂದಿರುವ ರಾಜ್ಯಗಳ ನಡುವೆ ೧೯೬೧-೧೯೮೧ರ ಅವಧಿಯಲ್ಲಿ ಸಾಕ್ಷರತಾ ಅಂತರಗಳು ತೀವ್ರಗೊಂಡಿವೆ. ಇದೆ ಅವಧಿಯಲ್ಲಿ ಪಂಜಾಬ್ ರಾಜ್ಯದಲ್ಲಿ ಪರಿಶಿಷ್ಟಜಾತಿ ಮತ್ತು ಇತರ ಜನತೆಯ ಸಾಕ್ಷರತೆ ಪ್ರಮಾಣಗಳ ನಡುವಿನ ಅಂತರಗಳು ಕಿರಿದಾಗಿವೆ. ಆದರೆ ಪರಿಶಿಷ್ಟಜಾತಿಯಲ್ಲಿಯ ವಿಭಿನ್ನ ಜಾತಿಗಳಲ್ಲಿ ಸಾಕ್ಷರತಾ ಪ್ರಮಾಣದಲ್ಲಿಯ ಅಂತರಗಳು ತೀವ್ರಗೊಂಡಿವೆ. ಮತ್ತು ಇದೇ ರಾಜ್ಯ ಮತ್ತು ಇದೇ ಅವಧಿಯಲ್ಲಿ 'ಶಾಲೆ ಬಿಟ್ಟವರ ಪ್ರಮಾಣಕ್ಕೆ'ಗೆ ಸಂಬಂಧಿಸಿದಂತೆ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟೇತರರ ನಡುವಿನ ಅಂತರಗಳು ಕಡಿಮೆಯಾಗಿವೆ.

ಶಿಕ್ಷಣದಲ್ಲಿ ಪುರುಷ-ಮಹಿಳೆಯರ ನಡುವಿನ ಅಂತರಗಳು ಅಭಿವೃದ್ಧಿಯ ದೃಷ್ಟಿಯಿಂದ ಮುಖ್ಯವೆನಿಸುತ್ತದೆ. ಶಿಕ್ಷಣಕ್ಕೆ ಸಂಬಂಧಿಸಿದಂತೆ ಪುರುಷ-ಮಹಿಳೆಯರ ನಡುವಿನ ಅಂತರಗಳು ಅಧಿಕವಿದ್ದರೆ, ಅದು, ಸಮಾಜದಲ್ಲಿ ಮಹಿಳೆಯರ ಬಗೆಗಿನ ತಾರತಮ್ಯ ಮನೋಭಾವನೆಯನ್ನು ತಿಳಿಸುತ್ತದೆ. ಜನಗಣತಿ ವರದಿಗಳ ಪ್ರಕಾರ ಭಾರತದಲ್ಲಿ ೧೯೫೦-೫೧ ರಿಂದ ೧೯೯೦-೯೧ರ ಅವಧಿಯಲ್ಲಿ ಪುರುಷ-ಮಹಿಳೆಯರ ನಡುವೆ ಸಾಕ್ಷರತಾ ಪ್ರಮಾಣದಲ್ಲಿಯ ಅಂತರಗಳು ಅಧಿಕಗೊಂಡಿವೆ. ಮಾಕಾಡಾಲ್ (೨೦೦೦) ಅಧ್ಯಯನ ತಿಳಿಸುವಂತೆ ಇದೇ ಪ್ರವೃತ್ತಿಯು, ಉತ್ತರ ಪ್ರದೇಶದ ರಾಜ್ಯದಲ್ಲಿ ಕಂಡುಬಂದಿದೆ. ಆದರೆ ಕೇರಳ ರಾಜ್ಯದಲ್ಲಿ ಇದೆ. ಅವಧಿಯಲ್ಲಿ ಪುರುಷ-ಮಹಿಳೆಯರ ಸಾಕ್ಷರತಾ ಪ್ರಮಾಣದಲ್ಲಿಯ ಅಂತರಗಳು ಕಿರಿದಾಗಿದೆ. '೧೯೭೦-೭೧ ಮತ್ತು ೧೯೯೦-೯೧ರ ಅವಧಿಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ಪುರುಷ-ಮಹಿಳೆಯರ ನಡುವಿನ ಸಾಕ್ಷರತಾ ಪ್ರಮಾಣದಲ್ಲಿಯ ಅಂತರಗಳು ಅಧಿಕಗೊಂಡಿದ್ದರೆ, ನಗರ ಪ್ರದೇಶದಲ್ಲಿ ಅವು ಕಿರಿದಾಗಿವೆ. ಭಾರತದಲ್ಲಿ ಗ್ರಾಮೀಣ-ನಗರ ಪ್ರದೇಶಗಳಲ್ಲಿ ಸಾಕ್ಷರತಾ ಪ್ರಮಾಣದಲ್ಲಿ ಅಂತರಗಳಿದ್ದು, ಇವು ೧೯೭೦-೭೧ ಮತ್ತು ೧೯೯೦-೯೧ರ ಅವಧಿಯಲ್ಲಿ ಯಾವುದೇ ಬದಲಾವಣೆಯಾಗಿಲ್ಲ'(ನೋಡಿ ಇಪಿಡಬ್ಲ್ಯು ಫೌಂಡೇಶನ್, ೧೯೯೪;೩೦೫).

ನ್ಯಾಷನಲ್ ಸ್ಯಾಂಪಲ್ ಸರ್ವೆ ಪ್ರಕಾರ, ಭಾರತದಲ್ಲಿ ೧೯೮೭-೮೮ ಮತ್ತು ೧೯೯೯-೯೦ರ ಅವಧಿಯಲ್ಲಿ ಪುರುಷ-ಮಹಿಳೆಯರ ನಡುವಿನ ಸಾಕ್ಷರತಾ ಪ್ರಮಾಣದ ಅಂತರಗಳು ಗ್ರಾಮೀಣ ಮತ್ತು ನಗರ ಪ್ರದೇಶಗಳೆರಡರಲ್ಲಿಯೂ ಕಿರಿದಾಗಿವೆ. ಇದೇ ರೀತಿ ನಗರ-ಗ್ರಾಮೀಣ ಪ್ರದೇಶಗಳ ಸಾಕ್ಷರತಾ ಪ್ರಮಾಣಗಳ ನಡುವಿನ ಅಂತರಗಳು ಅಲ್ಪ ಪ್ರಮಾಣದಲ್ಲಿ ಕಡಿಮೆಯಾಗಿವೆ.

ಕರ್ನಾಟಕ ರಾಜ್ಯದಲ್ಲಿ ೧೯೬೧-೧೯೯೧ರ ಅವಧಿಯಲ್ಲಿ ಪುರುಷ-ಮಹಿಳೆಯರ ಸಾಕ್ಷರತಾ ಪ್ರಮಾಣದಲ್ಲಿಯ ಅಂತರಗಳು ತೀವ್ರವಾಗಿದೆ. ಜಿಲ್ಲಾವಾರು ನೋಡುವುದಾದರೆ, ಈ ಅವಧಿಯಲ್ಲಿ ೧೧ ಜಿಲ್ಲೆಗಳಲ್ಲಿ ಮಹಿಳೆ-ಪುರುಷರ ಸಾಕ್ಷರತಾ ಪ್ರಮಾಣದಲ್ಲಿಯ ಅಂತರಗಳು ಕಡಿಮೆಯಾಗಿದ್ದರೆ, ಉಳಿದ ಜಿಲ್ಲೆಗಳಲ್ಲಿ ಅಂತರಗಳು ಅಧಿಕಗೊಂಡಿದೆ. ಗ್ರಾಮೀಣ ಪ್ರದೇಶದಲ್ಲಿ ಎರಡು ಜಿಲ್ಲೆಗಳಲ್ಲಿ ಮಾತ್ರ ಮಹಿಳೆ-ಪುರುಷ ಸಾಕ್ಷರತಾ ಪ್ರಮಾಣದಲ್ಲಿಯ ಅಂತರಗಳು ಕಡಿಮೆಯಾಗಿದ್ದರೆ, ಉಳಿದ ಜಿಲ್ಲೆಗಳಲ್ಲಿ ಅಂತರಗಳು ತೀವ್ರಗೊಂಡಿದೆ. ನಗರ ಪ್ರದೇಶದ ಎಲ್ಲಾ ಜಿಲ್ಲೆಗಳಲ್ಲಿ ಪುರುಷ ಮಹಿಳೆಯರ ಸಾಕ್ಷರತಾ ಪ್ರಮಾಣದಲ್ಲಿಯ ಅಂತರಗಳು ಕುಗ್ಗಿವೆ(**ನೋಡಿ ಕರ್ನಾಟಕ ಸರ್ಕಾರ ೧೯೯೬**).

ಈ ಎಲ್ಲಾ ಸಮೀಕ್ಷೆಯಿಂದ ಈ ಕೆಳಗಿನ ನಿರ್ಧಾರಗಳಿಗೆ ಬರಬಹುದಾಗಿದೆ.

೧. ಶಿಕ್ಷಣ ಮತ್ತು ಸಾಕ್ಷರತಾ ಪ್ರಮಾಣ ಮುಂದುವರಿದ ಮತ್ತು ಹಿಂದುಳಿದ ರಾಜ್ಯ, ರಾಷ್ಟ್ರಗಳ ನಡುವಿನ ಅಂತರಗಳು ಕಿರಿದಾಗುವ ಬದಲು ವಿಸ್ತೃತ/ತೀವ್ರಗೊಳ್ಳುತ್ತಿವೆ.

೨. ಭಾರತದ ರಾಜ್ಯಗಳಲ್ಲಿ ಸಾಕ್ಷರತೆಯಲ್ಲಿಯ ಅಸಮಾನತೆಯ ಅಂತರಗಳನ್ನು ಕುರಿತಂತೆ, ನಿಚ್ಚಳವಾಗಿ ಹೇಳುವಂಥ ಸ್ಥಿತಿಯಿಲ್ಲ. ಕೆಲವು ರಾಜ್ಯಗಳಲ್ಲಿ ಅಂತರಗಳು ಅಧಿಕವಾಗುತ್ತಿದ್ದರೆ, ಇನ್ನು ಕೆಲವು ರಾಜ್ಯಗಳಲ್ಲಿ ಅಂತರಗಳು ಕಡಿಮೆಯಾಗುತ್ತಿವೆ.

೩. ಮುಂದುವರಿದ ರಾಷ್ಟ್ರ ಮತ್ತು ರಾಜ್ಯಗಳಲ್ಲಿ ಸಾಕ್ಷರತಾ ಪ್ರಮಾಣದಲ್ಲಿಯ ಲಿಂಗ ಅಸಮಾನತೆಗಳು ಕಡಿಮೆಯಾಗುತ್ತಿದ್ದರೆ, ಹಿಂದುಳಿದ ರಾಷ್ಟ್ರ-ರಾಜ್ಯ-ಜಿಲ್ಲೆಗಳಲ್ಲಿ ಸಾಕ್ಷರತಾ ಪ್ರಮಾಣದಲ್ಲಿ ಪುರುಷ ಮಹಿಳೆಯರ ನಡುವೆ ಅಂತರಗಳು ತೀವ್ರಗೊಂಡಿವೆ.

ವರಮಾನ ಸಂಬಂಧಿ ಅಧ್ಯಯನಗಳ ಸಮೀಕ್ಷೆ

ಕಳೆದ ಮೂರು ದಶಕಗಳ ಅವಧಿಯಲ್ಲಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಾದೇಶಿಕ ಅಸಮಾನತೆಕಯ ಪ್ರವೃತ್ತಿಯನ್ನು ತಿಳಿಯಲು ಅನೇಕ ಅಧ್ಯಯನಗಳು ಪ್ರಯತ್ನಪಟ್ಟಿವೆ. ಭಾರತ ಮತ್ತು ಕರ್ನಾಟಕದಲ್ಲಿ ಸಹ ಇಂಥ ಅಧ್ಯಯನಗಳು ನಡೆದಿವೆ. ಇಲ್ಲಿ ವರಮಾನ ಮತ್ತು ಪ್ರಾದೇಶಿಕ ಅಸಮಾನತೆ ಕುರಿತಂತೆ ಕೆಲವು ಮುಖ್ಯ ಅಧ್ಯಯನಗಳ ಸಮೀಕ್ಷೆಯನ್ನು ಮಾಡಲಾಗಿದೆ.

ಜೆ.ಜಿ.ವಿಲಿಯಂಸನ್ ಅವರ ಹೆಸರಿಲ್ಲದೇ, ಪ್ರಾದೇಶಿಕ ಅಸಮಾನತೆಯ ಅಧ್ಯಯನಗಳು ಪೂರ್ಣವಾಗಲಾರವು. ಅವರ ಅಧ್ಯಯನವು ತಿಳಿಸುವಂತೆ, ಪ್ರಾದೇಶಿಕ ಅಸಮಾನತೆಗಳು ಅಭಿವೃದ್ಧಿಯ ಪ್ರಾರಂಭದ ಅವಧಿಯಲ್ಲಿ ತೀವ್ರಗೊಂಡು, ನಂತರದ ಅವಧಿಯಲ್ಲಿ ಕುಗ್ಗುತ್ತದೆ.

ವಿಲಿಯಂಸನ್ (೧೯೬೫)ರವರು ಭಾರತದಲ್ಲಿಯ ಪ್ರಾದೇಶಿಕ ಅಸಮಾನತೆಯ ಅಧ್ಯಯನ ನಡೆಸಿ ೧೯೫೦ರ ದಶಕದಲ್ಲಿ ಭಾರತವು ಮೊದಲ ಹಂತದಲ್ಲಿದ್ದು, ಆ ಸಮಯದಲ್ಲಿ ಪ್ರಾದೇಶಿಕ ಅಸಮಾನತೆಗಳು ತೀವ್ರವಾಗಿದ್ದವು ಎಂಬುದು ಗುರುತಿಸಿದ್ದರು. ವಿಲಿಯಂಸನ್ ಅವರ ನಂತರ ಹಲವಾರು ಸಂಶೋಧಕರು ತಲಾವರಮಾನ, ರಾಜ್ಯ ಆಂತರಿಕ ಉತ್ಪನ್ನ, ಅಭಿವೃದ್ಧಿಯ ಸಂಯುಕ್ತ ಸೂಚ್ಯಂಕ ಮುಂತಾದವುಗಳ ಮೂಲಕ ಪ್ರಾದೇಶಿಕ ಅಸಮಾನತೆಯ ಪ್ರವೃತ್ತಿಯನ್ನು ತಿಳಿಯಲು ಪ್ರಯತ್ನ ನಡೆಸಿದ್ದಾರೆ.

ಮಹಾಜನ ಅವರ ಅಧ್ಯಯನವು ೧೯೫೦–೬೦ರ ದಶಕದಲ್ಲಿ ವರಮಾನದಲ್ಲಿಯ ಪ್ರಾದೇಶಿಕ ಅಸಮಾನತೆಗಳು ಕುಗ್ಗಿವೆ ಎಂದು ತಿಳಿಸಿದರೆ, ವಿಲಿಯಂಸನ್ ಅವರ ಅಧ್ಯಯನವು ಅದೇ ಅವಧಿಯಲ್ಲಿ ಪ್ರಾದೇಶಿಕ ಅಸಮಾನತೆಗಳು ತೀವ್ರಗೊಂಡಿರುವುದನ್ನು ತಿಳಿಸಿವೆ. ರಾವ್(೧೯೭೪) ಅವರ ಪ್ರಾದೇಶಿಕ ಅಸಮಾನತೆ ಕುರಿತಾದ ಅಧ್ಯಯನವು ೧೯೫೦–೬೦ರ ದಶಕದಲ್ಲಿ ರಾಜ್ಯಗಳ ಸ್ಥಿತಿಗಳಲ್ಲಿ ಯಾವುದೇ ಬದಲಾವಣೆ ಆಗಿಲ್ಲ ಹಾಗೂ ೧೫ ವರ್ಷಗಳ ಯೋಜನಾ ಅವಧಿಯಲ್ಲಿ ಪ್ರಾದೇಶಿಕ ಅಸಮಾನತೆಗಳು ಕುಗ್ಗಿಲ್ಲ ಎಂಬುದನ್ನು ಗುರುತಿಸಿದೆ.

ಜಾರವರು (೧೯೭೮) ೧೯೫೦–೫೧ರಿಂದ ೧೯೭೦–೭೧ರ ಅವಧಿಯಲ್ಲಿ ಪ್ರಾದೇಶಿಕ ಅಸಮಾನತೆಯ ಪ್ರವೃತ್ತಿಯ ಅಧ್ಯಯನ ನಡೆಸಿದ್ದು, ಅವರ ಪ್ರಕಾರ ಮೇಲಿನ ಅವಧಿಯಲ್ಲಿ ಭಾರತದ ರಾಜ್ಯ ರಾಜ್ಯಗಳ ನಡುವಿರುವ ವರಮಾನದಲ್ಲಿಯ ಅಸಮಾನತೆಯ ಅಂತರಗಳು ತೀವ್ರಗೊಮಡಿವೆ. ೧೯೬೦–೬೧ರಿಂದ ೧೯೬೮–೬೯ರ ಕಾಲಾವಧಿಯ ಕುರಿತಂತೆ ತಿವಾರಿಯವರು (೧೯೮೩) ಅಧ್ಯಯನ, ೧೯೬೦–೬೧ರಿಂದ ೧೯೬೯–೭೦ ಅವಧಿಗೆ ಸಂಬಂಧಿಸಿದಂತೆ, ಮಾಥೂರ್ (೧೯೭೩)ರವರ ಅಧ್ಯಯನಗಳು, ವರಮಾನ ದೃಷ್ಟಿಯಲ್ಲಿ ಅಂತರರಾಜ್ಯ ಅಸಮಾನತೆಗಳು ಅಧಿಕಗೊಂಡಿವೆ ಎಂಬುವುದನ್ನು ತಿಳಿಸುತ್ತವೆ. ಸೋಮ್ರಾ(೧೯೯೯) ಅವರ ಅಧ್ಯಯನ ಸಹ ೧೯೯೧–೯೨ರ ಅವಧಿಯಲ್ಲಿ ರಾಜ್ಯ ಆಂತರಿಕ ಉತ್ಪನ್ನಕ್ಕೆ ಸಂಬಂಧಿಸಿದಂತೆ ಭಾರತದ ರಾಜ್ಯಗಳ ನಡುವಿನ ಅಂತರಗಳು ತೀವ್ರಗೊಂಡಿರುವುದನ್ನು ದೃಢಪಡಿಸಿದೆ.

ರಾವ್ (೧೯೯೯) ಅವರ ಅಧ್ಯಯನವು ೧೯೬೫–೬೬ ರಿಂದ ೧೯೯೪–೯೫ರ ಅವಧಿಯಲ್ಲಿ ಭಾರತದ ರಾಜ್ಯ–ರಾಜ್ಯಗಳ ನಡುವೆ ತಲಾವರಮಾನದಲ್ಲಿಯ ಅಂತರಗಳು ತೀವ್ರಗೊಂಡಿರುವುದುನ್ನು ತಿಳಿಸಿದೆ. ಕುರಿಯನ್ (೨೦೦೦) ದಂಡೇಕರ್ (೧೯೯೨)ರವರ ಅಧ್ಯಯನದ ಫಲಿತಗಳ ಸಹ ರಾವ್ ರವರ ಅಧ್ಯಯನದ ಫಲಿತಗಳಿಗೆ ಪೂರಕವಾಗಿದೆ. ರಾಜ್ಯ ಆಂತರಿಕ ಉತ್ಪನ್ನದ ತಲಾವರಮಾನಕ್ಕೆ ಸಂಬಂಧಿಸಿದಂತೆ ೧೯೬೧–೬೨ರಿಂದಿ ೧೯೮೯–೯೦ರ ಅವಧಿಯಲ್ಲಿ ರಾಷ್ಟ್ರದ ೨೪ ರಾಜ್ಯಗಳ ನಡುವಿರುವ ಅಸಮಾನತೆಯ ಅಂತರಗಳು ಕುಗ್ಗುವ ಲಕ್ಷಣ ಕಂಡುಬಂದಿಲ್ಲ ಎಂಬುದು ಮರೆಜಿತ್ ಮತ್ತು ನಿಯೋಗಿ (೧೯೯೬) ಅವರ ಅಧ್ಯಯನವು ತಿಳಿಸುತ್ತದೆ. ಪೋಪ್, ಮರಜಿತ್ ಮತ್ತು ನಿಯೋಗಿ (೧೯೯೭) ಅವರ ಅಸಮಾನತೆ ಕುರಿತಾದ ಅಧ್ಯಯನವು ಸಹ ಕಳೆದ ೩೦ ವರ್ಷಗಳ ಅವಧಿಯಲ್ಲಿ ರಾಷ್ಟ್ರದ ರಾಜ್ಯಗಳ ನಡುವಿರುವ ಆರ್ಥಿಕ ಅಸಮಾನತೆಯು

ತೀವ್ರಗೊಂಡಿದೆ ಎಂಬುವುದನ್ನು ತಿಳಿಸುತ್ತದೆ. ೧೯೭೦ರ ದಶಕದಲ್ಲಿ ವರಮಾನದಲ್ಲಿಯ ಅಸಮಾನತೆ ಕುಗ್ಗಿ ಉದಾರೀಕರಣೋತ್ತರ ಅವಧಿಯಲ್ಲಿ ಅವು ತೀವ್ರಗೊಂಡಿವೆ ಎಂಬುದು ಘೋಷ್ (೧೯೯೬) ಅವರ ಅಧ್ಯಯನದ ತಥ್ಯವಾಗಿದೆ. ಕುರಿಯನ್ (೨೦೦೦) ದೇವ್ (೨೦೦೦) ಅವರ ಅಧ್ಯಯನಗಳು ಸಹ ಉದಾರೀಕರಣ ನಂತರದ ಅವಧಿಯಲ್ಲಿ ವರಮಾನದಲ್ಲಿಯ ಅಸಮಾನತೆಗಳು ತೀವ್ರಗೊಂಡಿರುವುದನ್ನು ತಿಳಿಸಿವೆ.

ದಾಸ್ ಮತ್ತಿತರರ (೧೯೯೬) ಅಧ್ಯಯನವು ತಿಳಿಸುವಂತೆ, ೧೯೭೦-೯೨ರ ಅವಧಿಯಲ್ಲಿ ಪ್ರತಿ ಆರ್ಥಿಕ ಚಟುವಟಿಕೆಗಳಲ್ಲಿ ಮುಖ್ಯವಾಗಿ ಅಸಂಘಟಿತ ಕೈಗಾರಿಕೆಗಳಿಗೆ ಸಂಬಂಧಿಸಿದಂತೆ ರಾಷ್ಟ್ರದ ೨೩ ರಾಜ್ಯಗಳ ನಡುವಿನ ಅಸಮಾನತೆಗಳು ತೀವ್ರಗೊಂಡಿವೆ. "ರಾಜ್ಯ ಆಂತರಿಕ ಉತ್ಪನ್ನದ ದೃಷ್ಟಿಯಿಂದ ೧೯೯೦ರ ದಶಕದಲ್ಲಿ ಅಂತರ-ರಾಜ್ಯ ಅಸಮಾನತೆಯ ಅಂತರಗಳು ಅಧಿಕಗೊಂಡು, ಅಸಮಾನತೆಯ ಅಂತರಗಳು ಕುಗ್ಗುವುದರ ಬದಲು ತೀವ್ರಗೊಂಡಿವೆ ಎಂಬುದನ್ನು ದೇವ್ (೨೦೦೦)ರವರ ಅಧ್ಯಯನವು ತಿಳಿಸುತ್ತದೆ.

ದಾಸಗುಪ್ತ ಮತ್ತಿತರರ(೨೦೦೦) ಅಧ್ಯಯನವು ೧೯೬೦-೬೧ರಿಂದ ೧೯೯೫-೯೬ರ ಅವಧಿಯಲ್ಲಿ PCSDPಗೆ ಸಂಬಂಧಿಸಿದಂತೆ ರಾಷ್ಟ್ರದ ರಾಜ್ಯಗಳ ನಡುವಿನ ಅಂತರಗಳು ತೀವ್ರಗೊಂಡಿವೆ ಎಂಬುವುದನ್ನು ತಿಳಿಸಿದೆ. ಆದರೆ ಡೊಂಲಕಿಯಾ(೧೯೯೪)ರವರ ಅಧ್ಯಯನವು ೧೯೬೦-೬೧ರಿಂದ ೧೯೮೦-೯೦ರ ಕಾಲಾವಧಿಯಲ್ಲಿ ಆರ್ಥಿಕ ಬೆಳವಣಿಗೆಯ ದೃಷ್ಟಿಯಲ್ಲಿ ರಾಷ್ಟ್ರದ ರಾಜ್ಯಗಳ ನಡುವಿರುವ ಅಂತರಗಳು ಕುಗ್ಗಿವೆ ಎಂಬ ಫಲಿತವನ್ನು ಹೊರಹಾಕಿದೆ.

ರಾಮಚಂದ್ರನ್ ಅವರು(೧೯೯೬) ತಿಳಿಸುವಂತೆ ಕೇರಳ ರಾಜ್ಯದಲ್ಲಿ ಮುಂದುವರಿದ ಮತ್ತು ಹಿಂದುಳಿದ ಪ್ರದೇಶಗಳ ನಡುವಿನ ಅಂತರಗಳು ಕಡಿಮೆಯಾಗುತ್ತಿವೆ. ಜೋಶಿ (೧೯೯೦) ಅವರು ಉತ್ತರ ಪ್ರದೇಶದಲ್ಲಿಯ ಪ್ರಾದೇಶಿಕ ಅಸಮಾನತೆಯ ಅಧ್ಯಯನ ನಡೆಸಿದ್ದು, ಅವರ ಅಧ್ಯಯನದ ಫಲಿತಗಳು ಈ ರೀತಿ ಇದೆ. ೧೯೭೧-೮೧ರ ಅವಧಿಯ್ಲಲಿ ಕೈಗಾರಿಕಾ ಅಭಿವೃದ್ಧಿ ದೃಷ್ಟಿಯಿಂದ ಪ್ರಾದೇಶಿಕ ಅಸಮಾನತೆಗಳು ಕುಗ್ಗಿವೆ. ಆದರೆ ಅದೇ ಕಾಲಾವಧಿಯಲ್ಲಿ ಕೃಷಿರಂಗದಲ್ಲಿಯ ಅಸಮಾನತೆಗಳು ತೀವ್ರಗೊಂಡಿವೆ. ಮೇಲಿನ ಅವಧಿಯಲ್ಲಿ ಉತ್ತರ ಪ್ರದೇಶದ ಜಿಲ್ಲೆ-ಜಿಲ್ಲೆಗಳ ನಡುವೆ ಸಾರಿಗೆ, ಶಿಕ್ಷಣ ಮತ್ತು ಆರೋಗ್ಯ ಸೌಲಭ್ಯಗಳಲ್ಲಿಯ ಅಸಮಾನತೆಗಳು ತೀವ್ರಗೊಂಡಿವೆ. ಡಾಡೀಭಾವಿ (೧೯೮೩)ರವರ ಕರ್ನಾಟಕ ರಾಜ್ಯದಲ್ಲಿಯ ಅಸಮಾನತೆಯ ಕುರಿತಾದ ಅಧ್ಯಯನವು ೧೯೬೦-೬೧ ರಿಂದ ೧೯೭೫-೭೬ರ ಅವಧಿಯಲ್ಲಿ ವರಮಾನದಲ್ಲಿಯ ಅಂತರಗಳು ಕುಗ್ಗುವ ಪ್ರವೃತ್ತಿಯನ್ನು ತೋರಿಸುತ್ತವೆ ಎಂಬುದನ್ನು ದೃಢಪಡಿಸಿವೆ. ಇದೇ ರೀತಿ ಸುಮಿತ್ರಾ ಅವರ (೧೯೮೫) ಅಧ್ಯಯನವು ಸಹ ರಾಜ್ಯದಲ್ಲಿ ಅಸಮಾನತೆಯ ಅಂತರಗಳು ಕುಗ್ಗುತ್ತಿರುವುದನ್ನು ತಿಳಿಸಿದೆ. ಹೇಮಲತಾರಾವ್ (೧೯೮೫) ಅವರು ಅಭಿವೃದ್ಧಿಯ ಸಂಯುಕ್ತ ಸೂಚ್ಯಂಕದ ಮೂಲಕ ಕರ್ನಾಟಕ ರಾಜ್ಯದಲ್ಲಿಯ ಪ್ರಾದೇಶಿಕ ಅಸಮಾನತೆ ಕುರಿತಂತೆ ಅಧ್ಯಯನ ಮಾಡಿದ್ದಾರೆ. ಇವರ ಅಧ್ಯಯನ ಸಹ ರಾಜ್ಯದಲ್ಲಿ ಅಸಮಾನತೆಯ ಅಂತರಗಳು ಕುಗ್ಗುತ್ತಿವೆ ಎಂಬುದನ್ನು ಗುರುತಿಸಿದೆ.

ಶೇಷಾದ್ರಿ (೧೯೯೧) ಅವರ ಅಧ್ಯಯನವು ತಿಳಿಸುವಂತೆ, ನಿವ್ವಳ ಜಿಲ್ಲಾ ಆಂತರಿಕ ಉತ್ಪನ್ನದ ದೃಷ್ಟಿಯಿಂದ ಕರ್ನಾಟಕ ರಾಜ್ಯದಲ್ಲಿಯ ಅಸಮಾನತೆ ಅಂತರಗಳು ೧೯೬೦-೬೧ರಿಂದ ೧೯೭೦-೭೧ರ ಅವಧಿಯಲ್ಲಿ ತೀವ್ರಗೊಂಡು, ೧೯೭೦-೭೧ ರಿಂದ ೧೯೮೦-೮೧ರ ಅವಧಿಯಲ್ಲಿ ಅಂತರಗಳು ಕುಗ್ಗಿವೆ. ಜಿಲ್ಲಾ ತಲಾವರಮಾನಕ್ಕೆ ಸಂಬಂಧಿಸಿದ ಅಂತರಗಳು ೧೯೬೦-೬೧ರಿಂದ ೧೯೮೦-೮೧ ಅವಧಿಯಲ್ಲಿ ಕುಗ್ಗಿವೆ.

ಅಭಿವೃದ್ಧಿಯ ದೃಷ್ಟಿಯಿಂದ ವರಮಾನದಲ್ಲಿಯ ಅಂತರಗಳಿಗಿಂತಲೂ ಮಾನವ ಅಭಿವೃದ್ಧಿಯಲ್ಲಿಯ ಅಂತರಗಳನ್ನ ಕುಗ್ಗಿಸುವುದು ಅತ್ಯವಶ್ಯಕವಾಗಿದೆ. ವಿಲಿಯಂ ಡ್ರೀಪರ್ (೧೯೯೧) ತಿಳಿಸುವಂತೆ, ಜಗತ್ತಿನ ಉತ್ತರ-ದಕ್ಷಿಣ ರಾಷ್ಟ್ರಗಳಲ್ಲಿ ಮೂರು ದಶಕಗಳ ಅವಧಿಯಲ್ಲಿ ಮಾನವ ಅಭಿವೃದ್ಧಿಯಲ್ಲಿಯ ಅಂತರಗಳು ಕುಗ್ಗುತ್ತಿವೆ. ವರಮಾನದಲ್ಲಿಯ ಅಂತರಗಳು ಅಧಿಕಗೊಳ್ಳುತ್ತಿವೆ. ಉತ್ತರ-ದಕ್ಷಿಣ ರಾಷ್ಟ್ರಗಳ ಒಳಗಡೆಯ ರಾಷ್ಟ್ರಗಳಲ್ಲಿ ವರಮಾನದಲ್ಲಿಯ ಅಂತರಗಳು ಹೆಚ್ಚಾಗುತ್ತಿವೆ. ಮುಂದುವರಿದ ಕೈಗಾರೀಕರಣ ಹೊಂದಿದ ರಾಷ್ಟ್ರಗಳಲ್ಲಿ ಮಾನವ ಅಭಿವೃದ್ಧಿ ಮತ್ತು ವರಮಾನಗಳ ನಡುವಿನ ಅಂತರಗಳು ಕುಗ್ಗುತ್ತಿವೆ(**ಡ್ರಾಪರ್ ೧೯೯೧;VIII**).

ಇಲ್ಲಿ ಸಮೀಕ್ಷೆಗೆ ಒಳಪಟ್ಟ ಅಧ್ಯಯನಗಳು ಪ್ರಾದೇಶಿಕ ಅಸಮಾನತೆಗೆ ಸಂಬಂಧಿಸಿದಂತೆ ವಿಭಿನ್ನ ಫಲಿತಗಳನ್ನು ನೀಡಿವೆ. ಕೆಲವು ಅಧ್ಯಯನಗಳು ವರಮಾನದ ದೃಷ್ಟಿಯಿಂದ ಭಾರತದಲ್ಲಿಯ ಪ್ರಾದೇಶಿಕ ಅಂತರಗಳು ಕುಗ್ಗುತ್ತಿವೆ ಎಂಬುದನ್ನು ತಿಳಿಸಿದರೆ, ಇನ್ನು ಕೆಲವು ಅಧ್ಯಯನಗಳು ಇದಕ್ಕೆ ಪ್ರತಿಕೂಲವಾದ ತಥ್ಯವನ್ನು ಹೊರಹಾಕಿದೆ. ಆದರೆ ಬಹುಪಾಲು ಅಧ್ಯಯನಗಳು ವರಮಾನಕ್ಕೆ ಸಂಬಂಧಿಸಿದಂತೆ ಪ್ರಾದೇಶಿಕ ಅಸಮಾನತೆಗಳು ತೀವ್ರಗೊಳ್ಳುತ್ತಿರುವುದನ್ನು ತಿಳಿಸಿವೆ. ಉದಾರೀಕರಣೋತ್ತರ ಅವಧಿಯಲ್ಲಿ ಅಸಮಾನತೆಯ ಅಂತರಗಳು ತೀವ್ರಗೊಳ್ಳುತ್ತಿರುವುದನ್ನು ಸಹ ಕೆಲವು ಅಧ್ಯಯನಗಳು ದೃಢಪಡಿಸಿವೆ.

ಮಾನವ ಅಭಿವೃದ್ಧಿಯ ವಿಚಾರ ಪ್ರಣಾಳಿಕೆಯ ಸೈದ್ಧಾಂತಿಕೆಯ ಹಿನ್ನೆಲೆಯಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕ ರೂಪುಗೊಂಡಿದೆ. ಇದು ಆರೋಗ್ಯ-ಸಾಕ್ಷರತೆ-ವರಮಾನ ಮೂರನ್ನು ಒಳಗೊಂಡ ಸಂಯುಕ್ತ ಸೂಚ್ಯಂಕವಾಗಿದೆ. "ಆರ್ಥಿಕ ಪ್ರಗತಿಯ ಮೇಲೆ ಮಾತ್ರ ಗಮನವನ್ನು ಕೇಂದ್ರೀಕರಿಸಿ ಕಲ್ಯಾಣ ತರುವ ಇತರೆ ಮುಖ್ಯ ಅಂಶಗಳನ್ನು ತೆಗೆದುಕೊಳ್ಳದ ತಲಾದಾಯಕ್ಕೆ ಬದಲಾಗಿ ಒಂದು ದೇಶದ ಸಾಧನೆಗಳನ್ನು ಮಾನವ ಸಾಮರ್ಥ್ಯಗಳ ರೂಪದಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕ ಮಾಪನ ಮಾಡುತ್ತದೆ" (**ಕರ್ನಾಟಕದಲ್ಲಿ ಮಾನವ ಅಭಿವೃದ್ಧಿ, ೧೯೯೯:೧೧**).

ಈ ಸೂಚ್ಯಂಕವು ಜನತೆಯ ಆರೋಗ್ಯ ಸ್ಥಿತಿ ತಿಳಿಯಲು ಜನರ ಆಯುರ್ಮಾನವನ್ನು ಮಾಪನವನ್ನಾಗಿ ತೆಗೆದುಕೊಂಡಿದೆ. ಶೈಕ್ಷಣಿಕ ಸ್ಥಿತಿಗತಿಗಳನ್ನು ತಿಳಿಯಲು ವಯಸ್ಕರ ಸಾಕ್ಷರತಾ ಪ್ರಮಾಣ(ಮೂರನೆಯ ಎರಡರಷ್ಟು ಪ್ರಾಬಲ್ಯ ಇದಕ್ಕೆ ನೀಡಲಾಗಿದೆ) ಹಾಗೂ ಪ್ರಾಥಮಿಕ, ಮಾಧ್ಯಮಿಕ ಮತ್ತು ತೃತೀಯ ಮಟ್ಟಗಳಲ್ಲಿ ಒಟ್ಟಾರೆಯಾಗಿ ಸಂಘಟಿಸಿ ಲೆಕ್ಕ ಹಾಕಲಾದ ದಾಖಲಾತಿ ಅನುಪಾತವನ್ನು ಆಯ್ಕೆ ಮಾಡಿಕೊಂಡಿದೆ. ಆರ್ಥಿಕ ಸ್ಥಿತಿಯನ್ನು ತಿಳಿಯಲು ವರಮಾನವನ್ನು

[illegible]

ಮಾಪನವನ್ನಾಗಿ ಪರಿಗಣಿಸಿದೆ. ಜೀವನಮಟ್ಟ ಡಾಲರುಗಳಲ್ಲಿ ಖರೀದಿ ಶಕ್ತಿಗೆ ಸಮಾನವಾಗಿ ಹೊಂದಿಸಲ್ಪಟ್ಟ ತಲಾವಾರು ನೈಜ ಜಿಡಿಪಿಯಿಂದ ಮಾಪನ ಮಾಡಲಾಗಿದೆ.

ಮಾನವ ಅಭಿವೃದ್ಧಿಯ ಸೂಚ್ಯಂಕದಲ್ಲಿ ಆರೋಗ್ಯಕ್ಕೆ ಮೊದಲ ಆದ್ಯತೆಯನ್ನು ನೀಡಲಾಗಿದೆ. ಅಭಿವೃದ್ಧಿಯ ದೃಷ್ಟಿಯಿಂದ ಆರೋಗ್ಯವು ಮುಖ್ಯವೆನಿಸುತ್ತದೆ. ಕೇರಳದಲ್ಲಿ ಆರೋಗ್ಯ ಭಾಗ್ಯದಲ್ಲಿಯ ಸುಧಾರಣೆಯು, ಅಧಿಕಮಟ್ಟದ ಸಾಮಾಜಿಕ ಅಭಿವೃದ್ಧಿಗೆ ಕಾರಣವಾಗಿದೆ.

ಮಾನವ ಅಭಿವೃದ್ಧಿಯಲ್ಲಿ ಆರೋಗ್ಯದ ಮಾಪನವಾಗಿ ಆಯುರ್ಮಾನವನ್ನು ಸೂಚಿಯಾಗಿ ಪರಿಗಣಿಸಲಾಗಿದೆ. ಜನತೆಯ ಅದರಲ್ಲಿಯೂ ಮಹಿಳೆಯರ ಆಯುರ್ಮಾನವು ಸಂತಾನೋತ್ಪತ್ತಿ, ಶಿಶು ಮತ್ತು ಮಕ್ಕಳ ಮರಣ ಪ್ರಮಾಣ, ಲಿಂಗತಾರತಮ್ಯ ಮುಂತಾದ ಅಂಶಗಳನ್ನು ಆಧರಿಸುತ್ತದೆ. ಶಿಶು ಮತ್ತು ಮಕ್ಕಳ ಮರಣ ಪ್ರಮಾಣಗಳು, ಮಹಿಳೆಯರ ಆಯುರ್ಮಾನವನ್ನು ನಿರ್ಧಸಿರುವ ಪ್ರಮುಖ ಅಂಶಗಳಲ್ಲಿ ಒಂದಾಗಿದೆ. ಕಾಲ್ಡ್‌ವೆಲ್ (೧೯೭೬), ದಾಸಗುಪ್ತ (೧೯೮೪) ಮತ್ತು ಸೇನ್ (೧೯೯೫) ಅವರ ಅಧ್ಯಯನಗಳು ಮಹಿಳೆಯರ ಶಿಕ್ಷಣವು ಶಿಶು ಮತ್ತು ಮಕ್ಕಳ ಮರಣ ಪ್ರಮಾಣ ನಿರ್ಧರಿಸುವ ಪ್ರಮುಖ ಅಂಶಗಳೆಂದು ತಿಳಿಸಿವೆ.

ಮಾನವ ಅಭಿವೃದ್ಧಿ ವಿಚಾರ ಪ್ರಣಾಳಿಕೆಯು, ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ನಿಕೃಷ್ಟಕ್ಕೆ ಒಳಗಾಗಿದ್ದ ಮಹಿಳೆಯರಿಗೆ, ಅವರ ಕಾರ್ಯಭಾರಕ್ಕೆ ಹೆಚ್ಚಿನ ಒತ್ತನ್ನು ನೀಡಿದೆ. ಈ ವಿಚಾರ ಪ್ರಣಾಳಿಕೆಯು ಲಿಂಗ-ತಾರತಮ್ಯ, ಲಿಂಗ ಪಕ್ಷಪಾತವು ಅಭಿವೃದ್ಧಿಗೆ ತೊಡಕಾಗುವ ಪ್ರಮುಖ ಅಂಶಗಳಲ್ಲಿ ಒಂದಾಗಿದೆ ಎಂಬ ಅಂಶವನ್ನು ಸಾರಿದೆ. ಲಿಂಗ ತಾರತಮ್ಯಕ್ಕೆ, ಮಹಿಳೆಯರ ಪ್ರತಿಕೂಲ ಸ್ಥಿತಿಗೆ ಕಾರಣಗಳೇನು ಎಂಬುವುದಕ್ಕೆ ಅನೇಕ ಅಧ್ಯಯನಗಳು ತಮ್ಮದೇ ಆದ ರೀತಿಯಲ್ಲಿ ಕಾರಣಗಳನ್ನು ನೀಡಿವೆ. ಸಮಾಜದಲ್ಲಿ ಲಿಂಗ ಪಕ್ಷಪಾತ ಇರುವುದರ ಬಗ್ಗೆ ಅನೇಕ ಸಂಶೋಧನೆಗಳು ನಡೆದಿವೆ ಮತ್ತು ನಡೆಯುತ್ತಿವೆ. ಕುಟುಂಬಗಳಲ್ಲಿ 'ಆಹಾರ ಮತ್ತು ಆರೋಗ್ಯ ಭಾಗ್ಯಗಳಲ್ಲಿ ಹೆಣ್ಣುಮಕ್ಕಳು ಎದುರಿಸುತ್ತಿರುವ ತಾರತಮ್ಯತೆಗಳನ್ನು ಅನೇಕ ಅಧ್ಯಯನಗಳು ಗುರುತಿಸಿವೆ (ಗಾರ್ಡನ್, ೧೯೭೧ ಲೆವಿಸನ್, ಒ೧೯೭೨, ಸೇನ್ ಮತ್ತು ಸೇನ್ ಗುಪ್ತ, ೧೯೮೩, ಡೈಸನ್, ೧೯೮೮, ದಾಸ್ ಗುಪ್ತ, ೧೯೮೭, ಸೇನ್, ೧೯೮೭) "ಅಧಿಕ ಬಡತನ ಇರುವಲ್ಲಿ, ಮಕ್ಕಳು ಬದುಕುಳಿಯು ಸಾಧ್ಯತೆಗಳಲ್ಲಿ ಹೆಣ್ಣು ಮಕ್ಕಳಿಗಿರುವ ಪ್ರತಿಕೂಲ ಸ್ಥಿತಿ ಕಡಿಮೆ ಇರುತ್ತದೆ (ಮೂರ್ತಿ, ೧೯೮೬). ಕೆಳವರ್ಗದ ಜನರಲ್ಲಿ ಮಹಿಳೆಯರಿಗೆ ಪ್ರತಿಕೂಲ ಸ್ಥಿತಿ ಕಡಿಮೆ ಇದ್ದರೆ, (ಮಿಲ್ಲರ್, ೧೯೮೧), ಮೇಲ್ವರ್ಗದಲ್ಲಿ ಅಧಿಕ ಪ್ರತಿಕೂಲ ಸ್ಥಿತಿ ಇರುತ್ತದೆ (ಸೇನ್, ೧೯೯೫). ಕೃಷ್ಣಾಜಿ (೧೯೮೭), ದಾಸ್ ಗುಪ್ತ (೧೯೯೩), ಮಿಲ್ಲರ್ (೧೯೯೩) ಅವರ ಅಧ್ಯಯನಗಳು ಬಡತನ ಅಧಿಕವಾದಂತೆಲ್ಲ ಮಹಿಳೆಯರ ಪ್ರತಿಕೂಲ ಸ್ಥಿತಿ ಕಡಿಮೆಯಾಗುತ್ತದೆ ಎಂಬುವುದನ್ನು ತಿಳಿಸಿವೆ. ಈ ಅಭಿಪ್ರಾಯಕ್ಕೆ ವಿರುದ್ಧವಾಗಿ ಬಡತನ ಕಡಿಮೆಯಾದಂತೆಲ್ಲಾ ಮಹಿಳೆಯರಿಗಿರುವ ಪ್ರತಿಕೂಲ ಸ್ಥಿತಿ ಕಡಿಮೆಯಾಗುತ್ತದೆ ಎಂಬುದು ಅಗ್ರವಾಲ್ (೧೯೯೧)ಅವರ ಅಧ್ಯಯನದ ಫಲಿತವಾಗಿದೆ.

[illegible]

ಸಾಕ್ಷರತೆ ಅಥವಾ ಶಿಕ್ಷಣ ಮತ್ತು ಲಿಂಗ ತಾರತಮ್ಯತೆ ಅಥವಾ ಮಹಿಳೆಯರ ಪ್ರತಿಕೂಲ ಸ್ಥಿತಿ ನಡುವಿನ ಸಂಬಂಧವನ್ನು ಅನೇಕ ಅಧ್ಯಯನಗಳು ಗುರುತಿಸಿವೆ. ಕೆಲವು ಅಧ್ಯಯನಗಳ ಪ್ರಕಾರ ತಾಯಿಯ ಸಾಕ್ಷರತೆ ಮತ್ತು ಮಹಿಳೆಯರ ಪ್ರತಿಕೂಲ ಸ್ಥಿತಿಗಳ ನಡುವೆ ಅನುಲೋಮ ಸಂಬಂಧವಿದೆ (ಮೂರ್ತಿ, ೧೯೯೬), ದಾಸ್ ಗುಪ್ತ, ೧೯೮೭ ಮತ್ತು ಮಾರಿಭಟ್, ೧೯೯೫. ಆದರೆ ಸೈಮನ್ಸ್ (೧೯೮೨)ರ ಪ್ರಕಾರ ಅವೆರಡರ ನಡುವಿನ ಸಂಬಂಧವು ಋಣಾತ್ಮಕವಾಗಿರುತ್ತದೆ. "ಸಾಮಾನ್ಯವಾಗಿ ಇವೆರಡರ ನಡುವಿನ ಸಂಬಂಧವು ಅನುಲೋಮ (Positive)ವಾಗಿರುತ್ತದೆ. ಆದರೆ ದಕ್ಷಿಣಭಾರತದಲ್ಲಿ ಋಣಾತ್ಮಕವಾಗಿರುವ ಸಾಧ್ಯತೆ ಇದೆ" ಎಂಬುದು ಬಸು (೧೯೯೨)ಅವರ ಅಧ್ಯಯನದ ತಥ್ಯವಾಗಿದೆ. ಮಹಿಳಾ ಸಾಕ್ಷರತೆ ಮತ್ತು ಲಿಂಗ ಪಕ್ಷಪಾತಗಳ ನಡುವಿನ ಸಂಬಂಧವು ಉತ್ತರಭಾರತದಲ್ಲಿ ಅನುಲೋಮವಾಗಿದ್ದು, ದಕ್ಷಿಣ ಭಾರತದಲ್ಲಿ ವಿಲೋಮವಾಗಿದೆ (ವಾಕರ್, ೧೯೯೧). "ಮಹಿಳಾ ಸಾಕ್ಷರತಾ ಪ್ರಮಾಣ ಅಧಿಕವಾದಂತೆಲ್ಲ ಮಹಿಳೆಯರಿಗಿರುವ ಪ್ರತಿಕೂಲ ಸ್ಥಿತಿ ಕಡಿಮೆಯಾಗುತ್ತದೆ" (ವಾಕರ್, ೧೯೯೧). ಆದರೆ ಬಸು (೧೯೯೨) ಅವರ ಅಧ್ಯಯನ ತಿಳಿಸುವಂತೆ ಮಹಿಳಾ ಸಾಕ್ಷರತೆ ಕಡಿಮೆಯಾದಂತೆಲ್ಲ ಲಿಂಗ ತಾರತಮ್ಯ ಕಡಿಮೆಯಾಗುತ್ತಾ ಹೋಗುತ್ತದೆ. ಸಾಕ್ಷರತೆ ಅದರಲ್ಲಿಯೂ ಮಹಿಳಾ ಸಾಕ್ಷರತೆ ಮತ್ತು ಲಿಂಗಸಂಬಂಧಿ ತಾರತಮ್ಯಗಳ ನಡುವಿನ ಸಂಬಂಧವು ಸಂಕೀರ್ಣತೆಯಿಂದ ಕೂಡಿದ್ದು, ಯಾವುದೇ ಒಂದು ನಿರ್ಧಾರಕ್ಕೆ ಬರಲಾರದಂತಹ ಪರಿಸ್ಥಿತಿ ಇದೆ. ಸಾಕ್ಷರತೆ ಮತ್ತು ಲಿಂಗ ಪಕ್ಷಪಾತಗಳ ನಡುವಿನ ಚರ್ಚೆಯು ಹಾಗೆಯೇ ಮುಂದುವರಿಯುತ್ತಿದೆ.

ದುಡಿಮೆಯಲ್ಲಿ ಮಹಿಳೆಯ ಸಹಭಾಗಿತ್ವವು, ಮಹಿಳೆಯರ ಪ್ರತಿಕೂಲ ಸ್ಥಿತಿಯೊಂದಿಗೆ, ಋಣಾತ್ಮಕ ಸಂಬಂಧವಿರುವುದನ್ನು ಅಧ್ಯಯನಗಳು ದೃಢಪಡಿಸಿವೆ(Rosenzweing & Schueltz, 1982) ಪುರುಷ ದುಡಿಮೆಯ ಸಹಭಾಗಿತ್ವವು, ಮಕ್ಕಳು ಬದುಕುಳಿಯುವ ಸಾಧ್ಯತೆಯಲ್ಲಿಯ ಲಿಂಗತಾರಮ್ಯತೆಯೊಂದಿಗೆ ಧನಾತ್ಮಕ ಸಂಬಂಧ ಹೊಂದಿದೆ(Malhi 1991:108).

ಸಾಕ್ಷರತೆ ಮತ್ತು ದುಡಿಮೆಯ ಸಹಭಾಗಿತ್ವವನ್ನು ಹೊರತುಪಡಿಸಿ ಇತರೆ ಅಂಶಗಳು ಸಹ ಲಿಂಗಸಂಬಂಧಿ ಅಸಮಾನತೆಗೆ ಕಾರಣಗಳಾಗಿವೆ. ರೋಗಕ್ಕೆ ಚಿಕಿತ್ಸೆ ನೀಡುವ ಸಂದರ್ಭದಲ್ಲಿ ತೋರುವ ಅಸಮಾನತೆಗಳಿಂದಾಗಿ ಮಕ್ಕಳ ಮರಣ ಪ್ರಮಾಣದಲ್ಲಿ ಲಿಂಗತಾರತಮ್ಯತೆ ಕಂಡುಬರುತ್ತದೆ (ಬಸು, ೧೯೯೨;೨೨೭), (ಬಸು, ೧೯೮೯). "ಒಂದು ಹೆಣ್ಣು ಮಗುವಿಗಿಂತಲೂ ಅಧಿಕ ಹೆಣ್ಣು ಮಕ್ಕಳು ಇರುವ ಕುಟುಂಬಗಳಲ್ಲಿ ಲಿಂಗತಾರತಮ್ಯತೆ ಅಧಿಕವಿರುತ್ತದೆ (ಡಿಸೋಜ ಮತ್ತು ಕರೀಮ್, ೧೯೮೪; ಸಾಥರ್, ೧೯೮೭). ವಿವಾಹವಾದ ಗಂಡ-ಹೆಂಡಂದಿರ ನಡುವಿನ ವಯಸ್ಸಿನ ಅಂತರವು ಅಧಿಕ ಇರುವ ಕುಟುಂಬಗಳಲ್ಲಿ ಲಿಂಗತಾರತಮ್ಯತೆ ಅಧಿಕವಿರುತ್ತದೆ (ಜೈನ್, ೧೯೭೯; ಜೈನ್, ೧೯೮೪). ಇದಕ್ಕೆ ವಿರುದ್ಧವಾಗಿ ಮದುವೆಯಾದ ಗಂಡ-ಹೆಂಡತಿಯರ ನಡುವೆ ವಯಸ್ಸಿನ ಅಂತರವು ಅಧಿಕವಿರುವಲ್ಲಿ ಹೆಣ್ಣು ಮಕ್ಕಳ ನಿರ್ಲಕ್ಷದ ಪ್ರಮಾಣ ಕಡಿಮೆ ಇರುವುದನ್ನು ಮಾಯ್ಲಿ (೧೯೯೧) ಅವರ ಅಧ್ಯಯನವು ದೃಢಪಡಿಸಿದೆ. ಜನಸಂಖ್ಯೆಯಲ್ಲಿ ಪರಿಶಿಷ್ಟ ಪಂಗಡದ ಜನಸಂಖ್ಯೆ ಅಧಿಕ ಇದ್ದರೆ, ಅದು ಮಕ್ಕಳು ಬದುಕುಳಿಯುವ ಪ್ರಮಾಣದಲ್ಲಿಯ ಪ್ರತಿಕೂಲ ಸ್ಥಿತಿ

ಕಡಿಮೆಯಾಗಲು ಕಾರಣವಾಗುತ್ತದೆ. ಆದರೆ ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿಯವರ ಪ್ರಮಾಣ ಅಧಿಕವಿದ್ದಲ್ಲಿ ಅದು ಲಿಂಗ ಪಕ್ಷಪಾತಕ್ಕೆ ಕಾರಣವಾಗುತ್ತದೆ(ಮೂರ್ತಿ, ೧೯೯೬).

ರಾಜೇಶ್ವರಿ (೧೯೯೬) ಅವರ ಅಧ್ಯಯನವು ತಿಳಿಸುವಂತೆ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಇರದೇ ಇರುವ ಹಳ್ಳಿಗಳಲ್ಲಿ ಲಿಂಗ–ಪಕ್ಷಪಾತ ಅಧಿಕವಾಗಿರುತ್ತದೆ. ಆದರೆ ಆರ್ಥಿಕವಾಗಿ ಅಭಿವೃದ್ಧಿ ಹೊಂದಿರುವ ಪ್ರದೇಶಗಳಲ್ಲಿಯ(Helath care specialities) ಆರೋಗ್ಯ ಸೌಲಭ್ಯಗಳು ಲಿಂಗ ಪಕ್ಷಪಾತವನ್ನು ಕಡಿಮೆ ಮಾಡುತ್ತವೆ ಎಂದು ಹೇಳಲಿಕ್ಕಾವುದಿಲ್ಲ.

ಲಿಂಗ–ಪಕ್ಷಪಾತ ಅಥವಾ ಮಹಿಳೆಯರ ಪ್ರತಿಕೂಲ ಸ್ಥಿತಿಯು, ಮಹಿಳೆಯರ ದುಡಿಮೆಯ ಸಹಭಾಗಿತ್ವದೊಂದಿಗೆ ಋಣಾತ್ಮಕ ಸಂಬಂಧ ಹೊಂದಿರುತ್ತದೆ ಎಂವುದಕ್ಕೆ ಬಲಿಷ್ಟ ಇಂಪೀರಿಕಲ್ ಆಧಾರಗಳಿವೆ. ಆದರೆ ಇದಕ್ಕೆ ವಿರುದ್ಧವಾಗಿರುವ ಅಧ್ಯಯನಗಳು ಕಡಿಮೆ. ಉಳಿದಂತೆ ಮೇಲೆ ಚರ್ಚಿಸಲಾದ ಹಲವಾರು ಸಂಗತಿಗಳೊಂದಿಗೆ, ಲಿಂಗ–ತಾರತಮ್ಯವು ಹೊಂದಿರುವ ಸಂಬಂಧವು ಸಂಕೀರ್ಣತೆಯಿಂದ ಕೂಡಿದೆ. ಈ ನಿಟ್ಟಿನಲ್ಲಿ ಇನ್ನು ಅನೇಕ ಅಧ್ಯಯನಗಳಾಗಬೇಕಾದ ಅವಶ್ಯಕತೆ ಇದೆ.

ಮಾನವ ಅಭಿವೃದ್ಧಿ ವಿಚಾರ ಪ್ರಣಾಳಿಕೆಯಲ್ಲಿ ಆರೋಗ್ಯ, ಅಕ್ಷರಗಳ ನಂತರದ ಸ್ಥಾನವನ್ನು ವರಮಾನಕ್ಕೆ ನೀಡಲಾಗಿದೆ. ಈ ವಿಚಾರ ಪ್ರಣಾಳಿಕೆಯು ಸಾಮಾಜಿಕ ಅಂಶಗಳಿಗೆ ಕೊಟ್ಟ ಪ್ರಾಮುಖ್ಯತೆಯನ್ನು ವರಮಾನಕ್ಕೆ ಸಹ ನೀಡಿದೆ. ಈ ವಿಚಾರ ಪ್ರಣಾಳಿಕೆ ತಿಳಿಸುವಂತೆ, ಮಾನವ ಅಭಿವೃದ್ಧಿಯನ್ನು ಸ್ವಪೋಷಣೆ ನೀಡಬೇಕಾದರೆ ವರಮಾನವು ಅತ್ಯವಶ್ಯಕವಾಗಿ ಬೇಕೇ ಬೇಕಾಗುತ್ತದೆ. ಉದಾಹರಣೆಗೆ ಶ್ರೀಲಂಕಾ ದೇಶಗಳಲ್ಲಿ ವರಮಾನಕ್ಕೆ ಸಾಪೇಕ್ಷವಾಗಿ ಮಾನವ ಅಭಿವೃದ್ಧಿಯು ಉತ್ತಮ ಮಟ್ಟದಲ್ಲಿದೆ. ಆದರೆ ಶ್ರೀಲಂಕಾವು ಅದೇ ಮಟ್ಟದ ಮಾನವ ಅಭಿವೃದ್ಧಿ ಕಾಯ್ದುಕೊಳ್ಳಬೇಕಾದರೆ, ಅದು ಅನಿವಾರ್ಯವಾಗಿ, ತನ್ನ ವರಮಾನವನ್ನು ಅಧಿಕಗೊಳ್ಳಿಸಬೇಕಾಗಿದೆ. ಇದನ್ನೇ ಹಕ್ ಅವರು (೧೯೯೭) ದಕ್ಷಿಣ ಏಷ್ಯಾ ರಾಷ್ಟ್ರಗಳಲ್ಲಿ ಅಧ್ಯಯನವು ಸಹ ತಿಳಿಸುತ್ತದೆ. ವರಮಾನವಿಲ್ಲದೇ ಮಾನವ ಅಭಿವೃದ್ಧಿಯು ಸ್ವಪೋಷಣೆ ಆಗಲಾರದು.

ವರಮಾನದ ಕೊರತೆಯು ವರಮಾನದ ಬಡತನಕ್ಕೆ ಕಾರಣವಾಗುತ್ತದೆ. ಬಡತನ ಮತ್ತು ಆರೋಗ್ಯಗಳ ನಡುವೆ ಸಂಬಂಧವಿದೆ. ಮುಖರ್ಜಿ(೨೦೦೦) ಅವರ ಅಧ್ಯಯನ ತಿಳಿಸುವಂತೆ, ಬಡತನವು ಅಧಿಕ ಸಂತಾನೋತ್ಪತ್ತಿಗೆ ಕಾರಣವಾಗುತ್ತದೆ. ಅಧಿಕ ಸಂತಾನೋತ್ಪತ್ತಿಯು, ಮಾನವ ಅಭಿವೃದ್ಧಿಯನ್ನು ಕುಂಠಿತಗೊಳಿಸುವ ಸಾಧ್ಯತೆ ಇದೆ. ಬಡತನವು ಒಂದಲ್ಲ ಒಂದು ರೀತಿಯಲ್ಲಿ ಮಾನವ ಅಭಿವೃದ್ಧಿಯ ಮೇಲೆ ಪ್ರಭಾವ ಬೀರುತ್ತದೆ. ಆದ್ದರಿಂದ, ಒಂದು ಪ್ರದೇಶದ ಮಾನವ ಅಭಿವೃದ್ಧಿಗೆ ವರಮಾನವು ಸಹ ಮಹತ್ವದ ಕಾಣಿಕೆಯನ್ನು ನೀಡುತ್ತದೆ.

ಒಟ್ಟಿನಲ್ಲಿ ಹಿಂದಿನಿಂದಲೂ ಅಭಿವೃದ್ಧಿ ಸಿದ್ಧಾಂತಗಳಲ್ಲಿ ಕೇಂದ್ರಸ್ಥಾನ ಪಡೆದಿದ್ದ, ಆರ್ಥಿಕ ಅಂಶಗಳನ್ನು ಕಡೆಗಣಿಸದೇ ಅದರೊಂದಿಗೆ ಸಾಮಾಜಿಕ ಅಂಶಗಳು ಸಹ ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಮಹತ್ತರ ಪಾತ್ರವನ್ನು ವಹಿಸುತ್ತವೆ ಎನ್ನುವುದರ ಮೂಲಕ ಅಭಿವೃದ್ಧಿಯ

ಅರ್ಥವ್ಯಾಪ್ತಿಯನ್ನು ವಿಶಾಲ ಮತ್ತು ವಿಸ್ತೃತಗೊಳಿಸಿದ ಕೀರ್ತಿ ಮಾನವ ಅಭಿವೃದ್ಧಿ ವಿಚಾರ ಪ್ರಣಾಳಿಕೆಗೆ ಸಲ್ಲುತ್ತದೆ. ಇಲ್ಲಿಯವರೆಗೂ ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಮರೆಮಾಚಲಾಗಿದ್ದ ಮಹಿಳೆಯರಿಗೆ, ಅವರ ಕಾರ್ಯಭಾರಕ್ಕೆ ಈ ವಿಚಾರ ಪ್ರಣಾಳಿಕೆ ಹೆಚ್ಚಿನ ಸ್ಥಾನಮಾನ ನೀಡಿದೆ. ಮಹಿಳೆಯರ, ಮಕ್ಕಳ ಶ್ರೇಯಸ್ಸಿನ ಜೊತೆಯಲ್ಲಿ ಇಂದಿನ ಜನಾಂಗದೊಂದಿಗೆ, ಮುಂದಿನ ಜನಾಂಗದ ಶ್ರೇಯಸ್ಸನ್ನು ಸಹ ಬಯಸುವ ಈ ವಿಚಾರ ಪ್ರಣಾಳಿಕೆಯು ೨೧ನೇ ಶತಮಾನದ ಅನ್ವೇಷಣೆಗಳಲ್ಲಿ, ಪ್ರಮುಖ ಬೌದ್ಧಿಕ ಅನ್ವೇಷಣೆಯೆಂದೇ ಹೇಳಬಹುದಾಗಿದೆ.

ಅಧ್ಯಾಯ–ಮೂರು

ಅಧ್ಯಯನ ಕ್ಷೇತ್ರದ ಪರಿಚಯ

ಅಧ್ಯಾಯ–ಮೂರು

ಅಧ್ಯಯನ ಕ್ಷೇತ್ರದ ಪರಿಚಯ

೩.೧. ಪ್ರಸ್ತಾವನೆ

ಮಾನವ ಅಭಿವೃದ್ಧಿಯು ಶಿಕ್ಷಣ, ಆರೋಗ್ಯ ಮತ್ತು ಜೀವನೋಪಾಯ ಆಯಾಮಗಳನ್ನೊಳಗೊಂಡ ಒಂದು ಸಂಯುಕ್ತ ಸೂಚಿಯಾಗಿರುವುದರಿಂದ ಅದು ಪ್ರಾದೇಶಿಕ ನಿರ್ದಿಷ್ಟ ಅಂಶಗಳಿಂದ ಬಹಳಷ್ಟು ನಿರ್ಧರಿಸಲ್ಪಡುತ್ತದೆ. ಅದರಲ್ಲೂ ಮುಖ್ಯವಾಗಿ ಐತಿಹಾಸಿಕ, ಸಾಂಸ್ಕೃತಿಕ ಹಿನ್ನೆಲೆ, ಸಂಪನ್ಮೂಲ ತಳಹದಿ, ಕೃಷಿ ಪೂರಕ ಪರಿಸರ ಸಂಬಂಧಿ ಅಂಶಗಳು, ಮೂಲಭೂತ ಸೌಕರ್ಯಗಳು ಮತ್ತು ಸ್ಥಳೀಯ ಅಭಿವೃದ್ಧಿಯನ್ನು ಪೋಷಿಸುವ ಸಂಸ್ಥೆಗಳು ಯಾವುದೇ ಪ್ರದೇಶದ ಜನರ ಆರೋಗ್ಯ, ಉದ್ಯೋಗ ಹಾಗೂ ಆದಾಯಗಳನ್ನು ವೃದ್ಧಿಸಿ ಮಾನವ ಅಭಿವೃದ್ಧಿ ಪ್ರಕ್ರಿಯೆಗೆ ಪೂರಕವಾಗುತ್ತವೆ. ಪ್ರಮುಖವಾಗಿ ಜನರ ಜೀವನೋಪಾಯವು ಮಣ್ಣು, ಹವಾಮಾನ, ಖನಿಜಗಳ ಲಭ್ಯತೆ, ಕೃಷಿ ಮತ್ತು ಔದ್ಯಮಿಕ ಚಟುವಟಿಕೆಗಳನ್ನು ಪರಿಣಮಿಸಿ ಭವಿಷ್ಯದ ಬೆಳವಣಿಗೆಯನ್ನೂ ಸಹ ನಿರ್ಧರಿಸುತ್ತವೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಾಯವು ರಾಯಚೂರು ಜಿಲ್ಲೆಯ ಸಂಕ್ಷಿಪ್ತ ಐತಿಹಾಸಿಕ, ಭೌತಿಕ, ಹವಾಮಾನ ಸಂಬಂಧಿತ ಹಿನ್ನೆಲೆಗಳನ್ನಲ್ಲದೇ ಅದರ ಅಭಿವೃದ್ಧಿ ಅನುಭವವನ್ನು ಸಂಕ್ಷೇಪಿಸುವ ಉದ್ದೇಶ ಹೊಂದಿದೆ. ಇದು ಜಿಲ್ಲೆಯ ಸದ್ಯದ ಮಾನವ ಅಭಿವೃದ್ಧಿ ಸ್ಥಿತಿಯನ್ನು ಅರ್ಥೈಸಿಕೊಳ್ಳಲು ಸಹಾಯಕವಾಗುತ್ತದೆಯಲ್ಲದೇ ಮುಂದಿನ ಹಾದಿಯಲ್ಲಿರುವ ಅಡೆತಡೆಗಳನ್ನು ಗುರುತಿಸಿ ನಿವಾರಿಸಲು ಸಹಾಯಕವಾಗುತ್ತದೆ.

೩.೨. ಹಿನ್ನೆಲೆ ಮತ್ತು ಸಂಕ್ಷಿಪ್ತ ಇತಿಹಾಸ

ಕರ್ನಾಟಕ ರಾಜ್ಯದ ಕಡಿಮೆ ಮಳೆ ಬೀಳುವ ಮೈದಾನ ಪ್ರದೇಶದಲ್ಲಿ ಸ್ಥಿತವಾಗಿರುವ ರಾಯಚೂರು ಜಿಲ್ಲೆಯು ಆಂಧ್ರಪ್ರದೇಶ ರಾಜ್ಯದ ರಾಯಲಸೀಮೆಗೆ ಹೊಂದಿಕೊಂಡಿದ್ದು ತಕ್ಷಣಕ್ಕೆ ಬರಪೀಡಿತ, ಹಿಂದುಳಿದ, ಬಡತನದಿಂದ ಬಳಲುವ ಜನರ, ವಲಸೆಯ ಮತ್ತು ವಂಚಿತತೆ ಹಾಗೂ ದುಸ್ಥಿತಿಯ ಚಿತ್ರಗಳನ್ನು ಕಣ್ಮುಂದೆ ತರುತ್ತದೆ. ಕರ್ನಾಟಕ ಸರಕಾರದ ಪ್ರಾದೇಶಿಕ

[illegible]

ಅಸಮತೋಲನಗಳನ್ನು ಸರಿಪಡಿಸುವ ಉನ್ನತ ಸಮಿತಿಯು(ಡಾ.ನಂಜುಂಡಪ್ಪ ಸಮಿತಿ) ರಾಯಚೂರು ಜಿಲ್ಲೆಯನ್ನು ಅತ್ಯಂತ ಹಿಂದುಳಿದ ಜಿಲ್ಲೆಯಾಗಿ ಮತ್ತು ದೇವದುರ್ಗ ತಾಲೂಕನ್ನು ಅತ್ಯಂತ ಹಿಂದುಳಿದ ತಾಲೂಕನ್ನಾಗಿ ವರ್ಗೀಕರಿಸಿದೆಯಲ್ಲದೇ ಕೇಂದ್ರ ಸರಕಾರವು ತನ್ನ ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ನಿಧಿ ಕಾರ್ಯಕ್ರಮದಡಿಯಲ್ಲಿಯೂ ಜಿಲ್ಲೆಯನ್ನು ಹಿಂದುಳಿದ ಜಿಲ್ಲೆ ಎಂದು ಗುರುತಿಸಿದೆ. ಅಲ್ಲದೇ ರಾಜ್ಯದ ಎರಡು ಮಾನವ ಅಭಿವೃದ್ಧಿ ವರದಿಗಳೂ (೧೯೯೯ ಮತ್ತು ೨೦೦೫) ರಾಯಚೂರು ಜಿಲ್ಲೆಯನ್ನು ಅತ್ಯಂತ ಹಿಂದುಳಿದ ಜಿಲ್ಲೆಯಾಗಿ ಗುರುತಿಸಿವೆ. ಈ ಪರಿಸ್ಥಿತಿಗೆ ಭೌತ-ಭೌಗೋಳಿಕ ಅಂಶಗಳು ಎಷ್ಟರಮಟ್ಟಿಗೆ ಕಾರಣವಾಗಿವೆ? ಐತಿಹಾಸಿಕ ಮತ್ತು ಸಾಂಸ್ಕೃತಿಕ ಕಾರಣಗಳು ಹಿಲ್ಲೆಯ ಪ್ರಗತಿಗೆ ಯಾವ ರೀತಿ ಪೂರಕವಾಗಿ ಪರಿಣಮಿಸಿವೆ? ಮೂಲಭೂತ ಸೌಲಭ್ಯಗಳ ಪ್ರಮಾಣ ಹಾಗೂ ಗುಣಮಟ್ಟಗಳೇನು? ಈ ಮುಂತಾದ ಪ್ರಶ್ನೆಗಳಿಗೆ ಉತ್ತರಿಸುತ್ತಾ ರಾಯಚೂರು ಜಿಲ್ಲೆಯ ಮಾನವ ಅಭಿವೃದ್ಧಿಯ ಅನುಭವ ಸಾರಾಂಶದ ಪ್ರಯತ್ನವನ್ನು ಈ ಮುಂದೆ ಮಾಡಲಾಗಿದೆ.

ಸಂಕ್ಷಿಪ್ತ ಪ್ರಾದೇಶಿಕ ಇತಿಹಾಸ

ರಾಯಚೂರು ಜಿಲ್ಲೆಗೆ ಭವ್ಯ ಇತಿಹಾಸವಿದೆ. ಮೌರ್ಯ ಸಾಮ್ರಾಟ್ ಅಶೋಕನ ಆಳ್ವಿಕೆಯಿಂದ ಅದರ ಇತಿಹಾಸ ಆರಂಭವಾಗುತ್ತದೆ. ಹಲವಾರು ಶಿಲಾಶಾಸನಗಳು, ಇತರ ದಾಖಲೆಗಳು, ದೇವಾಲಯಗಳು, ಕೋಟೆಗಳು ಮತ್ತು ಯುದ್ಧಭೂಮಿಗಳು ಇದಕ್ಕೆ ಸಾಕ್ಷಿಯಾಗಿವೆ. ಜಿಲ್ಲೆಯ ದಾಖಲಿತ ಇತಿಹಾಸವು ಕ್ರಿಸ್ತ ಪೂರ್ವ ೩ನೆಯ ಶತಮಾನದಷ್ಟೆ ಹಿಂದೆ ಕೆತ್ತಲಾದ ಲಿಂಗಸೂಗೂರು ತಾಲೂಕಿನ ಮಸ್ಕಿ ಗ್ರಾಮದ ಬಳಿ ದೊರೆತ ಅಶೋಕನ ಶಿಲಾಶಾಸನದಿಂದ ಪ್ರಾರಂಭವಾಗುತ್ತದೆ. ಕ್ರಿಸ್ತಶಕೆಯ ಆರಂಭದ ದಿನಗಳಲ್ಲಿ ಜಿಲ್ಲೆಯು ಶಾತವಾಹನ ಸಾಮ್ರಾಜ್ಯದ ಭಾಗವಾಗಿದ್ದಿತು. ಮೂರು ಹಾಗೂ ನಾಲ್ಕನೆಯ ಶತಮಾನಗಳ ಅವಧಿಯಲ್ಲಿ ವಾಕಾಟಕರು ಈ ಪ್ರದೇಶದ ಮೇಲೆ ತಮ್ಮ ಆಧಿಪತ್ಯ ಸ್ಥಾಪಿಸಿದ್ದರು. ನಂತರ ಅದು ಕದಂಬರ ನಿಯಂತ್ರಣದಲ್ಲಿ ಬಂದಿತು. ನಂತರದಲ್ಲಿ ಜಿಲ್ಲೆಯನ್ನು ಆಳಿದ ವಂಶಗಳಲ್ಲಿ ಪ್ರಮುಖವಾದುದು ಎಂದರೆ ಬದಾಮಿಯ ಚಾಲುಕ್ಯ ವಂಶ. ಐಹೊಳೆಯಲ್ಲಿ ದೊರೆತ ಒಂದು ಶಿಲಾಶಾಸನದ ಪ್ರಕಾರ ಎರಡನೆಯ ಪುಲಿಕೇಶಿಯ ಪಲ್ಲವರನ್ನು ಸೋಲಿಸಿ ಈ ಪ್ರದೇಶವನ್ನು ತನ್ನ ಮಗನಾದ ಆದಿತ್ಯವರ್ಮನ ಆಡಳಿತಕ್ಕೆ ಬಿಟ್ಟುಕೊಟ್ಟನು. ಆಮೇಲೆ ಅದು ಎಂಟನೆಯ ಶತಮಾನದಲ್ಲಿ ಪ್ರವರ್ಧಮಾನಕ್ಕೆ ಬಂದ ರಾಷ್ಟ್ರಕೂಟರ ಅಧಿಪತ್ಯಕ್ಕೊಳಪಟ್ಟಿತು. ಮಾನವಿ ತಾಲೂಕಿನಲ್ಲಿ ದೊರೆತ ಒಂದು ಶಿಲಾಶಾಸನದಲ್ಲಿ ರಾಷ್ಟ್ರಕೂಟ ದೊರೆಯಾದ ಎರಡನೆಯ ಕೃಷ್ಣನ ಸಾಮಂತನಾದ ಜಗತ್ತುಂಗನು 'ಎಡದೊರೆ ಎರಡು ಸಾವಿರ ಪ್ರಾಂತ'ವನ್ನು (ಈಗಿನ ರಾಯಚೂರು ಜಿಲ್ಲಾ ಪ್ರದೇಶ) ಆಳಿರುವ ಉಲ್ಲೇಖವಿದೆ.

ಜಿಲ್ಲೆಯ ವಿವಿಧೆಡೆ ಲಭ್ಯವಿರುವ ಶಾಸನಗಳು ೧೦ ರಿಮದ ೧೨ನೆಯ ಶತಮಾನಗಳ ಬಹಳಷ್ಟು ಅವಧಿಯಲ್ಲಿ ಈ ಪ್ರದೇಶವು ಕಲ್ಯಾಣದ ಚಾಲುಕ್ಯರ ವಶದಲ್ಲಿದ್ದುದನ್ನು ತಿಳಿಸುತ್ತವೆ. ದಕ್ಷಿಣದ ಚೋಳರು ಮತ್ತು ಕಲ್ಯಾಣದ ಚಾಲುಕ್ಯರ ನಡುವೆ ಪದೇ ಪದೇ ಯುದ್ಧಗಳಾಗುತ್ತಿದ್ದು,

ಸ್ವಲ್ಪ ಸಮಯದವರೆಗೆ ಈ ಪ್ರಾಂತ್ಯವು ಚೋಳರ ವಶವಾಗಿದ್ದೂ ಇದೆ. ಹೈಹಯರು ಮತ್ತು ಸಿಂಧರು ಸಹ ಪ್ರದೇಶದ ಕೆಲವು ಭಾಗಗಳ ಮೇಲೆ ತಮ್ಮ ಆಳ್ವಿಕೆ ಸ್ಥಾಪಿಸಿದ್ದರು. ಚಾಲುಕ್ಯರ ಅವನತಿಯ ನಂತರ ಈ ಪ್ರದೇಶವು ಕಲಚೂರಿ ರಾಜರ ವಶವಾಯಿತು. ನಂತರ ೧೩ನೆಯ ಶತಮಾನದಲ್ಲಿ ಕಾಕತೀಯರು ಆಳ್ವಿಕೆ ನಡೆಸಿದರು. ಈ ಅವಧಿಯಲ್ಲಿನ ಹಲವಾರು ಶಾಸನಗಳು ಈ ಪ್ರದೇಶವನ್ನು ರಾಚವೂರು ಮತ್ತೆ ನಂತರ ಪೆರ್ಮರಾಚವೂರು ಎಂದು ಉಲ್ಲೇಖಿಸಿವೆ. ಕಾಕತೀಯರ ಅವನತಿಯ ನಂತರ ಈ ಪ್ರದೇಶವನ್ನು ವಿಜಯನಗರ ರಾಜರು ವಶಪಡಿಸಿಕೊಂಡು ಆಳ್ವಿಕೆ ನಡೆಸಿದರು. ೧೩೨೩ರಲ್ಲಿ ಬಹಮನಿ ಸುಲ್ತಾನರು ಈ ಪ್ರದೇಶವನ್ನು ವಶಪಡಿಸಿಕೊಂಡರಾದರೂ ೧೫೨೦ರ ಐತಿಹಾಸಿಕ ರಾಯಚೂರು ಯುದ್ಧದಲ್ಲಿ ವಿಜಯನಗರ ಕೃಷ್ಣದೇವರಾಯನು ಇದನ್ನು ಮರಳಿ ವಶಪಡಿಸಿಕೊಂಡನು. ನಂತರ ಈ ಪ್ರದೇಶವು ಮೊಘಲರು, ನಿಜಾಮರು ಮತ್ತು ನಂತರದಲ್ಲಿ ಬ್ರಿಟಿಷರ ನಿಯಂತ್ರಣದಲ್ಲಿ ಇದ್ದಿತು. ೧೯೫೬ರಲ್ಲಿ ರಾಯಚೂರು ಜಿಲ್ಲೆಯು ಮೈಸೂರು ರಾಜ್ಯದ ಭಾಗವಾಗಿ ಈಗಿನ ಕರ್ನಾಟಕ ರಾಜ್ಯಕ್ಕೆ ಸೇರಿಸಲ್ಪಟ್ಟಿತು.

೩.೩. ಜಿಲ್ಲೆಯ ಭೌಗೋಳಿಕ ವಿಭಾಗಗಳು

ಹೈದರಾಬಾದ ಕರ್ನಾಟಕವೆಂದು ಕರೆಸಿಕೊಳ್ಳುವ ಕರ್ನಾಟಕದ ಈಶಾನ್ಯ ಭಾಗದಲ್ಲಿ ರಾಯಚೂರು ಜಿಲ್ಲೆ ಸ್ಥಿತವಾಗಿದ್ದು ೧೫° ೯" ಮತ್ತು ೧೬° ೩೪" ಉತ್ತರ ಅಕ್ಷಾಂಶ ಹಾಗೂ ೭೫° ೪೬" ಮತ್ತು ೭೭° ೩೫" ಪೂರ್ವ ರೇಖಾಂಶಗಳ ಮಧ್ಯದಲ್ಲಿ ಬರುತ್ತದೆ. ಜಿಲ್ಲೆಯ ಸಾಮಾನ್ಯ ಇಳಿಜಾರು ವಾಯುವ್ಯ ಭಾಗದಿಂದ ಆಗ್ನೇಯದೆಡೆಗೆ ಇದ್ದು, ಸಮುದ್ರ ಮಟ್ಟದಿಂದ ಸರಾಸರಿ ೧೧೩೧ ಅಡಿಗಳ ಎತ್ತರದಲ್ಲಿದೆ. ಜಿಲ್ಲೆಯ ಭೌಗೋಳಿಕ ವಿಸ್ತೀರ್ಣವು ೮.೩೮೩ ಚದರ ಕಿ.ಮೀ.ಗಳಿದ್ದು ರಾಜ್ಯದ ಶೇ.೪.೪ರಷ್ಟು ಜಾಗವನ್ನು ಆಕ್ರಮಿಸಿಕೊಂಡು ಭೌಗೋಳಿಕವಾಗಿ ರಾಜ್ಯದ ಎರಡನೆಯ ಅತಿದೊಡ್ಡ ಜಿಲ್ಲೆಯಾಗಿದೆ. ಉತ್ತರದಲ್ಲಿ ಯಾದಗೀರ ಜಿಲ್ಲೆ, ವಾಯುವ್ಯದಲ್ಲಿ ವಿಜಯಪುರ ಬಾಗಲಕೋಟ ಜಿಲ್ಲೆಗಳು, ಪಶ್ಚಿಮದಲ್ಲಿ ಕೊಪ್ಪಳ ಜಿಲ್ಲೆ, ದಕ್ಷಿಣದಲ್ಲಿ ಬಳ್ಳಾರಿ, ಹಾಗೂ ಪೂರ್ವದಲ್ಲಿ ಆಂಧ್ರಪ್ರದೇಶದ ಮೆಹಬೂಬನಗರ ಮತ್ತು ಕರ್ನೂಲ ಜಿಲ್ಲೆಗಳು ರಾಯಚೂರನ್ನು ಸುತ್ತುವರೆದಿವೆ.

ಅದು ಉತ್ತರದಲ್ಲಿ ಕೃಷ್ಣಾ ಮತ್ತು ದಕ್ಷಿಣದಲ್ಲಿ ತುಂಗಭದ್ರಾ ನದಿಗಳಿಂದ ಆವೃತಗೊಂಡ ಸಮತಟ್ಟಾದ ಪ್ರದೇಶವಾದ್ದರಿಂದ ಐತಿಹಾಸಿಕವಾಗಿ ಈ ಪ್ರದೇಶದ ಮೇಲೆ ಹಿಡಿತ ಸಾಧಿಸಲು ಎಲ್ಲ ರಾಜವಂಶದವರು ತೀವ್ರ ಪ್ರಯತ್ನ ಮಾಡಿರುವುದು ವಿಸ್ತೃತವಾಗಿ ದಾಖಲಾಗಿದೆ. ಅದು 'ಎಡದೊರೆನಾಡು' ಮತ್ತು 'ರಾಯಚೂರು ದೋಅಬ್' ಎಂದು ಪ್ರಸಿದ್ಧಿ ಪಡೆದಿದ್ದು ಅದರ ಮೇಲೆ ಅಧಿಪತ್ಯ ಸ್ಥಾಪಿಸಲು ಹಲವು ಯುದ್ಧಗಳೇ ಆಗಿವೆ. ಬಹಳ ಸಮಯದವರೆಗೆ ಜಿಲ್ಲೆಯು ಬಹಮನಿ ಸುಲ್ತಾನರ ನಂತರ ಹೈದರಾಬಾದ ನಿಜಾಮರ ಆಳ್ವಿಕೆಯಲ್ಲಿದ್ದುದರಿಂದ ಅದರ ಸಮಾಜೋ ಸಾಂಸ್ಕೃತಿಕ ಮತ್ತು ರಾಜಕೀಯ ಲಕ್ಷಣಗಳು ತೀವ್ರವಾಗಿ ಪ್ರಭಾವಿಸಲ್ಪಟ್ಟಿವೆ.

೩.೪. ನೈಸರ್ಗಿಕ ಸಂಪನ್ಮೂಲಗಳು

ಜಿಲ್ಲೆಯು ಉತ್ತರದಲ್ಲಿ ಕೃಷ್ಣಾ ಮತ್ತು ದಕ್ಷಿಣದಲ್ಲಿ ತುಂಗಭದ್ರಾ ನದಿಗಳಿಂದ ಆವೃತಗೊಂಡು 'ರಾಯಚೂರು ದೋಆಬ್'ನ್ನು ನಿರ್ಮಿಸಿದೆ. ಸ್ವಾಭಾವಿಕವಾಗಿ ಜಿಲ್ಲೆಯ ಮಣ್ಣು ಕೆಲವೊಂದು ಕಡೆ ಗುಡ್ಡಗಾಡು ಹೊಂದಿದ್ದು ಬೆಳೆ ಬೆಳೆಯಲು ಸಾಹಸ ಮಾಡಬೇಕಾಗುತ್ತದೆ. ಇನ್ನೊಂದು ಕಡೆ ಸಂಪದ್ಭರಿತವಾಗಿದ್ದು ಹಲವಾರು ವಿಧದ ಬೆಳೆಗಳನ್ನು ಬೆಳೆಯಲು ಸೂಕ್ತವಾಗಿರುತ್ತದೆ. ಜಿಲ್ಲೆಯ ಎಲ್ಲ ಐದು ತಾಲೂಕುಗಳಿಗೆ ನೀರಾವರಿ ಸೌಕರ್ಯ ಲಭ್ಯವಿದ್ದು ಅದು ಸಂಪೂರ್ಣವಾಗಿ ಎಲ್ಲಾ ಹಳ್ಳಿಗಳನ್ನು ಆವರಿಸಿಕೊಂಡಿರುವುದಿಲ್ಲ ಕೆಲವೊಂದು ಕಡೆ ನೀರಾವರಿ ಅಭಾವವಿದೆ. ಮತ್ತೊಂದು ಕಡೆ ಉತ್ತಮ ಗುಣಮಟ್ಟದ ಭತ್ತಕ್ಕೆ ಜಿಲ್ಲೆಯು ಹೆಸರುವಾಸಿಯಾಗಿದೆ. ಜಿಲ್ಲೆಯಲ್ಲಿರುವ ಹಲವಾರು ಅಕ್ಕಿಗಿರಣಿಗಳು ಅತ್ಯುತ್ತಮ ಅಕ್ಕಿಯನ್ನು ಉತ್ಪಾದಿಸಿ ರಫ್ತು ಸಹ ಮಾಡುತ್ತಿವೆ. ಅಲ್ಲಿನ ಹಲವು ಜನರು ಅನ್ನಕ್ಕಾಗಿ ಪರದಾಡುವ ಸ್ಥಿತಿಯೂ ಇದೆ. ಜಿಲ್ಲೆಯಲ್ಲಿ ಉತ್ತಮವಾದ ಹತ್ತಿ ಮಾರುಕಟ್ಟೆ ಹಾಗೂ ಅದರ ವ್ಯವಹಾರವಿದೆ.

ಜಿಲ್ಲೆಯ ಮಣ್ಣುಗಳಲ್ಲಿ ನಾಲ್ಕು ಪ್ರಮುಕ ವಿಧಗಳಿವೆ ಕಪ್ಪು ಮತ್ತು ಕೆಂಪು ಮಿಶ್ರಿತ ಮಣ್ಣು, ಆಲವಾದ ಕಪ್ಪು ಮಣ್ಣು, ಅಷ್ಟೇನೂ ಆಳವಲ್ಲದ ಕಪ್ಪು ಮಣ್ಣು ಮತ್ತು ಮರಳು ಮಿಶ್ರಿತ ಕೆಂಪು ಮಣ್ಣು. ಕಪ್ಪು ಮತ್ತು ಕೆಂಪು ಮಿಶ್ರಿತ ಮಣ್ಣು ಸಾಮಾನ್ಯವಾಗಿ ಜಿಲ್ಲೆಯ ಕೇಂದ್ರ ಭಾಗಗಳಲ್ಲಿ ಇದ್ದರೆ, ಉಳಿದೆಡೆ ಮರಳು ಮಿಶ್ರಿತ ಕೆಂಪು ಮಣ್ಣು ಇದೆ. ಕೆಂಪು ಮಣ್ಣುಗಳಲ್ಲಿ ನೀರನ್ನು ಹೊರಹಾಕುವ ಗುಣವಿರುವುದರಿಂದ ಅಲ್ಲಿ ತೃಣ ಧಾನ್ಯಗಳನ್ನು ಬೆಳೆಯಲಾಗುತ್ತದೆಯಲ್ಲದೇ ನೀರಾವರಿ ಬೆಳೆಗಳಿಗೂ ಅದು ಸೂಕ್ತವಾಗಿದೆ. ಮಳೆಯಾಶ್ರಿತ ಬೆಳೆಗಳಾದ ಜೋಳ, ಹತ್ತಿ, ನೆಲಗಡಲೆ, ಮೆಣಸಿನಕಾಯಿ, ಗೋಧಿ ಮತ್ತು ದ್ವಿದಳ ಧಾನ್ಯಗಳನ್ನು ಇಲ್ಲಿ ಬೆಳೆದರೆ, ನೀರಾವರಿ ಆಶ್ರಯದಲ್ಲಿ ಭತ್ತ, ಕಬ್ಬು, ಮೆಕ್ಕೆಜೋಳ, ಗೋಧಿ, ಮೆಣಸಿನಕಾಯಿ, ಹತ್ತಿ, ದ್ವಿದಳ ಧಾನ್ಯಗಳು ಮತ್ತು ಬಾಳೆ ಬೆಳೆಗಳನ್ನು ಬೆಳೆಯಲಾಗುತ್ತದೆ. ಪಶ್ಚಿಮದಲ್ಲಿರುವ ಕಪ್ಪು ಮಣ್ಣಿನ ಪ್ರದೇಶದಲ್ಲಿ ಜೋಳ, ಗೋಧಿ, ತೃಣ ಧಾನ್ಯಗಳು, ಹತ್ತಿ, ಸೂರ್ಯಕಾಂತಿ ಮತ್ತು ನೆಲಗಡಲೆ ಬೆಳೆಗಳನ್ನು ಮಳೆಯಾಶ್ರಿತವಾಗಿ ಬೆಳೆದರೆ, ನೀರಾವರಿಯ ಆಶ್ರಯದಲ್ಲಿ ಭತ್ತ, ಕಬ್ಬು, ತರಕಾರಿ ಬೆಳೆಗಳು, ಈರುಳ್ಳಿ, ಮೆಣಸಿನಕಾಯಿ, ಜೋಳ, ಹತ್ತಿ, ಗೋಧಿ ಮತ್ತು ಬಾಳೆ ಬೆಳೆಗಳನ್ನು ಬೆಳೆಯುತ್ತಾರೆ.

ಮೇಲೆ ತಿಳಿಸಿದ ಮಣ್ಣಿನ ಸಂರಚನೆಯನ್ನು ಮತ್ತು ಇತರ ಭೌಗೋಳಿಕ ಲಕ್ಷಣಗಳನ್ನಾಧರಿಸಿದ ಬೆಳೆಯ ಮಾದರಿಯನ್ನು ಕೋಷ್ಟಕ-೩.೧ರಲ್ಲಿ ನೀಡಲಾಗಿದೆ. ಭತ್ತವು ಅತ್ಯಂತ ಪ್ರಮುಖ ಬೆಳೆಯಾಗಿದ್ದು ನಂತರದ ಸ್ಥಾನಗಳಲ್ಲಿ ಕ್ರಮವಾಗಿ ಜೋಳ, ಕಡಲೆ, ಸೂರ್ಯಕಾಂತಿ, ಮೆಕ್ಕೆಜೋಳ, ತೊಗರಿ, ಹತ್ತಿ ಮತ್ತು ನೆಲಗಡಲೆಗಳು ಬರುತ್ತವೆ. ಇತರ ಬೆಳೆಗಳು ಜಿಲ್ಲೆಯ ನಿವ್ವಳ ಬಿತ್ತನೆ ಪ್ರದೇಶದ ಶೇ.೧ ಕ್ಕಿಂತ ಕಡಿಮೆ ಪ್ರದೇಶವನ್ನು ಆವರಿಸಿಕೊಂಡಿವೆ.

ಹವಾಮಾನ

ರಾಯಚೂರು ಜಿಲ್ಲೆಯ ಹವಾಮಾನವು ವರ್ಷದ ಬಹುಭಾಗ ಆರ್ದ್ರತೆಯಿಂದ ಕೂಡಿದ್ದು ಬೇಸಿಗೆ ಕಾಲ ಕಡುಬಿಸಿಯಾಗಿರುವುದು ಸಾಮಾನ್ಯದ ಸಂಗತಿ. ವಾರ್ಷಿಕ ಹವಾಮಾನವನ್ನು ನಾಲ್ಕು

ಋತುಗಳಾಗಿ ವಿಂಗಡಿಸಬಹುದಾಗಿದ್ದು, ಬೇಸಿಗೆಕಾಲ ಫೆಬ್ರುವರಿ ಮಧ್ಯದಲ್ಲಿ ಆರಂಭವಾಗಿ ಮೇ ಕೊನೆಯವರೆಗೂ ಇರುತ್ತದೆ. ನೈಋತ್ಯ ಮುಂಗಾರು ಜೂನ್ ತಿಂಗಳಿನಿಂದ ಸಪ್ಟೆಂಬರ್ ತಿಂಗಳಿನವರೆಗೆ ಇದ್ದು, ಅಕ್ಟೋಬರ್ ಮತ್ತು ನವೆಂಬರ್ ತಿಂಗಳುಗಳು ಮಳೆಗಾಲದ ನಂತರದ ದಿನಗಳಾದರೆ, ಡಿಸೆಂಬರ್‌ನಿಂದ ಫೆಬ್ರುವರಿ ಮಧ್ಯದವರೆಗೆ ಚಳಿಗಾಲ ಇರುತ್ತದೆ. ಡಿಸೆಂಬರ್ ಅತ್ಯಧಿಕ ಛಳಿ ಇರುವ ತಿಂಗಳಾದರೆ. ಮೇ ತಿಂಗಳಿನಲ್ಲಿ ೩೯.೮ ಡಿಗ್ರಿ ತಾಪಮಾನದೊಂದಿಗೆ ಅತ್ಯಂತ ಉಷ್ಣತೆಯಿರುತ್ತದೆ. ಮಳೆಗಾಲದ ಆರಂಭದವರೆಗೂ ಉಷ್ಣತೆಯು ಬಹು ತೀವ್ರವಾಗಿರುತ್ತದೆ.

ಕೋಷ್ಟಕ–೩.೧

ರಾಯಚೂರು ಜಿಲ್ಲೆಯ ಬೆಳೆ ಮಾದರಿ, ೨೦೧೧–೧೨

ಬೆಳೆ	ಕ್ಷೇತ್ರ (೧೦೦೦ ಹೆಕ್ಟೇರುಗಳು)	ನಿವ್ವಳ ಬಿತ್ತನೆ ಪ್ರದೇಶಕ್ಕೆ %	ಬೆಳೆ	ಕ್ಷೇತ್ರ (೧೦೦೦ ಹೆಕ್ಟೇರುಗಳು)	ನಿವ್ವಳ ಬಿತ್ತನೆ ಪ್ರದೇಶಕ್ಕೆ %
ಭತ್ತ	೧೪೨.೭	೨೬.೬೧	ಹಣ್ಣುಗಳು	೦.೮೭	೦.೧೬
ಜೋಳ	೮೬.೧೩೮	೧೬.೦೬	ತರಕಾರಿ ಬೆಳೆಗಳು	೧.೯೯೬	೦.೩೭
ಮೆಕ್ಕೆಜೋಳ	೪೬.೨೧೬	೮.೬೨	ನೆಲಗಡಲೆ	೩೮.೦೪೮	೭.೦೯
ಸಜ್ಜೆ	೦.೬೮೭	೦.೧೩	ಸೂರ್ಯಕಾಂತಿ	೫೪.೧೯	೧೦.೧೦
ಗೋಧಿ	೨.೩೦೭	೦.೪೩	ಕುಸುಬೆ	೨.೮೭೪	೦.೫೪
ತೊಗರಿ	೪೨.೮೫೯	೭.೯೯	ಎಳ್ಳು	೫.೩೨೭	೦.೯೯
ಹೆಸರು	೨.೭೧೭	೦.೫೧	ಹತ್ತಿ	೩೮.೪೬೭	೭.೧೭
ಕಡಲೆ	೬೯.೭೭೬	೧೩.೦೧	ಇತರ	೦.೩೫	೦.೦೭
ಇತರ ದ್ವಿದಳ ಧಾನ್ಯಗಳು	೦.೭೬೬	೦.೧೪	ಒಟ್ಟು	೫೩೬.೨೯	೧೦೦.೦೦

ಮೂಲ: ಜಿ.ಸಾಂ.ಅಧಿಕಾರಿ, ರಾಯಚೂರು, ೨೦೧೧–೧೨

ಜೂನ್ ತಿಂಗಳಿನಿಂದ ಸೆಪ್ಟಂಬರ್ ತಿಂಗಳಿನವರೆಗೆ ಇರುವ ನೈಋತ್ಯ ಮುಂಗಾರಿನ ಅವಧಿಯಲ್ಲಿ ವರ್ಷದ ಸುಮರು ಶೇ.೭೧ರಷ್ಟು ಮಳೆ ಬೀಳುತ್ತದೆ. ಸರಾಸರಿ ವಾಡಿಕೆಯ ಮಳೆ ಪ್ರಮಾಣವು ೬೮೧ ಮೀ.ಮೀ. ಇದ್ದರೂ ವಾಸ್ತವಿಕವಾಗಿ ಮಳೆಯ ಪ್ರಮಾಣ ತುಂಬಾ ಕಡಿಮೆ ಸುಮಾರು ೨೯ ವಾರ್ಷಿಕ ಮಳೆ ದಿನಗಳ ಪ್ರಮಾಣ ತುಂಬಾನೇ ಅಸಮರ್ಪಕವೆಂದು ಹೇಳಬಹುದು. ಲಿಂಗಸೂಗೂರು ಭಾಗದ ಕಡೆಗೆ ಅತ್ಯಂತ ಕಡಿಮೆ ಮಳೆ ಬೀಳುತ್ತಿದ್ದು, ದಕ್ಷಿಣ ಮತ್ತು ಪೂರ್ವಕ್ಕೆ ಹೋದ ಹಾಗೆ ಮಳೆಯ ಪ್ರಮಾಣ ಅಧಿಕವಾಗುತ್ತದೆ.

ಖನಿಜ ಸಂಪನ್ಮೂಲಗಳು

ಚಿನ್ನ, ತಾಮ್ರ, ಕಬ್ಬಿಣ, ಫೆಲ್ಡಸ್ಪಾರ್, ಗ್ರಾನೈಟ್, ಮರಳುಕಲ್ಲು, ಕ್ವಾರ್ಟ್ಜ್ ಮತ್ತು ಸುಣ್ಣದ ಕಲ್ಲು ಇವುಗಳು ಜಿಲ್ಲೆಯಲ್ಲಿ ಲಭ್ಯವಿರುವ ಕೆಲವು ಪ್ರಮುಖ ಖನಿಜಗಳಾಗಿವೆ. ಹಟ್ಟಿ ಚಿನ್ನದ ಗಣಿಯು ರಾಜ್ಯದಲ್ಲಿಯೇ ಅತ್ಯಂತ ಹಳೆಯದಾದ ಚಿನ್ನದ ಗಣಿಯಾಗಿದೆ. ದೇವದುರ್ಗ ತಾಲೂಕಿನ

ಊಟಿ ಗ್ರಾಮದಲ್ಲಿ ಚಿನ್ನದ ಗಣಿಯು ನಡೆಯುತ್ತಿದೆ. ಆದರೆ ಎಲ್ಲ ಖನಿಜಗಳು ಅತ್ಯಲ್ಪ ಪ್ರಮಾಣದಲ್ಲಿ ಲಭ್ಯವಿರುವ ಕಾರಣ ಜಿಲ್ಲೆಯಲ್ಲಿ ಗಮನಾರ್ಹ ಔದ್ಯಮಿಕ ಚಟುವಟಿಕೆ ಕಂಡುಬರುವುದಿಲ್ಲ.

೩.೫. ಜನಸಂಖ್ಯೆ

೨೦೧೧ರಲ್ಲಿ ರಾಯಚೂರು ಜಿಲ್ಲೆಯಲ್ಲಿ ೧೯,೨೮,೮೧೨ ಜನರಿದ್ದು ಅದರಲ್ಲಿ ೯,೬೪,೫೧೧ ಪುರುಷರು ಮತ್ತು ೯,೬೪,೩೦೧ ಮಹಿಳೆಯರಿದ್ದರು. ಜಿಲ್ಲೆಯ ಬದಲಾಗುತ್ತಿರುವ ಜನಸಂಖ್ಯಾ ಮಾದರಿಯನ್ನು ೨೦೦೧-೨೦೧೧ರ ಅವಧಿಯಲ್ಲಿ ಜಿಲ್ಲೆಯ ಜನಸಂಖ್ಯಾ ಬೆಳವಣಿಗೆಯು ಶೇ.೧೫.೫೮ರ ಪ್ರಮಾಣದಲ್ಲಿದ್ದು ರಾಜ್ಯಮಟ್ಟಕ್ಕಿಂತ ಅಧಿಕವಾಗಿದೆ. ಲಿಂಗಾನುಪಾತವೂ ಸಹ ರಾಜ್ಯ ಮಟ್ಟಕ್ಕಿಂತ ಅಧಿಕವಿದ್ದು ಅನುಕೂಲಕರ ಪ್ರಮಾಣ (೧೦೦೦)ದಲ್ಲಿದೆ. ಜನಸಂಖ್ಯಾ ಸಾಂದ್ರತೆಯು ಪ್ರತಿಚದರ ಕಿ.ಮೀ.ಗೆ ೨೨೮ ಇದ್ದು ರಾಜ್ಯ ಮಟ್ಟಕ್ಕಿಂತ ಕಡಿಮೆ ಇದೆ. ಪ.ಜಾ. ಮತ್ತು ಪ.ಪಂ.ದ ಜನರ ಪ್ರಮಾಣ ಶೇ.೪೦ರಷ್ಟಿದ್ದರೆ. ಮಹಿಳೆಯರ ಸಂಖ್ಯೆಯು ಪುರುಷರ ಸಂಖ್ಯೆಗೆ ಅತಿ ಸನಿಹದಲ್ಲಿದೆ.

ಆದರೆ ಸಾಕ್ಷರತೆಗೆ ಸಂಬಂಧಿಸಿದಂತೆ ಜಿಲ್ಲೆಯ ಸಾಧನೆಯು ಬಹಳ ನಿರಾಶಾದಾಯಕವಾಗಿದ್ದು ಜಿಲ್ಲೆಯ ಕೇವಲ ೬೦ ಪ್ರತಿಶತದಷ್ಟು ಜನರು ಸಾಕ್ಷರರಾಗಿರುವರು. ಪುರುಷರಲ್ಲಿ ಶೇ.೭೧ರಷ್ಟು ಸಾಕ್ಷರರಿದ್ದರೆ, ಮಹಿಳೆಯರಲ್ಲಿ ಸಾಕ್ಷರತೆ ದರವು ಕೇವಲ ಶೇ.೩೮ರಷ್ಟಿದೆ. ದುಡಿಮೆಗಾರರ ಪ್ರಮಾಣವು ಜಿಲ್ಲೆಯಲ್ಲಿ ರಾಜ್ಯದ್ದಕ್ಕಿಂತ ಅಧಿಕವಿದೆ. ಆದರೆ ಬಹಳಷ್ಟು ದುಡಿಮೆಗಾರರು (ಶೇ.೬೯) ಕೃಷಿ ವಲಯದಲ್ಲಿ ಕಾರ್ಯನಿರತರಾಗಿದ್ದು ರಾಜ್ಯಮಟ್ಟದಲ್ಲಿ ಇದು ಶೇ.೪೭ರಷ್ಟಿದೆ. ಆದ್ದರಿಂದ ಔದ್ಯೋಗಿಕ ಮಾದರಿಯು ಪ್ರಮುಖವಾಗಿ ಕೃಷಿಸಂಬಂಧಿತವಾಗಿದೆ. ಹಾಗೆಯೇ ಜಿಲ್ಲೆಯ ಕೇವಲ ಕಾಲುಭಾಗ ಜನರು ನಗರವಾಸಿಗಳಾಗಿದ್ದು ಇದೂ ಸಹ ರಾಜ್ಯದ ಪ್ರಮಾಣಕ್ಕೆ ಹೋಲಿಸಿದರೆ ಕಡಿಮೆ. ತಾಲೂಕುವಾರು ಜನಸಂಖ್ಯೆಯ ಬೆಳವಣಿಗೆಯನ್ನು ಗಮನಿಸಿದರೆ, ೨೦೦೧ ಹಾಗೂ ೨೦೧೧ರ ಮಧ್ಯೆ ಅತ್ಯಂತ ಕನಿಷ್ಟ ಬದಲಾವಣೆಯಾಗಿದ್ದು ದೇವದುರ್ಗ ಮತ್ತು ಲಿಂಗಸೂಗೂರು ತಾಲೂಕುಗಳಲ್ಲಿ. ಅಲ್ಲಿ ಅಲ್ಪ ಪ್ರಮಾಣದ ಏರಿಕೆಯಾಗಿ ಉಳಿದೆಡೆ ಕಡಿಮೆಯಾಗಿದೆ. ರಾಯಚೂರು ತಾಲೂಕು ಗರಿಷ್ಠ ಜನಸಂಖ್ಯಾ ಪಾಲನ್ನು ಹೊಂದಿದ್ದರೆ (ಶೇ.೨೬), ದೇವದುರ್ಗ ತಾಲೂಕು ಕನಿಷ್ಠ ಪಾಲನ್ನು ಹೊಂದಿದೆ (ಶೇ.೧೫. ಉಳಿದ ತಾಲೂಕುಗಳ ಪಾಲು ಶೇ.೨೦ರ ಆಸುಪಾಸಿನಲ್ಲಿದೆ. ಹೀಗೆ ಜಿಲ್ಲೆಯ ಜನಸಂಖ್ಯೆಯು ರಾಜ್ಯದ್ದಕ್ಕಿಂತ ವೇಗವಾಗಿ ಬೆಳೆದಿದ್ದು, ಲಿಂಗಾನುಪಾತ ಮತ್ತು ದುಡಿಮೆಗಾರರ ಪ್ರಮಾಣಗಳು ಅನುಕೂಲಕರವಾಗಿವೆ. ಆದರೆ ಜಿಲ್ಲೆಯು ಪ್ರಮುಖವಾಗಿ ಗ್ರಾಮೀಣ ಮತ್ತು ಕೃಷಿಯಾಧಾರಿತವಾಗಿದ್ದು, ನಗರೀಕರಣ ಮತ್ತು ಕೃಷಿಯೇತರ ಉದ್ಯೋಗದ ಪ್ರಮಾಣಗಳು ಗಮನಾರ್ಹವಾಗಿಲ್ಲ.

ಜನಸಂಖ್ಯೆಯ ಬೆಳವಣಿಗೆ

ರಾಯಚೂರು ಜಿಲ್ಲೆಯ ಜನಸಂಖ್ಯೆಯು ೨೦೦೧-೨೦೧೧ರ ನಡುವೆ ೫೨.೫೯ಲಕ್ಷಗಳಷ್ಟು ಅಧಿಕವಾಗಿ, ಶೇ.೧೫.೩೮ರ ಪ್ರಮಾಣದಲ್ಲಿ ಬೆಳವಣಿಗೆ ಹೊಂದಿದೆ (ಕೋಷ್ಟಕ-೩.೨). ಈ ಹೆಚ್ಚಳದ

ಸಿಂಹಪಾಲು (ಶೇ.೭೩) ಗ್ರಾಮೀಣ ಭಾಗಗಳಲ್ಲಿ ಆಗಿದೆ. ತಾಲೂಕುವಾರು ರಾಯಚೂರು, ಲಿಂಗಸೂಗೂರು ಮತ್ತು ದೇವದುರ್ಗ ತಾಲೂಕುಗಳಲ್ಲಿನ ಹೆಚ್ಚಳವು ಗಮನಾರ್ಹವಾಗಿದ್ದು ಇವೇ ಮೂರು ತಾಲೂಕುಗಳ ಜನಸಂಖ್ಯಾ ಬೆಳವಣಿಗೆ ಪ್ರಮಾಣಗಳು ಅಧಿಕವಿವೆ.

ಕೋಷ್ಟಕ–೩.೨

ರಾಯಚೂರು ಜಿಲ್ಲೆಯ ಜನಸಂಖ್ಯಾ ಲಕ್ಷಣಗಳು ಮತ್ತು ಪ್ರವೃತ್ತಿಗಳು ೨೦೦೧ ಹಾಗೂ ೨೦೧೧

ತಾಲೂಕು	ಪ್ರದೇಶ	ತಾಲೂಕಿನಲ್ಲಿ % ಜನಸಂಖ್ಯೆ		ಜನಸಂಖ್ಯೆಯಲ್ಲಿನ ಒಟ್ಟು ಹೆಚ್ಚಳ	ಹೆಚ್ಚಳದಲ್ಲಿ ಶೇ. ಪಾಲು	೨೦೦೧–೨೦೧೧ರ ಮಧ್ಯೆ ಬೆಳವಣಿಗೆ ಪ್ರಮಾಣ	ಲಿಂಗ ಅನುಪಾತ	
		೨೦೦೧	೨೦೧೧				೨೦೦೧	೨೦೧೧
ದೇವದುರ್ಗ	ಗ್ರಾಮೀಣ	೧೨.೦೧	೧೩.೦೫	೫೧೨೧೪	೧೯.೭೭	೨೫.೫೫	೯೮೬	೧೦೦೫
	ನಗರ	೧.೩೨	೧.೫೦	೬೯೩೫	೨.೬೮	೩೧.೫೩	೯೪೪	೯೭೮
	ಒಟ್ಟು	೧೩.೩೨	೧೪.೫೫	೫೮೧೪೯	೨೨.೪೫	೨೬.೧೪	೯೮೨	೧೦೦೨
ಲಿಂಗಸುಗೂರು	ಗ್ರಾಮೀಣ	೧೪.೮೨	೧೫.೪೪	೫೦೨೬೫	೧೯.೪೦	೨೦.೩೧	೯೮೧	೯೮೫
	ನಗರ	೪.೪೧	೪.೫೬	೧೪೩೯೨	೫.೫೬	೧೯.೫೬	೯೫೨	೯೮೪
	ಒಟ್ಟು	೧೯.೨೩	೨೦.೦೦	೬೪೬೫೭	೨೪.೯೬	೨೦.೧೪	೯೭೪	೯೮೪
ಮಾನವಿ	ಗ್ರಾಮೀಣ	೧೭.೫೫	೧೬.೮೧	೩೧೦೯೯	೧೨.೦೧	೧೦.೬೧	೯೯೪	೧೦೧೫
	ನಗರ	೨.೨೫	೨.೪೧	೮೮೫೨	೩.೪೨	೨೩.೫೩	೯೭೩	೯೯೮
	ಒಟ್ಟು	೧೯.೮೧	೧೯.೨೨	೩೯೯೫೧	೧೫.೪೨	೧೨.೦೮	೯೯೨	೧೦೧೩
ರಾಯಚೂರು	ಗ್ರಾಮೀಣ	೧೨.೫೨	೧೨.೮೩	೩೮೫೦೦	೧೪.೮೬	೧೮.೪೨	೯೮೯	೧೦೦೮
	ನಗರ	೧೩.೫೬	೧೩.೦೨	೨೪೭೫೭	೯.೫೬	೧೦.೯೩	೯೫೯	೯೮೯
	ಒಟ್ಟು	೨೬.೦೭	೨೫.೮೫	೬೩೨೫೭	೨೪.೪೨	೧೪.೫೩	೯೭೩	೯೯೮
ಸಿಂಧನೂರು	ಗ್ರಾಮೀಣ	೧೭.೯೦	೧೬.೪೫	೧೮೪೬೧	೭.೧೩	೬.೧೮	೧೦೦೭	೧೦೦೬
	ನಗರ	೩.೬೭	೩.೯೩	೧೪೫೭೫	೫.೬೩	೨೩.೭೯	೯೫೫	೯೯೪
	ಒಟ್ಟು	೨೧.೫೭	೨೦.೩೯	೩೩೦೩೬	೧೨.೭೫	೯.೧೭	೯೯೮	೧೦೦೩
ಜಿಲ್ಲೆ	ಗ್ರಾಮೀಣ	೭೪.೮೦	೭೪.೫೮	೧೮೯೫೩೯	೭೩.೧೭	೧೫.೧೮	೯೯೨	೧೦೦೪
	ನಗರ	೨೫.೨೦	೨೫.೪೨	೬೯೫೧೧	೨೬.೮೩	೧೬.೫೨	೯೫೮	೯೮೯
	ಒಟ್ಟು	೧೦೦.೦೦	೧೦೦.೦೦	೨೫೯೦೫೦	೧೦೦.೦೦	೧೫.೫೧	೯೮೩	೧೦೦೦

ಮೂಲ:– ಜನಗಣತಿ ದಾಖಲೆಗಳು

ನಗರೀಕರಣ

ಜಿಲ್ಲೆಯ ನಗರೀಕರಣದ ಪ್ರಮಾಣವು ೨೦೦೧–೨೦೧೧ಮಧ್ಯೆ ಶೇ. ೨೫.೨ ರಿಂದ ಶೇ.೨೫.೪ಕ್ಕೆ ಅಲ್ಪ ಪ್ರಮಾಣದಲ್ಲಿ ಏರಿಕೆಯಾಗಿದೆ. ರಾಯಚೂರು ತಾಲೂಕಿನಲ್ಲಿ ಗರಿಷ್ಠ ನಗರೀಕರಣವಿದ್ದರೆ ದೇವದುರ್ಗ ತಾಲೂಕಿನಲ್ಲಿ ಕನಿಷ್ಟವಿದೆ. ರಾಯಚೂರು ತಾಲೂಕನ್ನು ಹೊರತು ಪಡಿಸಿ ಉಳಿದೆಲ್ಲ ತಾಲೂಕುಗಳಲ್ಲಿ ನಗರ ಜನಸಂಖ್ಯೆಯ ಪ್ರತಿಶತ ಪ್ರಮಾಣದಲ್ಲಿ ಹೆಚ್ಚಳವಾಗಿದೆ.

ಜನ ಸಾಂದ್ರತೆ

ಜಿಲ್ಲೆಯ ಜನಸಾಂದ್ರತೆಯು ೨೦೦೧ರಿಂದ ೨೦೧೧ರ ಅವಧಿಯಲ್ಲಿ ಎಲ್ಲ ತಾಲೂಕುಗಳಲ್ಲಿ ಏರಿಕೆಯಾಗಿರುವುದನ್ನು ಕಾಣಬಹುದಾಗಿದೆ. ಸಿಂಧನೂರು ಹಾಗೂ ಮಾನವಿ ತಾಲೂಕುಗಳಲ್ಲಿ ಸಾಂದ್ರತೆಯು ಸಾಪೇಕ್ಷವಾಗಿ ಅಧಿಕವಿದೆ.

ಕೋಷ್ಟಕ–೩.೩

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಸಂಖ್ಯಾ ಲಕ್ಷಣಗಳು

ತಾಲ್ಲೂಕು	ಒಟ್ಟು	ಒಟ್ಟು ಜನಸಂಖ್ಯೆ			ಒಟ್ಟು ಜನಸಂಖ್ಯೆ % ಪ್ರಮಾಣ			ಜಿಲ್ಲೆಗೆ	ನಗರ ಜನಸಂಖ್ಯೆ
		ಪ.ಜಾ	ಪ.ಪಂ	ಪ.ಜಾ/ ಪ.ಪಂಗಡ ಒಟ್ಟು	ಪ.ಜಾ	ಪ.ಪಂ	ಪ.ಜಾ/ ಪ.ಪಂಗಡ ಒಟ್ಟು	ಪ್ರಮಾಣ	ಪ್ರಮಾಣ
ದೇವದುರ್ಗ	೨೮೦೬೦೬	೬೦೪೭೮	೯೬೫೩೫	೧೫೭೦೧೩	೨೧.೫೫	೩೪.೪೦	೫೫.೯೫	೨೦.೪೪	೮.೬೮
ಲಿಂಗಸೂಗೂರು	೩೮೫೬೯೯	೮೯೬೯೨	೬೫೫೮೯	೧೫೫೨೮೧	೨೩.೨೫	೧೭.೦೧	೪೦.೨೬	೨೦.೨೨	೧೪.೨೭
ಮಾನವಿ	೩೭೦೬೭೦	೭೮೦೫೬	೮೯೧೯೦	೧೬೭೨೪೬	೨೧.೦೬	೨೪.೦೬	೪೫.೧೨	೩೩.೭೦	೭.೩೮
ರಾಯಚೂರು	೪೪೮೬೩೨	೧೦೪೮೪೯	೬೩೧೭೮	೧೬೮೦೨೭	೨೧.೦೩	೧೨೬೭	೩೩.೭೦	೨೧.೮೮	೩೬.೨೦
ಸಿಂಧನೂರು	೩೯೩೨೦೦	೬೭೮೫೮	೫೨೫೭೯	೧೨೦೪೩೭	೧೭.೨೬	೧೩.೩೭	೩೦.೬೩	೧೫.೬೮	೯.೫೧
ಜಿಲ್ಲೆ	೧೯೨೮೮೧೨	೪೦೦೯೩೩	೩೬೭೦೭೧	೭೬೮೦೦೪	೨೦.೭೯	೧೯.೦೩	೩೯.೮೨	೫.೨೨*	೧೫.೬೮
ರಾಜ್ಯ	೬೧೦೯೫೨೯೭	೧೦೪೭೪೯೯೨	೪೨೪೮೯೮೭	೧೪೭೨೩೯೭೯	೧೭.೧೫	೬.೯೫	೨೪.೧೦	–	೨೫.೮೦

ಮೂಲ:– ವಿವಿಧ ವರ್ಷಗಳ ಜನಗಣತಿ ವರದಿಗಳು/ದಾಖಲೆಗಳು

ಕೋಷ್ಟಕ ೩.೩ರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರ ಜನಸಂಖ್ಯಾ ಲಕ್ಷಣಗಳನ್ನು ತೋರಿಸಲಾಗಿದೆ. ೨೦೧೧ರಲ್ಲಿ ಪ.ಜಾ.ಯವರ ಜನಸಂಖ್ಯೆಯು ಜಿಲ್ಲೆಯ ಜನಸಂಖ್ಯೆಯ ಶೇ.೨೧ರಷ್ಟಿದ್ದರರೆ, ಪರಿಶಿಷ್ಟ ಪಂಗಡದವರ ಜನಸಂಖ್ಯೆಯು ಶೇ.೧೯ರಷ್ಟಿತ್ತು. ಲಿಂಗಸೂಗೂರು ತಾಲೂಕಿನಲ್ಲಿ ಗರಿಷ್ಠ ಪ್ರಮಾಣದ ಪ.ಜಾ.ಜನಸಂಖ್ಯೆ ಇದ್ದರೆ, ದೇವದುರ್ಗ ತಾಲೂಕಿನಲ್ಲಿ ಗರಿಷ್ಠ ಪ್ರಮಾಣದ ಪರಿಶಿಷ್ಟ ಪಂಗಡದ ಜನಸಂಖ್ಯೆಯಿದೆ. ೨೦೦೧–೨೦೧೧ರ ಅವಧಿಯಲ್ಲಿ ಎರಡೂ ವರ್ಗಗಳ ಜನಸಂಖ್ಯೆಯಲ್ಲಿ ಹೆಚ್ಚಳವಾಗಿದೆ. ಮುಂದುವರೆದು ಈ ವರ್ಗಗಳಲ್ಲಿನ ಲಿಂಗ ಅನುಪಾತವು ಸಾಮಾನ್ಯ ಜನರಿಗಿಂತ ಅಧಿಕವಿದ್ದು ಅನುಕೂಲಕರ ಸ್ಥಿತಿಯಲ್ಲಿದೆ.

ಸಾಕ್ಷರತೆ

ಯಾವುದೇ ಸಮಾಜದ ಸಾಮಾಜಿಕ ಪ್ರಗತಿಯನ್ನು ಸೂಚಿಸುವ ಒಂದು ಮೂಲ ಸೂಚಿಯೆಂದರೆ ಸಾಕ್ಷರತೆ. ಸಾಕ್ಷರ ಜನಸಮುದಾಯವು ಹೆಚ್ಚು ಕೌಶಲಯುತವಲ್ಲದೇ ಸಾಮಾಜಿಕ ಪಿಡುಗುಗಳ ವಿರುದ್ಧ ದನಿಯೆತ್ತುವ ಹೆಚ್ಚಿನ ಕಾಳಜಿಯನ್ನೂ ಹೊಂದಿರುತ್ತದೆ. ಅಲ್ಲದೇ ಜನರಿಗೆ ಶಿಕ್ಷಣ ದೊರಕಿಸಿ ಕೊಡುವುದರಿಂದ ಹಲವಾರು ಅಗೋಚರ ಪ್ರಯೋಜನಗಳು ದೊರಕುತ್ತವೆ. ಈ ಹಿನ್ನೆಲೆಯಲ್ಲಿ ಶಾಲಾ ಮೂಲಭೂತ ಸೌಕರ್ಯಗಳನ್ನು ವಿಸ್ತರಿಸಿ ಕಲಿಕೆಯ ವಾತಾವರಣವನ್ನು ಸುಧಾರಿಸಿ ಜನರ ಶೈಕ್ಷಣಿಕ ಮಟ್ಟವನ್ನು ಹೆಚ್ಚಿಸುವ ಕಾರ್ಯ ಗಮನಾರ್ಹವಾಗಿ ಹೆಚ್ಚಳವಾಗಿದೆ.

ಸಾಮಾಜಿಕ ಆರ್ಥಿಕ ಸಮೀಕ್ಷೆಗಳಲ್ಲಿ ಓದಲು ಮತ್ತು ಬರೆಯಲು ಬರುವವರನ್ನು ಸಾಕ್ಷರರೆಂದು ಪರಿಗಣಿಸಲಗುತ್ತದೆ. ಆದ್ದರಿಂದ ಜನಗಣತಿ ವರದಿಗಳಲ್ಲಿ ಒಡಮೂಡಿದ ಮಾಹಿತಿಯು ಸಾಕ್ಷರತೆಗೆ ಸಂಬಂಧಿಸಿದಂತೆ ಒಂದು ಉತ್ತಮ ಮಾಹಿತಿ ಮೂಲವಾಗುವುದರಲ್ಲಿ ಸಂದೇಹವಿಲ್ಲ. ಕೋಷ್ಟಕ ೩.೪ರಲ್ಲಿ ರಾಯಚೂರು ಜಿಲ್ಲೆಯ ಲಿಂಗವಾರು ಮತ್ತು ತಾಲೂಕುವಾರು ಸಾಕ್ಷರತಾ ಮಾಹಿತಿಯನ್ನು ೨೦೧೧ಕ್ಕೆ ಸಂಬಂಧಿಸಿದಂತೆ ನೀಡಲಾಗಿದೆ.

ಕೋಷ್ಟಕ–೩.೪

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಸಂಖ್ಯಾ ಲಕ್ಷಣಗಳು

ತಾಲೂಕು	ಒಟ್ಟು			ಗ್ರಾಮೀಣ			ನಗರ		
	ವ್ಯಕ್ತಿಗಳು	ಪುರುಷರು	ಮಹಿಳೆಯರು	ವ್ಯಕ್ತಿಗಳು	ಪುರುಷರು	ಮಹಿಳೆಯರು	ವ್ಯಕ್ತಿಗಳು	ಪುರುಷರು	ಮಹಿಳೆಯರು
ದೇವದುರ್ಗ	೪೯.೪೮	೬೦.೪೭	೩೮.೬೨	೪೭.೧೭	೫೮.೪೪	೩೬.೦೫	೬೯.೪೯	೭೭.೭೨	೬೧.೧೪
ಲಿಂಗಸುಗೂರು	೬೧.೧೪	೭೩.೦೪	೪೯.೧೫	೫೬.೮೯	೬೯.೭೧	೪೩.೯೯	೭೫.೦೨	೮೩.೯೧	೬೬.೦೩
ಮಾನವಿ	೫೪.೬೯	೬೫.೫೪	೪೪.೦೯	೫೨.೮೧	೬೪.೧೨	೪೧.೭೮	೬೭.೬೨	೭೫.೧೮	೬೦.೧೧
ರಾಯಚೂರು	೬೫.೧೮	೭೫.೩೬	೫೫.೧೬	೫೨.೧೬	೬೪.೬೫	೩೯.೮೯	೭೭.೫೧	೮೫.೨೦	೬೯.೭೯
ಸಿಂಧನೂರು	೬೨.೪೫	೭೩.೪೪	೫೧.೬೦	೫೯.೭೧	೭೧.೩೮	೪೮.೨೨	೭೩.೯೨	೮೧.೯೮	೬೫.೮೪
ಜಿಲ್ಲೆ	೫೯.೫೬	೭೦.೪೭	೪೮.೭೩	೫೪.೧೧	೬೬.೦೧	೪೨.೩೭	೭೫.೧೨	೮೩.೧೦	೬೭.೧೦
ಕರ್ನಾಟಕ	೭೫.೩೬	೮೨.೪೭	೬೮.೦೮	೬೮.೭೩	೭೭.೬೧	೫೯.೭೧	೮೫.೭೮	೯೦.೦೪	೮೧.೩೬

ಮೂಲ:– ಜನಗಣತಿ, ೨೦೧೧

ರಾಯಚೂರು ಜಿಲ್ಲೆಯು ಶೇ.೬೦ರಷ್ಟು ಸಾಕ್ಷರತೆಯನ್ನು ಹೊಂದಿದ್ದು, ಪುರುಷರಲ್ಲಿ ಶೇ.೭೦ ಇದ್ದರೆ ಮಹಿಳೆಯರಲ್ಲಿ ಅದು ಶೇ.೪೯ರಷ್ಟಿತ್ತು. ಎಲ್ಲ ವರ್ಗದವರಲ್ಲಿ ಜಿಲ್ಲೆಯ ಸಾಕ್ಷರತಾ ದರಗಳು ರಾಜ್ಯದಲ್ಲಿರುವುದಕ್ಕಿಂತ ಕಡಿಮೆ ಇವೆ. ಅಲ್ಲದೇ ಪುರುಷ–ಮಹಿಳೆ ಹಾಗೂ ನಗರ ಗ್ರಾಮೀಣ ಸಾಕ್ಷರತಾ ದರಗಳಲ್ಲಿ ತೀವ್ರ ಭಿನ್ನತೆಗಳಿರುವುದನ್ನು ಕಾಣಬಹುದಾಗಿದೆ. ರಾಯಚೂರು ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ಕೇವಲ ಶೇ. ೪೨ರಷ್ಟು ಮಹಿಳೆಯರು ಸಾಕ್ಷರರಿದ್ದು ಇದಕ್ಕೆ ವ್ಯತಿರಿಕ್ತವಾಗಿ ನಗರ ಪ್ರದೇಶದ ಪುರುಷರ ಸಾಕ್ಷರತೆಯು ಶೇ.೮೨ರಷ್ಟಿದೆ. ರಾಯಚೂರು ತಾಲೂಕು ಗರಿಷ್ಠ ಸಾಕ್ಷರತಾ ದರವನ್ನು ದಾಖಲಿಸಿದರೆ ದೇವದುರ್ಗ ತಾಲೂಕಿನಲ್ಲಿ ಅದು ಕನಿಷ್ಠವಾಗಿದೆ. ಸಾಕ್ಷರತೆಯಲ್ಲಿನ ಲಿಂಗ ಅಂತರಗಳು ಜಿಲ್ಲೆಯಲ್ಲಿ ರಾಜ್ಯಕ್ಕಿಂತ ಅಧಿಕ ಪ್ರಮಾಣದಲ್ಲಿವೆ ಹಾಗೂ ನಗರ ಪ್ರದೇಶಗಳಿಗಿಂತ ಗ್ರಾಮೀಣ ಪ್ರದೇಶಗಳಲ್ಲಿ ಸುಮಾರು ಎರಡರಷ್ಟಿವೆ. ಆದ್ದರಿಂದ ಭವಿಷ್ಯದ ಸಾಕ್ಷರತೆಯಲ್ಲಿನ ವಿಸ್ತರಣೆಯ ಒತ್ತು ಗ್ರಾಮೀಣ ಪ್ರದೇಶಗಳಲ್ಲಿ ಮತ್ತು ಮಹಿಳೆಯರ ಮೇಲೆ ಇರಬೇಕೆಂಬುದನ್ನು ಇದು ತೋರಿಸುತ್ತದೆ.

ಉದ್ದಿಮೆ

ರಾಯಚೂರು ಜಿಲ್ಲೆಯು ಔದ್ಯಮಿಕವಾಗಿಯೂ ರಾಜ್ಯದ ಅತ್ಯಂತ ಹಿಂದುಳಿದ ಜಿಲ್ಲೆಯಾಗಿದೆ. ಆದಾಗ್ಯೂ ಕೃಷಿ ಆಧಾರಿತ ಉದ್ದಿಮೆಗಳಿಗೆ ಜಿಲ್ಲೆಯು ಹೆಸರುವಾಸಿಯಾಗಿದ್ದು ಸಿಂಧನೂರು ಮತ್ತು ಮಾನವಿ ತಾಲೂಕುಗಳನ್ನು ಅಲ್ಲಿ ಬೆಳೆಯುವ ಉತ್ತಮ ಗುಣಮಟ್ಟದ ಭತ್ತದ ಬೆಳೆಯ ಕಾರಣವಾಗಿ ರಾಜ್ಯದ ಅನ್ನದ ಬಟ್ಟಲು ಎಂದು ಕರೆಯಲಾಗುತ್ತಿದೆ. ೧೯೯೦ರ ಮೊದಲು ಜಿಲ್ಲೆಯು ಎಣ್ಣೆ ಹಾಗೂ ಹತ್ತಿ ಉದ್ಯಮಕ್ಕೂ ಹೆಸರುವಾಸಿಯಾಗಿದ್ದಿತು. ಆದರೆ ತಾಂತ್ರಿಕ ಉನ್ನತೀಕರಣದ ಕೊರತೆಯಿಂದ ಮತ್ತು ಆಮದುಗಳು ಒಡ್ಡಿದ ಸ್ಪರ್ಧೆಯಿಂದ ಜಿಲ್ಲೆಯು ಎಣ್ಣೆ ಬೀಜ ಹಾಗೂ ಹತ್ತಿ ಉದ್ಯಮದ ಮುಂಚೂಣಿ ಸ್ಥಾನವನ್ನು ಕಳೆದುಕೊಂಡಿದೆ. ಆದರೆ ಜಿಲ್ಲೆಯಲ್ಲಿರುವ ನೈಸರ್ಗಿಕ

ಸಂಪನ್ಮೂಲಗಳು, ಖನಿಜಗಳು, ನೀರು, ಶಕ್ತಿ, ಭೂಮಿ, ಮಾನವ ಸಂಪನ್ಮೂಲ, ರೈಲು ಹಾಗೂ ರಸ್ತೆ ಸಂಪರ್ಕಗಳಿಂದಾಗಿ ಮತ್ತು ಹೈದರಾಬಾದ ನಗರದ ಸಾಮೀಪ್ಯದಿಂದಾಗಿಯೂ, ಜಿಲ್ಲೆಯು ಔದ್ಯಮಿಕ ಅಭಿವೃದ್ಧಿಯಲ್ಲಿ ತನ್ನ ವೈಭವವನ್ನು ಮರಳಿ ಪಡೆಯಬಹುದಾಗಿದೆ.

ಚಿನ್ನ, ತಾಮ್ರ, ಕಬ್ಬಿಣ, ಫೆಲ್ಡಸ್ಪಾರ್, ಗ್ರಾನೈಟ್, ಮರಳುಕಲ್ಲು, ಕ್ವಾರ್ಟ್ಜ್ ಮತ್ತು ಸುಣ್ಣದ ಕಲ್ಲು ಇವುಗಳು ಜಿಲ್ಲೆಯಲ್ಲಿ ಲಭ್ಯವಿರುವ ಕೆಲವು ಪ್ರಮುಖ ಖನಿಜಗಳಾಗಿವೆ. ಕೋಷ್ಟಕ ೩.೫ರಲ್ಲಿ ಜಿಲ್ಲೆಯ ಔದ್ಯಮಿಕ ಚಿತ್ರಣವನ್ನು ನೀಡಲಾಗಿದೆ.

ಕೋಷ್ಟಕ–೩.೫

ರಾಯಚೂರು ಜಿಲ್ಲೆಯಲ್ಲಿ ಕೈಗಾರಿಕಾ ಘಟಕಗಳು

೨೦೧೧-೧೨

ತಾಲೂಕು	ಫ್ಯಾಕ್ಟರಿಗಳು		ಸಣ್ಣ ಉದ್ದಿಮೆಗಳು	
	ಸಂಖ್ಯೆ	ಉದ್ಯೋಗಿಗಳು	ಸಂಖ್ಯೆ	ಉದ್ಯೋಗಿಗಳು
ದೇವದುರ್ಗ	೯	೧೮೦	೭೯೦	೩೨೩೨
ಲಿಂಗಸುಗೂರು	೯	೩೪೧	೧೭೦೫	೬೭೮೩
ಮಾನವಿ	೧೯	೪೬೬	೧೪೫೨	೫೮೩೨
ರಾಯಚೂರು	೨೧೨	೮೮೫೭	೩೪೮೨	೧೫೫೪೯
ಸಿಂದನೂರು	೨೪	೧೬೪೯	೧೮೪೭	೭೪೮೫
ಜಿಲ್ಲೆ	೨೭೩	೧೧೪೯೩	೯೨೭೬	೩೮೮೮೧

ಮೂಲ: ಜಿಲ್ಲಾ ಸಾಂಖ್ಯಿಕ ಅಧಿಕಾರಿ, ರಾಯಚೂರು

ಜಿಲ್ಲೆಯಲ್ಲಿ ಒಟ್ಟು ೨೭೩ ಕೈಗಾರಿಕಾ ಘಟಕಗಳಿದ್ದು, ೧೧,೦೦೦ಕ್ಕಿಂತಲೂ ಹೆಚ್ಚು ಕಾರ್ಮಿಕರಿಗೆ ಉದ್ಯೋಗ ನೀಡಿವೆ. ಅದೇ ರೀತಿ ೯೨೭೬ ಸಣ್ಣ ಉದ್ದಿಮೆಗಳಿದ್ದು ೩೯,೦೦೦ರಷ್ಟು ಉದ್ಯೋಗಿಗಳು ಕೆಲಸ ಮಾಡುತ್ತಿದ್ದಾರೆ. ಸ್ವಾಭಾವಿಕವಾಗಿ ರಾಯಚೂರು ತಾಲೂಕು ಹೆಚ್ಚಿನ ಸಂಖ್ಯೆಯ ಫ್ಯಾಕ್ಟರಿಗಳನ್ನು ಮತ್ತು ಉದ್ದಿಮೆಗಳನ್ನು ಹೊಂದಿದೆ. ಜಿಲ್ಲೆಯಲ್ಲಿ ರಾಯಚೂರು, ಶಕ್ತಿನಗರ, ದೇವಸುಗೂರ, ದೇವದುರ್ಗ ಮತ್ತು ಮಾನವಿಗಳಲ್ಲಿ ಐದು ಕೈಗಾರಿಕಾ ಪ್ರದೇಶಗಳು ಸ್ಥಾಪಿಸತವಾಗಿದ್ದು ಸುಮಾರು ೯೦೦ ಎಕರೆ ಪ್ರದೇಶವನ್ನು ಹೊಂದಿವೆ. ಹಾಗೆಯೇ ೬೫ ಎಕರೆ ವಿಸ್ತೀರ್ಣದಲ್ಲಿ ರಾಯಚೂರು, ಯರಮರಸ್, ಲಿಂಗಸುಗೂರು ಮತ್ತು ಸಿಂಧನೂರುಗಳಲ್ಲಿ ಆರು ಕೈಗಾರಿಕಾ ವಸಾಹತುಗಳನ್ನು ಸ್ಥಾಪಿಸಲಾಗಿದೆ. ಇಲ್ಲಿಯವರೆಗೆ ಒಟ್ಟು ೨೩೦ ಔದ್ಯಮಿಕ ನಿವೇಶಗಳನ್ನು ಅಭಿವೃದ್ಧಿಪಡಿಸಿದ್ದು ೧೪೪ ನಿವೇಶನಗಳ ಹಂಚಿಕೆ ಮಾಡಲಾಗಿದೆ. ರಾಯಚೂರು ಜಿಲ್ಲೆಯಲ್ಲಿರುವ ಕೆಲವು ಪ್ರಮುಖ ಉದ್ದಿಮೆಗಳೆಂದರೆ, ದಿ ಹಟ್ಟಿ ಗೋಲ್ಡಮೈನ್ಸ ಕಂಪನಿ ಲಿ,; ಮೈಸೂರು ಪೆಟ್ರೋಕೆಮಿಕಲ್ಸ್ ಲಿ.; ವಿಶಾಲ ಕಾಟ್‌ಸ್ಪಿನ್ ಲಿ.; ಫಾರೂಕ್ ಅನ್ವರ ಕಂಪನಿ; ಸುರಾನಾ ಇಂಡಸ್ಟ್ರೀಸ್ ಲಿ,; ಶಿಲ್ಪಾ ಮೆಡಿಕೇರ್ ಲಿ.; ರಾಯಚೂರು ಥರ್ಮಲ್ ಪವರ್ ಕಾರ್ಪೋರೇಷನ್ ಲಿ.; ಮತ್ತು ರಾಯಚೂರು ಸಾಲ್ವೆಂಟ್ಸ್‌ಗಳು ಇವೆ.

[illegible]

ನೀರಾವರಿ ಪ್ರದೇಶ

ಜಿಲ್ಲೆಯಲ್ಲಿ ಅತಿ ವಿರಳ ಹಾಗೂ ಅನಿಶ್ಚಿತ ಮಳೆಯು ಕೃತಕ ನೀರಾವರಿಯನ್ನು ಬಳಸುವ ಅನಿವಾರ್ಯತೆಯನ್ನು ಸೃಷ್ಟಿಸಿದೆ. ಈ ಮೊದಲು ತಿಳಿಸಿದ ಹಾಗೆ ಜಿಲ್ಲೆಯ ಉತ್ತರ ಮತ್ತು ದಕ್ಷಿಣ ಭಾಗಗಳು, ಕ್ರಮವಾಗಿ ಕೃಷ್ಣಾ ಮತ್ತು ತುಂಗಭದ್ರಾ ನದಿಗಳಿಂದ ತೋಯಿಸಲ್ಪಡುತ್ತವೆ. ಆದ್ದರಿಂದ ಜಿಲ್ಲೆಯಲ್ಲಿ ಹೆಚ್ಚಿನ ನೀರಾವರಿ ಪ್ರಮಾಣವಿದೆ. ನಿವ್ವಳ ನೀರಾವರಿ ಪ್ರದೇಶವು ೧೯೩ ಸಾವಿರ ಹೆಕ್ಟೇರುಗಳಿದ್ದು ಅದು ನಿವ್ವಳ ಬಿತ್ತನೆ ಪ್ರದೇಶದ ಶೇ.೪೩ರಷ್ಟಿದೆ. ಮೂಲವಾರು ನೋಡಿದಾಗ ಕಾಲುವೆಗಳು ಪ್ರಮುಖ ಮೂಲವಾಗಿದ್ದು ಜಿಲ್ಲೆಯಲ್ಲಿ ಶೇ.೮೭ರಷ್ಟಿದ್ದು, ಮಾನವಿಯಲ್ಲಿ ಹೆಚ್ಚೂ ಕಡಿಮೆ ಸಂಪೂರ್ಣ, ಸಿಂಧನೂರು ಮತ್ತು ದೇವದುರ್ಗ ತಾಲೂಕುಗಳಲ್ಲಿ ಅದು ಶೇ. ೯೦ರಷ್ಟಿದೆ. ಲಿಂಗಸುಗೂರಿನಲ್ಲಿ ಕೊಳವೆ ಬಾವಿಗಳು, ರಾಯಚೂರು ತಾಲೂಕಿನಲ್ಲಿ ಬಾವಿಗಳು, ಮತ್ತು ಸ್ವಲ್ಪ ಮಟ್ಟಿಗೆ ಏತ ನೀರಾವರಿ ಯೋಜನೆಗಳು ನೀರಾವರಿ ಒದಗಿಸುತ್ತವೆ. ಹೀಗೆ ಸಿಂಧನೂರು, ರಾಯಚೂರು ಮತ್ತು ಮಾನವಿ ತಾಲೂಕುಗಳಲ್ಲಿ ಹೆಚ್ಚಿನ ನೀರಾವರಿಗೊಳಪಟ್ಟ ಪ್ರದೇಶವಿದ್ದು ಲಿಂಗಸುಗೂರು ತಾಲೂಕಿನಲ್ಲಿ ಅದು ಕನಿಷ್ಠವಿದೆ. ಅತ್ಯಂತ ಕಡಿಮೆ ಮಳೆ ಬೀಳುವ ತಾಲೂಕಿನಲ್ಲಿ ನೀರಾವರಿ ಪ್ರದೇಶವೂ ಕಡಿಮೆ ಇರುವುದು ವಿಪರ್ಯಾಸ.

ಕೋಷ್ಟಕ–೩.೬

ರಾಯಚೂರು ಜಿಲ್ಲೆಯ ಆಯ್ದ ಮೂಲಭೂತ ಸೌಲಭ್ಯಗಳು ೨೦೧೧–೧೨

	ಸೂಚಿ	ವರ್ಷ	ಘಟಕ	ಮೌಲ್ಯ
i)	ಸಾರ್ವಜನಿಕ ಆರೋಗ್ಯ			
	೧. ಅಲೋಪಥಿಕ್ ಆಸ್ಪತ್ರೆಗಳು	೨೦೧೧–೧೨	ಸಂಖ್ಯೆ	೯೩
	೨. ಅಲೋಪಥಿಕ್ ಆಸ್ಪತ್ರೆಗಳಲ್ಲಿ ಹಾಸಿಗೆಗಳು	೨೦೧೧–೧೨	ಸಂಖ್ಯೆ	೩೬೯೦
	೩. ಭಾರತೀಯ ವೈದ್ಯ ಪದ್ಧತಿ ಆಸ್ಪತ್ರೆಗಳು	೨೦೧೧–೧೨	ಸಂಖ್ಯೆ	೨೧
	೪. ಭಾರತೀಯ ವೈದ್ಯ ಪದ್ಧತಿ ಆಸ್ಪತ್ರೆಗಳಲ್ಲಿ ಹಾಸಿಗೆಗಳು	೨೦೧೧–೧೨	ಸಂಖ್ಯೆ	೩೧
	೫. ಪ್ರಾಥಮಿಕ ಆರೋಗ್ಯ ಕೇಂದ್ರಗಳು	೨೦೧೧–೧೨	ಸಂಖ್ಯೆ	೩೭
	೬ ದವಾಖಾನೆಗಳು	೨೦೧೧–೧೨	ಸಂಖ್ಯೆ	೨೨
	೭ ಖಾಸಗಿ ಆಸ್ಪತ್ರೆಗಳು	೨೦೧೧–೧೨	ಸಂಖ್ಯೆ	೮೬
ii)	ಬ್ಯಾಂಕುಗಳು			
	೧. ಒಟ್ಟು ಬ್ಯಾಂಕುಗಳು (ಗ್ರಾಬ್ಯಾಂಕುಗಳೂ ಸೇರಿ)	೨೦೧೦–೧೧	ಸಂಖ್ಯೆ	೧೭೦
	೨. ಸಹಕಾರಿ ಸಂಘಗಳು (ಕೃಷಿ ಮತ್ತು ಕೃಷಿಯೇತರ)	೨೦೧೦–೧೧	ಸಂಖ್ಯೆ	೧೦೧೬
	೩. ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳು	೨೦೧೦–೧೧	ಸಂಖ್ಯೆ	೫
iii)	ಶಿಕ್ಷಣ			
	೧. ಪ್ರಾಥಮಿಕ ಶಾಲೆಗಳು	೨೦೧೦–೧೧	ಸಂಖ್ಯೆ	೧೮೦೬
	೨. ಮಿಡ್ಲ ಶಾಲೆಗಳು	೨೦೧೦–೧೧	ಸಂಖ್ಯೆ	೩೦೭
	೩. ಮಾಧ್ಯಮಿಕ ಹಾಗೂ ಹಿರಿಯ ಮಾಧ್ಯಮಿಕ ಶಾಲೆಗಳು	೨೦೧೦–೧೧	ಸಂಖ್ಯೆ	೧೦೦
	೪. ಕಾಲೇಜುಗಳು	೨೦೧೦–೧೧	ಸಂಖ್ಯೆ	೧೨
	೫. ತಾಂತ್ರಿಕ ಸಂಸ್ಥೆಗಳು	೨೦೧೦–೧೧	ಸಂಖ್ಯೆ	೦೭

ಮೂಲ: ರಾಯಚೂರು ಜಿಲ್ಲೆಯ ಸಂಕ್ಷಿಪ್ತ ಔದ್ಯಮಿಕ ಪಾರ್ಶ್ವನೋಟ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಮಂತ್ರಾಲಯ, ಭಾರತ ಸರಕಾರ

ಮೂಲಭೂತ ಸೌಲಭ್ಯಗಳು

ಸಾರಿಗೆ, ಸಂಪರ್ಕ, ಶಕ್ತಿ, ನೀರು ಮತ್ತು ಶೈಕ್ಷಣಿಕ ಸಂಸ್ಥೆಗಳಂಥ ಮೂಲಭೂತ ಸೌಲಭ್ಯಗಳು ಯಾವುದೇ ಪ್ರದೇಶದ ಔದ್ಯಮಿಕ ಮತ್ತು ಒಟ್ಟಾರೆ ಅಭಿವೃದ್ಧಿಯನ್ನು ಪ್ರಭಾವಿಸುತ್ತವೆ. ರಾಯಚೂರು ಜಿಲ್ಲೆಯಲ್ಲಿನ ಮೂಲಭೂತ ಸೌಕರ್ಯಗಳ ಲಭ್ಯತೆಯು ಉತ್ತಮವಾಗಿದೆ. ಕೋಷ್ಟಕ ೩.೬ರಲ್ಲಿ ಜಿಲ್ಲೆಯು ಮೂಲಭೂತ ಸೌಕರ್ಯಗಳ ಸಂಕ್ಷಿಪ್ತ ಚಿತ್ರಣ ನೀಡಲಾಗಿದೆ. ರಾಜ್ಯದ ಮತ್ತು ನೆರೆಯ ರಾಜ್ಯಗಳ ಪ್ರಮುಖ ಪಟ್ಟಣಗಳ ಜೊತೆ ಸರಾಗ ಸಂಪರ್ಕ ಹೊಂದಿದೆ. ಆದರೆ ತೀವ್ರಗತಿಯ ಹಾಗೂ ದೀರ್ಘಾವದಿ ಅಭಿವೃದ್ಧಿ ಸಾಧನೆಗಾಗಿ ಬೇಕಾಗುವ ಅತ್ಯುಚ್ಚ ಪ್ರಮಾಣದ ಸೌಕರ್ಯಗಳ ಕೊರತೆಯಿದೆ. ರಾಯಚೂರು ಜಿಲ್ಲೆಯಲ್ಲಿ ಒಟ್ಟು ೫೭೯ ಕಿ.ಮೀ. ಉದ್ದದ ರಸ್ತೆ ಇದ್ದು ಅದರಲ್ಲಿ ೧೦೦೬ ಕಿ.ಮೀ. ರಸ್ತೆಗಳು ರಾಜ್ಯ ಹೆದ್ದಾರಿ ಮತ್ತು ೧೫೦೭ ಕಿ.ಮೀ.ನಷ್ಟು ಜಿಲ್ಲಾ ಮುಖ್ಯ ರಸ್ತೆಗಳಿವೆ. ಬಹುಪಾಲು ರಸ್ತೆಗಳು ಮಳೆಗಾಲದಲ್ಲಿ ಉಪಯೋಗಕ್ಕೆ ಯೋಗ್ಯವಿರುವುದಿಲ್ಲ.

ರಾಯಚೂರು ಜಿಲ್ಲೆಯಲ್ಲಿ ಹೆಸರುವಾಸಿಯಾದ ಮತ್ತು ಲಾಭ ಗಳಿಸುತ್ತಿರುವಂಥ ಶಕ್ತಿ ಉತ್ಪಾದನಾ ಘಟಕವಿದೆ. ಅದರಲ್ಲಿ ತಲಾ ೨೧೦ ಮೆಗಾ ವಾಟ್ ವಿದ್ಯುಚ್ಛಕ್ತಿ ಉತ್ಪಾದಿಸುವ ಏಳು ಘಟಕಗಳಿದ್ದು ಅವುಗಳೆಲ್ಲ ಶೇ.೧೦೦ರಷ್ಟು ಸಾಮರ್ಥ್ಯದಲ್ಲಿ ಕೆಲಸ ಮಾಡುತ್ತಿವೆ. ರಾಯಚೂರು ನಗರವು ಬ್ರಾಡ್ ಗೇಜ್ ರೈಲಿನ ಮೂಲಕ ಬೆಂಗಳೂರು, ಮುಂಬೈ, ಚೆನ್ನೈ, ಹೈದರಾಬಾದ, ಅಹಮದಾಬಾದ, ನವದೆಹಲಿ, ಕೊಯಿಮತ್ತೂರು ಮುಂತಾದ ನಗರಗಳ ಸಂಪರ್ಕವನ್ನು ಪಡೆದಿದೆ. ದಿನಂಪ್ರತಿ ಸುಮಾರು ೫೦ ರೈಲುಗಳು ರಾಯಚೂರು ನಗರದ ಮೂಲಕ ಸಾಗಾಟ ನಡೆಸುತ್ತವೆ. ಜಿಲ್ಲೆಯಲ್ಲಿ ೧೦ಕ್ಕಿಂತಲೂ ಹೆಚ್ಚು ವಾಣಿಜ್ಯ ಬ್ಯಾಂಕುಗಳಿದ್ದು, ೪೬ ಶಾಖೆಗಳಿವೆ. ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್ ಜಿಲ್ಲೆಯ ಲೀಡ್ ಬ್ಯಾಂಕ್ ಆಗಿದೆ.

ಪ್ರಾದೇಶಿಕ ಅಭಿವೃದ್ಧಿ ಮತ್ತು ಹಿಂದುಳಿದಿರುವಿಕೆ

ಕರ್ನಾಟಕದ ಅತಿ ಹಿಂದುಳಿದ ಪ್ರದೇಶಗಳಲ್ಲಿ ರಾಯಚೂರು ಜಿಲ್ಲೆಯು ಪ್ರಮುಖವಾದುದಾಗಿದೆ. ಇದು ಐತಿಹಾಸಿಕ ಕಾರಣಗಳಲ್ಲದೇ ಸಂಪನ್ಮೂಲಗಳ ವಿರಳತೆಯಿಂದಲೂ ಆಗಿರಬಹುದಾದ ಪರಿಸ್ಥಿತಿಯಾಗಿದೆ. ಕರ್ನಾಟಕ ಸರಕಾರದ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಅಂಕಿ ಅಂಶಗಳ ಪ್ರಕಾರ ಜಿಲ್ಲೆಯ ಒಟ್ಟು ಆದಾಯವು ೨೦೦೪-೦೫ರಲ್ಲಿ ರೂ. ೨,೯೯,೬೩೪ ಲಕ್ಷಗಳಿದ್ದು ೨೦೦೮-೦೯ರಲ್ಲಿ ರೂ.೪,೨೦,೭೨೭ ಲಕ್ಷಗಳಿಗೆ ಹೆಚ್ಚಾಯಿತು. ಈ ಹೆಚ್ಚಳದ ಪ್ರಮಾಣವು ಈ ಅವಧಿಯ ಮಧ್ಯೆ ಶೇ.೪೦೪ರಷ್ಟಿದ್ದು ರಾಜ್ಯಮಟ್ಟಕ್ಕಿಂತ ಕಡಿಮೆ ಇದೆ. ಜಿಲ್ಲೆಯ ತಲಾ ಆದಾಯವು ೨೦೦೪-೦೫ರಲ್ಲಿ ರೂ. ೧೮,೩೩೪ ಇದ್ದದ್ದು ೨೦೦೮-೦೯ರಲ್ಲಿ ರೂ. ೨೨,೯೮೮ಗಳಿಗೆ ಏರಿಕೆಯಾಗಿದೆ. ೨೦೦೪-೦೫ರಲ್ಲಿ ರಾಜ್ಯದ ತಲಾ ಆದಾಯದ ಶೇ.೫೭ರ ಪ್ರಮಾಣದಲ್ಲಿ ಇದ್ದ ಜಿಲ್ಲೆಯ ತಲಾ ಆದಾಯವು ೨೦೦೮-೦೯ರಲ್ಲಿ ಶೇ.೫೫ಕ್ಕೆ ಇಳಿದಿರುವುದು ಜಿಲ್ಲೆಯ ಹಿಂದುಳಿದಿರುವಿಕೆಯನ್ನು ಮತ್ತು ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸಿರುವುದನ್ನು ತೋರಿಸುತ್ತದೆ. ತಲಾ ಆದಾಯದಲ್ಲಿನ ಹೆಚ್ಚಳದ ಪ್ರಮಾಣವೂ ಉತ್ಸಾಹದಾಯಕವಾಗಿಲ್ಲ. ಹೀಗೆ ಆದಾಯವನ್ನು

ಪರಿಗಣಿಸಿದರೆ ಜಿಲ್ಲೆಯ ಸಾಧನೆಯು ಕೆಳಮಟ್ಟಕ್ಕೆ ಸರಿದಿರುವುದನ್ನು ಗಮನಿಸಬಹುದು. ಜಿಲ್ಲೆಯಲ್ಲಿನ ತಾಲೂಕುಗಳ ಅಭಿವೃದ್ಧಿ ಸ್ಥಿತಿಯೂ ಸಹ ಭಿನ್ನವಾಗಿದ್ದು ಸಾಕಷ್ಟು ಅಸಮಾನತೆಯಿದೆ. ಮಾನವಿ ತಾಲೂಕು ರೂ. ೩೯,೫೪೪ ತಲಾ ಆದಾಯವನ್ನು ಹೊಂದಿದ್ದು ಜಿಲ್ಲೆಯಲ್ಲಿಯೇ ಗರಿಷ್ಠವಾಗಿದ್ದರೆ, ಲಿಂಗಸೂಗೂರು ತಾಲೂಕು ರೂ. ೨೩,೭೯೬ ತಲಾ ಆದಾಯ ಹೊಂದಿದ್ದು ಜಿಲ್ಲೆಯಲ್ಲಿಯೇ ಕನಿಷ್ಠವಾಗಿದೆ. ಜಿಲ್ಲೆಯ ಸರಾಸರಿಯ ಆದಾಯವು ರೂ. ೩೦,೨೮೬ ಇದ್ದು, ಸಿಂಧನೂರು, ಲಿಂಗಸೂಗೂರು ಮತ್ತು ದೇವದುರ್ಗ ತಾಲೂಕಗಳಲ್ಲಿ ಜಿಲ್ಲಾ ಸರಾಸರಿಗಿಂತ ಕಡಿಮೆ ಆದಾಯವಿದೆ. ಡಾ.ನಂಜುಂಡಪ್ಪ ಸಮಿತಿಯು ಸಹ ತನ್ನ ವರದಿಯಲ್ಲಿ ಇದನ್ನು ಸ್ಪಷ್ಟಪಡಿಸಿದೆ.

ಕೋಷ್ಟಕ-೩.೭

ತಾಲೂಕುವಾರು ತುಲನಾತ್ಮಕ ಅಭಿವೃದ್ಧಿ ಸ್ಥಿತಿ, ೨೦೦೧

ತಾಲೂಕು	ಸಂಚಿತ ಅಭಿವೃದ್ಧಿ ಸೂಚ್ಯಂಕದ ಮೌಲ್ಯ	ರಾಜ್ಯದಲ್ಲಿನ ಶ್ರೇಣಿ	ವರ್ಗೀಕರಣ
ದೇವದುರ್ಗ	೦.೫೩	೧೭೫	ಅತ್ಯಂತ ಹಿಂದುಳಿದ
ಲಿಂಗಸುಗೂರು	೦.೬೩	೧೭೯	ಅತ್ಯಂತ ಹಿಂದುಳಿದ
ಮಾನವಿ	೦.೭೯	೧೬೦	ಅತ್ಯಂತ ಹಿಂದುಳಿದ
ರಾಯಚೂರು	೦.೮೭	೧೦೭	ಅತಿ ಹಿಂದುಳಿದ
ಸಿಂಧನೂರು	೦.೭೮	೧೪೧	ಅತ್ಯಂತ ಹಿಂದುಳಿದ

ಮೂಲ: ನಂಜುಂಡಪ್ಪ ಸಮಿತಿ ವರದಿ, ೨೦೦೨

ದೇವದುರ್ಗವು ರಾಜ್ಯದ ಅತ್ಯಂತ ಹಿಂದುಳಿದ ತಾಲೂಕಾಗಿದ್ದು, ಲಿಂಗಸುಗೂರು ತಾಲೂಕು ಅತ್ಯಂತ ಹಿಂದುಳಿದ ೧೦ ತಾಲೂಕುಗಳಲ್ಲಿ ಒಂದಾಗಿದೆ. ಅಲ್ಲದೇ ಮಾನವಿ ಮತ್ತು ಸಿಂಧನೂರು ತಾಲೂಕುಗಳ ಸ್ಥಿತಿಯೂ ಅಷ್ಟೇನೂ ಅನುಕೂಲಕರವಾಗಿಲ್ಲ. ಅತಿ ಹಿಂದುಳಿದ ಪ್ರದೇಶವೆಂದು ವರ್ಗೀಕರಿಸಿದ ರಾಯಚೂರು ತಾಲೂಕನ್ನು ಹೊರತು ಪಡಿಸಿದರೆ ಉಳಿದೆಲ್ಲವುಗಳು ಅತ್ಯಂತ ಹಿಂದುಳಿದ ತಾಲೂಕುಗಳಾಗಿದ್ದು ಜಿಲ್ಲೆಯ ಹಿಂದುಳಿದಿರುವಿಕೆಯ ಸ್ವರೂಪವನ್ನು ತೋರಿಸುತ್ತವೆ. ಸಂಚಿತ ಸಮಗ್ರ ಅಭಿವೃದ್ಧಿ ಸೂಚ್ಯಂಕದ ಮೌಲ್ಯಗಳು ಬಹಳ ಕಡಿಮೆ ಇದ್ದು ಅವುಗಳು ದೇವದುರ್ಗದಲ್ಲಿ ೦.೫೩ರಿಂದ ರಾಯಚೂರಿನಲ್ಲಿ ೦.೭ರವರೆಗೆ ಹರಡಿದ್ದವು. ಹೀಗೆ ಜಿಲ್ಲೆಯಲ್ಲಿ ಬಡತನ ಮತ್ತು ವಂಚಿತತೆ ತೀವ್ರವಾಗಿದೆ. ಗಣಿ, ಉದ್ದಿಮೆ, ಹಣ ಮತ್ತು ವ್ಯಾಪಾರ, ಆರ್ಥಿಕ ಮತ್ತು ಸಾಮಾಜಿಕ ಮೂಲಭೂತ ಸೌಕರ್ಯ ಮತ್ತು ಜನಸಂಖ್ಯಾ ಸೂಚಿಗಳೆಲ್ಲವುಗಳಲ್ಲಿ ಹಿಂದುಳಿದಿರುವಿಕೆಯನ್ನು ಗಮನಿಸಬಹುದು.

ಇದೇ ರೀತಿ ಹಿಂದುಳಿದಿರುವಿಕೆಯ ಸ್ಥಿತಿಯನ್ನು ಮಾನವ ಅಭಿವೃದ್ಧಿ ವಿಷಯದಲ್ಲೂ ಗಮನಿಸಬಹುದಾಗಿದೆ. ಕೋಷ್ಟಕ ೩.೮ರಲ್ಲಿ ಕರ್ನಾಟಕ ರಾಜ್ಯದ ಮಾನವ ಅಭಿವೃದ್ಧಿ ವರದಿಗಳನ್ನು ಆಧರಿಸಿದ ಮಾನವ ಮತ್ತು ಲಿಂಗ ಸಂಬಂಧಿ ಅಭಿವೃದ್ಧಿ ಚಿತ್ರಣವನ್ನು ನೀಡಲಾಗಿದೆ. ಜಿಲ್ಲೆಯ ಮಾನವ ಅಭಿವೃದ್ಧಿ ಸೂಚ್ಯಂಕದ ಮೌಲ್ಯವು ೧೯೯೧ ಹಾಗೂ ೨೦೦೧ ಎರಡೂ ವರ್ಷಗಳಲ್ಲಿ

ಕನಿಷ್ಠವಿದ್ದು ಅದರ ಪ್ರತಿಶತ ಬದಲಾವಣೆಯು ರಾಜ್ಯಮಟ್ಟಕ್ಕಿಂತ ಅಧಿಕವಿದ್ದಿತು. ಎರಡೂ ಅವಧಿಯಲ್ಲಿ ಜಿಲ್ಲೆಯು ರಾಜ್ಯದಲ್ಲಿ ಕೊನೆಯ ಸ್ಥಾನವನ್ನು ಪಡೆದು ಕನಿಷ್ಠ ಮಾನವ ಅಭಿವೃದ್ಧಿಯನ್ನು ಬಿಂಬಿಸಿದೆ. ಲಿಂಗ ಅಭಿವೃದ್ಧಿಗೆ ಸಂಬಂಧಿಸಿದಂತೆ ಸಹ ಮೇಲಿನ ತರಹದ ಪ್ರವೃತ್ತಿಗಳೇ ಕಂಡುಬಂದಿದ್ದು ಜಿಲ್ಲೆಯು ಕೊನೆಯ ಸ್ಥಾನದಲ್ಲಿಯೇ ಇದೆ. ಆದ್ದರಿಂದ ಆದಾಯ, ಮಾನವ ಮತ್ತು ಲಿಂಗ ಸಂಬಂಧಿತ ಅಭಿವೃದ್ಧಿಗಳಲ್ಲಿ ಜಿಲ್ಲೆಯು ನಿಚ್ಚಳವಾಗಿ ಹಿಂದುಳಿದಿದೆ.

ಕೋಷ್ಟಕ–೩.೮

ರಾಯಚೂರು ಜಿಲ್ಲೆಯ ಮಾನವ ಅಭಿವೃದ್ಧಿ ಮತ್ತು ಲಿಂಗ ಅಭಿವೃದ್ಧಿ ಸೂಚ್ಯಂಕಗಳು, ೧೯೯೧ ಮತ್ತು ೨೦೦೧

ಮಾನವ ಅಭಿವೃದ್ಧಿ ಸೂಚ್ಯಂಕ					
ಪ್ರದೇಶ	೧೯೯೧	ಶ್ರೇಣಿ	೧೯೯೧	ಶ್ರೇಣಿ	% ಬದಲಾವಣೆ
ರಾಯಚೂರು ಜಿಲ್ಲೆ	೦.೪೪೩	೨೭	೦.೫೪೭	೨೭	೨೩.೪೮
ಕರ್ನಾಟಕ	೦.೫೪೧		೦.೬೫೦		೨೦.೧೫
ಲಿಂಗ ಅಭಿವೃದ್ಧಿ ಸೂಚ್ಯಂಕ					
ರಾಯಚೂರು ಜಿಲ್ಲೆ	೦.೪೨೨	೨೭	೦.೫೩೦	೨೭	೨೫.೫೯
ಕರ್ನಾಟಕ	೦.೫೨೫		೦.೬೩೭		೨೧.೩೩

ಮೂಲ: ಕರ್ನಾಟಕ ಮಾನವ ಅಭಿವೃದ್ಧಿ ವರದಿಗಳು, ೧೯೯೯ ಮತ್ತು ೨೦೦೫

೩.೬. ಸಮಾರೋಪ

ರಾಯಚೂರು ಪಾರಂಪರಿಕವಾಗಿ ಹಿಂದುಳಿದ ಜಿಲ್ಲೆಯಾಗಿದ್ದು ಹೆಚ್ಚಿನ ಜನಸಂಖ್ಯೆ ಬೆಳವಣಿಗೆ, ಅಧಿಕ ಮರಣ ಪ್ರಮಾಣಗಳು, ಕಡಿಮೆ ಪ್ರಮಾಣದ ಸಾಕ್ಷರತೆ, ವಿರಳ ನೈಸರ್ಗಿಕ ಸಂಪನ್ಮೂಲಗಳಿಂದಾಗಿ ಔದ್ಯಮಿಕ ಪ್ರಗತಿ ಆಗಿಯೇ ಇಲ್ಲ. ಜಿಲ್ಲೆಯ ನಾಲ್ಕು ತಾಲೂಕುಗಳು ಅತ್ಯಂತ ಹಿಂದುಳಿದ ವರ್ಗದಲ್ಲಿ ಬರುತ್ತವೆ. ಬಹಳಷ್ಟು ಪ್ರದೇಶವು ಕಾಲುವೆ ನೀರಾವರಿಗೆ ಒಳಪಟ್ಟಿದ್ದರೂ ಅದು ಜನರಿಗೆ ಘನತೆಯುತ ಜೀವನಮಟ್ಟ ಅನುಭವಿಸಲು ಅನುಕೂಲತೆ ಒದಗಿಸಿಲ್ಲ. ವಲಸೆಯು ಒಂದು ಬೃಹತ್ ಸವಾಲಾಗಿದ್ದು ಜಿಲ್ಲೆಯ ಬಡತನದ ಸೂಚಿಯಾಗಿದೆ.

ಈ ಜಿಲ್ಲೆಗೆ ಬಹಳಷ್ಟು ಸಂಪನ್ಮೂಲದ ಹರಿವಿನ ಅಗತ್ಯವಿದ್ದು ಶಿಕ್ಷಣವು ಬಹುಮುಖ್ಯ ಆದ್ಯತೆಯಾಗಬೇಕಾಗಿದೆ. ಗ್ರಾಮೀಣ ಸಾಕ್ಷರತೆಯು ಅತ್ಯಂತ ಕಡಿಮೆ ಇದ್ದು, ಹಳ್ಳಿಗಳಲ್ಲಿ ಹೆಚ್ಚಿನ ಸಂಖ್ಯೆಯ ಶಾಲೆಗಳನ್ನು ಅದರಲ್ಲೂ ಹುಡುಗಿಯರ ಶಿಕ್ಷಣವನ್ನು ವೃದ್ಧಿಸುವುದಕ್ಕಾಗಿ ಹೈಸ್ಕೂಲುಗಳನ್ನು ತೆರೆಯುವ ಅವಶ್ಯಕತೆಯಿದೆ. ನೀರಾವರಿ ಲಭ್ಯವಿದ್ದು ಸರಿಯಾದ ಸಾರಿಗೆ, ಶಕ್ತಿ ಪೂರೈಕೆ ಮತ್ತು ಹಣಕಾಸು ಸಂಸ್ಥೆಗಳನ್ನು ವಿಸ್ತರಿಸುವುದರಿಂದಲೂ ಅಭಿವೃದ್ಧಿಯನ್ನು ಸಾಧಿಸಬಹುದಾಗಿದೆ.

ಐತಿಹಾಸಿಕವಾಗಿ ಈ ಪ್ರದೇಶವು ವಿವಿಧ ಸಾಮ್ರಾಜ್ಯಗಳ ಯುದ್ಧಗಳಿಗೆ ಕಾರಣವಾಗಿತ್ತು ಪ್ರಾಯಶಃ ಅದರ ಭೌಗೋಳಿಕ ಲಕ್ಷಣಗಳು ಮತ್ತು ದೋಆಬ್ ಸ್ವರೂಪದಿಂದಾಗಿಯೂ ಇದು ಹಾಗಾಗಿರಬಹುದು. ಈಗಲೂ ಸಹಿತ ಕೃಷಿ ಉತ್ಪಾದಕತೆಯನ್ನು ಹೆಚ್ಚಿಸುವ ಸೂಕ್ತ ಉಪಕ್ರಮಗಳನ್ನು ಕೈಗೊಂಡಲ್ಲಿ, ನೀರಿನ ಬಳಕೆಯ ದಕ್ಷತೆಯನ್ನು ಸುಧಾರಿಸಿದಲ್ಲಿ, ಜನರ ಕೌಶಲಗಳನ್ನು ವೃದ್ಧಿಸಿದಲ್ಲಿ

ಮತ್ತು ಮೂಲಭೂತ ಸೌಕರ್ಯಗಳನ್ನು ಬಲಪಡಿಸಿದಲ್ಲಿ, ಜಿಲ್ಲೆಗೆ ತನ್ನ ಐತಿಹಾಸಿಕ ವೈಭವವನ್ನು ಮರಳಿ ಪಡೆಯುವ ಸಾಮರ್ಥ್ಯ ಖಂಡಿತ ಇದೆ. ಇದು ಕೃಷಿಯೇತರ ವಲಯದ ಮೇಲೆ ಸೂಕ್ತ ಪ್ರಭಾವ ಬೀರಿ ಆರ್ಥಿಕ ಬೆಳವಣಿಗೆ ದರವನ್ನು ಹೆಚ್ಚಿಸಿ ತನ್ಮೂಲಕ ಮಾನವ ಅಭಿವೃದ್ಧಿಯ ಉನ್ನತಿಗೆ ಕಾರಣವಾಗುತ್ತದೆ. ಬಿ.ಆರ್.ಜಿ.ಎಫ್, ಹೈದರಾಬಾದ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ, ವಿಶೇಷ ಅಭಿವೃದ್ಧಿ ಯೋಜನೆ, ಮುಂತಾದ ಕಾರ್ಯಕ್ರಮಗಳಲ್ಲಿ ಮಾಡಿದ ವೆಚ್ಚವು ನಿರೀಕ್ಷಿತ ಫಲಿತಾಂಶ ನೀಡಿಲ್ಲ. ಇದಕ್ಕೆ ಪ್ರಮುಖ ಕಾರಣವೆಂದರೆ ಜಿಲ್ಲೆಯಲ್ಲಿ ಸೂಕ್ತ ತರಬೇತಿ ಹೊಂದಿದ ಸಮರ್ಪಕ ಸಂಖ್ಯೆಯ ಮಾನವ ಶಕ್ತಿ ಇಲ್ಲದಿರುವುದು. ಜಿಲ್ಲೆಯು ಸಂವಿಧಾನದ ೩೭೧–ಜೆ ವಿಧಿಯಲ್ಲಿ ವಿಶೇಷ ಅನುದಾನಕ್ಕೆ ಒಳಗಾಗುತ್ತಿದ್ದು ಸಾಕಷ್ಟು ಹಣ ಹರಿದು ಬರುವ ನಿರೀಕ್ಷೆ ಇದೆ. ಇದನ್ನು ಫಲಪ್ರದವಾಗಿ ಬಳಸಿಕೊಳ್ಳಲು ಸಾಮರ್ಥ್ಯ ನಿರ್ಮಾಣ ಅತ್ಯವಶ್ಯವಾಗಿದ್ದು ಅದು ಬರುವ ದಿನಗಳಲ್ಲಿ ಸಾಕಾರಗೊಳ್ಳುತ್ತದೆ ಮತ್ತು ಆ ಕ್ರಿಯೆಗೆ ಈ ವರದಿ ಸಹಾಯಕಾರಿಯಾಗುತ್ತದೆ ಎಂಬುದು ಕಾದು ನೋಡಬೇಕಾದ ಸಂಗತಿಯಷ್ಟೇ ಅಲ್ಲ ಅದನ್ನು ಹೋರಾಟದ ಮೂಲಕ ದಕ್ಕಿಸಿಕೊಳ್ಳಬೇಕಾಗಿದೆ.

ಅಧ್ಯಾಯ–ನಾಲ್ಕು

ಅಭಿವೃದ್ಧಿ ಪ್ರಾದೇಶಿಕ ಅಸಮಾನತೆ ಹಿನ್ನೆಲೆಯಲ್ಲಿ ರಾಯಚೂರು ಜಿಲ್ಲೆಯ ಸ್ಥಾನ

ಅಧ್ಯಾಯ–ನಾಲ್ಕು

ಅಭಿವೃದ್ಧಿ ಪ್ರಾದೇಶಿಕ ಅಸಮಾನತೆ ಹಿನ್ನೆಲೆಯಲ್ಲಿ ರಾಯಚೂರು ಜಿಲ್ಲೆಯ ಸ್ಥಾನ

೪.೧ ಪ್ರಸ್ತಾವನೆ

ಅಭಿವೃದ್ಧಿಗೆ ಸಂಬಂಧಿಸಿದಂತೆ ಪ್ರಾದೇಶಿಕ ಅಸಮಾನತೆಯು ಕರ್ನಾಟಕದಲ್ಲಿ ಅದರ ಹುಟ್ಟಿನಿಂದಲೇ ಕಾಡುತ್ತಾ ಬಂದಿರುವ ಬಾಲಗ್ರಹ ಪೀಡೆಯಾಗಿದೆ. ಅದರ ಏಕೀಕಿರಣದ ಸಂದರ್ಭದಲ್ಲಿ ಅಭಿವೃದ್ಧಿಯ ವಿವಿಧ ಮಟ್ಟಗಳಲ್ಲಿದ್ದ ಕನ್ನಡ ಮಾತನಾಡುವ ಪ್ರದೇಶಗಳೆಲ್ಲ ಕೂಡಿದ್ದರಿಂದ ಅಂದು ಅಭಿವೃದ್ಧಿಯಲ್ಲಿ ಪ್ರದೇಶ ಸಂಬಂಧಿ ಅಸಮಾನತೆಗಳು ಅನಿವಾರ್ಯವಾಗಿದ್ದವು. ನಮ್ಮ ನಾಡು ಏಕೀಕರಣವಾದ ೧೯೫೬ರಲ್ಲಿ ಮೈಸೂರು ಪ್ರದೇಶ ಇಡೀ ದೇಶದಲ್ಲಿ ಮಾದರಿ ಪ್ರಾಂತವಾಗಿತ್ತು. ಕೊಡಗು ಪ್ರತ್ಯೇಕ ಸ್ಥಾನ ಹೊಂದಿತ್ತು, ಮತ್ತು ಪ್ರಾಕೃತಿಕ ಸಂಪನ್ಮೂಲಗಳಿಂದ ಸಂಪದ್ಭರಿತವಾದ ಪ್ರದೇಶವಾಗಿತ್ತು. ಮುಂಬೈ ಪ್ರಾಂತದಲ್ಲಿದ್ದರಿಂದ ಬೆಳಗಾವಿ ಧಾರವಾಡ (ಅವಿಭಜಿತ), ಉತ್ತರ ಕನ್ನಡ ಮತ್ತು ವಿಜಾಪುರ (ಅವಿಭಜಿತ) ಜಿಲ್ಲೆಗಳು ವಸಾಹತುಶಾಹಿ ಅಭಿವೃದ್ಧಿ ಮತ್ತು ಆಡಳಿತದ ಅನುಕೂಲಗಳನ್ನು ಪಡೆದಿದ್ದವು. ಆದರೆ ಹೈದರಾಬಾದ್ ನಿಜಾಮ್ ಪ್ರಾಂತ್ಯದಿಂದ ೧೯೫೬ರಲ್ಲಿ ಕರ್ನಾಟಕ ಸೇರಿದ ಗುಲ್ಬರ್ಗಾ (ಅವಿಭಜಿತ), ಬೀದರ್, ರಾಯಚೂರು (ಅವಿಭಜಿತ) ಜಿಲ್ಲೆಗಳಲ್ಲಿ ೧೯೫೬ಕ್ಕೆ ಹಿಂದೆ ಅಭಿವೃದ್ಧಿಯ ಗಂಧಗಾಳಿಯು ಬೀಸಿರಲಿಲ್ಲ ಮತ್ತು ಅವುಗಳಿಗೆ ವಸಾಹತುಶಾಹಿ ಆಡಳಿತದ ಅನುಕೂಲಗಳೂ ದೊರೆತಿರಲಿಲ್ಲ. ಅವು ಏಕೀಕರಣವಾದ ಸಂದರ್ಭದಲ್ಲಿ ತೀವ್ರ ದುಸ್ಥಿತಿಯನ್ನು ಅನುಭವಿಸುತ್ತಿದ್ದವು. ಮದರಾಸು ಪ್ರಾಂತದಲ್ಲಿದ್ದು ಏಕೀಕರಣದ ಸಂದರ್ಭದಲ್ಲಿ ಕರ್ನಾಟಕ ಸೇರಿದ ದಕ್ಷಿಣ ಕನ್ನಡ ಮತ್ತು ಬಳ್ಳಾರಿ ಜಿಲ್ಲೆಗಳು ವಿಭಿನ್ನವಾದ ಅಭಿವೃದ್ಧಿಯನ್ನು ಅನುಭವಿಸುತ್ತಿದ್ದವು. ಕರಾವಳಿಯ ಅನುಕೂಲ ಪಡೆದಿದ್ದ ದಕ್ಷಿಣ ಕನ್ನಡಕ್ಕೆ ೧೯೫೬ರ ನಂತರ ತೀವ್ರಗತಿಯ ಅಭಿವೃದ್ಧಿಯನ್ನು ಸಾಧಿಸಿಕೊಳ್ಳುವುದು ಸಾಧ್ಯವಾಯಿತು. ಆದರೆ ಪ್ರಾಕೃತಿಕ ಸಂಪನ್ಮೂಲಗಳಿಂದ (ಗಣಿಗಾರಿಕೆಯು ಸಮೃದ್ಧವಾಗಿ ಅಂದು ಬೆಳೆದಿರಲಿಲ್ಲ) ಬರಡಾಗಿದ್ದ ಬಳ್ಳಾರಿ ಜಿಲ್ಲೆಯು ಆರ್ಥಿಕವಾಗಿ ತೀವ್ರ ಹಿಂದುಳಿದಿತ್ತು ಮತ್ತು ದುಸ್ಥಿತಿಯನ್ನು ಅನುಭವಿಸುತ್ತಿತ್ತು.

[illegible]

[illegible]

[illegible]

ಏಕೀಕರಣಕ್ಕೆ ಭಾಷೆ ಒಂದನ್ನು ಕಾರಣ ಮಾಡುವ ಕ್ರಮ ರೂಢಿಯಲ್ಲಿದೆ. ಇದು ಸ್ವಲ್ಪಮಟ್ಟಿಗೆ ನಿಜವಿರಬಹುದು. ಆದರೆ ಏಕೀಕರಣಕ್ಕೆ ಅನೇಕ ಇತರೆ ಕಾರಣಗಳು ಇದ್ದವು. ಕರ್ನಾಟಕ ಏಕೀಕರಣದ ರೂವಾರಿಗಳಲ್ಲಿ ಒಬ್ಬರಾಗಿದ್ದ ಮತ್ತು ಪ್ರಸಿದ್ಧ ಕಥೆಗಾರರಾಗಿದ್ದ ಕೃಷ್ಣಕುಮಾರ್ ಅವರು ಇದರ ಬಗ್ಗೆ ೧೯೫೬ರಲ್ಲಿ ಹೀಗೆ ಬರೆದಿದ್ದಾರೆ. "ಸಂಯುಕ್ತ ಕರ್ನಾಟಕದ ಬೇಡಿಕೆಯು ಹೊರಹೊರಗೆ ಭಾಷಾತ್ಮಕವಾಗಿದ್ದರೂ, ನಿಜವಾಗಿ ಅದು ಆರ್ಥಿಕ ದೃಷ್ಟಿಯಿಂದ ಹಿಂದುಳಿದವರ ಕೂಗಾಗಿತ್ತು. ಆದುದರಿಂದ ಈಗ ಒಂದಾಗಿರುವ ಸಂಯುಕ್ತ ಕರ್ನಾಟಕವು ಹಿಂದುಳಿದ ಪ್ರದೇಶಗಳದ್ದೇ ಒಂದು ಸಂಯುಕ್ತ ರಾಜ್ಯವೆಂತಲೂ, ಭಾಷೆ ಒಂದಾಗಿರುವುದು ಒಂದು ಹೆಚ್ಚಿನ ಅನುಕೂಲವೆಂದು ಭಾವಿಸಿಕೊಳ್ಳಬೇಕು. ಆದುದರಿಂದ ಭಾಷೆ, ಸಾಹಿತ್ಯಗಳ ಬೆಳವಣಿಗೆಗಿಂತಲೂ, ಹಿಂದುಳಿದ ಪ್ರದೇಶಗಳ ಬೆಳವಣಿಗೆಯೇ ಕರ್ನಾಟಕದ ಗುರಿ ಎಂದು ಬಗೆಯಬೇಕು. ಈ ವಿಷಯದಲ್ಲಿ ಮೈಸೂರು ಸಂಸ್ಥಾನದಲ್ಲೂ, ಬೆಂಗಳೂರು, ಮೈಸೂರು ಪರಿಸರದಲ್ಲಿ ಮಾತ್ರ ಸಾಕಷ್ಟು ಬೆಳವಣಿಗೆಯಾಗಿದೆಯೇ ಹೊರತು, ಮಿಕ್ಕ ಹಲವು ಭಾಗ ಸಾಕಷ್ಟು ಹಿಂದುಳಿದಿದೆ. ಇದನ್ನೆಲ್ಲಾ ನೋಡಿದರೆ, ನಿಜ ಕರ್ನಾಟಕ ಕೊಡಗು, ದಕ್ಷಿಣ ಕನ್ನಡ ಜಿಲ್ಲೆ, ಶಿವಮೊಗ್ಗ, ಚಿತ್ರದುರ್ಗ, ವಿಜಾಪುರ, ಗುಲಬರ್ಗ ಪ್ರದೇಶದಲ್ಲಿರುವುದಲ್ಲದೆ ಬೆಂಗಳೂರು, ಮೈಸೂರು, ಮಂಗಳೂರು ನಗರಗಳಲ್ಲಿಲ್ಲ ಎಂಬುದು ತಿಳಿಯುತ್ತದೆ.

ಇದನ್ನು ಮನದಟ್ಟಾಗುವಂತೆ ಅರಿತಾಗ ಮಾತ್ರ ನಾವು ನಮ್ಮ ನಾಡಿಗೆ (ಕರ್ನಾಟಕ ಸರ್ಕಾರ "ಮೈಸೂರು ರಾಜ್ಯ" ೧೯೫೬) ಅಂದರೆ ಅಭಿವೃದ್ಧಿಯಲ್ಲಿ ಪ್ರಾದೇಶಿಕ ಅಸಮಾನತೆಯ ಬಗ್ಗೆ ಜನರಿಗೆ ೧೯೫೬ರಲ್ಲಿ ಖಚಿತವಾದ ಅರಿವು ಇತ್ತು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಕಳೆದ ಐವತ್ನಾಕು ವರ್ಷಗಳಲ್ಲಿ (೧೯೫೬–೨೦೧೦) ನಾಡನ್ನು ಕಾಡುತ್ತಾ ಬಂದಿರುವ ಸಮಸ್ಯೆಯನ್ನು ನಾವು ಎಷ್ಟರಮಟ್ಟಿಗೆ ನಿವಾರಿಸಿಕೊಂಡಿದ್ದೇವೆ ಎಂಬುದು ಈಗ ನಮ್ಮ ಮುಂದಿರುವ ಪ್ರಶ್ನೆಯಾಗಿದೆ. ಈ ಸಮಸ್ಯೆಯನ್ನು ನಮಗೆ ನಿವಾರಿಸಿಕೊಳ್ಳುವುದು ಸಾಧ್ಯವಾಗಿಲ್ಲ. ಈ ದಿಶೆಯಲ್ಲಿ ನಾವು ಗಂಭೀರ ಪ್ರಯತ್ನವನ್ನು ಮಾಡುತ್ತಿಲ್ಲ. ನಮ್ಮನ್ನು ಆಳಿದ ಮತ್ತು ಆಳುತ್ತಿರುವ ಸರ್ಕಾರಗಳಿಗೆ ಅಭಿವೃದ್ಧಿ ಸಂಬಂಧಿ ಪ್ರಾದೇಶಿಕ ದುಸ್ಥಿತಿಯ ಗಂಭೀರತೆಯು ಅರ್ಥವಾಗಿದೆ ಎಂಬುದರ ಬಗ್ಗೆ ಅನುಮಾನಗಳಿವೆ. ಈ ಸಂಗತಿಯ ಬಗ್ಗೆ ಚರ್ಚಿಸುವಾಗ ಸಾಮಾನ್ಯವಾಗಿ ಹಿಂದುಳಿದ ಪ್ರದೇಶಗಳ ಹಿಂದುಳಿದ ಜನರ, ದುಸ್ಥಿತಿಯನ್ನು ಅನುಭವಿಸುತ್ತಿರುವ ಜನರ ನೆಲೆಯಿಂದ ಸಮಸ್ಯೆಯನ್ನು ಪರಿಭಾವಿಸಿಕೊಳ್ಳುವುದು ಕಂಡುಬರುತ್ತಿಲ್ಲ. ಪ್ರಸ್ತುತ ಅಧ್ಯಾಯದಲ್ಲಿ ಈ ಸಮಸ್ಯೆಯ ಮೂಲಸ್ವರೂಪ ಮತ್ತು ಸಮಸ್ಯೆಯ ಬಹುಮುಖಿ ನೆಲೆಗಳನ್ನು ಚರ್ಚಿಸಲು ಪ್ರಯತ್ನಿಸಲಾಗಿದೆ.

೪.೨ ಅಭಿವೃದ್ಧಿ ದುಸ್ಥಿತಿಯ ನಿರ್ವಚನ

ವರಮಾನದ ಏರಿಕೆಯಲ್ಲಿ ಅಭಿವೃದ್ಧಿಯನ್ನು ಮತ್ತು ವರಮಾನದ ಕೊರತೆಯಲ್ಲಿ ದುಸ್ಥಿತಿಯನ್ನು ಮಾಪನ ಮಾಡುವ ಕ್ರಮ ಅರ್ಥಶಾಸ್ತ್ರದಲ್ಲಿ ಮತ್ತು ಅಭಿವೃದ್ಧಿ ಅಧ್ಯಯನಗಳಲ್ಲಿ ರೂಢಿಯಲ್ಲಿದೆ. ಇಂದು ಸರ್ಕಾರಗಳು ಇದೇ ನೀತಿಯನ್ನು ಅನುಸರಿಸುತ್ತಿವೆ. ಇದು ಅಭಿವೃದ್ಧಿಗೆ ಸಂಬಂಧಿಸಿದಂತೆ ಅತ್ಯಂತ ಸೀಮಿತವಾದ ದೃಷ್ಟಿಕೋನವೆಂಬುದನ್ನು ವಿದ್ವಾಂಸರು ಬಹಳ

ಹಿಂದಿನಿಂದಲೂ ಟೀಕಿಸುತ್ತಾ ಬಂದಿದ್ದಾರೆ. ಇಷ್ಟಾದರೂ ಇಂದಿಗೂ ನಮ್ಮ ಧುರೀಣರಿಗೆ ವರಮಾನದಲ್ಲಿನ ವಾರ್ಷಿಕ ಬೆಳವಣಿಗೆಯ ಪ್ರಮಾಣವೇ ಅಭಿವೃದ್ಧಿಯ ಅಳತೆಗೋಲಾಗಿದೆ. ನಮ್ಮ ದೇಶದ ಆಳುವ ಪ್ರಧಾನಮಂತ್ರಿಗಳು ನಮ್ಮ ರಾಷ್ಟ್ರೀಯ ವರಮಾನದ ವಾರ್ಷಿಕ ಏರಿಕೆ ಪ್ರಮಾಣ ಎರಡಂಕಿಯಾಗಬೇಕೆಂದು ಮತ್ತೆ ಮತ್ತೆ ಹೇಳುತ್ತಿದ್ದಾರೆ. ನಮ್ಮ ರಾಜ್ಯದ ಬಜೆಟ್ಟಿನ ಗಾತ್ರವನ್ನು ಮುಂದಿನ ಎರಡು ವರ್ಷಗಳಲ್ಲಿ 'ನೂರು ಲಕ್ಷ ಕೋಟಿ' ಮಾಡುವುದಾಗಿ ಹೇಳಲಾಗುತ್ತಿದೆ. ಇಂದು ಕಂಪನಿಗಳ ಮೊದಲ ಮೂರು ತಿಂಗಳಲ್ಲಿ ಲಾಭದ ಪ್ರಮಾಣ ಏರುತ್ತಿರುವುದನ್ನು ದೊಡ್ಡ ಸಾಧನೆಯಾಗಿ ಕೂಗಿಕೂಗಿ ಹೇಳುತ್ತಿವೆ. ಸೆನ್ಸೆಕ್ಸ್ ೧೨,೦೦೦ ಗಡಿ ದಾಟಿತು. ೧೫,೦೦೦ ಗಡಿ ತಲುಪಿತು ಎಂದೆಲ್ಲಾ ಸುದ್ದಿ ಮಾಧ್ಯಮಗಳಲ್ಲಿ ಚೀರಾಡಲಾಗುತ್ತಿದೆ. ಈ ಯಾವ ಏರಿಕೆಯಿಂದಾಗಲಿ ಅಥವಾ ವರ್ಧನೆಯಿಂದಾಗಲಿ ಬಡವರ, ವಂಚಿತರ ಮತ್ತು ಪರಿಶಿಷ್ಟರ ಬದುಕು ಉತ್ತಮಗೊಳ್ಳುವುದು ಖಾತ್ರಿಯಿಲ್ಲ. ಆದರೆ ಇಂದು ಅಭಿವೃದ್ಧಿ ಮತ್ತು ದುಸ್ಥಿತಿಗಳನ್ನು ವರಮಾನವನ್ನು ಸೇರಿಸಿಕೊಂಡು ವಿಸ್ತೃತ ನೆಲೆಯಲ್ಲಿ ಪರಿಭಾವಿಸಿಕೊಳ್ಳುವ ಕ್ರಮವನ್ನು ಅಮರ್ತ್ಯಸೇನ್ ಮತ್ತು ಮೆಹಬೂಬ್ ಉಲ್-ಹಕ್ ತಿಳಿಸಿಕೊಟ್ಟಿದ್ದಾರೆ.[೧] ಅವರ ಪ್ರಕಾರ ವರಮಾನವು ಅಭಿವೃದ್ಧಿಯ ಸಾಧನವೆ ವಿನಾಃ ಅದರಲ್ಲಿನ ಏರಿಕೆಯೇ ಅಭಿವೃದ್ಧಿಯಲ್ಲ. ಅದು ವರಮಾನದ ಜೊತೆಯಲ್ಲಿ ಸಾಕ್ಷರತೆ, ಶಿಕ್ಷಣ, ಆರೋಗ್ಯ, ಲಿಂಗಸಮಾನತೆ, ಆಹಾರದ ಹಕ್ಕು, ಘನತೆಯಿಂದ ಬದುಕುವ ಪರಿ ಮುಂತಾದ ಸಂಗತಿಗಳನ್ನು ಒಳಗೊಳ್ಳುತ್ತದೆ ಎಂಬುದು ಅವರಿಬ್ಬರ ವಾದವಾಗಿದೆ. ಇಂದು ವರಮಾನವನ್ನು ಆಧರಿಸಿ ಅಭಿವೃದ್ಧಿಯನ್ನು ಅಳೆಯುವ ಜಿಡಿಪಿಗೆ (GDP) ಪ್ರತಿಯಾಗಿ ಅಮರ್ತ್ಯಸೇನ್ ಮತ್ತು ಮಹಬೂಬ್ ಉಲ್-ಹಕ್ ಮಾನವ ಅಭಿವೃದ್ಧಿ ಸೂಚ್ಯಂಕ(HDI) ಎಂಬ ಅಳತೆಗೋಲನ್ನು ರೂಪಿಸಿದ್ದಾರೆ. ಜನರು ತಮ್ಮ ಬದುಕನ್ನು ಉತ್ತಮಪಡಿಸಿಕೊಳ್ಳಲು ಲಭ್ಯವಿರುವ ಅವಕಾಶಗಳಲ್ಲಿ ತಮಗೆ ನ್ಯಾಯೋಚಿತವೆಂದು ಕಂಡುಬಂದುದನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ಮತ್ತು ಸಾಮರ್ಥ್ಯಗಳ ವರ್ಧನೆಯೇ ಮಾನವ ಅಭಿವೃದ್ಧಿ. ಇಲ್ಲಿ ಅಭಿವೃದ್ಧಿಯ ಸಾಧನಗಳಿಗಿಂತ ಅಭಿವೃದ್ಧಿಯ 'ಸಾಧ್ಯ'ವು ಮುಖ್ಯವಾಗಿದೆ. ಅಭಿವೃದ್ಧಿಯ ಸಾಧ್ಯ ಯಾವುದೆಂದರೆ ಜನರ ಬದುಕು. ಜನರನ್ನು ಮುಖ್ಯ ಧಾತುವನ್ನಾಗಿ ಮಾಡಿಕೊಂಡ ಅಭಿವೃದ್ಧಿ ಪ್ರಣಾಳಿಕೆಯೆಂದು ತಿಳಿಯಲಾಗಿದೆ. ಈ ಅಭಿವೃದ್ಧಿ ಪ್ರಣಾಳಿಕೆಯ ಬಹುಮುಖ್ಯ ಸಂಗತಿಯೆಂದರೆ ಅದರ ಲಿಂಗಸಂವೇದಿ ಗುಣ. ಅಭಿವೃದ್ಧಿಯಲ್ಲಿ ಮಹಿಳೆಯರು ಪಡೆಯುತ್ತಿರುವ ಪಾಲನ್ನು ಅಳತೆ ಮಾಡಲು ಯುಎನ್‌ಡಿಪಿ(UNDP) ೧೯೯೫ರಲ್ಲಿ ಪ್ರಕಟಿಸಿದ ಮಾನವ ಅಭಿವೃದ್ಧಿ ವರದಿಯಲ್ಲಿ ಲಿಂಗಸಂಬಂಧಿ ಅಭಿವೃದ್ಧಿ ಸೂಚ್ಯಂಕವೆಂಬ(GDI) ಮಾಪನವನ್ನು ರೂಪಿಸಿತು. ಅಭಿವೃದ್ಧಿಯ ಮತ್ತು ದುಸ್ಥಿತಿಯ ಲಿಂಗ ಸಂಬಂಧಿ ಆಯಾಮಗಳನ್ನು ಇಲ್ಲಿ ಹಿಡಿದಿಡಲು ಸಾಧ್ಯವಿದೆ. ಸಾಂಪ್ರದಾಯಿಕ ಅಭಿವೃದ್ಧಿ ಪ್ರಣಾಳಿಕೆಯಲ್ಲಿ ಇಂತಹ ಲಿಂಗಸಂಬಂಧಿ ವಿಶ್ಲೇಷಣೆಯು ಸಾಧ್ಯವಿಲ್ಲ. ಅವು ಲಿಂಗನಿರಪೇಕ್ಷ ಸಿದ್ಧಾಂತಗಳು ಅಭಿವೃದ್ಧಿಯೆನ್ನುವುದು ಕೇವಲ ವರಮಾನಕ್ಕೆ, ಬಂಡವಾಳಕ್ಕೆ, ಉಳಿತಾಯಕ್ಕೆ, ಕೈಗಾರಿಕೋದ್ಯಮಕ್ಕೆ ಸಂಬಂಧಿಸಿದ ಸಂಗತಿ ಮಾತ್ರವಲ್ಲ, ಸರೀಕರೊಂದಿಗೆ ಸರಿಸಮವಾಗಿ ಘನತೆಯಿಂದ ಸಹಭಾಗಿಗಳಾಗಲು ಸಾಧ್ಯವಾಗುವ ಜನರ ಸಾಮರ್ಥ್ಯ ಮತ್ತು ಸ್ವಾತಂತ್ರ್ಯವನ್ನು ಅಮರ್ತ್ಯಸೇನ್ ಅಭಿವೃದ್ಧಿಯೆಂದು ಕರೆಯುತ್ತಾರೆ.[೨]

[illegible]

ಈ ಬಗೆಯ ವಿಸ್ತೃತವಾದ ಮತ್ತು ಜನರನ್ನು ಆಧಾರವಾಗಿಟ್ಟುಕೊಂಡ ಅಭಿವೃದ್ಧಿ ಮತ್ತು ದುಸ್ಥಿತಿಗಳ ನೆಲೆಯಿಂದ ಪ್ರಾದೇಶಿಕ ಅಸಮಾನತೆಯನ್ನು ಇಲ್ಲಿ ಪರಿಭಾವಿಸಿಕೊಳ್ಳಲು ಪ್ರಯತ್ನಿಸಲಾಗಿದೆ.

೪.೩ ವರಮಾನದಲ್ಲಿ ಅಸಮಾನತೆ

ವರಮಾನಕ್ಕೆ ಸಂಬಂಧಿಸಿದಂತೆ ಪ್ರಾದೇಶಿಕ ಅಸಮಾನತೆಯನ್ನು ತೋರಿಸುವ ಕ್ರಮವೆಂದರೆ ರಾಜ್ಯದ ಒಟ್ಟು ವರಮಾನದಲ್ಲಿ ಹಿಂದುಳಿದ ಪ್ರದೇಶಗಳು ಪಡೆದಿರುವ ಪಾಲನ್ನು ಅವು ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಪಡೆದಿರುವ ಪಾಲಿಗೆ ಹೋಲಿಸಿ ಅಲ್ಲಿನ ಅಂತರವನ್ನು ಲೆಕ್ಕ ಹಾಕುವುದು. ಅದರ ಪ್ರಕಾರ ರಾಜ್ಯದ ಹಿಂದುಳಿದ ವಿಜಾಪುರ, ಬಾಗಲಕೋಟೆ, ಬೀದರ್, ಗುಲ್ಬರ್ಗಾ, ಕೊಪ್ಪಳ, ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ರಾಜ್ಯದ ಜನಸಂಖ್ಯೆಯಲ್ಲಿ ೨೦೦೭-೦೮ರಲ್ಲಿ ಪಡೆದಿದ್ದ ಪಾಲು ಶೇ.೨೪.೯೨. ಆದರೆ ಅವು ರಾಜ್ಯದ ವರಮಾನದಲ್ಲಿ ಪಡೆದಿದ್ದ ಪಾಲು ಮಾತ್ರ ಕೇವಲ ಶೇ.೧೬.೮೭ ಈ ಏಳು ಜಿಲ್ಲೆಗಳ ಸರಾಸರಿ ಒಟ್ಟು ಆಂತರಿಕ ತಲಾ ಉತ್ಪನ್ನ ರೂ. ೨೯,೧೧೩ರಷ್ಟಾಗುತ್ತದೆ. ಇದು ರಾಜ್ಯದ ಸರಾಸರಿ ತಲಾ ವರಮಾನದ ಶೇ.೬೯.೪೮ರಷ್ಟಾಗುತ್ತದೆ. ಹೀಗೆ ವರಮಾನದ ದೃಷ್ಟಿಯಿಂದಲೂ ಈ ಏಳು ಜಿಲ್ಲೆಗಳು ರಾಜ್ಯದಲ್ಲಿ ಅತ್ಯಂತ ಹಿಂದುಳಿದ ಸ್ಥಿತಿಯಲ್ಲಿವೆ. ಹಾಗೆ ನೋಡಿದರೆ ಈ ಏಳು ಜಿಲ್ಲೆಗಳು ೧೯೯೯-೨೦೦೦ದಲ್ಲಿ ರಾಜ್ಯದ ವರಮಾನದಲ್ಲಿ ಶೇ.೧೮.೬೧ ಪಾಲು ಪಡೆದಿದ್ದವು. ಅಂದರೆ ರಾಜ್ಯದ ವರಮಾನದಲ್ಲಿ ಹಿಂದುಳಿದ ಏಳು ಜಿಲ್ಲೆಗಳು ಪಡೆದಿದ್ದ ಪಾಲು ೧೯೯೯-೨೦೦೦ನಿಂದ ೨೦೦೭-೦೮ರ ಅವಧಿಯಲ್ಲಿ ಶೇ.೧೮.೬೧ರಿಂದ ಶೇ.೧೬.೮೭ಕ್ಕಿಳಿದಿದೆ. ಇದು ಆತಂಕಕಾರಿಯಾದ ಸಂಗತಿಯಾಗಿದೆ. ಅಭಿವೃದ್ಧಿಯ ಪ್ರಾದೇಶಿಕ ಅಸಮಾನತೆಯು ಉಲ್ಬಣಗೊಳ್ಳುತ್ತಾ ನಡೆದಿದೆ. ಅಂದು ಅವು ರಾಜ್ಯದ ಜನಸಂಖ್ಯೆಯಲ್ಲಿ ಪಡೆದಿದ್ದ ಪಾಲು ಶೇ.೨೪.೫೨ರಷ್ಟಾಗಿದೆ.

೪.೪ ಹಿಂದುಳಿದ ಜಿಲ್ಲೆಗಳಲ್ಲಿ ಮಾನವ ಅಭಿವೃದ್ಧಿ

ವರಮಾನದ ದೃಷ್ಟಿಯಿಂದ ಹಿಂದುಳಿದ ಜಿಲ್ಲೆಗಳು ಯಾವ ಬಗೆಯ ದುಸ್ಥಿತಿಯನ್ನು ಅನುಭವಿಸುತ್ತಿವೆ ಎಂಬುದನ್ನು ಮೇಲೆ ಚರ್ಚಿಸಲಾಗಿದೆ. ಈಗ ಮಾನವ ಅಭಿವೃದ್ಧಿಯ ಸೂಚಿಗಳಾದ ಸಾಕ್ಷರತೆ ಪ್ರಾಥಮಿಕ ಶಿಕ್ಷಣ, ಆರೋಗ್ಯ, ಲಿಂಗಸಮಾನತೆ, ಪರಿಶಿಷ್ಟರ ಅಭಿವೃದ್ಧಿ ಸ್ಥಿತಿಗತಿ ಮುಂತಾದವುಗಳ ನೆಲೆಯಿಂದ ಪ್ರಾದೇಶಿಕ ಅಸಮಾನತೆಯನ್ನು ಪರಿಶೀಲಿಸಬಹುದಾಗಿದೆ. ಕರ್ನಾಟಕ ರಾಜ್ಯದ ಹಿಂದುಳಿದ ಜಿಲ್ಲೆಗಳಲ್ಲಿ ಸಾಕ್ಷರತೆಯ ಪ್ರಮಾಣ ಅತ್ಯಂತ ಕೆಳಮಟ್ಟದಲ್ಲಿದೆ. ಅದರಲ್ಲೂ ಮಹಿಳೆಯರ ಸಾಕ್ಷರತೆಯ ಪ್ರಮಾಣ ನಿಕೃಷ್ಟವಾಗಿದೆ. ಈ ಏಳು ಹಿಂದುಳಿದ ಜಿಲ್ಲೆಗಳಲ್ಲಿ ೧೯೯೧ರಲ್ಲಿ ಒಟ್ಟು ಅಕ್ಷರಸ್ಥರ ಸಂಖ್ಯೆ ೩೯.೬೩ಲಕ್ಷ. ರಾಜ್ಯದ ಒಟ್ಟು ಅಕ್ಷರಸ್ಥರಲ್ಲಿ ಅವರ ಪಾಲು ಶೇ.೧೮.೮೭ ಆದರೆ ೨೦೦೧ರಲ್ಲಿ ಈ ಜಿಲ್ಲೆಗಳಲ್ಲಿದ್ದ ಅಕ್ಷರಸ್ಥರ ಸಂಖ್ಯೆ ೫೩.೮೪ ಲಕ್ಷ. ರಾಜ್ಯದ ಒಟ್ಟು ಅಕ್ಷರಸ್ಥರಲ್ಲಿ ಈ ಜಿಲ್ಲೆಗಳ ಅಕ್ಷರಸ್ಥರ ಪಾಲು ೨೦೦೧ರಲ್ಲಿ ಶೇ.೧೭.೬೯. ಇದು ಏನನ್ನು ಸೂಚಿಸುತ್ತದೆ? ಪ್ರಾದೇಶಿಕ ಅಸಮಾನತೆಯು ಉಲ್ಬಣಗೊಳ್ಳುತ್ತಾ ಸಾಗಿರುವುದನ್ನು ಇದು ಸೂಚಿಸುತ್ತದೆ. ರಾಜ್ಯಮಟ್ಟದಲ್ಲಿ ಏಳು ಜಿಲ್ಲೆಗಳ ಸ್ಥಾನ ಅಕ್ಷರಸ್ಥರಿಗೆ ಸಂಬಂಧಿಸಿದಂತೆ ಕುಸಿದಿದೆ. ವರಮಾನಕ್ಕೆ ಸಂಬಂಧಿಸಿದಂತೆ ಕಡಿಮೆಯಾಗಿದೆ. ಈ ಜಿಲ್ಲೆಗಳಲ್ಲಿ ಸಾಕ್ಷರತೆಯು

೧೯೯೧ರಲ್ಲಿ ಶೇ.೪೫ಕ್ಕಿಂತ ಕಡಿಮೆಯಿತ್ತು. ರಾಯಚೂರು ಮತ್ತು ಗುಲಬರ್ಗಾ ಜಿಲ್ಲೆಗಳಲ್ಲಿ ಅದು ಶೇ.೩೮ಕ್ಕಿಂತ ಕಡಿಮೆಯಿತ್ತು. ಈ ಸ್ಥಿತಿಯು ೨೦೦೧ರಲ್ಲಿ ತುಂಬಾ ಸುಧಾರಿಸಲಿಲ್ಲ. ಏಕೆಂದರೆ ೧೯೯೧ರಿಂದ ೨೦೦೧ರ ಅವಧಿಯಲ್ಲಿ ವಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಸಾಕ್ಷರತಾ ಪ್ರಮಾಣ ಹೆಚ್ಚಾಗಲೇ ಇಲ್ಲ. ರಾಯಚೂರು ಜಿಲ್ಲೆಯಲ್ಲಿ ಅದು ೨೦೦೧ರಲ್ಲಿ ಶೇ.೪೮ ದಾಟಲಿಲ್ಲ. ಮಹಿಳೆಯರ ಸಾಕ್ಷರತೆಯ ಬಗ್ಗೆ ಏನನ್ನು ಹೇಳದಿರುವುದೇ ಲೇಸು. ಮಹಿಳಾ ಸಾಕ್ಷರತೆಯು ೨೦೦೧ರಲ್ಲಿ ರಾಯಚೂರು, ಕೊಪ್ಪಳ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ ಶೇ.೪೦ ದಾಟಲಿಲ್ಲ. ಶೈಕ್ಷಣಿಕ ಸೂಚ್ಯಂಕವು ೨೦೦೧ರಲ್ಲಿ ರಾಜ್ಯಮಟ್ಟದ ೦.೭೦೦ ದಾಟಿದ್ದರೆ ಹಿಂದುಳಿದ ಗುಲಬರ್ಗಾ, ಕೊಪ್ಪಳ, ರಾಯಚೂರುಗಳಲ್ಲಿ ಅದು ೦.೬೦೦ಕ್ಕಿಂತ ಕಡಿಮೆಯಿದೆ. ಬಳ್ಳಾರಿ, ಬಾಗಲಕೋಟೆ, ವಿಜಾಪುರ, ಮತ್ತು ಬೀದರ್ ಜಿಲ್ಲೆಗಳಲ್ಲಿ ಅದು ೦.೬೩೦ ದಾಟಲಿಲ್ಲ. ಬೀದರ್ ಜಿಲ್ಲೆಯಲ್ಲಿ ಮಾತ್ರ ಅದು ೦.೬೮೦ರಷ್ಟಿದೆ. ಸಾಕ್ಷರತೆಯ ದೃಷ್ಟಿಯಿಂದ ರಾಜ್ಯದ ಅತ್ಯಂತ ಹಿಂದುಳಿದ ತಾಲ್ಲೂಕುಗಳೆಂದರೆ ಶಹಾಪುರ, (ಶೇ.೩೮.೫೩), ಯಾದಗೀರಿ (ಶೇ.೩೭.೪೩) ಮತ್ತು ದೇವದುರ್ಗ (ಶೇ.೩೯.೫೬) ಇವು ಕ್ರಮವಾಗಿ ಗುಲಬರ್ಗಾ, ಯಾದಗೀರಿ ಮತ್ತು ರಾಯಚೂರು ಜಿಲ್ಲೆಗಳಲ್ಲಿವೆ. ಈ ಜಿಲ್ಲೆಗಳಲ್ಲಿ ಅನಕ್ಷರತೆ ಪ್ರಮಾಣ ಅಧಿಕ ಮತ್ತು ಶಾಲೆಯನ್ನು ಸೇರದ ಮಕ್ಕಳ ಪ್ರಮಾಣವು ಅಧಿಕ.

ಶಾಲೆ ಸೇರದ ಮಕ್ಕಳು

ಮಾನವ ಅಭಿವೃದ್ಧಿಯ ಸೂಕ್ಷ್ಮಸೂಚಿಯೆಂದರೆ ಶಾಲಾ ದಾಖಲಾತಿ ಮತ್ತು ಶಾಲೆಯನ್ನು ಸೇರದ ಮಕ್ಕಳ ಪ್ರಮಾಣ ಶಿಕ್ಷಣ ಇಲಾಖೆಯ ೨೦೧೦ರಲ್ಲಿ ನಡೆಸಿದ ಮಕ್ಕಳ ಗಣತಿ ಪ್ರಕಾರ ರಾಜ್ಯದಲ್ಲಿ ಶಾಲೆ ಸೇರದ ಮಕ್ಕಳ ಸಂಖ್ಯೆ ೧.೦೯ಲಕ್ಷ. ಇವರಲ್ಲಿ ಗುಲಬರ್ಗಾ ವಿಭಾಗದ ಐದು ಜಿಲ್ಲೆಗಳ ಪಾಲು ೪೦.೯೩೬ (ಶೇ.೩೭.೭೧). ಈ ವಿಭಾಗವು ರಾಜ್ಯದ ಜನಸಂಖ್ಯೆಯಲ್ಲಿ ಪಡೆದಿರುವ ಪಾಲು ಶೇ.೧೮ ಗುಲಬರ್ಗಾ, ರಾಯಚೂರು ಮತ್ತು ವಿಜಾಪುರ ಜಿಲ್ಲೆಗಳಲ್ಲಿ ಸಮಸ್ಯೆಯು ಉಲ್ಬಣಾವಸ್ಥೆಯಲ್ಲಿದೆ. ಶಾಲೆ ಸೇರದ ಮಕ್ಕಳ ಸಂಖ್ಯೆಯ ದೃಷ್ಟಿಯಿಂದ ಈ ಮೂರು ಜಿಲ್ಲೆಗಳು ರಾಜ್ಯದಲ್ಲಿ ಕ್ರಮವಾಗಿ ಪ್ರಥಮ ಮೂರು ಸ್ಥಾನಗಳಲ್ಲಿವೆ. ಈ ಮೂರು ಜಿಲ್ಲೆಗಳು ೨೦೧೦ ರಾಜ್ಯದ ಜನಸಂಖ್ಯೆಯಲ್ಲಿ ಶೇ.೧೨.೬೬ರಷ್ಟು ಪಾಲು ಪಡೆದಿವೆ. ಆದರೆ ಶಾಲೆ ಸೇರದ ಮಕ್ಕಳಲ್ಲಿ ಅವುಗಳ ಪಾಲು ಶೇ.೩೪.೭೮ರಷ್ಟಿದೆ. ರಾಜ್ಯಮಟ್ಟದಲ್ಲಿ ಪ್ರತಿ ಹತ್ತು ಸಾವಿರ ಜನಸಂಖ್ಯೆಗೆ ಹತ್ತನೆಯ ತರಗತಿ ಓದುತ್ತಿರುವ ಮಕ್ಕಳ ಸಂಖ್ಯೆ ೧೦೭ರಷ್ಟಿದ್ದರೆ ಗುಲಬರ್ಗಾ ವಿಭಾಗದಲ್ಲಿ ಅದು ೭೫ರಷ್ಟಿದೆ. ರಾಜ್ಯದಲ್ಲಿ ಮತ್ತು ಎಲ್ಲ ಜಿಲ್ಲೆಗಳಲ್ಲಿ ಶೇ.೧೦೦ರಷ್ಟು ಶಾಲಾ ದಾಖಲಾತಿಯನ್ನು ಸಾಧಿಸಿಕೊಳ್ಳಲಾಗಿದೆ. ಆದರೆ ಅದು ಏಳನೆಯ ತರಗತಿಯಲ್ಲಿ ಅಥವಾ ಹತ್ತನೆಯ ತರಗತಿಯಲ್ಲಿ ಕಡಿಮೆಯಿದೆ. ಇದಲು ಆತಂಕಕ್ಕೆ ಕಾರಣವಾಗಿರುವ ಸಂಗತಿಯಾಗಿದೆ. ಆದರೆ ಪ್ರಾದೇಶಿಕ ಅಸಮಾನತೆಗೆ ಸಂಬಂಧಿಸಿದ ಇಂತಹ ಸಂಗತಿಗಳು ಸರ್ಕಾರದ ಮತ್ತು ಸಂಬಂಧಿಸಿದವರ ಗಮನಕ್ಕೆ ಬರುತ್ತಿಲ್ಲ. ಅವುಗಳ ನಿವಾರಣೆಗೆ ಪ್ರದೇಶ ನಿರ್ದಿಷ್ಟ ಕ್ರಮಗಳನ್ನು ತೆಗೆದುಕೊಳ್ಳುತ್ತಿಲ್ಲ. ಈ ವಿಷಯದಲ್ಲಿ ವಿಶೇಷ ಕ್ರಮಗಳಿಲ್ಲದಿದ್ದರೆ ಸಮಸ್ಯೆಯನ್ನು ಬಗೆಹರಿಸುವುದಾದರೂ ಹೇಗೆ? ಈ ಕಾರಣಕ್ಕೆ ಹೇಳಿರುವಂತಹದ್ದು ನಮ್ಮ ಸರ್ಕಾರಗಳಿಗೆ ಅಭಿವೃದ್ಧಿಗೆ ಸಂಬಂಧಿಸಿದ ಪ್ರಾದೇಶಿಕ

ಅಸಮಾನತೆಯು ಗಂಭೀರ ಸಂಗತಿಯಾಗಿಲ್ಲ. ಥಳಥಳನೆ ಹೊಳೆಯುವ ರಸ್ತೆಗಳು, ವಿಮಾನ ನಿಲ್ದಾಣಗಳು, "ಉದ್ದಿಮೆಗಳಿಗೆ ಜಮೀನ ನೀಡಿರಿ ಸಮೃದ್ಧವಾಗಿ ಉದ್ಯೋಗ ಪಡೆಯಿರಿ" ಎಂಬ ಘೋಷಣೆ, ಬಜೆಟ್ಟಿನ ಗಾತ್ರವನ್ನು ಒಂದು ಲಕ್ಷ ಕೋಟಿಗೇರಿಸುವುದು, ಬಂಡವಾಳವೇ ಅಭಿವೃದ್ಧಿಗೆ ಸಿದ್ಧೌಷಧ ಎನ್ನುವುದು, ಬಂಡವಾಳಿಗರಿಗೆ ಕೆಂಪು ಹಾಸನ್ನು ಹಾಸುವುದು ಮುಂತಾದವು ಇಲ್ಲಿ ಆದ್ಯತೆಗಳಾಗಿವೆ.೩(ಟಿ.ಆರ್.ಚಂದ್ರಶೇಖರ್, ೨೦೧೦, ೨೫೨, ೨೫೩)

ಪರಿಶಿಷ್ಟರ ದುಸ್ಥಿತಿ

ದಲಿತರು, ಮಹಿಳೆಯರು ಮತ್ತು ಹಿಂದುಳಿದವರು ಇಂದು ಎಲ್ಲ ರೀತಿಯ ದುಸ್ಥಿತಿಗೆ ಒಳಗಾಗಿದ್ದಾರೆ. ದಲಿತರಿಗಾಗಿ ಮೀಸಲಿಡುವ ಶೇ.೧೮ರಷ್ಟು ಬಜೆಟ್ಟಿನ ಹಣವನ್ನು ಇಲಾಖೆಗಳು ಖರ್ಚು ಮಾಡುತ್ತಿಲ್ಲ. ದಲಿತರು ಮತ್ತು ಹಿಂದುಳಿದ ನೌಕರರು ಅಧಿಕವಾಗಿರುವ ಸಂಸ್ಥೆಗಳು ಇಂದು ಎಲ್ಲ ಬಗೆಯ ಟೀಕೆಗಳನ್ನು ಎದುರಿಸಬೇಕಾಗಿದೆ. ರಾಜ್ಯದ ಒಟ್ಟು ಪರಿಶಿಷ್ಟರ ಜನಸಂಖ್ಯೆಯಲ್ಲಿ ಈ ಏಳು ಜಿಲ್ಲೆಗಳ ಪಾಲು ಶೆ.೩೧.೮೩. ರಾಜ್ಯದ ಒಟ್ಟು ಪರಿಶಿಷ್ಟ ಅಕ್ಷರಸ್ಥರಲ್ಲಿ ಏಳು ಜಿಲ್ಲೆಗಳ ಪಾಲು ಕೇವಲ ಶೇ.೨೩.೮೪. ಪರಿಶಿಷ್ಟರನ್ನೇ ತೆಗೆದುಕೊಂಡರೆ ಅವರಲ್ಲಿ ಹಿಂದುಳಿದ ಜಿಲ್ಲೆಯಗಳಲ್ಲಿನ ಪರಿಶಿಷ್ಟರ ಬದುಕು ಹೆಚ್ಚು ದುಸ್ಥಿತಿಯಲ್ಲಿರುವುದು ತಿಳಿಯುತ್ತದೆ. ಈ ಸಂಗತಿಯು ಅಷ್ಟಾಗಿ ಗಮನ ಸೆಳೆದಂತೆ ಕಾಣುತ್ತಿಲ್ಲ. ಮಹಿಳೆಯರ ಮೇಲಿನ ಹಿಂಸೆ ದಿನೇದಿನೇ ಅಧಿಕವಾಗುತ್ತಿದೆ. ಅತ್ಯಾಚಾರಕ್ಕೆ ಒಳಗಾದ ಮಹಿಳೆಯೇ ಅತ್ಯಾಚಾರವನ್ನು ಪೋಲಿಸರ ಮುಂದೆ ಮತ್ತು ನ್ಯಾಯಾಲಯದಲ್ಲಿ ಸಿದ್ಧಮಾಡಿ ತೋರಿಸಬೇಕಾದ ಸ್ಥಿತಿಯು ನಿರ್ಮಾಣವಾಗಿದೆ. ಮಹಿಳೆಯರ ಮೇಲೆ ನಡೆದ ಹಿಂಸೆಯ ಸಂದರ್ಭದಲ್ಲಿ ಅಪರಾಧವೆಸಗಿದವರ ಪರವಾಗಿ ಜನರು ಹೆಚ್ಚುಹೆಚ್ಚು ನಿಲ್ಲುತ್ತಿದ್ದಾರೆ ಮತ್ತು ಹಿಂಸೆಯಿಂದ ನೊಂದವರ ಬಗ್ಗೆ ಲಘುವಾಗಿ ಜವಾಬ್ದಾರಿ ಸ್ಥಾನದಲ್ಲಿರುವವರು ಮಾತನಾಡತೊಡಗಿದ್ದಾರೆ. ಈಗಾಗಲೇ ಚರ್ಚಿಸಿರುವಂತೆ ಅಭಿವೃದ್ಧಿಗೆ ಪರಿಶಿಷ್ಟರು ನೀಡುವ ಪರಿಶ್ರಮ ಅಧಿಕ. ಆದರೆ ಅಭಿವೃದ್ಧಿಯಿಂದ ಅವರು ಪಡೆದುಕೊಳ್ಳುತ್ತಿರುವ ಪ್ರತಿಫಲ ಕಡಿಮೆ.

ವಲಸೆ ಮತ್ತು ದುಡಿಮೆಗಾರರ ದುಸ್ಥಿತಿ

ವಲಸೆಯು ಇಂದು ಬಡವರಿಗೆ ವರವಾಗುವುದಕ್ಕೆ ಪ್ರತಿಯಾಗಿ ಶಾಪವಾಗುತ್ತಿದೆ. ಬಸ್ಸಿನಲ್ಲಿ ಪ್ರಯಾಣಿಸಿದರೆ ಹಣ ಹೆಚ್ಚು ಖರ್ಚಾಗುವುದೆಂದು ಇವರೆಲ್ಲ ಲಾರಿಯಲ್ಲಿ ಪ್ರಯಾಣಿಸುತ್ತಾರೆ. ಈ ರೀತಿಯಲ್ಲಿ ದುಡಿಯುವ ಅಸಂಘಟಿತ ದುಡಿಮೆಗಾರರಿಗೆ ಸರ್ಕಾರಗಳು ಯಾವ ಬಗೆಯ ಭದ್ರತೆಯನ್ನು ಒದಗಿಸುತ್ತಿದೇ? ಅಭಿವೃದ್ಧಿಯ ಹೆಸರಿನಲ್ಲಿ ಜನರ ಜಮೀನನ್ನು ಕಬಳಿಸಿ ಅವರನ್ನು ಬೀದಿಗೆ ಬೀಳುವಂತೆ ಮಾಡಲಾಗುತ್ತಿದೆ. ಅಭಿವೃದ್ಧಿಯ ಹೆಸರಿನಲ್ಲಿ ಮಾಡುತ್ತಿರುವ ನೀರಾವರಿ ಯೋಜನೆಗಳಾಗಿರಬಹುದು, ಕೈಗಾರಿಕೆಗಳಾಗಿರಬಹುದು, ಶಾಖೋತ್ಪನ್ನ ಸ್ಥಾವರಗಳು ಆಗಿರಬಹುದು. ಇವೆಲ್ಲ ಯಾರಿಗೆ ವರವಾಗಿ ಪರಿಣಮಿಸಿವೆ? ಅವುಗಳಿಂದಾಗಿ ಜಮೀನು ಕಳೆದುಕೊಂಡವರು ಸುಖವಾಗಿದ್ದಾರೆಯೇ? ಸರ್ಕಾರ ನೀಡಿದ ಪರಿಹಾರ, ಜಮೀನನ್ನು ಪಡೆದ ಖಾಸಗಿ ಕಂಪನಿಗಳು ನೀಡುವ ಹಂಗಾಮಿ ಉದ್ಯೋಗಗಳು ಎಷ್ಟು ದಿನ ಜನರನ್ನು ಸಾಕಬಲ್ಲವು? "ಜಮೀನು ನೀಡಿರಿ

[illegible]

ಉದ್ಯೋಗ ಪಡೆಯಿರಿ" ಎಂಬ ಘೋಷಣೆ ಮಾಡುವವರಿಗೆ ಖಾಸಗಿ ಕಂಪನಿಗಳು ಅನುಸರಿಸುತ್ತಿರುವುದು "ಹೈರ್ ಅಂಡ್ ಫೈರ್" ಉದ್ಯೋಗ ನೀತಿ ಎಂಬುದು ತಿಳಿದಿಲ್ಲವೇನು? ತಿಳಿದೂ ತಿಳಿದೂ, ಮುಗ್ಧ ಜನರನ್ನು ಯಾಕೆ ಸರ್ಕಾರಗಳು ತಪ್ಪು ದಾರಿಗೆಳೆಯಬೇಕು? ಎಂಬುದು ಆತಂಕಕಾರಿಯಾದ ಸಂಗತಿಯಾಗಿದೆ.

ಕರ್ನಾಟಕ ಒಟ್ಟು ದುಡಿಮೆಗಾರರಲ್ಲಿ ದಿನಗೂಲಿ ಮಾಡುತ್ತಿರುವವರ ಪ್ರಮಾಣ ಶೇ.೨೬. ಆದರೆ ಹಿಂದುಳಿದ ಜಿಲ್ಲೆಗಳಲ್ಲಿ ಬೆವರು, ಕಣ್ಣೀರು ಮತ್ತು ರಕ್ತ ಬಸಿದು ದುಡಿಮೆ ಮಾಡುತ್ತಿರುವವರ ಪ್ರಮಾಣ ಶೇ.೪೦ ಬಡತನದ ಭಾರವನ್ನು ಹೆಚ್ಚಿಗೆ ಯಾವ ಪ್ರದೇಶದಲ್ಲಿನ ಜನರು ಅನುಭವಿಸುತ್ತಿದ್ದಾರೆಂಬುದು ಇದರಿಂದ ತಿಳಿಯುತ್ತದೆ. ಈ ದಿನಗೂಲಿ ದುಡಿಮೆಗಾರರಲ್ಲಿ ಸಾಮಾನ್ಯವಾಗಿ ಶೇ. ೪೦ರಿಂದ ಶೇ. ೫೦ರಷ್ಟು ಪರಿಶಿಷ್ಟರಿರುತ್ತಾರೆ. ಮತ್ತೊಂದು ಕುತೂಹಲದ ಸಂಗತಿಯೆಂದರೆ ಎಲ್ಲಾ ಉದ್ಯೋಗವು ಖಾಯಂ ಆಗಿರುತ್ತದೋ ಮತ್ತು ಎಲ್ಲಿ ಉದ್ಯೋಗ ಸಂಘಟಿತವಾಗಿರುತ್ತದೋ ಅಲ್ಲಿ ಪುರುಷರ ಪ್ರಮಾಣ ಅಧಿಕವಾಗಿರುತ್ತದೆ ಮತ್ತು ಉಳಿದಂತೆ ಮಹಿಳೆಯರ ಪ್ರಮಾಣವು ಅಧಿಕವಾಗಿರುತ್ತದೆ. ಉದಾಹರಣೆಗೆ ದಿನಗೂಲಿಗಳಲ್ಲಿ ಮಹಿಳೆಯರ ಪ್ರಮಾಣ ಶೇ.೬೦ರಷ್ಟಿದ್ದರೆ ಸಂಘಟಿತ ಕ್ಷೇತ್ರಗಳಲ್ಲಿನ ದುಡಿಮೆಗಾರರಲ್ಲಿ ಮಹಿಳೆಯರ ಪ್ರಮಾಣ ಅತ್ಯಂತ ಕಡಿಮೆಯಿರುತ್ತದೆ. ಜೀನ್ ಡ್ರೀಜ್ ಮತ್ತು ಅಮರ್ತ್ಯಸೇನ್ ತೋರಿಸಿರುವಂತೆ ದುಸ್ಥಿತಿಯು ಎಲ್ಲಿ ತೀವ್ರವಾಗಿರುತ್ತದೋ ಅಲ್ಲಿ ಲಿಂಗ ಅಸಮಾನತೆಯು ತೀವ್ರವಾಗಿರುತ್ತದೆ.[೪] ರಾಜ್ಯದ ಹಿಂದುಳಿದ ಪ್ರದೇಶದ ಜಿಲ್ಲೆಗಳಲ್ಲಿ ಲಿಂಗ ಅಸಮಾನತೆಯು ಅಧಿಕವಾಗಿದೆ.

೪.೫ ಶೈಕ್ಷಣಿಕ ದುಸ್ಥಿತಿ

ಶಾಲೆಯನ್ನು ಮಧ್ಯದಲ್ಲಿ ಬಿಡುವ ಮಕ್ಕಳನ್ನು ಅಭಿವೃದ್ಧಿಯಿಂದ ವಂಚಿತರ ದುಸ್ಥಿತಿಯ ಇನ್ನೊಂದು ರೂಪ ಎಂದು ಪರಿಗಣಿಸಬಹುದು. ಇದನ್ನು ಇನ್ನೊಂದು ರೀತಿಯಲ್ಲಿ ದುಸ್ಥಿತಿ ಮತ್ತು ಇದು ಬಡತನದ ಮತ್ತೊಂದು ಮುಖವಾಗಿದೆ. ಸರ್ವಶಿಕ್ಷಣ ಅಭಿಯಾನದ ಅಡಿಯಲ್ಲಿ ಸಾಕಷ್ಟು ಅನುಕೂಲಗಳನ್ನು ಮಕ್ಕಳಿಗೆ ಒದಗಿಸಲಾಗಿದೆ. ಶಿಕ್ಷಣ ಕ್ಷೇತ್ರದಲ್ಲಿ ಅಭೂತಪೂರ್ವವಾದ ಸುಧಾರಣೆಗಳು ನಡೆದಿವೆ. ಆದರೂ ಶಾಲೆಯನ್ನು ಮಧ್ಯದಲ್ಲಿ ಬಿಡುವ ಮಕ್ಕಳ ಒಟ್ಟು ಪ್ರಮಾಣ ಅಧಿಕವಾಗಿದೆ. ವರಮಾನಕ್ಕೆ ಭಿನ್ನವಾದ ಬೇರೆ ಸಮಸ್ಯೆ ಇಲ್ಲಿರಬಹುದು. ಇಲ್ಲಿ ನಾವು 'ಪೂರೈಕೆ ನೆಲೆಯಿಂದ' ಸಮಸ್ಯೆಯನ್ನು ನಿರ್ವಹಿಸುತ್ತಿರುವಂತೆ ಕಾಣುತ್ತದೆ. ಕಟ್ಟಡಗಳನ್ನು ಕಟ್ಟಿಸಲಾಗುತ್ತಿದೆ. ಶಿಕ್ಷಕರನ್ನು ನೇಮಿಸಲಾಗುತ್ತಿದೆ. ಪಠ್ಯ ಪುಸ್ತಕಗಳನ್ನು, ಸಮವಸ್ತ್ರ, ಮಧ್ಯಾಹ್ನದ ಬಿಸಿಯೂಟ ಮುಂತಾದವುಗಳನ್ನು ಉಚಿತವಾಗಿ ನೀಡಲಾಗುತ್ತಿದೆ. ಶುಲ್ಕದಲ್ಲಿ ವಿನಾಯಿತಿ ನೀಡಲಾಗುತ್ತಿದೆ. ಇಷ್ಟಾದರೂ ಮಕ್ಕಳು ಶಾಲೆಗೆ ಬರುತ್ತಿಲ್ಲ ಎಂಬುದು ಸಮಸ್ಯೆ. ಇಲ್ಲಿ ನಾವು ಕೇಳಿಕೊಳ್ಳಬೇಕಾಗಿರುವ ಪ್ರಶ್ನೆಯು ಬೇರೆಯಿದೆ. ಒದಗಿಸಿದ ಸವಲತ್ತುಗಳನ್ನು, ಸೌಲಭ್ಯಗಳನ್ನು ಧಾರಣೆ ಮಾಡಿಕೊಳ್ಳುವ, ದಕ್ಕಿಸಿಕೊಳ್ಳುವ ಸಾಮರ್ಥ್ಯ ಪಾಲಕರಿಗಿದೆಯೇ ಎಂಬ ಪ್ರಶ್ನೆಯು ಇಲ್ಲಿ ಮುಖ್ಯವಾಗುತ್ತದೆ. ಇಲ್ಲಿ ಅಗತ್ಯವಾಗಿರುವುದು ಜನರ ಧಾರಣಾ ಸಾಮರ್ಥ್ಯವನ್ನು ಉತ್ತಮಪಡಿಸುವ ಕ್ರಮಗಳು. ಶಿಕ್ಷಣ ಕ್ಷೇತ್ರದಲ್ಲಿ ಜನರಿಗೆ ಅಗತ್ಯವಾದ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಇದು ಸರಿ. ಪಾಲಕರು

ತಮ್ಮ ಮಕ್ಕಳನ್ನು ತಮ್ಮಿಷ್ಟಕ್ಕೆ ತಾವು ಶಿಕ್ಷಣವನ್ನು ಒದಗಿಸುವ ಸ್ವಾತಂತ್ರ್ಯವನ್ನು ಪಡೆಯುವಂತೆ ಮಾಡುವುದು ಬಹಳ ಮುಖ್ಯ. ಮಕ್ಕಳನ್ನು ಶಾಲೆಗೆ ಕಳುಹಿಸುವ ಪಾಲಕರ ಸ್ವಾತಂತ್ರ್ಯವನ್ನು ಇಲ್ಲಿ ಪರಿಗಣಿಸಬೇಕಾಗುತ್ತದೆ.[೫] ಅಂದರೆ ತಮ್ಮಿಷ್ಟಕ್ಕೆ ತಾವು ಶಿಕ್ಷಣವನ್ನು ಮಕ್ಕಳಿಗೆ ಒದಗಿಸುವುದು ಪಾಲಕರಿಗೆ ಸಾಧ್ಯವಾಗುವ ಸ್ಥಿತಿಯ ಬಗ್ಗೆ ನಾವು ಗಮನ ಹರಿಸಬೇಕು. ಅಂದರೆ ಜನರ ಏಜೆನ್ಸಿ ಫ್ರೀಡಮ್ ವಿಸ್ತೃತಗೊಳ್ಳುವಂತೆ ಮಾಡಬೇಕಾಗಿದೆ. ಏಕೆಂದರೆ ಅಭಿವೃದ್ಧಿಯು ಹಕ್ಕಿನ ಸಂಗತಿಯೇ ವಿನಾ ಹಂಗಿನ ಸಂಗತಿಯಲ್ಲ. ಇವೆಲ್ಲ ಶಿಕ್ಷಣದ ಬೇಡಿಕೆಯ ಸಂಗತಿಗಳು. ಇದು ನಮ್ಮಲ್ಲಿ ದುರ್ಬಲವಾಗಿದೆ. ಮಕ್ಕಳನ್ನು ಶಾಲೆಗೆ ಕಳುಹಿಸುವ ಸಂಗತಿಯು ಜನರ ಹಕ್ಕಾಗಬೇಕು. ಅದು ಅವರ ಒತ್ತಾಯವಾಗಬೇಕು. ಅದನ್ನು ಅವರು ಆಗ್ರಹಿಸಬೇಕು. ಮತ್ತೊಬ್ಬರ ಜುಲುಮೆಯಾಗಬಾರದು. ಅಂದರೆ ಅದು ಮೇಲಿಂದ ಅಥವಾ ಮತ್ತೊಬ್ಬರ ಒತ್ತಾಯದಿಂದ ಹೇರಲ್ಪಡುವ ಸಂಗತಿಯಾಗಬಾರದು. ಹೀಗೆ ಆಗ್ರಹ ಮಾಡುವ ಸಾಮರ್ಥ್ಯವು ಸಾಕ್ಷರತೆಯಿಂದ ಶಿಕ್ಷಣದಿಂದ ಸಾಮಾಜಿಕ ಸ್ಥಾನಮಾನದಿಂದ, ವೈಚಾರಿಕ ಮನೋಭಾವದಿಂದ ಬರುತ್ತದೆ. ಆದರೆ ಬಡ ಕುಟುಂಬಗಳು ಇಂತಹ ಸಾಮರ್ಥ್ಯದಿಂದ ವಂಚಿತವಾಗಿವೆ. ಎಲ್ಲಿಯವರೆಗೆ ಬಡಕುಟುಂಬಗಳ ಪಾಲಕರಿಗೆ ಶಿಕ್ಷಣವನ್ನು ಆಗ್ರಹ ಮಾಡಿ ಪಡೆಯುವುದು ಸಾಧ್ಯವಾಗುವುದಿಲ್ಲವೋ ಅಲ್ಲಿಯವರೆಗೆ ಶಾಲೆಯನ್ನು ಮಧ್ಯದಲ್ಲಿ ಬಿಡುವ ಮಕ್ಕಳ ಸಮಸ್ಯೆ ಹಾಗೂ ಶಾಲೆ ಸೇರದ ಮಕ್ಕಳ ಸಮಸ್ಯೆ ಮುಂದುವರಿಯುತ್ತಿರುತ್ತದೆ. ಈ ಸಂಗತಿಯ ಕಡೆ ನಾವು ಹೆಚ್ಚು ಗಮನ ನೀಡುತ್ತಿಲ್ಲ. ಅವಕಾಶಗಳನ್ನು ಒದಗಿಸಿಕೊಟ್ಟು ಬಿಟ್ಟರೆ ಸಾಕಾಗುವುದಿಲ್ಲ. ಅದರ ಜೊತೆಗೆ ಒದಗಿಸಿದ ಅವಕಾಶಗಳನ್ನು ದಕ್ಕಿಸಿಕೊಳ್ಳುವ ಸಾಮರ್ಥ್ಯವನ್ನು ಜನರಿಗೆ ನೀಡಬೇಕಾಗುತ್ತದೆ. ಇವೆರಡೂ ಏಕಕಾಲಕ್ಕೆ ನಡೆಯಬೇಕು. **(ಟಿ.ಆರ್.ಚಂದ್ರಶೇಖರ್, ೨೦೧೪)**

ರಾಯಚೂರು ಜಿಲ್ಲೆಯಲ್ಲಿನ ಶಾಲೆಯನ್ನು ಮಧ್ಯದಲ್ಲಿ ಬಿಡುವ ಮಕ್ಕಳ ಪ್ರಮಾಣವನ್ನು ವಿಶೇಷವಾಗಿ ಪರಿಗಣಿಸಬೇಕು. ಏಕೆಂದರೆ ೧ ರಿಂದ ೫ನೆಯ ತರಗತಿಗಳ ನಡುವೆ ಶಾಲೆಯನ್ನು ಮಧ್ಯದಲ್ಲಿ ಬಿಡುವ ಮಕ್ಕಳ ಪ್ರಮಾಣ ರಾಜ್ಯ ಮಟ್ಟದಲ್ಲಿ ಶೇ. ೧೧.೧೨ರಷ್ಟಿದ್ದರೆ ರಾಯಚೂರು ಜಿಲ್ಲೆಯಲ್ಲಿ ಅದು ಶೇ.೩೬.೨೫ರಷ್ಟಿದೆ. (ಕೆಳಗಿನ ಕೋಷ್ಟಕ ನೋಡಿ) ಇದು ಆತಂಕಕಾರಿಯಾದ ಸ್ಥಿತಿಯಾಗಿದೆ. ಈ ಜಿಲ್ಲೆಯ ಸಮಸ್ಯೆಯನ್ನು ವಿಶೇಷವಾಗಿ ನಿರ್ವಹಿಸುವ ಅಗತ್ಯವಿದೆ. ರಾಜ್ಯದ ಯಾವ ಜಿಲ್ಲೆಯಲ್ಲೂ ಅದು ಶೇ.೨೦ಕ್ಕಿಂತ ಅಧಿಕವಾಗಿಲ್ಲ. ಈ ದೃಷ್ಟಿಯಿಂದ ಇದು ನಮ್ಮ ಗಮನವನ್ನು ವಿಶೇಷವಾಗಿ ಸೆಳೆಯುತ್ತದೆ. ಇಡೀ ರಾಜ್ಯದಲ್ಲಿ ಶಾಲೆಯನ್ನು ಬಿಟ್ಟ ಮಕ್ಕಳಲ್ಲಿ ರಾಯಚೂರು ಜಿಲ್ಲೆಯ ಶಾಲೆಯನ್ನು ಮಧ್ಯದಲ್ಲಿ ಬಿಟ್ಟ ಮಕ್ಕಳ ಪಾಲು ಶೇ.೧೪.೫೭ ರಾಜ್ಯದ ಜನಸಂಖ್ಯೆಯಲ್ಲಿ ಈ ಜಿಲ್ಲೆಯ ಪಾಲು ೨೦೧೧ರಲ್ಲಿ ಕೇವಲ ಶೇ.೩.೧೫ ಇದು ಅಸಮತೋಲನದ ಸಮಸ್ಯೆಯನ್ನು ಎತ್ತಿ ತೋರಿಸುತ್ತದೆ.

ಕೋಷ್ಟಕ-೪.೧

ಶಾಲೆಯನ್ನು ಮಧ್ಯದಲ್ಲಿ ಬಿಡುವ ಮಕ್ಕಳ ಪ್ರಮಾಣ (೫ ರಿಂದ ೧೦ನೇ ತರಗತಿ ನಡುವೆ)
೨೦೦೪-೦೫ ರಿಂದ ೨೦೦೯-೧೦

ವಿಭಾಗವಾರು ಜಿಲ್ಲೆಗಳು	ಒಂದನೆಯ ತರಗತಿ ದಾಖಲಾತಿ ೨೦೦೫-೦೬	ಐದನೆಯ ತರಗತಿ ದಾಖಲಾತಿ ೨೦೦೯-೧೦	ಶಾಲೆಯನ್ನು ಮಧ್ಯದಲ್ಲಿ ಬಿಡುವ ಮಕ್ಕಳ ಪ್ರಮಾಣ ೨೦೦೫-೦೬ ರಿಂದ ೨೦೦೯-೧೦
ಬೆಂಗಳೂರು ವಿಭಾಗ			
ಚಿಕ್ಕಮಗಳೂರು	೨೦೬೨೨	೧೪೩೧೪	೬೩೦೮ (ಶೇ.೩೦.೫೯)
ಶಿವಮೊಗ್ಗ	೩೩೦೮೫	೨೨೮೫೩	೧೦೨೩೨ (ಶೇ.೩೦.೯೧)
ಬೆಂಗಳೂರು ನಗರ	೧೧೪೩೦೪	೯೨೫೫೯	೫೪೩೧ (ಶೇ.೪.೭೫)
ತುಮಕೂರು	೪೮೦೦೯	೪೨೫೭೮	೨೧೭೪೫ (ಶೇ.೪೫.೨೯)
ಬೆಂಗಳೂರು ಗ್ರಾಮಾಂತರ	೩೬೫೩೩	೨೭೦೫೮	೯೪೭೫ (ಶೇ.೨೫.೯೩)
ರಾಮನಗರ	–	–	–
ದಾವಣಗೆರೆ	೪೦೮೨೮	೨೫೭೬೦	೧೫೦೬೮ (ಶೇ.೩೬.೯೦)
ಚಿಕ್ಕಬಳ್ಳಾಪುರ	–	–	–
ಕೋಲಾರ	೫೫೪೯೨	೩೮೬೦೬	೧೬೮೮೬ (ಶೇ.೩೦.೪೨)
ಚಿತ್ರದುರ್ಗ	೩೩೯೬೭	೨೩೩೪೧	೧೦೬೨೬ (ಶೇ.೩೧.೨೮)
ಮೈಸೂರು ವಿಭಾಗ			
ದಕ್ಷಿಣ ಕನ್ನಡ	೩೭೪೦೬	೩೦೪೪೫	೬೯೬೧ (ಶೇ.೧೮.೬೧)
ಉಡುಪಿ	೨೦೭೭೬	೧೬೩೮೦	೪೩೯೬ (ಶೇ.೨೧.೧೬)
ಕೊಡಗು	೯೩೬೬	೭೨೭೦	೨೦೯೬ (ಶೇ.೨೨.೩೮)
ಚಾಮರಾಜನಗರ	೧೮೪೧೨	೧೨೦೫೯	೬೩೫೩ (ಶೇ. ೩೪.೫೦)
ಹಾಸನ	೩೦೦೨೫	೨೨೩೬೬	೭೬೫೯ (ಶೇ.೨೫.೫೧)
ಮೈಸೂರು	೫೦೬೦೪	೩೯೮೫೬	೧೦೭೪೮ (ಶೇ.೨೧.೨೩)
ಮಂಡ್ಯ	೩೧೬೨೧	೨೫೭೩೩	೫೮೮೮ (ಶೇ.೧೮.೬೨)
ಬೆಳಗಾವಿ ವಿಭಾಗ			
ಉತ್ತರ ಕನ್ನಡ	೨೭೭೮೬	೧೮೪೧೨	೯೩೭೪ (ಶೇ.೩೩.೭೪)
ಹಾವೇರಿ	೩೩೪೩೪	೨೧೦೩೧	೧೨೪೦೩ (ಶೇ.೩೭.೦೯)
ಧಾರವಾಡ	೩೫೭೬೦	೨೫೩೧೮	೧೦೪೪೨ (ಶೇ.೨೯.೨೦)
ಬಾಗಲಕೋಟೆ	೪೪೦೫೭	೨೩೬೪೨	೨೦೪೧೫ (ಶೇ.೪೬.೩೩)
ಬೆಳಗಾವಿ	೯೭೬೦೬	೬೨೧೫೨	೩೫೪೫೪ (ಶೇ.೩೬.೩೩)
ಗದಗ	೨೩೩೦೨	೧೪೯೬೫	೮೩೩೭ (ಶೇ. ೩೫.೭೭)
ವಿಜಾಪುರ	೫೨೯೨೮	೨೭೬೪೮	೨೫೨೮೦ (ಶೇ.೪೭.೭೬)
ಗುಲಬರ್ಗಾ ವಿಭಾಗ			
ಬಳ್ಳಾರಿ	೫೨೬೧೯	೨೪೯೩೩	೨೭೬೮೬ (ಶೇ.೫೨.೬೧)
ಕೊಪ್ಪಳ	೨೯೭೬೩	೧೪೬೧೧	೧೫೦೫೨ (ಶೇ. ೫೦.೭೪)

ಮೂಲ:- ೧. ಕರ್ನಾಟಕ ಸರ್ಕಾರ ೨೦೦೬, ಸಾರ್ವಜನಿಕ ಶಿಕ್ಷಣ ಇಲಾಖೆ, ಸಮಗ್ರ ಅಂಕಿ ಅಂಶ. ಸರ್ವ ಶಿಕ್ಷಣ ಅಭಿಯಾನ,
ಬೆಂಗಳೂರು, ಪುಟಗಳು:- ೧೨೩. ೧೩೦

೨. ಕರ್ನಾಟಕ ಸರ್ಕಾರ, ೨೦೦೯, ಸಾರ್ವಜನಿಕ ಶಿಕ್ಷಣ ಇಲಾಖೆ, ಎಜುಕೇಶನ್ ಇನ್ ಕರ್ನಾಟಕ ಸ್ಟೇಟ್, ಡಿಸ್ಟ್ರಿಕ್ಟ್
ರಿಪೋರ್ಟ್ಸ್, ೨೦೦೯-೧೦, ಸರ್ವಶಿಕ್ಷಣ ಅಭಿಯಾನ, ಬೆಂಗಳೂರು, ಪುಟಗಳು, ೧೯೦

೪.೬ ಶಾಲೆಯನ್ನು ಮಧ್ಯದಲ್ಲಿ ಬಿಡುವ ಮಕ್ಕಳ ಸಮಸ್ಯೆ

ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಿಗೆ ಸಂಬಂಧಿಸಿದಂತೆ ನಾವು ಎದುರಿಸುತ್ತಿರುವ ಸಮಸ್ಯೆಯೆಂದರೆ ಮಕ್ಕಳು ಶಾಲೆಯನ್ನು ಮಧ್ಯದಲ್ಲಿ ಬಿಡುವ ಸಂಗತಿಯಾಗಿದೆ. ಪ್ರತಿಯೊಂದು ಮಗುವಿಗೆ ೧೦ ವರ್ಷಗಳ ಶಾಲಾ ಶಿಕ್ಷಣವನ್ನು ಕಡ್ಡಾಯವಾಗಿ ಮತ್ತು ಉಚಿತವಾಗಿ ಒದಗಿಸುವ ಜವಾಬ್ದಾರಿಗೆ ಸಮಾಜವು ಬದ್ಧವಾಗಿದೆ. ಆದರೆ ೧೦ ವರ್ಷಗಳ ಶಾಲಾ ಶಿಕ್ಷಣವನ್ನು ಪಡೆಯುವ ಭಾಗ್ಯ ಅನೇಕ ಮಕ್ಕಳಿಗಿರುವುದಿಲ್ಲ. ಇದಕ್ಕೆ ಬಡತವನ್ನು ಮುಖ್ಯ ಕಾರಣವನ್ನಾಗಿ ನೀಡುತ್ತಾ ಬರಲಾಗಿದೆ. ಆದರೆ ಮಕ್ಕಳು ಶಾಲೆಯನ್ನು ಬಿಡಲು ಅನೇಕ ಕಾರಣಗಳು ಸಾಧ್ಯ. ಅದಕ್ಕೆ ಬಡತನವನ್ನು ಮಾತ್ರವೇ ಕಾರಣ ಮಾಡುವುದು ಸೂಕ್ತವೆನಿಸುವುದಿಲ್ಲ.[೬] ಅನೇಕ ಸಾಮಾಜಿಕ-ರಾಜಕೀಯ ಚಾರಿತ್ರಿಕ ಕಾರಣಗಳು ಇದರ ಹಿಂದಿರಲು ಸಾಧ್ಯ. ಮೊದಲ ತಲೆಮಾರಿನ ಅಕ್ಷರಸ್ಥ ಮಕ್ಕಳ ಸಮಸ್ಯೆ ಒಂದು ಬಗೆಯದ್ದಾದರೆ ವಲಸೆ ಹೋಗುವ ಕುಟುಂಬಗಳಲ್ಲಿನ ಮಕ್ಕಳ ಸಮಸ್ಯೆ ಇದಕ್ಕಿಂತ ಭಿನ್ನವಾಗಿದೆ. ಇತ್ತೀಚಿನ ಅಧ್ಯಯನಗಳು ತೋರಿಸಿರುವಂತೆ ಶಾಲೆಯೊಳಗಿನ ವಾತಾವರಣವೂ ಬಹಳ ಮುಖ್ಯ. ಮಕ್ಕಳಿಗೆ ಶಾಲೆ-ಪಾಠ ಆಕರ್ಷಣೀಯವಾಗುವಂತೆ ಮಾಡುವುದು, ಉಚಿತ ಊಟ, ಪಠ್ಯಪುಸ್ತಕ, ಸಮವಸ್ತ್ರ ಮುಂತಾದವುಗಳನ್ನು ಒದಗಿಸುವುದರಿಂದ ಮಕ್ಕಳು ಶಾಲೆಯನ್ನು ಮಧ್ಯದಲ್ಲಿ ಬಿಡುವುದನ್ನು ಕಡಿಮೆ ಮಾಡಬಲ್ಲವು. ಆವರ್ತನ ರೀತಿಯ ವಲಸೆಯು ವ್ಯಾಪಕವಾಗಿರುವ ಪ್ರದೇಶಗಳಲ್ಲಿ ಉದ್ಯೋಗ ಭದ್ರತೆಯ ಪಾತ್ರ ತುಂಬಾ ಮುಖ್ಯವಾಗುತ್ತದೆ. ಈ ಸಮಸ್ಯೆಯು ದಲಿತ ಮಕ್ಕಳಲ್ಲಿ ಅಧಿಕವಾಗಿರುವುದು ಅಚ್ಚರಿಯ ಸಂಗತಿಯೇನಲ್ಲ. ಹಾಗೆಯೇ ಗಂಡುಮಕ್ಕಳಿಗಿಂತ ಹೆಣ್ಣು ಮಕ್ಕಳು ಶಾಲೆಯನ್ನು ಮಧ್ಯದಲ್ಲಿ ಬಿಡುವುದು ಅಧಿಕ, ಹೀಗೆ ಶಾಲೆಯನ್ನು ಮಧ್ಯದಲ್ಲಿ ಬಿಡುವ ಮಕ್ಕಳಿಗೆ ಸಂಬಂಧಿಸಿದ ಸಮಸ್ಯೆಗೆ ಅನೇಕ ಮುಖಗಳಿವೆ. ಇದನ್ನು ತಡೆಗಟ್ಟುವ ಕಾರ್ಯಯೋಜನೆಯೂ ಕೂಡ ಬಹುರೂಪಿಯಾಗಿರಬೇಕಾಗುತ್ತದೆ. ಆದರೆ ಸರ್ಕಾರವು ಶಾಲಾ ಸೌಲಭ್ಯಗಳನ್ನು ಅಧಿಕಗೊಳಿಸುವುದು ಮತ್ತು ಅದನ್ನು ಉತ್ತಮ ಪಡಿಸುವುದರ ಮೂಲಕ ಸಮಸ್ಯೆಯನ್ನು ತಡೆಗಟ್ಟಬಹುದೆಂದು ತಿಳಿದಿರುವಂತಿದೆ. ಆದರೆ ಅವಕಾಶಗಳನ್ನು ಒಂದು ಕಡೆ ವಿಸ್ತರಿಸಿದಂತೆ ಇನ್ನೊಂದು ಕಡೆ ಅವುಗಳನ್ನು ಧಾರಣೆ ಮಾಡಿಕೊಳ್ಳಲು ಅವಶ್ಯವಾದ ಜನರ ಸಾಮರ್ಥ್ಯವನ್ನು ಉತ್ತಮ

ಪಡಿಸಬೇಕಾಗುತ್ತದೆ. ದಲಿತರು ಹಾಗೂ ಹಿಂದುಳಿದ ವರ್ಗಗಳ ವಿಷಯದಲ್ಲಿ ಇದು ಬಹಳ ಮುಖ್ಯವಾಗಿದೆ.

ಕೋಷ್ಟಕ ೪.೨ರಲ್ಲಿ ತೋರಿಸಿರುವಂತೆ ೧ ರಿಂದ ೭ನೆಯ ತರಗತಿಗೆ ಸಂಬಂಧಿಸಿದ ಶಾಲೆಯನ್ನು ಮಧ್ಯದಲ್ಲಿ ಬಿಟ್ಟ ಮಕ್ಕಳ ಪ್ರಮಾಣವನ್ನು ಜಿಲ್ಲಾವಾರು ನೀಡಲಾಗಿದೆ. ಅದನ್ನು ಈ ಕೋಷ್ಟಕದಲ್ಲಿ ಸಮಸ್ಯೆಯ ಪ್ರಮಾಣ ಹಾಗೂ ಅದರ ಪ್ರಾದೇಶಿಕ ಸ್ವರೂಪವನ್ನು ತೋರಿಸುತ್ತದೆ. ರಾಜ್ಯಮಟ್ಟದಲ್ಲಿ ಶಾಲೆಯನ್ನು ಮಧ್ಯದಲ್ಲಿ ಬಿಟ್ಟ ಮಕ್ಕಳ ಪ್ರಮಾಣ ಶೇ.೧೪.೪೭ರಷ್ಟಿದೆ. ಆದರೆ ಬೆಂಗಳೂರು ನಗರ ಜಿಲ್ಲೆ (ಶೇ.೧೫.೯೩) ದಾವಣಗೆರೆ (ಶೇ.೧೪.೪೦) ಮತ್ತು ಕೋಲಾರ (ಶೇ.೧೧.೮೮)ಗಳನ್ನು ಬಿಟ್ಟರೆ ಉಳಿದಂತೆ ದಕ್ಷಿಣ ಕರ್ನಾಟಕದಲ್ಲಿ ಇದರ ಪ್ರಮಾಣವು ಶೇ.೧೦ ಮತ್ತು ೧೦ಕ್ಕಿಂತ ಕಡಿಮೆಯಿದೆ. ಆದರೆ ರಾಜ್ಯದ ಬೆಳಗಾವಿ ವಿಭಾಗ ಹಾಗೂ ಗುಲಬರ್ಗಾ ವಿಭಾಗಗಳಲ್ಲಿ ಸಮಸ್ಯೆಯ ಪ್ರಮಾಣ ತೀವ್ರವಾಗಿದೆ. ಬೆಳಗಾವಿ ವಿಭಾಗದ ಮೂರು ಜಿಲ್ಲೆಗಳಲ್ಲಿ ಅದು ಶೇ.೨೦ಕ್ಕಿಂತ ಅಧಿಕವಿದೆ. ಈ ಸಮಸ್ಯೆಯು ಅತ್ಯಂತ ಗಂಭೀರ ಸ್ವರೂಪದಲ್ಲಿರುವುದು ಗುಲಬರ್ಗಾ ವಿಭಾಗದ ಮೂರರಲ್ಲಿ ಅದು ಶೇ.೩೦ಕ್ಕಿಂತ ಅಧಿಕವಿದೆ. ಅಭಿವೃದ್ಧಿಗೆ ಸಂಬಂಧಿಸಿದಂತೆ ಪ್ರಾದೇಶಿಕ ಅಸಮಾನತೆಯು ರಾಜ್ಯದ ಯಾವ ವಿಭಾಗದಲ್ಲಿ ಮತ್ತು ಯಾವ ಜಿಲ್ಲೆಗಳಲ್ಲಿ ಮಡುಗಟ್ಟಿಕೊಂಡಿದೆ ಎಂಬುದು ಈ ಕೋಷ್ಠಕದಲ್ಲಿ ಸ್ಪಷ್ಟವಾಗುತ್ತದೆ.

ಕೋಷ್ಟಕ–೪.೨

ಶಾಲೆಯನ್ನು ಮಧ್ಯದಲ್ಲಿ ಬಿಡುವ ಮಕ್ಕಳ ಪ್ರಮಾಣ : ೨೦೦೫

ಕ್ರಸಂ	ಜಿಲ್ಲೆಗಳು	೧ ರಿಂದ ೭ನೆಯ ತರಗತಿ (ಶೇಕಡ)		
	ಬೆಂಗಳೂರು ವಿಭಾಗ			
		ಗಂಡು	ಹೆಣ್ಣು	ಒಟ್ಟು
೧	ಬೆಂಗಳೂರು (ನಗರ)	೧೬೫೮	೧೫.೨೪	೧೫.೯೩
೨.	ದಾವಣಗೆರೆ	೧೫.೪೫	೧೩.೩೮	೧೪.೪೦
೩.	ಕೋಲಾರ	೧೨.೫೩	೧೧.೧೭	೧೧.೮೮
೪.	ಶಿವಮೊಗ್ಗ	೧೦.೪೦	೯.೩೬	೯.೯೦
೫.	ಚಿತ್ರದುರ್ಗ	೯.೫೩	೯.೭೪	೯.೬೩
೬.	ಬೆಂಗಳೂರು ಗ್ರಾಮಾಂತರ	೭.೧೦	೬೪೧	೬.೭೭
೭.	ತುಮಕೂರು	೬.೦೧	೫.೯೦	೫.೯೬
	ಮೈಸೂರು ವಿಭಾಗ			
೮.	ಮಂಡ್ಯ	೧೧.೦೭	೧೦.೨೭	೧೦.೬೯
೯.	ಚಾಮರಾಜ ನಗರ	೧೦.೪೨	೧೦.೫೧	೧೦.೪೬
೧೦.	ಮೈಸೂರು	೮.೨೯	೯.೧೦	೮.೬೮
೧೧.	ಹಾಸನ	೮.೮೩	೭೮೬	೮.೩೫
೧೨.	ಕೊಡಗು	೭.೬೧	೭೬೫	೭.೬೩
೧೩.	ಚಿಕ್ಕಮಗಳೂರು	೫.೫೪	೫.೧೯	೫.೩೬
೧೪.	ದಕ್ಷಿಣ ಕನ್ನಡ	೩.೯೫	೩.೭೦	೩.೮೩
೧೫.	ಉಡುಪಿ	೩.೨೭	೩.೫೮	೩.೪೨

ಬೆಳಗಾವಿ ವಿಭಾಗ				
೧೬	ಬಿಜಾಪುರ	೨೪.೬೬	೨೭.೨೭	೨೫.೮೧
೧೭	ಬಾಗಲಕೋಟೆ	೨೦.೨೯	೨೦.೭೫	೨೦.೫೦
೧೮.	ಗದಗ	೨೦.೩೭	೧೯.೮೫	೨೦.೧೨
೧೯.	ಹಾವೇರಿ	೧೫.೦೪	೧೪.೬೯	೧೪.೮೭
೨೦.	ಉತ್ತ ಕನ್ನಡ	೮.೮೯	೮.೫೨	೮.೭೧
೨೧.	ಬೆಳಗಾವಿ	೭.೮೪	೯.೧೨	೮.೪೪
೨೨.	ಧಾರವಾಡ	೬.೪೦	೬.೯೧	೬.೬೪
ಗುಲಬರ್ಗಾ ವಿಭಾಗ				
೨೩	ಗುಲಬರ್ಗಾ	೩೬.೫೪	೩೯.೦೭	೩೭.೬೫
೨೪.	ರಾಯಚೂರು	೩೨.೧೭	೩೭.೦೪	೩೪.೨೪
೨೫	ಕೊಪ್ಪಳ	೩೧.೨೪	೩೪.೫೬	೩೨.೭೪
೨೬	ಬೀದರ್	೨೧.೫೦	೨೦.೫೮	೨೧.೦೭
೨೭	ಬಳ್ಳಾರಿ	೧೭೯೧	೧೯.೭೬	೧೮.೭೬
ಕರ್ನಾಟಕ ರಾಜ್ಯ				
		೧೪.೫೯	೧೪.೩೪	೧೪.೪೭

ಟಿಪ್ಪಣಿ:– ಪ್ರತಿ ವಿಭಾಗದಲ್ಲೂ ಜಿಲ್ಲೆಗಳನ್ನು ಅವರೋಹಣ ಕ್ರಮದಲ್ಲಿ ಜೋಡಿಸಿದೆ

ಮೂಲ:– ಕರ್ನಾಟಕ ಸರ್ಕಾರ, ೨೦೦೫, ತಾಲ್ಲೂಕುವಾರು ಶೈಕ್ಷಣಿಕ ಅಂಕಿಅಂಶ ೨೦೦೫, ಸರ್ವಶಿಕ್ಷಣ ಅಭಿಯಾನ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು

೪.೭ ಶೈಕ್ಷಣಿಕ ಪರಿವರ್ತನಾ ಸೂಚ್ಯಂಕ

ಪ್ರಾಥಮಿಕ ಹಂತದ ಏಳನೆಯ ತರಗತಿಯಿಂದ ಪ್ರೌಢ ಹಂತದ ಎಂಟನೆಯ ತರಗತಿಗೆ ಮಕ್ಕಳು ಸಾಗುವ ಪ್ರಕ್ರಿಯೆಯನ್ನು ಇಲ್ಲಿ ಶೈಕ್ಷಣಿಕ ಪರಿವರ್ತನಾ ಪ್ರಕ್ರಿಯೆಯೆಂದು ಕರೆಯಲಾಗಿದೆ. ಶೈಕ್ಷಣಿಕ ಪ್ರಗತಿಯ ಮಾಪನದ ದೃಷ್ಟಿಯಿಂದ ಇದು ತುಂಬಾ ಮುಖ್ಯವಾದ ಸಂಗತಿಯಾಗಿದೆ. ಏಕೆಂದರೆ ಪರಿವರ್ತನಾ ಪ್ರಕ್ರಿಯೆಯನ್ನು ಶಿಕ್ಷಣದ ಸಾರ್ವತ್ರೀಕರಣ ಸೂಚಿಯನ್ನಾಗಿ ಬಳಸಬಹುದಾಗಿದೆ. ಈ ದಿಶೆಯಲ್ಲಿ ಕರ್ನಾಟಕವು ರಾಜ್ಯ ಮಟ್ಟದಲ್ಲಿ ಸಾಧಿಸಿಕೊಂಡಿರುವ ಸಾಧನೆ ನಿಜಕ್ಕೂ ಅದ್ಭುತವಾಗಿದೆ. ಕರ್ನಾಟಕ ರಾಜ್ಯ ಮಟ್ಟದಲ್ಲಿನ ಶೈಕ್ಷಣಿಕ ಪರಿವರ್ತನಾ ಸೂಚ್ಯಂಕ ೦.೮೯ ಶಿಕ್ಷಣದ ಸಾರ್ವತ್ರೀಕರಣದ ಸನಿಹ ಅದು ಸಾಗಿದೆ. ಆದರೆ ಆತಂಕಕಾರಿ ಸಂಗತಿಯೆಂದರೆ ಶಿಕ್ಷಣದ ಸಾರ್ವತ್ರೀಕರಣದ ಸ್ವರೂಪವು ರಾಜ್ಯದ್ಯಾಂತ ಏಕರೂಪವಾಗಿಲ್ಲ. ಶೈಕ್ಷಣಿಕ ಸಾರ್ವತ್ರೀಕರಣ ಸಾಧನೆಯ ದೃಷ್ಟಿಯಿಂದ ರಾಜ್ಯದ ಗುಲಬರ್ಗಾ ವಿಭಾಗವು ಬಹಳ ದೂರದಲ್ಲಿದೆ. ಬೆಳಗಾವಿಯು ಕೂಡ ಸಾಕಷ್ಟು ದೂರದಲ್ಲಿದೆ. ರಾಜ್ಯ ಮಟ್ಟದ ಹಾಗೂ ದಕ್ಷಿಣ ಕರ್ನಾಟಕ ಪ್ರದೇಶದ ಬೆಂಗಳೂರು ಮತ್ತು ಮೈಸೂರು ವಿಭಾಗಗಳ ಸಾಧನೆಯನ್ನು ಮಾತ್ರ ಗಮನದಲ್ಲಿಟ್ಟುಕೊಂಡರೆ ನಮಗೆ ರಾಜ್ಯದಲ್ಲಿನ ಶಿಕ್ಷಣ ಪ್ರಗತಿಯ ಪೂರ್ಣ ರೂಪದ ದರ್ಶನವಾಗುವುದಿಲ್ಲ. ಕೆಳಗಿನ ಕೋಷ್ಟಕದಲ್ಲಿ ತೋರಿಸಲಾಗಿದೆ.

ಕೋಷ್ಟಕ–೪.೩

ಶೈಕ್ಷಣಿಕ ಪರಿವರ್ತನಾ ಸೂಚ್ಯಂಕ: ೨೦೦೫–೦೬ ರಿಂದ ೨೦೦೭–೦೮ ವಿಭಾಗವಾರು

ಕ್ರಸಂ	ಪ್ರದೇಶ ವಿಭಾಗಗಳು	೨೦೦೫–೦೬ ೭ನೆಯ ತರಗತಿ ದಾಖಲಾತಿ	೨೦೦೬–೦೭ರಲ್ಲಿ ೮ನೆಯ ತರಗತಿ ದಾಖಲಾತಿ	ವ್ಯತ್ಯಾಸ	ಪರಿವರ್ತನಾ ಸೂಚ್ಯಂಕ
೧.	ಬೆಂಗಳೂರು ವಿಭಾಗ	೩೩೩.೯.೩ (೩೩.೫೩)	೩೨೪.೯೪೬ (೩೬.೩೦)	–೮೯೫೭ (೮.೯೦)	೦.೯೭೩
೨.	ಮೈಸೂರು ವಿಭಾಗ	೨.೧೧೫೪೯ (೨೧.೨೪)	೨.೦೬೦೦೦ (೨೩.೦೧)	–೫೫೪೯ (೫.೫೧)	೦.೯೭೪
೩.	ದಕ್ಷಿಣ ಪ್ರದೇಶ	೫೪೫೪೫೨ (೫೪.೭೭)	–೫೩೦೯೪೬ (೫೯.೩೧)	–೧೪೫೦೬ (೧೪.೪೧)	೦.೯೭೩
೪.	ಬೆಳಗಾವಿ ವಿಭಾಗ	೨೭೯೫೮೮ (೨೮.೦೮)	೨೩೧೨೧೨ (೨೫.೮೩)	–೪೮೩೭೬ (೪೮.೦೮)	೦.೮೨೭
೫.	ಗುಲ್ಬರ್ಗಾ ವಿಭಾಗ	೧೭೦೭೯೦ (೧೭.೧೫)	೧೩೩೦೪೬ (೧೪.೮೬)	–೩೭೭೪೪ (೩೭.೫೧)	೦.೭೭೯
೬.	ಉತ್ತರ ಪ್ರದೇಶ	೪೫೦೩೭೪ (೪೫.೭೩)	೩೬೪೨೫೮ (೪೦.೬೯)	–೮೬೧೨೦ (೮೫.೫೯)	೦.೮೦೯
೭.	ಕರ್ನಾಟಕ ರಾಜ್ಯ	೯೯೫೮೩೦ (೧೦೦.೦೦)	೮೯೫೨೦೪ (೧೦೦.೦೦)	–೧೦೦೬೨೬ (೧೦೦.೦೦)	೦.೮೯೯

ಟಿಪ್ಪಣಿ:– ಆವರಣದಲ್ಲಿನ ಅಂಕಿಗಳು ಒಟ್ಟು ಮೊತ್ತದ ಶೇಕಡ ಪ್ರಮಾಣವನ್ನು ತೋರಿಸುತ್ತದೆ

ಮೂಲ:– ಕರ್ನಾಟಕ ಸರ್ಕಾರ, ೨೦೦೭, ಶೈಕ್ಷಣಿಕ ಮಾಹಿತಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಸರ್ವಶಿಕ್ಷಣ ಅಭಿಯಾನ, ಬೆಂಗಳೂರು

ಈ ಪ್ರಾದೇಶಿಕ ಅಸಮಾನತೆಯನ್ನು ಬಹಳ ಗಂಭೀರವಾಗಿ ಪರಿಗಣಿಸುವ ಅಗತ್ಯವಿದೆ. ರಾಜ್ಯದಲ್ಲಿ ಜಾರಿಯಲ್ಲಿರುವ ಸರ್ವಶಿಕ್ಷಣ ಅಭಿಯಾನದ ನೇತೃತ್ವ ವಹಿಸಿರುವವರು ಸಮಸ್ಯೆಯ ಪ್ರಾದೇಶಿಕ ಸ್ವರೂಪಕ್ಕೆ ಹೆಚ್ಚಿನ ಗಮನ ನೀಡಬೇಕಾಗುತ್ತದೆ. ದುರದೃಷ್ಟದ ಸಂಗತಿಯೆಂದರೆ ಸದ್ಯ ಅಂತಹ ದೃಷ್ಟಿಕೋನ ಅಲ್ಲಿ ಕಾಣದಾಗಿದೆ. ಈಗಲೂ ಇದನ್ನು ತಹಬದಿಗೆ ತರಲು ಪ್ರಯತ್ನಿಸಬಹುದಾಗಿದೆ. ಶಿಕ್ಷಣಕ್ಕೆ ಸಂಬಂಧಿಸಿದಂತೆ ತೀವ್ರ ಪ್ರಾದೇಶಿಕ ಅಸಮಾನತೆಗಳಿವೆ. ಅವುಗಳನ್ನು ಗಮನದಲ್ಲಿಟ್ಟುಕೊಂಡು ಶಿಕ್ಷಣ ಕಾರ್ಯಕ್ರಮಗಳನ್ನು ರೂಪಿಸಬೇಕಾಗುತ್ತದೆ. ಈಗ ಸರ್ವಶಿಕ್ಷಣ ಅಭಿಯಾನವು ಪೂರ್ಣವಾಗಿ ರಾಜ್ಯ ಕೇಂದ್ರಿತ ಕಾರ್ಯಕ್ರಮವಾಗಿದೆ. ಇದನ್ನು ಸರಿಪಡಿಸುವುದು ತುಂಬಾ ಅಗತ್ಯವಾಗಿದೆ.

ಈಗಾಗಲೇ ತಿಳಿದುಬಂದಿರುವಂತೆ ಶಾಲೆ ಬಿಟ್ಟ ಮಕ್ಕಳ ಪ್ರಮಾಣವು ಹೈದ್ರಾಬಾದ್ ಕರ್ನಾಟಕ ಪ್ರದೇಶ ಜಿಲ್ಲೆಗಳಲ್ಲಿ ಅತ್ಯಧಿಕ ಮಟ್ಟದಲ್ಲಿದೆ. ಈ ವಿಭಾಗದ ಕೆಲವು ತಾಲ್ಲೂಕುಗಳಲ್ಲಿ ಸಮಸ್ಯೆಯು ಅತ್ಯಂತ ಗಂಭೀರ ಸ್ವರೂಪ ತಳೆದಿದೆ. ಇದೊಂದು ಆತಂಕಕಾರಿ ಸಂಗತಿಯಾಗಿದೆ. ಶೈಕ್ಷಣಿಕ ದುಸ್ಥಿತಿಯ ಕೂಪದಂತಿರುವ ತಾಲ್ಲೂಕುಗಳ ವಿವರವನ್ನು ಈ ಮುಂದಿನ ಕೋಷ್ಟಕದಲ್ಲಿ ನೋಡಬಹುದಾಗಿದೆ.

ಕೋಷ್ಟಕ–೪.೪

ಶೈಕ್ಷಣಿಕ ದುಸ್ಥಿತಿಯ ಮತ್ತು ಅಭಿವೃದ್ಧಿ ಮಟ್ಟ

ಕ್ರಸಂ	ತಾಲ್ಲೂಕುಗಳು	ಸಾಕ್ಷರತೆ	ಸ್ಥಾನ ೨೦೦೧–೦೨	ಸಮಗ್ರ ಸಂಯುಕ್ತ ಅಭಿವೃದ್ಧಿ ಸೂಚ್ಯಂಕ	ಶಾಲೆಯನ್ನು ಸ್ಥಾನ	ಮಧ್ಯದಲ್ಲಿ ಬಿಟ್ಟ ಮಕ್ಕಳ ಪ್ರಮಾಣ (೧೯೯೭–೦೮) (ಶೇ) ೨೦೦೫ (೧–೭ನೆಯ ತರಗತಿ)	ಸ್ಥಾನ
೧.	ಗುಲಬರ್ಗಾ	೬೭.೪೦	೧	೦.೮೯	೨	೪೧.೮೫	೯
೨.	ಸವಣೂರು	೫೯.೮೮	೨	೦.೮೭	೩	೩೫.೨೨	೨
೩.	ಗಂಗಾವತಿ	೫೩.೯೩	೩	೦.೯೩	೧	೩೫.೦೩	೧
೪.	ಸಿಂದಗಿ	೫೨.೪೮	೪	೦.೬೪	೯	೩೬.೨೨	೩
೫.	ಅಫಜಲಪುರ	೫೧.೬೭	೫	೦.೬೨	೧೦	೪೨.೯೦	೧೦
೬.	ಸಿಂಧನೂರು	೫೭.೬೬	೬	೦.೭೮	೪	೩೬.೭೫	೪
೭.	ಚಿಂಚೋಳಿ	೪೯.೩೮	೭	೦.೫೭	೧೨	೩೮.೬೫	೫
೮.	ಸೇಡಂ	೪೩.೨೩	೮	೦.೭೨	೫	೩೮.೮೨	೬
೯.	ಜೇವರ್ಗಿ	೪೪.೨೬	೯	೦.೫೭	೧೩	೪೮.೨೦	೧೧
೧೦.	ಸುರುಪುರ	೪೩.೮೪	೧೦	೦.೭೦	೬	೪೮.೩೩	೧೨
೧೧.	ಮಾನವಿ	೪೨.೭೮	೧೧	೦.೬೯	೯	೪೧.೬೯	೮
೧೨.	ದೇವದುರ್ಗ	೩೯.೫೬	೧೨	೦.೫೩	೧೪	೪೧.೪೯	೭
೧೩.	ಶಹಾಪುರ	೩೮.೫೩	೧೩	೦.೬೨	೧೧	೫೩.೬೪	೧೪
೧೪.	ಯಾದಗೀರಿ	೩೭೪೩	೧೪	೦.೬೭	೮	೪೯.೯೫	೧೩

ಟಿಪ್ಪಣಿ:– ೧. ಸಾಕ್ಷರತೆ ಪ್ರಮಾಣವನ್ನು ಅವರೋಹಣ ಕ್ರಮದಲ್ಲಿ ಜೋಡಿಸಲಾಗಿದೆ. ಅಭಿವೃದ್ಧಿ ಮಟ್ಟವನ್ನು ನಂಜುಡಪ್ಪ ಡಿ.ಎಂ ಸಮಿತಿ ವರದಿಯ ಸೂಚ್ಯಂಕದ ಆಧಾರದ ಮೇಲೆ ಸ್ಥಾನ ನಿಡಲಾಗಿದೆ. ಶಾಲೆಯನ್ನು ಮಧ್ಯದಲ್ಲಿ ಬಿಟ್ಟ ಮಕ್ಕಳ ಪ್ರಮಾಣಕ್ಕೆ ಸಂಬಂಧಿಸಿದಂತೆ, ಯಾವ ತಾಲ್ಲೂಕುಗಳ ಪ್ರಮಾಣ ಶೇ.೩೫ಕ್ಕಿಂತ ಅಧಿಕವಿದೆಯೋ ಅವುಗಳನ್ನು ಶೈಕ್ಷಣಿಕ ದುಸ್ಥಿತಿ ಕೂಪಗಳೆಂದು ಕರೆಯಲಾಗಿದೆ.

೨. ಇಲ್ಲಿ ಪಟ್ಟಿ ಮಾಡಿರುವ ೧೪ ತಾಲ್ಲೂಕುಗಳಿಗೆ ಶ್ರೇಣಿಯನ್ನು ನೀಡಲಾಗಿದೆ.

ಮೂಲ:– ಕರ್ನಾಟಕ ಸರ್ಕಾರ ೨೦೦೫, ತಾಲ್ಲೂಕುವಾರು ಶೈಕ್ಷಣಿಕ ಅಂಕಿ–ಅಂಶ, ೨೦೦೫, ಸಾರ್ವಜನಿಕ ಶಿಕ್ಷಣ ಇಲಾಖೆ, ಸರ್ವಶಿಕ್ಷಾ ಅಭಿಯಾನ, ೨೦೦೫, ಪುಟ, ಸಂಖ್ಯೆ ೩೩೯

ಸೂಚ್ಯಂಕ

ಒಟ್ಟು ೧೪ ತಾಲ್ಲೂಕುಗಳಲ್ಲಿ ಸಮಸ್ಯೆ ಗಂಭೀರ ಸ್ವರೂಪ ತಳೆದಿದೆ. ಈ ೧೪ರ ಪೈಕಿ ೮ ತಾಲ್ಲೂಕುಗಳು ಗುಲಬರ್ಗಾ ಜಿಲ್ಲೆಗೆ ಸೇರಿವೆ. ಪ್ರದೇಶವಾರು ನೋಡಿದಾಗ ಎಲ್ಲ ೧೪ ತಾಲ್ಲೂಕುಗಳು ಉತ್ತರ ಕರ್ನಾಟಕ ಪ್ರದೇಶಕ್ಕೆ ಸೇರಿವೆ. ಈ ದುಸ್ಥಿತಿಯ ಕೂಪದ ಪಟ್ಟಿಯಲ್ಲಿ ದಕ್ಷಿಣ ಕರ್ನಾಟಕ ಪ್ರದೇಶದ ಒಂದು ತಾಲ್ಲೂಕು ಇಲ್ಲ. ಒಟ್ಟು ೧೪ ತಾಲ್ಲೂಕುಗಳಲ್ಲಿ ೧೨ ಗುಲಬರ್ಗಾ ವಿಭಾಗಕ್ಕೆ ಸೇರಿದ್ದರೆ. ಎರಡು ಬೆಳಗಾವಿ ವಿಭಾಗದ ತಾಲ್ಲೂಕುಗಳಾಗಿವೆ. ಈ ೧೪ ತಾಲ್ಲೂಕುಗಳು ರಾಜ್ಯದ ಅತ್ಯಂತ ಹಿಂದುಳಿದ ತಾಲ್ಲೂಕುಗಳು ಆಗಿವೆ.[೭]

ನಂಜುಂಡಪ್ಪ ಡಿ.ಎಂ, ವರದಿಯ ಪ್ರಕಾರ ೧೪ ತಾಲ್ಲೂಕುಗಳ ಅಭಿವೃದ್ಧಿ ಸ್ಥಾನಗಳು ೧೦೦ರ ಮೇಲಿವೆ. ಗುಲಬರ್ಗಾ, ಸವಣೂರು ಮತ್ತು ಗಂಗಾವತಿ ತಾಲ್ಲೂಕುಗಳನ್ನು ಬಿಟ್ಟರೆ ಉಳಿದ ೧೧ ತಾಲ್ಲೂಕುಗಳ ಅಭಿವೃದ್ಧಿ ಸ್ಥಾನವು ೧೫೦ಕ್ಕಿಂತ ಮೇಲಿವೆ. ಆರ್ಥಿಕವಾಗಿ ಅಥವಾ ವರಮಾನದ ದೃಷ್ಟಿಯಿಂದ ಉನ್ನತ ಸ್ಥಾನವನ್ನು ಸಾಧಿಸಿಕೊಂಡ ತಾಲ್ಲೂಕುಗಳೆಲ್ಲವೂ ಶೈಕ್ಷಣಿಕವಾಗಿಯೂ ಉತ್ತಮವಾಗಿರುತ್ತವೆಂದು ಹೇಳಲು ಸಾಧ್ಯವಿಲ್ಲ. ಸುರಪುರ ತಾಲ್ಲೂಕು ಪಟ್ಟಿಯಲ್ಲಿ ೧೪ರ ಪೈಕಿ

ಅಭಿವೃದ್ಧಿಯಲ್ಲಿ ೬ನೆಯ ಸ್ಥಾನದಲ್ಲಿದೆ. ಆದರೆ ಸಾಕ್ಷರತೆಯಲ್ಲಿ ಅದರ ಸ್ಥಾನ ೧೦ ಮತ್ತು ಶಾಲೆಯನ್ನು ಮಧ್ಯದಲ್ಲಿ ಬಿಡುವ ಮಕ್ಕಳಿಗೆ ಸಂಬಂಧಿಸಿದಂತೆ ಇದರ ಸ್ಥಾನ ೧೨. ಸಿಂದಗಿಯು ಅಭಿವೃದ್ಧಿಯಲ್ಲಿ ೯ನೆಯ ಸ್ಥಾನದಲ್ಲಿದ್ದರೂ ಸಾಕ್ಷರತೆಯಲ್ಲಿ ಅದು ಉನ್ನತ ಸಾಧನೆ ಸಾಧಿಸಿಕೊಂಡಿದೆ.

ವಿವಿಧ ತರಗತಿಗಳಲ್ಲಿ ದಲಿತರ ಸ್ಥಿತಿ

ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ದಲಿತರ ಪ್ರಮಾಣ ಎಷ್ಟಿದೆಯೋ ಅದಕ್ಕಿಂತ ಹೆಚ್ಚಿನ ಪ್ರತಿನಿಧೀಕರಣವನ್ನು ೧–೧೦ನೆಯ ತರಗತಿಗಳ ದಾಖಲಾತಿಯಲ್ಲಿ ಕಾಣಬಹುದಾಗಿದೆ. ಇದನ್ನೇ ಇಲ್ಲಿ ಶಾಲಾ ದಾಖಲಾತಿಯ ದಲಿತೀಕರಣವೆಂದು ಕರೆಯಲಾಗಿದೆ. ಒಟ್ಟು ದಾಖಲಾತಿಗೆ ಸಂಬಂಧಿಸಿದಂತೆ ದಲಿತೀಕರಣ ಪ್ರಕ್ರಿಯೆ ಕಂಡುಬಂದಿದೆ. (ಟಿ.ಆರ್.ಚಂದ್ರಶೇಖರ್, ೨೦೦೯, ೬೩) ಇದನ್ನು ಕುರಿತಂತೆ ವಿಸ್ತೃತವಾದ ಅಧ್ಯಯನಗಳು ನಡೆಯಬೇಕಾದ ಅಗತ್ಯವಿದೆ.

ಕೋಷ್ಟಕ–೪.೫

ವಿವಿಧ ತರಗತಿಗಳಲ್ಲಿ ದಲಿತೀಕರಣದ ಪ್ರಮಾಣ

ಕ್ರಸಂ	ವಿವರ ವಿಭಾಗಗಳು	ಒಂದನೆಯ ತರಗತಿ	ಏಳನೆಯ ತರಗತಿ	ಹತ್ತನೆಯ ತರಗತಿ	ಒಟ್ಟು ದಾಖಲಾತಿ ೧–೧೦ನೆಯ ತರಗತಿ
೧.	ಒಟ್ಟು ದಾಖಲಾತಿ	೧೧,೫೭,೮೭೮ [೧೧.೬೫] [೧೦೦.೦೦]	೧೦,೧೫,೦೬೦ [೧೦.೨೨] [೧೦೦.೦೦]	೫,೫೭,೭೫೫ [೫.೬೧] [೧೦೦.೦೦]	೯,೯೩೬,೬೧೧ – [೧೦೦.೦೦]
೨.	ದಲಿತೇತರರ ದಾಖಲಾತಿ	೮,೩೨,೩೪೪ [೧೧.೩೬] [೭೧.೮೯]	೭,೬೧,೪೬೯ [೧೦.೩೯] [೭೫.೦೨]	೪,೪೦,೨೧೯ [೬.೦೧] [೭೮.೯೨]	೭,೩೨೯,೩೬೬ – [೭೩.೭೬]
೩.	ದಲಿತರ ದಾಖಲಾತಿ	೩,೨೫.೫೩೪ [೧೨.೪೮] [೨೮.೧೧]	೨,೫೩,೫೯೧ [೯.೭೨] [೨೪.೯೮]	೧೧,೭,೫೩೬ [೪.೫೧] [೨೧.೦೮]	೨೬,೭,೨೪೫ – [೨೬.೨೪]

ಟಿಪ್ಪಣಿ:– **ದುಂಡಗಿರುವ ಆವರಣದಲ್ಲಿರುವ ಅಂಕಿಗಳು ೧–೧೦ನೆಯ ತರಗತಿಯ ಒಟ್ಟು ದಾಖಲಾತಿಯಲ್ಲಿ ದಲಿತರು ಹಾಗೂ ದಲಿತೇತರರ ಪ್ರಮಾಣವನ್ನು ತೋರಿಸಿದರೆ ಚೌಕಾಕಾರದ ಆವರಣದಲ್ಲಿರುವ ಅಂಕಿಗಳು ಸಂಬಂಧಿಸಿದ ತರಗತಿಯ ದಾಖಲಾತಿಯಲ್ಲಿ ದಲಿತರು ಹಾಗೂ ದಲಿತೇತರರ ಪ್ರಮಾಣವನ್ನು ತೋರಿಸುತ್ತವೆ.**

ಮೂಲ:– **ಕರ್ನಾಟಕ ಸರ್ಕಾರ ೨೦೦೫, ತಾಲ್ಲೂಕುವಾರು ಶೈಕ್ಷಣಿಕ ಅಂಕಿಅಂಶ, ೨೦೦೫**

ಈ ಮೇಲಿನ ಕೋಷ್ಟಕದಿಂದ ನಮಗೆ ತುಂಬಾ ಕುತೂಹಲಕಾರಿ ಸಂಗತಿಯೊಂದನ್ನು ತೋರಿಸುತ್ತದೆ. ರಾಜ್ಯದ ೧–೧೦ನೆಯ ತರಗತಿವರೆಗಿನ ಒಟ್ಟು ದಾಖಲಾತಿಯಲ್ಲಿ ಒಂದನೆಯ ತರಗತಿಯಲ್ಲಿನ ಮಕ್ಕಳ ಪ್ರಮಾಣ ಶೇ.೧೧.೬೫ರಷ್ಟಾದರೆ ಏಳನೆಯ ತರಗತಿಯಲ್ಲಿನ ಪ್ರಮಾಣ ಶೇ.೧೦.೨೨, ಆದರೆ ಹತ್ತನೆಯ ತರಗತಿಯಲ್ಲಿನ ಪ್ರಮಾಣ ಕೇವಲ ಶೇ.೫.೬೧. ಒಟ್ಟು ದಾಖಲಾತಿಯನ್ನು ದಲಿತರು ಮತ್ತು ದಲಿತೇತರರ ದಾಖಲಾತಿಯಾಗಿ ವರ್ಗೀಕರಿಸಿ ನೋಡಿದಾಗ ನಮಗೆ ಬೇರೆ ಚಿತ್ರ ಎದುರಾಗುತ್ತದೆ. ರಾಜ್ಯದಲ್ಲಿ ೨೦೦೫ರಲ್ಲಿ ದಲಿತೇತರರ ದಾಖಲಾತಿ

೭೩.೨೯ಲಕ್ಷ ಇವರಲ್ಲಿ ಒಂದನೆಯ ತರಗತಿಯಲ್ಲಿನ ಮಕ್ಕಳ ಪ್ರಮಾಣ ಶೇ.೧೧.೩೬ ಹಾಗೂ ಏಳನೆಯ ತರಗತಿಯಲ್ಲಿನ ಮಕ್ಕಳ ಪ್ರಮಾಣ ಶೇ.೧೦.೫೯ ಪ್ರೌಢ ಶಿಕ್ಷಣದ ಕೊನೆಯ ಹಂತವಾದ ಹತ್ತನೆಯ ತರಗತಿಯಲ್ಲಿನ ಈ ಮಕ್ಕಳ ಪ್ರಮಾಣ ಶೇ.೬.೦೧ ಇರುವುದನ್ನು ತೋರಿಸಿದೆ.

ಒಟ್ಟು ದಾಖಲಾತಿ ಹಾಗೂ ದಲಿತೇತರರ ದಾಖಲಾತಿಗೆ ಭಿನ್ನವಾದ ಚಿತ್ರ ದಲಿತ ಮಕ್ಕಳ ದಾಖಲಾತಿ ಸಂಬಂಧಿಸಿದಂತೆ ಕಂಡುಬರುತ್ತದೆ. ದಲಿತರ ರಾಜ್ಯಮಟ್ಟದ ಒಟ್ಟು ದಾಖಲಾತಿ ೨೬.೦೭ಲಕ್ಷ. ಇವರಲ್ಲಿ ಒಂದನೆಯ ತರಗತಿಯಲ್ಲಿನ ದಲಿತ ಮಕ್ಕಳ ಪ್ರಮಾಣ ಶೇ.೧೨.೪೮ ಮುಂದೆ ಏಳನೆಯ ತರಗತಿಯಲ್ಲಿ ಅದರ ಪ್ರಮಾಣ ಶೇ.೯.೭೨. ಆದರೆ ಅತ್ಯಂತ ಆತಂಕಕಾರಿ ಸಂಗತಿಯೆಂದರೆ ಹತ್ತನೆಯ ತರಗತಿಯಲ್ಲಿ ದಲಿತ ಮಕ್ಕಳ ಪ್ರಮಾಣ ಕೇವಲ ಶೇ.೪.೫೧. ಆದರೆ ದಲಿತೇತರ ಮಕ್ಕಳ ದಾಖಲಾತಿ ಚಿತ್ರವು ಇದಕ್ಕಿಂತ ಭಿನ್ನವಾಗಿದೆ. ಒಟ್ಟು ೧ ರಿಂದ ೧೦ನೆಯ ತರಗತಿಗಳಲ್ಲಿರುವ ದಲಿತೇತರ ಮಕ್ಕಳ ಸಂಖ್ಯೆ ೭೩.೨೯ಲಕ್ಷ. ಇವರಲ್ಲಿ ಒಂದನೆಯ ತರಗತಿಯಲ್ಲಿರುವ ಮಕ್ಕಳ ಪ್ರಮಾಣ ಶೇ.೧೧.೩೬ ಏಳನೆಯ ತರಗತಿಯಲ್ಲಿರುವವರ ಪ್ರಮಾಣ ಶೇ.೧೦.೫೯ ಮತ್ತು ಹತ್ತನೆಯ ತರಗತಿಯಲ್ಲಿರುವವರ ಪ್ರಮಾಣ ಶೇ.೬.೦೧ ಅದೇ ರೀತಿ ಒಂದನೆಯ ತರಗತಿಯ ಒಟ್ಟು ದಾಖಲಾತಿಯಲ್ಲಿ ದಲಿತ ಮಕ್ಕಳ ಪ್ರಮಾಣ ಶೇ.೨೮.೧೧ರಷ್ಟಿದ್ದರೆ ಏಳನೆಯ ತರಗತಿಯ ಒಟ್ಟು ದಾಖಲಾತಿಯಲ್ಲಿ ಅವರ ಪ್ರಮಾಣ ೨೪.೯೮ ಆದರೆ ಹತ್ತನೆಯ ತರಗತಿಯ ಒಟ್ಟು ದಾಖಲಾತಿಯಲ್ಲಿ ದಲಿತ ಮಕ್ಕಳ ಪ್ರಮಾಣ ಕೇವಲ ಶೇ.೨೧.೦೮ ಹೀಗೆ ಉನ್ನತ ತರಗತಿಗಳಿಗೆ ಸಾಗಿದಂತೆ ದಲಿತರ ಪ್ರಮಾಣ ಕಡಿಮೆಯಾಗುವ ಪ್ರಕ್ರಿಯೆಯನ್ನು ದಲಿತೀಕರಣದ ಅವರೋಹಣ ಬೆಳವಣಿಗೆ ಎಂದು ಕರೆಯಲಾಗಿದೆ. ಇದು ಅನೂಚಾನವಾಗಿ ಹರಿದುಕೊಂಡು ಬಂದಿರುವ ಸಾಮಾಜಿಕ ಅಸಮಾನತೆಯ ಪರಿಣಾಮವಾಗಿದೆ. ಯಾವುದನ್ನು ಜೀನ್‌ಡ್ರಿಜ್ ಅಮರ್ತ್ಯಸೇನ್ ಅವರು ಅನೂಚಾನವಾಗಿ ಹರಿದುಕೊಂಡು ಬಂದಿರುವ ಅಸಮಾನತೆಯೆಂದು ಕರೆದಿದ್ದಾರೋ (೨೦೦೨:೩೪೩) ಅದನ್ನು ನಿವಾರಿಸುವ ಕಡೆಗೆ ಇಂದು ಹೆಚ್ಚಿನ ಗಮನ ನೀಡುವ ಅಗತ್ಯವಿದೆ.[೮] ಈ ಬಗೆಯ ಅಸಮಾನತೆಯನ್ನು ವಿಮಲಾರಾಯ ಚಂದ್ರನ್ ಅವರು (೨೦೦೪) "ಸಾಮಾಜಿಕ ಶ್ರೇಣೀಕರಣ"ವೆಂದು ಕರೆದಿದ್ದಾರೆ.[೯] ಪ್ರಾಥಮಿಕ ಶಿಕ್ಷಣವು ಇಂದು ಮುಖ್ಯವಾಗಿ ಎದುರಿಸಬೇಕಾದ ಸಮಸ್ಯೆಯೆಂದರೆ ಸಮಾಜದಲ್ಲಿನ ಅಂಚಿಗೆ ದೂಡಲ್ಪಟ್ಟ ಜನರನ್ನು ಒಳಗೊಳ್ಳುವುದಾಗಿದೆ. ದಲಿತೀಕರಣವು ಕೆಳಹಂತದಲ್ಲಿ ನಡೆಯುತ್ತಿದೆ. ಆದರೆ ಉನ್ನತ ಹಂತವನ್ನು ಅದಿನ್ನೂ ಪ್ರವೇಶಿಸಿಲ್ಲ. ಈ ಬಗ್ಗೆ ಪ್ರಸ್ತುತ ಅಧ್ಯಯನವು ಬೆಳಕು ಚೆಲ್ಲುತ್ತದೆ.

ಕೋಷ್ಟಕ-೪.೬

ಶಾಲೆಯನ್ನು ಮಧ್ಯದಲ್ಲಿ ಬಿಡುವ ಮಕ್ಕಳ ಪ್ರಮಾಣ : ೨೦೦೫

೧೯೯೭-೯೮ರಲ್ಲಿ ದಾಖಲಾದ ಮಕ್ಕಳು

ಕ್ರಸಂ	ಜಿಲ್ಲೆಗಳು	೧ ರಿಂದ ೭ನೆಯ ತರಗತಿ (ಶೇಕಡ)		
ಬೆಂಗಳೂರು ವಿಭಾಗ				
		ಗಂಡು	ಹೆಣ್ಣು	ಒಟ್ಟು
೧	ಬೆಂಗಳೂರು (ನಗರ)	೧೬೫೮	೧೫.೨೪	೧೫.೯೩
೨.	ದಾವಣಗೆರೆ	೧೫.೪೫	೧೩.೩೮	೧೪.೪೦
೩.	ಕೋಲಾರ	೧೨.೫೩	೧೧.೧೭	೧೧.೮೮
೪.	ಶಿವಮೊಗ್ಗ	೧೦.೪೦	೯.೩೬	೯.೯೦
೫.	ಚಿತ್ರದುರ್ಗ	೯.೫೩	೯.೭೪	೯.೬೩
೬.	ಬೆಂಗಳೂರು ಗ್ರಾಮಾಂತರ	೭.೧೦	೬೪೧	೬೭೭
೭.	ತುಮಕೂರು	೬.೦೧	೫.೯೦	೫.೯೬
ಮೈಸೂರು ವಿಭಾಗ				
೮.	ಮಂಡ್ಯ	೧೧.೦೭	೧೦.೨೭	೧೦.೬೯
೯.	ಚಾಮರಾಜ ನಗರ	೧೦.೪೨	೧೦.೫೧	೧೦.೪೬
೧೦.	ಮೈಸೂರು	೮.೨೯	೯.೧೦	೮.೬೮
೧೧.	ಹಾಸನ	೮.೮೩	೭೮೬	೮.೩೫
೧೨.	ಕೊಡಗು	೭.೬೧	೭೬೫	೭.೬೩
೧೩.	ಚಿಕ್ಕಮಗಳೂರು	೫.೫೪	೫.೧೯	೫.೩೬
೧೪.	ದಕ್ಷಿಣ ಕನ್ನಡ	೩.೯೫	೩.೭೦	೩.೮೩
೧೫.	ಉಡುಪಿ	೩.೨೭	೩.೫೮	೩.೪೨
ಬೆಳಗಾವಿ ವಿಭಾಗ				
೧೬	ಬಿಜಾಪುರ	೨೪.೬೬	೨೭೨೭	೨೫.೮೧
೧೭	ಬಾಗಲಕೋಟೆ	೨೦.೨೯	೨೦.೭೫	೨೦.೫೦
೧೮.	ಗದಗ	೨೦.೩೭	೧೯.೮೫	೨೦.೧೨
೧೯.	ಹಾವೇರಿ	೧೫.೦೪	೧೪.೬೯	೧೪.೮೭
೨೦.	ಉತ್ತರ ಕನ್ನಡ	೮.೮೯	೮.೫೨	೮.೭೧
೨೧.	ಬೆಳಗಾವಿ	೭.೮೪	೯.೧೨	೮.೪೪
೨೨.	ಧಾರವಾಡ	೬.೪೦	೬೯೧	೬೬೪
ಗುಲಬರ್ಗಾ ವಿಭಾಗ				
೨೩.	ಗುಲಬರ್ಗಾ	೩೬.೫೪	೩೯.೦೭	೩೭.೬೫
೨೪.	ರಾಯಚೂರು	೩೨.೧೭	೩೭೦೪	೩೪.೨೪
೨೫.	ಕೊಪ್ಪಳ	೩೧.೨೪	೩೪.೫೬	೩೨.೭೪
೨೬.	ಬೀದರ್	೨೧.೫೦	೨೦.೫೮	೨೧.೦೭
೨೭.	ಬಳ್ಳಾರಿ	೧೭೯೧	೧೯.೭೬	೧೮.೭೬
ಕರ್ನಾಟಕ ರಾಜ್ಯ				
		೧೪.೫೯	೧೪.೩೪	೧೪.೪೭

ಟಿಪ್ಪಣಿ:- ಪ್ರತಿ ವಿಭಾಗದಲ್ಲೂ ಜಿಲ್ಲೆಗಳನ್ನು ಅವರೋಹಣ ಕ್ರಮದಲ್ಲಿ ಜೋಡಿಸಿದೆ

ಮೂಲ:- ಕರ್ನಾಟಕ ಸರ್ಕಾರ, ೨೦೦೫, ತಾಲ್ಲೂಕುವಾರು ಶೈಕ್ಷಣಿಕ ಅಂಕಿ ಅಂಶ ೨೦೦೫, ಸರ್ವಶಿಕ್ಷಣ ಅಭಿಯಾನ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು

೪.೮ ಲಿಂಗ ಸಂಬಂಧಿ ಆಯಾಮ

ಅತ್ಯಂತ ಕುತೂಹಲದ ಸಂಗತಿಯೆಂದರೆ ಶಾಲೆ ಬಿಟ್ಟ ಮಕ್ಕಳ ಲಿಂಗ ಸ್ವರೂಪವನ್ನು ಪರಿಶೀಲಿಸಿದಾಗ ಹೆಣ್ಣು ಮಕ್ಕಳ ಪ್ರಮಾಣವು ಗಂಡು ಮಕ್ಕಳ ಪ್ರಮಾಣಕ್ಕೆ ಸರಿಸುಮಾರು ಸಮನಾಗಿರುವುದು ಕಂಡುಬರುತ್ತದೆ. ರಾಜ್ಯಮಟ್ಟದಲ್ಲಿ ಶಾಲೆಯನ್ನು ಮಧ್ಯದಲ್ಲಿ ಬಿಟ್ಟ ಗಂಡುಮಕ್ಕಳ ಪ್ರಮಾಣ ಶೇ.೧೪.೫೯ ಮತ್ತು ಹೆಣ್ಣುಮಕ್ಕಳ ಪ್ರಮಾಣ ಶೇ.೧೪.೩೪ ಇದೇ ಸ್ಥಿತಿ ಸರಿಸುಮಾರು ಎಲ್ಲ ಜಿಲ್ಲೆಗಳಲ್ಲೂ ಕಂಡುಬರುತ್ತದೆ.

ಪ್ರಚಲಿತದಲ್ಲಿರುವ ಸಂಗತಿಯೆಂದರೆ ಶಾಲೆಯನ್ನು ಮಧ್ಯದಲ್ಲಿ ಬಿಡುವ ಮಕ್ಕಳಲ್ಲಿ ಹೆಣ್ಣು ಮಕ್ಕಳ ಪ್ರಮಾಣ ಅಧಿಕ ಎಂಬುದಾಗಿದೆ. ಈ ನಂಬಿಕೆ ವ್ಯಾಪಕವಾಗಿ ಹರಡಿದೆ. ಇದು ಎಲ್ಲ ಸಂದರ್ಭದಲ್ಲೂ ನಿಜವಾಗಿರಲು ಸಾಧ್ಯವಿಲ್ಲ. ಇಂದು ಪರಿಸ್ಥಿತಿ ಬದಲಾಗುತ್ತಿದೆ. ಮೇಲಿನ ಕೋಷ್ಟಕದಲ್ಲಿ ಶಾಲೆ ಬಿಟ್ಟ ಮಕ್ಕಳ ಪ್ರಮಾಣವನ್ನು ಹೆಣ್ಣು ಮತ್ತು ಗಂಡು ಮಕ್ಕಳಿಗೆ ಸಂಬಂಧಿಸಿದಂತೆ ಜಿಲ್ಲಾವಾರು ನೀಡಲಾಗಿದೆ. ಇಲ್ಲಿ ಹೆಣ್ಣು-ಗಂಡುಗಳ ನಡುವೆ ತೀವ್ರ ಅಂತರಗಳೇನಿಲ್ಲ. ಇದೇ ಮಾತನ್ನು ಪ್ರೌಢ ಹಾಗೂ ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದಂತೆ ಹೇಳಲು ಸಾಧ್ಯವಿಲ್ಲ. ಇದಕ್ಕೆ ಸಂಬಂಧಿಸಿದಂತೆ ನಮಗೆ ಮಾಹಿತಿ ಇಲ್ಲದಿರುವುದರಿಂದ ಅದನ್ನು ಕುರಿತಂತೆ ಇಲ್ಲಿ ಚರ್ಚಿಸಿಲ್ಲ. ಆದರೆ ಉನ್ನತ ಹಂತಕ್ಕೆ ಸಾಗಿದಂತೆ ಹೆಣ್ಣುಮಕ್ಕಳ ಪ್ರಮಾಣವು ಕಡಿಮೆಯಾಗುವುದನ್ನು ಇನ್ನೊಂದು ರೂಪದಲ್ಲಿ ತೋರಿಸಬಹುದು. ಹಿಂದಿನ ಕೋಷ್ಟಕದಲ್ಲಿ ೧ನೆಯ ತರಗತಿಯಿಂದ ೭ನೆಯ ತರಗತಿ ಹಾಗೂ ೧೦ನೆಯ ತರಗತಿಗಳಲ್ಲಿ ಹೆಣ್ಣುಮಕ್ಕಳ ಪ್ರಮಾಣವನ್ನು ವಿಭಾಗವಾರು ತೋರಿಸಿದೆ. ಲಿಂಗ ಸಂಬಂಧಿ ತಾರತಮ್ಯದ ಸೂಕ್ಷ್ಮ ಎಳೆಗಳನ್ನು ಇಲ್ಲಿ ಗುರುತಿಸಬಹುದಾಗಿದೆ.

ಶಾಲೆಯನ್ನು ಮಧ್ಯದಲ್ಲಿ ಬಿಡುವ ಹೆಣ್ಣು ಮಕ್ಕಳ ಪ್ರಮಾಣಕ್ಕೂ ಮತ್ತು ಕಡಿಮೆ ವಯಸ್ಸಿಗೆ ಹೆಣ್ಣು ಮಕ್ಕಳ ಮದುವೆ ಮಾಡುವ ಕ್ರಮಕ್ಕೂ ನಡುವೆ ಸಂಬಂಧವಿದೆ. ಶಿಕ್ಷಣವು ನಮ್ಮ ಅನೇಕ ಸಮಸ್ಯೆಗಳಿಗೆ ಪರಿಹಾರವಾಗಿದೆ. ಆದರೆ ಅದರ ಬಗ್ಗೆ ನಾವು ನೀಡಬೇಕಾದಷ್ಟು ಗಮನವನ್ನು ಮಾತ್ರ ಆಧ್ಯತೆಯನ್ನು ನೀಡುತ್ತಿಲ್ಲ. ಈ ವಿಕೃತಿಯನ್ನು ಸರಿಪಡಿಸುವ ಅಗತ್ಯವಿದೆ. ರಾಜ್ಯದ ಹಿಂದುಳಿದ ಜಿಲ್ಲೆಗಳಲ್ಲಿ ಬಾಲ್ಯ ವಿವಾಹಗಳು ಹೆಚ್ಚಿನ ಪ್ರಮಾಣದಲ್ಲಿ ನಡೆಯುತ್ತಿರುವುದನ್ನು ಅನೇಕ ಅಧ್ಯಯನಗಳು ತೋರಿಸಿಕೊಟ್ಟಿವೆ. ಮಹಿಳಾ ಸಾಕ್ಷರತೆ ಮತ್ತು ಹೆಣ್ಣು ಮಕ್ಕಳ ಮದುವೆ ವಯಸ್ಸಿನ ನಡುವೆ ಸಂಬಂಧವಿದೆ. ಎಲ್ಲಿ ಮಹಿಳಾ ಸಾಕ್ಷರತೆಯು ಕೆಳಮಟ್ಟದಲ್ಲಿದೆಯೋ ಅಲ್ಲಿ ಕಡಿಮೆ ವಯಸ್ಸಿಗೆ ಮದುವೆಯಾಗುವ ಹೆಣ್ಣು ಮಕ್ಕಳ ಪ್ರಮಾಣ ಅಧಿಕವಿದೆ.

ಕೋಷ್ಟಕ–೪.೭

ಮಹಿಳೆಯರ ಸಾಕ್ಷರತಾ ಪ್ರಮಾಣ : ೨೦೧೧ ಮತ್ತು ಹದಿನೆಂಟು ವರ್ಷಕ್ಕೆ ಮೊದಲೇ ಮದುವೆಯಾಗುವ ಹೆಣ್ಣು ಮಕ್ಕಳ ಪ್ರಮಾಣ: ೨೦೦೭–೦೮

ಕ್ರಸಂ	ವಿಭಾಗವಾರು ಜಿಲ್ಲೆಗಳು	ಮಹಿಳೆಯರ ಸಾಕ್ಷರತಾ ಪ್ರಮಾಣ: ೨೦೧೧	ಹದಿನೆಂಟು ವಯಸ್ಸಿಗೆ ಮೊದಲು ಮದುವೆಯಾಗುವ ಹೆಣ್ಣು ಮಕ್ಕಳ ಪ್ರಮಾಣ: ೨೦೦೭–೦೮
	ಬೆಂಗಳೂರು ವಿಭಾಗ		
೧.	ಚಿಕ್ಕಮಗಳೂರು	ಶೇ. ೭೩.೧೬	ಶೇ. ೩.೫೦
೨.	ಶಿವಮೊಗ್ಗ	ಶೇ. ೭೪.೮೪	ಶೇ. ೮.೯೦
೩.	ಬೆಂಗಳೂರು ನಗರ	ಶೇ. ೮೪.೦೧	ಶೇ. ೧೦.೦೦
೪.	ತುಮಕೂರು	ಶೇ. ೬೭.೩೮	ಶೇ. ೧೮.೪೦
೫.	ಬೆಂಗಳೂರು ಗ್ರಾಮಾಂತರ	ಶೇ. ೭೦.೬೩	ಶೇ. ೧೮.೪೦
೬.	ರಾಮನಗರ	ಶೇ. ೬೧.೫೦	–
೭.	ದಾವಣಗೆರೆ	ಶೇ. ೬೮.೯೧	–
೮.	ಚಿಕ್ಕಬಳ್ಳಾಪುರ	ಶೇ. ೬೧.೫೫	–
೯.	ಕೋಲಾರ	ಶೇ. ೬೮.೮೪	ಶೇ. ೧೮.೪೦
೧೦.	ಚಿತ್ರದುರ್ಗ	ಶೇ. ೬೫.೮೮	ಶೇ. ೨೭.೬೦
	ಮೈಸೂರು ವಿಭಾಗ		
೧೧.	ದಕ್ಷಿಣ ಕನ್ನಡ	ಶೇ. ೮೪.೧೩	ಶೇ. ೫.೭೦
೧೨.	ಉಡುಪಿ	ಶೇ. ೮೧.೫೮	ಶೇ. ೨.೭೦
೧೩.	ಕೊಡಗು	ಶೇ. ೭೮.೧೪	ಶೇ. ೭.೧೦
೧೪.	ಚಾಮರಾಜನಗರ	ಶೇ. ೫೪.೯೨	ಶೇ. ೨೪.೪೦
೧೫.	ಹಾಸನ	ಶೇ. ೬೮.೬೦	ಶೇ. ೩.೨೦
೧೬	ಮೈಸೂರು	ಶೇ. ೬೭.೦೬	ಶೇ. ೧೪.೩೦
೧೭	ಮಂಡ್ಯ	ಶೇ. ೬೨.೫೪	ಶೇ. ೨೧.೭೦
	ಬೆಳಗಾವಿ ವಿಭಾಗ		
೧೮.	ಉತ್ತರ ಕನ್ನಡ	ಶೇ. ೭೮.೩೯	ಶೇ. ೧.೬೦
೧೯.	ಹಾವೇರಿ	ಶೇ. ೭೦.೪೬	ಶೇ. ೧೯.೭೦
೨೦.	ಧಾರವಾಡ	ಶೇ. ೭೩.೪೬	ಶೇ. ೨೧.೩೦
೨೧.	ಬಾಗಲಕೋಟೆ	ಶೇ. ೫೮.೪೦	ಶೇ. ೪೭೫೦
೨೨.	ಬೆಳಗಾವಿ	ಶೇ. ೬೪.೫೮	ಶೇ. ೪೪.೨೦
೨೩.	ಗದಗ	ಶೇ. ೬೫.೪೪	ಶೇ. ೩೨.೪೦
೨೪.	ವಿಜಾಪುರ	ಶೇ. ೫೬.೭೨	ಶೇ. ೪೩.೧೦
	ಗುಲಬರ್ಗಾ ವಿಭಾಗ		
೨೫.	ಬಳ್ಳಾರಿ	ಶೇ. ೫೮.೦೯	ಶೇ. ೩೬.೩೦
೨೬.	ಕೊಪ್ಪಳ	ಶೇ. ೫೭.೫೫	ಶೇ. ೪೪.೭೦
೨೭.	ರಾಯಚೂರು	ಶೇ. ೪೮.೭೩	ಶೇ. ೩೮.೭೦
೨೮.	ಬೀದರ್	ಶೇ. ೬೧.೫೫	ಶೇ. ೨೭.೪೦
೨೯.	ಗುಲಬರ್ಗಾ	ಶೇ. ೫೫.೦೯	ಶೇ. ೪೧.೬೦
೩೦.	ಯಾದಗಿರಿ	ಶೇ. ೪೧.೩೮	–
	ಕರ್ನಾಟಕ ರಾಜ್ಯ	ಶೇ. ೬೮.೦೮	ಶೇ. ೨೪.೯೦

ಮೂಲ:–೧. ಸೆನ್ಸ್ ಆಫ್ ಇಂಡಿಯಾ ೨೦೧೧, ಪ್ರೈಮರಿ ಸೆನ್ಸ್ ಅಬ್‌ಸ್ಟ್ರಾಕ್ಟ್, ಡೇಟ್ ಹೈಲೈಟ್, ಕರ್ನಾಟಕ ಸಿರೀಸ್ ೨೦, ಡೈರೆಕ್ಟರೇಟ್ ಆಫ್ ಸೆನ್ಸ್ ಆಪರೇಶನ್ಸ್, ಕರ್ನಾಟಕ, ೨೦೧೧

೨. ಭಾರತ ಸರ್ಕಾರ: ಮಿನಿಸ್ಟ್ರೀ ಆಫ್ ಫ್ಯಾಮಿಲಿ ವೆಲ್ಫೇರ್: ಡಿಸ್ಟ್ರಿಕ್ಟ್ ಲೆವೆಲ್ ಹೌಸ್ಹೋಲ್ಡ್ ಆಂಡ್ ಫೆಸಿಲಿಟಿ ಸರ್ವೆ ಅಂಡರ್ ರಿಪ್ರೊಡಕ್ಟಿವ್ ಅಂಡ್ ಚೈಲ್ಡ್ ಹೇಲ್ಪ್ ಪ್ರಾಜೆಕ್ಟ್ : ೨೦೦೭–೦೮

ಬಾಗಲಕೋಟೆ, ಬೆಳಗಾವಿ, ಬಳ್ಳಾರಿ, ಬಿಜಾಪುರ, ಗುಲಬರ್ಗಾ, ಕೊಪ್ಪಳ ಮತ್ತು ರಾಯಚೂರು ಈ ಏಳು ಜಿಲ್ಲೆಗಳಲ್ಲಿ ಮಹಿಳೆಯರ ಸಾಕ್ಷರತಾ ಪ್ರಮಾಣ ಶೇ. ೬೦ಕ್ಕಿಂತ ಕಡಿಮೆಯಿದೆ ಮತ್ತು ಈ ಜಿಲ್ಲೆಗಳಲ್ಲಿ ಹದಿನೆಂಟು ವಯಸ್ಸಿಗೆ ಮೊದಲೆ ಮದುವೆಯಾಗುವ ಹೆಣ್ಣು ಮಕ್ಕಳ ಪ್ರಮಾಣ ಶೇ. ೩೫ಕ್ಕಿಂತ ಅಧಿಕವಿದೆ.

ಶಿಕ್ಷಣದ ದುಸ್ಥಿತಿ, ಶಾಲೆಯನ್ನು ಮಧ್ಯದಲ್ಲಿ ಬಿಡುವ ಮಕ್ಕಳ ಪ್ರಮಾಣವನ್ನು, ದಲಿತರ ಸ್ಥಿತಿಗತಿಯನ್ನು, ವರಮಾನದ ಬಗ್ಗೆ ವಿವರವಾಗಿ ಚರ್ಚಿಸಲಾಗಿದೆ. ಈ ಜಿಲ್ಲೆಯ ಅಭಿವೃದ್ಧಿಯನ್ನು ಸಾಧಿಸಿಕೊಳ್ಳಬೇಕಾದರೆ ಈ ಎಲ್ಲಾ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಿ ಪರಿಹಾರ ನೀಡುವಂತ ಪ್ರಯತ್ನ ಮಾಡಬೇಕಾಗಿದೆ.

ಕೊನೆಯ ಟಿಪ್ಪಣಿ

೧. ಚಂದ್ರಶೇಖರ್ ಟಿ.ಆರ್, ೨೦೦೩, ಕರ್ನಾಟಕ ಅಭಿವೃದ್ಧಿ ಸಾಮಾಜಿಕ ನೆಲೆಗಳು, ಸಿ.ವಿ.ಜಿ, ಪಬ್ಲಿಕೇಷನ್, ಬೆಂಗಳೂರು.

೨. ಅಮರ್ತ್ಯಸೇನ್, ೧೯೯೯, ಡೆವಲಪಮೆಂಟ್ ಆಫ್ ಫ್ರೀಡಮ್, ಆಕ್ಸ್‌ಫರ್ಡ್ ಯುನಿವರ್ಸಿಟಿ, ಪುಟಸಂಖ್ಯೆ–೧೨೬–೧೩೬.

೩. ಚಂದ್ರಶೇಖರ್ ಟಿ.ಆರ್, ೨೦೦೯, ಜನರನ್ನು ಒಳಗೊಳ್ಳುವ ಅಭಿವೃದ್ಧಿ, ಹೈದರಾಬಾದ್ ಕರ್ನಾಟಕ ಪ್ರದೇಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೪. ಜೀನ್ ಡ್ರೀಜ್ ಮತ್ತು ಅಮರ್ತ್ಯಸೇನ್, ೧೯೯೫, ಇಂಡಿಯಾ ಎಕೊನೊಮಿಕ್ ಡೆವಲಪ್‌ಮೆಂಟ್ ಆ್ಯಂಡ್ ಸೋಷಿಯಲ್ ಅಪರ್ಾಚುನಿಟಿ, ಆಕ್ಸ್‌ಫರ್ಡ್ ಯುನಿವರ್ಸಿಟಿ, ಪುಟ–೧೬೬–೧೮೦.

೫. ಚಂದ್ರಶೇಖರ್ ಟಿ.ಆರ್, ೨೦೦೮, ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣ ಸ್ಥಿತಿಗತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, (ಪ್ರಾಥಮಿಕ ಶಿಕ್ಷಣದಿಂದ ಮಕ್ಕಳು ಅರ್ಧಕ್ಕೆ ಶಾಲೆ ಬಿಡುತ್ತಾರೆ ಅನ್ನುವುದನ್ನು ಇಲ್ಲಿ ನೋಡಬಹುದಾಗಿದೆ).

೬. ನಂಜುಂಡಪ್ಪ ಡಿ.ಎಂ, ೨೦೦೨, ಪ್ರಾದೇಶಿಕ ಅಸಮಾನತೆ ಉನ್ನಾತಾಧಿಕಾರ ಸಮಿತಿ ವರದಿ ೨೦೦೨, ಕರ್ನಾಟಕ ಸರ್ಕಾರ ಬೆಂಗಳೂರು. (ಹೆಚ್ಚಿನ ಮಾಹಿತಿಗಾಗಿ ಈ ವರದಿಯನ್ನು ನೋಡಬಹುದು).

೭. ಜೀನ್‌ಟ್ರಜ್ ಮತ್ತು ಅಮರ್ತ್ಯಸೇನ್, ೨೦೦೨, ಇಂಡಿಯಾ, ಡೆವಲಪ್‌ಮೆಂಟ್ ಆಂಡ್ ಪಾರ್ಟಿಸಿಪೇಷನ್ ಆಕ್ಸ್‌ಫರ್ಡ್ ಯುನಿವರ್ಸಿಟಿ, ನ್ಯೂ ದೆಹಲಿ, ಪುಟ–೩೪೩.

೮. ಹಕ್ ಮೆಹಬೂಬ್ ಎಲ್, ೧೯೯೫, ರಿಫ್ಲೆಷನ್ ಆನ್ ಹ್ಯೂಮನ್ ಡೆವಲಪ್‌ಮೆಂಟ್, ಆಕ್ಸ್‌ಫರ್ಡ್ ಯುನಿವರ್ಸಿಟಿ, ನ್ಯೂ ದೆಹಲಿ.

೯. ಕೃಷ್ಣಕುಮಾರ್, ೨೦೧೦, ಕಲ್ಚರಲ್ ಸ್ಟೇಟ್ ಆ್ಯಂಡ್ ಗರ್ಲ್: ಆ್ಯನ್ ಎಜುಕೇಷನ್ ಪ್ರಾಸ್‌ಪೆಕ್ಟಿವ್, ಎಕೊನೊಮಿಕ್ ಆ್ಯಂಡ್ ಪಾಲಿಟಿಕಲ್ ವಿಕ್ಲಿ, ಏಪ್ರಿಲ್, ೨೦೧೦.

೧೦. ಕರ್ನಾಟಕ ಸರ್ಕಾರ, ೨೦೦೬, ಕರ್ನಾಟಕ ಮಾನವ ಅಭಿವೃದ್ಧಿ ವರದಿ–೨೦೦೫, ಕರ್ನಾಟಕ ಸರ್ಕಾರ, ಬೆಂಗಳೂರು.

೧೧. ಚಂದ್ರಶೇಖರ್ ಟಿ.ಆರ್, ೨೦೦೭, ಕರ್ನಾಟಕ ಅಭಿವೃದ್ಧಿ ಆಕೃತಿ, ಪಲ್ಲವ ಪ್ರಕಾಶನ, ಚನ್ನಪಟ್ಟಣ.

೧೨. ಚಂದ್ರಪೂಜಾರಿ ಎಂ, ೨೦೧೦, ಕರ್ನಾಟಕ ಪಂಚವಾರ್ಷಿಕ ಯೋಜನೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೩. ಪ್ರಶಾಂತ್ ಎಚ್.ಡಿ, ೨೦೦೫, ಈಶಾನ್ಯ ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ಸಮಾಜ, ಪ್ರಸಾರಾಂಗ, ಕನ್ನಡ ವಿಶ್ಯವಿದ್ಯಾಲಯ, ಹಂಪಿ.

ಅಧ್ಯಾಯ–ಐದು

ಸಾಮಾಜಿಕ ರಚನೆ ಮತ್ತು ರಾಜಕೀಯ ಸಂಗತಿಗಳ ಪಾತ್ರ

ಅಧ್ಯಾಯ–ಐದು

ಸಾಮಾಜಿಕ ರಚನೆ ಮತ್ತು ರಾಜಕೀಯ ಸಂಗತಿಗಳ ಪಾತ್ರ

೫.೧ ಪ್ರಸ್ತಾವನೆ

ಅಭಿವೃದ್ಧಿ ಅನ್ನುವಂಹದ್ದು ಸಾಮಾಜಿಕ ಏಣಿ ಶ್ರೇಣಿಯಿಂದ ಕೂಡಿರುವಂತಹದ್ದಾಗಿದೆ. ಚಾರಿತ್ರಿಕವಾಗಿ ಗಮನಿಸಿದಾಗ ಆರ್ಥಿಕ ಅಭಿವೃದ್ಧಿಯ ಮೇಲ್‌ಸ್ತರದ ವರ್ಗದಲ್ಲಿ ಕೇಂದ್ರೀಕೃತವಾಗಿರುವುದು ಕಂಡುಬರುತ್ತದೆ. ಅದು ಸಮಾಜದ ಅಂಚಿನಲ್ಲಿರುವ ದುರ್ಬಲರಿಗೆ ಮೇಲಿನಿಂದ ಹರಿದು ಬರುತ್ತದೆ ಎಂಬ ವಾದವು ಇಂದು ಸುಳ್ಳಾಗಿದೆ. ನಮ್ಮ ಸಮಾಜ, ಆರ್ಥಿಕತೆ ಮತ್ತು ರಾಜ್ಯ ರಾಜಕಾರಣಗಳಲ್ಲಿ ಯಾವುದನ್ನು ಪ್ರಧಾನಧಾರೆ ಯಜಮಾನವಾದಿ ಅಭಿವೃದ್ಧಿ ಪ್ರಣಾಳಿಕೆಯೆಂದು ಕರೆಯುತ್ತಾ ಬರಲಾಗಿದೆಯೋ ಅದು ಸಮಾಜದ ಪ್ರತಿಷ್ಠಿತ ವರ್ಗದ ಹಿತಾಸಕ್ತಿಗಳನ್ನು ಮಾತ್ರ ಪೋಷಿಸಬಲ್ಲದಾಗಿದೆ. ಈ ಧಾರೆಯಲ್ಲಿರುವವರನ್ನು ಮಾತ್ರ ಅದು ಒಳಗೊಳ್ಳುತ್ತದೆ. ಈ ಬಗೆಯ ಪ್ರಣಾಳಿಕೆಗೆ ಸಮಾಜದಲ್ಲಿ ಅಧೀನ ವರ್ಗವನ್ನು ಹುಟ್ಟು ಹಾಕುವುದು ಅನಿವಾರ್ಯವಾಗುತ್ತದೆ. ಅಧೀನವರ್ಗವನ್ನು ಹುಟ್ಟು ಹಾಕದೆ, ಸಮಾಜದಲ್ಲಿ ದುರ್ಬಲರನ್ನು ಅಂಚಿಗೆ ತಳ್ಳದೆ ಅವರನ್ನು ಪರಿಶಿಷ್ಟರನ್ನಾಗಿ ಮಾಡಿಕೊಳ್ಳದೆ ಪ್ರತಿಷ್ಠಿತ ಪ್ರಧಾನ ಶಿಷ್ಟ ವರ್ಗವು ತನ್ನ ಅಭಿವೃದ್ಧಿಯನ್ನು ಸಾಧಿಸಿಕೊಳ್ಳುವುದು ಸಾಧ್ಯವಿಲ್ಲ. ಬಂಡವಾಳಶಾಹಿ ಅಭಿವೃದ್ಧಿ ಮೀಮಾಂಸೆಗೆ ಇದು ಎಷ್ಟು ಸತ್ಯವೋ ಅಷ್ಟೇ ಹಿಂದೂ ಅಭಿವೃದ್ಧಿ ಪ್ರಣಾಳಿಕೆಗೂ ಸತ್ಯ ಶಿಷ್ಟ ಪರಿಶಿಷ್ಟ ಎಂಬ ಶ್ರೇಣಿಕೃತ ವರ್ಗೀಕರಣವನ್ನು ಅಂತರ್ಗತ ಮಾಡಿಕೊಂಡಿರುವ ಯಜಮಾನವಾದಿ ಅಭಿವೃದ್ಧಿ ಮೀಮಾಂಸೆಯಲ್ಲಿ ಅನೂಚಾನವಾಗಿ ಹರಿದುಕೊಂಡು ಬರುತ್ತಿರುವ ಸಾಮಾಜಿಕ ಅಸಮಾನತೆಗಳನ್ನು ಪೋಷಿಸಬಲ್ಲಂತಹ ಕಾರ್ಯತಂತ್ರವಿದೆ. ಅವುಗಳನ್ನು ತೊಡೆದುಹಾಕುವಂತಹ ವ್ಯವಸ್ಥೆ ಅಲ್ಲಿ ಇಲ್ಲ. ಈ ಬಗೆಯ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಪ್ರತಿಷ್ಠಿತ ವರ್ಗವು ಅಧೀನ ವರ್ಗವನ್ನು ತುಳಿದೆ ತನ್ನ ಏಳಿಗೆಯನ್ನು ಕಂಡುಕೊಳ್ಳಬೇಕಾಗುತ್ತದೆ. ಇದು ಕೇವಲ ಅಭಿವೃದ್ಧಿ ಕಾರ್ಯತಂತ್ರಕ್ಕೆ ಸಂಬಂಧಿಸಿದ ಸಂಗತಿಯಲ್ಲ. ನಾವು ಅಭಿವೃದ್ಧಿಯನ್ನು ಪರಿಭಾವಿಸಿಕೊಂಡಿರುವ ಪರಿಯಲ್ಲಿಯೇ ಸಮಸ್ಯೆಯಿದೆ. ಈ ಪ್ರಣಾಳಿಕೆಯಲ್ಲಿ ಅಧೀನ ಪ್ರಧಾನ,

ಶಿಷ್ಟ, ಪರಿಶಿಷ್ಟ, ಒಳಗೊಳ್ಳುವ ಒಳಗೊಳ್ಳದಿರುವ ಎನ್ನುವ ತಾರತಮ್ಯವಾದಿ ಸಂಗತಿಗಳು ಅಂತರ್ಗತಗೊಂಡಿವೆ. ಇಲ್ಲಿ ಪರಿಶಿಷ್ಟರ ಪರಿಶ್ರಮವೇ ಪ್ರತಿಷ್ಟಿತರ ಪದಾರ್ಥವಾಗಿದೆ. ಆ ಪದಾರ್ಥದಲ್ಲಿ ಪರಿಶಿಷ್ಟರ ಪಾಲು ಕಡಿಮೆ.

ಸಾಂಪ್ರದಾಯಿಕವಾಗಿ ಅಭಿವೃದ್ಧಿಯನ್ನು ರೇಖಾತ್ಮಕವಾಗಿ, ಅಖಂಡ ಮತ್ತು ವಿಕಾಸವಾದಿ ನೆಲೆಯಲ್ಲಿ ಪರಿಭಾವಿಸಿಕೊಳ್ಳುವುದು ರೂಢಿಯಲ್ಲಿದೆ. ಪ್ರಧಾನ ಅಧೀನ ಎನ್ನುವ ಸಂಗತಿಗಳು ಅಭಿವೃದ್ಧಿಯ ಆರಂಭದಲ್ಲಿ ಅನಿವಾರ್ಯವೆಂದು ಪ್ರತಿಪಾದಿಸಲಾಗಿದೆ. ಅಭಿವೃದ್ಧಿಯು ಒಂದು ಮಜಲನ್ನು ತಲುಪಿದ ಮೇಲೆ, ಅಂದರೆ ಅದು ಒಂದು ಮಟ್ಟದ ವರಮಾನವನ್ನು ಸಾಧಿಸಿಕೊಂಡ ಮೇಲೆ ಪ್ರಧಾನ ಅಧೀನವೆನ್ನುವ ಸಂಗತಿಗಳು ಸಹಜವಾಗಿ ಅಳಿಸಿ ಹೋಗುತ್ತವೆಯೆಂದು ಹೇಳಲಾಗಿದೆ. ಅಭಿವೃದ್ಧಿಯು ಕಾಲಕ್ರಮೇಣ ಜನರನ್ನು ಒಳಗೊಳ್ಳುವ ಸ್ವರೂಪ ಪಡೆದುಕೊಂಡು ಬಿಡುತ್ತದೆಯೆಂದು ನಂಬಲಾಗಿದೆ. ಈ ಭಿನ್ನತೆ ಅಳಿಸಿ ಹೋಗುವುದು ಕೇವಲ ಕಾಲದ ಸಂಗತಿ ಮಾತ್ರವಾಗಿದೆ. ಇವತ್ತಲ್ಲ ನಾಳೆ ಸಮಾಜದ ಎಲ್ಲರಿಗೂ ಅಭಿವೃದ್ಧಿಯ ಪಾಲು ದೊರೆಯುತ್ತದೆ ಎಂದು ಪ್ರತಿಪಾದಿಸುತ್ತದೆ.[೧] **(ಡಾ.ಟಿ.ಆರ್.ಸಿ)** ಆದರೆ ಇಲ್ಲಿನ ಪ್ರಶ್ನೆಯೆಂದರೆ ದಲಿತರು ಯಾಕೆ ವರಮಾನವು ಅದರಷ್ಟಕ್ಕೆ ಅದು ಹರಿದು ಅವರನ್ನು ತಲುಪುವುದರವರೆಗೆ ಕಾಯಬೇಕು? ಸಮಾಜದ ಪ್ರತಿಷ್ಟಿತರು ಪಡೆದುಕೊಳ್ಳುತ್ತಿರುವಂತೆ ದಲಿತರೂ ಅದನ್ನು ಪಡೆದುಕೊಳ್ಳಲು ಅಗತ್ಯವಾದ ಕ್ರಮಗಳನ್ನು ತೆಗೆದುಕೊಳ್ಳಬಾರದು? ಮೇಲಿನಿಂದ ವರಮಾನ ಕಾಲಕ್ರಮೇಣ ಹರಿದುಬರುತ್ತದೆ ಎನ್ನುವ ವಿವರಣೆಯ ಅಭಿವೃದ್ಧಿ ವಿರೋಧಿ ನಿಲುವಾಗಿದೆ. ತಜ್ಞರು ಹೇಳುವಂತೆ ಇಂತಹ ಸಮಜಾಯಿಸಿಯು ಕೇವಲ ಭ್ರಮೆ. ರೇಖಾತ್ಮಕವಾಗಿ ಮೇಲು ಮೇಲಕ್ಕೆ ಏಕಮುಖಿಯಾಗಿ ಸಾಗುವ ಅಭಿವೃದ್ಧಿಯು ಕಾಲಕ್ರಮೇಣ ಸಮಾಜದ ಅಧೀನವರ್ಗಕ್ಕೂ ವರಮಾನವನ್ನು ಹರಿಯಬಿಡುತ್ತದೆ ಎಂಬುದು ಒಂದು ಹುನ್ನಾರ. ಏಕೆಂದರೆ ವರಮಾನದ ತಳಮುಖಿ ಹರಿಯುವಿಕೆಗೆ ಅಡ್ಡಲಾಗಿ ಅನೇಕ ಗೋಡೆಗಳಿರುವುದು ತಿಳಿಯದ ಸಂಗತಿಯೇನಲ್ಲ. ಈ ವ್ಯವಸ್ಥೆಯಲ್ಲಿ ವರಮಾನವು ಮೇಲಿನ ವರ್ಗದಲ್ಲೇ ಮಡುಗಟ್ಟಿಕೊಳ್ಳುವಂತೆ ಮಾಡಲಾಗುತ್ತದೆ. ಈ ಸಂಗತಿಯನ್ನು ಗಮನದಲ್ಲಿಟ್ಟುಕೊಂಡು ಅಮರ್ತ್ಯಸೇನ್ ತನ್ನ 'ಪವರ್ಟಿ ಅಂಡ್ ಫೈಮೈನ್'ನಲ್ಲಿ (೧೯೮೧) "ಹಸಿವು ಎಂಬುದು ಆಹಾರ ಇಲ್ಲದಿರುವುದರಿಂದ ಉಂಟಾಗುವ ಸಮಸ್ಯೆಯಲ್ಲ. ಅದು ಆಹಾರವು ಸಮಾಜದ ಎಲ್ಲ ಕೆಲವು ವರ್ಗಗಳಿಗೆ ದೊರೆತಿರುವುದರಿಂದ ಉಂಟಾಗುವ ಸಮಸ್ಯೆಯಾಗಿದೆ"[೨] ಎಂದು ಹೇಳಿದ್ದಾನೆ.

ಹಸಿವನ್ನು ಕುರಿತಂತೆ ಸೇನ್ ಹೇಳಿದ ಮಾತುಗಳನ್ನು ನಾವು ಅಭಿವೃದ್ಧಿಗೂ ಅನ್ವಯಿಸಿ ಹೇಳಬಹುದಾಗಿದೆ. ಪ್ರಸ್ತುತ ಇಲ್ಲಿ ಕರ್ನಾಟಕದೊಂದಿಗೆ ರಾಯಚೂರು ಜಿಲ್ಲೆಯನ್ನು ಗಮನದಲ್ಲಿಟ್ಟುಕೊಂಡು ಪರಿಶಿಷ್ಟರು ಹೇಗೆ ಅಭಿವೃದ್ಧಿಯಿಂದ ವಂಚಿತರಾಗುತ್ತಿದ್ದಾರೆ ಎಂಬುದನ್ನು ತೋರಿಸಲು ಪ್ರಯತ್ನಿಸಲಾಗಿದೆ. ಸಾಮಾಜಿಕತೆಗೆ ಬೆನ್ನು ತಿರುವಿ ಸಾಮಾಜಿಕವಾಗಿ ನಿರಪೇಕ್ಷವಾದ ಮತ್ತು ಸಮಾಜಕ್ಕೆ ವಿಮುಖಿಯಾದ ಅಭಿವೃದ್ಧಿ ಪ್ರಣಾಳಿಕೆಯಲ್ಲಿ ಸಮಾನತೆಗೆ ಅವಕಾಶವಿರುವುದಿಲ್ಲ. ಸಾಮಾಜಿವಾಗಿ ಖಂಡ ಸ್ವರೂಪಿಯಾದ ಸಮಾಜದಲ್ಲಿ ಅಭಿವೃದ್ಧಿಯು ಅಖಂಡವಾಗಿರಲು

ಸಾಧ್ಯವಿಲ್ಲ. ಅವಿಭಕ್ತತೆಯು ಅಭಿವೃದ್ಧಿಯ ಲಕ್ಷಣವೇನಲ್ಲ. ಖಂಡಸ್ವರೂಪಿ ಸಮಾಜದಲ್ಲಿ ಅಭಿವೃದ್ಧಿಯ ಫಲಗಳು ಸಮಾಜದ ಎಲ್ಲರಿಗೂ ಸಮಾನವಾಗಿ ದೊರೆಯುವುದು ಸಾಧ್ಯವಿಲ್ಲ. ಅದನ್ನು ಜನರು ದಕ್ಕಿಸಿಕೊಳ್ಳಬೇಕಾಗುತ್ತದೆ. ಅಭಿವೃದ್ಧಿಯ ಫಲಗಳನ್ನು ಧಾರಣೆ ಮಾಡಿಕೊಳ್ಳಲು ಜನರಿಗೆ ಅಧಿಕಾರಬೇಕು. ಅವರ ಧಾರಣಾ ಸಾಮರ್ಥ್ಯವು ಸಾಕ್ಷರತೆಯಿಂದ ಕುಶಲತೆಯಿಂದ, ಶಿಕ್ಷಣದಿಂದ ತರಬೇತಿಯಿಂದ ಪ್ರಾಪ್ತವಾಗುತ್ತದೆ. ಅಮರ್ತ್ಯಸೇನ್ ಧಾರಣಾ ಶಕ್ತಿಯ ಕೊರತೆಯನ್ನು ಬಡತನವೆಂದು ಕರೆದಿದ್ದಾನೆ. ಇಲ್ಲಿ ಅಲಕ್ಷಿತರು ಎಂಬುದನ್ನು ಧಾರಣಾ ಶಕ್ತಿಯ ಕೊರತೆಯಿಂದ ಜರ್ಜರಿತರಾದ ಜನರೆಂದು ಭಾವಿಸಬಹುದು. ಧಾರಣಾ ಶಕ್ತಿಯ ಮೂಲ ಧಾತುಗಳಾದ ಬಂಡವಾಳ, ಸಾಕ್ಷರತೆ, ಶಿಕ್ಷಣ, ಲಿಂಗ, ಕಸುಬು, ಆಹಾರ ಭದ್ರತಗೆ ಮುಂತಾದವುಗಳಿಗೆ ಸಂಬಂಧಿಸಿದಂತೆ ವಂಚಿತರಾದ ಜನರೇ ಅಲಕ್ಷಿತವರ್ಗ. ಈ ವರ್ಗಕ್ಕೆ ಬದುಕುವುದೇ ದುರ್ಬಲವಾಗಿರುತ್ತದೆ. ಸಮಾಜದಲ್ಲಿ ಹರಿದು ಬರುವ ಅವಕಾಶಗಳನ್ನು ಇವರಿಗೆ ಧಾರಣೆ ಮಾಡಿಕೊಳ್ಳುವುದು ಸಾಧ್ಯವಾಗುವುದಿಲ್ಲ. ಅಭಿವೃದ್ಧಿಯು ಇಲ್ಲಿ ವಂಚಿತ ವರ್ಗವನ್ನು ಸಬಲೀಕರಿಸುವ ರೀತಿಯಲ್ಲಿರುವುದಿಲ್ಲ. ಅವರನ್ನು ಮೂಲೆ ಗುಂಪು ಮಾಡುವ ರೀತಿಯಲ್ಲಿರುತ್ತದೆ. ಈ ರೀತಿಯಲ್ಲಿ ವಂಚಿತರನ್ನು ಮೂಲೆಗೆ ತಳ್ಳುವುದರ ಮೂಲಕವೇ ಪ್ರತಿಷ್ಠಿತವರ್ಗ ತನ್ನ ಅಭಿವೃದ್ಧಿಯನ್ನು ಸಾಧಿಸಿಕೊಳ್ಳುತ್ತಿರುತ್ತದೆ.

೫.೨ ಚಾರಿತ್ರಿಕ ಶ್ರೇಣೀಕರಣ

ಭೂಮಿಯು ಒಂದು ಸರಕಲ್ಲ. ಅದೊಂದು ಪ್ರತಿಷ್ಠೆಯ ಸಂಗತಿ. ಅದಕ್ಕೆ ಸಮಾಜದಲ್ಲಿ ಪವಿತ್ರವಾದ ಸ್ಥಾನಮಾನವು ಕೂಡ ಇದೆ. ಅನಾದಿಕಾಲದಿಂದಲೂ ಭೂಮಿಯು ಪ್ರತಿಷ್ಠಿತರ ಮಾಲಿಕತ್ವದಲ್ಲೇ ಇರುತ್ತದೆ. ಪರಿಶಿಷ್ಟರಿಗೆ ಭೂಮಾಲಿಕತ್ವದ ಅವಕಾಶವೇ ಇರಲಿಲ್ಲ. ಕರ್ನಾಟಕ ಒಟ್ಟು ಜನಸಂಖ್ಯೆಯಲ್ಲಿ (೫೨೮.೫೨ಲಕ್ಷ) ದಲಿತರ ಸಂಖ್ಯೆ ೧೨೦.೨೮ ಲಕ್ಷದಷ್ಟಾದರೆ ಪ್ರತಿಷ್ಠಿತರ ಸಂಖ್ಯೆ ४೦೮.೨೩ಲಕ್ಷ, ಇದೇ ರೀತಿ ಪರಿಶಿಷ್ಟ ದುಡಿಮೆಗಾರರಲ್ಲಿ (೫೬.೭೬ಲಕ್ಷ) ಸಾಗುವಳಿಗಾರರ ಪ್ರಮಾಣ ಶೇ.೨೧.೫೩ ಆದರೆ ಪ್ರತಿಷ್ಠಿತ ವರ್ಗದಲ್ಲಿ ಪ್ರಮಾಣ ಶೆ.೨೭.೮೦ ಕರ್ನಾಟಕದಲ್ಲಿ ೨೦೦೧ರ ಜನಗಣತಿ ಪ್ರಕಾರ ಒಟ್ಟು ದಿನಗೂಲಿಗಳ ಸಂಖ್ಯೆ ೬೨.೨೭ಲಕ್ಷ ಇವರಲ್ಲಿ ಪರಿಶಿಷ್ಟರ ಸಂಖ್ಯೆ ೨४.೭೫ಲಕ್ಷ (ಶೇ.೩೯.೭४). ಆದರೆ ಪ್ರತಿಷ್ಠಿತರಲ್ಲಿ ಇವರ ಪ್ರಮಾಣ ಕೇವಲ ಶೇ.೬೦.೨೬ (ಶೇ.೩೭.೫೨ಲಕ್ಷ) ಅಂದರೆ ಜನಸಂಖ್ಯೆಯಲ್ಲಿ ಪರಿಶಿಷ್ಟರು ಎಷ್ಟು ಪಾಲುಪಡೆದಿದ್ದಾರೋ (ಶೇ.೨೨.೭೬) ಅದಕ್ಕಿಂತ ಅಧಿಕವಾಗಿ ಅವರು ದಿನಗೂಲಿ (ಶೇ.೩೯.೭४) ಕೆಲಸಗಳಲ್ಲಿ ಮುಗಿಬಿದ್ದಿದ್ದಾರೆ. ಪರಿಶಿಷ್ಟರಲ್ಲಿ ದಿನಗೂಲಿಗಳ ಪ್ರಮಾಣ ಶೇ.४೩.೬೦ರಷ್ಟಾದರೆ ಪ್ರತಿಷ್ಠಿತರಲ್ಲಿ ಅವರ ಪ್ರಮಾಣ ಶೇ ೨೧.೨೦ ಮಾತ್ರ. ಈ ಎಲ್ಲ ಅಂಕಿ ಅಂಶಗಳಿಂದ ತಿಳಿದುಬರುವುದೇನೆಂದರೆ ಪರಿಶಿಷ್ಟರು ಸಮಾಜದಲ್ಲಿ ದುಡಿಮೆಗೆ ನೀಡುತ್ತಿರುವ ಕಾಣಿಕೆ ಅಪಾರವಾಗಿದೆ. ಆದರೆ ಅವರು ಅಭಿವೃದ್ಧಿಯಲ್ಲಿ ಪಡೆಯುತ್ತಿರುವ ಪಾಲು ಅತ್ಯಲ್ಪ. ಅಭಿವೃದ್ಧಿಯ ಪದತಲದಲ್ಲಿ ಪರಿಶಿಷ್ಟರಿದ್ದಾರೆ. ಅದರ ಫಲಗಳನ್ನು ಅನುಭವಿಸುವುದರಲ್ಲಿ ಪ್ರತಿಷ್ಠಿತರು ಮುಂದಿದ್ದಾರೆ. ದಲಿತರಿಗೆ ಭೂಮಿ ನೀಡಲು

ತಿಣುಕಾಡುವ ಸರ್ಕಾರಗಳು ಉದ್ದಿಮೆಗಳಿಗೆ ಮಾತ್ರ ತಾನೇ ಮುಂದೆ ನಿಂತು ಭೂಮಿಯನ್ನು ಒದಗಿಸಿಕೊಡುತ್ತದೆ. 'ಜಮೀನು ನೀಡಿರಿ–ಉದ್ಯೋಗ ಪಡೆಯಿರಿ' ಎಂಬ ಘೋಷಣೆಯನ್ನು ಇಂದು ರೂಪಿಸಲಾಗಿದೆ. ಆದರೆ ದಲಿತರ ಸಂದರ್ಭದಲ್ಲಿ ಸರ್ಕಾರಗಳು ಇಂತಹ ಘೋಷಣೆಯನ್ನು ನುಡಿಯುವುದಿಲ್ಲ. ಎನ್‌ಸಿಈಎಆರ್. (NCEAR) ಸಂಸ್ಥೆಯು "ಭಾರತದಲ್ಲಿ ಮಾನವ ಅಭಿವೃದ್ಧಿ ಸವಾಲುಗಳು" ಎಂಬ ಅಧ್ಯಯನದಲ್ಲಿ ಸಾಮಾಜಿಕ ಅಸಮಾನತೆಯನ್ನು ಹಿಡಿದಿರುವ ಪ್ರಯತ್ನ ಮಾಡಿದೆ. ಈ ಅಧ್ಯಯನಕ್ಕಾಗಿ ಸುಮಾರು ೧೫೦೩ ಹಳ್ಳಿಗಳಲ್ಲಿ ೪೦.೦೦೦ಕ್ಕೂ ಹೆಚ್ಚು ಕುಟುಂಬಗಳ ಸಮೀಕ್ಷೆಯನ್ನು ಅದು ನಡೆಸಿದೆ. ಈ ಅಧ್ಯಯನದಲ್ಲಿ ಅದು ಕಂಡುಕೊಂಡ ಸತ್ಯವೆಂದರೆ 'ಏರಿಕೆಯಾದ ವರಮಾನವು ತನ್ನಷ್ಟಕ್ಕೆ ತಾನು ಸಮಾಜದ ಕೆಳಸ್ತರದಲ್ಲಿರುವ ದಲಿತರಿಗೆ, ಶೂದ್ರರಿಗೆ, ಹಿಂದುಳಿದ ವರ್ಗಗಳಿಗೆ, ಅಲ್ಪಸಂಖ್ಯಾತರಿಗೆ ಒದಗಿ ಬರುತ್ತದೆ ಎಂಬ ಸಾಂಪ್ರದಾಯಿಕ ನಂಬಿಕೆಯು ಹುಸಿಯಾದುದು'.[೩]

ನೋಬಲ್ ಪ್ರಶಸ್ತಿ ಅರ್ಥಶಾಸ್ತ್ರಜ್ಞ ಜೊಸೆಫ್ ಸ್ಟಿಗ್‌ಲಿಡ್ಜ್ ತನ್ನ ಪ್ರಸಿದ್ಧ ಜಾಗತೀಕರಣ ಕೃತಿಯಲ್ಲಿ ನಾವು ಯಾವುದನ್ನು 'ಟ್ರಿಲ್ ಡೌನ್ ಸಿದ್ಧಾಂತ' ವೆಂದು ಕರೆಯುತ್ತಾ ಬಂದಿದ್ದೇವೆಯೋ ಅದು ಹುಸಿ ಎಂಬುದನ್ನು ಅವರು ಸಿದ್ಧಮಾಡಿ ತೋರಿಸಿದ್ದಾರೆ.[೪] ಎನ್‌ಸಿಈಎಆರ್(NCEAR) ಅಧ್ಯಯನದ ಪ್ರಕಾರ ದಲಿತ ಕುಟುಂಬಗಳ ತಲಾ ವಾರ್ಷಿಕ ವರಮಾನದ ರೂ.೨೦,೦೦೦ದಿಂದ ರೂ.೨೨,೦೦೦ರಷ್ಟಾದರೆ ಹಿಂದುಗಳಿದ ವರ್ಗ ಮತ್ತು ಅಲ್ಪಸಂಖ್ಯಾತ ವರ್ಗಗಳ ವಾರ್ಷಿಕ ವರಮಾನ ಅದಕ್ಕಿಂತ ಸ್ವಲ್ಪ ಅಧಿಕ ಆದರೆ ಹಿಂದೂಗಳು, ಸಿಖ್ಖರು ಮತ್ತು ಜೈನರು ಹಾಗೂ ಕ್ರಿಶ್ಚಿಯನ್ನರುಗಳ ತಲಾ ವಾರ್ಷಿಕ ವರಮಾನ ರೂ.೪೮,೦೦೦ದಿಂದ ರೂ. ೫೨,೦೦೦, ಅಂದರೆ ನಮ್ಮ ಸಮಾಜದಲ್ಲಿ ಶ್ರೇಣೀಕರಣ ಹೇಗಿದೆಯೋ ಅದೇ ರೀತಿಯಲ್ಲಿ ಅಭಿವೃದ್ಧಿಯು ಸಂಭವಿಸುತ್ತಿದೆ. ಈ ಕಾರಣದಿಂದಾಗಿ ಅಭಿವೃದ್ಧಿಯು ಪರಿಶಿಷ್ಟರನ್ನು ಒಳಗೊಳ್ಳುತ್ತಿಲ್ಲ.

ಅಭಿವೃದ್ಧಿಯು ಯಾವುದೇ ಸೂಚಿಯನ್ನು ತೆಗೆದುಕೊಂಡರೂ ದಲಿತರು ಅಭಿವೃದ್ಧಿಯ ಶ್ರೇಣೀಕರಣದಲ್ಲಿ ಕೆಳಸ್ತರದಲ್ಲಿರುತ್ತಾರೆ. ಹಿಂದುಳಿದ ವರ್ಗ, ಅಲ್ಪಸಂಖ್ಯಾತರು ಮಧ್ಯಮ ಸ್ತರದಲ್ಲಿದ್ದರೆ ಹಿಂದೂಗಳು, ಸಿಖ್ಖರು, ಜೈನರು, ಮತ್ತು ಕ್ರಿಶ್ಚಿಯನ್ನರು ಉನ್ನತ ಸ್ಥಾನದಲ್ಲಿದ್ದಾರೆ.

ಸರ್ಕಾರಿ ಅಥವಾ ಖಾಸಗಿ ನೌಕರಿಗಳಲ್ಲಿ ಉನ್ನತ ವರ್ಗಗಳ ಪ್ರಾತಿನಿಧ್ಯ ದಲಿತರ ಪ್ರಾತಿನಿಧ್ಯಕ್ಕಿಂತ ಅಧಿಕ. ಅಲ್ಲಿನ ಪ್ರತಿ ಹತ್ತು ನೌಕರರಲ್ಲಿ ಮೂವರು ಉನ್ನತ ವರ್ಗದವರಾಗಿರುತ್ತಾರೆ. ಈ ಬಗೆಯ ಅವಕಾಶಗಳಲ್ಲಿ ಶಿಕ್ಷಣದಿಂದ ವಂಚಿತರಾದ ದಲಿತರ ಪ್ರಮಾಣ ಅಧಿಕವಿರಲು ಸಾಧ್ಯವಿಲ್ಲ. ಶಿಕ್ಷಣ ಪಡೆದ ಮಂದಿ ನೌಕರಿ ಹಿಡಿಯುವುದು ಸಾಧ್ಯ. ಅಂದರೆ ನಮ್ಮಲ್ಲಿ ಜನರನ್ನು ಒಳಗೊಳ್ಳುವ ಅಭಿವೃದ್ಧಿಯು ಯಶಸ್ವಿಯಾಗಿಲ್ಲ. ಪ್ರಾದೇಶಿಕ ಮತ್ತು ಲಿಂಗ ಸಂಬಂಧಿ ಅಸಮಾನತೆಯಿಂದ ಅದು ನರಳುತ್ತಿದೆ.

ಗ್ರಾಮೀಣ ಪ್ರದೇಶದಲ್ಲಿ ಮಹಿಳೆಯರ ದುಡಿಮೆಯು ಪುರುಷರ ದುಡಿಮೆಯ ಶೇ.೫ರಷ್ಟಾದರೆ ನಗರ ಪ್ರದೇಶದಲ್ಲಿ ಅದರ ಪ್ರಮಾಣ ಶೇ.೬೮ ಈ ವಿಷಯದಲ್ಲಿ ಹೆಚ್ಚು ವಂಚನೆಗೆ ಮತ್ತು

ದಮನಕ್ಕೆ ಒಳಗಾಗಿರುವವರೆಂದರೆ ದಲಿತ ಮಹಿಳೆಯರು. ಕರ್ನಾಟಕದಲ್ಲಿ ಪರಿಶಿಷ್ಟ ದಿನಗೂಲಿ ದುಡಿಮೆಗಾರರಲ್ಲಿ (೨೪.೭೫ಲಕ್ಷ) ಪುರುಷರು ಪ್ರಮಾಣ ಶೇ.೪೪.೬೪ ರಷ್ಟಾದರೆ ಮಹಿಳೆಯರ ಪ್ರಮಾಣ ಶೇ.೫೫.೩೬. ಕರ್ನಾಟಕದಲ್ಲಿ ಕಳೆದ ಹತ್ತು ವರ್ಷಗಳಲ್ಲಿ ತಲಾ ವರಮಾನವು ಎರಡು ಪಟ್ಟು ಅಧಿಕವಾಗಿದೆ. ಅದು ೨೦೦೧-೦೨ರಲ್ಲಿ ರಾಜ್ಯದ ತಲಾ ವರಮಾನ ಚಾಲ್ತಿ ಬೆಲೆಗಳಲ್ಲಿ ರೂ.೧೯,೮೨೧ರಷ್ಟಿತ್ತು. ಅದು ೨೦೦೭-೦೮ರಲ್ಲಿ ರೂ.೪೧,೯೦೨ಕ್ಕೇರಿದೆ (೨.೧೧ಪಟ್ಟು). ಆದರೆ ಜನರ ಬದುಕು ಮಾತ್ರ ಶೋಚನೀಯವಾಗಿ ಮುಂದುವರಿದಿದೆ. ಈ ಏರಿಕೆಯ ಪರಿಣಾಮ ದಲಿತರ ಮೇಲೆ ನಿಕೃಷ್ಟವಾಗಿದೆ.

೫.೩ ಅಭಿವೃದ್ಧಿಯಿಂದ ವಂಚಿತವಾದ ವರ್ಗ

ಅನೂಚಾನವಾಗಿ ಹರಿದುಕೊಂಡು ಬರುತ್ತಿರುವ ಸಾಮಾಜಿಕ ಅಸಮಾನತೆಗಳ ಪದಾಘಾತಕ್ಕೆ ಸಿಕ್ಕು ಸಮಾಜದಲ್ಲಿ ಅಂಚಿಗೆ ದೂಡಲ್ಪಟ್ಟ ಜನರ ಗುಂಪನ್ನು ವಂಚಿತ ಅಥವಾ ಅಲಕ್ಷಿತರೆಂದು ಕರೆಯಬಹುದು. ಆದರೆ ಅಭಿವೃದ್ಧಿಯ ಮೂಲದ್ರವ್ಯ ಪರಿಶಿಷ್ಟರ ಪರಿಶ್ರಮವೇ ಆಗಿದೆ. ಆದರೆ ಅವರು ಅಲಕ್ಷಿತರು, ಅಧೀನರು, ಪರಿಶಿಷ್ಟರು. ಅಭಿವೃದ್ಧಿಗೆ ಇವರ ಕಾಣಿಕೆ ಅಪಾರ. ಆದರೆ ಅದರಲ್ಲಿ ಇವರ ಪಾಲು ನಿಕೃಷ್ಟವಾದುದು. ಇದು ಎಷ್ಟು ನಿಕರಷ್ಟವಾದುದು ಎಂಬುದನ್ನು ಇಲ್ಲಿ ಕೆಲವು ಸೂಚಿಗಳ ಮೂಲಕ ತೋರಿಸಲು ಪ್ರಯತ್ನಿಸಲಾಗಿದೆ.

೫.೪ ದುಡಿಮೆಯ ಸ್ವರೂಪ

ಕೃಷಿ, ಗಣಿಗಾರಿಕೆ, ಅರಣ್ಯಗಾರಿಕೆ, ಮುಂತಾದ ಚಟುವಟಿಕೆಗಳನ್ನು ಒಳಗೊಂಡ ವಲಯವನ್ನು ಪ್ರಾಥಮಿಕ ವಲಯವೆಂದು ಕರೆಯಲಾಗಿದೆ. ಈ ವಲಯವನ್ನು ಅವಲಂಬಿಸಿಕೊಂಡವರ ಪ್ರಮಾಣ ಎಲ್ಲಿ ಅಧಿಕವಾಗಿರುತ್ತದೋ ಅದು ಹಿಂದುಳಿದ ಸ್ಥಿತಿಯಲ್ಲಿರುತ್ತದೆ ಎಂದು ಬಗೆಯಲಾಗಿದೆ. ಕರ್ನಾಟಕದಲ್ಲಿ ಪರಿಶಿಷ್ಟರಲ್ಲಿ ಕೃಷಿ ಅವಲಂಬನೆ ಶೇ.೬೯.೪೮ರಷ್ಟಾದರೆ ಪ್ರತಿಷ್ಠಿತರಲ್ಲಿ ಕೃಷಿ ಅದು ಶೇ.೫೧.೩೧ ಪ್ರಾಥಮಿಕೇತರ ಚಟುವಟಿಕೆಗಳಾದ ಕೈಗಾರಿಕೆ, ಬ್ಯಾಂಕಿಂಗ್, ಸಾರಿಗೆ, ವಾಣಿಜ್ಯ, ಮುಂತಾದವುಗಳ ಮೇಲೆ ಪರಿಶಿಷ್ಟರ ಅವಲಂಬನೆ ಶೇ.೩೦.೫೨ರಷ್ಟಾದರೆ ಪ್ರತಿಷ್ಠಿತರಲ್ಲಿ ಅದರ ಪ್ರಮಾಣ ಶೇ.೪೮.೬೯ ಪ್ರಧಾನಧಾರೆ ಅಭಿವೃದ್ಧಿ ಮೀಮಾಂಸೆಯಲ್ಲಿ ಪ್ರತಿಪಾದಿಸಿರುವಂತೆ ಪ್ರಾಥಮಿಕ ವಲಯದಲ್ಲಿ ತಲಾ ಉತ್ಪನ್ನದ ಪ್ರಮಾಣವು ಪ್ರಾಥಮಿಕೇತರ ವಲಯದ ತಲಾ ಉತ್ಪನ್ನದ ಪ್ರಮಾಣಕ್ಕಿಂತ ಕಡಿಮೆಯಿರುತ್ತದೆ. ಸಾಮಾನ್ಯವಾಗಿ ಆರ್ಥಿಕತೆಯಲ್ಲಿ ವರಮಾನವು ಏರಿಕೆಯಾಗುತ್ತಿರುವಂತೆ ದುಡಿಮೆಗಾರರು ಪ್ರಾಥಮಿಕ ವಲಯದಿಂದ ಪ್ರಾಥಮಿಕೇತರ ವಲಯಕ್ಕೆ ವರ್ಗಾವಣೆಗೊಳ್ಳುವುದು ಕಂಡುಬರುತ್ತದೆ. ಆದರೆ ನಮ್ಮ ಸಂದರ್ಭದಲ್ಲಿ ಇದು ನಡೆಯುತ್ತಿಲ್ಲ. ಇದರಿಂದಾಗಿ ಪ್ರಾಥಮಿಕ ವಲಯದಿಂದ ಬರುವ ವರಮಾನ ಕಡಿಮೆಯಾಗುತ್ತಿದೆ. ಪ್ರಾಥಮಿಕೇತರ ವಲಯದಿಂದ ಬರುತ್ತಿರುವ ವರಮಾನವು ಅಧಿಕವಾಗುತ್ತಿದೆ. ಈ ಬಗೆಯ ದುಡಿಮೆಯ ಸ್ವರೂಪ ಬದಲಾವಣೆಯಿಂದಾಗಿ ಪ್ರಾಥಮಿಕ ವಲಯದಲ್ಲಿ ದುಡಿಮೆಗಾರರ ಪ್ರಮಾಣ ಅಧಿಕವಾಗಿರುತ್ತದೆ. ಅದರಿಂದ ಬರುವ ವರಮಾನ ಮಾತ್ರ ಕಡಿಮೆಯಾಗುತ್ತಿರುತ್ತದೆ. ಉದಾಹರಣೆಗೆ ಕರ್ನಾಟಕದಲ್ಲಿ

ಪ್ರಾಥಮಿಕ ವಲಯವನ್ನು ಅವಲಂಬಿಸಿಕೊಂಡಿರುವವರ ಪ್ರಮಾಣ ಸುಮಾರು ಶೇ.೫೫ರ ಮಟ್ಟದಲ್ಲಿದೆ. ಆದರೆ ೨೦೦೭-೦೮ರಲ್ಲಿ ಪ್ರಾಥಮಿಕ ವಲಯದಿಂದ ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ ಬಂದ ವರಮಾನ ಕೇವಲ ಶೇ.೧೮ರಷ್ಟಾಗಿದೆ. ಅಂದರೆ ಒಟ್ಟು ದುಡಿಮೆಗಾರರಲ್ಲಿ ಶೇ.೫೫ರಷ್ಟು ಜನರು ರಾಜ್ಯದ ವರಮಾನದ ಶೇ.೧೮ರಷ್ಟನ್ನು ಪಡೆಯುತ್ತಿದ್ದರೆ, ಪ್ರಾಥಮಿಕೇತರ ವಲಯದಲ್ಲಿರುವ ಶೇ.೪೫ರಷ್ಟು ಜನರು ವರಮಾನದ ಶೇ.೮೨ರಷ್ಟನ್ನು ಪಡೆಯುತ್ತಿದ್ದಾರೆ. ಇದು ವರಮಾನಕ್ಕೆ ಸಂಬಂಧಿಸಿದ ಅಸಮಾನತೆಯ ತೀವ್ರತೆಯನ್ನು ಸೂಚಿಸುತ್ತದೆ. ಈ ಅಸಮಾನತೆಯ ತೀವ್ರತೆಯು ಹೆಚ್ಚು ತಟ್ಟುತ್ತಿರುವುದು ದಲಿತ ಸಮುದಾಯವನ್ನು ಎಂಬುದು ಇಲ್ಲಿ ಮುಖ್ಯ. ಏಕೆಂದರೆ ಪ್ರಾಥಮಿಕ ವಲಯವನ್ನು ಅವಲಂಬಿಸಿ ಕೊಂಡಿರುವವರಲ್ಲಿ ದಲಿತರ ಪ್ರಮಾಣ ಅಗಾಧವಾಗಿದೆ. ಅಲ್ಲಿ ದಿನಗೂಲಿಮಾಡಿ ಬದುಕುತ್ತಿರುವವರಲ್ಲಿ ದಲಿತರ ಪ್ರಮಾಣ ಅಧಿಕ. ನಮ್ಮಲ್ಲಿ ನಡೆಯುತ್ತಿರುವ ದುಡಿಮೆಯ ಸ್ವರೂಪ ಬದಲಾವಣೆಯು ದಲಿತರಿಗೆ ಅನುಕೂಲಕರವಾಗಿಲ್ಲ.

೫.೫ ಆರೋಹಣವಾದಿ ಅಸಮಾನತೆ

ಸಂವಿಧಾನ ರಚನಾ ಸಭೆಯು ನೇಮಿಸಿದ್ದ ಸಂವಿಧಾನ ಕರಡು ಸಮಿತಿಯ ಅಧ್ಯಕ್ಷರಾಗಿದ್ದ ಡಾ.ಬಿ.ಆರ್.ಅಂಬೇಡ್ಕರ್ ಅವರು ತಾವು ಸಿದ್ಧಪಡಿಸಿದ್ದ ಸಂವಿಧಾನದ ಕರಡನ್ನು ಸಭೆಯ ಮುಂದೆ ಮಂಡಿಸುತ್ತಾ ಅವರು 'ಈ ೧೯೫೦ ಜನವರಿ ೨೬ರಂದು ನಾವು ವೈರುಧ್ಯಗಳಿಂದ ಕೂಡಿದ ಬದುಕನ್ನು ಪ್ರವೇಶಿಸುತ್ತಿದ್ದೇವೆ. ರಾಜಕೀಯದಲ್ಲಿ ಸ್ವಾತಂತ್ರವೂ ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರದಲ್ಲಿ ಅಸಮಾನತೆಯು ಇರುವ ಬದುಕು ನಮ್ಮದಾಗಿರುತ್ತದೆ. ಎಂಬ ಎಚ್ಚರಿಕೆ ನೀಡುತ್ತಾರೆ. ಈ ಹಿನ್ನೆಲೆಯಲ್ಲಿ ಸಂವಿಧಾನಾತ್ಮಕವಾಗಿ ದುರ್ಬಲರಿಗೆ, ಪರಿಶಿಷ್ಟರಿಗೆ ಅನೇಕ ರೀತಿಯ ಭದ್ರತೆಯನ್ನು ನೀಡಲಾಗಿದೆ. ಆದರೆ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಅಸಮಾನತೆಗಳು ಮುಂದುವರೆಯುತ್ತಿವೆ. ಅಭಿವೃದ್ಧಿಯೆಂಬ ಪಿರಮಿಡ್ಡಿನ ವಿಸ್ತೃತ ಅಡಿಪಾಯದಲ್ಲಿ ಅಗಾಧ ಪ್ರಮಾಣದಲ್ಲಿ ಪರಿಶಿಷ್ಟರು ಸಂದಣಿಗೊಂಡಿದ್ದಾರೆ. ಅದರ ಸಂಕುಚಿತವಾದ ತುದಿಯಲ್ಲಿ ಶಿಷ್ಟರು ಪ್ರತಿಶಿಷ್ಟಿತರರು ನೆಲೆಗೊಂಡಿದ್ದಾರೆ. ಪಿರಮಿಡ್ಡಿನ ಶಿಖರದಲ್ಲಿ ನೆಲೆಗೊಂಡಿರುವ ಜನರ ವರಮಾನವು ತೀವ್ರಗತಿಯಲ್ಲಿ ಬೆಳೆಯುತ್ತಿದೆ. ಆದರೆ ಅದರ ತಳದಲ್ಲಿ ಸಂದಣಿಗೊಂಡಿರುವ ಜನರ ಬಡತನವು ಮಾತ್ರ ಮಂದಗತಿಯಲ್ಲಿ ಕಡಿಮೆಯಾಗುತ್ತಿದೆ. ಇದನ್ನು ಜನ್‌ಬ್ರೆಮೆನ್ ಎಂಬ ಸಮಾಜ ವಿಜ್ಞಾನಿ "ಆರೋಹಣವಾದಿ ಅಸಮಾನತೆ"[೨೦೦೧;೨೨]ಯೆಂದು ಕರೆದಿದ್ದಾನೆ.೫ ನಮ್ಮ ಸಮಾಜದಲ್ಲಿ ವುಮೆನ್, ಅಂಬೇಡ್ಕರ್, ಹೇಳಿರುವ ವಿಕೃತಿಗಳು ಮುಂದುವರಿದಿವೆ. ಡಾ.ಬಿ.ಆರ್.ಅಂಬೇಡ್ಕರ್ ಹೇಳುತ್ತಿರುವ ಸ್ವಾತಾಂತ್ರ್ಯವನ್ನು ಅಮರ್ತ್ಯಸೇನ್ ನೇತ್ಯಾತ್ಮಕ ಸ್ವಾತಂತ್ರ್ಯವೆಂದು ಕರೆಯುತ್ತಾನೆ. ಇದಕ್ಕೆ ಪ್ರತಿಯಾಗಿ ನಮಗೆ ಅಗತ್ಯವಾಗಿರುವುದು ಇತ್ಯಾತ್ಮಕ ಸ್ವಾತಂತ್ರ್ಯ. ಸ್ವಾತಂತ್ರ್ಯವೆಂದರೆ ನಿಯಂತ್ರಣಗಳಿಲ್ಲದ ಸಂಗತಿಯೆಂದು ತಿಳಿದುಕೊಳ್ಳಲಾಗಿದೆ. ನಮಗೆ ಅಗತ್ಯವಾಗಿರುವುದು ಸಮಾಜದಲ್ಲಿ ಹರಿದು ಬರುವ ಅವಕಾಶಗಳನ್ನು ತನ್ನದಾಗಿಸಿಕೊಳ್ಳುವ ಸಾಮರ್ಥ್ಯ. ಇದನ್ನು ಸೇನ್ ಇತ್ಯಾತ್ಮಕ ಸ್ವಾತಂತ್ರ್ಯವೆಂದು ಕರೆಯುತ್ತಾನೆ. ನಮಗೆ ಇಂದು ಅಗತ್ಯವಾಗಿರುವುದರ ಕೇವಲ ಸ್ವಾತಂತ್ರ್ಯವಲ್ಲ. ಅದು ನಮ್ಮ ಧಾರಣಾ ಸಾಮರ್ಥ್ಯವನ್ನು ವಿಸ್ತೃತಗೊಳಿಸುವ ಸ್ವಾತಂತ್ರ್ಯವಾಗಿದೆ.

ಅಭಿವೃದ್ಧಿಯ ರಹದಾರಿ

ಅಕ್ಷರಕ್ಕೆ, ಲಿಖಿತ ಅಕ್ಷರಕ್ಕೆ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಬಹಳಷ್ಟು ಮಹತ್ವ ನೀಡುತ್ತಿದ್ದರು. ತಮ್ಮ ರಾಜಕೀಯ ಜೀವನದುದ್ದಕ್ಕೂ ಅವರ ಸರ್ಕಾರಗಳ ಮುಂದೆ ತಮ್ಮ ಒತ್ತಾಯಗಳನ್ನು, ಹಕ್ಕುಗಳನ್ನು ಲಿಖಿತ ರೂಪದಲ್ಲಿ ಮಂಡಿಸುತ್ತಿದ್ದರು. ಪ್ರತಿಯೊಂದು ಸಂದರ್ಭದಲ್ಲೂ ಅವರು ಮನವಿಗಳನ್ನು ಲಿಖಿತ ರೂಪದಲ್ಲಿ ಬಿಟ್ಟು ಮೌಖಿಕವಾಗಿ ನೀಡುತ್ತಿರಲಿಲ್ಲ. ಮೌಖಿಕ ಸಂಪ್ರದಾಯವನ್ನು ನಂಬಿಕೊಂಡಿದ್ದ ಸಮುದಾಯದಿಂದ ಡಾ.ಬಿ.ಆರ್.ಅಂಬೇಡ್ಕರ್ ಬಂದಿದ್ದರು. ಸಮಾಜದಲ್ಲಿ ಪ್ರತಿಷ್ಠಿತ ವರ್ಗವು ಅಕ್ಷರದ (ಶಿಕ್ಷಣ) ಮೇಲೆ ಅಧಿಕಾರ ಪಡೆದಿತ್ತು. ಈ ವೈರುಧ್ಯದ ಹಿಂದಿನ ಸಮಸ್ಯೆಗಳು ಅವರಿಗೆ ಅರ್ಥವಾಗಿದ್ದವು. ಅಕ್ಷರ-ಅಧಿಕಾರಗಳ ನಡುವಿನ ಸಂಬಂಧವನ್ನು ಅವರು ಮನಗಂಡಿದ್ದರು. ಅಕ್ಷರವೇ ಅಧಿಕಾರ ಎಂಬುದು ಅವರಿಗೆ ಅರ್ಥವಾಗಿತ್ತು. ಪ್ರತಿಷ್ಠಿತರ ಮನಾಪಲಿಯಾಗಿದ್ದ ಅಕ್ಷರದ ಮೇಲೆ ಅಂಬೇಡ್ಕರ್ ಪ್ರಭುತ್ವವನ್ನು ಸಾಧಿಸಿಕೊಂಡಿದ್ದರು. ಅಕ್ಷರದ ಮೇಲೆ ಪ್ರಭುತ್ವವನ್ನು ಸಾಧಿಸಿಕೊಂಡಿದ್ದರಿಂದ ಅವರಿಗೆ ಪರಿಶಿಷ್ಟರ ಸಮಸ್ಯೆಯನ್ನು ಜಾಗತಿಕ ಮಟ್ಟಕ್ಕೆ ಒಯ್ಯುವುದು ಸಾಧ್ಯವಾಯಿತು. ಈ ಅಕ್ಷರದ ಮೇಲಿನ ಪ್ರಭುತ್ವವು ಅವರಿಗೆ ಅಪಾರ ಅಧಿಕಾರವನ್ನು ಒದಗಿಸಿತು. ಅಕ್ಷರದ ಮೇಲೆ ವೈದಿಕರು ಸಾಧಿಸಿಕೊಂಡಿದ್ದ ಮನಾಪಲಿಯನ್ನು ಅಂಬೇಡ್ಕರ್ ಮುರಿದು ಬಿಟ್ಟರು.[೬]

೫.೬ ಅಭಿವೃದ್ಧಿಯ ನಿರ್ವಚನ

ಅಭಿವೃದ್ಧಿಯ ಪದತಲದಲ್ಲಿರುವ ಪರಿಶಿಷ್ಟರನ್ನು ಗಮನದಲ್ಲಿಟ್ಟುಕೊಂಡು ನಾವು ಅಭಿವೃದ್ಧಿಯನ್ನು ನಿರ್ವಚಿಸಬೇಕಾಗುತ್ತದೆ. ಸಾಂಪ್ರದಾಯಿಕ ಅಭಿವೃದ್ಧಿ ಮೀಮಾಂಸೆಯು ಅದನ್ನು ಸಾಮಾಜಿಕತೆಯಿಂದ ಬೇರ್ಪಡಿಸಿ ನಿರ್ವಚಿಸಿಕೊಂಡು ಬಂದಿದೆ. ಇಂತಹ ಮೀಮಾಂಸೆಯಲ್ಲಿ ಜನರನ್ನು ಒಳಗೊಳ್ಳುವ ಅಭಿವೃದ್ಧಿ ಸಾಧ್ಯವಾಗುವುದಿಲ್ಲ. ಅಭಿವೃದ್ಧಿಯನ್ನು ಅಲಕ್ಷಿತರ ಪರಿಶಿಷ್ಟರ ಪದತಲದಿಂದ ಪರಿಭಾವಿಸಿಕೊಂಡರೆ ಮಾತ್ರ ಸಮಾಜದ ಎಲ್ಲರ ಸಮಸ್ಯೆಗಳು ಅರ್ಥವಾಗುತ್ತವೆ. ಇದಕ್ಕೆ ಪ್ರತಿಯಾಗಿ ಪ್ರತಿಷ್ಠಿತರ ನೆಲೆಯಿಂದ ಅದನ್ನು ಪರಿಭಾವಿಸಿಕೊಂಡರೆ ಅಲ್ಲಿ ತಳಸ್ತರದಲ್ಲಿರುವವರ ಹಿತಾಸಕ್ತಿಗಳು ಗೋಚರಿಸುವುದಿಲ್ಲ. ವರಮಾನದ ವರ್ಧನೆಯೇ ಅಭಿವೃದ್ಧಿಯೆಂಬ ಸೀಮಿತ ನೆಲೆಯ ನಿರ್ವಚನವನ್ನು ಇಂದು ಕೈಬಿಡಲಾಗಿದೆ. ಸಮಾಜದಲ್ಲಿ ಲಭ್ಯವಿರುವ ಅವಕಾಶಗಳನ್ನು ಧಾರಣೆ ಮಾಡಿಕೊಳ್ಳುವ ಜನರ ಸಾಮರ್ಥ್ಯದ ವರ್ಧನೆಯನ್ನು ಅಭಿವೃದ್ಧಿಯೆಂದು ಕರೆಯಬಹುದು. ಈ ರೀತಿಯಲ್ಲಿ ಅಭಿವೃದ್ಧಿಯನ್ನು ಪರಿಭಾವಿಸಿಕೊಂಡಾಗ ಮಾತ್ರ ಪರಿಶಿಷ್ಟರ ಹಿತಾಸಕ್ತಿಗಳು ಮುಂಚೂಣಿಗೆ ಬರುವುದು ಸಾಧ್ಯ. ಧಾರಣಾಶಕ್ತಿಯ ವರ್ಧನೆಯು ಅಭಿವೃದ್ಧಿ ಎಂದಾಗ ಅನಕ್ಷರಸ್ಥರಿಗೆ ಅಕ್ಷರ ನೀಡುವುದು ಆಧ್ಯತೆಯಾಗುತ್ತದೆ. ಆಹಾರದ ಹಕ್ಕಿನಿಂದ ವಂಚಿತರಾದವರಿಗೆ ಆಹಾರ ನೀಡುವುದು ಆಧ್ಯತೆಯಾಗುತ್ತದೆ. ಅಭಿವೃದ್ಧಿಯಲ್ಲಿ ಹೆಚ್ಚು ವಂಚಿತರಾದ ವರ್ಗವೆಂದರೆ ದಲಿತ ಮಹಿಳೆಯರು. ದಲಿತೇತರ ಮಹಿಳೆಯರ ಸಾಕ್ಷರತಾ ಪ್ರಮಾಣ ೨೦೦೧ರಲ್ಲಿ ಶೇ.೬೧.೬೬ರಷ್ಟಿದರೆ, ಪರಿಶಿಷ್ಟರ ಸಾಕ್ಷರತಾ ಪ್ರಮಾಣ ಶೇ.೪೦.೨೬ ಸಾಕ್ಷರತಾ ಅಂತರ

ಶೇ.೨೧.೪೦ ಅಂಶಗಳು ಗ್ರಾಮೀಣ ಮಹಿಳೆಯರ ಸಾಕ್ಷರತಾ ಪ್ರಮಾಣ ಶೇ.೪೮.೦ ಗ್ರಾಮೀಣ ಪರಿಶಿಷ್ಟರ ಮಹಿಳೆಯರ ಸಾಕ್ಷರತಾ ಪ್ರಮಾಣ ಶೇ.೩೭.೮೬ ಅಭಿವೃದ್ಧಿಯನ್ನು ಕೇವಲ ಬಂಡವಾಳ, ವಿದೇಶಿ ಬಂಡವಾಳ, ಉಳಿತಾಯ, ಉತ್ಪಾದನೆ, ತಂತ್ರಜಾನ, ಮುಂತಾದ ಸಂಗತಿಗಳ ನೆಲೆಯಲ್ಲಿ ನಿರ್ವಚಿಸಿಕೊಂಡರೆ ಸಾಕಾಗುವುದಿಲ್ಲ. ಈ ಸಂಗತಿಗಳ ಫಲ 'ಅಭಿವೃದ್ಧಿ' ಎನ್ನುವ ಕಾಲ ಮುಗಿದು ಹೋಗಿದೆ. ಸಮಾಜದಲ್ಲಿ ಲಭ್ಯವಿರುವ ಅವಕಾಶಗಳನ್ನು ಧಾರಣೆ ಮಾಡಿಕೊಳ್ಳಲು ಸಾಧ್ಯವಾಗದಂತೆ ಮಾಡಿರುವ ಸಾಮಾಜಿಕ ಸಾಂಸ್ಕೃತಿಕ ಗೋಡೆಗಳನ್ನು ನಾಶಮಾಡುವಂತಹ ಅಭಿವೃದ್ಧಿ ಪ್ರಣಾಳಿಕೆಯಿಂದ ಮಾತ್ರ ದಲಿತರ, ವಂಚಿತರ, ಮತ್ತು ಮಹಿಳೆಯರ ಅಧೀನತೆ ಪರಿಹಾರವಾಗಿಬಿಡುತ್ತದೆ.

೫.೭ ಸ್ವಾತಂತ್ರದಿಂದ ವಂಚಿತರು

ಭಾರತ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದೆ ಅನ್ನುವುದಕ್ಕಿಂತ ಈ ದೇಶಕ್ಕೆ ಸ್ವಾತಂತ್ರ್ಯ ಬಂದಿದೆ. ಜನರಿಗೆ ರಾಜಕೀಯ ಸ್ವಾತಂತ್ರ್ಯ ಬಂದಿದೆ. ಆದರೆ ಪರಿಶಿಷ್ಟರಿಗೆ ಅಧೀನತೆಯಿಂದ, ಆಹಾರ ಅಭದ್ರತೆಯಿಂದ, ಅನಕ್ಷರತೆಯಿಂದ, ಅವಮಾನದಿಂದ, ಬಡತನದಿಂದ ಬಿಡುಗಡೆ ದೊರೆತಿಲ್ಲ. ಸಾಮಾಜಿಕ ಸಂಕೋಲೆಯಿಂದ ಅವರಿಗೆ ಮುಕ್ತಿ ಸಾಧ್ಯವಾಗಿಲ್ಲ. ಅಭಿವೃದ್ಧಿಯು ಹರಿಯಬಿಡುವ ಅವಕಾಶಗಳನ್ನು ಧಾರಣೆ ಮಾಡಿಕೊಳ್ಳುವ ಸಾಮರ್ಥ್ಯದಿಂದ ಮತ್ತು ಸ್ವಾತಂತ್ರ್ಯದಿಂದ ಪರಿಶಿಷ್ಟರು ವಂಚಿತರಾಗಿದ್ದಾರೆ. ಅಲಕ್ಷಿತರೆಂದರೆ ಸ್ವಾತಂತ್ರ್ಯದಿಂದ ವಂಚಿತರಾದವರೆಂದೇ ಅರ್ಥ, ವರಮಾನ ಅಧಿಕಗೊಂಡು ಬಿಟ್ಟರೆ, ಉತ್ಪಾದನೆ ಏರಿಕೆಯಾಗಿ ಬಿಟ್ಟರೆ, ವಿದೇಶಿ ಬಂಡವಾಳ ಅಪಾರ ಪ್ರಮಾಣದಲ್ಲಿ ಹರಿದು ಬಂದುಬಿಟ್ಟರೆ, ದೇಶದಲ್ಲಿ ಬಿಲಿಯನೇರ್‌ಗಳು ಜಾಸ್ತಿಯಾಗಿ ಬಿಟ್ಟರೆ ಜನರಿಗೆ ಸ್ವಾತಂತ್ರ್ಯ ದೊರೆಯುವುದಿಲ್ಲ. ಈ ರೀತಿಯಲ್ಲಿ ಹರಿದು ಹೋಗುವ ಅವಕಾಶಗಳನ್ನು ದಕ್ಕಿಸಿಕೊಳ್ಳಲು ಅಗತ್ಯವಾದ ಸಾಮರ್ಥ್ಯ ಮತ್ತು ಸ್ವಾತಂತ್ರ್ಯ ಒದಗಿಸಿ ಕೊಡುವುದೇ ಅಭಿವೃದ್ಧಿ. ಅಮರ್ತ್ಯಸೇನ್ ಅವರು ತಮ್ಮ ಒಂದು ಕೃತಿಗೆ "ಸ್ವಾತಂತ್ರ್ಯವಾಗಿ ಅಭಿವೃದ್ಧಿ" ಎಂದು ಕರೆದಿದ್ದಾರೆ. ನಾವು ಒಂದು ಗಣರಾಜ್ಯವಾಗಿ ಅರವತ್ತೆಂಟು ವರ್ಷಗಳಾಗುತ್ತಾ ಬಂದಿದ್ದರೂ ನಮಗೆ ಅಸ್ಪೃಶ್ಯತೆಯನ್ನು ತೊಡೆದು ಹಾಕಲು ಸಾಧ್ಯವಾಗಿಲ್ಲ. ವೈಯಕ್ತಿಕ ಮಟ್ಟದಲ್ಲಿ ಅದನ್ನು ಬಗೆಹರಿಸಿಕೊಂಡಿರಬಹುದು. ಆದರೆ ಒಂದು ವ್ಯವಸ್ಥೆಯಾಗಿ ಅದನ್ನು ಮುಲೋತ್ಪಾಟನೆ ಮಾಡುವುದು ನಮಗೆ ಸಾಧ್ಯವಾಗಿಲ್ಲ. ಸಾಂಸ್ಥಿಕವಾಗಿ ಅದು ಇಂದಿಗೂ ಆಚರಣೆಯಲ್ಲಿದೆ. ಅದನ್ನು ಬೇರಾವುದೋ ರೂಪದಲ್ಲಿ ಆಚರಿಸುತ್ತಿರುವುದು ಕಂಡುಬರುತ್ತದೆ. ಇಂದಿಗೂ ನಮ್ಮ ಅನೇಕ ದೇವಸ್ಥಾನಗಳಲ್ಲಿ ಮಠಗಳಲ್ಲಿ ಮಹಿಳೆಯರಿಗೆ ಗರ್ಭ ಗುಡಿಯನ್ನು ಪ್ರವೇಶಿಸಿ ದೇವರನ್ನು ಮುಟ್ಟಿ ಪೂಜೆ ಮಾಡುವ ಅಧಿಕಾರವಿಲ್ಲ. ಅಂದ ಮೇಲೆ ದಲಿತರಿಗೆ ಸಂಬಂಧಿಸಿದಂತೆ ಅಸ್ಪೃಶ್ಯತೆ ನಿವಾರಣೆಯಾಗಿದೆ ಎಂದು ತಿಳಿದರೆ ಅದು ಮೂರ್ಖತನವಾದೀತು. ಇಂತಹ ಅನಿಷ್ಟಗಳನ್ನು ನಿವಾರಣೆ ಮಾಡಲು ನಮ್ಮ ರಾಜ್ಯವು ಶ್ರೀಮಂತವಾಗಬೇಕಾಗಿಲ್ಲ. ಅದಕ್ಕೆ ವಿದೇಶಿ ಬಂಡವಾಳಬೇಕಾಗಿಲ್ಲ. ನಮ್ಮ ನೀತಿಗಳು ಬದಲಾಗಬೇಕು. ಅಭಿವೃದ್ಧಿಯ ಆರಂಭ ನಮ್ಮ ರಾಜ್ಯದಲ್ಲಿ ಅಭಿವೃದ್ಧಿಗೆ ಸಂಬಂಧಿಸಿದಂತೆ ವರಮಾನ ವ್ಯಸನದಿಂದ ಮತ್ತು ಉದ್ದಿಮೆ ವ್ಯಸನದಿಂದ ಹೊರಬರಲಾಗಿಲ್ಲ. ಅದನ್ನು ಸಾಮಾಜಿಕ

[illegible]

[illegible]

ನೆಲೆಯಿಂದ ಪರಿಭಾವಿಸಿಕೊಳ್ಳುವುದು ಸಾಧ್ಯವಾಗಿಲ್ಲ. ಅಭಿವೃದ್ಧಿಯ ಮೂಲದ್ರವ್ಯ ಜನರು ಎಂಬುದನ್ನು ಸಂಬಂಧಿಸಿದವರಿಗೆ ಮನವರಿಕೆ ಮಾಡಿಕೊಡಬೇಕಾಗಿದೆ. ಒಟ್ಟಾರೆ ಅಭಿವೃದ್ಧಿಯ ಆರಂಭವು ಪರಿಶಿಷ್ಟರ ಪದತಲದಿಂದ ನಡೆಯಬೇಕು. ಯಾವುದನ್ನು ಡಾ.ಬಿ.ಆರ್. ಅಂಬೇಡ್ಕರ್ 'ರಾಜಕೀಯ ಸ್ವಾತಂತ್ರ್ಯ ಮತ್ತು ಸಾಮಾಜಿಕ ಅಸಮಾನತೆ'೭ ಎಂಬ ವಿಕೃತಿಯನ್ನು ತೋರಿಸಿದ್ದಾರೋ ಅದನ್ನು ತೊಡೆದು ಹಾಕದ ಹೊರತು ದಲಿತರಿಗೆ ಬಿಡುಗಡೆ ಅಸಾಧ್ಯ. ಅಭಿವೃದ್ಧಿಯು ಯಥೇಚ್ಚವಾಗಿ ಹರಿಯುತ್ತಿರಬಹುದು. ಅವುಗಳನ್ನು ಧಾರಣೆಮಾಡಿಕೊಳ್ಳಲು ಅಗತ್ಯವಾದ ಜನರ ಸಾಮರ್ಥ್ಯ ಮತ್ತು ಸ್ವಾತಂತ್ರ್ಯಗಳನ್ನು ನೀಡುವುದರ ಬಗ್ಗೆ ಚಿಂತಿಸಬೇಕಾಗಿದೆ. "ಆರಂಭ" ಎನ್ನುವುದಕ್ಕೆ ಕನ್ನಡದಲ್ಲಿ ಬೇಸಯ-ವ್ಯವಸಾಯ ಎನ್ನುವ ಅರ್ಥವಿದೆ. ಒಂದು ವಿಧದಲ್ಲಿ ಗ್ರಾಮೀಣರು ಆರಂಭ ಎನ್ನುವುದನ್ನು ಬದುಕು ಎಂಬ ಅರ್ಥದಲ್ಲೂ ಬಳಸುತ್ತಾರೆ.

ಅಭಿವೃದ್ಧಿಯ ಆರಂಭವು ಪರಿಶಿಷ್ಟರ ಪದತಲದಿಂದ ನಡೆಯುವಂತಾಗಬೇಕು. ಇದುವರೆಗೂ ಯಾವುದನ್ನು ನಾವು ಪ್ರಧಾನಧಾರೆ ಅಭಿವೃದ್ಧಿ ಪ್ರಣಾಳಿಕೆಯೆಂದು ಕರೆದಿದ್ದೇವೆಯೋ ಅದು ಅಲಕ್ಷಿತರಿಗೆ ಪರಿಶಿಷ್ಟರಿಗೆ ಅಲಿಪ್ತವಾಗುಳಿದಿದೆ. ದಲಿತರನ್ನು ಅಲಾಯದ ಮಾಡಿಕೊಂಡು ಅಭಿವೃದ್ಧಿ ನಡೆದಿದೆ. ಇದು ಬದಲಾಗಬೇಕು. ಇದಕ್ಕೆ ದಲಿತರು ಸಂಘಟನೆಯಾಗಬೇಕು. ನಮ್ಮ ನೆಲೆಯಿಂದಲೇ ಅಭಿವೃದ್ಧಿಯ ಆರಂಭ ನಡೆಯಬೇಕೆಂದು ಅಲಕ್ಷಿತರು ಒತ್ತಾಯಿಸಬೇಕು. ಅಭಿವೃದ್ಧಿ ಅನ್ನುವುದು ದಾನ-ದತ್ತಿ-ಭಿಕ್ಷೆಯಲ್ಲ. ಅದು ಜನರ ಹಕ್ಕು. ಅದು ದಲಿತರ ಮಾನವ ಹಕ್ಕು. ಸರ್ಕಾರವು ಅಭಿವೃದ್ಧಿಯನ್ನು ದಾನ ಎಂದು ತಿಳಿದಿದ್ದರೆ ಅದು ತಪ್ಪು ಎಂದು ತಿಳಿಸಿ ಹೇಳಬೇಕಾಗಿದೆ. ಪರಿಶಿಷ್ಟರ ಪರಿಶ್ರಮಕ್ಕೆ ಪ್ರತಿಫಲ ದೊರೆಯಲೇಬೇಕು. ಇದಕ್ಕಾಗಿ ಪರಿಶಿಷ್ಟರ ಪದತಲದಿಂದ ಅಭಿವೃದ್ಧಿಯು ಆರಂಭ ನಡೆಯಬೇಕು.

೫.೮ ರಾಯಚೂರು ಜಿಲ್ಲೆಯ ದುಸ್ಥಿತಿಯ ಚಿತ್ರಣ

ಈಗಾಗಲೇ ಹೇಳಿದಂತೆ ಇದು ಅನೇಕ ರೀತಿಯಿಂದ ಹಿಂದುಳಿದಿರುವಿಕೆಗೆ ಒಳಗಾಗಿದೆ. ಸಾಂಪ್ರದಾಯಿಕವಾದ ವರಮಾನದ ದೃಷ್ಟಿಯಿಂದ ಅದು ತೀರಾ ಹಿಂದುಳಿದಿದೆ. ಕೃಷಿಯಾಗಲಿ, ಕೈಗಾರಿಕೆಯಾಗಲಿ, ಸಾರಿಗೆಯಾಗಲಿ, ಬ್ಯಾಂಕಿಂಗ್ ಆಗಲಿ ಎಲ್ಲದರಲ್ಲೂ ಅಲ್ಲಿನ ಜನರ ಧಾರಣಾ ಸಾಮರ್ಥ್ಯವು ಪಾತಾಳದಷ್ಟು ಕೆಳಮಟ್ಟದಲ್ಲಿದೆ. ಅಮರ್ತ್ಯಸೇನ್ ರೂಪಿಸಿರುವ ಮಾನವ ಅಭಿವೃದ್ಧಿ ಮಾನದಂಡಗಳಾದ ಶಿಕ್ಷಣ, ಆರೋಗ್ಯ, ಸಾಕ್ಷರತೆ, ಮಕ್ಕಳ ಮತ್ತು ಮಹಿಳೆಯರ ಪೌಷ್ಟಿಕತೆ, ಲಿಂಗಸಮಾನತೆ, ಆಹಾರಭದ್ರತೆ ಮುಂತಾದವುಗಳು ಮೂಲಕ ಮಾಪನ ಮಾಡಿದರೆ ಅದರಲ್ಲಿಯೂ ಅದರ ದುಸ್ಥಿತಿಯು ತೀವ್ರತರದ್ದಾಗಿದೆ. ಕರ್ನಾಟಕದಲ್ಲಿ ಜನಸಂಖ್ಯೆ ಬೆಳವಣಿಗೆಯನ್ನು ಅತ್ಯಂತ ಯಶಸ್ವಿಯಾಗಿ ತಡೆಗಟ್ಟಲಾಗಿದೆ. ಸರ್ಕಾರವು ಹೇಳುವ ಜನಸಂಖ್ಯೆಯ ಸಮಸ್ಯೆಯೇನಾದರೂ ಕರ್ನಾಟಕದಲ್ಲಿ ಇದ್ದರೆ ಅದು ರಾಯಚೂರು ಜಿಲ್ಲೆಯಲ್ಲಿದೆ. ಇಂದಿನ ಸರ್ಕಾರವು ಗೊತ್ತಿಲ್ಲದೆ ಅದನ್ನು ರಾಜ್ಯಮಟ್ಟದ ಸಮಸ್ಯೆಯೆನ್ನುವ ರೀತಿಯಲ್ಲಿ ಮಾತನಾಡುತ್ತಿದೆ. ಈ ಜಿಲ್ಲೆಯಲ್ಲಿ ನಮಗೆ ಜನಸಂಖ್ಯೆಯ ಬೆಳವಣಿಗೆಯ ಗಡಿಯನ್ನು ನಿಯಂತ್ರಿಸುವುದು ಸಾಧ್ಯವಾಗಿಲ್ಲ. ಆದರೆ ಅದರ

ಮೇಲೆ ಹಣವನ್ನು ಮಾತ್ರ ಖರ್ಚು ಮಾಡಲಾಗುತ್ತಿದೆ. ಜನಸಂಖ್ಯೆ ಎನ್ನುವುದು ಆರ್ಥಿಕ ಅಭಿವೃದ್ಧಿಯ ದೃಷ್ಟಿಯಿಂದ ಸರ್ಕಾರಗಳಿಗೆ ಸಮಸ್ಯೆಯಾಗಿ ಕಾಡುತ್ತಿರುವುದು ಮಾತ್ರ ಕಂಡುಬರುತ್ತಿದೆ. ಜನಸಂಖ್ಯೆಯನ್ನು ಮಾನವ ಸಂಪನ್ಮೂಲವಾಗಿ ಪರಿವರ್ತಿಸಲು ಸಾಧ್ಯವಾಗುತ್ತಿಲ್ಲವೆಂದು ಹೇಳಬಹುದಾಗಿದೆ.

೫.೯ ವರಮಾನ ಸಂಬಂಧಿ ಬಡತನ

ಅಭಿವೃದ್ಧಿಯನ್ನು ಲಗಾಯ್ತಿನಿಂದ ವರಮಾನದಲ್ಲಿನ ವಾರ್ಷಿಕ ಶೇಕಡವಾರು ಏರಿಕೆ ಪ್ರಮಾಣವು ಅಭಿವೃದ್ಧಿಯ ರೂಢಿಗತವಾದ ಮಾಪನವಾಗಿದೆ. ಈ ವರಮಾನದ ಮಾನದಂಡದಲ್ಲಿ ರಾಯಚೂರು ಜಿಲ್ಲೆ ಯಾವ ನೆಲೆಯಲ್ಲಿ ನಿಲ್ಲುತ್ತದೆ? ಎನ್ನುವುದು ಇಲ್ಲಿ ಚರ್ಚೆಗೆ ಒಳಪಡಿಸಲಾಗಿದೆ. ಈ ಜಿಲ್ಲೆಯ ತಲಾವರಮಾನವು ಚಾಲ್ತಿ ಬೆಲೆಗಳಲ್ಲಿ ೧೯೯೩-೯೪ರಲ್ಲಿ ರೂ.೬೨೭೫ರಷ್ಟಿತ್ತು. ಅಂದು ಅದರ ಒಟ್ಟು ಆಂತರಿಕ ಉತ್ಪನ್ನವು ರೂ. ೧೫೨೧ ಕೋಟಿಯಷ್ಟಿತ್ತು. ಅದು ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ ಶೇ. ೩.೭೦ರಷ್ಟಿತ್ತು. ಆದರೆ ಈ ಜಿಲ್ಲೆಯು ರಾಜ್ಯದ ಜನಸಂಖ್ಯೆಯಲ್ಲಿ ಪಡೆದಿದ್ದ ಪಾಲು ಶೇ.೫.೧೩ ಇದರಿಂದ ತಿಳಿದು ಬರುವ ಸಂಗತಿಯೆಂದರೆ ಅದು ಜನಸಂಖ್ಯೆಯಲ್ಲಿ ಎಷ್ಟು ಪಾಲು ಪಡೆದಿದೆಯೋ ಅದಕ್ಕಿಂತ ಅತ್ಯಂತ ಕಡಿಮೆ ಪಾಲನ್ನು ವರಮಾನದಲ್ಲಿ ಪಡೆದಿದೆ. ಇದು ೧೯೯೯-೨೦೦೦ದಲ್ಲಿ ಬದಲಾವಣೆಯನ್ನು ನೋಡಿದರೆ, ಇಲ್ಲಿಯೂ ಕೂಡ ಅದೇ ರೀತಿಯಾಗಿ ಮುಂದುವರೆದಿದೆ. ಬದಲಾಗುವುದಕ್ಕೆ ಪ್ರತಿಯಾಗಿ ಅದು ಮತ್ತಷ್ಟು ಉಲ್ಬಣಗೊಂಡಿದೆ. ಅದರ ಸ್ಥಿತಿಯು ಬದಲಾಗುವುದಕ್ಕೆ ಪ್ರತಿಯಾಗಿ ಅದರ ವರಮಾನ ಸಂಬಂಧಿ ಸ್ಥಾನವು ಇಳಿಮುಖಿಯಾಗಿರುವುದು ಆತಂಕಕ್ಕೆ ಕಾರಣವಾಗುವ ಸಂಗತಿಯಾಗಿದೆ.

ಈ ಜಿಲ್ಲೆಯು ೧೯೯೯-೨೦೦೦ದಲ್ಲಿನ ತಲಾ ವರಮಾನವು ರೂ.೧೧೩೪೪ ಅದರ ಒಟ್ಟು ಉತ್ಪನ್ನದಲ್ಲಿ ಜಿಲ್ಲೆಯ ಪಾಲು ಶೇ.೧.೯೧ ಅಂದರೆ ೧೯೯೩-೯೪ರಲ್ಲಿ ಅದು ರಾಜ್ಯದ ವರಮಾನದಲ್ಲಿ ಎಷ್ಟು ಪಾಲು ಪಡೆದಿತ್ತೋ (ಶೇ.೩.೭೦) ಅದಕ್ಕಿಂತ ೧೯೯೯-೨೦೦೦ದಲ್ಲಿ ಅದರ ಪಾಲು (ಶೇ.೧.೯೧) ಕಡಿಮೆಯಾಗಿದೆ. ಅಂದರೆ ಪ್ರಾದೇಶಿಕ ಅಸಮಾನತೆಯು ರಾಯಚೂರು ಜಿಲ್ಲೆಯ ದೃಷ್ಟಿಯಿಂದ ಉಲ್ಬಣಗೊಂಡಿದೆ. ಈ ಜಿಲ್ಲೆಯ ತಲಾ ವರಮಾನವು ೧೯೯೩-೯೪ರಲ್ಲಿ ರಾಜ್ಯ ತಲಾ ವರಮಾನದ ಶೇ.೭೨.೦೭ರಷ್ಟಿತ್ತು. ಇದು ೧೯೯೯-೨೦೦೦ದಲ್ಲಿ ಶೇ.೬೧.೧೧ರಷ್ಟಾಗಿದೆ. ಇದರ ಒಟ್ಟು ತಾತ್ಪರ್ಯವೆಂದರೆ ಜಿಲ್ಲೆಯ ಅಭಿವೃದ್ಧಿಯು ಸಾಪೇಕ್ಷವಾಗಿ ಕುಸಿಯುತ್ತಾ ನಡೆದಿದೆ. ಜನರ ಬದುಕು ಅಲ್ಲಿ ಸಮೃದ್ಧವಾಗುವುದಕ್ಕೆ ಪ್ರತಿಯಾಗಿ ಕ್ಷೀಣಿಸುತ್ತಿದೆ. ಯಾವ ದಿಕ್ಕಿನಿಂದ ನೋಡಿದರೂ ಅಲ್ಲಿ ನಮಗೆ ಚೈತನ್ಯ, ಅಭಿವೃದ್ಧಿಯ ಕನಸು ಕಂಡುಬರುತ್ತಿಲ್ಲ.

ಇಂದಿನ ಸ್ಥಿತಿಗತಿ

ಈ ಜಿಲ್ಲೆಯ ಇಂದಿನ ಪರಿಸ್ಥಿತಿಯು ಹೇಗಿದೆ ಎನ್ನುವುದನ್ನು ಕುರಿತು ಇಲ್ಲಿ ಚರ್ಚಿಸಲಾಗಿದೆ. ಈ ಜಿಲ್ಲೆಯ ತಲಾ ವರಮಾನವು ೨೦೦೬-೦೭ರಲ್ಲಿ ರೂ ೨೦,೭೩೧ರಷ್ಟಾಗಿದೆ. ಇದು ರಾಜ್ಯ ಸರಾಸರಿಯ ಶೇ.೫೮.೪೪ರಷ್ಟಾಗಿದೆ. ಈ ಜಿಲ್ಲೆಯ ಒಟ್ಟು ಆಂತರಿಕ ಉತ್ಪನ್ನವು ೨೦೦೬-೦೭ರಲ್ಲಿ ರೂ.೩೭೧೦ ಕೋಟಿಯಷ್ಟಿತ್ತು. ಇದು ರಾಜ್ಯದ ವರಮಾನದ ಶೇ.೧.೮೪ರಷ್ಟಾಗಿದೆ.

ಒಟ್ಟಾರೆ ಸಮಗ್ರ ದೃಷ್ಟಿಯಿಂದ ನೋಡಿದಾಗ ಜಿಲ್ಲೆಯ ವರಮಾನದ ಸ್ಥಿತಿಗತಿಯು ದಶಕದಿಂದ ದಶಕಕ್ಕೆ ಕುಸಿಯುತ್ತಾ ಸಾಗಿದೆ. ರಾಜ್ಯದ ವರಮಾನದಲ್ಲಿ ಜಿಲ್ಲೆಯ ವರಮಾನದ ಪ್ರಮಾಣವು ೧೯೯೩-೯೪ರಲ್ಲಿ ಶೇ.೩.೭೦ರಷ್ಟಿದ್ದುದು ೧೯೯೯-೨೦೦೦ದಲ್ಲಿ ಶೇ.೧.೯೧ಕ್ಕಿಳಿದಿದೆ. ಮತ್ತೆ ಅದು ೨೦೦೬-೦೭ರಲ್ಲಿ ಶೇ.೧.೮೪ಕ್ಕಿಳಿದಿದೆ. ಅದೇ ರೀತಿಯಾಗಿ ಅದರ ತಲಾ ವರಮಾನವು ರಾಜ್ಯದ ತಲಾ ವರಮಾನಕ್ಕೆ ಸಾಪೇಕ್ಷವಾಗಿ ಕ್ರಮವಾಗಿ ೧೯೯೩-೯೪ರಲ್ಲಿ ಶೇ. ೭೨.೦೭ರಷ್ಟಿದ್ದುದು ೧೯೯೯-೩೦೦೦ದಲ್ಲಿ ಶೇ.೧.೧೧ಕ್ಕಿಳಿದಿದೆ. ಇದು ೨೦೦೬-೦೭ರಲ್ಲಿ ಮತ್ತೆ ಶೇ.೫೮.೪೪ರಷ್ಟಾಗಿದೆ. ಅಂದರೆ ನಿರಂತರವಾಗಿ ಜಿಲ್ಲೆಯ ಸ್ಥಾನವು ಕೆಳಮಟ್ಟಕ್ಕಿಳಿಯುತ್ತಾ ನಡೆದಿದೆ. ಈ ಕಾರಣದಿಂದ ಜಿಲ್ಲೆಯು ವರಮಾನದ ದೃಷ್ಟಿಕೋನದಿಂದ ಸಹ ತೀರಾ ದುಸ್ಥಿತಿಯನ್ನು ಅನುಭವಿಸುತ್ತಿದೆ. ಇದು ಅಭಿವೃದ್ಧಿಯ ಕಥೆಯಲ್ಲ. ಇದು ಕೇವಲ ವ್ಯಥೆಯೆಂದು ಹೇಳಿದ್ದಾರೆ. **(ಟಿ.ಆರ್.ಚಂದ್ರಶೇಖರ್, ೨೦೦೯)** ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಅದನ್ನು ನಾವು "ಅವರೋಹಣವಾದಿ ಅಭಿವೃದ್ಧಿ"ಯೆಂದು ಹೇಳಬಹುದು.

೫.೧೦ ಸಾಕ್ಷರತೆ, ಶಿಕ್ಷಣ, ಆರೋಗ್ಯ, ಪೌಷ್ಟಿಕತೆ

ಯುಎನ್‌ಡಿಪಿ(UNDP) ಪ್ರಕಟಿಸಿದ ಮೊದಲ ಮಾನವ ಅಭಿವೃದ್ಧಿ ವರದಿಯಲ್ಲಿ (೧೯೯೦) ಬರೆಯುತ್ತಾ ಅದರ ಪ್ರಮುಖ ರೂವಾರಿ ಮಹಬೂಬ್-ಎಲ್-ಹಕ್ 'ವರಮಾನದ ಮೊತ್ತವೆ ಜನರ ಬದುಕಲ್ಲ'ವೆಂದು ಸ್ಪಷ್ಟವಾಗಿ ಹೇಳಿದ್ದಾನೆ. ಇಂದು ಅಭಿವೃದ್ಧಿಯನ್ನು ಬಂಡವಾಳ ಅಥವಾ ವರಮಾನದ ಅಥವಾ ತಂತ್ರಜ್ಞಾನ ಮುಂತಾದ ಸಂಗತಿಗಳನ್ನು ಆಧರಿಸಿ ಅಳೆಯುವುದಕ್ಕೆ ಪ್ರತಿಯಾಗಿ ಅದನ್ನು ಜನ ಧಾರಣಾ ಸಾಮರ್ಥ್ಯವನ್ನು ನಿರ್ಧರಿಸುವ ಸಾಕ್ಷರತೆ, ಪ್ರಾಥಮಿಕ ಶಿಕ್ಷಣ, ಆರೋಗ್ಯ, ಮಹಿಳೆಯರ ಪೌಷ್ಟಿಕತೆ, ಲಿಂಗ ಸಮಾನತೆ ಮುಂತಾದ ಸಂಗತಿಗಳಿಂದ ಮಾಪನ ಮಾಡುವುದು ರೂಢಿಗೆ ಬಂದಿದೆ. ಈ ಮಾನದಂಡದಿಂದ ನೋಡಿದಾಗಲೂ ರಾಯಚೂರು ಜಿಲ್ಲೆಯು ಅತ್ಯಂತ ದುರ್ಬಲ ಸ್ಥಿತಿಯಲ್ಲಿರುವುದು ತಿಳಿಯುತ್ತದೆ. ಕರ್ನಾಟಕದ ಸಾಕ್ಷರತಾ ಪ್ರಮಾಣದಲ್ಲಿ ಕಟ್ಟ ಕಡೆಯ ಜಿಲ್ಲೆಯೆಂದರೆ ರಾಯಚೂರು ಜಿಲ್ಲೆ. ಅದರ ಸ್ಥಾನವು ೧೯೯೧ರಲ್ಲಿ ಕೊನೆಯದು (ಶೇ.೩೪.೩೪) ಮತ್ತು ೨೦೦೧ರಲ್ಲಿಯೂ (ಶೇ.೪೮.೮೧) ಅದರ ಸ್ಥಾನವು ಕಡೆಯದಾಗಿದೆ. ಈ ಜಿಲ್ಲೆಯ ಸಾಕ್ಷರತಾ ಪ್ರಮಾಣವು ೧೯೯೧ರಲ್ಲಿ ರಾಜ್ಯದಲ್ಲಿನ ಸಾಕ್ಷರತಾ ಪ್ರಮಾಣದ ಶೇ.೬೧.೨೮ರಷ್ಟಿದ್ದುದು ೨೦೦೧ರಲ್ಲಿ ಶೇ.೭೩.೨೪ರಷ್ಟಾಗಿದೆ. ಇಲ್ಲಿರುವಷ್ಟು ಸುಧಾರಣೆ ಕಂಡು ಬಂದಿದೆ. ಈ ಜಿಲ್ಲೆಯಲ್ಲಿ ಮಹಿಳೆಯರ ಸಾಕ್ಷರತಾ ಪ್ರಮಾಣ ೨೦೦೧ರಲ್ಲಿ ಶೇ.೩೫.೯೩ ಗ್ರಾಮೀಣ ಮಹಿಳೆಯರ ಸಾಕ್ಷರತಾ ಪ್ರಮಾಣ ೨೦೦೧ರಲ್ಲಿ ಶೇ.೨೮.೮೬. ಈ ಜಿಲ್ಲೆಯಲ್ಲಿ ಗ್ರಾಮೀಣರ ಪ್ರಮಾಣವು ಶೇ.೭೫ರಷ್ಟಿರುವುದರಿಂದ ಗ್ರಾಮೀಣಕ್ಕೆ ಸಂಬಂಧಿಸಿದ ಮಾಹಿತಿಯು ಅಭಿವೃದ್ಧಿ ಕುರಿತ ಚರ್ಚೆಯಲ್ಲಿ ಮುಖ್ಯವಾಗುತ್ತದೆ. ರಾಜ್ಯಮಟ್ಟದಲ್ಲಿ ಗ್ರಾಮೀಣವಾಸಿಗಳ ಪ್ರಮಾಣ ೨೦೦೧ರಲ್ಲಿ ಶೇ.೬೬.೦೧ ಮಾತ್ರ ಆಗಿರುತ್ತದೆ.

ಈ ಜಿಲ್ಲೆಯಲ್ಲಿನ ಮಹಿಳೆಯರ ಮತ್ತು ಮಕ್ಕಳ ಅಪೌಷ್ಟಿಕತೆ ಬಗ್ಗೆ ಇಡಿ ಭಾರತದಲ್ಲೇ ಹೆಸರು ಮಾಡಿದ ಜಿಲ್ಲೆಯಾಗಿದೆ. ಇದು ಈ ಜಿಲ್ಲೆಯ ದೊಡ್ಡ ದುರಂತ ವ್ಯಥೆಯೆಂದೇ

ಹೇಳಬಹುದಾಗಿದೆ. ಈ ಜಿಲ್ಲೆಯ ಶೇ.೬೦ ರಿಂದ ೭೦ರಷ್ಟು ಕುಟುಂಬಗಳು ಇಂದಿಗೂ ಐಯೋಡಿನ್ ರಹಿತ ಉಪ್ಪನ್ನು ಸೇವಿಸುತ್ತಿವೆ ಎಂಬುದು ಇತ್ತೀಚಿನ ಅಧ್ಯಯನವಾದ "ಕರ್ನಾಟಕ ರಾಜ್ಯದ ಮಕ್ಕಳ ಅಪೌಷ್ಟಿಕತೆಯನ್ನು ತಡೆಗಟ್ಟುವುದರ ಬಗೆಗಿನ ಸಮಗ್ರ ಕಾರ್ಯಯೋಜನೆಯ ವರದಿ ೨೦೧೨"[೧೦] ದೃಢಪಟ್ಟಿದೆ. ಏಕೆಂದರೆ ಅದು ಒಂದೆರಡು ರೂಪಾಯಿಗೆ ಅತ್ಯಂತ ಕಡಿಮೆ ಬೆಲೆಯಲ್ಲಿ ದೊರೆಯುತ್ತದೆ! ಇಲ್ಲಿ ಶೇ ೨೫ ರಿಂದ ೩೦ರಷ್ಟು ಗರ್ಭಿಣಿಯರು ಆರೋಗ್ಯ ಕೇಂದ್ರದಲ್ಲಿ ನೋಂದಾವಣೆಯಾಗುತ್ತಿಲ್ಲ. ಪೋಲಿಯೋ ಹನಿಗಳಿಂದ ರೋಗ ಬರುತ್ತದೆಯೆಂದು ಜನರು ತಿಳಿದುಕೊಂಡಿದ್ದಾರೆ. ಇಂದಿಗೂ ಜನರು ಮಕ್ಕಳನ್ನು ಪೋಲಿಯೋ ಅಭಿಯಾನ ಸಪ್ತಾಹದಂದು ಬಚ್ಚಿಡುತ್ತಾರೆ. ಜನರಿಗೆ ಪೋಲಿಯೊ ಬಗ್ಗೆ ಸರಿಯಾದ ತಿಳುವಳಿಕೆ ಇಲ್ಲದಿರುವುದು ಅಷ್ಟೇ ಅಲ್ಲ ಇದಕ್ಕೆಲ್ಲ ಮುಖ್ಯವಾದ ಅಕ್ಷರ ಸಂಸ್ಕೃತಿಯ ಕೊರತೆಯೇ ಕಾರಣವಾಗಿದೆ.

೫.೧೧ ಲಿಂಗಸಂಬಂಧಿ ಸಾಕ್ಷರತಾ ಅಂತರ

ಅಭಿವೃದ್ಧಿಯ ಗುಣಮಟ್ಟವನ್ನು ಮಾಪನ ಮಾಡುವಾಗ ವರಮಾನ, ಉತ್ಪನ್ನ, ಬಂಡವಾಳ, ತಂತ್ರಜ್ಞಾನ, ಉತ್ಪಾದನೆ ಹಾಗೂ ಆದರೂ ಇವುಗಳಿಗೆಲ್ಲಾ ಕರ್ತೃವೆಂದು ಬಿಂಬಿತವಾಗಿರುವ ಪುರುಷರನ್ನು ಕೇಂದ್ರವಾಗಿಟ್ಟುಕೊಂಡು ಮುಂತಾದ ಜೊತೆಗೆ ಮಹಿಳೆಯರ ಸ್ಥಿತಿಗತಿಯನ್ನು ಪರಿಗಣಿಸಲಾಗುತ್ತಿದೆ. ಇದಕ್ಕೆ ಪ್ರಮುಖವಾದ ಮತ್ತು ಸರಳವಾದ ಕಾರಣವೆಂದರೆ ಅವರು ಜನಸಂಖ್ಯೆಯಲ್ಲಿ ಸರಿಸುಮಾರು ಶೇ.೫೦ರಷ್ಟಿದ್ದಾರೆ ಮತ್ತು ದುಡಿಮೆಗಾರರಲ್ಲಿ ಶೇ.೩೫ರಷ್ಟಿದ್ದಾರೆ. ರಾಯಚೂರು ಜಿಲ್ಲೆಯಲ್ಲಿ ಮಹಿಳೆಯರ ಮತ್ತು ಪುರಷರ ಸಾಕ್ಷರತೆ ಪ್ರಮಾಣಗಳ ನಡುವೆ ಅಂತರ ೧೯೯೧ರಲ್ಲಿ ಶೇ.೨೫.೦೫ರಷ್ಟಿದ್ದುದು, ೨೦೦೧ರಲ್ಲಿ ಅದು ಶೇ.೨೫.೫೯ರಷ್ಟು ಅಂಶಗಳಷ್ಟಾಗಿದೆ. ಸಾಕ್ಷರತೆಯಲ್ಲಿ ಲಿಂಗಸಂಬಂಧಿ ಅಸಮಾನತೆಯು ರಾಜ್ಯಮಟ್ಟದಲ್ಲಿ ಇದೇ ಅವಧಿಯಲ್ಲಿ ಶೇ.೨೨.೯೨ ಅಂಶಗಳಷ್ಟಿದ್ದುದು ೨೦೦೧ರಲ್ಲಿ ಶೇ.೧೯.೨೩ ಅಂಶಗಳಷ್ಟಕ್ಕೆ ಇಳಿದಿದೆ. ಈ ದೃಷ್ಟಿಯಿಂದ ಪರಿಶೀಲಿಸಿದಾಗ ರಾಯಚೂರಿನಲ್ಲಿ ಲಿಂಗ ಅಸಮಾನತೆಯು ತೀವ್ರ ಸ್ವರೂಪದಲ್ಲಿರುವುದು ಕಂಡುಬರುತ್ತದೆ.

ಸಾಕ್ಷರತೆಯ ಸಾಮಾಜಿಕ ನೆಲೆ

ಅಭಿವೃದ್ಧಿಯು ಇಂದು ವಿವಿಧ ಆಯಾಮಗಳಲ್ಲಿ ಚರ್ಚಿತವಾಗುತ್ತಿದೆ. ಅದು ವಿಸ್ತೃತವಾದ ಅರ್ಥವನ್ನು ಪರಿಭಾವಿಸಿಕೊಂಡಿದೆ. ಮೇಲೆ ನಾವು ಸಾಕ್ಷರತೆ ಕುರಿತಂತೆ ಇಡಿಯಾಗಿ ಪರಿಭಾವಿಸಿಕೊಂಡು ಚರ್ಚೆ ಮಾಡಿದ್ದೇವೆ. ಇದು ಸರಿಯಾದ ಕ್ರಮವಲ್ಲ. ಅದನ್ನು ಬಿಡಿಬಿಡಿಯಾಗಿ ಪರಿಶೀಲಿಸುವ ಅಗತ್ಯವಿದೆ. ಹಿಂದಿನ ಕಂಡಿಕೆಯಲ್ಲಿ ಅದನ್ನು ಲಿಂಗಸಂಬಂಧಗಳ ಆಯಾಮದಲ್ಲಿ ಪರಿಶೀಲಿಸಲಾಗಿದೆ. ಈಗ ಅದನ್ನು ಸಾಮಾಜಿಕವಾಗಿ ನಿಕೃಷ್ಟೀಕರಣಕ್ಕೆ ಒಳಗಾಗಿರುವ ಜನರ ನೆಲೆಯಲ್ಲಿ ನೋಡಬೇಕು. ರಾಯಚೂರು ಜಿಲ್ಲೆಯ ಪರಿಶಿಷ್ಟ ಜಾತಿಯಲ್ಲಿ ೨೦೦೧ರಲ್ಲಿ ಸಾಕ್ಷರತಾ ಪ್ರಮಾಣ ಶೇ.೩೮.೭೬ ಪರಿಶಿಷ್ಟ ಜಾತಿ ಮಹಿಳೆಯರ ಸಾಕ್ಷರತಾ ಪ್ರಮಾಣ ಶೇ ೨೬.೦೯

ಪರಿಶಿಷ್ಟ ಪಂಗಡದ ಸಾಕ್ಷರತಾ ಪ್ರಮಾಣ ಶೇ.೨೯.೦೧ ಇಲ್ಲಿ ಪರಿಶಿಷ್ಟ ಪಂಗಡದ ಮಹಿಳೆಯರ ಸಾಕ್ಷರತಾ ಪ್ರಮಾಣ ಶೇ.೧೬.೯೧ ಈ ಸಮುದಾಯಗಳ ರಾಜ್ಯಮಟ್ಟದಲ್ಲಿರುವ ಸಾಕ್ಷರತಾ ಪ್ರಮಾಣಕ್ಕಿಂತ ರಾಯಚೂರು ಜಿಲ್ಲೆಯಲ್ಲಿ ಅತ್ಯಂತ ಕೆಳಮಟ್ಟದಲ್ಲಿವೆ. ಅಭಿವೃದ್ಧಿಯ ಸಾಮಾಜಿಕ ನೆಲೆಗಳನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುವುದು ಅವಶ್ಯಕ.

ಪ್ರಾಥಮಿಕ ಶಿಕ್ಷಣ

ಅಭಿವೃದ್ಧಿಯಲ್ಲಿ ಇದರ ಪಾಲು ಬಹು ಮುಖ್ಯವಾಗಿದೆ. "ಒಂದು ಪದದಲ್ಲಿ ಅಮೇರಿಕೆಯ ಆರ್ಥಿಕ ಯಶಸ್ಸನ್ನು ವರ್ಣಿಸಲು ಯಾರಾದರೂ ಕೇಳಿದರೆ ನಾನು ಅದನ್ನು ಶಿಕ್ಷಣ"ವೆಂದು ಹೇಳುತ್ತೇನೆಂದು ನೊಬಲ್ ಪ್ರಶಸ್ತಿ ವಿಜೇತ ಅರ್ಥಶಾಸ್ತ್ರಜ್ಞ ಮತ್ತು ಅಂಕಣ ಬರಹಗಾರರಾದ ಪಾಲ್ ಕೃಗ್‌ಮನ್ ಬರೆದಿದ್ದಾನೆ. (ದಿ ಹಿಂದು ೯.೧೦.೨೦೦೯) ಅವರು ಅಲ್ಲಿನ ಶಿಕ್ಷಣ ಕ್ರಾಂತಿಯ ಬಗ್ಗೆ ಮಾತನಾಡುತ್ತಾರೆ. ಬಹು ವಿಷಾದದ ಸಂಗತಿಯೆಂದರೆ ಈ ಬಗ್ಗೆ ನಮ್ಮಲ್ಲಿ ಯಾವ ರಾಜಕಾರಣಿಯೂ ಸೊಲ್ಲೆತ್ತುವುದಿಲ್ಲ. ರಾಯಚೂರು ಜಿಲ್ಲೆಯಲ್ಲಿ ಅದು ಅತ್ಯಂತಕ ದೈನ್ಯಾವಸ್ಥೆಯಲ್ಲಿದೆ. ಈ ಜಿಲ್ಲೆಯಲ್ಲಿ ಮಧ್ಯದಲ್ಲಿ ಶಾಲೆ ಬಿಡುವ ಮಕ್ಕಳ ಪ್ರಮಾಣ ಅಧಿಕ. ಉದಾಹರಣೆ ೨೦೦೪-೦೫ರಲ್ಲಿ ಜಿಲ್ಲೆಯಲ್ಲಿ ಏಳನೆಯ ತರಗತಿಯಲ್ಲಿ ಓದುತ್ತಿದ್ದ ಮಕ್ಕಳ ಸಂಖ್ಯೆ ೨೬೫೧೧ ಮರುವರ್ಷ ೨೦೦೫-೦೬ರಲ್ಲಿ ಎಂಟನೆಯ ತರಗತಿಯಲ್ಲಿ ದಾಖಲಾದ ಮಕ್ಕಳ ಸಂಖ್ಯೆ ೧೮೫೬೭ ಅಂದರೆ ಇಲ್ಲಿ ಶಾಲಾವಾಹಿನಿಯಿಂದ ಹೊರಗೋದ ಮಕ್ಕಳು ಸಂಖ್ಯೆ ೭೯೪೪ ಇದರ ಪ್ರಮಾಣ ಶೇ ೨೯.೯೬ರಷ್ಟಾಗುತ್ತದೆ. ರಾಜ್ಯಮಟ್ಟದಲ್ಲಿ ಇದರ ಪ್ರಮಾಣ ಕೇವಲ ಶೇ.೧೭.೧೪ ರಾಜ್ಯಮಟ್ಟದಲ್ಲಿ ಪ್ರತಿ ಲಕ್ಷ ಜನಸಂಖ್ಯೆಗೆ ಹತ್ತನೆಯ ತರಗತಿ ಓದುತ್ತಿದ್ದ ಮಕ್ಕಳ ಸಂಖ್ಯೆ ೨೦೦೬ರಲ್ಲಿ ೧೦೭೧. ಅಂದರೆ ರಾಯಚೂರು ಜಿಲ್ಲೆಯಲ್ಲಿ ೨೦೦೬ರಲ್ಲಿ ಪ್ರತಿ ಲಕ್ಷ ಜನಸಂಖ್ಯೆಗೆ ಹತ್ತನೆಯ ತರಗತಿ ಕಲಿಯುತ್ತಿದ್ದ ಮಕ್ಕಳ ಸಂಖ್ಯೆ ಕೇವಲ ೬೫೫ ಈ ಜಿಲ್ಲೆಯು ಅಭಿವೃದ್ಧಿಯನ್ನು ಸಾಧಿಸಿಕೊಳ್ಳಬೇಕಾದರೆ ಅಲ್ಲಿ ಮೊದಲು 'ಶಿಕ್ಷಣ ಕ್ರಾಂತಿ' ನಡೆಯಬೇಕು. ಈ ಕ್ರಾಂತಿಯು ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿರಬೇಕು.

ದಾಖಲಾತಿಯಲ್ಲಿ ಲಿಂಗ ಪರಿಮಾಣ

ಈಗಾಗಲೇ ತಿಳಿಸಿರುವಂತೆ ಈ ಜಿಲ್ಲೆಯಲ್ಲಿ ಲಿಂಗ ಅಸಮಾನತೆಯ ಪ್ರಮಾಣ ಅಧಿಕ ಜಿಲ್ಲೆಯು ಅಭಿವೃದ್ಧಿಯಲ್ಲಿ ಹಿಂದುಳಿದಿರುವುದಕ್ಕೂ ಮತ್ತು ಅಲ್ಲಿನ ಲಿಂಗಸಂಬಂಧಗಳು ಅಸಮಾನತೆಯಿಂದ ಕೂಡಿರುವುದಕ್ಕೂ ಸಂಬಂಧವಿದೆ. ಉದಾಹರಣೆಗೆ ರಾಜ್ಯಮಟ್ಟದಲ್ಲಿ ಹತ್ತನೆಯ ತರಗತಿಯಲ್ಲಿ ಕಲಿಯುತ್ತಿರುವ ಮಕ್ಕಳಲ್ಲಿ ಬಾಲಕಿಯರ ಪ್ರಮಾಣ ಶೇ.೪೭.೭೮ರಷ್ಟಿದ್ದರೆ ರಾಯಚೂರು ಜಿಲ್ಲೆಯಲ್ಲಿ ಅದರ ಪ್ರಮಾಣ ಶೇ.೪೧.೩೨ ಈ ಬಗೆಯ ಲಿಂಗತಾರತಮ್ಯವನ್ನು ಜಿಲ್ಲೆಯ ಎಲ್ಲ ಕ್ಷೇತ್ರದಲ್ಲೂ ಕಾಣಬಹುದಾಗಿದೆ. ಮುಂದೆ ದುಡಿಯುವ ವರ್ಗಕ್ಕೆ ಸಂಬಂಧಿಸಿದಂತೆ ಇದನ್ನು ವಿವರಿಸಲಾಗಿದೆ.

ಆರೋಗ್ಯ ಭಾಗ್ಯ

ಶಿಕ್ಷಣ, ಸಾಕ್ಷರತೆ ಮತ್ತು ಆರೋಗ್ಯಗಳನ್ನು ಅಭಿವೃದ್ಧಿಯ ಸಾಧನಗಳಾಗಿ ನೋಡಲಾಗುತ್ತದೆ. ವಾಸ್ತವವಾಗಿ ಇವುಗಳಿಗೆ ಎರಡು ಬಗೆಯ ಪಾತ್ರವಿರುತ್ತದೆ. ಆದರೆ ವರಮಾನಕ್ಕೆ ಸಾಧನವಾಗಿ ಮಾತ್ರ ಅಭಿವೃದ್ಧಿಯಲ್ಲಿ ಪಾತ್ರವಿರುತ್ತದೆ. ಆದರೆ ಶಿಕ್ಷಣಕ್ಕೆ, ಸಾಕ್ಷರತೆಗೆ, ಆರೋಗ್ಯಕ್ಕೆ ಅಭಿವೃದ್ಧಿಯಲ್ಲಿ ಅನೇಕ ಬಗೆಯ ಪಾತ್ರಗಳಿರುತ್ತವೆ. ಅವು ಅಭಿವೃದ್ಧಿಯ ಸಾಧನಗಳೂ ಹೌದು. ಅವು ಅಭಿವೃದ್ಧಿಯು ಒಳಗೊಳ್ಳುವ ಸಂಗತಿಗಳು ಕೂಡ ಹೌದು. ಆರೋಗ್ಯಕ್ಕೆ ಸಂಬಂಧಿಸಿದಂತೆ ನಾವು ಮಹಿಳೆಯರ ಮತ್ತು ಮಕ್ಕಳ ಪೌಷ್ಟಿಕತೆ ಮತ್ತು ಸಂತಾನೋತ್ಪತ್ತಿ ಆರೋಗ್ಯ ಹಕ್ಕುಗಳ ಬಗ್ಗೆ ಗಮನ ನೀಡಬೇಕಾಗಿದೆ. ರಾಯಚೂರು ಜಿಲ್ಲೆಯಲ್ಲಿ ಆರೋಗ್ಯದ ದೃಷ್ಟಿಯಿಂದ ನಿರ್ಲಕ್ಷ್ಯಕ್ಕೆ ಒಳಗಾಗಿರುವ ವರ್ಗವೆಂದರೆ ಮಹಿಳೆಯರು. ಸಂತಾನೋತ್ಪತ್ತಿ ಆರೋಗ್ಯ ಹಕ್ಕುಗಳಿಂದ ಅಲ್ಲಿನ ಮಹಿಳೆಯರು ವಂಚಿತವಾಗಿದ್ದಾರೆ. ಈ ಜಿಲ್ಲೆಯು ಅಭಿವೃದ್ಧಿಯಲ್ಲಿ ಹಿಂದುಳಿದಿರುವುದಕ್ಕೆ ಬಹು ಮುಖ್ಯ ಕಾರಣವಾಗಿರುವ ಸಂಗತಿಯೆಂದರೆ ಸಂತಾನೋತ್ಪತ್ತಿ ಆರೋಗ್ಯದ ನಿರ್ಲಕ್ಷ್ಯವಾಗಿದೆ.

ರಾಜ್ಯಮಟ್ಟದಲ್ಲಿ ಜನರ ಜೀವನಾಯುಷ್ಯ ೨೦೦೧-೦೨ರಲ್ಲಿ ೬೫.೮ ವರ್ಷಗಳಾದರೆ ರಾಯಚೂರು ಜಿಲ್ಲೆಯಲ್ಲಿ ಅದು ೬೩.೯ ವರ್ಷಗಳು ಮಹಿಳೆಯರ ಜೀವನಾಯುಷ್ಯ ರಾಜ್ಯಮಟ್ಟದಲ್ಲಿ ೬೭ ವರ್ಷಗಳಾದರೆ ರಾಯಚೂರು ಜಿಲ್ಲೆಯಲ್ಲಿ ಅದು ೬೪.೯ ವರ್ಷಗಳು ಸಾಂಸ್ಥಿಕ ಹೆರಿಗೆಗಳ ಪ್ರಮಾಣ ೨೦೦೩-೦೪ರಲ್ಲಿ ರಾಯಚೂರು ಜಿಲ್ಲೆಯಲ್ಲಿ ಶೇ.೩೩.೩೧ರಷ್ಟಿದೆ. ಈಗ ಇದು ಹೆಚ್ಚಾಗಿರುವ ಸಾಧ್ಯತೆಯಿದೆ. ಆದರೂ ಇಲ್ಲಿ ಆರೋಗ್ಯಕ್ಕೆ ಸಂಬಂಧಿಸಿದಂತೆ ಸ್ಥಿತಿಗತಿ ಅನುಕೂಲಕರವಾಗಿಲ್ಲ. ಉದಾಹರಣೆಗೆ ಈ ಜಿಲ್ಲೆಯಲ್ಲಿ ಪ್ರತಿ ೪೦.೦೦೦ ಜನಸಂಖ್ಯೆಗೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವಿದ್ದರೆ ರಾಜ್ಯದ ಅತ್ಯಂತ ಮುಂದುವರೆದ ಉಡುಪಿ ಜಿಲ್ಲೆಯಲ್ಲಿ ಪ್ರತಿ ೧೮.೬೨೦ ಜನಸಂಖ್ಯೆಗೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವಿದೆ (೨೦೦೬ರ ಜನಸಂಖ್ಯೆಯನ್ನು ಆಧರಿಸಿ) ಅಂದರೆ ಸರ್ಕಾರವು ಇಲ್ಲಿ ಪ್ರಾದೇಶಿಕ ಅಸಮತೋಲನವನ್ನು ಗಮನಿಸಿ ಆರೋಗ್ಯ ಸೌಲಭ್ಯಗಳನ್ನು ಒದಗಿಸುತ್ತಿಲ್ಲ. ಆರೋಗ್ಯದ ದೃಷ್ಟಿಯಿಂದ ಅತ್ಯಂತ ದುಸ್ಥಿತಿಯಲ್ಲಿರುವ ಈ ಜಿಲ್ಲೆಯಲ್ಲಿ ರಾಜ್ಯದ ಮುಂದುವರೆದ ಉಡುಪಿ ಜಿಲ್ಲೆಯಲ್ಲಿನ ಆರೋಗ್ಯ ಮೂಲಭೂತ ಸೌಲಭ್ಯದ ಸ್ಥಿತಿಯು ರಾಯಚೂರಿಗಿಂತ ಉತ್ತಮವಾಗಿದೆ. ಪ್ರಾದೇಶಿಕ ಅಸಮತೋಲನವನ್ನು ನಿವಾರಿಸುವ ದೃಷ್ಟಿಯಿಂದ ಇದು ಅನುಕೂಲಕರ ಸ್ಥಿತಿಯೇನಲ್ಲ.

ತೀವ್ರಗತಿಯ ಜನಸಂಖ್ಯೆ ಬೆಳವಣಿಗೆ

ಈಗಾಗಲೇ ನಮಗೆಲ್ಲ ತಿಳಿದಿರುವಂತೆ ಹಿಂದಿನ ಮತ್ತು ಪ್ರಸ್ತುತ ಸರ್ಕಾರಗಳು ನಮ್ಮ ರಾಜ್ಯದ ಜನಸಂಖ್ಯಾ ಬೆಳವಣಿಗೆಯನ್ನು ನಿಯಂತ್ರಿಸಲು 'ಎರಡು ಮಕ್ಕಳು' ಎಂಬ ನಿಯಮವನ್ನು ಅನುಸರಿಸಬೇಕೆಂದು ಅಪ್ಪಣೆ ಕೊಡಿಸಿದಾಗ ತೀವ್ರ ಟೀಕೆಯನ್ನು ಎದುರಿಸಿದರು. ಈ ಟೀಕೆಯು ಸಮರ್ಥನೀಯವಾಗಿತ್ತು. ಏಕೆಂದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ನಾವೀಗಾಗಲೇ ಜನಸಂಖ್ಯೆಯ ಬೆಳವಣಿಗೆಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸುವುದರಲ್ಲಿ ಯಶಸ್ವಿಯಾಗಿದ್ದೇವೆ. ನಮ್ಮ

[illegible]

ರಾಜ್ಯದ ೧೯೯೧–೨೦೦೦ರ ದಶಕದಲ್ಲಿ ವಾರ್ಷಿಕ ಜನಸಂಖ್ಯಾ ಬೆಳವಣಿಗೆ ಪ್ರಮಾಣವು ಶೇ. ೧.೭೫ ಮಾತ್ರ. ಈ ಪ್ರಮಾಣ ಇಂದು ಇನ್ನೂ ಕಡಿಮೆಯಾಗಿರುವ ಸಾಧ್ಯತೆಯಿದೆ. ರಾಜ್ಯದ ೧೫ ಜಿಲ್ಲೆಗಳಲ್ಲಿ ಜನಸಂಖ್ಯಾ ಬೆಳವಣಿಗೆ ಪ್ರಮಾಣವು ಶೇ. ೧ಕ್ಕಿಂತ ಕಡಿಮೆಯಾಗಿದೆ. ಆದರೆ ಈ ಸಮಸ್ಯೆಯ ಬಗ್ಗೆ ನಾವು ಸ್ವಲ್ಪ ಎಚ್ಚರಿಕೆಯಿಂದ ಯೋಚಿಸಬೇಕಾಗುತ್ತದೆ. ನಮ್ಮ ರಾಜ್ಯಮಟ್ಟದಲ್ಲಿ ಸಮಸ್ಯೆಯನ್ನು ನಾವು ನಿಯಂತ್ರಿಸುವುದರಲ್ಲಿ ಸಫಲರಾಗಿದ್ದೇವೆ. ನಿಜ. ಆದರೆ ನಮ್ಮ ಹಿಂದುಳಿದ ಜಿಲ್ಲೆಗಳಲ್ಲಿ ಅದು ನಿಜಕ್ಕೂ ಸಮಸ್ಯೆಯಾಗಿದೆ. ಇದಕ್ಕೆ ರಾಯಚೂರು ಜಿಲ್ಲೆಯೇ ನಿರ್ದಶನವಾಗಿದೆ. ಈ ಜಿಲ್ಲೆಯಲ್ಲಿ ೧೯೯೧–೨೦೦೦ರ ದಶಕದಲ್ಲಿನ ವಾರ್ಷಿಕ ಜನಸಂಖ್ಯಾ ಬೆಳವಣಿಗೆ ಪ್ರಮಾಣ ಶೇ.೨.೩೫ ಇದು ರಾಜ್ಯದಲ್ಲಿನ ೨೭ ಜಿಲ್ಲೆಗಳ ಪೈಕಿ ಎರಡನೆಯ ಅತಿ ಹೆಚ್ಚಿನ ಪ್ರಮಾಣವಾಗಿದೆ. ಮೊದಲನೆಯ ಸ್ಥಾನ ಕೊಪ್ಪಳ ಜಿಲ್ಲೆಯಲ್ಲಿದೆ. ಅಲ್ಲಿ ಜನಸಂಖ್ಯಾ ಬೆಳವಣಿಗೆಯ ವಾರ್ಷಿಕ ಪ್ರಮಾಣ ಶೇ.೨.೪೮ (ಬೆಂಗಳೂರು ನಗರ ಜಿಲ್ಲೆ ಇದಕ್ಕೆ ಅಪವಾದ) ಈ ಜಿಲ್ಲೆಯಲ್ಲಿನ ಜನಸಂಖ್ಯಾ ಸಮಸ್ಯೆಯ ಮತ್ತೊಂದು ಸೂಚಿಯೆಂದರೆ ಇಲ್ಲಿ ಜನಸಂಖ್ಯೆಯಲ್ಲಿನ ೦–೬ ವಯೋಮಾನದ ಮಕ್ಕಳ ಪ್ರಮಾಣ. ಕರ್ನಾಟಕ ರಾಜ್ಯದಲ್ಲಿ ೨೦೦೧ರಲ್ಲಿ ಒಟ್ಟು ಜನಸಂಖ್ಯೆಯಲ್ಲಿ ೦–೬ ವಯೋಮಾನದ ಮಕ್ಕಳ ಪ್ರಮಾಣ ಶೇ.೧೬.೯೫ ಆದರೆ ರಾಜ್ಯಮಟ್ಟದಲ್ಲಿ ಅದರ ಪ್ರಮಾಣ ಕೇವಲ ಶೇ. ೧೩.೫೮ ರಾಯಚೂರು ಜಿಲ್ಲೆಯ ಜನಸಂಖ್ಯೆಯು ಇನ್ನೂ ಹೆಚ್ಚು 'ಎಳೆತನ'ದಿಂದ ಕೂಡಿದ್ದರೆ ರಾಜ್ಯಮಟ್ಟದಲ್ಲಿ ಅದು ಎಳೆತನದಿಂದ ದೂರವಾಗುತ್ತಿದೆ. ರಾಜ್ಯದ ಅತ್ಯಂತ ಮುಂದುವರೆದ ಉಡುಪಿ ಜಿಲ್ಲೆಯಲ್ಲಿ ೦–೬ ವಯೋಮಾನದ ಮಕ್ಕಳ ಪ್ರಮಾಣ ೨೦೦೧ರಲ್ಲಿ ಕೇವಲ ಶೇ.೧೦.೩೦ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅದರ ಪ್ರಮಾಣ ಶೇ.೧೨.೦೧ ಹೀಗೆ ಜನಸಂಖ್ಯೆಯಲ್ಲಿನ ೦–೬ ವಯೋಮಾನದ ಮಕ್ಕಳ ಪ್ರಮಾಣವನ್ನು ಜನಸಂಖ್ಯೆ ಒತ್ತಡದ ಮಾಪನವಾಗಿ ಬಳಸಬಹುದಾಗಿದೆ.

ರಾಯಚೂರು ಜಿಲ್ಲೆಯು ಜನಸಂಖ್ಯೆಯ ಬೆಳವಣಿಗೆಯನ್ನು ನಿಯಂತ್ರಿಸುವಲ್ಲಿ ವಿಫಲವಾಗಿದೆ. ಈ ವೈಫಲ್ಯಕ್ಕೂ ಮತ್ತು ಜಿಲ್ಲೆಯು ಅಭಿವೃದ್ಧಿಯಲ್ಲಿ ಹಿಂದುಳಿದಿರುವುದಕ್ಕೂ ಸಂಬಂಧವಿದೆ. ರಾಯಚೂರು ಜಿಲ್ಲೆಯಲ್ಲಿರುವ ಜನಸಂಖ್ಯಾ ಬೆಳವಣಿಗೆಯ ಅಧಿಕ ಪ್ರಮಾಣವು ವಾಸ್ತವವಾಗಿ ಜನಸಂಖ್ಯೆಯ ಸಮಸ್ಯೆಯನ್ನು ತೋರಿಸುವುದಕ್ಕೆ ಪ್ರತಿಯಾಗಿ ಅದು ಅಭಿವೃದ್ಧಿಯ ಸಮಸ್ಯೆಯನ್ನು ಸೂಚಿಸುತ್ತಿದೆ. ಇದನ್ನು ನಾವು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು. ಅದು ಬಿಟ್ಟು 'ಎರಡು ಮಕ್ಕಳ' ನಿಯಂತ್ರಣ ನಿಯಮವನ್ನು ಜಾರಿಗೆ ತರಬೇಕೆಂದು ಆದೇಶ ಮಾಡುವುದು ಸರಿಯಾದ ಕ್ರಮವಾಗುವುದಿಲ್ಲ. ಇದು ಅಭಿವೃದ್ಧಿಯ ಪ್ರಶ್ನೆ. ಇಂದು ಕರ್ನಾಟಕವು ರಾಜ್ಯಮಟ್ಟದಲ್ಲಿ ಜನಸಂಖ್ಯಾ ಬೆಳವಣಿಗೆಯನ್ನು ತಡೆಗಟ್ಟಿದರೆ ಅದು ಅದನ್ನು ಉತ್ಪನ್ನವಾದ ಮತ್ತು ಸಾಮಾಜಿಕವಾದ ಅಭಿವೃದ್ಧಿಯನ್ನು ಸಾಧಿಸಿಕೊಳ್ಳುವುದರ ಮೂಲಕ ತಡೆಗಟ್ಟಿದೆ. ಸರ್ಕಾರವು ರಾಯಚೂರಿನಲ್ಲಿನ ಜನಸಂಖ್ಯಾ ಸಮಸ್ಯೆಯನ್ನು ಅಭಿವೃದ್ಧಿಯ ನೆಲೆಯಿಂದ ಎದುರಿಸುವ ಕ್ರಮ ತೆಗೆದುಕೊಳ್ಳಬೇಕು. ಸರ್ಕಾರವು ಅಖಂಡವಾದಿ ಅಭಿವೃದ್ಧಿ ನೀತಿಯನ್ನು ಕೈಬಿಟ್ಟು ಪ್ರದೇಶ ನಿರ್ದಿಷ್ಟವಾದ ಅಭಿವೃದ್ಧಿ

[illegible]

ನೀತಿಯನ್ನು ಅಳವಡಿಸಿಕೊಳ್ಳಬೇಕು. ಆಗ ಮಾತ್ರ ರಾಜ್ಯದ ಹಿಂದುಳಿದಿರುವ ಜಿಲ್ಲೆಗಳಲ್ಲಿನ ಜನಸಂಖ್ಯಾ ಸಮಸ್ಯೆಯನ್ನು ಸರಿಯಾಗಿ ನಿಭಾಯಿಸಬಹುದು. ರಾಯಚೂರು ಜಿಲ್ಲೆಯಲ್ಲಿ ಮಹಿಳೆಯರ ಸಾಕ್ಷರತಾ ಪ್ರಮಾಣ ಶೇ.೩೫.೯೩ರಷ್ಟಿರುವುದಕ್ಕೂ ಮತ್ತು ಅಲ್ಲಿ ಜನಸಂಖ್ಯೆಯ ವಾರ್ಷಿಕ ಬೆಳವಣಿಗೆ ಪ್ರಮಾಣ ಶೇ.೨.೩೫ರಷ್ಟಿರುವುದಕ್ಕೂ ನಡುವೆ ಅವಲಂಬಿ ಬಿಂಬಕ ಸಂಬಂಧವಿದೆ. ಈ ಜಿಲ್ಲೆಯಲ್ಲಿನ ಜನಸಂಖ್ಯಾ ಸಮಸ್ಯೆಗೆ ಇರುವ ಉತ್ತರವೆಂದರೆ ಜಿಲ್ಲೆಯಲ್ಲಿನ ಒಟ್ಟು ಸಾಕ್ಷರತೆಯನ್ನು ಅದರಲ್ಲೂ ಮಹಿಳೆಯರ ಸಾಕ್ಷರತೆಯನ್ನು ಉತ್ತಮ ಪಡಿಸುವುದಕ್ಕೆ ತೀವ್ರ ಕ್ರಮಗಳನ್ನು ತೆಗೆದುಕೊಳ್ಳಬೇಕು. ಈ ಜಿಲ್ಲೆಯಲ್ಲಿನ ೨೦೦೧ರಲ್ಲಿನ ಅನಕ್ಷರಸ್ಥರ ಸಂಖ್ಯೆ ೭.೮೯ಲಕ್ಷ ಇಲ್ಲಿನ ಅಕ್ಷರಸ್ಥರ ಸಂಖ್ಯೆ ೬.೭೬ ಲಕ್ಷ. ಅಂದರೆ ಈ ಜಿಲ್ಲೆಯಲ್ಲಿ ಅಕ್ಷರಸ್ಥರ ಸಂಖ್ಯೆಗಿಂತ ಅನಕ್ಷರಸ್ಥರ ಸಂಖ್ಯೆಯು ಅಧಿಕವಾಗಿದೆ. ಇದು ಅಭಿವೃದ್ಧಿಯ ದೃಷ್ಟಿಯಿಂದ ಸ್ವಾಗತಾರ್ಹ ಸಂಗತಿಯೇನಲ್ಲ. ಈ ಜಿಲ್ಲೆಯಲ್ಲಿನ ಒಟ್ಟು ಅಕ್ಷರಸ್ಥರಲ್ಲಿ ಮಹಿಳೆಯರ ಪ್ರಮಾಣ ಶೇ.೩೬.೫೬ರಷ್ಟಿದ್ದರೆ ಅನಕ್ಷರಸ್ಥರಲ್ಲಿ ಮಹಿಳೆಯರ ಪ್ರಮಾಣ ಶೇ.೬೧.೧೮ ಈಗ ಈ ಸಮಸ್ಯೆ ಎಲ್ಲಿದೆ ಎಂಬುದು ಸ್ಪಷ್ಟವಾಗಿ ಗೋಚರಿಸುತ್ತದೆ. ಅಕ್ಷರಸ್ಥರಿಗಿಂತ ಅನಕ್ಷರಸ್ಥರು ಅಧಿಕವಿರುವ ರಾಜ್ಯದಲ್ಲಿನ ಜಿಲ್ಲೆಯೆಂದರೆ ರಾಯಚೂರು. ಈ ಬಗೆಯ ಅನಿಷ್ಟದಿಂದ ಈ ಜಿಲ್ಲೆಯು ಹೊರಬರಬೇಕಾಗಿದೆ. ಈ ಜಿಲ್ಲೆಯ ಅಭಿವೃದ್ಧಿ ದುಸ್ಥಿತಿಯ ವ್ಯಥೆಯನ್ನು ಮಾನವ ಅಭಿವೃದ್ಧಿ ನೆಲೆಯಲ್ಲಿ ಅರ್ಥಮಾಡಿಕೊಳ್ಳಲು ಪ್ರಯತ್ನಿಸುವ ಅಗತ್ಯವಿದೆ.

ಈ ಕಾರಣದ ಮೇಲೆ ರಾಯಚೂರಿನ ಸ್ಥಿತಿಯನ್ನು ಉಡುಪಿ ಅಥವಾ ದಕ್ಷಿಣ ಕನ್ನಡ ಜಿಲ್ಲೆಗಳೊಂದಿಗೆ ಹೋಲಿಸಲು ಸಾಧ್ಯವಿಲ್ಲ. ಏಕೆಂದರೆ ರಾಯಚೂರಿನ ಮಹಿಳಾ ದುಡಿಮೆಗಾರರಲ್ಲಿ ಮಹಿಳಾ ದಿನಗೂಲಿಗಳ ಪ್ರಮಾಣ ಅಧಿಕ. ಆದರೆ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಮಹಿಳಾ ದುಡಿಮೆಗಾರರಲ್ಲಿ ಮಹಿಳಾ ದಿನಗೂಲಿಗಳ ಪ್ರಮಾಣ ಕಡಿಮೆ. ರಾಯಚೂರಿನಲ್ಲಿನ ಒಟ್ಟು ಮಹಿಳಾ ದುಡಿಮೆಗಾರರಲ್ಲಿ (೨.೮೯ ಲಕ್ಷ) ಮಹಿಳಾ ದಿನಗೂಲಿಗಳ (೨.೦೩ ಲಕ್ಷ) ಪ್ರಮಾಣ ಶೇ.೭೦.೬೬ ಆದರೆ ಉಡುಪಿ ಜಿಲ್ಲೆಯಲ್ಲಿ ಅವರ ಪ್ರಮಾಣ ಶೇ.೩೫.೩ರಷ್ಟಾದರೆ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಸಂಘಟಿತ ಸ್ವರೂಪದಲ್ಲಿದ್ದರೆ ಹಿಂದುಳಿದ ರಾಯಚೂರು ಜಿಲ್ಲೆಯಲ್ಲಿ ಅದು ಅಸಂಘಟಿತ ಸ್ವರೂಪದಲ್ಲಿದೆ. ರಾಯಚೂರು ಜಿಲ್ಲೆಯಲ್ಲಿನ ಒಟ್ಟು ದುಡಿಮೆಗಾರರಲ್ಲಿ ಕೃಷಿ ಅವಲಂಬಿತರ ಪ್ರಮಾಣ ಶೇ.೭೩.೦೩. ಆದರೆ ಉಡುಪಿ ಜಿಲ್ಲೆಯಲ್ಲಿ ಅವರ ಪ್ರಮಾಣ ಶೇ.೩೭.೯೦ರಷ್ಟಾದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅದರ ಪ್ರಮಾಣ ಕೇವಲ ಶೇ.೯.೮೫ ಈ ಬಗೆಯ ದುಡಿಮೆಗಾರರ ಸ್ವರೂಪದ ಆಧಾರದ ಮೇಲೆ ಜಿಲ್ಲೆಗಳ ಆರ್ಥಿಕ ಮತ್ತು ಸಾಮಾಜಿಕ ನೆಲೆಗಳನ್ನು ಅರಿತುಕೊಳ್ಳಬಹುದು. ಒಟ್ಟು ದುಡಿಮೆಗಾರರಲ್ಲಿನ ಕೃಷಿ ಅವಲಂಬನೆ ಮತ್ತು ಮಹಿಳಾ ದುಡಿಮೆಗಾರರ ದುಡಿಮೆ ಸ್ವರೂಪದ ಆಧಾರದ ಮೇಲೆ ರಾಯಚೂರು ಜಿಲ್ಲೆಯು ಅಭಿವೃದ್ಧಿಯ ದೃಷ್ಟಿಯಿಂದ ಹಿಂದುಳಿದಿರುವುದನ್ನು ಮತ್ತು ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳು ಮುಂದುವರಿದಿರುವುದನ್ನು ಸಾಧಿಸಿ ತೋರಿಸಬಹುದಾಗಿದೆ.

ಒಂದು ಪ್ರದೇಶದ ಅಭಿವೃದ್ಧಿಯನ್ನು ಕೇವಲ ವರಮಾನದ ಆಧಾರದ ಮೇಲೆ ನಿರ್ಧರಿಸುವುದು ಸರಿಯಾದ ಕ್ರಮವಲ್ಲ. ಜನರನ್ನು, ಅವರ ಅಕ್ಷರ ಸಂಸ್ಕೃತಿಯನ್ನು ಅವರ ದುಡಿಮೆಯ ನೆಲೆಗಳನ್ನು, ಲಿಂಗಸಂಬಂಧಿ ಸ್ವರೂಪವನ್ನು, ಆರೋಗ್ಯ ಸೂಚಿಗಳನ್ನು ಆಧಾರವಾಗಿಟ್ಟುಕೊಂಡು ಅಭಿವೃದ್ಧಿಯ ಮೌಲ್ಯಮಾಪನ ಮಾಡಬಹುದಾಗಿದೆ. ಅಮರ್ತ್ಯಸೇನ್ ಹೇಳುವ "ಧಾರಣಾ ಸಾಮರ್ಥ್ಯದ ದೃಷ್ಟಿಯಿಂದ ರಾಯಚೂರು ಜಿಲ್ಲೆಯು ಅತ್ಯಂತ ಕೆಳಮಟ್ಟದಲ್ಲಿದ್ದರೆ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳು ಉನ್ನತ ಮಟ್ಟದಲ್ಲಿವೆ. ಇಲ್ಲಿ ರಾಯಚೂರು ಜಿಲ್ಲೆಯ ಅಭಿವೃದ್ಧಿಯ ವ್ಯಥೆಯನ್ನು ಚರ್ಚಿಸುವುದರ ಮೂಲಕ ಕರ್ನಾಟಕ ರಾಜ್ಯದಲ್ಲಿನ ಅಭಿವೃದ್ಧಿ ಸಂಬಂಧಿ ಪ್ರಾದೇಶಿಕ ಅಸಮತೋಲನದ ಸ್ವರೂಪವನ್ನು ತೋರಿಸಲು ಇಲ್ಲಿ ಪ್ರಯತ್ನಿಸಲಾಗಿದೆ.

ಡಿ.ಎಂ.ನಂಜುಂಡಪ್ಪ ಸಮಿತಿ ವರದಿ

ಕರ್ನಾಟಕ ರಾಜ್ಯದಲ್ಲಿನ ಅಭಿವೃದ್ಧಿಗೆ ಸಂಬಂಧಿಸಿದ ಪ್ರಾದೇಶಿಕ ಅಸಮಾನತೆಯ ಸ್ವರೂಪವನ್ನು ಅಧ್ಯಯನ ಮಾಡಿ ಅದರ ನಿವಾರಣೆಗೆ ಸರ್ಕಾರವು ೨೦೦೦ದಲ್ಲಿ ಡಾ.ಡಿ.ಎಂ.ನಂಜುಂಡಪ್ಪ ಅವರ ಅಧ್ಯಕ್ಷತೆಯಲ್ಲಿ ಒಂದು ಉನ್ನತಾಧಿಕಾರ ಸಮಿತಿಯನ್ನು ನೇಮಿಸಿತು. ಈ ಸಮಿತಿಯು ೨೦೦೨ರಲ್ಲಿ ತನ್ನ ಬೃಹತ್ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತು. ಅದರ ಪ್ರಕಾರ ರಾಯಚೂರು ಜಿಲ್ಲೆಯ ಐದು ತಾಲ್ಲೂಕುಗಳು ಹಿಂದುಳಿದ ಸ್ಥಿತಿಯಲ್ಲಿವೆಯೆಂದು ದೃಢಪಟ್ಟಿತು. ರಾಜ್ಯದ ೧೭೫ ತಾಲ್ಲೂಕುಗಳ ಪೈಕಿ ಅತ್ಯಂತ ಹಿಂದುಳಿದ ಮತ್ತು ಕಟ್ಟಕಡೆಯ ತಾಲ್ಲೂಕೆಂದರೆ ರಾಯಚೂರು ಜಿಲ್ಲೆಯ ದೇವದುರ್ಗವೆಂದು ಸಮಿತಿ ತನ್ನ ವರದಿಯಲ್ಲಿ ತಿಳಿಸಿತು. ಈ ಜಿಲ್ಲೆಯ ಐದು ತಾಲ್ಲೂಕುಗಳ ಒಟ್ಟು ಸಂಚಿತ ದುಸ್ಥಿತಿ ಸೂಚ್ಯಂಕ ೧.೫೦ ಇಡೀ ರಾಜ್ಯದ ದುಸ್ಥಿತಿ ಸೂಚ್ಯಂಕ ೨೦.೨೬ರಷ್ಟಾಗಿದೆ. ಅದರಲ್ಲಿ ರಾಯಚೂರು ಜಿಲ್ಲೆಯದ್ದೇ ಶೇಕಡ ಪಾಲು ೭.೪೦ (೧.೫೦% ೨೦.೨೬x೧೦೦)= ಶೇ.೭.೪೦)

- ದೇವದುರ್ಗ ತಾಲ್ಲೂಕಿನ ಸಂಯುಕ್ತ ಸಮಗ್ರ ಅಭಿವೃದ್ಧಿ ಸೂಚ್ಯಂಕ ೦.೫೩ ಅದರ ದುಸ್ಥಿತಿ ಸೂಚ್ಯಂಕ ೦.೪೭
- ಲಿಂಗಸೂಗೂರು ತಾಲ್ಲೂಕಿನ ಸಂಯುಕ್ತ ಸಮಗ್ರ ಅಭಿವೃದ್ಧಿ ಸೂಚ್ಯಂಕ ೦.೬೩ ಅದರ ದುಸ್ಥಿತಿ ಸೂಚ್ಯಂಕ ೦.೩೭
- ಮಾನ್ವಿ ತಾಲ್ಲೂಕಿನ ಸಂಯುಕ್ತ ಸಮಗ್ರ ಅಭಿವೃದ್ಧಿ ಸೂಚ್ಯಂಕ ೦.೬೯ ಅದರ ದುಸ್ಥಿತಿ ಸೂಚ್ಯಂಕ ೦.೩೧
- ಸಿಂಧನೂರು ತಾಲ್ಲೂಕಿನ ಸಂಯುಕ್ತ ಸಮಗ್ರ ಅಭಿವೃದ್ಧಿ ಸೂಚ್ಯಂಕ ೦.೭೮ ಅದರ ದುಸ್ಥಿತಿ ಸೂಚ್ಯಂಕ ೦.೨೨
- ರಾಯಚೂರು ತಾಲ್ಲೂಕಿನ ಸಂಯುಕ್ತ ಸಮಗ್ರ ಅಭಿವೃದ್ಧಿ ಸೂಚ್ಯಂಕ ೦.೮೭ ಅದರ ದುಸ್ಥಿತಿ ಸೂಚ್ಯಂಕ ೦.೧೩

- ಈ ನಂಜುಂಡಪ್ಪ ಸಮಿತಿಯ ರಾಯಚೂರು ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ಜನರ ದಾರಿದ್ರ ದುಸ್ಥಿತಿಯ ಬದುಕನ್ನು ಇನ್ನಿಲ್ಲದಂತೆ ತೋರಿಸಿಕೊಟ್ಟಿದೆ.
- ಡಿ.ಎಂ.ನಂಜುಂಡಪ್ಪ ಸಮಿತಿ ವರದಿಯಲ್ಲಿ ಹಿಂದುಳಿದ ತಾಲ್ಲೂಕುಗಳ ಅಭಿವೃದ್ಧಿಗಾಗಿ ಎಂಟು ವರ್ಷಗಳ ರೂ.೧೬೦೦೦ ಕೋಟಿ ಮೊತ್ತದ ಒಂದು ವಿಶೇಷ ಅಭಿವೃದ್ಧಿ ಯೋಜನೆಯನ್ನು ಶಿಫಾರಸ್ಸು ಮಾಡಿತು. ಈ ಶಿಫಾರಸ್ಸನ್ನು ಸರ್ಕಾರವು ೨೦೦೭-೦೮ರಲ್ಲಿ ಒಪ್ಪಿಕೊಂಡು ಅನುಷ್ಠಾನಗೊಳಿಸಿತು. ಅದು ಅನುಷ್ಠಾನಗೊಂಡು ಮೂರು ವರ್ಷವಾಯಿತು. ಈ ಅವಧಿಯಲ್ಲಿ ಸಮಿತಿಯ ಸೂತ್ರದ ಪ್ರಕಾರ ರಾಯಚೂರು ಜಿಲ್ಲೆಗೆ ಬರಬೇಕಾಗಿದ್ದ ಅನುದಾನ ಹೀಗಿದೆ.
- ೨೦೦೭-೦೮ರಲ್ಲಿನ ಒಟ್ಟು ಮೊತ್ತ ರೂ.೧೫೭೧ ಕೋಟಿ. ಅದರಲ್ಲಿ ರಾಯಚೂರು ಜಿಲ್ಲೆಯ ಪಾಲು ರೂ. ೧೧೬.೨೫ ಕೋಟಿ
- ೨೦೦೮-೦೯ರಲ್ಲಿನ ಒಟ್ಟು ಮೊತ್ತ ರು.೨೫೪೭ಕೋಟಿ. ಅದರಲ್ಲಿ ಜಿಲ್ಲೆಯ ಪಾಲು ರೂ.೧೮೮.೪೭ಕೋಟಿ
- ೨೦೦೯-೧೦ರಲ್ಲಿನ ಒಟ್ಟು ಮೊತ್ತ ರೂ. ೨೫೭೪ಕೋಟಿ. ಅದರಲ್ಲಿ ರಾಯಚೂರು ಜಿಲ್ಲೆಯ ಪಾಲು ರೂ.೧೯೦.೪೭ಕೋಟಿ. ಈ ಮೂರು ವರ್ಷಗಳಲ್ಲಿ ರಾಯಚೂರು ಜಿಲ್ಲೆಗೆ ಡಿ.ಎಂ.ನಂಜುಂಡಪ್ಪ ಸಮಿತಿ ವರದಿ ಶಿಫಾರಸ್ಸಿನ ಪ್ರಕಾರ ಬರಬೇಕಾಗಿದ್ದ ಅನುದಾನ ರೂ.೪೯೫.೧೯ಕೋಟಿ.

ಕಳೆದ ಮೂರು ವರ್ಷಗಳಲ್ಲಿ (೨೦೦೭-೦೮ರಿಂದ ೨೦೦೯-೧೦) ಈ ಜಿಲ್ಲೆಗೆ ಡಿ.ಎಂ.ನಂಜುಂಡಪ್ಪ ಸಮಿತಿ ವರದಿಯ ವಿಶೇಷ ಅಭಿವೃದ್ಧಿ ಯೋಜನೆ ಪ್ರಕಾರ ಬರಬೇಕಾಗಿದ್ದ ರೂ.೪೯೫.೧೯ಕೋಟಿ ಅನುದಾನ ದಕ್ಕಿದೆಯೆ ಎಂದು ನೋಡಿದರೆ ಉತ್ತರ ಇಲ್ಲ. ಆದರೆ ವಾಸ್ತವದಲ್ಲಿ ಅದನ್ನು ಶಿಸ್ತುಬದ್ಧವಾಗಿ ಅನುಷ್ಠಾನಗೊಳಿಸುತ್ತಿಲ್ಲ. ಅದರಲ್ಲಿನ ಸೂತ್ರಗಳನ್ನು ಕರ್ನಾಟಕದ ಸರ್ಕಾರವು ಗಾಳಿಗೆ ತೂರಿಬಿಟ್ಟಿದೆ. ಸಮಿತಿಯ ಪ್ರಕಾರ ಅನುದಾನ ತಾಲ್ಲೂಕುಗಳಿಗೆ ಸಂದಾಯವಾಗಬೇಕು. ಆದರೆ ಈಗ ಸರ್ಕಾರವು ಅನುದಾನವನ್ನು ರಾಜ್ಯಮಟ್ಟದಲ್ಲಿ, ಜಿಲ್ಲಾಮಟ್ಟದಲ್ಲಿ ವಿನಿಯೋಗಿಸುತ್ತಿದೆ. ಈ ವಿಶೇಷ ಅಭಿವೃದ್ಧಿ ಯೋಜನೆಯನ್ನು ಸರ್ಕಾರವು ತನಗೆ ಇಷ್ಟ ಬಂದ ರೀತಿಯಲ್ಲಿ ಅನುಷ್ಠಾನಗೊಳಿಸುತ್ತಿದೆ. ಈ ಪರಿಯಲ್ಲಿ ಸಮಿತಿಯ ಶಿಫಾರಸ್ಸನ್ನು ಅನುಷ್ಠಾನಗೊಳಿಸಿದರೆ ಎಂಟು ವರ್ಷಗಳ ಅವಧಿಯಲ್ಲಿ ಪ್ರಾದೇಶಿಕ ಅಸಮಾನತೆಯನ್ನು ನಿವಾರಿಸುವುದು ಅಸಾಧ್ಯ. ರಾಯಚೂರು ಜಿಲ್ಲೆಯ ದುಸ್ಥಿತಿಯ ವ್ಯಥೆಯನ್ನು ಸಮೃದ್ಧಿಯ ಸುಸ್ಥಿತಿಯ ಗಾಥೆಯಾಗಿ ಪರಿವರ್ತಿಸುವುದು ಕಷ್ಟಸಾಧ್ಯ.

ಈ ಎಲ್ಲಾ ಅಂಶಗಳನ್ನು ಪರಿಗಣಿಸಿದಾಗ ರಾಯಚೂರು ಜಿಲ್ಲೆಯು ಸಾಮಾಜಿಕ ರಚನೆ ಹೇಗೆ ಬಲಗೊಂಡಿದೆಯೋ ಅದೇ ರೀತಿಯಲ್ಲಿ ಈ ಜಿಲ್ಲೆ ಅಭಿವೃದ್ಧಿಯಿಂದ ವಂಚಿತವಾದ ಮತ್ತು ಸಾಮಾಜಿಕ ಏಣಿಶ್ರೇಣಿಗಳಿಂದ ಕೂಡಿದ ವ್ಯವಸ್ಥೆಯಂತೆ ತೋರುತ್ತದೆ. ರಾಜಕೀಯ ವ್ಯವಸ್ಥೆ ಕೂಡ ಈ ಜಿಲ್ಲೆಯು ಹಿಂದೆ ಉಳಿಯುವುದಕ್ಕೆ ಮುಖ್ಯ ಕಾರಣವಾಗಿದೆ. ಮೀಸಲಾತಿಯ ಅಡಿಯಲ್ಲಿ

ಗೆದ್ದ ಪಕ್ಷಗಳು ಆ ಜಾತಿಯ ಪ್ರತಿನಿಧಿ ಬಲಾಢ್ಯ ವರ್ಗದ ಜನರ ಹಿತಾಸಕ್ತಿಯನ್ನು ಕಾಯುತ್ತಾನೆ ಹೊರತು ಜನಸಾಮಾನ್ಯರ ಸಂಕಷ್ಟಗಳನ್ನು ಬಗೆಹರಿಸಲು ಮುಂದಾಗಿಲ್ಲ. ಆಗಿದ್ದರೂ ಅದು ಅತ್ಯಲ್ಪ ಪ್ರಮಾಣದಲ್ಲಿ ಮಾತ್ರ. ಒಟ್ಟಾರೆಯಾಗಿ ಈ ಜಿಲ್ಲೆ ಸಾಮಾಜಿಕ ರಚನೆಯಂತೆ ಹಾಗೂ ರಾಜಕೀಯ ಹಲವು ಅಂಶಗಳಿಂದಾಗಿ ಈ ಜಿಲ್ಲೆ ತೀವ್ರ ದುಸ್ಥಿತಿಯನ್ನು ಅನುಭವಿಸುತ್ತಿವೆ. ಮುಂದಿನ ಅಧ್ಯಾಯದಲ್ಲಿ ರಾಯಚೂರು ಜಿಲ್ಲೆಯ ವಂಚಿತ ಜನವರ್ಗಗಳ ಸ್ಥಿತಿಯನ್ನು ಕೂಲಂಕುಷವಾಗಿ ಚರ್ಚಿಸಲಾಗಿದೆ.

ಕೊನೆಯ ಟಿಪ್ಪಣಿ

೧. ಚಂದ್ರಶೇಖರ್ ಟಿ.ಆರ್, ೨೦೧೦, ಧರೆ ಹತ್ತಿ ಉರಿದರೆ, ಅಲಕ್ಷಿತರ ಪದತಲದಿಂದ ಅಭಿವೃದ್ಧಿಯ ಆರಂಭ, ಪಲ್ಲವ ಪ್ರಕಾಶನ, ಚನ್ನಪಟ್ಟಣ, ಪುಟ, ೨೩೬.

೨. ಸೇನ್ ಅಮರ್ತ್ಯ, ೧೯೮೧, ಪಾವರ್ಟಿ ಆ್ಯಂಡ್ ಫೆಮಿನಿಸ್: ಆ್ಯನ್ ಯಸೆ ಆನ್ ಎನ್‌ಟೈಟಲ್ ಮೆಂಟ್ ಆ್ಯಂಡ್ ಡಿಪ್ರೆವೇಷನ್, ಆಕ್ಸ್‌ಫರ್ಡ್ ಯುನಿವರ್ಸಿಟಿ.

೩. ಸ್ಟಿಗ್‌ಲಿಡ್ಜ್ ಜೋಸೆಫ್, ೨೦೦೩, ಪಾವರ್ಟಿ, ಗ್ಲೋಬ್ ಲೈಜೆಷನ್ ಆ್ಯಂಡ್ ಗ್ರೌಥ್: ಪ್ರಾಸ್ಪೆಕ್ಟಿವ್ ಅನ್ ಸಮ್ ಆಫ್ ದಿ ಸ್ಟಾಟಿಕಲ್ ಲಿಂಕ್ಸ್, ಇನ್ UNDP ಹ್ಯೂಮನ್ ಡೆವಲಪಮೆಂಟ್ ರಿಪೋರ್ಟ್, ೨೦೦೩, ಪುಟ–೮೪, ಆಕ್ಸ್‌ಫರ್ಡ್ ಯುನಿರ್ವಸಿಟಿ ನ್ಯೂಯಾರ್ಕ್.

೪. ಜನ್ ಬ್ರೆಮೆನ್, ೧೯೯೪, ವೇಜ್ ಹಂಟರ್ಸ್ ಅಂಡ್ ಗ್ಯಾದರರ್ಸ್, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್ ನ್ಯೂ ದೆಹಲಿ.

೫. ಚಂದ್ರಶೇಖರ್ ಟಿ.ಆರ್, ೨೦೧೪, ಮಾನವ ಅಭಿವೃದ್ಧಿ ಮಾನವ ಬಡತನ ಮತ್ತು ಮಾನವ ಹಕ್ಕುಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬. ಪ್ರಧಾನ ಗುರುದತ್ (ಪ್ರ.ಸಂ), ೨೦೧೩, ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರಹಗಳು ಮತ್ತು ಭಾಷಣಗಳು, ಸಂಪುಟ–೪ ಮತ್ತು ೬.

೮. ಚಂದ್ರಶೇಖರ್ ಟಿ.ಆರ್, ೨೦೧೦, ಧರೆ ಹತ್ತಿ ಉರಿದರೆ : ಪ್ರಚಲಿತ ಕರ್ನಾಟಕ ಕುರಿತ ಬರಹಗಳು, ಪಲ್ಲವ ಪ್ರಕಾಶನ, ಚನ್ನಪಟ್ಟಣ.

೯. ಯುಎನ್‌ಡಿಪಿ, ೧೯೯೦, ಹ್ಯೂಮನ್ ಡೆವಲಪ್‌ಮೆಂಟ್ ರಿಪೋರ್ಟ್, ೧೯೯೦, ಒಯುಪಿ ನ್ಯೂಯಾರ್ಕ್.

೧೦. ಕರ್ನಾಟಕ ಸರ್ಕಾರ, ೨೦೧೨, ಕರ್ನಾಟಕ ರಾಜ್ಯದಲ್ಲಿ ಮಕ್ಕಳ ಅಪೌಷ್ಟಿಕತೆಯನ್ನು ತಡೆಗಟ್ಟುವುದರ ಬಗೆಗಿನ ಸಮಗ್ರ ಕಾರ್ಯಯೋಜನೆಯ ವರದಿ ಆರೋಗ್ಯ ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು.

೧೧. ನಂಜುಂಡಪ್ಪ ಡಿ.ಎಂ, ೨೦೦೨, ಪ್ರಾದೇಶಿಕ ಅಸಮಾನತೆ ಉನ್ನತಾಧಿಕಾರ ಸಮಿತಿಯ ವರದಿ, ಕರ್ನಾಟಕ ಸರ್ಕಾರ, ಬೆಂಗಳೂರು.

ಅಧ್ಯಾಯ-ಆರು

ಅಭಿವೃದ್ಧಿಯಿಂದ ವಂಚಿತ ಜನವರ್ಗಗಳ ಸ್ಥಿತಿಗತಿ

ಅಧ್ಯಾಯ–ಆರು

ಅಭಿವೃದ್ಧಿಯಿಂದ ವಂಚಿತ ಜನವರ್ಗಗಳ ಸ್ಥಿತಿಗತಿ

ಪೀಠಿಕೆ

ಈ ಅಧ್ಯಾಯದಲ್ಲಿ ಬಹು ಮುಖ್ಯವಾಗಿ ಅಭಿವೃದ್ಧಿಯಿಂದ ವಂಚಿತವಾದ ಜನವರ್ಗಗಳೆಂದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಮುದಾಯವನ್ನು ಮಾತ್ರ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಭಾರತದಲ್ಲಿ ಸಾಮಾಜಿಕ ವ್ಯವಸ್ಥೆಯಲ್ಲಿ ಜಾತಿಗಳ ಕಾರಣಕ್ಕೆ ಮೇಲು ಕೀಳು ಎನ್ನುವಂತಹ ಆರ್ಥಿಕ ಶೋಷಣೆಯ ಜೊತೆಗೆ ಸಾಮಾಜಿಕ ಶೋಷಣೆಯು ನಿರಂತರವಾಗಿ ನಡೆಯುತ್ತದೆ. ಭಾರತದ ಸಂವಿಧಾನದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ವಿಶೇಷ ರಕ್ಷಣೆ ಮತ್ತು ಹಕ್ಕುಗಳನ್ನು ನೀಡಲಾಗಿದೆ. ಈ ಸಮೂಹಗಳಿಗೆ ರಕ್ಷಣೆ ಮತ್ತು ಬೆಂಬಲಗಳನ್ನು ಸಾಮಾಜಿಕ ವ್ಯವಸ್ಥೆಯ ತಳಮಟ್ಟದಲ್ಲಿ ಮತ್ತು ಅಂಚಿನಲ್ಲಿ ಇದ್ದವರ ಮತ್ತು ಭೌಗೋಳಿಕವಾಗಿ ದೂರದಲ್ಲಿದ್ದವರ ಸಲುವಾಗಿ ನೀಡಲಾಗಿದ್ದಿತು. ಅವರ ಸಾಮಾಜಿಕ ಸ್ಥಾನಮಾನದ ಅವಕಾಶ ವಂಚಿತರಾಗಿಯೇ ಬದುಕುತ್ತಿದ್ದವರಾದ್ದರಿಂದ, ಅವರು ಹಲವಾರು ನ್ಯೂನತೆಗಳಿಂದಲೂ ಭಾದಿತರಾಗಿದ್ದರು. ಇಂದಿಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಸಹ ಸಾಮಾಜಿಕ ಹಾಗೂ ಸಾಂಸ್ಕೃತಿಕ ಆಚರಣೆಗಳಲ್ಲಿ ತಾರತಮ್ಯ ಹಾಗೂ ಶೋಷಣೆ ಅನುಭವಿಸುತ್ತಿರುವ ಪರಿಸ್ಥಿತಿ ಇದೆ. ಸಂಪತ್ತು, ಸ್ಥಾನಮಾನ ಮತ್ತು ಅಧಿಕಾರಗಳಲ್ಲಿನ ಅಂತರ್ ಸಮೂಹ ಭಿನ್ನತೆಗಳನ್ನು ಮುಂದುವರೆಸಿಕೊಂಡು ಹೋಗುವಲ್ಲಿ ಸಾಂಸ್ಕೃತಿಕ ಅಂಶಗಳು ಮಹತ್ವದ ಕಾರ್ಯ ನಿರ್ವಹಿಸುತ್ತವೆ.

ಸಂವಿಧಾನದ ೪೬ನೆಯ ವಿಧಿಯು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಸಮಾಜೋ–ಆರ್ಥಿಕ ಹಿತಾಸಕ್ತಿಗಳನ್ನು ಉತ್ತೇಜಿಸಲು ಸರ್ಕಾರವನ್ನು ಬಾಧ್ಯಸ್ಥವನ್ನಾಗಿ ಮಾಡುತ್ತದೆ. ಸಂವಿಧಾನದ ಈ ವಿಧಿ ಹಾಗೂ ಹಲವಾರು ಇತರೆ ಸವಲತ್ತುಗಳ ದೆಸೆಯಿಂದಾಗಿ ಈ ವರ್ಗದ ಜನರು ಈಗ ಸಮಾಜದಲ್ಲಿ ಗೌರವಯುತ ಸ್ಥಾನಮಾನ ಪಡೆದುಕೊಂಡಿದ್ದರೂ, ಅದು

ಸಂಪೂರ್ಣವಾಗಿ ಯಶಸ್ವಿಯಾಗಿಲ್ಲ. ಶಿಕ್ಷಣವನ್ನು ಪಡೆದುಕೊಳ್ಳುವಾಗ ಸಹ ತಾರತಮ್ಯ ಎದುರಿಸಬೇಕಾಗುತ್ತದೆ. ಉದ್ಯೋಗ ಪಡೆಯುವಾಗ ಮತ್ತು ಪಡೆದ ನಂತರ ಜಾತಿಯ ಕಾರಣಕ್ಕೆ ಹಲವು ರೀತಿಯ ಶೋಷಣೆ ನಿರಂತರವಾಗಿ ಮುಂದುವರೆಯುತ್ತಲೇ ಇದೆ. ಗ್ರಾಮೀಣ ಭಾಗದಲ್ಲಿ ಇನ್ನೂ ಹಲವಾರು ರೀತಿಯ ತಾರತಮ್ಯಗಳಿಗೆ ಮತ್ತು ವಂಚನೆಗೆ, ದುಸ್ಥಿತಿಗೆ ಬಲಿಯಾಗುತ್ತಿದ್ದಾರೆ.

ಈ ನಿಟ್ಟಿನಲ್ಲಿ ಸರಕಾರವು ಹನ್ನೊಂದನೆಯ ಪಂಚವಾರ್ಷಿಕ ಯೋಜನೆಯು ಪ್ರಾರಂಭವಾದಾಗಿನಿಂದ ಎಲ್ಲರನ್ನು ಒಳಗೊಳ್ಳುವ ಅಭಿವೃದ್ಧಿ ಪರಿಕಲ್ಪನೆಯನ್ನು ಜಾರಿ ಮಾಡಲು ಪ್ರಯತ್ನಿಸಿದೆ. ಕೆಲವೊಂದು ಸಾಮಾಜಿಕ ತಾರತಮ್ಯ ಹಾಗೂ ಅಸಮಾನತೆಗಳನ್ನು ಕಡಿಮೆಗೊಳಿಸಲು ಕ್ರಮಗಳನ್ನು ಕೈಗೊಂಡಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ನಮ್ಮ ಒಟ್ಟು ಜನಸಂಖ್ಯೆಯಲ್ಲಿ ಗಣನೀಯ ಪಾಲು ಪಡೆದಿದೆಯಾದ್ದರಿಂದ ಸಮಸ್ಯೆಯು ತೀವ್ರತರದ್ದಾಗಿದೆಯೆಂದೇ ಹೇಳಬಹುದು.

ಪರಿಶಿಷ್ಟ ಜಾತಿಯವರು ಪಾರಂಪರಿಕವಾಗಿ ಅಸ್ಪೃಶ್ಯರನ್ನಾಗಿ ಕಾಣಲಾಗುತ್ತಿದ್ದು ಇವರು ಸಾಂಪ್ರದಾಯಿಕವಾಗಿ ತಿರಸ್ಕಾರದಿಂದ ಕಾಣುವ ಹೀನ ಕೆಲಸದಲ್ಲಿಯೇ ದುಡಿಯುವಂತೆ ಮಾಡಿದ ವ್ಯವಸ್ಥೆಯು ಅವರಿಗೆ ಕಡಿಮೆ ಕೂಲಿಯನ್ನು ನೀಡಿ ಅತ್ಯಂತ ಕೆಳಮಟ್ಟದಲ್ಲಿಯೇ ಇರುವಂತೆ ನೋಡಿಕೊಳ್ಳುತ್ತದೆ. ಪರಿಶಿಷ್ಟ ಪಂಗಡಗಳ ಜನರು ಸಾಮಾನ್ಯವಾಗಿ ಅಭಿವೃದ್ಧಿಯ ಪರಿಧಿಯಿಂದ ಬಹುದೂರವಿದ್ದರು ಅವರ ಸಾಮಾಜಿಕ ಹಾಗೂ ರಾಜಕೀಯ ಪಾಲ್ಗೊಳ್ಳುವಿಕೆ ಅತ್ಯಂತ ಕಡಿಮೆ ಇರುತ್ತದೆಂದು ಹೇಳಲಾಗುತ್ತದೆ. ಆದರೆ ರಾಯಚೂರು ಜಿಲ್ಲೆಯಲ್ಲಿ ಸ್ವಲ್ಪ ವಿಚಿತ್ರವಾದ ಚಿತ್ರಣ ಈ ಸಮೂಹಕ್ಕೆ ಇದೆ. ರಾಜಕೀಯವಾಗಿ ಈ ಸಮೂಹ ಬಲಿಷ್ಠವಾಗಿದ್ದರು, ಮೇಲ್ವರ್ಗದ ಹಿತಾಸಕ್ತಿಯನ್ನು ಕಾಪಾಡುತ್ತದೆ. ಬಹುತೇಕ ಪರಿಶಿಷ್ಟ ಪಂಗಡ ಜನರು ಕಡು ಬಡತನದಲ್ಲಿ ಜೀವಿಸುತ್ತಿರುವುದು ಆಶ್ಚರ್ಯಕರವಲ್ಲ. ಅವರು ಆರ್ಥಿಕವಾಗಿ ಹಿಂದುಳಿದಿದ್ದು, ಸಾಮಾಜಿಕ ಅಂಚಿನಲ್ಲಿದ್ದು, ರಾಜಕೀಯ ದೃಷ್ಟಿಕೋನದಿಂದ ಹಕ್ಕು ವಂಚಿತರಾಗಿದ್ದಾರೆ. ಕರ್ನಾಟಕದ ಮಾನವ ಅಭಿವೃದ್ಧಿ ವರದಿ (೨೦೦೫)ಯು ದುರ್ಬಲ ವರ್ಗದವರ ಮಾನವ ಅಭಿವೃದ್ಧಿಯಾಗುವರೆಗೆ, ವಿಶೇಷವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಮುದಾಯದವರ ಜೀವನಮಟ್ಟವನ್ನು ಕನಿಷ್ಠ ಪ್ರಬಲವರ್ಗದ ಜನರ ಜೀವನ ಮಟ್ಟದವರೆಗೆ ತಲುಪಿಸದಿದ್ದರೆ, ಮಾನವ ಅಭಿವೃದ್ಧಿ ಪರಿಕಲ್ಪನೆಗೆ ಹೆಚ್ಚು ಮಹತ್ವವಿರುವುದಿಲ್ಲವೆಂದು ಅಭಿಪ್ರಾಯಪಟ್ಟಿದೆ.[೧]

ಭಾರತೀಯ ಸಂವಿಧಾನವು ಕಲ್ಯಾಣ ರಾಜ್ಯದ ಪರಿಕಲ್ಪನೆಯೊಳಗೆ ಕಾನೂನುಬದ್ಧವಾಗಿ ಎಲ್ಲ ಪ್ರಜೆಗಳಿಗೆ ಸಮಾನತೆಯ ಹಕ್ಕನ್ನು ನೀಡಿರುವುದಲ್ಲದೇ ಸರ್ಕಾರದ ಕಾರ್ಯನೀತಿಯನ್ನು ರೂಪಿಸಲು ರಾಜನೀತಿಯ ನಿರ್ದೇಶಕ ತತ್ವಗಳನ್ನು ನೀಡಿದೆ. ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಶೋಷಣೆಯ ಕ್ರೌರ್ಯವನ್ನು ಹೋಗಲಾಡಿಸಲು

ನಿರಂತರವಾಗಿ ಹೋರಾಡುತ್ತ ಬಂದಿದ್ದಾರೆ. ಈ ಸಮುದಾಯಕ್ಕೆ ಬಿಡುಗಡೆಯ ಮುಕ್ತಿಗಾಗಿ ಸಂವಿಧಾನದಲ್ಲಿ ಹಲವಾರು ಹಕ್ಕುಗಳನ್ನು ನೀಡಲಾಗಿದೆ. ಆದರೂ ಶೋಷಣೆ ಮುಂದುವರೆದಿದೆ. ಚುನಾಯಿತ ಸಂಸ್ಥೆಗಳಲ್ಲಿ, ಸರ್ಕಾರಿ ಕೆಲಸಗಳಲ್ಲಿ ಹಾಗೂ ಶಿಕ್ಷಣ ಸಂಸ್ಥೆಗಳಲ್ಲಿ ಸಾಮಾಜಿಕ ನಿಮ್ನ ವರ್ಗಗಳ ಜನರಿಗೆ ಮೀಸಲಾತಿಯನ್ನು ಕಲ್ಪಿಸಿದೆ. ಈ ಸಾಮಾಜಿಕ ಗುಂಪುಗಳಿಗೆಂದೇ ನಿರ್ದಿಷ್ಟ ಪ್ರಮಾಣದ ಅನುದಾನ ಮೀಸಲಿಡಲಾಗುತ್ತಿದೆ. ಆದರೆ ಇಂತಹ ಸಕಾರಾತ್ಮಕ ಕಾರ್ಯಕ್ರಮಗಳು ಈ ಸಮೂಹಗಳನ್ನು ಮುಖ್ಯವಾಹಿನಿಗೆ ತರಲು ಸಹಾಯಕಾರಿಯಾಗಿವೆಯೇ? ಅವರು ತಮ್ಮ ಹಕ್ಕುಗಳನ್ನು ಹಾಗೂ ಸಾಮರ್ಥ್ಯಗಳನ್ನು ಸಮರ್ಪಕವಾಗಿ ಪಡೆದಿದ್ದಾರೆಯೇ? ಈ ಎಲ್ಲಾ ಪ್ರಶ್ನೆಗಳಿಗೆ ಪರಿಹಾರ ಕಂಡುಕೊಳ್ಳಲು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮೂಹವನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಪ್ರಸ್ತುತ ಅಧ್ಯಯನವು ರಾಯಚೂರು ಜಿಲ್ಲೆಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರ ಸ್ಥಿತಿಗತಿಗಳ ಕುರಿತಂತೆ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

೬.೧ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅಭಿವೃದ್ಧಿ ಸ್ಥಿತಿಗತಿ

ನಮ್ಮ ಸಮಾಜದ ಸಂದರ್ಭದಲ್ಲಿ ಅಭಿವೃದ್ಧಿಯ ದೃಷ್ಟಿಯಿಂದ ಅಂಚಿನಲ್ಲಿರುವವರಲ್ಲಿ ವಂಚಿತರು ಹಾಗೂ ಸಾಮಾಜಿ ತಾರತಮ್ಯ ಶೋಷಣೆಗಳಿಗೆ ಒಳಗಾದವರು ಎಂದರೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಸಮುದಾಯ. ಪರಿಶಿಷ್ಟ ಜಾತಿ ಸಮೂಹವು ಸಮಾಜದಲ್ಲಿ ಅನೂಚಾನವಾಗಿ ಹರಿದುಕೊಂಡು ಬರುತ್ತಿದ್ದ ಅಸ್ಪೃಶ್ಯತೆಯ ಅನಿಷ್ಟಕ್ಕೆ ಗುರಿಯಾಗಿದ್ದರು. ಪರಿಶಿಷ್ಟ ಪಂಗಡದ ಜನಸಮೂಹವು ಒಟ್ಟು ಸಮುದಾಯದಿಂದ ದೂರದಲ್ಲಿ ಬದುಕು ನಡೆಸುತ್ತಿದ್ದವರು. ಇವೆರಡೂ ಜನ ಸಮೂಹಗಳು ಇಂದಿಗೂ ಸಮಾಜದಲ್ಲಿ ದುಸ್ಥಿತಿ ಅನುಭವಿಸುತ್ತಿದ್ದಾರೆ. ಇದಕ್ಕೆ ಚಾರಿತ್ರಿಕ ಸಾಮಾಜಿಕ ಹಿನ್ನೆಲೆಯಿರುವುದನ್ನು ನಾವು ಮರೆಯಬಾರದು. ಕರ್ನಾಟಕದ ರಾಯಚೂರು ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಪಾಲು ಅಧಿಕವಾಗಿದೆ. ಪರಿಶಿಷ್ಟ ಪಂಗಡ ಪಾಲು ದೊಡ್ಡ ಪಾಲು ಅಕ್ಷರಶಃ ನೂರಾರು ಜಾತಿ–ಉಪಜಾತಿಗಳಿಂದ ಕೂಡಿರುವ ಜನಸಮೂಹಗಳು ಇವಾಗಿವೆ. ಸಾಮಾಜಿಕ ಮತ್ತು ಆರ್ಥಿಕವಾಗಿ ದುರ್ಬಲರಾಗಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜನಸಮೂಹಗಳು ಅಭಿವೃದ್ಧಿಯ ಯಾವುದೇ ಮಾನದಂಡ ಅಥವಾ ಸೂಚಿಗಳನ್ನು ತೆಗೆದುಕೊಂಡರೂ ಸಮಾಜದ ಇತರೆ ಸಮೂಹಕ್ಕಿಂತ ಇವರ ಬದುಕು ಹೆಚ್ಚು ದುಸ್ಥಿತಿಯಲ್ಲಿರುವುದು ಕಂಡುಬರುತ್ತದೆ. ಅಭಿವೃದ್ಧಿಗೆ ಇವರ ಕಾಣಿಕೆ ಅಪಾರ. ಆದರೆ ಅಭಿವೃದ್ಧಿಯ ಫಲಗಳಿಗೆ ಬಂದರೆ ಇವರು ಅದರಿಂದ ತೀವ್ರ ವಂಚಿತರಾಗಿದ್ದಾರೆ. ಬಡತನದ ತೀವ್ರತೆ ಇವರಲ್ಲಿ ಅತಿ ಹೆಚ್ಚು ಸಾಮಾಜಿಕವಾಗಿ ತಾರತಮ್ಯಗಳಿಗೆ ಒಳಗಾಗಿದ್ದಾರೆ. ಆರ್ಥಿಕವಾಗಿ ದುರ್ಬಲರಾಗಿದ್ದಾರೆ. ರಾಜಕೀಯವಾಗಿ ಅಬಲರಾಗಿದ್ದಾರೆ. ರಾಜಕೀಯವಾಗಿ ಅಧಿಕಾರ ಪಡೆದರೂ ಬೇರೆ ಸಮುದಾಯದವರು ಹೇಳಿದ ರೀತಿಯಲ್ಲಿ ಕೆಲಸ ಮಾಡುತ್ತಾರೆ. ಈ ಕಾರಣಕ್ಕೆ ರಾಜಕೀಯದಿಂದ ಅವರನ್ನು ಅಬಲರಾಗಿರುವಂತೆ ಮಾಡಿರುವುದು.

[illegible]

ಕೋಷ್ಟಕ–೬.೧

ಒಟ್ಟು ಜನಸಂಖ್ಯೆಯಲ್ಲಿ ಪ.ಜಾತಿ ಮತ್ತು ಪ.ಪಂಗಡಗಳ ಪ್ರಮಾಣ: ೧೯೯೧ ಮತ್ತು ೨೦೦೧

ವಿವರ	೧೯೯೧		೨೦೦೧	
	ಕರ್ನಾಟಕ	ರಾಯಚೂರು	ಕರ್ನಾಟಕ	ರಾಯಚೂರು
ಒಟ್ಟು ಜನಸಂಖ್ಯೆಯಲ್ಲಿ ಪ.ಜಾತಿ ಜನಸಂಖ್ಯೆಯ ಪ್ರಮಾಣ	ಶೇ.೧೬೩೮	ಶೇ.೧೫.೬೫	ಶೇ.೧೬.೨೦	ಶೇ.೧೫.೭೦
ಒಟ್ಟು ಜನಸಂಖ್ಯೆಯಲ್ಲಿ ಪ.ಪಂ ಜನಸಂಖ್ಯೆಯ ಪ್ರಮಾಣ	ಶೇ.೪.೨೬	೮.೧೩	ಶೇ.೬೫೫	ಶೇ.೯.೫೦

ಜನಸಂಖ್ಯೆಯ ಪ್ರಮಾಣ

ಇವೆರಡೂ ಜನಸಮೂಹಗಳು ಆರ್ಥಿಕ ಅಭಿವೃದ್ಧಿ ಹಾಗೂ ಮಾನವ ಅಭಿವೃದ್ಧಿ ಎರಡರಲ್ಲೂ ಉಳಿದ ಜನಸಮೂಹಕ್ಕಿಂತ ಹಿಂದುಳಿದಿದೆ. ಈ ಜನಸಮೂಹಗಳು ಬದುಕನ್ನು ಉತ್ತಮ ಪಡಿಸುವ ದಿಶೆಯಲ್ಲಿ ಸರ್ಕಾರವು ಅನೇಕ ಕಾರ್ಯಕ್ರಮಗಳನ್ನು ಜಾರಿಗೊಳಿಸುತ್ತಾ ಬಂದಿದೆ. ಆದರೆ ಅವು ಇವರ ಬದುಕನ್ನು ಉತ್ತಮಗೊಳಿಸುವಲ್ಲಿ ಸಂಪೂರ್ಣವಾಗಿ ಯಶಸ್ವಿಯಾಗಿಲ್ಲ. ಇತ್ತೀಚಿನ ಸಂಶೋಧನೆಗಳು ಕರ್ನಾಟಕದ ಗ್ರಾಮೀಣ ಪ್ರದೇಶದಲ್ಲಿ ಜಾತಿಗಳು ತಮ್ಮ ಶ್ರೇಣಿಕರಣದ ಸ್ವರೂಪವನ್ನು ಕಳೆದುಕೊಳ್ಳುತ್ತಿವೆಯೆಂದು ಮತ್ತು ಅವು ಇಂದು ಕೇವಲ 'ಭಿನ್ನತೆಯ'ಯ 'ಅನನ್ಯ'ತೆಯ ಆಕರಗಳಾಗಿವೆಯೆಂದು ಪ್ರತಿಪಾದಿಸುತ್ತಿವೆ.[೨] **(ಜೇಮ್ಸ್ ಮೇನರ್, ೨೦೦೭, ಶ್ರೀನಿವಾಸ್, ೧೯೮೮)** ಈ ಬಗೆಯ ಅಧ್ಯಯನಗಳ ಮುಖ್ಯ ಸಮಸ್ಯೆಯೆಂದರೆ ಅವು ಕರ್ನಾಟಕದ ಪ್ರಾದೇಶಿಕ ವಿಭಿನ್ನತೆಗಳನ್ನು ಪರಿಗಣಿಸುತ್ತಿಲ್ಲ. ಈ ಬಗೆಯ ಅಧ್ಯಯನಗಳು ಮುಖ್ಯವಾಗಿ ದಕ್ಷಿಣ ಕರ್ನಾಟಕ ಪ್ರದೇಶವನ್ನು, ಅಂದರೆ ಹಳೆಯ ಮೈಸೂರು ಸಂಸ್ಥಾನದ ಪ್ರದೇಶವನ್ನು ಮಾತ್ರ ಒಳಗೊಳ್ಳುತ್ತವೆ. ಈ ಅಧ್ಯಯನಗಳ ಮಾಹಿತಿಯು ಮುಖ್ಯವಾಗಿ ದಕ್ಷಿಣ ಕರ್ನಾಟಕದಿಂದ ಬಂದಿದೆ. ಈ ಅಧ್ಯಯನಗಳ ತಥ್ಯಗಳನ್ನು ಸಾರಸಗಟಾಗಿ ಉತ್ತರ ಕರ್ನಾಟಕ ಪ್ರದೇಶಕ್ಕೆ, ಅದರಲ್ಲೂ ಮುಖ್ಯವಾಗಿ ರಾಜ್ಯದ ಹಿಂದುಳಿದಿರುವ ಜಿಲ್ಲೆಗಳಾದ ರಾಯಚೂರು, ವಿಜಾಪುರ, ಬಾಗಲಕೋಟೆ, ಗುಲಬರ್ಗಾ, ಕೊಪ್ಪಳ, ಬೀದರ್ ಮತ್ತು ಬಳ್ಳಾರಿಗಳಿಗೆ ಅನ್ವಯಿಸುವುದು ಸಾಧ್ಯವಿಲ್ಲ. ರಾಜ್ಯದ ಉತ್ತರ ಭಾಗದ ಜಿಲ್ಲೆಗಳಲ್ಲಿ ಊಳಿಗಮಾನ್ಯ ಜಮೀನುದಾರಿ ಸಂಬಂಧಗಳು ಇನ್ನೂ ಗಟ್ಟಿಯಾಗಿ ಉಳಿದುಕೊಂಡು ಬಂದಿರುವುದನ್ನು ನಾವು ಕಡೆಗಣಿಸುವುದು ಸರಿಯಲ್ಲ. ಈ ಹಿನ್ನೆಲೆಯಲ್ಲಿ ರಾಯಚೂರು ಜಿಲ್ಲೆಯಲ್ಲಿ ಜಮೀನುದಾರಿಕೆಯ ಅಸ್ತಿತ್ವವನ್ನು ಚರ್ಚಿಸಬೇಕಾಗುತ್ತದೆ. ಮೆನರ್ ಮತ್ತು ಶ್ರೀನಿವಾಸ್, ಎಂ.ಎನ್.ವಾದಿಸುವಂತೆ ರಾಜ್ಯದ ದಕ್ಷಿಣ, ಭಾಗದ ಜಿಲ್ಲೆಗಳಲ್ಲಿ ಜಾತಿಗಳು ತಮ್ಮ ಶ್ರೇಣೀಕರಣದ ಸ್ವರೂಪವನ್ನು ಕಳೆದುಕೊಂಡಿರಬಹುದು. ಕಳೆದ ಒಂದು ಶತಮಾನದ (ಏಕೀಕರಣದ ಪೂರ್ವ ೫೦ ವರ್ಷ ಮತ್ತು ಏಕೀಕರಣದ ನಂರತರದ ೫೦ ವರ್ಷ) ಅವಧಿಯಲ್ಲಿ ರಾಜ್ಯದ ದಕ್ಷಿಣ ಭಾಗದ ಜಿಲ್ಲೆಗಳಲ್ಲಿ ತೀವ್ರಗತಿಯ ಸಾಮಾಜಿಕ ಆರ್ಥಿಕ ಬದಲಾವಣೆ ಅಲ್ಲಿ ಉಂಟಾಗಿರಬಹುದು. ಈ ಮಾತನ್ನು ಉತ್ತರ ಕರ್ನಾಟಕ ಪ್ರದೇಶಕ್ಕೆ ಸಂಬಂಧಿಸಿದಂತೆ ಹೇಳುವುದು ಸಾಧ್ಯವಿಲ್ಲ. ದಕ್ಷಿಣ

[illegible]

ಕರ್ನಾಟಕ ಪ್ರದೇಶದಲ್ಲಿ ಊಳಿಗಮಾನ್ಯ ವ್ಯವಸ್ಥೆಯ ಅಳಿದು ಬಂಡವಾಳಶಾಹಿ ವ್ಯವಸ್ಥೆಯ ೧೯೫೦ರ ನಂತರ ಬೆಳೆಯ ತೊಡಗಿತು. ಆದರೆ ಉತ್ತರ ಕರ್ನಾಟಕದಲ್ಲಿ ಅದರಲ್ಲೂ ಅಲ್ಲಿನ ಹಿಂದುಳಿದ ಜಿಲ್ಲೆಗಳಲ್ಲಿ ಸಾಮಾಜಿಕ ಬದಲಾವಣೆಯ ಗತಿ ತುಂಬ ಮಂದವಾಗಿತ್ತು. ದಕ್ಷಿಣ ಕರ್ನಾಟಕ ಪ್ರದೇಶವು ಏಕೀಕರಣ ಪೂರ್ವದಲ್ಲೇ ತೀವ್ರ ಬದಲಾವಣೆಗಳನ್ನು ಅನುಭವಿಸಿತ್ತು. ಅದರಿಂದಾಗಿ ಅಲ್ಲಿ ಬಂಡವಾಳಶಾಹಿ ಬೇರು ಬಿಡುವುದು ಸಾಧ್ಯವಾಯಿತು. ಸ್ವಾತಂತ್ರ್ಯ ನಂತರ ಹಾಗೂ ಏಕೀಕರಣದ ನಂತರದಲ್ಲಿ ಅಲ್ಲಿ ಬದಲಾವಣೆಯ ಗತಿ ತೀವ್ರವಾಯಿತು. ಉತ್ತರ ಕರ್ನಾಟಕ ಪ್ರದೇಶದಲ್ಲಿ ಬದಲಾವಣೆಯ ಗಾಳಿಯು ಏಕೀಕರಣದ ನಂತರ ಬೀಸತೊಡಗಿತು. ಆಧುನಿಕತೆಯೆಂಬುದು ತುಂಬಾ ತಡವಾಗಿ ಉತ್ತರ ಕರ್ನಾಟಕ ಪ್ರದೇಶವನ್ನು ಪ್ರವೇಶಿಸಿತು. ದಕ್ಷಿಣ ಕರ್ನಾಟಕ ಪ್ರದೇಶದಲ್ಲಿ ಆಧುನಿಕೋತ್ತರ ಸಮಾಜದ ಬಗ್ಗೆ ಮಾತನಾಡಲಾಗುತ್ತಿದ್ದರೆ, ಉತ್ತರ ಕರ್ನಾಟಕದ ಹಿಂದುಳಿದಿರುವ ಜಿಲ್ಲೆಗಳ ಸಂದರ್ಭದಲ್ಲಿ ಆಧುನಿಕತೆ ಕುರಿತಂತೆ ಚರ್ಚಿಸಬೇಕಾದ ಸ್ಥಿತಿಯಿದೆ. ಈ ಕಾರಣದಿಂದಾಗಿಯೇ ಅಲ್ಲಿ ಜಾತಿ ವ್ಯವಸ್ಥೆ ಇನ್ನೂ ಶ್ರೇಣೀಕರಣದ ಆಕರವಾಗಿ ಮುಂದುವರಿದಿದೆ. ಅದಕ್ಕೆ ಸಂಬಂಧಿಸಿದ ಇತರೆ ಅನಿಷ್ಟಗಳಾದ ತಾರತಮ್ಯ, ದಬ್ಬಾಳಿಕೆ, ಮೌಢ್ಯ ಅಲ್ಲಿ ಮುಂದುವರಿದಿವೆ. ಪ್ರಸ್ತುತ ಅಧ್ಯಯನದಲ್ಲಿ ರಾಯಚೂರು ಜಿಲ್ಲೆಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರ ಅಭಿವೃದ್ಧಿ ಸ್ಥಿತಿಗತಿಯನ್ನು ಕುರಿತಂತೆ ಚರ್ಚಿಸಲಾಗಿದೆ. ಕರ್ನಾಟಕ ಸರ್ಕಾರ ಯೋಜನಾ ಇಲಾಖೆಯು ಸಿದ್ದಪಡಿಸಿರುವ "ಕರ್ನಾಟಕ ಮಾನವ ಅಭಿವೃದ್ಧಿ ವರದಿ: ೨೦೦೫"ರಲ್ಲಿ ಪ್ರಥಮ ಬಾರಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಧಾರಣಾ ಸಾಮರ್ಥ್ಯವನ್ನು ಅಳೆಯುವ ಒಂದು ಪ್ರಯುತ್ನ ಮಾಡಲಾಗಿದೆ. ಸಾಮಾಜಿಕ ಗುಂಪುಗಳಿಗೆ ಮಾನವ ಅಭಿವೃದ್ಧಿ ಸೂಚ್ಯಂಕವನ್ನು ಗಣನೆ ಮಾಡುವ ಅಗತ್ಯವಿದೆ.

ಕೋಷ್ಟಕ–೬.೨

ಮಾನವ ಅಭಿವೃದ್ಧಿ ಸೂಚ್ಯಂಕ: ೨೦೦೧

ಕ್ರ.ಸಂ.	ವಿವರ	ಎಚ್.ಡಿ.ಐ(HDI)	ಜಿ.ಡಿ.ಐ(GDI)
೧.	ಕರ್ನಾಟಕ ಒಟ್ಟು ಜನಸಂಖ್ಯೆ (೧೦೦೧)	೦.೬೫೦	೦.೬೩೭
೨.	ಪರಿಶಿಷ್ಟ ಜಾತಿ (೨೦೦೧)	೦.೫೪೭	೦.೫೩೦
೩.	ಪರಿಶಿಷ್ಟ ಪಂಗಡ (೨೦೦೧)	೦.೪೪೩	೦.೪೨೨

ಈ ಮೇಲಿನ ಕೋಷ್ಟಕದಲ್ಲಿ ಕರ್ನಾಟಕ ರಾಜ್ಯ ಒಟ್ಟು ಜನಸಂಖ್ಯೆ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಜನಸಂಖ್ಯೆಗಳಿಗೆ ಸಂಬಂಧಿಸಿದ ಮಾನವ ಅಭಿವೃದ್ಧಿ ಸೂಚ್ಯಂಕಗಳನ್ನು ತೋರಿಸಲಾಗಿದೆ. ಇಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕಕ್ಕೆ ಸಂಬಂಧಿಸಿದಂತೆ ಒಟ್ಟು ಜನಸಂಖ್ಯೆ ಹಾಗೂ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಸೂಚ್ಯಂಕಗಳ ನಡುವೆ ಅಂತರವಿರುವುದು ಕಂಡು ಬರುತ್ತದೆ. ೦.೧೦೩ ಅಂಶಗಳಷ್ಟು ಕಡಿಮೆಯಿದೆ. ಪರಿಶಿಷ್ಟ ಪಂಗಡಕ್ಕೆ ಸಂಬಂಧಿಸಿದಂತೆ ಸೂಚ್ಯಂಕವು ೦.೨೦೭ ಅಂಶಗಳಷ್ಟು ಕಡಿಮೆಯಿದೆ. ಅಂದರೆ ಪರಿಶಿಷ್ಟ ಜಾತಿಯ ಮಾನವ

ಅಭಿವೃದ್ಧಿ ಸೂಚ್ಯಂಕವು ಒಟ್ಟು ಜನಸಂಖ್ಯೆಯ ಸೂಚ್ಯಂಕದ ಶೇ.೮೮.೪೮ರಷ್ಟಿದೆ. ಪರಿಶಿಷ್ಟ ಪಂಗಡದ ಸೂಚ್ಯಂಕವು ಒಟ್ಟು ಜನಸಂಖ್ಯೆಯ ಸೂಚ್ಯಂಕದ ಶೇ.೯೯.೩೬ರಷ್ಟಿದೆ. ಲಿಂಗಸಂಬಂಧಿ ಅಭಿವೃದ್ಧಿ ಸೂಚ್ಯಂಕಕ್ಕೆ ಸಂಬಂಧಿಸಿದಂತೆಯೂ ಪ.ಜಾತಿಯ ಸೂಚ್ಯಂಕವು ಒಟ್ಟು ಜನಸಂಖ್ಯೆಯ ಸೂಚ್ಯಂಕದ ಶೇ.೮೮.೫೦ರಷ್ಟಿದ್ದರೆ, ಪರಿಶಿಷ್ಟ ಪಂಗಡದ ಸೂಚ್ಯಂಕವು ಒಟ್ಟು ಜನಸಂಖ್ಯೆಯ ಸೂಚ್ಯಂಕದ ಶೇ.೯೯.೪೨ರಷ್ಟಿದೆ. ಒಟ್ಟಾರೆ ಪ.ಜಾತಿ ಮತ್ತು ಪ.ಪಂಗಡಗಳ ಜನಸಮೂಹದ ಅಭಿವೃದ್ಧಿ ಸ್ಥಿತಿಗತಿಯು ಉಳಿದ ಜನಸಮೂಹದ ಅಭಿವೃದ್ಧಿ ಸ್ಥಿತಿಗತಿಗಿಂತ ಕೆಳಮಟ್ಟದಲ್ಲಿದೆ.

ಈ ಅಧ್ಯಾಯದಲ್ಲಿ ರಾಯಚೂರು ಜಿಲ್ಲೆ ಹಾಗೂ ಅದರ ತಾಲ್ಲೂಕುಗಳಲ್ಲಿನ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಜನಸಮೂಹದ ಅಭಿವೃದ್ಧಿ ಸ್ಥಿತಿಗಳನ್ನು ಕುರಿತಂತೆ ಚರ್ಚಿಸಲಾಗಿದೆ. ಈ ಸಮೂಹದ ಜನಸಂಖ್ಯೆ, ಲಿಂಗ ಅನುಪಾತ, ಗ್ರಾಮೀಣ–ನಗರ ಅಂತರ, ಸಾಕ್ಷರತೆ, ಶಿಕ್ಷಣ ಉನ್ನತ ಶಿಕ್ಷಣ, ಆರೋಗ್ಯ, ದುಡಿಮೆ ಕೃಷಿ ಅವಲಂಬನೆ ಮುಂತಾದ ಸಂಗತಿಗಳನ್ನು ಇಲ್ಲಿ ದಾಖಲಿಸಲಾಗಿದೆ ಹಾಗೂ ತುಲನಾತ್ಮಕವಾಗಿ ವಿಶ್ಲೇಷಿಸಲಾಗಿದೆ.

೬.೨ ಜನಸಂಖ್ಯೆಯ

ರಾಯಚೂರು ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಜನಸಂಖ್ಯೆಯಲ್ಲಿ ೧೯೯೧ರಲ್ಲಿ ೨.೪೯ ಲಕ್ಷವಿದ್ದುದು ೨೦೦೧ರಲ್ಲಿ ೩.೧೭ ಲಕ್ಷಕ್ಕೇರಿದೆ. ಈ ದಶಕದಲ್ಲಿ ಅದರ ಬೆಳವಣಿಗೆ ಪ್ರಮಾಣ ಶೇ.೧೪.೫೦ ಇದು ರಾಜ್ಯದ ಒಟ್ಟು ಪರಿಶಿಷ್ಟ ಜಾತಿ ಜನಸಂಖ್ಯೆಯ ಬೆಳವಣಿಗೆ ಪ್ರಮಾಣವಾದ ಶೇ.೧೬.೨೧ಕ್ಕಿಂತ ಕಡಿಮೆಯಿದೆ. ಈ ಜಿಲ್ಲೆಯಲ್ಲಿ ಒಟ್ಟು ಜನಸಂಖ್ಯೆಗೆ ಸಾಪೇಕ್ಷವಾಗಿ ಪರಿಶಿಷ್ಟ ಜಾತಿ ಜನಸಂಖ್ಯೆ ೧೯೯೧ರಲ್ಲಿ ಶೇ.೧೮.೪೦ರಷ್ಟಿದ್ದುದು ೨೦೦೧ರಲ್ಲಿ ಶೇ.೧೯.೩೦ಕ್ಕೆ ಏರಿದೆ. ಸ್ಥೂಲವಾಗಿ ಅದರ ಪ್ರಮಾಣವು ಕಳೆದ ದಶಕದಲ್ಲಿ ಸ್ಥಿರವಾಗಿದೆ. ರಾಜ್ಯಮಟ್ಟದಲ್ಲೂ ಅದು ಹೆಚ್ಚು ಕಡಿಮೆ ಶೇ.೧೬ರ ಆಸುಪಾಸಿನಲ್ಲಿ ಸ್ಥಿರವಾಗಿದೆ. ರಾಜ್ಯಮಟ್ಟದಲ್ಲಿ ಒಟ್ಟು ಜನಸಂಖ್ಯೆಗೆ ಸಾಪೇಕ್ಷವಾಗಿ ಪ.ಜಾತಿ ಪ್ರಮಾಣವು ೨೦೦೧ರಲ್ಲಿ ಶೇ.೧೬.೨೦ರಷ್ಟಿದ್ದುದು, ರಾಯಚೂರು ಜಿಲ್ಲೆಯಲ್ಲಿ ಅವರ ಪ್ರಮಾಣವು ಶೇ.೧೯.೩೦ ಏರಿದೆ. ರಾಯಚೂರು ಜಿಲ್ಲೆಯ ಮೂರು ತಾಲ್ಲೂಕುಗಳಲ್ಲಿ ಪರಿಶಿಷ್ಟ ಜಾತಿ ಪ್ರಮಾಣವು ಜಿಲ್ಲಾ ಸರಾಸರಿಗಿಂತ ಅಧಿಕವಾಗಿದೆ. ಬಹಳ ವಿಶಿಷ್ಟವಾದ ಸಂಗತಿಯೆಂದರೆ ಜಿಲ್ಲೆಯ ಒಟ್ಟು ಪರಿಶಿಷ್ಟ ಜಾತಿ ಜನಸಮೂಹದಲ್ಲಿ ಶೇ.೩೦.೬೦ರಷ್ಟು ಜಿಲ್ಲಾ ಕೇಂದ್ರವುಳ್ಳ ರಾಯಚೂರು ತಾಲ್ಲೂಕಿನಲ್ಲಿ ನೆಲೆಗೊಂಡಿದ್ದಾರೆ. ಪರಿಶಿಷ್ಟ ಜಾತಿ ಜನಸಮೂಹದ ತಾಲ್ಲೂಕುವಾರು ಪ್ರಮಾಣವು ೧೯೯೧ರಿಂದ ೨೦೦೧ರ ಅವಧಿಯಲ್ಲಿ ತೀವ್ರ ಬದಲಾವಣೆಯಾಗಿಲ್ಲ. ಈ ಜಿಲ್ಲೆಯಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನಸಮೂಹದ ಪ್ರಮಾಣವು ಹೆಚ್ಚು ಕಡಿಮೆ ಸಮಸಮನಾಗಿ ಮುಂದುವರೆದಿದೆ. ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ಪಂಗಡ ಪ್ರಮಾಣವು ೧೯೯೧ರಲ್ಲಿ ಶೇ.೧.೯೦ರಷ್ಟಿದ್ದುದು ೨೦೦೧ರಲ್ಲಿ ಅದು ಶೇ.೨.೧೦ರಷ್ಟಾಗಿದೆ. ಪರಿಶಿಷ್ಟ ಪಂಗಡದ ಜನಸಂಖ್ಯೆಯ ಬೆಳವಣಿಗೆ ಪ್ರಮಾಣವು ಅತ್ಯಧಿಕ ಮಟ್ಟದಲ್ಲಿದೆ. ರಾಜ್ಯಮಟ್ಟದಲ್ಲಿ ಅದರ ಬೆಳವಣಿಗೆ ಪ್ರಮಾಣ ೧೯೯೧–೨೦೦೧ರ ದಶಕದಲ್ಲಿ ಶೇ.೮೦.೮೨ರಷ್ಟಿದ್ದರೆ ರಾಯಚೂರು ಜಿಲ್ಲೆಯಲ್ಲಿ ಅವರ ಬೆಳವಣಿಗೆ ಪ್ರಮಾಣ ಶೇ. ೬೨,೧೦ರಷ್ಟಿದೆ. ದೇವದುರ್ಗ ತಾಲ್ಲೂಕಿನಲ್ಲಿ

ಅವರ ಬೆಳವಣಿಗೆ ಪ್ರಮಾಣ ಶೇ.೪೦೧.೯೦ರಷ್ಟಾಗಿದೆ. ಈ ಪ್ರಮಾಣದ ಏರಿಕೆಯು ಸಂತಾನದ ಪ್ರಮಾಣದಿಂದ ಸಾಧ್ಯವಿಲ್ಲ. ಪರಿಶಿಷ್ಟ ಪಂಗಡಕ್ಕೆ ಹೊಸದಾಗಿ ಸಮುದಾಯಗಳನ್ನು ಸೇರಿಸಿದ ಪರಿಣಾಮವಾಗಿ ಅವರ ಸಂಖ್ಯೆಯು ವಿಪರೀತ ಏರಿಕೆಯಾಗಿದೆ. ರಾಜ್ಯದಲ್ಲಿನ ಪರಿಶಿಷ್ಟ ಪಂಗಡದ ಜನಸಂಖ್ಯೆ ೨೦೦೧ರಲ್ಲಿ ೩೪,೬೪ಲಕ್ಷ. ರಾಜ್ಯದ ಪ.ಪಂಗಡದ ಜನಸಂಖ್ಯೆಯಲ್ಲಿ ವಿಜಾಪುರ ಜಿಲ್ಲೆಯ ಪರಿಶಿಷ್ಟ ಪಂಗಡ ಜನಸಂಖ್ಯೆಯ ಪ್ರಮಾಣ ಶೇ.೦.೭೦ ಪ್ರಸ್ತುತ ಅಧ್ಯಯನಕ್ಕಾಗಿ ಕರ್ನಾಟಕ ಸರ್ಕಾರದ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ರಾಯಚೂರು ಜಿಲ್ಲೆಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರ ಆರ್ಥಿಕ ಸ್ಥಿತಿಗತಿ ಕುರಿತಂತೆ ಸಮೀಕ್ಷೆಯೊಂದು ನಡೆಸಿಕೊಟ್ಟಿದೆ. ಅದರಲ್ಲಿ ಕಂಡುಬಂದ ಒಂದು ಸಂಗತಿಯೆಂದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜನಸಮುದಾಯಕ್ಕೆ ಕುಟುಂಬ ಯೋಜನೆ ಬಗ್ಗೆ ತಿಳುವಳಿಕೆಯಿದೆ. ಆದರೆ ಅದನ್ನು ಅನುಸರಿಸುವವರ ಪ್ರಮಾಣ ಅತ್ಯಂತ ಕಡಿಮೆಯಿದೆ.

ಕೋಷ್ಟಕ-೬.೩

ಕುಟುಂಬ ಯೋಜನೆಯ ಅರಿವು

ತಾಲ್ಲೂಕುಗಳು ಅನುಸರಿಸುವುದು	ಕುಟುಂಬ ಯೋಜನೆ ಅರಿವು				ಕುಟುಂಬ ಯೋಜನೆ			
	ಪರಿಶಿಷ್ಟ ಜಾತಿ		ಪರಿಶಿಷ್ಟ ಪಂಗಡ		ಪರಿಶಿಷ್ಟ ಜಾತಿ		ಪರಿಶಿಷ್ಟ ಪಂಗಡ	
	ಪುರುಷರು	ಸ್ತ್ರೀಯರು	ಪುರುಷರು	ಸ್ತ್ರೀಯರು	ಪುರುಷರು	ಸ್ತ್ರೀಯರು	ಪುರುಷರು	ಸ್ತ್ರೀಯರು
ದೇವದುರ್ಗ	೫೨.೪೦	೫೦.೪೨	೬೦.೨೫	೬೦.೨೫	೧.೬೦	೧.೩೦	೨.೧೦	೨೦.೧೦
ಮಾನ್ವಿ	೮೬.೫೧	೮೫.೬೪	೮೦.೩೫	೮೦.೩೫	೨.೧೧	೩೦.೪೦	೬.೧೨	೩೬.೭೫
ಲಿಂಗಸೂಗೂರು	೭೪.೬೮	೭೪.೬೮	೮೦.೯೦	೮೦.೯೦	೧.೬೦	೧೨.೬೦	೧೧.೦೬	೨೪.೮೭
ರಾಯಚೂರು	೯೪.೬೦	೯೪.೬೦	೯೦.೬೨	೯೦.೬೨	೦.೩೬	೨೬.೩೦	೪.೯೦	೩೭.೩೩
ಸಿಂಧನೂರು	೮೯.೧೧	೮೯.೪೬	೭೨.೧೦	೭೨.೧೦	೧.೫೦	೧೦.೮೪	೦.೭೦	೨೮.೯೦
ಜಿಲ್ಲೆ	೭೬.೯೬	೭೭.೬೪	೭೮.೫೪	೭೫.೫೪	೧.೨೦	೨೧.೮೦	೩.೬೦	೩೩.೮೦

ಮೂಲ:- ಕರ್ನಾಟಕ ಸರ್ಕಾರ-೨೦೦೭, ಪ.ಜಾತಿ ಮತ್ತು ಪ.ಪಂಗಡ ಕುರಿತ ಅಭಿವೃದ್ಧಿ ಸ್ಥಿತಿಗತಿ ಸಮೀಕ್ಷೆ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು

ಈ ಮೇಲಿನ ಕೋಷ್ಟಕದಲ್ಲಿ ಕುತೂಹಲದ ಸಂಗತಿಯೆಂದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಹಿಳೆಯರಲ್ಲಿ ಕುಟುಂಬ ಯೋಜನೆ ಅನುಸರಣೆ ಅಧಿಕವಾಗಿದೆ. ಮಹಿಳೆಯರಲ್ಲಿ ಅದು ಅತಿ ಕಡಿಮೆ. ಈ ಕಡೆಗೆ ಜಿಲ್ಲಾ ಪಂಚಾಯಿತಿ ಹಾಗೂ ಆರೋಗ್ಯ ಇಲಾಖೆ ಗಮನ ನೀಡುವ ಅಗತ್ಯವಿದೆ. ಈ ಜಿಲ್ಲೆಯಲ್ಲಿ ಜನಸಂಖ್ಯೆಯ ದೃಷ್ಟಿಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಎರಡು ಹೆಚ್ಚು ಕಡಿಮೆ ಮೇಲೆ ಕೆಳಗಾದರೂ ಪರಿಶಿಷ್ಟ ಪಂಗಡ ಅಧಿಕವಾಗಿದೆ. ಲಿಂಗ ಅನುಪಾತವನ್ನು ಇಂದು ಲಿಂಗಸಂಬಂಧಿ ಸಮಾನತೆಯ ಸೂಚಿಯಾಗಿ ಬಳಸಲಾಗುತ್ತಿದೆ. ಲಿಂಗ ಅನುಪಾತವು ಸಾವಿರಕ್ಕಿಂತ ಕಡಿಮೆಯಿದ್ದರೆ ಅದನ್ನು ತಾರತಮ್ಯದ ಪ್ರಮಾಣವನ್ನಾಗಿ ಗುರುತಿಸಲಾಗುತ್ತಿದೆ.

ಇಲ್ಲಿ ಮೊಟ್ಟ ಮೊದಲನೆಯದಾಗಿ ಹೇಳಬೇಕಾದ ಸಂಗತಿಯೆಂದರೆ ಎಲ್ಲ ಜನಸಮೂಹದ ಲಿಂಗಅನುಪಾತವು ಜಿಲ್ಲಾಮಟ್ಟದಲ್ಲಿ ಕಡಿಮೆಯಿದೆ. ಎರಡು ಕಾಲಘಟ್ಟಗಳಲ್ಲಿ ಜಿಲ್ಲಾಮಟ್ಟದ ಲಿಂಗಅನುಪಾತವು ಮೂರುಜನವರ್ಗಗಳಿಗೆ ಸಂಬಂಧಿಸಿದಂತೆ ರಾಜ್ಯಮಟ್ಟದ ಲಿಂಗಅನುಪಾತಕ್ಕಿಂತ ಕಡಿಮೆಯಿದೆ. ಕಳೆದ ದಶಕದಲ್ಲಿ ದೇವದುರ್ಗ ತಾಲೂಕ್ಕೊಂದನ್ನು ಬಿಟ್ಟರೆ ಉಳಿದಂತೆ ಪ.ಜಾತಿ ಮತ್ತು ಪರಿಶಿಷ್ಟ ಪಂಗಡದ ಲಿಂಗ ಅನುಪಾತವು ಏರಿಕೆಯಾಗಿದೆ. ಆದರೆ ಒಟ್ಟು ಜನಸಂಖ್ಯೆಗೆ ಸಂಬಂಧಿಸಿದಂತೆ ಲಿಂಗಅನುಪಾತವು ರಾಯಚೂರು ಮತ್ತು ಸಿಂಧನೂರು ತಾಲ್ಲೂಕುಗಳಲ್ಲಿ ಮಾತ್ರ ಏರಿಕೆಯಾಗಿದೆ. ದೇವದುರ್ಗ, ಮಾನ್ವಿ ಮತ್ತು ಲಿಂಗಸೂಗೂರು ತಾಲ್ಲೂಕುಗಳಲ್ಲಿ ಒಟ್ಟು ಜನಸಂಖ್ಯೆಯ ಲಿಂಗ ಅನುಪಾತವು ಕಡಿಮೆಯಾಗಿದೆ. ಇದು ರಾಜ್ಯಮಟ್ಟದ ಸರಾಸರಿಗಿಂತ ಭಿನ್ನವಾಗಿದೆ.

ಕೋಷ್ಟಕ–೬.೪

ಲಿಂಗ ಅನುಪಾತ: ೨೦೦೧ ಮತ್ತು ೨೦೧೧

ಲಿಂಗ ಅನುಪಾತ							
ಕ್ರಸಂ	ತಾಲ್ಲೂಕುಗಳು	೨೦೦೧			೨೦೧೧		
		ಒಟ್ಟು ಜನಸಂಖ್ಯೆ	ಪ.ಜಾತಿ	ಪ.ಪಂಗಡ	ಒಟ್ಟು ಜನಸಂಖ್ಯೆ	ಪ.ಜಾತಿ	ಪ.ಪಂಗಡ
೧.	ದೇವದುರ್ಗ	೯೭೦	೯೬೨	೯೨೫	೯೬೨	೯೬೫	೯೪೦
೨.	ಮಾನವಿ	೯೭೧	೯೪೦	೧೦೦೧	೯೫೪	೯೫೫	೯೪೯
೩.	ಲಿಂಗಸೂಗೂರು	೯೫೪	೯೭೦	೯೨೯	೯೪೫	೯೪೦	೯೬೩
೪.	ರಾಯಚೂರು	೯೬೧	೯೬೫	೯೩೮	೯೪೬	೯೫೨	೯೪೦
೫.	ಸಿಂಧನೂರು	೯೬೯	೯೮೮	೯೭೫	೯೪೯	೯೪೪	೯೬೮
೬.	ಒಟ್ಟು ಜಿಲ್ಲೆ	೯೬೪	೯೪೬	೯೪೮	೯೫೦	೯೫೧	೯೪೯
	ರಾಜ್ಯ	೯೬೬	೯೬೨	೯೬೧	೯೬೩	೯೭೩	೯೬೬

ಮೂಲ:– ಜನಗಣತಿ ವರದಿಗಳು ೨೦೦೧–೨೦೧೧ ಮತ್ತು ಸಾಂಖ್ಯಿಕ ಇಲಾಖೆ, ರಾಯಚೂರು

ಕೋಷ್ಟಕ–೬.೫

ಲಿಂಗ ಅನುಪಾತ: ೦–೬ ವಯೋಮಾನದ ಮಕ್ಕಳು : ೨೦೦೧ ಮತ್ತು ೨೦೧೧

ಲಿಂಗ ಅನುಪಾತ							
ಕ್ರಸಂ	ತಾಲ್ಲೂಕುಗಳು	೨೦೦೧			೨೦೧೧		
		ಒಟ್ಟು ಜನಸಂಖ್ಯೆ	ಪ.ಜಾತಿ	ಪ.ಪಂಗಡ	ಒಟ್ಟು ಜನಸಂಖ್ಯೆ	ಪ.ಜಾತಿ	ಪ.ಪಂಗಡ
೧.	ದೇವದುರ್ಗ	೯೬೦	೯೬೨	೯೨೯	೯೩೦	೯೩೬	೯೪೨
೨.	ಮಾನವಿ	೯೬೮	೯೬೫	೯೯೦	೯೫೪	೯೬೧	೯೮೦
೩.	ಲಿಂಗಸೂಗೂರು	೯೫೫	೯೬೦	೯೨೯	೯೪೫	೯೫೭	೯೬೩
೪.	ರಾಯಚೂರು	೯೬೨	೯೮೧	೯೩೮	೯೪೬	೯೬೦	೯೬೪
೫.	ಸಿಂಧನೂರು	೯೭೦	೯೬೭	೯೭೫	೯೪೯	೯೪೪	೯೮೮
೬.	ಜಿಲ್ಲೆ	೯೬೫	೯೬೮	೯೪೮	೯೫೦	೯೫೧	೯೬೮
	ರಾಜ್ಯ	೯೬೫	೯೭೩	೯೭೦	೯೪೬	೯೬೦	೯೬೧

ಮೂಲ:– ಜನಗಣತಿ ವರದಿಗಳು ಮತ್ತು ಸಾಂಖ್ಯಿಕ ಇಲಾಖೆ ರಾಯಚೂರು ೨೦೦೧ ಮತ್ತು ೨೦೧೧

ಅತ್ಯಂತ ಕುತೂಹಲಕಾರಿಯಾದ ಸಂಗತಿಯೆಂದರೆ ೦-೬ ವಯೋಮಾನದ ಮಕ್ಕಳ ಲಿಂಗ ಅನುಪಾತವು ೨೦೦೧ ರಿಂದ ೨೦೧೦ರ ದಶಕದಲ್ಲಿ ತೀವ್ರ ಕುಸಿತ ಕಂಡಿದೆ. ಒಟ್ಟು ಜನಸಂಖ್ಯೆಗೆ ಸಂಬಂಧಿಸಿದಂತೆ ಇಲ್ಲಿಯೂ ಸಹ ರಾಜ್ಯಮಟ್ಟದ ಲಿಂಗ ಅನುಪಾತಕ್ಕಿಂತ ಜಿಲ್ಲಾಮಟ್ಟದ ಲಿಂಗ ಅನುಪಾತವು ತೀವ್ರ ಕೆಳಮಟ್ಟದಲ್ಲಿದೆ. ಇದು ಎಲ್ಲ ಮೂರು ಜನವರ್ಗಗಳಿಗೆ ಸಂಬಂಧಿಸಿದಂತೆ ಕಂಡುಬಂದಿದೆ. ಪ.ಜಾತಿ ಮತ್ತು ಪರಿಶಿಷ್ಟ ಪಂಗಡ -೦-೬ ವಯೋಮಾನದ ಮಕ್ಕಳ ಅನುಪಾತವು ೨೦೧೦ರಲ್ಲಿ ತೀವ್ರ ಏರಿಕೆಯಾಗಿರುವುದು ಮಾನವಿ ಮತ್ತು ಸಿಂಧನೂರು ತಾಲೂಕುಗಳಲ್ಲಿ ಕಂಡುಬಂದಿದೆ. ಇಡೀ ಜಿಲ್ಲೆ ಹಾಗೂ ರಾಜ್ಯವನ್ನು ಪರಿಗಣಿಸಿದಾಗ ಪ.ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮಕ್ಕಳ ಲಿಂಗ ಅನುಪಾತವು ೨೦೦೧-೨೦೧೦ರ ಅವಧಿಯಲ್ಲಿ ಕಡಿಮೆಯಾಗಿದೆ.

ಕೋಷ್ಟಕ-೬.೬

ಗ್ರಾಮೀಣ ನಗರ ಹಂಚಿಕೆ

ಪ.ಪಂಗಡ ಜನಸಂಖ್ಯೆ ಗ್ರಾಮೀಣ ನಗರ ಹಂಚಿಕೆ ಪ್ರಮಾಣ ೨೦೧೦

ಕ್ರಸಂ	ತಾಲ್ಲೂಕುಗಳು	ಗ್ರಾಮೀಣ			ನಗರ		
		೨೦೦೧			೨೦೧೦		
		ಒಟ್ಟು ಜನಸಂಖ್ಯೆ	ಗ್ರಾಮೀಣ	ನಗರ	ಒಟ್ಟು ಜನಸಂಖ್ಯೆ	ಗ್ರಾಮೀಣ	ನಗರ
೧.	ದೇವದುರ್ಗ	೩೩.೬೭	೩೪.೪೯	೨೬.೨೮	೩೪.೪೦	೩೫.೦೦	೨೯.೨೮
೨.	ಮಾನವಿ	೨೩.೫೭	೨೫.೦೦	೧೨.೪೭	೨೪.೦೬	೨೫.೮೧	೧೧.೮೭
೩.	ಲಿಂಗಸೂಗೂರು	೧೫.೯೯	೧೯.೧೧	೫.೪೮	೧೭.೦೧	೫೦.೨೮	೫.೯೧
೪.	ರಾಯಚೂರು	೧೧.೯೭	೨೦.೯೧	೩.೭೩	೧೨.೬೭	೨೧.೨೭	೪.೨೦
೫.	ಸಿಂಧನೂರು	೧೨.೯೭	೧೪.೯೦	೩.೫೭	೧೩.೩೭	೧೫.೫೨	೪.೩೮
೬	ಜಿಲ್ಲೆ	೧೮.೧೫	೨೨.೨೫	೫.೯೭	೧೯.೦೩	೨೩.೨೨	೬.೭೪

ಮೂಲ:- ಸಾಂಖ್ಯಿಕೆ ಇಲಾಖೆ-ರಾಯಚೂರು

ಪ.ಪಂಗಡ ಜನಸಂಖ್ಯೆಯ ಗ್ರಾಮೀಣ-ನಗರ ಹಂಚಿಕೆಯ ಪ್ರಮಾಣವನ್ನು ತೋರಿಸಿದೆ. ಪರಿಶಿಷ್ಟ ಪಂಗಡ ಜನರು ಅಧಿಕವಾಗಿ ಗ್ರಾಮೀಣ ವಾಸಿಗಳಾಗಿದ್ದಾರೆ. ರಾಜ್ಯಮಟ್ಟದಲ್ಲಿ ಗ್ರಾಮೀಣ ವಾಸಿಗಳ ಪ್ರಮಾಣ ಒಟ್ಟು ಜನಸಂಖ್ಯೆಯಲ್ಲಿ ಶೇ.೬೦.೦೨ (೨೦೧೦)ರಷ್ಟಿದ್ದರೆ. ಪರಿಶಿಷ್ಟ ಜಾತಿಯಲ್ಲಿ ಗ್ರಾಮೀಣ ವಾಸಿಗಳ ಪ್ರಮಾಣ ಶೇ.೬೫.೯೨ರಷ್ಟಿದೆ. ಜಿಲ್ಲಾಮಟ್ಟದಲ್ಲಿ ಒಟ್ಟು ಜನಸಂಖ್ಯೆಯ ಗ್ರಾಮೀಣ ಪ್ರಮಾಣ ಶೇ.೭೮.೧೦ರಷ್ಟಿದ್ದರೆ ಪ.ಜಾತಿಯದ್ದು ಶೇ.೭೫.೫೦ ಒಟ್ಟು ಜನಸಂಖ್ಯೆಗಿಂತ ಪ.ಪಂಗಡದಲ್ಲಿ ಗ್ರಾಮೀಣ ಪ್ರಮಾಣ ಅಧಿಕವಾಗಿದೆ. ರಾಜ್ಯ ಮಟ್ಟದಲ್ಲಿರುವುದಕ್ಕಿಂತ ಜಿಲ್ಲಾ ಮಟ್ಟದಲ್ಲಿ ಗ್ರಾಮೀಣ ವಾಸಿಗಳ ಪ್ರಮಾಣ ಅಧಿಕವಾಗಿದೆ. ರಾಯಚೂರು ಜಿಲ್ಲೆಯಲ್ಲಿ ನಗರಗಳಲ್ಲಿ ವಾಸಿಸುವ ಪರಿಶಿಷ್ಟ ಪಂಗಡ ಜನರ ಪ್ರಮಾಣವು ರಾಜ್ಯಮಟ್ಟದಲ್ಲಿರುವುದಕ್ಕಿಂತ ಕಡಿಮೆಯಿದೆ. ನಗರ ಪ್ರದೇಶ ಪ.ಜಾತಿ ಜನರ ಪ್ರಮಾಣ ಕೇವಲ ಶೇ.೧೨.೪೫ ರಾಯಚೂರು ಮತ್ತು

ಸಿಂಧನೂರು ಕ್ರಮವಾಗಿ ಶೇ.೩.೭೩ ಮತ್ತು ಶೇ.೩.೫೭ ಈ ಸಂಗತಿಯ ಪರಿಶಿಷ್ಟ ಪಂಗಡ ಜನರ ಅಭಿವೃದ್ಧಿ ಕೆಳಮಟ್ಟದಲ್ಲಿರುವುದನ್ನು ಸೂಚಿಸುತ್ತದೆ.

೬.೩ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ

ಸಾಕ್ಷರತೆ ಮತ್ತು ಶಿಕ್ಷಣ

ಶಿಕ್ಷಣವು ಒಂದು ಪ್ರದೇಶದ ಜನರ ಬದುಕಿನ ಮಟ್ಟವನ್ನು ಹಾಗೂ ಭದ್ರತೆಯನ್ನು ಎಲ್ಲಾಕ್ಕಿಂತ ಮುಖ್ಯವಾಗಿ ಘನತೆಯಿಂದ ಬದುಕುವಂತೆ ಮಾಡುತ್ತದೆ. ಡಾ.ಬಿ.ಆರ್.ಅಂಬೇಡ್ಕರ್ ಅವರು ಶೋಷಿತ ಜನಾಂಗವು ಘನತೆಯಿಂದ ಬದುಕಬೇಕಾದರೆ ಮೊದಲ ಶಿಕ್ಷಣ ಪಡೆಯಬೇಕು ಎಂದು ಹೇಳಿರುವುದು. ಪ್ರಾಚೀನ ಕಾಲದಿಂದ ಈ ಜನಾಂಗವನ್ನು ಶಿಕ್ಷಣದಿಂದ ವಂಚಿತರನ್ನಾಗಿ ಮಾಡಿ ಅಭಿವೃದ್ಧಿಯಿಂದ ಹಾಗೂ ಆರ್ಥಿಕವಾಗಿಯೂ ಮತ್ತು ಉದ್ಯೋಗದಿಂದ ವಂಚಿತರನ್ನಾಗಿ ಮಾಡಿ ಸೇವಕರ ರೀತಿಯಲ್ಲಿ ಬಳಸಿಕೊಳ್ಳಲಾಗಿದೆ. ಉತ್ತಮ ಗುಣಮಟ್ಟದ ಶಿಕ್ಷಣವು ಎಲ್ಲರನ್ನು ಒಳಗೊಂಡ ಅಭಿವೃದ್ಧಿಯ ಸಾಧನ ಮಾತ್ರವಲ್ಲದೆ ಅವಶ್ಯಕ ಅಂಶವೂ ಆಗಿದೆ. ಆದ್ದರಿಂದ ಎಲ್ಲರನ್ನು ಒಳಗೊಂಡ ಅಭಿವೃದ್ಧಿಯು ಎಲ್ಲರನ್ನು ಒಳಗೊಂಡ ಶಿಕ್ಷಣದಿಂದಲೇ ಪ್ರಾರಂಭವಾಗುತ್ತದೆ ಎಂದರೆ ಅತಿಶಯೋಕ್ತಿಯಲ್ಲ (ತಿಲಕ್; ೨೦೦೭) ಅಮರ್ತ್ಯಸೇನ್ ಅವರು ಮನುಷ್ಯನು ಉತ್ತಮವಾಗಿ ಮತ್ತು ಘನತೆಯಿಂದ ಬದುಕಬೇಕಾದರೆ ಶಿಕ್ಷಣವು ಪ್ರಮುಖ ಅಸ್ತ್ರವೆಂದಿದ್ದಾರೆ.

ಸಾಕ್ಷರತೆ ಸಂಬಂಧಿಸಿದಂತೆ ಒಟ್ಟು ಜನಸಂಖ್ಯೆಗೆ ಅನ್ವಯವಾಗುವ ಸಾಕ್ಷರತಾ ಪ್ರಮಾಣವು ೧೯೯೧ರಿಂದ ೨೦೦೧ರ ದಶಕದಲ್ಲಿ ಏರಿಕೆಯಾಗಿಲ್ಲವೆಂಬ ವಿಚಿತ್ರ ಸಂಗತಿಯನ್ನು ಈಗಾಗಲೇ ಗುರುತಿಸಲಾಗಿದೆ. ಈ ಅವಧಿಯಲ್ಲಿ ಒಟ್ಟು ಸಾಕ್ಷರತೆಯಲ್ಲಿ ಉಂಟಾದ ಏರಿಕೆ ಕೇವಲ ಶೇ.೦.೫೫ ಅಂಶಗಳಷ್ಟಾಗಿದೆ. ಅದೇ ರೀತಿ ಪರಿಶಿಷ್ಟ ಜಾತಿ ಜನಸಮೂಹದ ಸಾಕ್ಷರತಾ ಪ್ರಮಾಣವು ೧೯೯೧ರಲ್ಲಿ ರಾಯಚೂರು ಜಿಲ್ಲೆಯಲ್ಲಿ ಶೇ.೪೪.೫೫ರಷ್ಟಿದ್ದುದು ೨೦೦೧ರಲ್ಲಿ ಅದು ಶೇ.೪೫.೧೬ರಷ್ಟಾಗಿದೆ. ೨೦೧೧ರಲ್ಲಿ ಶೇ.೪೫.೨೧ರಷ್ಟಾಗಿದೆ. ಇಲ್ಲಿನ ಏರಿಕೆ ಪ್ರಮಾಣ ೨೦೦೧ರಲ್ಲಿ ಹೆಚ್ಚಾಗಿದ್ದು, ಮತ್ತೇ ೨೦೧೧ರಲ್ಲಿ ಅದೇ ಸ್ಥಿತಿಯಲ್ಲಿ ಮುಂದುವರೆದಿದೆ ಆದರೆ ರಾಜ್ಯಮಟ್ಟದೊಂದಿಗೆ ಹೋಲಿಸಿದಾಗ ಇದು ತುಂಬಾ ಆತಂಕಕಾರಿಯಾದ ಅಂಶವನ್ನು ನೀಡುತ್ತದೆ. ಪರಿಶಿಷ್ಟ ಪಂಗಡ ಸ್ಥಿತಿಯೂ ಕೂಡ ಇದೇ ರೀತಿಯಾಗಿ ಮುಂದುವರೆದಿದೆ. ದಲಿತರು ಮತ್ತು ದಲಿತೇತರ ನಡುವಿನ ಸಾಕ್ಷರತೆ ಸಂಬಂಧಿ ಅಸಮಾನತೆಯನ್ನು ಪೂರ್ಣವಾಗಿ ತೊಡೆದು ಹಾಕುವುದು ಸಾಧ್ಯವಾಗಿಲ್ಲ. ಇದೊಂದು ಸ್ವಾತಂತ್ರ್ಯೋತ್ತರ ಭಾರತದ ಬಹುದೊಡ್ಡ ಸಾಮಾಜಿಕ ವೈಫಲ್ಯವಾಗಿದೆ. ಅನಕ್ಷರತೆಯೆಂಬುದು ವ್ಯಾಪಕವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಲ್ಲಿ ಮಡುಗಟ್ಟಿಕೊಂಡಿದೆ. ಅದರ ನಿವಾರಣೆಯ ಗಮನ ಈ ಸಮುದಾಯಗಳ ಕಡೆಗಿರಬೇಕು. ಒಟ್ಟು ಜನಸಂಖ್ಯೆಯ ಒಟ್ಟು ಸಾಕ್ಷರತಾ ಪ್ರಮಾಣಕ್ಕಿಂತ ಪ.ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಪ್ರಮಾಣವು ಕೆಳಮಟ್ಟದಲ್ಲಿದೆ. ಇದೊಂದು ವಿಶಿಷ್ಟವಾದ ಸಂಗತಿಯಾಗಿದೆ. ಒಟ್ಟು ಜನಸಂಖ್ಯೆಯ ಹಾಗೂ ಪ.ಜಾತಿ ಮತ್ತು ಪ.ಪಂಗಡಗಳ ನಡುವಿನ ಸಾಕ್ಷರತಾ ಅಂತರವು ರಾಯಚೂರು ಜಿಲ್ಲಾಮಟ್ಟದಲ್ಲಿ ರಾಜ್ಯಮಟ್ಟದಲ್ಲಿರುವುದಕ್ಕಿಂತ

ಕಡಿಮೆಯಿದೆ. ಆದರೆ ಈ ಅಂತರವು ರಾಜ್ಯಮಟ್ಟದಲ್ಲಿ ತೀವ್ರವಾಗಿ ಕಡಿಮೆಯಾಗುತ್ತಿದ್ದರೆ ರಾಯಚೂರು ಜಿಲ್ಲಾಮಟ್ಟದಲ್ಲಿ ಅದು ಮಂದಗತಿಯಲ್ಲಿ ಕಡಿಮೆಯಾಗುತ್ತಿದೆ. ರಾಯಚೂರು ಜಿಲ್ಲೆಯಲ್ಲಿ ಸಾಕ್ಷರತಾ ಪ್ರಮಾಣವನ್ನು ಪ.ಜಾತಿ ಮತ್ತು ಪ.ಪಂಗಡ ೨೦೦೧ ಮತ್ತು ೨೦೧೦ರ ಅಂಕಿ ಅಂಶಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ಒಂದು ವಿಶಿಷ್ಟ ಸಂಗತಿಯನ್ನು ತೋರಿಸಲಾಗಿದೆ.

ಕೋಷ್ಟಕ–೬.೭

ಅಕ್ಷರಸ್ಥರಲ್ಲಿ ಪ.ಜಾತಿ, ಪ.ಪಂಗಡ ಅಕ್ಷರಸ್ಥರ ಪ್ರಮಾಣ–೨೦೧೦

ಕ್ರಸಂ.	ವಿವರ		ಒಟ್ಟು ಅಕ್ಷರಸ್ಥರು (ಲಕ್ಷಗಳಲ್ಲಿ)	ಪ.ಜಾತಿ ಅಕ್ಷರಸ್ಥರು	ಪ.ಜಾತಿ ಅಕ್ಷರಸ್ಥರ ಪ್ರಮಾಣ
೧.	ರಾಯಚೂರು ಜಿಲ್ಲೆ	ಒಟ್ಟು	೬೪೭	೦.೮೦	ಶೇ.೧೧.೯೦
		ಪುರುಷ	೪.೩೦	೦.೫೩	ಶೇ.೧೨.೮೧
		ಮಹಿಳೆ	೨.೧೩	೦.೨೫	ಶೇ.೯.೨೩
೨.	ಕರ್ನಾಟಕ ರಾಜ್ಯ	ಒಟ್ಟು	೩೦೪.೩೬	೩೮.೩೮	ಶೇ.೧೨.೬೧
		ಪುರುಷ	೧೭೬.೬೧	೨೩.೪೨	ಶೇ.೧೩.೨೬
		ಮಹಿಳೆ	೧೨೭.೭೪	೧೪.೯೪	ಶೇ.೧೧.೭೧
ಕ್ರಸಂ.	ವಿವರ		ಒಟ್ಟು ಅಕ್ಷರಸ್ಥರು (ಲಕ್ಷಗಳಲ್ಲಿ)	ಪರಿಶಿಷ್ಟ ಪಂಗಡ ಅಕ್ಷರಸ್ಥರು	ಪರಿಶಿಷ್ಟ ಪಂಗಡ ಅಕ್ಷರಸ್ಥರ ಪ್ರಮಾಣ
೧.	ರಾಯಚೂರು ಜಿಲ್ಲೆ	ಒಟ್ಟು	೭೫೬	೧.೨೦	ಶೇ.೧೩.೮೮
		ಪುರುಷ	೫.೪೦	೦.೯೦	ಶೇ.೧೪.೯೮
		ಮಹಿಳೆ	೩.೦೧	೦.೪೨	ಶೇ.೧೩.೨೧
೨.	ಕರ್ನಾಟಕ ರಾಜ್ಯ	ಒಟ್ಟು	೨೯೫.೩೫	೩೬.೩೩	ಶೇ.೧೨.೫೨
		ಪುರುಷ	೧೦೫.೭೧	೨೦.೨೦	ಶೇ.೧೧.೨೪
		ಮಹಿಳೆ	೧೦೫.೫೦	೧೩.೧೦	ಶೇ.೯.೫೧

ಮೂಲ ಜನಗಣತಿ ವರದಿ: ೨೦೧೦ ಮತ್ತು ರಾಯಚೂರು ಜಿಲ್ಲಾ ಸಾಂಖ್ಯಿಕ ಇಲಾಖೆ ೨೦೧೦

ಇಲ್ಲಿ ತೋರಿಸಿರುವಂತೆ ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಾಕ್ಷರತೆ ಪ್ರಮಾಣವನ್ನು ಜಿಲ್ಲೆ ಹಾಗೂ ರಾಜ್ಯಮಟ್ಟಕ್ಕೆ ಸಂಬಂಧಿಸಿದಂತೆ ತೋರಿಸಲಾಗಿದೆ. ರಾಜ್ಯ ಮಟ್ಟದ ಅಕ್ಷರಸ್ಥರಲ್ಲಿ ಪ.ಜಾತಿ ಅಕ್ಷರಸ್ಥರು ಸಂಖ್ಯೆಯಲ್ಲಿ ಎಷ್ಟಿದ್ದಾರೆ ಎಂಬುದರ ಜೊತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಕ್ಷರಸ್ಥರು ಶೇಕಡವಾರು ಎಷ್ಟಿದ್ದಾರೆ ಎಂಬುದನ್ನು ಗುರುತಿಸಲಾಗಿದೆ. ಅಕ್ಷರಸ್ಥರಲ್ಲಿ ಪರಿಶಿಷ್ಟ ಜಾತಿ ಅಕ್ಷರಸ್ಥರ ಪ್ರಮಾಣಕ್ಕೆ ಸಂಬಂಧಿಸಿದಂತೆ ಸ್ಥಿತಿಯು ರಾಜ್ಯಮಟ್ಟಕ್ಕಿಂತ ಜಿಲ್ಲಾಮಟ್ಟದಲ್ಲಿ ಸ್ವಲ್ಪ ಮಟ್ಟಿಗೆ ಉತ್ತಮವಾಗಿದೆ. ರಾಜ್ಯಮಟ್ಟದಲ್ಲಿನ ಒಟ್ಟು

ಅಕ್ಷರಸ್ಥರಲ್ಲಿ ಪರಿಶಿಷ್ಟ ಜಾತಿ ಅಕ್ಷರಸ್ಥರ ಪ್ರಮಾಣ ಶೇ.೧೨.೬೧ರಷ್ಟಿದ್ದರೆ ರಾಯಚೂರು ಜಿಲ್ಲಾಮಟ್ಟದಲ್ಲಿ ಅವರ ಪ್ರಮಾಣ ಶೇ.೧೧.೯೦ರಷ್ಟಿದೆ. ಈಗಾಗಲೇ ತಿಳಿಸಿರುವಂತೆ ರಾಯಚೂರು ಜಿಲ್ಲೆಯಲ್ಲಿನ ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ ಜನಸಂಖ್ಯೆಯ ಪ್ರಮಾಣ ೨೦೧೧ರಲ್ಲಿ ಶೇ. ೧೯.೪೦ರಷ್ಟಿತ್ತು. ಆದರೆ ಜಿಲ್ಲೆಯ ಒಟ್ಟು ಅಕ್ಷರಸ್ಥರಲ್ಲಿ ಪರಿಶಿಷ್ಟ ಜಾತಿ ಪ್ರಮಾಣ ಕೇವಲ ಶೇ.೧೧.೯೦ ಅಂದರೆ ಒಟ್ಟು ಜನಸಂಖ್ಯೆಯಲ್ಲಿ ಅವರು ಎಷ್ಟು ಪಾಲು ಪಡೆದಿದ್ದಾರೋ ಅದಕ್ಕಿಂತ ಕಡಿಮೆ ಪಾಲನ್ನು ಅಕ್ಷರಸ್ಥರಿಗೆ ಸಂಬಂಧಿಸಿದಂತೆ ಪಡೆದಿದ್ದಾರೆ. ಅದೇ ರೀತಿಯಾಗಿ ಪರಿಶಿಷ್ಟ ಪಂಗಡ ಪ್ರಮಾಣ ಕೂಡ ಸ್ವಲ್ಪ ಮಟ್ಟಿಗೆ ಅಧಿಕವಾಗಿದೆ. ಪರಿಶಿಷ್ಟ ಪಂಗಡಕ್ಕಿಂತ ಪರಿಶಿಷ್ಟ ಜಾತಿಯ ಪ್ರಮಾಣ ಕಡಿಮೆಯಿದೆ. ಪರಿಶಿಷ್ಟ ಪಂಗಡದ ಸಾಕ್ಷರತೆಗೆ ಸಂಬಂಧಿಸಿದಂತೆ ರಾಯಚೂರು ಜಿಲ್ಲೆಯ ಸ್ಥಿತಿಯು ರಾಜ್ಯ ಮಟ್ಟದ ಸ್ಥಿತಿಗಿಂತ ಅನೇಕ ವಿಷಯಗಳಲ್ಲಿ ಉತ್ತಮವಾಗಿದೆ. ಆದರೆ ಸಾಕ್ಷರತೆಯ ಲಿಂಗ ಸಂಬಂಧಿ ಅಂತರದ ಬಗ್ಗೆ ಅದೇ ಮಾತನ್ನು ಹೇಳಲು ಸಾಧ್ಯವಿಲ್ಲ.

ಕೋಷ್ಟಕ–೬.೮

ಸಾಕ್ಷರತೆಯಲ್ಲಿ ಲಿಂಗಸಂಬಂಧಿ ಅಂತರಗಳು – ೨೦೧೦

ಕ್ರ.ಸಂ.	ವಿವರ	°	ಒಟ್ಟು ಜನಸಂಖ್ಯೆ ಸಾಕ್ಷರತೆ	ಪ.ಜಾ ಜನಸಂಖ್ಯೆ ಸಾಕ್ಷರತೆ	ಪರಿಶಿಷ್ಟ ಪಂಗಡದ ಸಾಕ್ಷರತೆ
೧.	ರಾಯಚೂರು ಜಿಲ್ಲೆ ಲಿಂಗಸಂಬಂಧಿ ಸಾಕ್ಷರತಾ ಅಂತರ	ಪುರುಷ	ಶೇ.೬೪.೨೨	ಶೇ.೫೫.೩೩	ಶೇ.೬೫.೪೦
		ಮಹಿಳೆ	ಶೇ.೩೬ ೪೩	ಶೇ.೩೦.೫೩	ಶೇ.೩೩.೩೮
			ಶೇ.೨೭.೭೯	ಶೇ.೨೪.೮	ಶೇ.೩೨.೦೨
೨.	ಕರ್ನಾಟಕ ರಾಜ್ಯ ಲಿಂಗಸಂಬಂಧಿ ಸಾಕ್ಷರತಾ ಅಂತರ	ಪುರುಷ	ಶೇ.೭೬.೧೦	ಶೇ.೬೩.೭೫	ಶೇ.೬೪.೫೬
		ಮಹಿಳೆ	ಶೇ.೫೬.೮೭	ಶೇ.೪೧.೭೨	ಶೇ.೩೬.೪೧
			ಶೇ.೧೯.೨೩	ಶೇ.೨೨.೦೩	ಶೇ.೨೮.೧೫

ಮೂಲ:– ಜನಗಣತಿ ವರದಿ: ೨೦೧೦ ಮತ್ತು ಸಾಂಖ್ಯಿಕ ಇಲಾಖೆ ರಾಯಚೂರು ವರದಿ ೨೦೧೧–೧೨

ಈ ಮೇಲಿನ ಕೋಷ್ಟಕದಲ್ಲಿ ಲಿಂಗಸಂಬಂಧಿ ಸಾಕ್ಷರತಾ ಅಂತರವು ಒಟ್ಟು ಜನಸಂಖ್ಯೆಯಲ್ಲಿ ಎಷ್ಟಿದೆ ಮತ್ತು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದಲ್ಲಿ ಎಷ್ಟಿದೆ ಎಂಬುದನ್ನು ತೋರಿಸಲಾಗಿದೆ. ಎಂಬುದರ ಜೊತೆಗೆ ಅದು ಕರ್ನಾಟಕ ರಾಜ್ಯ ಮಟ್ಟದಲ್ಲಿ ಎಷ್ಟಿದೆ ಎಂಬುದನ್ನು ತೋರಿಸಲಾಗಿದೆ. ಲಿಂಗಸಂಬಂಧಿ ಸಾಕ್ಷರತಾ ಅಂತರದ ಪ್ರಮಾಣವು ರಾಜ್ಯಮಟ್ಟದಲ್ಲಿರುವುದಕ್ಕಿಂತ ರಾಯಚೂರು ಜಿಲ್ಲಾಮಟ್ಟದಲ್ಲಿ ಅಧಿಕವಾಗಿದೆ. ಇದು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಜನಸಂಖ್ಯೆ ಹಾಗೂ ಒಟ್ಟು ಜನಸಂಖ್ಯೆಗೂ ಅನ್ವಯವಾಗುತ್ತದೆ. ಒಟ್ಟು ಜನಸಂಖ್ಯೆಗೆ ಸಂಬಂಧಿಸಿದಂತೆ ಲಿಂಗಸಂಬಂಧಿ ಅಂತರವು ರಾಜ್ಯಮಟ್ಟದಲ್ಲಿ ಶೇ.೧೯.೨೩ ಅಂಶಗಳಷ್ಟಿದ್ದರೆ ರಾಯಚೂರು ಜಿಲ್ಲಾಮಟ್ಟದಲ್ಲಿ ಅದು ಕ್ರಮವಾಗಿ ಪ.ಜಾತಿ ಮತ್ತು ಪ.ಪಂಗಡ ಶೇ.೨೭.೭೯ ಹಾಗೂ ಶೇ.೩೨.೦೨ರಷ್ಟಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜಾತಿಗೆ ಸಂಬಂಧಿಸಿದಂತೆ ರಾಜ್ಯಮಟ್ಟದಲ್ಲಿ ಅಂತರ ಶೇ.೨೨.೦೩ ಮತ್ತು ೨೮.೧೫ರಷ್ಟಿದ್ದರೆ ರಾಯಚೂರು ಜಿಲ್ಲಾಮಟ್ಟದಲ್ಲಿ ಅದು ಶೇ.೨೪.೮ ಹಾಗೂ ೩೨.೦೨ರಷ್ಟಿದೆ.

[illegible]

೬.೪ ಶಾಲಾ ದಾಖಲಾತಿಯಲ್ಲಿನ ಸಾಧನೆ

ಪರಿಶಿಷ್ಟ ಜಾತಿ ಮತ್ತು ಪರಿಸಿಷ್ಟ ಪಂಗಡ ಸಮುದಾಯಗಳ ಮಕ್ಕಳು ೧ ರಿಂದ ೧೦ನೇ ತರಗತಿಗಳ ದಾಖಲಾತಿಗೆ ಸಂಬಂಧಿಸಿದಂತೆ ಸಾಧಿಸಿಕೊಂಡಿರುವ ಸಾಧನೆ ಉತ್ತಮವಾಗಿದೆ. ರಾಜ್ಯ ಮಟ್ಟದಲ್ಲಿ ಈ ಸಮುದಾಯಗಳ ಮಕ್ಕಳ ದಾಖಲಾತಿ ಪ್ರಮಾಣವು ಒಟ್ಟು ಜನಸಂಖ್ಯೆಯಲ್ಲಿನ ಮಕ್ಕಳ ದಾಖಲಾತಿಗೆ ಹೋಲಿಸಬಹುದಾಗಿದೆ. ವಸ್ತುಸ್ಥಿತಿಯೇನಿದೆಯೆಂದರೆ ರಾಜ್ಯ ಮಟ್ಟದಲ್ಲಿ ಹಾಗೂ ರಾಯಚೂರು ಮಟ್ಟದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮಕ್ಕಳ ದಾಖಲಾತಿ ಪ್ರಮಾಣವು ಅವರು ಜನಸಂಖ್ಯೆಯಲ್ಲಿ ಪಡೆದುಕೊಂಡಿರುವ ಪ್ರಮಾಣಕ್ಕಿಂತ ಅಧಿಕವಾಗಿದೆ. ಒದರಿಂದ ಹತ್ತನೆಯ ತರಗತಿವರೆಗಿನ ಪ.ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮಕ್ಕಳ ದಾಖಲಾತಿ ಪ್ರಮಾಣ ಒಟ್ಟು ದಾಖಲಾತಿಯಲ್ಲಿ ಶೇ.೨೧.೫೪ರಷ್ಟು ರಾಯಚೂರು ಜಿಲ್ಲೆಯಲ್ಲಿ ೨೦೦೫-೦೬ನೆಯ ಸಾಲಿನಲ್ಲಿ ಕಂಡುಬಂದಿದೆ. ಜಿಲ್ಲೆಯ ಜನಸಂಖ್ಯೆಯಲ್ಲಿ ಇವರ ಪ್ರಮಾಣ ಶೇ.೨೦.೧೯ರಷ್ಟಿದೆ. ಈ ಜಾತಿ ವರ್ಗಗಳ ದಾಖಲಾತಿಯಲ್ಲಿ ಲಿಂಗ ಅಸಮಾನತೆಯು ಕಡಿಮೆಯಾಗುತ್ತಾ ನಡೆದಿರುವುದು ಸ್ವಾಗತಾರ್ಹ. ಆದರೆ ಒಟ್ಟು ವರ್ಗಗಳಲ್ಲಿ ಲಿಂಗ ಅಸಮಾನತೆಯ ಪ್ರಮಾಣದ ಇಳಿಕೆ ಗತಿ ಮಂದವಾಗಿದೆ. ರಾಜ್ಯಮಟ್ಟದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ಜನಸಂಖ್ಯೆಯಲ್ಲಿ ಶೇ.೨೨.೭೫ ಪಾಲು ಪಡೆದಿದ್ದರೆ ಶಾಲಾ ದಾಖಲಾತಿಯಲ್ಲಿ ಶೇ.೨೬.೮೯ ಪಾಲು ಪಡೆದುಕೊಂಡಿವೆ ಪದವಿ ಪೂರ್ವ ತರಗತಿಯಲ್ಲಿ ರಾಯಚೂರು ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳು ಪ್ರಮಾಣ ಸೇ.೧೮.೯೦ ಆದರೆ ಒಂದನೆಯ ತರಗತಿಯಲ್ಲಿ ಪರಿಶಿಷ್ಟರ ಪ್ರಮಾಣ ಅಧಿಕವಾಗಿರುತ್ತದೆ. ಆದರೆ ಏಳನೆಯ ಮತ್ತು ಹತ್ತನೆಯ ತರಗತಿ ತೆಗೆದುಕೊಂಡರೆ ಅವರ ಪ್ರಮಾಣ ಕಡಿಮೆ.

ರಾಯಚೂರು ಜಿಲ್ಲೆಯಲ್ಲಿ ಒಟ್ಟು ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಶೈಕ್ಷಣಿಕ ಪರಿವರ್ತನಾ ಸೂಚ್ಯಂಕವು ೨೦೦೫-೦೬ರಲ್ಲಿ ೦.೭೭೯ ರಷ್ಟಿತ್ತು. ಕರ್ನಾಟಕದಲ್ಲಿ ಅದರ ಮೌಲ್ಯ ೦.೮೨೯ ಅಂದರೆ ಅಂತರವಿರುವುದು ಸ್ಪಷ್ಟವಾಗುತ್ತದೆ. ಆದರೆ ಪರಿಶಿಷ್ಟ ಪಂಗಡಕ್ಕೆ ಸಂಬಂಧಿಸಿದಂತೆ ರಾಯಚೂರು ಜಿಲ್ಲೆಯಲ್ಲಿ ಅದು ೦.೭೮೭ರಷ್ಟಿದ್ದರೆ ರಾಜ್ಯಮಟ್ಟದಲ್ಲಿ ಅದು ೭೫೦ರಷ್ಟಿದೆ. ಒಟ್ಟು ವಿದ್ಯಾರ್ಥಿಗಳು ಮತ್ತು ಪರಿಶಿಷ್ಟ ಜಾತಿ ವಿದ್ಯಾರ್ಥಿ ಸೂಚ್ಯಂಕಗಳ ನಡುವೆ ತೀವ್ರ ಅಂತರವಿದೆ.

ಕೋಷ್ಟಕ-೬.೯

ಶೈಕ್ಷಣಿಕಾ ಪರಿವರ್ತನಾ ಸೂಚ್ಯಂಕ ಪ.ಜಾತಿ ಮತ್ತು ಪ.ಪಂಗಡ ೨೦೦೬-೦೭

ಕ್ರಸಂ.	ವಿವರಗಳು	೭ನೆಯ ತರಗತಿ ದಾಖಲಾತಿ ೨೦೦೪-೦೫		೮ನೆಯ ತರಗತಿ ದಾಖಲಾತಿ ೨೦೦೫-೦೬		ಶೈಕ್ಷಣಿಕ ಪರಿವರ್ತನಾ ಸೂಚ್ಯಂಕ ೨೦೦೫-೦೬	
		ಪ.ಜಾತಿ	ಪ.ಪಂಗಡ	ಪ.ಜಾತಿ	ಪ.ಪಂಗಡ	ಪ.ಜಾತಿ	ಪ.ಪಂಗಡ
೧.	ರಾಯಚೂರು ಜಿಲ್ಲೆ	೬೭೯೦	೬೧೭	೫೨೨೮	೬೪೫	೦.೭೭೯	೦.೯೦
೨.	ಕರ್ನಾಟಕ ರಾಜ್ಯ	೧೮೧೮೩೨	೭೧೭೫೯	೧೪೯೫೦೦	೫೬೬೭೬	೦.೮೨೨	೦.೭೯೦

ಮೂಲ:- ೧. ಕರ್ನಾಟಕ ಸರ್ಕಾರ, ೨೦೧೫, ತಾಲ್ಲೂಕುವಾರು ಶೈಕ್ಷಣಿಕ ಅಂಕಿ-ಅಂಶ ೨೦೦೫, ಸರ್ವಶಿಕ್ಷಣ ಅಭಿಯಾನ

೨. ಕರ್ನಾಟಕ ಸರ್ಕಾರ, ೨೦೦೬, ಸಮಗ್ರ ಶೈಕ್ಷಣಿಕ ಮಾಹಿತಿಕೋಶ: ೨೦೦೬, ಸರ್ವಶಿಕ್ಷಣ ಅಭಿಯಾನ, ಬೆಂಗಳೂರು

೬.೫ ದುಡಿಮೆಯ ಪಾಲು

ಈ ಜಿಲ್ಲೆಯಲ್ಲಿನ ದುಡಿಮೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡ ಇವರ ಪಾಲು ಅಪಾರ ಉದಾಹರಣೆಗೆ ಜಿಲ್ಲೆಯ ಒಟ್ಟು ಕೃಷಿ ಕಾರ್ಮಿಕರಲ್ಲಿ ಪ.ಜಾತಿ ಮತ್ತು ಪರಿಶಿಷ್ಟ ಪಂಗಡದ ಕಾರ್ಮಿಕರ ಪ್ರಮಾಣ ಶೇ.೨೬.೧೨ ಮತ್ತು ೨೯.೧೪ ಜನಸಂಖ್ಯೆಯಲ್ಲಿ ಇವರ ಪ್ರಮಾಣ ಎಷ್ಟಿದೆಯೋ (ಶೇ.೧೮.೪೯) ೧೯.೧೩ ಅದಕ್ಕಿಂತಲೂ ಕೃಷಿ ಕಾರ್ಮಿಕರಲ್ಲಿ ಇವರ ಪಾಲು ಅಧಿಕ. ಆದರೆ ಅಭಿವೃದ್ಧಿಯ ಒಂದು ಫಲವಾದ ಅಕ್ಷರ ಸಂಸ್ಕೃತಿಯಲ್ಲಿ ಇವರ ಪಾಲು ಕಡಿಮೆ. ರಾಜ್ಯದ ಒಟ್ಟು ಅಕ್ಷರಸ್ಥರಲ್ಲಿ ಪರಿಶಿಷ್ಟ ಜಾತಿ ಅಕ್ಷರಸ್ಥರು ಪಾಲು ಕೇವಲ ಶೇ.೧೪.೦೮ ಪರಿಶಿಷ್ಟ ಪಂಗಡ ಶೇ ೧೪.೩೨ರಷ್ಟಿದೆ. ಇದರ ಆಧಾರದ ಮೇಲೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನ ಜಿಲ್ಲೆಯ ಅಭಿವೃದ್ಧಿಗೆ ಹೆಚ್ಚಿನ ಕಾಣಿಕೆ ನೀಡುತ್ತಿದ್ದಾರೆ. ಆದರೆ ದುಡಿಮೆಗೆ ತಕ್ಕ ಪ್ರತಿಫಲ ಅವರಿಗೆ ದೊರಕುತ್ತಿಲ್ಲವೆಂಬುದಕ್ಕೆ ಇದೊಂದು ಕೋಷ್ಟಕ ನಿದರ್ಶನವಾಗಿದೆ.

ಕೋಷ್ಟಕ-೬.೧೦

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನಸಂಖ್ಯೆ ಮತ್ತು ಕೃಷಿ ಕೂಲಿ ಪ್ರಮಾಣ

ತಾಲ್ಲೂಕುಗಳು	ಜಿಲ್ಲೆಯ ಪರಿಶಿಷ್ಟ ಜಾತಿ ಜನಸಂಖ್ಯೆ ಪ್ರಮಾಣ	ಜಿಲ್ಲೆಯ ಒಟ್ಟು ಅಕ್ಷರಸ್ಥರಲ್ಲಿ ಪರಿಶಿಷ್ಟ ಜಾತಿ ಅಕ್ಷರಸ್ಥರ ಪ್ರಮಾಣ	ಜಿಲ್ಲೆಯ ಒಟ್ಟು ಕೃಷಿಕೂಲಿಕಾರರಲ್ಲಿ ಪರಿಶಿಷ್ಟ ಜಾತಿ ಕೃಷಿ ಕೂಲಿಕಾರರ ಪ್ರಮಾಣ	ಜಿಲ್ಲೆಯ ಪರಿಶಿಷ್ಟ ಜಾತಿ ಜನಸಂಖ್ಯೆ ಪ್ರಮಾಣ	ಜಿಲ್ಲೆಯ ಒಟ್ಟು ಅಕ್ಷರಸ್ಥರಲ್ಲಿ ಪರಿಶಿಷ್ಟ ಪಂಗಡ ಅಕ್ಷರಸ್ಥರ ಪ್ರಮಾಣ	ಜಿಲ್ಲೆಯ ಒಟ್ಟು ಕೃಷಿಕೂಲಿಕಾರರಲ್ಲಿ ಪರಿಶಿಷ್ಟ ಪಂಗಡ ಕೃಷಿ ಕೂಲಿಕಾರರ ಪ್ರಮಾಣ
ದೇವದುರ್ಗ	೧೮.೨೫	೧೩.೫೦	೨೪.೪೧	೨೨.೧೫	೧೪೫೧	೨೬.೧೫
ಮಾನವಿ	೧೬.೨೧	೧೦.೪೨	೨೦.೬೧	೨೩.೬೧	೧೨.೬೩	೨೫.೧೬
ಲಿಂಗಸೂಗೂರು	೧೮.೪೦	೧೩.೬೧	೨೫.೩೦	೧೭.೩೦	೯.೮೦	೨೨.೩೩
ರಾಯಚೂರು	೧೮.೫೬	೧೧.೧೦	೨೯.೧೬	೧೯.೪೪	೧೦.೧೩	೨೮.೩೧
ಸಿಂಧನೂರು	೧೯.೮೧	೧೪.೩೧	೨೯.೭೧	೨೪.೨೯	೧೩.೧೪	೨೫.೬೬
ಜಿಲ್ಲೆ	೧೮.೪೯	೧೪.೦೮	೨೫.೩೦	೧೯.೧೩	೧೪೩೨	೨೯.೧೪
ರಾಜ್ಯ	೧೬.೨೦	೧೨.೬೧	೨೭.೯೦	೧೭.೭೧	೧೩.೮೧	೨೮.೯೨

ಮೂಲ:- ಜನಗಣತಿ ವರದಿ ೨೦೦೧

ದುಡಿಮೆ ಮತ್ತು ಉದ್ಯೋಗ

ಒಂದು ಆರ್ಥಿಕತೆಯಲ್ಲಿ ಜನರ ಜೀವನ ಮಟ್ಟವನ್ನು ಸೂಚಿಸುವ ಬಹುಮುಖ್ಯ ಸಂಗತಿಯೆಂದರೆ ದುಡಿಮೆಗಾರರ ವೃತ್ತಿವಾರು ವರ್ಗೀಕರಣ, ಪ್ರಸ್ತುತ ಭಾಗದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮುದಾಯಕ್ಕೆ ಸಂಬಂಧಿಸಿದಂತೆ ಕೃಷಿ ಅವಲಂಬನೆ ಕೃಷಿ ಕಾರ್ಮಿಕರ ಪ್ರಮಾಣ, ದುಡಿಮೆ ಸಹಭಾಗಿತ್ವ ಮುಂತಾದ ಸಂಗತಿಗಳನ್ನು ಚರ್ಚಿಸಲಾಗಿದೆ.

೬.೬ ಕೃಷಿ ಅವಲಂಬನೆ

ಸಾಂಪ್ರದಾಯಿಕವಾಗಿ ಅರ್ಥಶಾಸ್ತ್ರದಲ್ಲಿ ಕೃಷಿಯ ಅವಲಂಬನೆ ಯಾವ ಆರ್ಥಿಕತೆಯಲ್ಲಿ ಅಧಿಕವಾಗಿರುತ್ತದೋ ಅದನ್ನು ಹಿಂದುಳಿದ ಆರ್ಥಿಕತೆಯೆಂದು ಗುರುತಿಸಿಕೊಂಡು ಬರಲಾಗಿದೆ. ಈ ಪ್ರಮೇಯ ಆಧಾರದ ಮೇಲೆ ಆರ್ಥಿಕತೆಯೊಂದರ ಜನರ ಬದುಕಿನ ಸ್ಥಿತಿಗತಿಯನ್ನು ಅವರ ಕೃಷಿ ಅವಲಂಬನೆ ಪ್ರಮಾಣದಿಂದ ತೋರಿಸಬಹುದಾಗಿದೆ. ಆರ್ಥಿಕ ಸಿದ್ಧಾಂತದ ಪ್ರಕಾರ ಆರ್ಥಿಕತೆಯ ಅಭಿವೃದ್ಧಿಯ ಮಟ್ಟ ಹಾಗೂ ಗತಿ ಉನ್ನತ ಹಂತ ತಲುಪಿದಂತೆ ಅಲ್ಲಿ ಕೃಷಿಯನ್ನು ಅವಲಂಬಿಸಿಕೊಂಡಿರುವ ದುಡಿಮೆಗಾರರ ಪ್ರಮಾಣವು ಕಡಿಮೆಯಾಗಿ ಕೃಷಿಯೇತರ ಚಟುವಟಿಕೆಗಳನ್ನು ಅವಲಂಬಿಸಿಕೊಂಡಿರುವ ದುಡಿಮೆಗಾರರ ಪ್ರಮಾಣವು ಅಧಿಕವಾಗುತ್ತದೆ. ಇದನ್ನು ವೃತ್ತಿ ರಚನಾ ಪರಿವರ್ತನಾ ಸಿದ್ಧಾಂತವೆಂದು ಕರೆಯಲಾಗಿದೆ. ಕೊಲನ್ ಕ್ಲಾರ್ಕ್, ಸ್ವೆಮನ್ ಕುಜ್ನೆಟ್ಸ್ ಮುಂತಾದವರು ಇದನ್ನು ಪ್ರತಿಪಾದಿಸಿದ್ದಾರೆ.

ಈ ಜಿಲ್ಲೆಯಲ್ಲಿ ಅತ್ಯಂತ ಕುತೂಹಲಕಾರಿಯಾದ ಸಂಗತಿಯೆಂದರೆ ಕೃಷಿಯ ಅವಲಂಬನೆಯು ಪ.ಜಾತಿ ಮತ್ತು ಪರಿಶಿಷ್ಟ ಪಂಗಡ ದುಡಿಮೆಗಾರರಲ್ಲಿ ಒಟ್ಟು ಜನ ಸಂಖ್ಯೆಯಲ್ಲಿರುವುದಕ್ಕಿಂತ ಅಧಿಕವಾಗಿದೆ. ಒಟ್ಟು ಜನಸಂಖ್ಯೆಗೆ ಸಂಬಂಧಿಸಿದಂತೆ ರಾಯಚೂರು ಜಿಲ್ಲೆಯಲ್ಲಿ ಕೃಷಿ ಅವಲಂಬನೆ ಶೇ.೭೧.೧೫ರಷ್ಟಿದ್ದರೆ. ಪರಿಶಿಷ್ಟ ಜಾತಿಯಲ್ಲಿ ಅದರ ಪ್ರಮಾಣ ಶೇ.೭೩.೩೫ ಮತ್ತು ಪರಿಶಿಷ್ಟ ಪಂಗಡದಲ್ಲಿ ಅದರ ಪ್ರಮಾಣ ಶೇ.೭೪.೫೦ ಮತ್ತೊಂದು ಸಂಗತಿಯೆಂದರೆ ಕೃಷಿ ಅವಲಂಬಿತರಲ್ಲಿ ಕೃಷಿ ಕಾರ್ಮಿಕರ ಪ್ರಮಾಣವು ಒಟ್ಟು ಜನಸಂಖ್ಯೆಯಲ್ಲಿರುವುದಕ್ಕಿಂತ ಪ.ಜಾತಿ ಮತ್ತು ಪರಿಶಿಷ್ಟ ಪಂಗಡದಲ್ಲಿ ಅಧಿಕವಾಗಿದೆ. ಒಟ್ಟು ಜನಸಂಖ್ಯೆಯಲ್ಲಿನ ಕೃಷಿ ಅವಲಂಬಿತರಲ್ಲಿ ಕೃಷಿ ಕಾರ್ಮಿಕರ ಪ್ರಮಾಣವು ಶೇ.೫೭.೯೮ರಷ್ಟಿದ್ದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದಲ್ಲಿ ಕ್ರಮವಾಗಿ ಶೇ.೬೯.೭೧ ಮತ್ತು ಶೆ.೭೧.೮೮ ಭೂರಹಿತರ ಪ್ರಮಾಣವು ಒಟ್ಟು ಜನಸಂಖ್ಯೆಗಿಂತ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದಲ್ಲಿ ಅಧಿಕವೆಂಬುದು ತಿಳಿದು ಬರುತ್ತದೆ. (Staties-೨೦೦೮ ಸಾಂಖ್ಯಿಕ ಇಲಾಖೆ)

ಒಟ್ಟು ಜನಸಂಖ್ಯೆಯಲ್ಲಿ ಕೃಷಿಯೇತರ ಚಟುವಟಿಕೆಗಳ ಪ್ರಮಾಣ ಶೇ.೨೮.೫೬ರಷ್ಟಿದ್ದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸಂಬಂಧಿಸಿದಂತೆ ಅವುಗಳ ಪ್ರಮಾಣ ಕೇವಲ ೨೪.೫೫ ಮತ್ತೊಂದು ಕುತೂಹಲದ ಸಂಗತಿಯೆಂದರೆ ಕೃಷಿ ಕಾರ್ಮಿಕರಲ್ಲಿ ಮಹಿಳೆಯರ ಪ್ರಮಾಣವು ಅಧಿಕವಾಗಿದೆ. ಆದರೆ ಒಟ್ಟು ಜನಸಂಖ್ಯೆಗೆ ಸಂಬಂಧಿಸಿದಂತೆ ಕೃಷಿ ಕಾರ್ಮಿಕರಲ್ಲಿ ಮಹಿಳೆಯರ ಪ್ರಮಾಣ ಶೇ.೫೭.೬೩ರಷ್ಟಿದ್ದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದಲ್ಲಿ ಅವರ ಪ್ರಮಾಣ ೫೪.೩೩ ದುಡಿಮೆ ಸಹಭಾಗಿತ್ವ ಪ್ರಮಾಣವು ಒಟ್ಟು ಜನಸಂಖ್ಯೆಗೆ ಸಂಬಂಧಿಸಿದಂತೆ ಶೇ.೩೯.೬೦ರಷ್ಟಿದ್ದರೆ ಪರಿಶಿಷ್ಟ ಜಾತಿ ಮತ್ತು ಪಂಗಡದಲ್ಲಿ ಅದರ ಪ್ರಮಾಣ ಶೇ.೪೨.೪೧ರಷ್ಟಿದೆ. ಒಟ್ಟಾರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ದುಡಿಮೆಗಾರರ ಬದುಕಿನ ಸ್ಥಿತಿಯು ಒಟ್ಟು ಜನಸಂಖ್ಯೆಯ ಸ್ಥಿತಿಗಿಂತ ತುಂಬಾ ಸಂಕಷ್ಟದಲ್ಲಿದೆ. ಏಕೆಂದರೆ ಇಲ್ಲಿ ಕೃಷಿ

ಅವಲಂಬನೆಯು ಅಧಿಕ. ಅದರಲ್ಲಿ ಕೃಷಿ ಕಾರ್ಮಿಕರ ಪ್ರಮಾಣವು ಅಧಿಕ ಪ.ಜಾತಿ ಮತ್ತು ಪ.ಪಂಗಡ ಸಮುದಾಯವು ಸಮಾಜದಲ್ಲಿ ಅನುಭವಿಸುತ್ತಿರುವ ತಾರತಮ್ಯ ಹಾಗೂ ಶೋಷಣೆಯನ್ನು ಮೇಲಿನ ಅಂಕಿ-ಅಂಶಗಳು, ಸ್ಪಷ್ಟವಾಗಿ ತೋರಿಸುತ್ತವೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಸಂಖ್ಯೆ

ರಾಯಚೂರು ಜಿಲ್ಲೆಯ ಐದು ತಾಲ್ಲೂಕುಗಳನ್ನು ಸೇರಿಸಿಕೊಂಡು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮೂಹಗಳು ೨೦೧೧ರಲ್ಲಿ ಅನುಕ್ರಮವಾಗಿ ೪,೦೦,೯೩೩ ಹಾಗೂ ೩,೬೭,೦೭೧ ಜನಸಂಖ್ಯೆ ಹೊಂದಿದ್ದು ಒಟ್ಟು ಜನಸಂಖ್ಯೆಯ ಶೇ.೪೦ರಷ್ಟಿದ್ದರೆ. ಜಿಲ್ಲೆಯು ರಾಜ್ಯದ ಒಟ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜನಸಂಖ್ಯೆಯ ಶೇ.೫.೨೨ರಷ್ಟು ಪಾಲನ್ನು ಹೊಂದಿದೆ. ೨೦೦೧-೨೦೧೧ರ ಅವಧಿಯಲ್ಲಿ ಒಟ್ಟು ಜನಸಂಖ್ಯೆಯ ಬೆಳವಣಿಗೆ ಪ್ರಮಾಣವು ಶೇ.೧೫ರಷ್ಟಿದ್ದರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಮುದಾಯಗಳಲ್ಲಿನ ಜನಸಂಖ್ಯೆಯ ಬೆಳವಣಿಗೆ ಪ್ರಮಾಣ ಶೇ.೨೩.೮ರಷ್ಟು ಅಧಿಕ ಪ್ರಮಾಣದಲ್ಲಿದೆ. ಜಿಲ್ಲೆಯ ಪ.ಜಾತಿ/ಪ.ಪಂಗಡಗಳ ಜನಸಂಖ್ಯೆಯ ವಿವರ ಈ ರೀತಿಯಾಗಿದೆ.

ಕೋಷ್ಟಕ-೬.೧೧

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಜನಸಂಖ್ಯೆ ೨೦೧೧

ತಾಲೂಕು	ಒಟ್ಟು	ಒಟ್ಟು ಜನಸಂಖ್ಯೆ			ಒಟ್ಟು ಜನಸಂಖ್ಯೆ % ಪ್ರಮಾಣ			ಜಿಲ್ಲೆ	ನಗರ ಜನಸಂಖ್ಯೆ
		ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಒಟ್ಟು	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಒಟ್ಟು	% ಪ್ರಮಾಣ	% ಪ್ರಮಾಣ
ದೇವದುರ್ಗ	೨೮೦೬೦೬	೬೦೪೭೮	೯೬೫೩೫	೧೫೭೦೧೩	೨೧.೫೫	೩೪.೪೦	೫೫೯೫	೨೦.೪೪	೮.೬೮
ಲಿಂಗಸೂಗೂರು	೩೮೫೬೯೯	೮೯೬೯೨	೬೫೫೮೯	೧೫೫೨೮೧	೨೩.೨೫	೧೭.೦೧	೪೦.೨೬	೨೦.೨೨	೧೪.೨೭
ಮಾನವಿ	೩೭೦೬೭೦	೭೮೦೫೬	೮೯೧೯೦	೧೬೭೨೪೬	೨೧.೦೬	೨೪.೦೬	೪೫.೧೨	೩೩.೭೦	೭೩೮
ರಾಯಚೂರು	೪೯೮೬೩೭	೧೦೪೮೪೯	೬೩೧೭೮	೧೬೮೦೨೭	೨೧.೦೩	೧೨.೬೭	೩೩.೭೦	೨೧.೮೮	೩೬.೨೦
ಸಿಂಧನೂರು	೩೯೩೨೦೦	೬೭೮೫೮	೫೨೫೭೯	೧೨೦೪೩೭	೧೭.೨೬	೧೩.೩೭	೩೦.೬೩	೧೫.೬೮	೯೫೧
ಜಿಲ್ಲೆ	೧೯೨೮೮೧೨	೪೦೦೯೩೩	೩೬೭೦೭೧	೭೬೮೦೦೪	೨೦.೭೯	೧೯.೦೩	೩೯.೮೨	೫.೨೨*	೧೫.೬೮
ರಾಜ್ಯ	೬೧೦೯೫೨೯೭	೧೦೪೭೪೯೯೨	೪೨೪೮೯೮೭	೧೪೭೨೩೯೭೯	೧೭.೧೫	೬.೯೫	೨೪.೧೦	–	೨೫.೮೦

ಟಿಪ್ಪಣಿ:- * ರಾಜ್ಯದ ಪ.ಜಾತಿ/ಪ.ಪಂಗಡ ಜನಸಂಖ್ಯೆಯ ಶೇ. ಪಾಲು

ಮೂಲ:- ಜನಗಣತಿ ವರದಿ ೨೦೧೧ ಮತ್ತು ಸಾಂಖ್ಯಿಕ ಇಲಾಖೆ ರಾಯಚೂರು (೨೦೧೦-೧೧)

ಜಿಲ್ಲೆಯ ಒಟ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜನಸಂಖ್ಯೆಯಲ್ಲಿ ಸಿಂಧನೂರು ತಾಲೂಕಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜನಸಂಖ್ಯೆಯ ಶೇ.ಪ್ರಮಾಣ ೧೫.೬ರಷ್ಟು ಇದ್ದರೆ, ಉಳಿದ ನಾಲ್ಕು ತಾಲ್ಲೂಕುಗಳ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜನಸಂಖ್ಯೆಯ ಪ್ರಮಾಣ ಶೇ.೨೦ರಿಂದ ೨೧ರಷ್ಟಿದೆ. ಆಯಾ ತಾಲೂಕುಗಳಲ್ಲಿ ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜನಸಂಖ್ಯೆಯ ಪಾಲನ್ನು ಗಮನಿಸಿದಾಗ, ದೇವದುರ್ಗ ತಾಲ್ಲೂಕಿನಲ್ಲಿ ಶೇ.೫೬ರಷ್ಟಿದ್ದು. ಉಳಿದ ತಾಲ್ಲೂಕುಗಳಲ್ಲಿ ಶೇ.೩೦ರಿಂದ ೪೫ರಷ್ಟಿರುವುದು ಕಂಡುಬರುತ್ತದೆ. ಅದೇ ರೀತಿಯಾಗಿ ಪರಿಶಿಷ್ಟ ಜಾತಿ ಜನಸಂಖ್ಯೆಯು ಜಿಲ್ಲೆಯ ಒಟ್ಟು ಜನಸಂಖ್ಯೆ ಶೇ.೨೧ರಷ್ಟಿದ್ದು. ಪರಿಶಿಷ್ಟ ಪಂಗಡ ಜನಸಂಖ್ಯೆಯು ಜಿಲ್ಲೆಯ ಒಟ್ಟು ಜನಸಂಖ್ಯೆಯ ಶೇ.೧೯ರಷ್ಟಿರುತ್ತದೆ. ಲಿಂಗಸೂಗೂರು ತಾಲ್ಲೂಕು ಅತೀ ಹೆಚ್ಚು ಹಾಗೂ ರಾಯಚೂರು ತಾಲ್ಲೂಕು


ಅತೀ ಕಡಿಮೆ ಪ್ರತಿಶತ ಪ್ರಮಾಣದ ಪರಿಶಿಷ್ಟ ಜಾತಿ ಜನಸಂಖ್ಯೆ ಹೊಂದಿರುತ್ತವೆ. ಹಾಗೆಯೇ ದೇವದುರ್ಗ ತಾಲ್ಲೂಕು ಅತೀ ಹೆಚ್ಚು ಹಾಗೂ ಸಿಂಧನೂರು ತಾಲೂಕು ಅತೀ ಕಡಿಮೆ ಪ್ರತಿಶತ ಪರಿಶಿಷ್ಟ ಪಂಗಡ ಜನಸಂಖ್ಯೆಯನ್ನು ಹೊಂದಿವೆ. ಈ ಜನರು ರಾಯಚೂರು ಜಿಲ್ಲೆಯಲ್ಲಿ ಪ್ರಮುಖವಾಗಿ ಗ್ರಾಮವಾಸಿಗಳಾಗಿದ್ದು ಕೇವಲ ಶೇ.೧೬ರಷ್ಟು ಜನರು ನಗರ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ಅಂದರೆ ಹಿಂದುಳಿದ ಜಿಲ್ಲೆಯಾದ ರಾಯಚೂರಿನಲ್ಲಿ ಇವರು ಅಧಿಕ ಸಂಖ್ಯೆಯಲ್ಲಿ ಇದ್ದು, ಗ್ರಾಮಗಳಲ್ಲಿಯೇ ವಾಸಿಸುತ್ತಿರುವುದು ಅವರ ಇನ್ನಷ್ಟು ಹಿಂದುಳಿದಿರುವಿಕೆಗೆ ಕಾರಣವಾಗಿದೆ. ಒಟ್ಟಾರೆ ಹಿಂದುಳಿದ ತಾಲ್ಲೂಕುಗಳಲ್ಲಿ ಈ ವರ್ಗಗಳ ಅಧಿಕ ಜನಸಂಖ್ಯೆಯನ್ನು ಹೊಂದಿರುತ್ತವೆ.

ಪ.ಜಾತಿ/ಪ.ಪಂಗಡಗಳ ಜಾತಿ ಸಂರಚನೆ

೨೦೦೧ರ ಜನಗಣತಿಯು ಭಾರತದಲ್ಲಿ ಎಲ್ಲಾ ಜಾತಿಗಳನ್ನು ಲೆಕ್ಕಚಾರ ಮಾಡಲಾಗಿದೆ. ದೇಶದ ಅಭಿವೃದ್ಧಿಯನ್ನು ಮಾಪನ ಮಾಡುವಾಗ ಯಾವ ಜಾತಿಗಳು ಅತ್ಯಂತ ದುಸ್ಥಿತಿಯನ್ನು ಅನುಭವಿಸುತ್ತವೆ. ಅನ್ನುವುದನ್ನು ಗುರುತಿಸಲು ಜಾತಿಗಣತಿಯು ಪ್ರಮುಖವಾದ ಅಸ್ತ್ರವಾಗಿದೆ. ೨೦೦೧ರ ಜನಗಣತಿಯ ಪ್ರಕಾರ ರಾಯಚೂರು ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಸಮುದಾಯದ ಒಟ್ಟು ಜನಸಂಖ್ಯೆಯಲ್ಲಿ ಶೇ.೮೦ರಷ್ಟು ಜನರು ಮಾದಿಗ, ಬಂಜಾರ, ಭೋವಿ ಹಾಗೂ ಚಲವಾದಿ (ಛಲವಾದಿ) ಸಮುದಾಯಗಳಿಗೆ ಸೇರಿದವರಾಗಿರುತ್ತಾರೆ. ಅದೇ ರೀತಿಯಾಗಿ ಜಿಲ್ಲೆಯಲ್ಲಿನ ಒಟ್ಟು ಪರಿಶಿಷ್ಟ ಪಂಗಡ ಸಮುದಾಯದವರಲ್ಲಿ ಶೇ.೯೯ರಷ್ಟು ಜನರು ವಾಲ್ಮೀಕಿ, ನಾಯಕ ಸಮುದಾಯಕ್ಕೆ ಸೇರಿದವರಾಗಿದ್ದಾರೆ. ಈ ಸಮುದಾಯವು ಅಭಿವೃದ್ಧಿಯಿಂದ ಬಹುದೂರ ಉಳಿದಿವೆ. ಕೆಲವೊಂದು ಕುಟುಂಬಗಳು ಭೂಮಿಯನ್ನು ಹೊಂದಿದ್ದು, ಬಹುತೇಕ ಕುಟುಂಬಗಳು ಭೂಮಿ ಇಲ್ಲದೆ, ಭೂರಹಿತ ಕೃಷಿ ಕಾರ್ಮಿಕರಾಗಿ ದುಡಿಯುತ್ತಿರುವುದು ಕಂಡುಬರುತ್ತದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಸಂಖ್ಯೆ ಬೆಳವಣಿಗೆ ದರ

೬.೧೨



ಮೂಲ:- ಜನಗಣತಿ ವರದಿಗಳು, ಸಾಂಖ್ಯ ಇಲಾಖೆ, ರಾಯಚೂರು ಅಂಕಿ ಅಂಶಗಳ ನೋಟ ೨೦೧೦-೨೨

ಈ ಚಿತ್ರದಲ್ಲಿ ತೋರಿಸಿದಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಸಂಖ್ಯೆಯ ದಶಕವಾರು ಬೆಳವಣಿಗೆ ಪ್ರಮಾಣ ಶೇ.೨೩.೧೮ರಷ್ಟಿದ್ದು, ಇದು ಒಟ್ಟು ಜನಸಂಖ್ಯೆಯ

ಪ್ರಮಾಣಕ್ಕಿಂತ ಅಧಿಕವಾಗಿದೆ. ತಾಲೂಕುವಾರು ಬೆಳವಣಿಗೆಯ ಪ್ರಮಾಣವನ್ನು ಗಮನಿಸಿದಾಗ, ಅಲ್ಲಿಯೂ ಕೂಡ ಅಧಿಕ ಪ್ರಮಾಣದಲ್ಲಿದೆ. ದೇವದುರ್ಗ ತಾಲೂಕಿನಲ್ಲಿ ಗರಿಷ್ಠ ಪ್ರಮಾಣದ ಬೆಳವಣಿಗೆ ಇದ್ದರೆ, ಸಿಂಧನೂರು ತಾಲೂಕಿನಲ್ಲಿ ಕನಿಷ್ಠ ಪ್ರಮಾಣದಲ್ಲಿದೆ. ಒಟ್ಟು ಜನಸಂಖ್ಯೆಯ ಬೆಳವಣಿಗೆ ದರವೂ ಅದೇ ರೀತಿಯಾಗಿರುವುದು. ಜಿಲ್ಲೆಯಲ್ಲಿ ಜನಸಂಖ್ಯಾ ಬೆಳವಣಿಗೆಯಲ್ಲಿ ಈ ಸಮುದಾಯದವರದ್ದೇ ಬಹು ದೊಡ್ಡ ಪಾಲು ಎಂದು ಗುರುತಿಸಬಹುದಾಗಿದೆ. ಆರ್ಥಿಕವಾಗಿ ಹಿಂದುಳಿದಿರುವ ದೇವದುರ್ಗ, ಮಾನವಿ ಮತ್ತು ಲಿಂಗಸೂಗೂರು ತಾಲೂಕುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನಸಂಖ್ಯಾ ಬೆಳವಣಿಗೆ ದರವನ್ನು ಗಮನಿಸಿದರೆ, ಇವರಿಗೆ ಗರ್ಭನಿರೋಧಕಗಳ ಕುರಿತ ಮಾಹಿತಿ ಇಲ್ಲದಿರುವುದು ಅಥವಾ ಮಾಹಿತಿ ಇದ್ದರೂ ಅವುಗಳು ಅವರಿಗೆ ಲಭ್ಯವಿಲ್ಲದಿರುವುದು ಕಾರಣವಿದ್ದರೂ, ಬಹು ಮುಖ್ಯವಾಗಿ ಶಿಕ್ಷಣದ ಕೊರತೆಯೂ ಕೂಡ ಈ ಜನರಿಗೆ ಕಾಡುತ್ತಿರುವುದರಿಂದ ಬೆಳವಣಿಗೆ ಕಾರಣವಾಗಿದೆ. ಅಧಿಕ ಫಲವತ್ತತೆ ಪ್ರಮಾಣದ ಪರಿಣಾಮವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಸಂಖ್ಯೆಯ ಬೆಳವಣಿಗೆಯು ಅಧಿಕವಾಗಿರುವ ಸಾಧ್ಯತೆ ಇದೆ. ಇದರ ನಿಖರ ಕಾರಣಗಳನ್ನು ತಿಳಿಯಲು ವಿಸ್ತೃತ ಅಧ್ಯಯನದ ಅವಶ್ಯಕತೆ ಇದೆ. ದೇವದುರ್ಗವು ಅತ್ಯಂತ ಹಿಂದುಳಿದ ತಾಲೂಕು ಪ್ರದೇಶದಲ್ಲಿ ಬೆಳವಣಿಗೆ ದರವು ಅಧಿಕ ಪ್ರಮಾಣದಲ್ಲಿರುವುದರಿಂದ ಗರ್ಭನಿರೋಧಕಗಳ ಲಭ್ಯತೆ ಹಾಗೂ ಅರಿವಿನ ಕೊರತೆ ಮತ್ತು ಜನರು ಅವುಗಳನ್ನು ಉಪಯೋಗಿಸಲು ಮನಸ್ಸು ಹಿಂಜರಿಯುವ ಕಾರಣ ಅಲ್ಲದಿದ್ದರೂ ಸರಕಾರವು ಅವುಗಳನ್ನು ಸರಿಯಾದ ಪ್ರಮಾಣದಲ್ಲಿನ ಲಭ್ಯತೆಯಲ್ಲಿನ ವಂಚಿತತೆಯ ತೀವ್ರತೆಯನ್ನು ಈ ಬೆಳವಣಿಗೆ ದರವು ತೋರಿಸುತ್ತದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಶಾಲೆ ದಾಖಲಾತಿ

ಸರಕಾರವು ಎಲ್ಲಾರಿಗೂ ಶಿಕ್ಷಣವನ್ನು ನೀಡುವ ದೃಷ್ಟಿಕೋನದಿಂದ ಕಡ್ಡಾಯ ಶಿಕ್ಷಣವನ್ನು ಜಾರಿ ಮಾಡಿದೆ. ಪ್ರಾಥಮಿಕ ಶಿಕ್ಷಣವಲ್ಲದೇ, ಉಚಿತವಾದ ಶಿಕ್ಷಣವನ್ನು ಸಹ ನೀಡಲಾಗುತ್ತಿದೆ. ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗಾಗಿ ಶಾಲಾ ಸೌಕರ್ಯಗಳನ್ನು ವಿಸ್ತರಣೆ ಮತ್ತು ಹಲವಾರು ವಿಶೇಷ ಸವಲತ್ತುಗಳನ್ನು ಒದಗಿಸುವುದರ ಮೂಲಕ ಈ ವರ್ಗದ ವಿದ್ಯಾರ್ಥಿಗಳ ದಾಖಲಾತಿ ಪ್ರಮಾಣದಲ್ಲಿ ಏರಿಕೆ ಉಂಟಾಗಿದೆ. ಹೀಗೆ ಏರಿಕೆ ಕಂಡುಬರುವುದು ಸಾಮಾನ್ಯ ಪ್ರವೃತ್ತಿಯೂ ಹೌದು. ೨೦೦೫-೦೬ರಲ್ಲಿ ೧,೭೪,೬೪೧ರಷ್ಟು ಇದ್ದ ಒಟ್ಟು ದಾಖಲಾತಿಯು ೨೦೧೧-೧೨ರಲ್ಲಿ ೩,೦೭,೯೮೫ರಷ್ಟಾಗಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳ ದಾಖಲಾತಿ ಕೂಡ ಅಧಿಕವಾಗಿದೆ. ಇದೇ ಅವಧಿಯಲ್ಲಿ ಪ್ರಾಥಮಿಕ ಶಿಕ್ಷಣ ಮಟ್ಟದಲ್ಲಿ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳ ದಾಖಲಾತಿಯು ೫೮,೪೪೨ ರಿಂದ ೬೮,೧೯ರಷ್ಟಾಗಿದು ಶೇ.೧೬.೫ರಷ್ಟು ಪ್ರಮಾಣದಲ್ಲಿ ಹೆಚ್ಚಳವಾಗಿದೆ. ಹಾಗೆಯೇ ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳ ದಾಖಲಾತಿಯು ೫೦,೯೫೩ರಿಂದ ೬೦,೯೪೬ರಷ್ಟಾಗಿದ್ದು, ಶೇ.೧೯.೬ರ ಪ್ರಮಾಣದಲ್ಲಿ ಹೆಚ್ಚಳವಾಗಿದೆ. ಇದು ಸಾಮಾಜಿಕವಾಗಿ ಹಿಂದುಳಿದ ಹಾಗೂ ವಂಚಿತ ವರ್ಗಗಳ ವಿದ್ಯಾರ್ಥಿಗಳು ಹೆಚ್ಚಿನ

ಸಂಖ್ಯೆಯಲ್ಲಿ ಪ್ರಾಥಮಿಕ ಶಿಕ್ಷಣ ಪಡೆಯಲು ಶಾಲೆಗೆ ದಾಖಲಾಗುತ್ತಿರುವುದನ್ನು ಸೂಚಿಸುತ್ತದೆ.[೫] (**ಜನಗಣತಿ ವರದಿ, ೨೦೦೧ ಹಾಗೂ ೨೦೧೧**) ಒಟ್ಟು ದಾಖಲಾದ ವಿದ್ಯಾರ್ಥಿಗಳಲ್ಲಿ ಹೆಣ್ಣುಮಕ್ಕಳ ಪ್ರತಿಶತ ಪ್ರಮಾಣ ಶೇ.೫೦ಕ್ಕಿಂತ ಕಡಿಮೆ ಇದ್ದರೂ, ಇವರ ಪ್ರಮಾಣ ಕ್ರಮೇಣ ಹೆಚ್ಚಳವಾಗುತ್ತಿದೆ. ಆದ್ದರಿಂದ ಪ.ಜಾತಿ/ಪ.ಪಂಗಡ ಮಕ್ಕಳ ಶಾಲಾ ದಾಖಲಾತಿ ವೇಗವಾಗಿ ಅಧಿಕವಾಗುತ್ತಿದ್ದು, ಒಟ್ಟು ದಾಖಲಾತಿಯಲ್ಲಿನ ಹೆಣ್ಣುಮಕ್ಕಳ ಪ್ರಮಾಣ ಕೂಡ ಹೆಚ್ಚಳವಾಗಿದೆ. ಒಟ್ಟು ದಾಖಲಾತಿಯಲ್ಲಿನ ಪ.ಜಾತಿ/ಪ.ಪಂಗಡಗಳ ಸಮುದಾಯಗಳಲ್ಲಿನ ವಿದ್ಯಾರ್ಥಿಗಳ ಪಾಲು ಈ ಕೋಷ್ಟಕ ತೋರಿಸುತ್ತದೆ.

ಕೋಷ್ಟಕ–೬.೧೩

ಪ್ರಾಥಮಿಕ ಶಾಲಾಮಟ್ಟದಲ್ಲಿನ ದಾಖಲಾತಿ ಪ.ಜಾತಿ/ಪ.ಪಂಗಡಗಳ ಪಾಲು (%)

ತಾಲೂಕು	೨೦೦೫–೦೬			೨೦೧೧–೧೨		
	ಹುಡುಗರು	ಹುಡುಗಿಯರು	ಒಟ್ಟು	ಹುಡುಗರು	ಹುಡಗಿಯರು	ಒಟ್ಟು
ದೇವದುರ್ಗ	೨೨.೩	೨೧.೪	೨೧.೯	೨೪.೫	೨೩.೬	೨೪.೧
ಲಿಂಗಸೂಗೂರು	೨೫.೦	೨೨.೭	೨೩.೯	೨೪.೮	೨೩.೪	೨೪.೨
ಮಾನವಿ	೨೧.೫	೨೦.೭	೨೧.೧	೨೨.೨	೨೧.೪	೨೧.೮
ರಾಯಚೂರು	೨೨.೮	೨೧.೩	೨೨.೧	೨೨.೫	೨೧.೯	೨೨.೨
ಸಿಂಧನೂರು	೧೮.೨	೧೭.೫	೧೭.೯	೧೯.೨	೧೮.೬	೧೮.೯
ಒಟ್ಟು	೨೧.೯	೨೦.೬	೨೧.೩	೨೨.೫	೨೧.೭	೨೨.೧
ಪರಿಶಿಷ್ಟ ಪಂಗಡ						
	ಹುಡುಗರು	ಹುಡುಗಿಯರು	ಒಟ್ಟು	ಹುಡುಗರು	ಹುಡುಗಿಯರು	ಒಟ್ಟು
ದೇವದುರ್ಗ	೩೨.೬	೩೨.೨	೩೨.೪	೩೩.೯	೩೩.೮	೩೩.೯
ಲಿಂಗಸೂಗೂರು	೧೬.೨	೧೬.೩	೧೬.೨	೧೭.೪	೧೭೫	೧೭೪
ಮಾನವಿ	೨೪.೬	೨೨.೩	೨೩.೫	೨೫.೫	೨೫.೩	೨೫.೪
ರಾಯಚೂರು	೧೩.೩	೧೧.೫	೧೨.೫	೧೪.೪	೧೩.೩	೧೩.೮
ಸಿಂಧನೂರು	೧೪.೩	೧೪.೧	೧೪.೨	೧೪.೭	೧೪.೨	೧೪.೫
ಒಟ್ಟು	೧೯.೦	೧೮.೦	೧೮.೬	೨೦.೧	೧೯.೫	೧೯.೮

ಮೂಲ:– ಡಿಐಎಸ್‌ಇ ೨೦೧೨–೧೩ ಜಿಲ್ಲಾ ಸಾಂಖ್ಯಿಕ ಇಲಾಖೆ ರಾಯಚೂರು

ಒಟ್ಟು ದಾಖಲಾತಿಯಲ್ಲಿ ಪ.ಜಾತಿ/ಪ.ಪಂಗಡ ವಿದ್ಯಾರ್ಥಿಗಳ ದಾಖಲಾತಿಯ ಪಾಲು ಶೇ.೪೦ ರಿಂದ ಶೇ ೪೨ರವರೆಗೆ ಹೆಚ್ಚಾಗಿರುವುದನ್ನು ನೋಡಬಹುದು. ಹುಡುಗರು ಹುಡುಗಿಯರ ದಾಖಲಾತಿಯಲ್ಲಿನ ಇದೇ ರೀತಿಯ ಬದಲಾವಣೆಯನ್ನು ಗಮನಿಸಬಹುದು. ಲಿಂಗಸೂಗೂರು ಹಾಗೂ ರಾಯಚೂರು ತಾಲೂಕಿನ ಪ.ಜಾತಿ ಗಂಡು ಮಕ್ಕಳ ದಾಖಲಾತಿಯನ್ನು ಹೊರತುಪಡಿಸಿ ತಾಲೂಕುವಾರು ಬದಲಾವಣೆಯನ್ನು ಗಮನಿಸಿದಾಗಲೂ ದಾಖಲಾತಿಯ ಶೇಕಡ ಪ್ರಮಾಣದಲ್ಲಿ ಹೆಚ್ಚಳವಾಗಿರುವುದನ್ನು ಗಮನಿಸಬಹುದಾಗಿದೆ. ಒಟ್ಟಾರೆ ದಾಖಲಾತಿಯಲ್ಲಿ ಹೆಣ್ಣು ಮಕ್ಕಳ ಪಾಲು ಹೆಚ್ಚಳವಾಗುತ್ತಿರುವುದು ಒಳ್ಳೆಯ ಬೆಳವಣಿಗೆಯಾಗಿದೆ.

ಎಲ್ಲ ಸಮುದಾಯಗಳಲ್ಲಿ ಹೆಣ್ಣು ಮಕ್ಕಳಲ್ಲಿನ ದಾಖಲಾತಿಯು ವೇಗವಾಗಿ ಏರಿಕೆಯಾತ್ತಿದೆ. ಪರಿಶಿಷ್ಟ ಪಂಗಡ ಸಮುದಾಯದ ಹೆಣ್ಣು ಮಕ್ಕಳ ದಾಖಲಾತಿಯು ಅತ್ಯಂತ ತೀವ್ರವಾಗಿ

ಏರಿಕೆಯಾಗುತ್ತಿದ್ದು ಪ.ಜಾತಿ ಹೆಣ್ಣು ಮಕ್ಕಳ ದಾಖಲಾತಿಯಲ್ಲಿಯೂ ಸಹ ಗಣನೀಯ ಹೆಚ್ಚಳವುಂಟಾಗಿದೆ. ದೇವದುರ್ಗ ಹಾಗೂ ಲಿಂಗಸೂಗೂರು ತಾಲ್ಲೂಕಿನ ಪ.ಜಾತಿ ವಿದ್ಯಾರ್ಥಿಗಳ ದಾಖಲಾತಿ, ಲಿಂಗಸೂಗೂರು, ಮಾನವಿ ಹಾಗೂ ರಾಯಚೂರು ತಾಲೂಕುಗಳಲ್ಲಿನ ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳ ದಾಖಲಾತಿಗಳು ತೀವ್ರ ಪ್ರಮಾಣದಲ್ಲಿ ಹೆಚ್ಚಳವಾಗಿವೆ. ಆದ್ದರಿಂದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳು ಅದರಲ್ಲಿಯೂ ಹೆಣ್ಣುಮಕ್ಕಳು ಹೆಚ್ಚಿನ ಪ್ರಮಾಣದಲ್ಲಿ ಶಾಲೆಯಲ್ಲಿ ದಾಖಲಾಗುತ್ತಿರುವುದನ್ನು ಅಂಕಿ-ಅಂಶಗಳು ದೃಢೀಕರಿಸುತ್ತವೆ.

೬.೭ ಭೂ ಮಾಲೀಕತ್ವ

ಭಾರತವು ಕೃಷಿ ಪ್ರಧಾನ ಅರ್ಥವ್ಯವಸ್ಥೆಯಾಗಿದೆ. ಇಂತಹ ಕೃಷಿ ಪ್ರಧಾನವಾದ ಅರ್ಥವ್ಯವಸ್ಥೆಯಲ್ಲಿ ಭೂಮಿಯ ಒಡೆತನವು ಜನರ ಜೀವನೋಪಾಯದ ಪರಿಸ್ಥಿತಿಯನ್ನು ನಿರ್ಧರಿಸುತ್ತದೆ. ರಾಯಚೂರು ಜಿಲ್ಲೆಯಲ್ಲಿನ ಕೃಷಿ ಭೂಮಿಯ ಮಾಲೀಕತ್ವದಲ್ಲೂ ಸಹ ಪ.ಜಾತಿ/ಪ.ಪಂಗಡ ಸಮುದಾಯದವರು ಇತರೆ ಸಮುದಾಯದ ಜನರಿಗೆ ಹೋಲಿಸಿದರೆ ಪ್ರತಿಕೂಲ ಪರಿಸ್ಥಿತಿಯಲ್ಲಿರುವುದು ಕಂಡುಬರುತ್ತದೆ. ಪರಿಶಿಷ್ಟ ಜಾತಿಯವರು ಒಟ್ಟು ಕೃಷಿ ಹಿಡುವಳಿಗಳಲ್ಲಿ ಶೇ.೧೨.೬೫ರಷ್ಟು ಪಾಲು ಹೊಂದಿದ್ದರೆ, ಸಾಗುವಳಿ ಮಾಡುತ್ತಿರುವ ಜಮೀನಿನಲ್ಲಿ ಕೇವಲ ಶೇ.೯.೮ರಷ್ಟನ್ನು ಹೊಂದಿದ್ದಾರೆ. ಈ ಪಾಲು ಪರಿಶಿಷ್ಟ ಪಂಗಡದವರಲ್ಲಿ ಕ್ರಮವಾಗಿ ಶೇ.೧೮ ಮತ್ತು ಶೇ.೧೬.೬ ಇದ್ದರೆ, ಇತರ ಸಮುದಾಯದವರಲ್ಲಿ ಈ ಪಾಲು ಕ್ರಮವಾಗಿ ಶೇ.೬೯ ಮತ್ತು ಶೇ.೭೪ ಭೂಮಿಯು ಹಿಡುವಳಿ ಹೊಂದಿರುವುದರ ಜೊತೆಗೆ ಸಾಗುವಳಿ ಮಾಡಿರುವುದು ಕಂಡುಬರುತ್ತದೆ.(ಜಿಲ್ಲಾ ಸಾಂಖ್ಯಿಕ ಇಲಾಖೆ, ರಾಯಚೂರು, ೨೦೧೦-೧೧)

ಇದರಿಂದಾಗಿ ಈ ಸಮುದಾಯದವರು ಸಾಗುವಳಿ ಮಾಡುತ್ತಿರುವ ಜಮೀನಿನ ಸರಾಸರಿ ಗಾತ್ರವು ತುಂಬಾ ಚಿಕ್ಕದಿದ್ದು. ಇತರರಿಗೆ ಹೋಲಿಸಿದರೆ ಅವರ ಸರಾಸರಿ ಸಾಗುವಳಿ ಗಾತ್ರದ ತುಂಬ ಕಡಿಮೆ ಇದೆ. ಕೇವಲ ಸಣ್ಣ ನೀರಾವರಿ ಗಾತ್ರವಲ್ಲದೇ ಈ ಸಮುದಾಯದವರಲ್ಲಿರುವ ಸಣ್ಣ ಮತ್ತು ಅತೀ ಸಣ್ಣ ಹಿಡುವಳಿದಾರರ ಪ್ರಮಾಣವು ತುಂಬಾ ಅಧಿಕವಿರುವುದರಿಂದ ಅವರು ಕೃಷಿಯಿಂದ ಹೆಚ್ಚಿನ ಆದಾಯ ನಿರೀಕ್ಷಿಸುವಂತಿಲ್ಲ. ಇತರೆ ಸಮುದಾಯಗಳ ಸರಾಸರಿ ಹಿಡುವಳಿ ಗಾತ್ರ ೨.೨೩ ಹೆಕ್ಟೇರ್ ಆಗಿದ್ದರೆ. ಪ.ಜಾತಿ/ಪ.ಪಂಗಡ ಕೃಷಿಕರ ಸರಾಸರಿ ಹಿಡುವಳಿ ಗಾತ್ರ ಅನುಕ್ರಮವಾಗಿ ೧.೬೨ ಹೆಕ್ಟೇರ್ ಹಾಗೂ ೧.೯೭ ಹೆಕ್ಟೇರ್ ಇದೆ. (ಜಿಲ್ಲಾ ಸಾಂಖ್ಯಿಕ ಇಲಾಖೆ, ೨೦೧೦-೧೧) ಈ ರೀತಿಯಾದ ಚಿಕ್ಕ ಗಾತ್ರದ ಹಿಡುವಳಿ ಹೊಂದಿರುವುದರಿಂದ ಪ.ಜಾತಿ/ಪ.ಪಂಗಡ ಕೃಷಿಕರು ಆಧುನಿಕ ಕೃಷಿ ಪದ್ಧತಿಯನ್ನು ಅಳವಡಿಸಿಕೊಳ್ಳಲು ಹಾಗೂ ತಮ್ಮ ಬೆಳೆಗಳಿಗೆ ಒಳ್ಳೆಯ ಬೆಲೆ ದೊರಕಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಸಣ್ಣ ರೈತರ ಕೃಷಿಯ ಉತ್ಪಾದಕತೆ ಮತ್ತು ಲಾಭ ಹೆಚ್ಚಿಸುವಂತಹ ಹಾಗೂ ಸುಸ್ಥಿರ ತರುವಂತಹ ಸರ್ಕಾರದ ಕಾರ್ಯಕ್ರಮಗಳು ಹೆಚ್ಚಿನ ಮಹತ್ವವನ್ನು ಪಡೆಯುತ್ತವೆ. ಸಣ್ಣ ರೈತರ ತಾಂತ್ರಿಕ ಸಾಮರ್ಥ್ಯವನ್ನು ಹೆಚ್ಚಿಸಿ ಅವರನ್ನು

[illegible]

[illegible]

[illegible]

ಮಾರುಕಟ್ಟೆ ವ್ಯವಸ್ಥೆಗೆ ಪರಿಣಾಮಕಾರಿಯಾಗಿ ಜೋಡಿಸುವುದಲ್ಲದೇ ಅವರಲ್ಲಿ ಹೆಚ್ಚಿನ ಸ್ಪರ್ಧಾತ್ಮಕತೆ ತರುವುದರಿಂದ ಗ್ರಾಮೀಣ ಪ್ರದೇಶದ ಬಹಳಷ್ಟು ಪ.ಜಾತಿ/ಪ.ಪಂಗಡ ಕುಟುಂಬಗಳು ಜೀವನ ಮಟ್ಟವನ್ನು ಸುಧಾರಿಸಬಹುದಾಗಿದೆ.

೬.೮ ಉದ್ಯೋಗ ಖಾತರಿ ಯೋಜನೆ (MNREGA)

ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನಯಡಿಯಲ್ಲಿ ಗ್ರಾಮೀಣ ಕೌಶಲ್ಯ ರಹಿತ ಕೆಲಸಗಾರರಿಗೆ, ಅವರ ನಿವಾಸ ಪ್ರದೇಶದ ಸನಿಹದಲ್ಲಿಯೇ ಸರಿಸಮಾನವಾಗಿ ಪುರುಷ ಹಾಗೂ ಮಹಿಳೆಯರಿಗೆ ನಿಗದಿಪಡಿಸಿರುವ ಕನಿಷ್ಠ ಮಟ್ಟದ ಕೂಲಿಗನುಸಾರವಾಗಿ, ಕಡ್ಡಾಯವಾಗಿ ಕೆಲಸ ನೀಡಬೇಕು. ಈ ಕೆಳಗಿನ ಕೋಷ್ಠಕದಲ್ಲಿ ಕೆಲವು ಸಮಾಧಾನಕರವಲ್ಲದ ಅಂಶಗಳು ಕಂಡುಬರುತ್ತವೆ.

ಕೋಷ್ಟಕ–೬.೧೪

ಪ್ರಾಥಮಿಕ ಶಾಲಾಮಟ್ಟದಲ್ಲಿನ ದಾಖಲಾತಿ ಪ.ಜಾತಿ/ಪ.ಪಂಗಡಗಳ ಪಾಲು (%)

ವಿವರಣೆ	ಮೌಲ್ಯ
ಪ.ಜಾತಿಯ ಕುಟುಂಬದವರಿಗೆ ನೀಡಿದ ಜಾಬ್ ಕಾರ್ಡುಗಳು (%)	೧೮.೮
ಪ.ಪಂಗಡದವರಿಗೆ ನೀಡಿದ ಜಾಬ್ ಕಾರ್ಡುಗಳು (%)	೨೦.೫
ಕೆಲಸ ಮಾಡಿದ % ಪ.ಜಾತಿ ಕುಟುಂಬಗಳು	೧೮.೨
ಕೆಲಸ ಮಾಡಿದ % ಪ.ಪಂಗಡದ ಕುಟುಂಬಗಳು	೨೧.೦
ಕೆಲಸ ಮಾಡಿದ ಮಾನವ ದಿನಗಳಲ್ಲಿ ಪ.ಜಾತಿಯವರ % ಪ್ರಮಾಣ	೧೮.೭
ಕೆಲಸ ಮಾಡಿದ ಮಾನವ ದಿನಗಳಲ್ಲಿ ಪ.ಪಂಗಡದವರ % ಪ್ರಮಾಣ	೨೧.೧

ಟಿಪ್ಪಣಿ:– ಆಯಾ ವಿವರಣೆಯ ಒಟ್ಟು ಮೌಲ್ಯಗಳಿಗೆ ಶೇ.ಪ್ರಮಾಣ

ಮೂಲ:– www.nrega.in (೨೦೧೩)ರಂದು ಪಡೆದ ಮಾಹಿತಿ

ಜಾಬ್ ಕಾರ್ಡ್ ಹೊಂದಿದ ಪ.ಜಾತಿ/ಪ.ಪಂಗಡ ಕುಟುಂಬಗಳ ಪ್ರತಿಶತ ಪ್ರಮಾಣ ಅವರ ಜನಸಂಖ್ಯೆಗೆ ಅನುಸಾರವಾಗಿ ಇದ್ದರೂ, ಅವರಲ್ಲಿ ಕೆಲಸ ಪಡೆದವರ ಪ್ರತಿಶತ ಪ್ರಮಾಣ ನೋಡುವುದು ಮಹತ್ವವಾಗುತ್ತದೆ. ಜಾಬ್ ಕಾರ್ಡ್ ಹೊಂದಿದ ಪ.ಜಾತಿ ಹಾಗೂ ಪ.ಪಂಗಡದ ಒಟ್ಟು ಕೆಲಸಗಾರರಲ್ಲಿ ಅನುಕ್ರಮವಾಗಿ ಕೇವಲ ಶೇ.೧೮.೫ ಹಾಗೂ ಶೇ.೨೧ ಪ್ರತಿಶತ ಪ್ರಮಾಣದಷ್ಟು ಕುಟುಂಬಗಳು ಮಾತ್ರ ಈ ಯೋಜನೆಯಲ್ಲಿ ಕೆಲಸ ಮಾಡಿದ್ದಾರೆ. ಪ.ಜಾತಿ/ ಪ.ಪಂಗಡದ ಸಮುದಾಯದವರು ಕೆಲಸ ಮಾಡಿದ ಮಾನವ ದಿನಗಳ ಅನಿಶ್ಚಿತ ಜೀವನೋಪಾಯ ಹೊಂದಿರದ ಜನರಿಗಾಗಿಯೇ ಇರುವಂತಹ ಈ ಕಾರ್ಯಕ್ರಮವು ಸಮಾಧಾನಕರವಾದ ರೀತಿಯಲ್ಲಿ ಕಾರ್ಯನಿರ್ವಹಿಸದೇ ಇರುವುದನ್ನು ಈ ಅಂಕಿ ಅಂಶಗಳು ಸ್ಪಷ್ಟಪಡಿಸುತ್ತವೆ.

೬.೯ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ಕಾರ್ಯಕ್ರಮಗಳು

ತಳ ಸಮುದಾಯಗಳನ್ನು ಅಭಿವೃದ್ಧಿಯ ಮುಖ್ಯವಾಯಿನಿಗೆ ತರಲು ಸರಕಾರವು ವಿವಿಧ ಹಂತಗಳಲ್ಲಿ ಸಂವಿಧಾನದ ಚೌಕಟ್ಟಿನೊಳಗೆ ಹಲವಾರು ಕಾರ್ಯಕ್ರಮಗಳು ಹಾಗೂ ಯೋಜನೆಗಳನ್ನು ರೂಪಿಸಿಕೊಂಡಿದ್ದು ಸಮಾಜ ಕಲ್ಯಾಣ ಇಲಾಖೆಯು ಈ ಕಾರ್ಯಕ್ರಮಗಳ ಅನುಷ್ಠಾನ ಜವಾಬ್ದಾರಿ ಹೊತ್ತಿದೆ. ಇಲಾಖೆಯು ಹಲವಾರು ಕಾರ್ಯಕ್ರಮಗಳನ್ನು ರಾಜ್ಯ ಸರ್ಕಾರದ ಧನಸಹಾಯದಿಂದ ಜಾರಿಗೊಳಿಸುತ್ತಿದ್ದರೂ, ಕೇಂದ್ರ ಸರ್ಕಾರದಡಿಯಲ್ಲಿ ಬರುವ ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪಯೋಜನೆಯಂಥ ಕೆಲವು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದೆ. ಜಿಲ್ಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ೮೧ ಹಾಗೂ ಇಲಾಖೆಯ ಅನುಧಾನದಿಂದ ೬೫ ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿದ್ದು ಸುಮಾರು ೧೨೦೦ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ಪ.ಜಾತಿ/ಪ.ಪಂಗಡದ ವಿದ್ಯಾರ್ಥಿಗಳ ಆಹಾರ ಹಾಗೂ ವಸತಿಯ ಅವಶ್ಯಕತೆಗಳನ್ನು ಪೂರೈಸಲಾಗುತ್ತಿದೆ.

ಕೋಷ್ಟಕ–೬.೧೫

ಸಮಾಜ ಕಲ್ಯಾಣ ಇಲಾಖೆಯಿಂದ ನಡೆಯುತ್ತಿರುವ ವಿದ್ಯಾರ್ಥಿ ನಿಲಯ ಹಾಗೂ ವಸತಿ ಶಾಲೆಗಳೂ ಮತ್ತು ಶಿಷ್ಯವೇತನಗಳು ೨೦೧೧–೧೨

ತಾಲೂಕು	ಇಲಾಖೆಯ ವಿದ್ಯಾರ್ಥಿ ನಿಲಯಗಳು		ಅನುಧಾನಿಕ ವಿದ್ಯಾರ್ಥಿ ನಿಲಯಗಳು		ಶಿಷ್ಯವೇತನಗಳು	
	ಸಂಖ್ಯೆ	ವಿದ್ಯಾರ್ಥಿಗಳು	ಸಂಖ್ಯೆ	ವಿದ್ಯಾರ್ಥಿಗಳು	ಮೆಟ್ರಿಕ್ ಪೂರ್ವ	ಮೆಟ್ರಿಕ್ ನಂತರ
ದೇವದುರ್ಗ	೨೦	೧೪೮೦	೧೫	೧೦೮೦	೩೬೬೯	೩೪೭
ಲಿಂಗಸೂಗೂರು	೨೦	೧೪೭೫	೧೮	೧೩೭೫	೨೯೧೯	೫೩೧
ಮಾನವಿ	೧೨	೮೨೫	೯	೬೭೫	೨೮೧೭	೫೦೫
ರಾಯಚೂರು	೧೮	೧೮೪೮	೧೪	೧೪೭೩	೯೦೮೨	೧೯೭೧
ಸಿಂಧನೂರು	೧೧	೯೦೮	೯	೭೮೩	೪೭೧೩	೬೦೫
ಜಿಲ್ಲೆ	೮೧	೬೫೩೬	೬೫	೫೩೮೬	೨೩೨೦೦	೩೯೫೯

ಮೂಲ:– ಸಮಾಜ ಕಲ್ಯಾಣ ಇಲಾಖೆ, ರಾಯಚೂರು

ರಾಯಚೂರು ಜಿಲ್ಲೆಯಲ್ಲಿರುವ ೮೧ ವಿದ್ಯಾರ್ಥಿನಿಲಯಗಳಲ್ಲಿ ೫೩ ಗಂಡುಮಕ್ಕಳ ವಿದ್ಯಾರ್ಥಿನಿಲಯಗಳಿದ್ದರೆ, ಕೇವಲ ೨೮ ಹೆಣ್ಣು ಮಕ್ಕಳ ವಿದ್ಯಾರ್ಥಿ ನಿಲಯಗಳಿವೆ. ಆದ್ದರಿಂದ ಪ.ಜಾತಿ/ಪ.ಪಂಗಡ ಸಮುದಾಯದ ಹೆಣ್ಣು ಮಕ್ಕಳ ಶೈಕ್ಷಣಿಕ ಪ್ರಗತಿಯು ಸುಧಾರಿಸಲು ಜಿಲ್ಲೆಯಲ್ಲಿ ಆಧ್ಯತೆ ನೀಡುವುದರೊಂದಿಗೆ ಹೆಚ್ಚಿನ ಹೆಣ್ಣು ಮಕ್ಕಳ ವಸತಿನಿಲಯಗಳನ್ನು ಸ್ಥಾಪಿಸುವುದು ಅವಶ್ಯವಿರುತ್ತದೆ. ಅದೇ ರೀತಿಯಾಗಿ ೨೭.೦೦೦ಕ್ಕಿಂತ ಹೆಚ್ಚಿನ ಪ.ಜಾತಿ/ಪ.ಪಂಗಡದ ವಿದ್ಯಾರ್ಥಿಗಳಿಗೆ ಶಿಷ್ಯವೇತನ ನೀಡಲಾಗುತ್ತಿದೆ. ವಿದ್ಯಾರ್ಥಿನಿಲಯಗಳು ಜಿಲ್ಲೆಯಾದ್ಯಂತ ಹರಡಿಕೊಂಡಿದ್ದರೂ, ಶಿಷ್ಯವೇತನಗಳಿಗೆ ಸಂಬಂಧಿಸಿದಂತೆ ರಾಯಚೂರು ತಾಲ್ಲೂಕು ಶಿಷ್ಯವೇತನ ಪಡೆಯುತ್ತಿರುವ

ಶೇ.೪೦ರಷ್ಟು ವಿದ್ಯಾರ್ಥಿಗಳನ್ನು ಹೊಂದಿರುತ್ತದೆ. ಡಾ.ಬಿ.ಆರ್.ಅಂಬೇಡ್ಕರ್ ವಸತಿ ಯೋಜನೆಯಡಿ ಪ.ಜಾತಿಯವರಿಗೆ ೧೦೭ ಮತ್ತು ಪ.ಪಂಗಡದವರಿಗೆ ೯೨ ಮನೆಗಳನ್ನು ೨೦೧೧–೧೨ರಲ್ಲಿ ಕಟ್ಟಿಸಲಾಗಿದೆ. ಇಂದಿರಾ ಆವಾಸ್ ಯೋಜನೆ ಮತ್ತು ಆಶ್ರಯ ಯೋಜನೆಗಳಡಿಯಲ್ಲಿ ಸುಮಾರು ೨೫೦೦೦ ಮನೆಗಳನ್ನು ಕಟ್ಟಿಸಲಾಗಿದ್ದು ಅದರಲ್ಲಿ ಸುಮಾರು ಕಾಲುಭಾಗದಷ್ಟು ಮನೆಗಳನ್ನು ಪ.ಜಾತಿ ಮತ್ತು ಪ.ಪಂಗಡದವರಿಗೆ ಹಂಚಿಕೆ ಮಾಡಿ ನಿರ್ಮಿಸಲಾಗಿದೆ.

೬.೧೦ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮೂಲ ಸೌಕರ್ಯಗಳು

ಸಮಾಜದಲ್ಲಿ ಅಭಿವೃದ್ಧಿಯಿಂದ ವಂಚಿತವಾದ ಸಮುದಾಯಗಳಲ್ಲಿ ಪ.ಜಾತಿ/ಪ.ಪಂಗಡದ ಸಮುದಾಯಗಳಾಗಿವೆ. ಮೂಲಭೂತ ಸೌಕರ್ಯಗಳಾದ ವಸತಿಗಾಗಿ ಉತ್ತಮ ಮನೆ, ನೈರ್ಮಲ್ಯ ಹಾಗೂ ಕುಡಿಯುವ ನೀರಿನ ಗುಣಮಟ್ಟವನ್ನು ನಿರ್ಧರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಉತ್ತಮ ಸೌಕರ್ಯಗಳನ್ನೊಳಗೊಂಡ ಒಂದು ಮನೆಯು ಜನರ ಆರೋಗ್ಯ ಹಾಗೂ ಉತ್ಪಾದಕತೆಯನ್ನು ಹೆಚ್ಚಿಸಿ ತನ್ಮೂಲಕ ಅವರ ಮಾನವ ಅಭಿವೃದ್ಧಿ ಮಟ್ಟವನ್ನು ಉನ್ನತೀಕರಿಸುತ್ತದೆ. ಈ ಕಾರಣದಿಂದಾಗಿ ರಾಯಚೂರು ಜಿಲ್ಲೆಯ ಪ.ಜಾತಿ/ಪ.ಪಂಗಡದ ಸಮುದಾಯದವರಿಗೆ ಲಭ್ಯವಿರುವ ಮೂಲಭೂತ ಸೌಕರ್ಯಗಳು ಕುರಿತು ಇಲ್ಲಿ ಚರ್ಚಿಸಲಾಗಿದೆ.

ಕೋಷ್ಟಕ–೬.೧೬

ಉತ್ತಮ ವಸತಿಗಳಲ್ಲಿ (ಮನೆ)ವಾಸಿಸುತ್ತಿರುವ ಪ.ಜಾತಿ/ಪ.ಪಂಗಡ ಕುಟುಂಬಗಳ ಪ್ರಮಾಣ

೨೦೧೧ (%)

	ರಾಯಚೂರು ಜಿಲ್ಲೆ			ಕರ್ನಾಟಕ		
ಸಮುದಾಯ	ಗ್ರಾಮೀಣ	ನಗರ	ಒಟ್ಟು	ಗ್ರಾಮೀಣ	ನಗರ	ಒಟ್ಟು
ಪ.ಜಾತಿ	೯೨.೧೭	೯೪.೧೯	೯೨.೬೨	೯೩.೩೪	೯೫.೮೨	೯೪.೦೭
ಪ.ಪಂಗಡ	೯೧.೫೨	೯೪.೪೪	೯೧೮೨	೯೨.೯೬	೯೬.೧೪	೯೩.೭೩
ಇತರರು	೯೩.೭೯	೯೭.೦೫	೯೪.೮೬	೯೫.೨೯	೯೮.೪೯	೯೬.೭೦
ಒಟ್ಟು	೯೨.೯೪	೯೬.೩೯	೯೩.೮೫	೯೪.೭೦	೯೮.೦೭	೯೬.೦೬

ಮೂಲ: ಕರ್ನಾಟಕ ಜನಗಣತಿ ವರದಿ ೨೦೧೧

ಮೇಲಿನ ಕೋಷ್ಟಕವನ್ನು ಗಮನಿಸಿದರೆ ಇತರೆ ಸಮುದಾಯವರಿಗೆ ಹೋಲಿಸಿದರೆ ಪ.ಜಾತಿ/ ಪ.ಪಂಗಡ ಸಮುದಾಯದವರಲ್ಲಿ ಕಡಿಮೆ ಪ್ರಮಾಣದ ಕುಟುಂಬಗಳು ಉತ್ತಮ ಮನೆಗಳಲ್ಲಿ ವಾಸಿಸುತ್ತಿದ್ದಾರೆ. ಇಲ್ಲಿಯೂ ಪ.ಪಂಗಡದ ಸಮುದಾಯದವರು ಉಳಿದೆಲ್ಲ ಸಮುದಾಯದವರಿಗಿಂತ ಹೆಚ್ಚು ವಂಚಿತರಾಗಿರುವುದು ಕಂಡುಬರುತ್ತದೆ. ಈ ಸೂಚಿಗೆ ಸಂಬಂಧಿಸಿದಂತೆ ರಾಯಚೂರು

ಜಿಲ್ಲೆಯ ಸ್ಥಿತಿ ರಾಜ್ಯದ ಸ್ಥಿತಿಗಿಂತ ಕೆಳಮಟ್ಟದಲ್ಲಿದೆ. ಸುರಕ್ಷಿತ ಕುಡಿಯುವ ನೀರು, ಶೌಚಾಲಯ ಮತ್ತು ಚರಂಡಿ ವ್ಯವಸ್ಥೆಗಳು ಒಂದು ಒಳ್ಳೆಯ ವಸತಿ ವ್ಯವಸ್ಥೆಗೆ ಪೂರಕವಾಗಿರುವಂಥ ಮತ್ತು ಆರೋಗ್ಯಕರ ಜೀವನ ನಡೆಸಲು ಅತ್ಯವಶ್ಯವಿರುವಂಥ ಸೌಲಭ್ಯವಾಗಿದೆ.

ಕೋಷ್ಟಕ–೬.೧೭

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಸಮುದಾಯಗಳಿಗೆ ಲಭ್ಯವಿರುವ ಮೂಲ ಸೌಕರ್ಯಗಳು, ೨೦೧೧ (% ಕುಟುಂಬಗಳು)

ವಾಸ್ತವ್ಯದ ವಿಧ	ರಾಯಚೂರು ಜಿಲ್ಲೆ				ಕರ್ನಾಟಕ			
	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಇತರರು	ಒಟ್ಟು	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಇತರರು	ಒಟ್ಟು
ಸುರಕ್ಷಿತ ಕುಡಿಯುವ ನೀರು ಲಭ್ಯತೆಯಿರುವ ಶೇ.ಕಟುಂಬಗಳು								
ಗ್ರಾಮೀಣ	೪೬.೩೭	೪೬.೫೬	೫೨.೩೩	೪೯.೭೭	೬೬.೦೫	೬೨೨೩	೬೬.೦೫	೬೫.೭೧
ನಗರ	೭೬.೩೪	೬೮.೪೩	೮೬.೩೮	೮೩.೪೨	೮೧.೮೨	೮೨.೫೨	೮೭.೫೪	೮೬.೬೫
ಒಟ್ಟು	೫೩.೦೭	೪೮.೭೭	೬೩.೪೬	೫೮.೬೭	೭೦.೬೯	೬೭.೧೨	೭೫.೫೪	೭೪.೧೫
ಶೌಚಾಲಯ ಲಭ್ಯತೆಯಿರುವ ಶೇ.ಕುಟುಂಬಗಳು								
ಗ್ರಾಮೀಣ	೫.೪೯	೪.೩೭	೧೩.೯೩	೯.೯೯	೧೬.೩೯	೧೫.೬೪	೩೩.೨೪	೨೮.೪೧
ನಗರ	೨೯.೧೮	೨೪.೮೮	೫೭.೫೦	೫೦.೪೨	೬೭.೭೩	೬೯.೮೧	೮೮.೧೩	೮೪.೯೩
ಒಟ್ಟು	೧೦.೭೯	೬.೪೪	೨೮.೧೮	೨೦.೬೮	೩೧.೫೦	೨೮.೭೦	೫೭.೪೭	೫೧.೨೧
ಚರಂಡಿ ವ್ಯವಸ್ಥೆ ಲಭ್ಯತೆಯಿರುವ ಶೇ.ಕುಟುಂಬಗಳು								
ಗ್ರಾಮೀಣ	೧೭.೫೭	೧೬.೩೯	೨೪.೧೨	೨೦.೯೯	೪೧.೦೪	೩೭.೪೩	೪೩.೫೮	೪೨.೫೪
ನಗರ	೭೧.೮೩	೬೪.೭೯	೮೧.೭೯	೭೮.೯೧	೮೨.೪೮	೮೨.೮೨	೮೮.೫೬	೮೭.೬೦
ಒಟ್ಟು	೨೯.೭೧	೨೧.೨೭	೪೨.೯೮	೩೬.೩೧	೫೩.೨೪	೪೮.೩೮	೬೩.೪೪	೬೦.೭೧

ಮೂಲ:– ಕರ್ನಾಟಕ ಸರಕಾರ ಜನಗಣತಿ ವರದಿ – ೨೦೧೧

ಈ ಕೋಷ್ಟಕದಲ್ಲಿ ತೋರಿಸಿರುವಂತೆ ಈ ಸೌಕರ್ಯಗಳಲ್ಲಿ ಪ.ಜಾತಿ/ಪ.ಪಂಗಡದ ಕುಟುಂಬಗಳು ತುಲನಾತ್ಮಕವಾಗಿ ವಂಚಿತರಾಗಿರುವುದನ್ನು ನೋಡಬಹುದಾಗಿದೆ. ವಸತಿ ಸೌಕರ್ಯದಂತೆಯೇ ಗ್ರಾಮೀಣ ಭಾಗದ ಪ.ಜಾತಿ/ಪ.ಪಂಗಡದವರಿಗೆ ಕಡಿಮೆ ಪ್ರಮಾಣದ ಕುಟುಂಬಗಳಿಗೆ ಸುರಕ್ಷಿತ ಕುಡಿಯುವ ನೀರು ಲಭ್ಯವಿದ್ದು, ಪ.ಪಂಗಡದ ಕುಟುಂಬಗಳು ಅಧಿಕ ಕೊರತೆ ಅನುಭವಿಸುತ್ತಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಶೌಚಾಲಯದ ಸ್ಥಿತಿ ಗಂಭೀರವಿದ್ದು, ಪ.ಜಾತಿಯವರಲ್ಲಿ ಕೇವಲ ಶೇ.೫.೫ರಷ್ಟು ಕುಟುಂಬಗಳಿಗೆ ಮತ್ತು ಪ.ಪಂಗಡದವರಲ್ಲಿ ಶೇ.೪.೪ರಷ್ಟು ಕುಟುಂಬಗಳಿಗೆ ಶೌಚಾಲಯ ಲಭ್ಯವಿದೆ. ಒಟ್ಟಾರೆಯಾಗಿ ಕೇವಲ ಶೇ.೧೦.೮ರಷ್ಟು ಪ.ಜಾತಿ ಮತ್ತು ಪ.ಪಂಗಡ ಶೇ.೬.೪ರಷ್ಟು ಪ್ರಮಾಣದ ಕುಟುಂಬಗಳು ಶೌಚಾಲಯ ಹೊಂದಿದ್ದು ತೀವ್ರ ಹಾಗೂ ಗಂಭೀರ ಸಮಸ್ಯೆಯಾಗಿದೆ. ಚರಂಡಿ ವ್ಯವಸ್ಥೆಗೆ ಸಂಬಂಧಿಸಿದಂತೆ ಒಟ್ಟಾರೆ ಸ್ಥಿತಿ ಉತ್ತಮವಿದ್ದರೂ, ಪ.ಪಂಗಡದವರಲ್ಲಿ ಚರಂಡಿ ಲಭ್ಯತೆ ತುಂಬಾ ಕಡಿಮೆ ಇರುವುದು ಗಮನಿಸಬೇಕಾದ ಸಂಗತಿಯಾಗಿದೆ.

ಕೋಷ್ಟಕ–೬.೧೮

ಪ.ಜಾತಿ/ಪ.ಪಂಗಡ ಕುಟುಂಬಗಳಿಗೆ ಇತರ ಮೂಲ ಸೌಲಭ್ಯಗಳ ಲಭ್ಯತೆಯ ಪ್ರಮಾಣ, ೨೦೧೧ (%)

ವಾಸ್ತವ್ಯದ ವಿಧ	ರಾಯಚೂರು ಜಿಲ್ಲೆ				ಕರ್ನಾಟಕ			
	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಇತರರು	ಒಟ್ಟು	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಇತರರು	ಒಟ್ಟು
ವಿದ್ಯುತ್ ಸಂಪರ್ಕ ಹೊಂದಿರುವ ಶೇ.ಕುಟುಂಬಗಳು								
ಗ್ರಾಮೀಣ	೮೩.೭೮	೮೦.೬೮	೮೮.೯೬	೮೫.೯೯	೮೨.೪೨	೮೧.೦೧	೮೮.೫೯	೮೬.೭೨
ನಗರ	೮೭.೨೫	೭೯.೬೫	೯೩.೯೬	೯೧.೮೨	೯೧.೩೯	೯೧.೭೭	೯೭.೩೭	೯೬.೪೨
ಒಟ್ಟು	೮೪.೫೬	೮೦.೫೮	೯೦.೫೯	೮೭.೫೪	೮೫.೦೬	೮೩.೬೧	೯೨.೪೭	೯೦.೬೩
ಶುದ್ಧ ಅಡುಗೆ ಇಂಧನದ ಲಭ್ಯತೆಯಿರುವ ಶೇ.ಕುಟುಂಬಗಳು								
ಗ್ರಾಮೀಣ	೧.೪೫	೧.೧೭	೧೧.೩೩	೬.೯೫	೪.೩೨	೪.೦೦	೧೫.೦೯	೧೨.೦೨
ನಗರ	೨೫.೧೮	೧೭.೫೩	೪೫.೩೭	೩೯.೯೯	೪೧.೬೨	೪೬.೫೮	೬೯.೬೪	೬೫.೩೪
ಒಟ್ಟು	೬.೭೬	೨.೮೨	೨೨.೪೬	೧೫.೬೯	೧೫.೩೦	೧೪.೨೭	೩೯.೧೭	೩೩.೫೨

ಮೂಲ:– ಕರ್ನಾಟಕ ಸರಕಾರ ಜನಗಣತಿ ವರದಿ – ೨೦೧೧

ಈ ಮೇಲಿನ ಕೋಷ್ಟಕವು, ಸ್ವಚ್ಛ ಇಂಧನವನ್ನು ಬಳಸುತ್ತಿರುವ ಕುಟುಂಬಗಳ ಪ್ರಮಾಣವು ಬಹಳ ಕಡಿಮೆ ಇರುತ್ತದೆ. ಅದರಲ್ಲಿಯೂ ಗ್ರಾಮೀಣ ಪ್ರದೇಶದಲ್ಲಿ ಅದು ನಗಣ್ಯವಾಗಿದೆ. ಹೀಗೆ ಎಲ್ಲ ಆಯ್ದ ಆಯಾಮಗಳಿಗೆ ಪ.ಜಾತಿ/ಪ.ಪಂಗಡದ ಕುಟುಂಬಗಳು ತೋರಿಸುವ ಮೌಲ್ಯಗಳು ಒಟ್ಟಾರೆ ಜನಸಂಖ್ಯೆಗೆ ಹೋಲಿಸಿದರೆ ಕಡಿಮೆ ಪ್ರಮಾಣದಲ್ಲಿದ್ದು, ಗ್ರಾಮೀಣ ಪ.ಜಾತಿ/ಪ.ಪಂಗಡದ ಕುಟುಂಬಗಳು ಮತ್ತು ವಿಶೇಷವಾಗಿ ಪ.ಪಂಗಡದ ಕುಟುಂಬಗಳ ತೀವ್ರ ದುಸ್ಥಿತಿಯನ್ನು ಅನುಭವಿಸುತ್ತಿದೆ. ಆದ್ದರಿಂದ ಈ ಸಮುದಾಯಗಳ ಕುಟುಂಬಗಳಿಗೆ ಉತ್ತಮ ಮನೆ, ಕುಡಿಯುವ ನೀರು, ಶೌಚಾಲಯ ಮತ್ತು ಸ್ವಚ್ಛ ಇಂಧನಗಳ ಲಭ್ಯತೆಯನ್ನು ಹೆಚ್ಚಿಸುವ ಪ್ರಯತ್ನಗಳಾಗಬೇಕಿದೆ.

ಜನರ ಒಳಗೊಳ್ಳುವಿಕೆ:– ತಳಸ್ತರದ ಸಂಸ್ಥೆಗಳಾದ ಶಾಲಾ ಅಭಿವೃದ್ಧಿ ಮತ್ತು ಉಸ್ತುವಾರಿ ಸಮಿತಿ, ನೀರು ಬಳಕೆದಾರರ ಸಂಘ ಮುಂತಾದ ಆಡಳಿತ ಮಂಡಳಿಯಲ್ಲಿ ಪ.ಜಾತಿ/ಪ.ಪಂಗಡ ಪ್ರಾತಿನಿಧ್ಯ/ ಪಾಲ್ಗೊಳ್ಳುವುದನ್ನು ಜನರ ಒಳಗೊಳ್ಳುವಿಕೆ ಎಂದು ವ್ಯಾಖ್ಯಾನಿಸಲಾಗಿದೆ. ಇಂತಹ ಸಮಿತಿಗಳಲ್ಲಿ ಅವರ ಪ್ರಾತಿನಿಧ್ಯವು ನಿಗಧಿ ಪಡಿಸಿದ ಮಾನದಂಡಕ್ಕಿಂತ ಕಡಿಮೆ ಇರುವುದು ಕಂಡುಬರುತ್ತದೆ

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಸಮುದಾಯದವರು ರಾಯಚೂರು ಜಿಲ್ಲೆಯ ಜನಸಂಖ್ಯೆಯ ಶೇ.೪೦ರಷ್ಟಿದ್ದರೆ, ರಾಜ್ಯದ ಪ.ಜಾತಿ ಮತ್ತು ಪ.ಪಂಗಡದವರ ಜನಸಂಖ್ಯೆ ಶೇ.೫.೫೨ರಷ್ಟಿದ್ದಾರೆ. ೨೦೦೧ ಹಾಗೂ ೨೦೧೧ರ ಅವಧಿಯಲ್ಲಿ ಇವರ ಜನಸಂಖ್ಯೆ ಶೇ.೨೩.೮ರಷ್ಟು ಹೆಚ್ಚಳವಾಗಿದ್ದು ಒಟ್ಟು ಜನಸಂಖ್ಯೆಯ ಹೆಚ್ಚಳಕ್ಕಿಂತ ಅಧಿಕವಿದೆ. ದೇವದುರ್ಗ ಹಾಗೂ ಲಿಂಗಸೂಗೂರು ತಾಲೂಕುಗಳು ಜಿಲ್ಲೆಯ ಶೇ.೪೫ರಷ್ಟು ಪ.ಜಾತಿ ಮತ್ತು ಪ.ಪಂಗಡದ ಜನಸಂಖ್ಯೆಯನ್ನು ಹೊಂದಿವೆ. ದೇವದುರ್ಗ, ಲಿಂಗಸೂಗೂರು ಹಾಗೂ ಮಾನವಿ ತಾಲ್ಲೂಕುಗಳಲ್ಲಿ

ಇವರ ಜನಸಂಖ್ಯೆಯ ಬೆಳವಣಿಗೆ ಸಾಮಾನ್ಯ ಜನಸಂಖ್ಯೆಗಿಂತ ವೇಗದ ಪ್ರಮಾಣದಲ್ಲಿ ಬೆಳೆದಿದೆ. ಇವರ ಲಿಂಗಾನುಪಾತವು ಸಾಮಾನ್ಯ ಜನರಿಗಿಂತ ಅಧಿಕವಿದ್ದು ಅನುಕೂಲಕರವಾಗಿದೆ. ಇದು ಜಿಲ್ಲೆಯ ಒಟ್ಟಾರೆ ಲಿಂಗಾನುಪಾತವನ್ನು ಪ್ರಭಾವಿಸಿದೆ. ಈ ಜನರು ಪ್ರಮುಖವಾಗಿ ಗ್ರಾಮವಾಸಿಗಳಾಗಿದ್ದು ಬಹಳ ಕಡಿಮೆ ಪ್ರಮಾಣದ ಜನರು ನಗರಗಳಲ್ಲಿ ವಾಸಿಸುತ್ತಾರೆ. ಇದರ ಉಪಜಾತಿ ರಚನೆಯಲ್ಲಿ ವೈವಿಧ್ಯತೆ ಕಂಡುಬರುವುದಿಲ್ಲ.

ಪ.ಜಾತಿ ಅವರ ಸಾಕ್ಷರತೆ ಸಾಮಾನ್ಯ ಜನರಿಗಿಂತ ಕಡಿಮೆ ಇದ್ದು, ಪರಿಶಿಷ್ಟ ಪಂಗಡದವರದ್ದು ಇನ್ನೂ ಕಡಿಮೆ ಇರುವುದು ಅವರ ದುಸ್ಥಿತಿಯ ಪ್ರಮಾಣವನ್ನು ಬಿಂಬಿಸುತ್ತದೆ. ಇವರಲ್ಲಿಯೂ ಸಹ ಪುರುಷ ಸಾಕ್ಷರತಾ ಪ್ರಮಾಣಗಳು ಅಧಿಕವಿದ್ದು, ನಗರ ಪ್ರದೇಶಗಳಲ್ಲಿ ಅಧಿಕವಿದೆ. ಹೀಗೆ ಸಂದಿಗ್ಧ ಅಂತರಗಳು ಮಹಿಳೆಯರಲ್ಲಿ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ತೀವ್ರವಾಗಿ ಕಂಡು ಬರುತ್ತವೆ. ಅಂತರಗಳು ಕಡಿಮೆಯಾಗುತ್ತಿವೆಯಾದರೂ ಇನ್ನೂ ಹೆಚ್ಚಿನ ಮಟ್ಟದಲ್ಲಿದೆ. ರಾಯಚೂರು ಜಿಲ್ಲೆಯಲ್ಲಿ ಪ.ಪಂಗಡದ ಮಹಿಳೆಯಾಗಿ ಜನಿಸುವುದು ಸಾಕ್ಷರತೆಯ ತೀವ್ರ ದುಸ್ಥಿತಿಗೆ ಎಡೆ ಮಾಡಿಕೊಡುತ್ತದೆ. ದಾಖಲಾತಿ ಪ್ರಮಾಣಗಳು ಸಾಮಾನ್ಯ ಜನಸಂಖ್ಯೆಗೆ ಇರುವಷ್ಟೇ ಇದ್ದು, ಈ ಜನಾಂಗಗಳಲ್ಲಿಯೂ ಶಿಕ್ಷಣದ ಕುರಿತಾದ ಜಾಗೃತಿ ಮೂಡಿದ್ದನ್ನು ಹಾಗೂ ಸರ್ಕಾರದ ಕಾರ್ಯಕ್ರಮಗಳ ಪ್ರಭಾವವನ್ನು ತೋರಿಸುತ್ತದೆ. ಇವರಲ್ಲಿ ಶಾಲಾ ಉಳಿಕೆಯ ದರಗಳೂ ಸಾಮಾನ್ಯರಷ್ಟೇ ಇರುವುದು ಆಶಾದಾಯಕ ಆದರೆ ಮಾಧ್ಯಮಿಕ ಶಾಲೆಗಳಲ್ಲಿ ಪ.ಪಂಗಡದ ವಿದ್ಯಾರ್ಥಿಗಳ ಉಳಿಕೆ ದರಗಳು ಕಡಿಮೆ ಇರುವುದು ಕಂಡುಬರುತ್ತದೆ. ಈ ಜನರ ಪ್ರಮುಖ ಉದ್ಯೋಗಗಳು ಕೃಷಿ ಸಂಬಂಧಿತವಾಗಿದ್ದು ಕೃಷಿಯ ಮೇಲಿನ ಇವರ ಅವಲಂಬನೆ ಬಹಳ ನಿಧಾನ ಗತಿಯಲ್ಲಿ ಇಳಿಕೆಯಾಗುತ್ತಿದೆ. ಅವರ ಪಾರಂಪರಿಕ ಉದ್ಯೋಗಗಳೂ ಕುಸಿತ ಕಂಡಿವೆ. ಜನಸಂಖ್ಯೆಗೆ ಅನುಗುಣವಾಗಿ ಅವರಲ್ಲಿ ಭೂ ಒಡೆತನ ಇಲ್ಲದ್ದು ಸಹ ವಂಚಿತತೆಯ ಇನ್ನೊಂದು ಮುಖವನ್ನು ತೋರಿಸುತ್ತದೆ. ಅಲ್ಲದೇ ಅವರು ಸಾಗುವಳಿ ಮಾಡುತ್ತಿರುವ ಹಿಡುವಳಿಗಳ ಸರಾಸರಿ ಗಾತ್ರ ಉಳಿದವರಿಗಿಂತ ಕಡಿಮೆ ಇದ್ದು ಮತ್ತಷ್ಟು ಇಳಿಕೆಯಾಗುತ್ತಿದೆ. ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಅವರ ಭಾಗವಹಿಸುವಿಕೆಯು ನಿರಾಶಾದಾಯಕವಿದ್ದು, ಪ.ಜಾತಿ ಸಮುದಾಯವು ಕೇವಲ ಶೇ.೮.ರಷ್ಟು ಹಾಗೂ ಪ.ಪಂಗಡದವರು ಕೇವಲ ಶೇ.೨ರಷ್ಟು ಕುಟುಂಬಗಳು ಈ ಯೋಜನೆಯಡಿ ಕೆಲಸದಲ್ಲಿ ಭಾಗಿಯಾಗಿವೆ.

ಈ ಸಮುದಾಯವು ಜೀವನೋಪಾಯ ಸೂಚ್ಯಂಕವು ಬಹಳ ಕಡಿಮೆ ಮಟ್ಟದಲ್ಲಿದ್ದು ಪ.ಪಂಗಡದವರಿಗೆ, ಅದರಲ್ಲೂ ನಗರ ಪ್ರದೇಶದವರಲ್ಲಿ ಇನ್ನೂ ಕಡಿಮೆ ಇದ್ದು ಮಹಿಳೆಯರು ನಿಶ್ಚಳವಾಗಿ ದುಸ್ಥಿತಿಯಲ್ಲಿದ್ದಾರೆ. ಉತ್ತಮ ವಸತಿ ಹಾಗೂ ವಿದ್ಯುಚ್ಛಕ್ತಿ ಲಭ್ಯತೆ ಉತ್ತಮವಾದರೂ ಇತರ ಮೂಲಭೂತ ಅವಶ್ಯಕತೆಗಳಾದ ಕುಡಿಯುವ ನೀರು, ಶೌಚಾಲಯ, ಚರಂಡಿ ವ್ಯವಸ್ಥೆ ಮತ್ತು ಶುದ್ಧ ಅಡುಗೆ ಇಂಧನದ ಲಭ್ಯತೆಯು ಬಹಳ ಕಡಿಮೆ ಪ್ರಮಾಣದಲ್ಲಿದ್ದು ಅವರ ಬದುಕನ್ನು ಶಿಥಿಲಗೊಳಿಸಿದೆ.

ಇತರ ಸಾಮಾಜಿಕ ಸಮೂಹಗಳ ಮಾನವ ಅಭಿವೃದ್ಧಿಯ ಆಯಾಮಗಳ ನಡುವೆ ಇರುವ ಭಿನ್ನತೆಗಳು, ಭೂ ರಹಿತತೆ, ಉತ್ತಮವಲ್ಲದ ವಸತಿ ಸ್ಥಿತಿ, ಅಸಮರ್ಪಕ ಕುಡಿಯುವ ನೀರಿನ ಸೌಲಭ್ಯಗಳು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ದುಸ್ಥಿತಿಯು ಮತ್ತಷ್ಟು ಬಿಗಡಾಯಿಸಿ ಅವರು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಇನ್ನೂ ಸಮಾನ ಪಾಲುದಾರರಲ್ಲ ಎಂಬುದನ್ನು ದೃಢಪಡಿಸುತ್ತದೆ. ಆದ್ದರಿಂದ ಮಾನವ ಅಭಿವೃದ್ಧಿ ಧೋರಣೆಗಳು ಸಮಾಜದಲ್ಲಿರುವ ತಾರತಮ್ಯಗಳನ್ನು ಕಡಿಮೆ ಮಾಡುವತ್ತ ಗಮನ ನೀಡಬೇಕು. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ತಾರತಮ್ಯಗಳನ್ನು ಕಡಿಮೆ ಮಾಡುವತ್ತ ಗಮನ ನೀಡಬೇಕು. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಮಾನವ ಅಭಿವೃದ್ಧಿಗಾಗಿ ಅವರ ಸಾಮರ್ಥ್ಯಗಳನ್ನು ವರ್ಧಿಸುವ ಕಾರ್ಯಕ್ರಮಗಳನ್ನು ಕೈಗೊಂಡು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಅವರನ್ನು ಒಳಗೊಳ್ಳುವಂತೆ ಮಾಡಬೇಕಾಗಿದೆ.

೬.೧೧ ಆರೋಗ್ಯ

ಅಭಿವೃದ್ಧಿಯಲ್ಲಿ ಆರ್ಥಿಕತೆಗೆ ಎಷ್ಟು ಪ್ರಧಾನತೆ ಇದೆಯೋ ಅದಕ್ಕಿಂತಲೂ ಹೆಚ್ಚಿನ ಪ್ರಧಾನತೆ ಆರೋಗ್ಯಕ್ಕೆ ಕೊಡಲಾಗುತ್ತಿದೆ. ಮಾನವ ಅಭಿವೃದ್ಧಿ ಪ್ರಣಾಳಿಕೆಯಲ್ಲಿ ಆರೋಗ್ಯ ಭಾಗ್ಯವು ಮೊದಲ ಸ್ಥಾನವನ್ನು ಪಡೆದಿದೆ. ಇದು ಉಪಕರಣವಾದಿ ಗುಣದೊಂದಿಗೆ 'ಅಂತಸ್ಥಗುಣ'ವನ್ನು ಹೊಂದಿದೆ. ಹಿಂದೆ ಆರೋಗ್ಯ ಎಂದರೆ 'ನಿರ್ದಿಷ್ಟ ರೋಗ ರಹಿತ' ಅಥವಾ ಅಂಗವೈಕಲ್ಯ ರಹಿತ ಎಂಬುವುದಕ್ಕೆ ಮಾತ್ರ ಇದರ ಅರ್ಥ ಸೀಮಿತವಾಗಿತ್ತು. ಆದರೆ ಇಂದು "ದೈಹಿಕ–ಮಾನಸಿಕ ನಿರ್ದಿಷ್ಟ ಸ್ಥಿತಿಗಳ ಸ್ವಾಸ್ಥ್ಯವೇ ಆರೋಗ್ಯ ಎಂಬ ವ್ಯಾಖ್ಯೆ ಗ್ರಾಹ್ಯವಾಗಿದೆ". (ಕಲ್ಲಾಪುರ, ೧೯೮೭:೬೦೭) ನಿಜಾರ್ಥದಲ್ಲಿ ಆರೋಗ್ಯವೆಂದರೆ ದೈಹಿಕವಾಗಿ, ಮಾನಸಿಕವಾಗಿ ನಿರೋಗಿಗಳಾಗಿರುವುದಾಗಿದೆ. ಅಭಿವೃದ್ಧಿಯು ಹರಿಬಿಡುವ ಅವಕಾಶಗಳನ್ನು ತನ್ನದಾಗಿಸಿಕೊಳ್ಳಬಲ್ಲ ಸಾಮರ್ಥ್ಯ ಮತ್ತು ಅಂತಹ ಅವಕಾಶಗಳಲ್ಲಿ ತನಗೆ ಬೇಕಾದುದನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯವೂ ಜನರಿಗೆ ಇರಬೇಕು. ಇದನ್ನು ಅಮರ್ತ್ಯಸೇನ್ ಅವರು ಧಾರಣಶಕ್ತಿ ಎಂದು ಕರೆದಿದ್ದಾರೆ. ಧಾರಣಶಕ್ತಿಯನ್ನು ನಿರ್ಧರಿಸುವ ಎರಡು ಸಂಗತಿಗಳೆಂದರೆ ಆರೋಗ್ಯ ಮತ್ತು ಸಾಕ್ಷರತೆ. "ಪ್ರಾಥಮಿಕ ಶಿಕ್ಷಣ ಮತ್ತು ಪ್ರಾಥಮಿಕ ಆರೋಗ್ಯ" ಅಭಿವೃದ್ಧಿಯ ಪ್ರಾಥಮಿಕ ಅಂಶಗಳಾಗಿವೆ. "ಭಾರತದಲ್ಲಿಯ ಜನರ ದುಸ್ಥಿತಿಗೆ, ಆರ್ಥಿಕ ಅಭದ್ರತೆಗೆ 'ಅನಾರೋಗ್ಯ' ಪ್ರಮುಖ ಕಾರಣಗಳಲ್ಲಿ ಒಂದಾಗಿವೆ. ಅನಾರೋಗ್ಯವು ರೋಗಿಯನ್ನು ಭಾದಿಸುವುದರೊಂದಿಗೆ ರೋಗಿಯ ಮೇಲೆ ಅವಲಂಬಿತರಾದ ಅವರ ಕುಟುಂಬದ ಇತರೆ ಸದಸ್ಯರಿಗೆ ಸಹ ನೋವನ್ನು ಉಂಟು ಮಾಡುತ್ತದೆ. ಅನಾರೋಗ್ಯದಿಂದ ವ್ಯಕ್ತಿಯ ಜೀವನ ಗುಣಮಟ್ಟ ತಗ್ಗುತ್ತದೆ. ಜನತೆಗೆ ಸುಸಜ್ಜಿತವಾದ ಆರೋಗ್ಯ ಸವಲತ್ತುಗಳನ್ನು ಒದಗಿಸುವುದರ ಮೂಲಕ ಸಾಮಾಜಿಕ ಸುಭದ್ರತೆಯ ಉದ್ದೇಶವನ್ನು ಪೂರೈಸಬಹುದಾಗಿದೆ" (ಡ್ರೀಜೆ ಮತ್ತು ಸೇನ್, ೧೯೯೫; ೧೦೧) ಜನತೆಯ ಸುಖಕರ ಜೀವನಕ್ಕೆ ಆರೋಗ್ಯ ಮತ್ತು ಶಿಕ್ಷಣ ಅತ್ಯಾವಶ್ಯಕ ಆರೋಗ್ಯ ಮತ್ತು ಶಿಕ್ಷಣಗಳ ವೈಯಕ್ತಿಕ ಮತ್ತು ಸಾಮಾಜಿಕ ಪಾತ್ರಗಳು ವ್ಯಕ್ತಿತ್ವ ಮತ್ತು ಸಮಾಜದ ಸುಧಾರಣೆಯಲ್ಲಿ ಪ್ರಮುಖ ಪ್ರಭಾವ ಬೀರುತ್ತದೆ"(ಡ್ರೀಜ್ ಮತ್ತು ಸೇನ್ ೧೯೯೫; ೪೩)

ಅಭಿವೃದ್ಧಿಯನ್ನು ಕುರಿತ ಸಾಂಪ್ರದಾಯಿಕ ವಿಚಾರಧಾರೆಯು ಆರೋಗ್ಯ, ಆಯುಸ್ಸು ಮುಂತಾದವುಗಳನ್ನು ವರಮಾನ ವೃದ್ಧಿಸಬಲ್ಲ ಸಾಧನಗಳ ದೃಷ್ಟಿಯಲ್ಲಿ ನೋಡಿದ್ದವು. "ಆರೋಗ್ಯದಂಥ ಸಾಮಾಜಿಕ ಸೇವಾ ಸವಲತ್ತುಗಳು ಮಾನವನ ಧಾರಣಶಕ್ತಿಯನ್ನು ಹೆಚ್ಚಿಸುತ್ತವೆ"[೬] (ಚಂದ್ರಶೇಖರ್ ಟಿ.ಆರ್, ೧೯೯೯; ೩೫) ಲಗಾಯ್ತಿನಿಂದಲೂ ಆರೋಗ್ಯದ ಅಂಶಗಳನ್ನು ಅಭಿವೃದ್ಧಿ ಮತ್ತು ಯೋಜನಾ ಕಾರ್ಯಗಳಲ್ಲಿ ನಿರ್ಲಕ್ಷಿಸುತ್ತಾ ಬರಲಾಗಿತ್ತು. ಆರೋಗ್ಯದ ಮೇಲಿನ ವೆಚ್ಚವು ಅಭಿವೃದ್ಧಿಗೆ ಯಾವುದೇ ರೀತಿಯ ಕೊಡುಗೆಯನ್ನು ನೀಡಲಾರದು ಎಂದು ನಂಬಿಕೊಂಡು ಬರಲಾಗಿತ್ತು. ಆದರೆ 'ಆರೋಗ್ಯ' ಮತ್ತು 'ಅಭಿವೃದ್ಧಿ' ಒಂದಕ್ಕೊಂದು ಸಹ ಸಂಬಂಧವನ್ನು ಹೊಂದಿವೆ "ಜಾಗತಿಕ ಆರೋಗ್ಯ" ಸಂಘಟನೆ (WHO)ಯ ಒಂದು ವರದಿಯು ಪ್ರಕಟಪಡಿಸುವಂತೆ ಆರೋಗ್ಯ ವಲಯದ ಮೇಲಿನ ಅಲ್ಪವೆಚ್ಚವು, ಕೃಷಿವಲಯದಲ್ಲಿಯ ಉತ್ಪನ್ನದಲ್ಲಿ ಹಲವಾರು ಪಟ್ಟು ಹೆಚ್ಚಳಕ್ಕೆ ಕಾರಣವಾಗುತ್ತದೆ[೭] (ಗಾರಡಲ್, ೧೯೮೪;೪). ಆರೋಗ್ಯದ ಮೇಲಿನ ವೆಚ್ಚವು ಜನತೆಯ ದುಡಿಮೆಯನ್ನು ಅವಧಿಯನ್ನು ಹೆಚ್ಚಿಸುತ್ತದೆ. ಅಲ್ಲದೇ ಅದು ಕೆಲಸದ ಗುಣಮಟ್ಟವನ್ನು ಸಹ ಸುಧಾರಿಸುತ್ತದೆ"[೮] (ಲೇವಿಸನ್ ೧೯೬೬;೧೧೦) "ಉತ್ತಮ ಆರೋಗ್ಯವೇ ಬದುಕು" ಎನ್ನಲಾಗಿದೆ. ಆರೋಗ್ಯಭಾಗ್ಯದಿಂದ ವಂಚಿತರಾದ ಜನತೆ ತಮ್ಮ ಉತ್ಪನ್ನದಾಯಕ ಚಟುವಟಿಕೆಗಳಲ್ಲಿ ನಿರಾಸಕ್ತಿ ತೋರುವ ಸಂಭವ ಸಹ ಇರುತ್ತದೆ. ಇದರಿಂದಾಗಿ ರಾಷ್ಟ್ರೀಯ ಅಭಿವೃದ್ಧಿ ಕುಂಠಿತವಾಗುವ ಸಾಧ್ಯತೆಗಳು ಹೆಚ್ಚಿವೆ.

ಅಭಿವೃದ್ಧಿ ಮತ್ತು ಆರೋಗ್ಯಗಳ ನಡುವಿನ ಸಂಬಂಧ ಕುರಿತಂತೆ ಮುಖ್ಯವಾಗಿ ಎರಡು ವಿಚಾರಧಾರೆಗಳಿವೆ ಮೊದಲನೆಯ ಸಾಮಾಜಿಕ ನೀತಿ ತಾಂತ್ರಿಕ ಬದಲವಣೆಯ ವಿಶ್ಲೇಷಣೆ. ಈ ವಿಶ್ಲೇಷಣೆಯ ಪ್ರಕಾರ ಆರೋಗ್ಯ ಕಾರ್ಯಕ್ರಮಗಳು– ಆರೋಗ್ಯ ಸ್ಥಿತಿಯನ್ನು (Status) ಹೆಚ್ಚಿಸುತ್ತವೆ. ಎರಡನೆಯದು ಅಭಿವೃದ್ಧಿ ವಿಶ್ಲೇಷಣೆ. ಇದರನ್ವಯ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯ ಮೂಲಕ ಆರೋಗ್ಯ ಭಾಗ್ಯದಲ್ಲಿ ಸುಧಾರಣೆ ಕಂಡುಬರುತ್ತದೆ. ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ೨೦ನೆಯ ಶತಮಾನದ ಮಧ್ಯದ ಅವಧಿಯಲ್ಲಿ ಸಾಮಾಜಿಕ ಆರೋಗ್ಯ ಕಾರ್ಯಕ್ರಮಗಳು ಮತ್ತು ವೈದ್ಯಕೀಯ ಕ್ಷೇತ್ರದಲ್ಲಿಯ ತಾಂತ್ರಿಕತೆಗಳು ಮರಣ ಪ್ರಮಾಣದಲ್ಲಿಯ ತೀವ್ರಗತಿಯ ಕಡಿತಕ್ಕೆ ಕಾರಣವಾದವು. ಇದಕ್ಕೆ ವಿರುದ್ಧವಾಗಿ, ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ, ಹದಿನೆಂಟು ಮತ್ತು ಹತ್ತೊಂಭತ್ತನೆಯ ಶತಮಾನದಲ್ಲಿ ಕೃಷಿ ಮತ್ತು ಕೈಗಾರಿಕಾ ವಲಯದಲ್ಲಿಯ ಆಮೂಲಾಗ್ರ ಬದಲಾವಣೆಯ ದಿಶೆಯಿಂದ ಮರಣ ಪ್ರಮಾಣದಲ್ಲಿ ಗಣನೀಯ ಇಳಿಕೆ ಕಂಡುಬಂದಿತ್ತು[೯] (ನಾರಾಯಣ, ೧೯೯೭:೨೮). ಆರೋಗ್ಯ ಕಾರ್ಯಕ್ರಮಗಳು ಆರೋಗ್ಯ ಭಾಗ್ಯವನ್ನು ನಿರ್ಧರಿಸುತ್ತವೆಯೋ ಅಥವಾ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯು'ಆರೋಗ್ಯ ಸ್ಥಿತಿ'ಯನ್ನು ನಿರ್ಧರಿಸುತ್ತವೆಯೋ ಎಂಬುದರ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಆರೋಗ್ಯ ಮತ್ತು ಸಾಮಾಜಿಕ, ಆರ್ಥಿಕ ಅಭಿವೃದ್ಧಿಗಳು ಒಂದು ಮತ್ತೊಂದನ್ನು ನಿರ್ಧರಿಸುತ್ತವೆ ಎಂದು ಹೇಳಬಹುದು. ಇವುಗಳಲ್ಲಿ ಪರಸ್ಪರ ಕೊಡುಕೊಳ್ಳುವ ಕ್ರಿಯೆ ನಡೆಯುತ್ತಿರುತ್ತದೆ. ಆರ್ಥಿಕ, ಸಾಮಾಜಿಕ, ಅಭಿವೃದ್ಧಿಯು ಆರೋಗ್ಯ ಸ್ಥಿತಿಯನ್ನು ಸುಧಾರಿಸಿದರೆ ಆರೋಗ್ಯಸ್ಥಿತಿಯು ಆರ್ಥಿಕ ಸಾಮಾಜಿಕ ಅಭಿವೃದ್ಧಿಗೆ ಪೂರಕವಾಗಿರುತ್ತದೆ.

ಒಂದು ಕಾಲದಲ್ಲಿ ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಆರೋಗ್ಯದ ಕೊಡುಗೆಯನ್ನು ನಿರ್ಲಕ್ಷಿಸುತ್ತಾ ಬರಲಾಗಿತ್ತು. ಇತ್ತೀಚೆಗೆ ಆರೋಗ್ಯಕ್ಕೆ ಹೆಚ್ಚಿನ ಒತ್ತನ್ನು ನೀಡಲಾಗುತ್ತಿದೆ. ಯುಎನ್‌ಡಿಪಿ (UNDP)ಯ ವರದಿಗಳು ಅಮರ್ತ್ಯಸೇನ್ ಮತ್ತು ಜೀನ್ ಡ್ರೀಜ್ (೧೯೯೫-೯೬) ಅವರುಗಳು ಭಾರತ ಕುರಿತ ಅಧ್ಯಯನಗಳಿಂದ "ಆರೋಗ್ಯದ ಉಪಕರಣವಾದ ಗುಣದೊಂದಿಗೆ 'ಅಂತಸ್ಥವಾದಿ' ಗುಣವನ್ನು ಸಹ ಎತ್ತಿ ಹಿಡಿದಿವೆ. ಯುಎನ್‌ಡಿಪಿ, ೧೯೯೦ರಿಂದ ಹೊರತರುತ್ತಿರುವ ಮಾನವ ಅಭಿವೃದ್ಧಿ ವರದಿಗಳಲ್ಲಿಯ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಆರೋಗ್ಯಕ್ಕೆ ಪ್ರಥಮ ಸ್ಥಾನವನ್ನು ನೀಡಲಾಗಿದೆ. ಯುಎನ್‌ಡಿಪಿಯ ವರದಿಗಳಿಂದ ಹೊರಬರುವ ಒಂದು ಮುಖ್ಯ ತಥ್ಯವೆಂದರೆ ಆರ್ಥಿಕ ಪ್ರಗತಿ ತನ್ನಷ್ಟಕ್ಕೆ ತಾನೇ ಜನರ ಆರೋಗ್ಯವಾಗಿ ಪರಿವರ್ತನೆಯಗುವುದಿಲ್ಲ. ಪ್ರಜ್ಞಾಪೂರ್ವಕವಾದ, ಮಧ್ಯಸ್ಥಿಕೆ ಕ್ರಮಗಳಿಂದ ಜನರ ಆರ್ಥಿಕ ಅಭಿವೃದ್ಧಿಯನ್ನು ಆರೋಗ್ಯವಾಗಿ ಪರಿವರ್ತಿಸುವ ಸಾಧ್ಯತೆ ಇದೆ. ಕನಾಟಕದಲ್ಲಿ ವಿಶೇಷವಾಗಿ ಹೈದ್ರಬಾದ್ ಕರ್ನಾಟಕ ಪ್ರದೇಶದ ಜಿಲ್ಲೆಗಳಲ್ಲಿ ಆರ್ಥಿಕ ಅಭಿವೃದ್ಧಿ ಜನರ ಆರೋಗ್ಯವಾಗಿ ಪರಿವರ್ತನೆಯಾಗದಿರುವುದು ಕಂಡುಬರುತ್ತದೆ. ಅದರಲ್ಲೂ ರಾಯಚೂರು ಜಿಲ್ಲೆಯಲ್ಲಿ ಈ ಸಮಸ್ಯೆ ತುಂಬ ಚಿಂತಾಜನಕವಾಗಿದೆ.

ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಾಯದಲ್ಲಿ ಆರೋಗ್ಯ ಸ್ಥಿತಿಗತಿಗಳನ್ನು ಹಾಗೂ ಅದರ ಪ್ರಾದೇಶಿಕ ಅಸಮಾನತೆಯ ನೆಲೆಗಳನ್ನು ತಿಳಿಯುವ ಪ್ರಯತ್ನ ಮಾಡಲಾಗಿದೆ. ಈ ಅಧ್ಯಯನ ಸೈದ್ಧಾಂತಿಕ ಮತ್ತು ಎಂಪಿರಿಕಲ್ ಅಧ್ಯಯನವೂ ಆಗಿದೆ. ಈ ಅಧ್ಯಯನಕ್ಕೆ ಸಂಬಂಧಿಸಿದ ಮಾಹಿತಿ ಮತ್ತು ಅಂಕಿ ಅಂಶಗಳನ್ನು ಪ್ರಾಥಮಿಕ ಮತ್ತು ಆನುಷಂಗಿಕ ಮೂಲಗಳಿಂದ ಸಂಗ್ರಹಿಸಲಾಗಿದೆ. ಆರೋಗ್ಯ ರಂಗದ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕೆಲಸ ಮಾಡುತ್ತಿರುವ ಬಗೆಯನ್ನು ತಿಳಿಯುವುದಕೋಸ್ಕರ ಕ್ಷೇತ್ರಕಾರ್ಯದ ಮೂಲಕ ವಿವರಗಳನ್ನು ಪಡೆದುಕೊಳ್ಳಲಾಗಿದೆ. ರಾಯಚೂರು ಜಿಲ್ಲೆಯಲ್ಲಿ ಒಟ್ಟು ಐದು ತಾಲೂಕುಗಳಿವೆ. ೩೭ ಹೋಬಳಿಗಳಿದ್ದು ಅವುಗಳಲ್ಲಿ ಪ್ರತಿ ತಾಲ್ಲೂಕಿನ ಆಯ್ದ ಹೋಬಳಿಯಿಂದ ನಾಲ್ಕು ಹಳ್ಳಿಗಳನ್ನು ಆಯ್ಕೆ ಮಾಡಲಾಗಿದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಭೇಟಿ ನೀಡಿ ಪ್ರಾಥಮಿಕ ಮಾಹಿತಿಯನ್ನು ಪಡೆಯಲಾಗಿದೆ. ಈ ಜಿಲ್ಲೆಯ ಐದು ತಾಲ್ಲೂಕುಗಳಲ್ಲಿ ೪ ಹಳ್ಳಿಗಳನ್ನು ತೆಗೆದುಕೊಳ್ಳಲಾಗಿದೆ. "ರ್‍ಯಾಂಡಮ್" ಪದ್ಧತಿಯನ್ನು ಅನುಸರಿಸಲಾಗಿದೆ. ಸರಕಾರದ ವಿವಿಧ ಇಲಾಖೆಗಳ ಪ್ರಕಟಿತ ಮತ್ತು ಅಪ್ರಕಟಿತ ವರದಿಗಳು, ಮತ್ತು ಜನಗಣತಿ ವರದಿಗಳಿಂದ ಅಗತ್ಯವಾದ ಮಾಹಿತಿಯನ್ನು ಸಂಗ್ರಹಿಸಿಕೊಳ್ಳಲಾಗಿದೆ. ಸಾಮಾನ್ಯವಾಗಿ ೨೦೦೧ರಿಂದ ೨೦೧೦ರ ಅವಧಿಯನ್ನು ಅಧ್ಯಯನದಲ್ಲಿ ವಿಶ್ಲೇಷಣೆಗೆ ಆಯ್ಕೆ ಮಾಡಿಕೊಳ್ಳಲಾಗಿದೆ. ಆದರೆ ೨೦೦೧ರ ಕೆಲಮುಖ್ಯ ಅಂಕಿ-ಅಂಶಗಳು ಲಭ್ಯವಿಲ್ಲದಿರುವುದರಿಂದ ಹಿಂದಿನ ವರ್ಷಗಳಲ್ಲಿನ ಅವಧಿಯನ್ನು ಬಳಸಿಕೊಳ್ಳಲಾಗಿದೆ. ಇಲ್ಲಿ ಆರೋಗ್ಯ ಅಭಿವೃದ್ಧಿಗಳ ನಡುವಿನ ಸಂಬಂಧವನ್ನು ಲಿಂಗಸಂವೇದಿ ನೆಲೆಯಲ್ಲಿ ಪರಿಗಣಿಸಲಾಗಿದೆ. ಆರೋಗ್ಯ ಕುರಿತಂತೆ ರಾಯಚೂರು ಜಿಲ್ಲೆಯ ತಾಲ್ಲೂಕುಗಳನ್ನು ರಾಜ್ಯದೊಂದಿಗೆ ವಿಶ್ಲೇಷಿಸಲಾಗಿದೆ. ಪರಿಮಾಣ, ಶೇಕಡ, ಸರಾಸರಿ, ಸ್ಟಾಂಟರ್ಡ್ ಡಿವಿಯೇಷನ್ ಸರಳ ಸಂಖ್ಯಾ ಸೂತ್ರಗಳನ್ನು ಬಳಸಿ, ಪರಿಮಾಣಾತ್ಮಕ ವಿಶ್ಲೇಷಣೆಯಿಂದ ವಿಷಯಗಳನ್ನು ಚರ್ಚಿಸಲಾಗಿದೆ.

ಸರಕಾರ ಒದಗಿಸಿದ ಆರೋಗ್ಯ ಸೌಲಭ್ಯಗಳು ಮತ್ತು ಅವುಗಳು ಕೆಲಸ ಮಾಡುತ್ತಿರುವ ಆಯಾಮಗಳು ಮಾತ್ರ ಈ ಅಧ್ಯಯನದ ವ್ಯಾಪ್ತಿಯಲ್ಲಿ ಬರುತ್ತವೆ. ಖಾಸಗಿ ವೈದ್ಯಕೀಯ ಸೇವೆ ಇದರ ವ್ಯಾಪ್ತಿಯಿಂದ ಹೊರತಾಗಿವೆ. ನಗರ ಪ್ರದೇಶವನ್ನು ಹೊರತುಪಡಿಸಿ ಗ್ರಾಮೀಣ ಪ್ರದೇಶದಲ್ಲಿ ಕ್ಷೇತ್ರಕಾರ್ಯ ಕೈಗೊಂಡು ಅಗತ್ಯ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಕ್ಷೇತ್ರಕಾರ್ಯದಲ್ಲಿ ನಗರ ಪ್ರದೇಶವನ್ನು ಹೊರತು ಪಡಿಸಿರುವುದು ಈ ಅಧ್ಯಯನದ ಎರಡನೆಯ ಮಿತಿಯಾಗಿದೆ. ಗ್ರಾಮೀಣ ಪ್ರದೇಶದಲ್ಲಿಯ ವೈದ್ಯಕೀಯ ಸೌಲಭ್ಯಗಳನ್ನು ಅರಿಯುವುದಕೋಸ್ಕರ ಕ್ಷೇತ್ರಕಾರ್ಯವನ್ನು ಗ್ರಾಮೀಣ ಪ್ರದೇಶಕ್ಕೆ ಮಾತ್ರ ಸೀಮಿತಗೊಳಿಸಿಕೊಳ್ಳಲಾಗಿದೆ.

೬.೧೨ ಆರೋಗ್ಯ ಸವಲತ್ತುಗಳು

ಜನತೆಯ ಆರೋಗ್ಯ ಭಾಗ್ಯವನ್ನು ವಿಸ್ತರಿಸುವಲ್ಲಿ ಎರಡು ವಿಧಾನಗಳನ್ನು ಅಳವಡಿಸಿಕೊಂಡು ಬಂದಿರುವುದು ಕಂಡುಬರುತ್ತದೆ. ಮೊದಲನೆಯದು ಜನತೆಗೆ ಆರೋಗ್ಯದ ಸೌಲಭ್ಯಗಳನ್ನು ಒದಗಿಸುವುದರ ಮೂಲಕ ಅವರ ಆರೋಗ್ಯವನ್ನು ಉತ್ತಮ ಪಡಿಸುವುದು. ಎರಡನೆಯದು ಸಮಾಜೋ ಆರ್ಥಿಕಾಭಿವೃದ್ಧಿಗಳ ಮೂಲಕ ಜನತೆಯ ಆರೋಗ್ಯವನ್ನು ಸುಧಾರಿಸುವುದು ಜನತೆ ಆರೋಗ್ಯ ಪೂರ್ಣ ಬದುಕನ್ನು ನಡೆಸಬೇಕಾದರೆ ಅವರ ಆರೋಗ್ಯ ಉತ್ತಮಟ್ಟದಲ್ಲಿರಬೇಕು. ಆರೋಗ್ಯ ಉತ್ತಮಮಟ್ಟದಲ್ಲಿರಬೇಕಾದರೆ ಆರೋಗ್ಯ ಸೌಲಭ್ಯಗಳು ಉತ್ತಮವಾಗಿರಬೇಕು ಹಿಂದುಳಿದ ಜಿಲ್ಲೆಯಾದ ರಾಯಚೂರುನಲ್ಲಿ ನಿರ್ಲಕ್ಷಿತ ಜನತೆಯ ಪ್ರಮಾಣವೇ ಅಧಿಕವಾಗಿದೆ. ವಿಶೇಷವಾಗಿ ಈ ಜಿಲ್ಲೆಯಲ್ಲಿ ಆರೋಗ್ಯ ಸೌಲಭ್ಯಗಳ ಅವಶ್ಯಕತೆ ಹೆಚ್ಚಿದೆ. ಜನರ ಆರೋಗ್ಯವನ್ನು ಉತ್ತಮಪಡಿಸುವಲ್ಲಿ ಆರೋಗ್ಯ ಸೌಲಭ್ಯಗಳ ಪಾತ್ರ ನಿರ್ಣಾಯಕವಾದುದು. ಈ ದಿಶೆಯಲ್ಲಿ ಅವು ಉಪಕರಣಗಳಾಗಿ ಕೆಲಸ ಮಾಡುತ್ತವೆ. ಆರೋಗ್ಯ ಸೌಲಭ್ಯಗಳ ಲಭ್ಯದಿಶೆಯಲ್ಲಿ ಅವು ಉಪಕರಣಗಳಾಗಿ ಕೆಲಸ ಮಾಡುತ್ತವೆ. ಆರೋಗ್ಯ ಸೌಲಭ್ಯಗಳ ಲಭ್ಯತೆಯು ಒಂದು ಪ್ರದೇಶದ ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಕ್ರಿಯಾತ್ಮಕವಾದ ಪಾತ್ರವನ್ನು ವಹಿಸುತ್ತದೆ. ಆರೋಗ್ಯ ಮತ್ತು ಅಭಿವೃದ್ಧಿ ಒಂದಕ್ಕೊಂದು ಪೂರಕ ಸಂಬಂಧ ಹೊಂದಿದೆ.

ಹಿಂದುಳಿದ ಪ್ರದೇಶಗಳಲ್ಲಿ ಮಾನವ ಅಭಿವೃದ್ಧಿ ಅಂಶಗಳು ಕೆಳಮಟ್ಟದಲ್ಲಿರುತ್ತವೆ. ಇತರ ಪ್ರದೇಶಗಳಿಗೆ ಸಾಪೇಕ್ಷವಾಗಿ ಅಲ್ಲಿಯ ಆರೋಗ್ಯ ಸೌಲಭ್ಯಗಳು ಕೆಳಹಂತದಲ್ಲಿರುತ್ತವೆ. ಆರೋಗ್ಯ ಸೌಲಭ್ಯಗಳ ಲಭ್ಯತೆ ಮತ್ತು ಅವುಗಳ ಕಾರ್ಯದಕ್ಷತೆ ಜನತೆಯ ಸ್ವಸ್ಥತೆಯನ್ನು ನಿರ್ಧರಿಸುವ ಪ್ರಮುಖ ಅಂಶಗಳಾಗಿವೆ. ಆರೋಗ್ಯ ಸೂಚಿಯು ಮಾನವ ಅಭಿವೃದ್ಧಿಯನ್ನು ತೋರಿಸುವ ಮತ್ತು ನಿರ್ಧರಿಸುವ ಅತಿಮುಖ್ಯ ಸಂಗತಿಯಾಗಿದೆ. ಈ ಕಾರಣದಿಂದಾಗಿ ಒಂದು ಪ್ರದೇಶದ ಮಾನವ ಅಭಿವೃದ್ಧಿಯ ಸ್ವರೂಪವನ್ನು ಅರಿಯಲು ಆ ಪ್ರದೇಶದಲ್ಲಿಯ ಆರೋಗ್ಯ ಸೌಲಭ್ಯಗಳ ಸ್ವರೂಪವನ್ನು ತಿಳಿಯುವುದು ಮುಖ್ಯವೆನಿಸುತ್ತದೆ. ಜನರಿಗೆ ದೊರೆಯುವ ಆರೋಗ್ಯ ಸೌಲಭ್ಯಗಳು "ಶಿಶು ಮರಣದ ಮೇಲೆ ಋಣಾತ್ಮಕ ಪರಿಣಾಮ ಬೀರುತ್ತವೆ ಎಂದು ನಿರೀಕ್ಷಿಸಲಾಗಿದೆ."[೧೦] **(ಮೂರ್ತಿ, ೧೯೯೬;೩೬೪)** ಮಹಿಳೆಯರ ಆರೋಗ್ಯದ ಸ್ಥಿತಿಯು ಬಡತನ (ಬಾಟಿವಾಲ, ೧೯೮೨), ಶಿಕ್ಷಣ (ನಾಗ್,೧೯೮೩)

ಸ್ವಾತಂತ್ರ್ಯ ಧಾರ್ಮಿಕತೆ ಮುಂತಾದ ಅಂಶಗಳಿಂದ ನಿರ್ಧಾರವಾಗುತ್ತದೆ ಎಂದು ಹಲವು ಅಧ್ಯಯನಗಳು ತಿಳಿಸಿದರೆ, ಇತರೆ ಅಧ್ಯಯನಗಳು (ಭಾರತ ಸರ್ಕಾರ, ೧೯೭೫; ರಾಮಲಿಂಗಸ್ವಾಮಿ, ೧೯೮೭) ಆರೋಗ್ಯ ಸೌಲಭ್ಯಗಳ ದೊರೆಕೊಳ್ಳುವಿಕೆಯಲ್ಲಿಯ ದುಸ್ಥಿತಿಯು ಮಹಿಳೆಯರ ಆರೋಗ್ಯ ಸ್ಥಿತಿಯ ಮೇಲೆ ಪ್ರತಿಕೂಲ ಭಾದಕ ಪರಿಣಾಮಗಳನ್ನು ಉಂಟುಮಾಡುತ್ತದೆ ಎಂಬುದನ್ನು ತೋರಿಸಿವೆ.[೧೧] ಯಾವ ಪ್ರದೇಶದಲ್ಲಿ ಆರೋಗ್ಯ ಸೌಲಭ್ಯಗಳು ಇರುವುದಿಲ್ಲವೆಂದು ತರಬೇತಿ ಪಡೆದ ದಾದಿಯರಿಂದ ಹೆರಿಗೆಗಳು ನಡೆಯುವುದಿಲ್ಲವೋ ಅಲ್ಲಿ ಶಿಶು ಮರಣ ಪ್ರಮಾಣ ಅಧಿಕವಾಗಿರುತ್ತದೆ. ಜನತೆ ವಾಸಿಸುವ ಪ್ರದೇಶಗಳಲ್ಲಿಯೆ ಆರೋಗ್ಯ ಸೌಲಭ್ಯಗಳಿದ್ದರೆ ಅವುಗಳ ಉಪಯೋಗದಲ್ಲಿಯ ಲಿಂಗತಾರಮ್ಯತೆಯ ಪ್ರಮಾಣ ಕಡಿಮೆಯಾಗುತ್ತದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳು ಇರದ ಗ್ರಾಮಗಳಲ್ಲಿ ಆರೋಗ್ಯ ಸೌಲಭ್ಯಗಳ ಬಳಕೆಯಲ್ಲಿ ಅಧಿಕ ಲಿಂಗ ತಾರತಮ್ಯತೆ ಕಂಡುಬರುತ್ತದೆ.[೧೨] **(ರಾಜೇಶ್ವರಿ, ೧೯೯೬)**

"ಮಹಿಳೆ ತನ್ನ ಜೀವಿತಾವಧಿಯುದ್ಧಕ್ಕೂ ಆರೋಗ್ಯ, ಸೌಲಭ್ಯ ಸೇವೆಗಳನ್ನು ಪಡೆಯುವಲ್ಲಿ ಪುರುಷರಿಗಿಂತಲೂ ಕಡಿಮೆ ಪ್ರಾಶಸ್ತ್ಯ ಪಡೆಯುತ್ತಿದ್ದು, ಈ ಪರಿಸ್ಥಿತಿಯ ಬಗ್ಗೆ ೧೯೮೧ರಲ್ಲಿ ನಡೆದ ಮಹಿಳಾ ಸಮ್ಮೇಳನದಲ್ಲಿ ಗಂಭೀರವಾಗಿ ಚರ್ಚಿಸಲಾಯಿತು. ಇತ್ತೀಚಿನ ದಶಕಗಳವರೆಗೂ ಮೊದಲಿದ್ದ ಈ ಪರಿಸ್ಥಿತಿಯಲ್ಲಿ, ಗಂಭೀರವಾದ ಬದಲಾಣೆಯೇನೂ ಕಂಡುಬಂದಿಲ್ಲ. ಸೆಪ್ಟಂಬರ್ ೧೯೯೫ರಲ್ಲಿ ನಡೆದ ಮಹಿಳೆಯರ ಜಾಗತಿಕ ಸಮ್ಮೇಳನದಲ್ಲಿ ಸಹ ಮಹಿಳೆಯರ ಆರೋಗ್ಯ ಕುರಿತಂತೆ ಹೆಚ್ಚಿನ ವಿಷಯಗಳು ಚರ್ಚೆಗೆ ಒಳಪಟ್ಟವು.[೧೩] **(ಪೃಥ್ವಿ, ೧೯೯೪;೨೩೬)**. ಗ್ರಾಮೀಣ ಪ್ರದೇಶದಲ್ಲಿ ಜನತೆ ವ್ಯಾದಿಯಿಂದ ಬಳಲುತ್ತಿರುವ ಸಂದರ್ಭದಲ್ಲಿ ಸಾರ್ವಜನಿಕ ಆರೋಗ್ಯ ಸೌಲಭ್ಯಗಳ ಅನುಪಸ್ಥಿತಿಯು ಜನತೆಯ ಮೇಲೆ ಅದರಲ್ಲಿಯೂ ಮಹಿಳೆಯರು ಮತ್ತು ಸಮಾಜದ ತಳವರ್ಗದವರ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ (ಉಂಟುಮಾಡುತ್ತದೆ) ಬೀರುತ್ತದೆ. ರಾಯಚೂರು ಜಿಲ್ಲೆಯ ಅಭಿವೃದ್ಧಿಯ ಸಂದರ್ಭದಲ್ಲಿ ಆರೋಗ್ಯ ಸೌಲಭ್ಯಗಳನ್ನು ಈ ಎಲ್ಲಾ ಸೈದ್ಧಾಂತಿಕತೆಯ ಹಿನ್ನೆಲೆಯಲ್ಲಿ ನೋಡಲು ಇಲ್ಲಿ ಪ್ರಯತ್ನಿಸಲಾಗಿದೆ. ಈ ಜಿಲ್ಲೆಯ ಜನತೆಯ ಆರೋಗ್ಯ ಸ್ಥಿತಿಯನ್ನು ತಿಳಿಯಲು ಆರೋಗ್ಯ ಸೌಲಭ್ಯಗಳು, ಅವುಗಳ ದೊರೆಯುವಿಕೆ, ಈ ಸೌಲಭ್ಯಗಳು ಮತ್ತು ಜನಸಂಖ್ಯೆಯ ನಡುವಿನ ಅನುಪಾತಗಳ ಕುರಿತಾದ ವಿಷಯವನ್ನು ತಿಳಿದುಕೊಳ್ಳುವುದು ಅವಶ್ಯಕವಾಗಿದೆ. ಆದ್ದರಿಂದ ಈ ಜಿಲ್ಲೆಯ ತಾಲ್ಲೂಕುಗಳ ಆರೋಗ್ಯ ಸೌಲಭ್ಯಗಳನ್ನು ಚರ್ಚಿಸಲಾಗಿದೆ. ಈ ಬಗೆಯ ಅಧ್ಯಯನವು ರಾಯಚೂರು ಜಿಲ್ಲೆಯ ಜನರ ಆರೋಗ್ಯ ಉತ್ತಮವಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಗುರುತಿಸಲು ಸಾಧ್ಯವಾಗುತ್ತದೆ.

ವೈದ್ಯಕೀಯ ಸಂಸ್ಥೆಗಳ ಬೆಳವಣಿಗೆ, ಉಪಕೇಂದ್ರಗಳ ಸಂಖ್ಯೆ ವೈದ್ಯಕೀಯ ಸಂಸ್ಥೆಗಳಲ್ಲಿರುವ ಹಾಸಿಗೆಗಳ ಸಂಖ್ಯೆ ಮತ್ತು ಅಂಗನವಾಡಿ ಕೇಂದ್ರಗಳ ಸಂಖ್ಯೆ ಇವುಗಳನ್ನು ಆರೋಗ್ಯ ಸೌಲಭ್ಯಗಳಾಗಿ ಪರಿಗಣಿಸಲಾಗಿದೆ. ವೈದ್ಯಕೀಯ ಸೌಲಭ್ಯಗಳ ಇರುವಿಕೆಯು ಮುಖ್ಯವಾದುದು, ಆದರೆ ಜನಸಂಖ್ಯೆ ಮತ್ತು ಈ ಸೌಲಭ್ಯಗಳ ನಡುವಿನ ಅನುಪಾತವು ಅದಕ್ಕಿಂತಲೂ ಮುಖ್ಯವಾದುದು. ಆದ್ದರಿಂದ

ಪ್ರತಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಜನಸಂಖ್ಯೆ ಪ್ರತಿ ಉಪಕೇಂದ್ರಗಳಾಗಿರುವ ಗ್ರಾಮೀಣ ಜನಸಂಖ್ಯೆ ವೈದ್ಯಕೀಯ ಸಂಸ್ಥೆಗಳಲ್ಲಿರುವ ಪ್ರತಿ ಹಾಸಿಗೆಗೆ ಜನಸಂಖ್ಯೆ ಇವುಗಳನ್ನು ಸಹ ಆರೋಗ್ಯ ಸೌಲಭ್ಯಗಳನ್ನಾಗಿ ತೆಗೆದುಕೊಳ್ಳಲಾಗಿದೆ. ಇತ್ತೀಚೆಗೆ ದೊರೆತ ಆರೋಗ್ಯಕ್ಕೆ ಸಂಬಂಧಿಸಿದ ಅಂಕಿಅಂಶಗಳನ್ನು ಅಗತ್ಯಕ್ಕೆ ತಕ್ಕಂತೆ ಬಳಸಿಕೊಳ್ಳಲಾಗಿದೆ.

೬.೧೩ ವೈದ್ಯಕೀಯ ಸಂಸ್ಥೆಗಳ ಬೆಳವಣಿಗೆ

ಹೈದ್ರಾಬಾದ್-ಕರ್ನಾಟಕ ಪ್ರದೇಶದ ಜಿಲ್ಲೆಗಳಲ್ಲಿಯ ವೈದ್ಯಕೀಯ ಸಂಸ್ಥೆಗಳ ಸಂಖ್ಯೆ ಮತ್ತು ಅವುಗಳ ಬೆಳವಣಿಗೆಯನ್ನು ಮುಂದಿನ ಕೋಷ್ಟಕ ತೋರಿಸುತ್ತದೆ. ಹೈದ್ರಾಬಾದ್ ಕರ್ನಾಟಕ ಪ್ರದೇಶದ ಜಿಲ್ಲೆಗಳಲ್ಲಿ ಗುಲ್ಬರ್ಗಾ ಜಿಲ್ಲೆ ಅಧಿಕ ವೈದ್ಯಕೀಯ ಸಂಸ್ಥೆಗಳನ್ನು ಹೊಂದಿದ್ದರೆ ಬೀದರ್ ಜಿಲ್ಲೆ ಕಡಿಮೆ ವೈದ್ಯಕೀಯ ಸಂಸ್ಥೆಗಳನ್ನು ಪಡೆದಿದೆ. ೧೯೭೧ಕ್ಕೆ ರಾಜ್ಯದ ಜನಸಂಖ್ಯೆಯಲ್ಲಿ ಗುಲ್ಬರ್ಗಾ ಜಿಲ್ಲೆ ಏಳನೇ ಸ್ಥಾನ ಪಡೆದಿದ್ದರೆ ವೈದ್ಯಕೀಯ ಸಂಸ್ಥೆಗಳ ಅದರ ಸ್ಥಾನ ೯ನೆಯದ್ದಾಗಿದೆ. ಉಳಿದ ಜಿಲ್ಲೆಗಳಾದ ಬಳ್ಳಾರಿ, ಮತ್ತು ರಾಯಚೂರು ಜಿಲ್ಲೆಗಳು, ಜನಸಂಖ್ಯೆಯಲ್ಲಿ ಅನುಕ್ರಮವಾಗಿ ೧೪, ೧೭, ೧೧ನೇ ಸ್ಥಾನ ಪಡೆದಿದ್ದರೆ, ವೈದ್ಯಕೀಯ ಸಂಸ್ಥೆಗಳಲ್ಲಿ ಅವುಗಳು ಕ್ರಮವಾಗಿ ೧೩, ೧೫ ಮತ್ತು ೧೨ನೇ ಸ್ಥಾನ ಪಡೆದಿವೆ. ಅಂದರೆ ಗುಲ್ಬರ್ಗಾ ವಿಭಾಗದ ಗುಲ್ಬರ್ಗಾ ಮತ್ತು ರಾಯಚೂರು ಜಿಲ್ಲೆಗಳು ಜನಸಂಖ್ಯೆಯಲ್ಲಿ ಪಡೆದಿರುವ ಸ್ಥಾನಗಳು, ವೈದ್ಯಕೀಯ ಸಂಸ್ಥೆಗಳ

ಕೋಷ್ಟಕ-೬.೧೯

ಹೈದ್ರಾಬಾದ್-ಕರ್ನಾಟಕ ಪ್ರದೇಶ ಜಿಲ್ಲೆಗಳಲ್ಲಿ ವೈದ್ಯಕೀಯ ಸಂಸ್ಥೆಗಳ ಬೆಳವಣಿಗೆ

ಕ್ರಸ	ಜಿಲ್ಲೆಗಳು	ವೈದ್ಯಕೀಯ ಸಂಸ್ಥೆಗಳು								ವೈದ್ಯಕೀಯ ಸಂಸ್ಥೆಗಳ ಶೇಕಡವಾರು ಬೆಳವಣಿಗೆ			
		೧೯೭೦-೭೧		೧೯೮೦-೮೧		೧೯೯೦-೯೧		೧೯೯೬-೯೭		೧೯೭೧-೮೧	೧೯೮೧-೯೧	೧೯೯೧-೯೭	೧೯೭೧-೯೧
		ಸ್ಥಾನ	ಸಂಖ್ಯೆ	ಸ್ಥಾನ	ಸಂಖ್ಯೆ	ಸ್ಥಾನ	ಸಂಖ್ಯೆ	ಸ್ಥಾನ	ಸಂಖ್ಯೆ				
೧	೨	೩	೪	೫	೬	೭	೮	೯	೧೦	೧೧	೧೨	೧೩	೧೪
೧	ಬಳ್ಳಾರಿ	೫೧	೧೩	೭೭	೧೩	೯೭	೧೩	೧೧೧	೧೪	೫೦.೯೮	೨೫೯೭	೧೪೦.೪೩	೯೦.೧
೨	ಬೀದರ್	೨೩	೧೫	೪೩	೧೬	೫೦	೧೯	೬೦	೧೮	೬.೯೫	೧೬.೨೭	೨೦	೧೧೭.೩
೩	ಗುಲ್ಬರ್ಗ	೬೬	೯	೯೧	೧೦	೧೨೨	೯	೧೪೭	೭	೩೭೮೭	೩೪.೦೬	೨೦.೪೯	೮೫.೮
೪	ರಾಯಚೂರು	೫೨	೧೨	೭೯	೧೨	೮೨	೧೮	೧೦೪	೧೫	೫೧.೯೨	೩.೭೯	೨೬.೮೩	೫೭.೬
೫	ಹೈದ್ರಾಬಾದ್ ಕರ್ನಾಟಕ ಪ್ರದೇಶ	೧೯೨	೪	೨೯೦	೪	೩೫೧	೪	೪೨೨	೪	೫೧.೦೪	೨೧.೦೩	೨೦.೨೨	೮೨.೮
೬	ಎಸ್.ಡಿ	೧೫.೬೦		೧೭.೮೫		೨೬.೦೬		೩೦.೯೨					
೭	ಸಿ.ವಿ	೩೨.೫೧		೨೪.೬೨		೨೯.೭೦		೨೯.೩೧					

ಮೂಲ ಕರ್ನಾಟಕ ಮಾನವ ಅಭಿವೃದ್ಧಿ, ೧೯೯೯, ಯೋಜನಾ ವಿಭಾಗ, ಕರ್ನಾಟಕ ಸರ್ಕಾರ, ಬೆಂಗಳೂರು

ಸಂಖ್ಯೆಯಲ್ಲಿ ಹೊಂದಿರುವ ಸ್ಥಾನಕ್ಕಿಂತ ಕಡಿಮೆ ಇದೆ. ಬಳ್ಳಾರಿ ಮತ್ತು ಬೀದರ್ ಜಿಲ್ಲೆಗಳಲ್ಲಿ ಇದಕ್ಕೆ ಪ್ರತಿಕೂಲವಾದ ಪರಿಸ್ಥಿತಿ ಇದೆ. ೧೯೮೦-೮೧ರಲ್ಲಿಯ ಪರಿಸ್ಥಿತಿ ಸಹ ೧೯೭೦-೭೧ರ ಪರಿಸ್ಥಿತಿಗಿಂತ ಹೆಚ್ಚು ಭಿನ್ನವಾಗಿಲ್ಲ. ಈ ಕಾಲದಲ್ಲಿ ಸಹ ಗುಲ್ಬರ್ಗಾ ಅಧಿಕ ವೈದ್ಯಕೀಯ ಸಂಸ್ಥೆಗಳನ್ನು ಹೊಂದಿದ್ದರೆ, ಬೀದರ್ ಕಡಿಮೆ ವೈದ್ಯಕೀಯ ಸಂಸ್ಥೆಗಳನ್ನು ಹೊಂದಿದೆ.

೧೯೯೦–೯೧ರಲ್ಲಿ ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿರುವ ಒಟ್ಟು ವೈದ್ಯಕೀಯ ಸಂಸ್ಥೆಗಳ ಸಂಖ್ಯೆ ೩೫೧ ಇದರಲ್ಲಿ ಶೇಕಡ ೩೪.೭೫ರಷ್ಟು ವೈದ್ಯಕೀಯ ಸಂಸ್ಥೆಗಳು ಗುಲ್ಬರ್ಗಾ ಜಿಲ್ಲೆಯಲ್ಲಿದ್ದರೆ ಶೇ.೨೩.೩೬ರಷ್ಟರ ವೈದ್ಯಕೀಯ ಸಂಸ್ಥೆಗಳು ರಾಯಚೂರು ಜಿಲ್ಲೆಯಲ್ಲಿವೆ. ೧೯೭೦೭೧ ಮತ್ತು ೧೯೯೦–೯೧ರ ಕಾಲಘಟ್ಟಗಳನ್ನು ಗಮನಿಸಿದಾಗ, ಬೀದರ್ ಮತ್ತು ರಾಯಚೂರು ಜಿಲ್ಲೆಗಳು, ವೈದ್ಯಕೀಯ ಸಂಸ್ಥೆಗಳ ಸಂಖ್ಯೆ ಕುರಿತಂತೆ ಮೇಲಿನ ಸ್ಥಾನಗಳಿಂದ ಕೆಳಗಿನ ಸ್ಥಾನಗಳಿಗೆ ಇಳಿದಿದ್ದರೆ, ಬಳ್ಳಾರಿ ಮತ್ತು ಬೀದರ್ ಜಿಲ್ಲೆಗಳ ಸ್ಥಾನದಲ್ಲಿ ಯಾವುದೇ ಬದಲಾವಣೆ ಉಂಟಾಗಿಲ್ಲ. ಹೈದ್ರಾಬಾದ್–ಕರ್ನಾಟಕ ಪ್ರದೇಶದ ರಾಯಚೂರು ಜಿಲ್ಲೆ ೧೯೯೧ರ ರಾಜ್ಯದ ಜನಸಂಖ್ಯೆಯಲ್ಲಿ ೮ನೇ ಸ್ಥಾನದಲ್ಲಿದ್ದರೆ ವೈದ್ಯಕೀಯ ಸಂಸ್ಥೆಗಳ ದೃಷ್ಟಿಯಲ್ಲಿ ಅದು ೧೮ನೇ ಸ್ಥಾನದಲ್ಲಿದೆ. ಬಳ್ಳಾರಿ ಮತ್ತು ಬೀದರ್ ಜಿಲ್ಲೆಗಳು ಜನಸಂಖ್ಯೆಯಲ್ಲಿ ಮತ್ತು ವೈದ್ಯಕೀಯ ಸಂಸ್ಥೆಗಳ ಸಂಖ್ಯೆಯಲ್ಲಿ ಒಂದೇ ತೆರನಾದ ಅಂದರೆ ೧೩ ಮತ್ತು ೧೯ನೇ ಸ್ಥಾನಗಳನ್ನು ಪಡೆದಿವೆ. ಗುಲ್ಬರ್ಗಾ ವಿಭಾಗದ ರಾಯಚೂರು ಜಿಲ್ಲೆಯು ಜನಸಂಖ್ಯೆಯ ಪ್ರಮಾಣಕ್ಕೆ ಅನುಗುಣವಾಗಿ ವೈದ್ಯಕೀಯ ಸಂಸ್ಥೆಗಳನ್ನು ಹೊಂದಿಲ್ಲವೆಂಬುದು ಮೇಲಿನ ವಿಶ್ಲೇಷಣೆಯಿಂದ ತಿಳಿಯುತ್ತದೆ. ೧೯೭೦–೭೧, ೧೯೮೦–೮೧ರ ಅವಧಿಯಲ್ಲಿ, ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ವೈದ್ಯಕೀಯ ಸಂಸ್ಥೆಗಳ ಸಂಖ್ಯೆಯಲ್ಲಿ ಹೆಚ್ಚಳವಾಗಿದೆ. ಹೆಚ್ಚಳದ ಪ್ರಮಾಣವು ಹೈದ್ರಾಬಾದ್– ಕರ್ನಾಟಕ ಪ್ರದೇಶದ ಜಿಲ್ಲೆಗಳಲ್ಲಿ ಅಧಿಕವಾಗಿದೆ. ಈ ಅವಧಿಯಲ್ಲಿ ಈ ಜಿಲ್ಲೆಗಳಲ್ಲಿ ಬೆಳವಣಿಗೆಗಿಂತಲೂ, ವೈದ್ಯಕೀಯ ಸಂಸ್ಥೆಗಳ ಸಂಖ್ಯೆಗಳ ಬೆಳವಣಿಗೆಯು ಅಧಿಕಗೊಂಡಿದೆ. ಉದಾಹರಣೆಗೆ ೧೯೭೧–೮೧ರ ಅವಧಿಯಲ್ಲಿ ಬೀದರ್ ಜಿಲ್ಲೆಯ ಜನಸಂಖ್ಯೆಯಲ್ಲಿ ಶೇ.೫೨.೩ರಷ್ಟು ಬೆಳವಣಿಗೆಯಾಗಿದ್ದರೆ ವೈದ್ಯಕೀಯ ಸಂಸ್ಥೆಗಳಲ್ಲಿ ಶೇಕಡ ೮೬.೯೫ರಷ್ಟು ಬೆಳವಣಿಗೆ ಕಂಡುಬಂದಿದೆ. ಈ ಅವಧಿಯಲ್ಲಿ ಗುಲ್ಬರ್ಗಾ ವಿಭಾಗದ ಬಳ್ಳಾರಿ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ ಗುಲ್ಬರ್ಗಾ ವಿಭಾಗಕ್ಕಿಂತಲೂ ಕಡಿಮೆ ವೈದ್ಯಕೀಯ ಸಂಸ್ಥೆಗಳ ಬೆಳವಣಿಗೆ ಕಂಡುಬಂದಿದ್ದರೆ, ಉಳಿದ ರಾಯಚೂರು ಮತ್ತು ಬೀದರ್ ಜಿಲ್ಲೆಗಳಲ್ಲಿ ಹೈದ್ರಾಬಾದ್ ಕರ್ನಾಟಕ ಪ್ರದೇಶಕ್ಕಿಂತಲೂ ಹೆಚ್ಚು ಬೆಳವಣಿಗೆ ಕಂಡುಬಂದಿದೆ.

೧೯೮೧–೧೯೯೧ರ ಅವಧಿಯಲ್ಲಿ ರಾಜ್ಯದ ಕೊಡಗು ಜಿಲ್ಲೆಯೊಂದನ್ನು ಹೊರತುಪಡಿಸಿದರೆ, ಉಳಿದೆಲ್ಲ ಜಿಲ್ಲೆಗಳಲ್ಲಿ ವೈದ್ಯಕೀಯ ಸಂಸ್ಥೆಗಳ ಸಂಖ್ಯೆಯಲ್ಲಿ ಹೆಚ್ಚಳ ಕಂಡುಬಂದಿದೆ. ರಾಜ್ಯದ ೫ ಜಿಲ್ಲೆಗಳಲ್ಲಿ ಈ ಅವಧಿಯಲ್ಲಿ ವೈದ್ಯಕೀಯ ಸಂಸ್ಥೆಗಳಲ್ಲಿ ಶೇ.೨೫ಕ್ಕಿಂತಲೂ ಅಧಿಕ ಬೆಳವಣಿಗೆ ಉಂಟಾಗಿದೆ. ಆ ಐದು ಜಿಲ್ಲೆಗಳಲ್ಲಿ ಹೈದ್ರಾಬಾದ್–ಕರ್ನಾಟಕ ಪ್ರದೇಶದ ಗುಲ್ಬರ್ಗಾ ಮತ್ತು ಬಳ್ಳಾರಿ ಜಿಲ್ಲೆಗಳು ಸೇರಿವೆ. ಇದೇ ಅವಧಿಯಲ್ಲಿ ಶೇ.೫ಕ್ಕಿಂತಲೂ ಕಡಿಮೆ ಬೆಳವಣಿಗೆ ಕಂಡ ಮೂರು ಜಿಲ್ಲೆಗಳಲ್ಲಿ ಗುಲ್ಬರ್ಗಾ ವಿಭಾಗದ ರಾಯಚೂರು ಜಿಲ್ಲೆಯು (ಶೇ.೩.೭೮) ಒಂದಾಗಿದೆ. ಗುಲ್ಬರ್ಗಾ ವಿಭಾಗದ ಬಳ್ಳಾರಿ, ಬೀದರ್ ಮತ್ತು ರಾಯಚೂರು ಜಿಲ್ಲೆಗಳಲ್ಲಿ ೧೯೮೧–೯೧ರ ಕಾಲಾವಧಿಯಲ್ಲಿ ಮೇಲಿನ ಅವಧಿಗೆ ಸಂಬಂಧಿಸಿದಂತೆ, ವೈದ್ಯಕೀಯ ಸಂಸ್ಥೆಗಳಲ್ಲಿಯ ಬೆಳವಣಿಗೆಯು ಸಾಪೇಕ್ಷವಾಗಿ ಜನಸಂಖ್ಯಾ ಬೆಳವಣಿಗೆಗಿಂತ ಕಡಿಮೆಯಿದೆ. ಗುಲ್ಬರ್ಗಾ ಜಿಲ್ಲೆಯಲ್ಲಿ

ವೈದ್ಯಕೀಯ ಸಂಸ್ಥೆಗಳಲ್ಲಿಯ ಬೆಳವಣಿಗೆಯು (ಶೇ.೩೪.೦೬) ಆ ಜಿಲ್ಲೆಯ ಜನಸಂಖ್ಯಾ ಬೆಳವಣಿಗೆಗಿಂತಲೂ (ಶೇ.೨೪.೦೮) ಅಧಿಕವಿದೆ. ವೈದ್ಯಕೀಯ ಸಂಸ್ಥೆಗಳ ಸಂಖ್ಯೆಗಳಿಗೆ ಸಂಬಂಧಿಸಿದಂತೆ ೧೯೮೧-೯೧ರ ಅವಧಿಯಲ್ಲಿ ಬಳ್ಳಾರಿ ಮತ್ತು ಗುಲ್ಬರ್ಗಾ ಜಿಲ್ಲೆಗಳು ಸಾಪೇಕ್ಷವಾಗಿ ಹೈದ್ರಾಬಾದ್-ಕರ್ನಾಟಕ ಪ್ರದೇಶ ಮತ್ತು ರಾಜ್ಯಕ್ಕಿಂತಲೂ ಅಧಿಕ ಬೆಳವಣಿಗೆ ಸಾಧಿಸಿದ್ದರೆ, ಬೀದರ್ ಮತ್ತು ರಾಯಚೂರು ಜಿಲ್ಲೆಗಳು, ಸಾಪೇಕ್ಷವಾಗಿ ಹೈದ್ರಾಬಾದ್-ಕರ್ನಾಟಕ ಪ್ರದೇಶ ಮತ್ತು ರಾಜ್ಯಕ್ಕಿಂತಲೂ ಕಡಿಮೆ ಬೆಳವಣಿಗೆಯನ್ನು ಸಾಧಿಸಿವೆ.

೬.೧೪ ಲಿಂಗಾನುಪಾತ

ಲಿಂಗಾನುಪಾತವು ಜನಸಂಖ್ಯಾ ಆರೋಗ್ಯದ ಒಂದು ಪ್ರಮುಖ ಸೂಚಿಯಾಗಿದೆ. ಇದು ಮಹಿಳೆಯರ ಸ್ಥಿತಿಗತಿ ಮತ್ತು ಅವರಿಗೆ ದೊರಕುವ ಮೂಲಭೂತ ಸೌಕರ್ಯಗಳ ತಾರತಮ್ಯದ ಸ್ಥಿತಿಯನ್ನು ಪ್ರತಿನಿಧಿಸುತ್ತದೆ.

ಕೋಷ್ಟಕ-೬.೨೦

ಲಿಂಗಾನುಪಾತ ಪ್ರವೃತ್ತಿಗಳು ೨೦೦೧-೨೦೧೧

ತಾಲ್ಲೂಕುಗಳು	೨೦೦೧			೨೦೧೧			ಬದಲಾವಣೆ		
	ಒಟ್ಟು	ಗ್ರಾಮೀಣ	ನಗರ	ಒಟ್ಟು	ಗ್ರಾಮೀಣ	ನಗರ	ಒಟ್ಟು	ಗ್ರಾಮೀಣ	ನಗರ
ದೇವದುರ್ಗ	೯೮೨	೯೮೬	೯೪೪	೧೦೦೨	೧೦೦೫	೯೭೮	೨೦	೧೯	೩೪
ಲಿಂಗಸೂಗೂರು	೯೭೪	೯೮೧	೯೫೨	೯೮೪	೯೮೫	೯೮೪	೧೦	೪	೩೨
ಮಾನವಿ	೯೯೨	೯೯೪	೯೭೩	೧೦೧೩	೧೦೧೫	೯೯೮	೨೧	೨೧	೨೪
ರಾಯಚೂರು	೯೭೩	೯೮೯	೯೫೯	೯೯೮	೧೦೦೮	೯೮೯	೨೫	೧೯	೩೦
ಸಿಂಧನೂರು	೯೯೮	೧೦೦೭	೯೫೫	೧೦೦೩	೧೦೦೬	೯೯೪	೫	–೨	೩೯
ಜಿಲ್ಲೆ	೯೮೩	೯೯೨	೯೫೮	೧೦೦೦	೧೦೦೪	೯೮೯	೧೬	೧೧	೩೧
ಕರ್ನಾಟಕ	೯೬೫	೯೭೭	೯೪೨	೯೭೩	೯೭೯	೯೬೩	೮	೨	೨೧

ಮೂಲ:- ಜನಗಣತಿ, ೨೦೧೧ ಕರ್ನಾಟಕ ಸರಕಾರ ಬೆಂಗಳೂರು, ಮತ್ತು ಸಾಂಖ್ಯಿಕ ಇಲಾಖೆ, ರಾಯಚೂರು

ಈ ಮೇಲಿನ ಕೋಷ್ಟಕದಲ್ಲಿ ೨೦೦೧ ಮತ್ತು ೨೦೧೧ರಲ್ಲಿ ರಾಯಚೂರು ಜಿಲ್ಲೆಯಲ್ಲಿ ಇರುವ ಲಿಂಗಾನುಪಾತದ ಮಾಹಿತಿಯನ್ನು ಒದಗಿಸುತ್ತದೆ. ಪ್ರತಿ ಸಾವಿರ ಪುರುಷರಿಗೆ ಇರುವ ಮಹಿಳೆಯರ ಸಂಖ್ಯೆಯನ್ನು ಲಿಂಗ ಅನುಪಾತವೆಂದು ವ್ಯಾಖ್ಯಾನಿಸಿದ್ದು, ಇದು ಕರ್ನಾಟಕ ರಾಜ್ಯದಲ್ಲಿ ಪ್ರತಿಕೂಲವಾಗಿದ್ದರೂ ರಾಯಚೂರು ಜಿಲ್ಲೆಯಲ್ಲಿ ಅನುಕೂಲಕರವಾಗಿದೆ. ಕಳೆದ ದಶಕದಲ್ಲಿ ಲಿಂಗ ಅನುಪಾತವು ರಾಜ್ಯಮಟ್ಟದಲ್ಲಿ ೮ ಅಂಕಗಳಷ್ಟು ಏರಿದ್ದರೆ, ರಾಯಚೂರು ಜಿಲ್ಲೆಯಲ್ಲಿ ೧೬ ಅಂಕಗಳಷ್ಟು ಹೆಚ್ಚಳವಾಗಿದೆ. ಇದು ಜಿಲ್ಲೆಯ ಜನಸಂಖ್ಯೆಯ ಗುಣಾತ್ಮಕತೆ ಸುಧಾರಿಸಿದೆ ಎಂದು ಹೇಳಬಹುದು. ಇದು ಕಳೆದ ಕೆಲವು ವರ್ಷಗಳಲ್ಲಿ ಸರಕಾರ ಹಮ್ಮಿಕೊಂಡ ಕಾರ್ಯಕ್ರಮಗಳ ಕಾರಣದಿಂದ ಕಂಡುಬಂದ ಫಲಿತಾಂಶ ಎಂದು ಹೇಳಬಹುದು. ತಾಲ್ಲೂಕುವಾರು ಮಾಹಿತಿ ಗಮನಿಸಿದಾಗ ೨೦೦೧ ಹಾಗೂ ೨೦೧೧ ಎರಡು ವರ್ಷಗಳಲ್ಲಿ ಮಾನವಿ, ಸಿಂಧನೂರು, ಹಾಗೂ ದೇವದುರ್ಗ ತಾಲ್ಲೂಕುಗಳು ಜಿಲ್ಲಾ ಮಟ್ಟಕ್ಕಿಂತ ಅಧಿಕ ಪ್ರಮಾಣದ ಲಿಂಗ ಅನುಪಾತವು

ಹೊಂದಿದ್ದವು. ಮತ್ತೊಂದು ಗಮನಾರ್ಹವಾದ ಸಂಗತಿಯೆಂದರೆ ನಾಲ್ಕು ತಾಲ್ಲೂಕುಗಳಲ್ಲಿ ಲಿಂಗ ಅನುಪಾತವು ೧೦೦೦ಕ್ಕಿಂತ ಹೆಚ್ಚಾಗಿರುವುದು. ನಗರ ಪ್ರದೇಶದಲ್ಲಿನ ಲಿಂಗ ಅನುಪಾತವು ರಾಜ್ಯಮಟ್ಟದ ಹೆಚ್ಚಳಕ್ಕಿಂತ ಗಮನಾರ್ಹವಾಗಿ ಹೆಚ್ಚಾಗಿರುವುದನ್ನು ನೋಡಬಹುದಾಗಿದೆ. ನಗರ ಪ್ರದೇಶದ ಲಿಂಗ ಅನುಪಾತವು ೩೧ ಅಂಕಗಳಷ್ಟು ಹೆಚ್ಚಾಗಿದ್ದರೆ, ಗ್ರಾಮೀಣ ಪ್ರದೇಶದಲ್ಲಿ ೧೧ ಅಂಕಗಳಷ್ಟು ಹೆಚ್ಚಾಗಿದೆ. ಎಲ್ಲಾ ತಾಲ್ಲೂಕುಗಳ ನಗರ ಲಿಂಗಾನುಪಾತ ಹೆಚ್ಚಳವಾಗಿದ್ದರೆ, ಸಿಂಧನೂರಿನಲ್ಲಿ ಗ್ರಾಮೀಣ ಲಿಂಗಾನುಪಾತವು ಕಡಿಮೆಯಾಗಿದೆ. ಆದ್ದರಿಂದ ಈಗಿರುವ ಅನುಕೂಲತೆಯನ್ನು ಉಳಿಸಿಕೊಂಡು ಎಲ್ಲ ಪ್ರದೇಶದಲ್ಲಿ ಲಿಂಗ ಅನುಪಾತವನ್ನು ಸುಧಾರಿಸುವ ಪ್ರಯತ್ನ ಮಾಡಬೇಕಾಗಿದೆ.

ಜನಸಂಖ್ಯೆಯ ಗುಣಮಟ್ಟವನ್ನು ನಿರ್ಧರಿಸುವುದಕ್ಕಾಗಿ ೦-೬ ವರ್ಷ ವಯೋಮಾನದವರ ಲಿಂಗ ಅನುಪಾತವು ಪ್ರಮುಖವಾಗಿ ಬಳಸಲ್ಪಡುತ್ತದೆ. ಆದ್ದರಿಂದ ಮಕ್ಕಳ ಲಿಂಗ ಅನುಪಾತವು ಈ ಕೋಷ್ಟಕದಲ್ಲಿ ನೀಡಲಾಗಿದೆ.

ಕೋಷ್ಟಕ-೬.೨೧

ರಾಯಚೂರು ಜಿಲ್ಲೆಯ ಸಾಮಾನ್ಯ ಮತ್ತು ಮಕ್ಕಳ ಲಿಂಗಾನುಪತದಲ್ಲಿನ ಪ್ರವೃತ್ತಿಗಳು ೨೦೦೧-೨೦೧೧

ಮಕ್ಕಳ ಲಿಂಗಾನುಪಾತ									
ತಾಲ್ಲೂಕುಗಳು	೨೦೦೧			೨೦೧೧			ಬದಲಾವಣೆ		
	ಒಟ್ಟು	ಗ್ರಾಮೀಣ	ನಗರ	ಒಟ್ಟು	ಗ್ರಾಮೀಣ	ನಗರ	ಒಟ್ಟು	ಗ್ರಾಮೀಣ	ನಗರ
ದೇವದುರ್ಗ	೯೭೦	೯೭೫	೯೨೫	೯೬೨	೯೬೫	೯೪೦	-೭	-೧೦	೧೫
ಲಿಂಗಸೂಗೂರು	೯೫೪	೯೫೯	೯೨೯	೯೪೫	೯೪೦	೯೬೩	-೯	-೧೯	೩೪
ಮಾನವಿ	೯೭೧	೯೬೬	೧೦೦೪	೯೫೪	೯೫೫	೯೪೯	-೧೭	-೧೨	-೫೫
ರಾಯಚೂರು	೯೬೧	೯೮೧	೯೩೮	೯೪೬	೯೫೨	೯೪೦	-೧೫	-೨೯	೧
ಸಿಂಧನೂರು	೯೬೯	೯೬೮	೯೭೫	೯೪೮	೯೪೪	೯೬೮	-೨೦	-೨೩	-೭
ಜಿಲ್ಲೆ	೯೬೪	೯೬೯	೯೪೮	೯೫೦	೯೫೧	೯೪೯	-೧೪	-೧೮	೧
ಕರ್ನಾಟಕ	೯೪೬	೯೪೯	೯೪೦	೯೪೮	೯೫೦	೯೪೬	೨	೧	೬

ಮೂಲ:- ಆಯಾ ವರ್ಷಗಳ ಜನಗಣತಿ ದಾಖಲೆಗಳಿಂದ ಲೆಕ್ಕಹಾಕಲಾಗಿದೆ.

ಸಾಮಾನ್ಯ ಲಿಂಗಾನುಪಾತಕ್ಕೆ ಹೋಲಿಸಿ ನೋಡಿದಾಗ ಮಕ್ಕಳ ಲಿಂಗಾನುಪಾತವೂ ರಾಜ್ಯ ಮಟ್ಟಕ್ಕಿಂತ ಹೆಚ್ಚಿಗೆ ಇದೆ. ಆದರೆ ನಗರ ಪ್ರದೇಶದಲ್ಲಿನ ಮಕ್ಕಳ ಲಿಂಗಾನುಪಾತವು ಸಾಮಾನ್ಯ ಲಿಂಗಾನುಪಾತಕ್ಕೆ ಹೋಲಿಸಿದರೆ ಪ್ರತಿಕೂಲವಾಗಿರುವುದಲ್ಲದೇ ೨೦೦೧-೨೦೧೧ರ ಅವಧಿಯಲ್ಲಿ ಕಡಿಮೆಯಾಗಿದೆ. ಗ್ರಾಮೀಣ ಲಿಂಗಾನುಪಾತವು ೧೮ರಷ್ಟು ಕಡಿಮೆಯಾದರೆ, ನಗರ ಪ್ರದೇಶದ ಲಿಂಗಾನುಪಾತವು ೧ರಷ್ಟು ಮಾತ್ರ ಹೆಚ್ಚಳವಾಗಿದೆ. ದೇವದುರ್ಗ ಹಾಗೂ ಮಾನವಿ ತಾಲ್ಲೂಕುಗಳನ್ನು ಹೊರತುಪಡಿಸಿ ಉಳಿದ ತಾಲೂಕುಗಳಲ್ಲಿ ಅದು ೯೫೦ಕ್ಕಿಂತ ಕಡಿಮೆಯಿದೆ. ಮಾನವಿ ತಾಲೂಕಿನ ನಗರ ಲಿಂಗಾನುಪಾತದಲ್ಲಿನ ಕುಸಿತವು ಹೆಚ್ಚಳವಾಗಿದೆ. ಆದ್ದರಿಂದ ಎಲ್ಲ ಕಡೆ ಮಕ್ಕಳ ಲಿಂಗಾನುಪಾತವನ್ನು ಹೆಚ್ಚಿಸುವ ಕಾರ್ಯಕ್ರಮಗಳನ್ನು ಪ್ರಚುರ ಪಡಿಸಬೇಕಾಗಿದೆ.

[illegible]

ಕೋಷ್ಟಕ-೬.೨೨

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಲಿಂಗಾನುಪಾತ ೨೦೦೧-೨೦೧೧

ತಾಲ್ಲೂಕುಗಳು	ಪರಿಶಿಷ್ಟ ಜಾತಿ		ಬದಲಾವಣೆ	ಪರಿಶಿಷ್ಟ ಪಂಗಡ		ಬದಲಾವಣೆ
	೨೦೦೧	೨೦೧೧		೨೦೦೧	೨೦೧೦	
ದೇವದುರ್ಗ	೯೮೦	೯೬೬	೧೬	೯೮೫	೧೦೦೮	೨೩
ಲಿಂಗಸೂಗೂರು	೯೭೮	೯೭೮	-	೯೭೮	೧೦೦೦	೨೨
ಮಾನವಿ	೯೯೯	೧೦೧೪	೧೮	೧೦೦೧	೧೦೨೮	೨೭
ರಾಯಚೂರು	೯೮೫	೧೦೦೫	೨೦	೯೮೬	೧೦೧೮	೩೨
ಸಿಂಧನೂರು	೧೦೧೫	೧೦೧೫	-	೧೦೧೪	೧೦೨೬	೧೨
ಜಿಲ್ಲೆ	೯೯೧	೧೦೦೧	೧೦	೯೯೩	೧೦೧೬	೨೩
ಕರ್ನಾಟಕ	೯೭೩	೯೯೦	೧೭	೯೭೨	೯೯೦	೧೮

ಮೂಲ: ಆಯಾ ವರ್ಷಗಳ ಜನಗಣತಿ ದಾಖಲೆಗಳಿಂದ ಲೆಕ್ಕ ಹಾಕಿದೆ.

ಈ ಜಿಲ್ಲೆಯಲ್ಲಿನ ಸಾಮಾಜಿಕ ಸಮೂಹಗಳ ಲಿಂಗಾನುಪಾತವನ್ನು ವಿಶ್ಲೇಷಿಸಿದಾಗ ಕಂಡುಬರುವ ಸಂಗತಿಯೆಂದರೆ, ಪರಿಶಿಷ್ಟ ಜಾತಿ ಸಮುದಾಯದವರ ಲಿಂಗಾನುಪಾತವು ಪರಿಶಿಷ್ಟ ಪಂಗಡಗಳ ಲಿಂಗಾನುಪಾತಕ್ಕಿಂತ ಕಡಿಮೆಯಿದೆ. ೨೦೦೧ ಹಾಗೂ ೨೦೧೧ ಎರಡು ವರ್ಷಗಳಲ್ಲಿ ಈ ಎರಡೂ ವರ್ಗದವರ ಲಿಂಗಾನುಪಾತವು ರಾಜ್ಯಮಟ್ಟಕ್ಕಿಂತ ಹೆಚ್ಚಾಗಿರುವುದನ್ನು ಕಾಣಬಹುದು. ಸಾಮಾನ್ಯ ಲಿಂಗಾನುಪಾತದ ರೀತಿಯಲ್ಲಿಯೇ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಲಿಂಗಾನುಪಾತಗಳು ದೇವದುರ್ಗ ಮತ್ತು ಲಿಂಗಸೂಗೂರು ತಾಲೂಕುಗಳನ್ನು ಹೊರತುಪಡಿಸಿ ಉಳಿದಂತೆ ಜಿಲ್ಲೆಯಾದ್ಯಂತ ಅನುಕೂಲಕರವಾಗಿದೆ. ಪರಿಶಿಷ್ಟ ಪಂಗಡದವರಲ್ಲಿನ ಲಿಂಗಾನುಪಾತವು ಗಣನೀಯವಾಗಿ ಹೆಚ್ಚಳವಾಗಿರುವುದನ್ನು ಗಮನಿಸಬಹುದು.

೬.೧೫ ಶಿಶು ಮರಣ ದರ ಮತ್ತು ತಾಯಂದಿರ ಮರಣ ದರ

ಜನರ ಆರೋಗ್ಯ ಸ್ಥಿತಿಯ ಮಾಪನಕ್ಕೆ ಯುನ್‌ಡಿಪಿಯಲ್ಲದೇ ರಾಷ್ಟ್ರೀಯ ಮತ್ತು ರಾಜ್ಯಮಟ್ಟದಲ್ಲಿ ಜನನದ ಸಮಯದ ಆಯುಷ್ಯವನ್ನು ಬಳಸಲಾಗುತ್ತದೆ. ಆದರೆ ತಳಮಟ್ಟದಲ್ಲಿ ಅದನ್ನು ಅಂದಾಜಿಸುವುದು ಸುಲಭವಲ್ಲ. ಆದ್ದರಿಂದ ಈ ಉದ್ದೇಶಕ್ಕಾಗಿ ಆ ಹಂತದಲ್ಲಿ ಲಭ್ಯವಿರುವ ವಿವಿಧ ಮರಣ ದರಗಳನ್ನು, ಅಂದರೆ ಶಿಶು, ಮಕ್ಕಳ ಮತ್ತು ತಾಯಂದಿರ ಮರಣ ದರಗಳನ್ನು ಬಳಸಲಾಗುತ್ತದೆ. ಶಿಶು ಮರಣ ದರವು (ಶಿ.ಮ.ದ) ಪ್ರತಿ ೧೦೦೦ ಜನನಗಳಿಗೆ ಜನಿಸಿದ ಒಂದು ವರ್ಷದ ಅವಧಿಯಲ್ಲಿ ಮರಣ ಹೊಂದುವ ಮಕ್ಕಳ ಸಂಖ್ಯೆಯಾದರೆ ಪ್ರತಿ ೧೦೦೦ ಜನನಗಳಿಗೆ ಜನಿಸಿದ ಐದು ವರ್ಷ ವಯಸ್ಸಿನ ಒಳಗೆ ಮರಣ ಹೊಂದುವ ಮಕ್ಕಳ ಸಂಖ್ಯೆಯಾಗಿದೆ. ತಾಯಂದಿರ ಮರಣ ದರವು (ತಾ.ಮ.ದ) ಪ್ರತಿ ೧ಲಕ್ಷ ಸಜೀವ ಜನನಗಳಿಗೆ ಮರಣ ಹೊಂದಿದ ತಾಯಂದಿರ ಸಂಖ್ಯೆಯಾಗಿದೆ. ಆಯಾ ಜನರಿಗೆ ಲಭ್ಯವಿರುವ ಆರೋಗ್ಯ ಸೌಕರ್ಯಗಳಲ್ಲದೇ ಅವುಗಳ ಬಳಕೆಯ ಪ್ರಮಾಣವನ್ನು ಈ ದರಗಳು ಬಿಂಬಿಸಲು ಬಳಸಲಾಗುತ್ತದೆ. ಆದರೆ ಈ ಮಾಹಿತಿ ಮೂಲಗಳಲ್ಲಿದ್ದ ಸಮಸ್ಯೆಗಳನ್ನು ಪರಿಹರಿಸಲು ಮಾನವ ಅಭಿವೃದ್ಧಿ ವಿಭಾಗವು ೨೦೧೧-೧೨ರ ಸಾಲಿಗೆ ಸ್ಯಾಂಪಲ್ ನೋಂದಣಿ ವ್ಯವಸ್ಥೆಯ ಮಾಹಿತಿಯನ್ನಾಧರಿಸಿ ಸದರಿ ಮರಣ ದರಗಳ ಲೆಕ್ಕ ಹಾಕಿದ್ದು ಅವುಗಳನ್ನೇ ಈ ವರದಿಯಲ್ಲಿ ಬಳಸಲಾಗಿದೆ. ಇವುಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಚಿತ್ರ ೫.೧ರಲ್ಲಿ ನೀಡಲಾಗಿದೆ.

ರಾಯಚೂರು ಜಿಲ್ಲೆಯಲ್ಲಿ ೨೦೧೧-೧೨ರಲ್ಲಿ ೦-೧ ವರ್ಷದ ಅವಧಿಯಲ್ಲಿ ಮೃತಪಟ್ಟ ಮಕ್ಕಳ ಸಂಖ್ಯೆ ೧೦೦೦ ಜನನಗಳಿಗೆ ೬೭ ಎಂದು ವರದಿಯಾಗಿದೆ. ಇದು ತುಂಬಾ ಅಧಿಕ ಮೌಲ್ಯವಲ್ಲದಿದ್ದರೂ ರಾಜ್ಯದ ಜಿಲ್ಲೆಗಳ ಪೈಕಿ ದಾಖಲಾದ ಮೌಲ್ಯ ಕನಿಷ್ಠ ೧೪ ಇದ್ದು, ರಾಯಚೂರು ಜಿಲ್ಲೆಯ ಶಿಶು ಮರಣ ದರ ಅದರ ಸುಮಾರು ಐದು ಪಟ್ಟು ಇದ್ದದ್ದು ಆತಂಕಕ್ಕೆ ಎಡೆ ಮಾಡಿಕೊಡುತ್ತದೆ. ರಾಯಚೂರು ತಾಲೂಕಿನಲ್ಲಿ ಶಿಶು ಮರಣ ದರವು ಗರಿಷ್ಠವಾಗಿದ್ದು, ಮಾನವಿ ತಾಲೂಕಿನಲ್ಲಿಯೂ ಅದು ಅಧಿಕವಿದೆ.

ಕೋಷ್ಟಕ-೬.೨೩


ರಾಯಚೂರು ಜಿಲ್ಲೆಯ ಪ.ಜಾತಿ ಮತ್ತು ಪ.ಪಂಗಡ ಜನಸಂಖ್ಯೆಯಲ್ಲಿನ ಲಿಂಗಾನುಪಾತ, ೨೦೦೧ ಮತ್ತು ೨೦೧೧

ತಾಲ್ಲೂಕುಗಳು	ಪರಿಶಿಷ್ಟ ಜಾತಿ		ಬದಲಾವಣೆ	ಪರಿಶಿಷ್ಟ ಪಂಗಡ		ಬದಲಾವಣೆ
	೨೦೦೧	೨೦೧೧		೨೦೦೧	೨೦೧೦	
ದೇವದುರ್ಗ	೯೮೦	೯೬೬	೧೪	೯೮೫	೧೦೦೮	೨೩
ಲಿಂಗಸೂಗೂರು	೯೭೮	೯೭೮	–	೯೭೮	೧೦೦೦	೨೨
ಮಾನವಿ	೯೯೯	೧೦೧೪	೧೮	೧೦೦೧	೧೦೨೮	೨೭
ರಾಯಚೂರು	೯೮೫	೧೦೦೫	೨೦	೯೮೬	೧೦೧೮	೩೨
ಸಿಂಧನೂರು	೧೦೧೫	೧೦೧೫	–	೧೦೧೪	೧೦೨೬	೧೨
ಜಿಲ್ಲೆ	೯೯೧	೧೦೦೧	೧೦	೯೯೩	೧೦೧೬	೨೩
ಕರ್ನಾಟಕ	೯೭೩	೯೯೦	೧೭	೯೭೨	೯೯೦	೧೮

ಮೂಲ: ಆಯಾ ವರ್ಷಗಳ ಜನಗಣತಿ ದಾಖಲೆಗಳಿರುವ ಲೆಕ್ಕ ಹಾಕಿದೆ.

ರಾಯಚೂರು ಜಿಲ್ಲೆಯಲ್ಲಿನ ಶಿಶು ಹಾಗೂ ಮಕ್ಕಳ ಮರಣ ಪ್ರಮಾಣಗಳು, ೨೦೧೧-೧೨

ಸ್ತಂಭಾ ಚಿತ್ರ-೬.೨೪



ಮೂಲ: ಆರೋಗ್ಯ ನಿರ್ವಹಣೆ ಮಾಹಿತಿ ವ್ಯವಸ್ಥೆ, ರಾಯಚೂರು

ಜಿಲ್ಲೆಯಲ್ಲಿನ ಮಕ್ಕಳ ಮರಣ ದರವು (ಮಕ್ಕಳ ಮರಣ ದರ) ೭೭ ಇದ್ದು ಅದು ರಾಜ್ಯದಲ್ಲಿಯೆ ಗರಿಷ್ಠವಿದೆಯಲ್ಲದೇ ಸಿಂಧನೂರು ಹಾಗೂ ರಾಯಚೂರು ತಾಲೂಕುಗಳಲ್ಲಿ ರಾಜ್ಯಮಟ್ಟದ ದರಕ್ಕಿಂತ ಅಧಿಕವಿದೆ. ಲಿಂಗಸೂಗೂರು ತಾಲೂಕಿನಲ್ಲಿ ಅದು ಜಿಲ್ಲೆಗೆ ಕನಿಷ್ಠವಿದ್ದು ೭೦ ಇದೆ. ಆದರೆ, ರಾಜ್ಯದ ಉಳಿದೆಡೆಗಿರುವ ಮೌಲ್ಯವನ್ನು ಗಮನಿಸಿದರೆ ತೀವ್ರತೆರನಾದ ಕ್ರಮಗಳ ಅವಶ್ಯಕತೆಯಿದೆ. ಅದೇ ರೀತಿಯಾಗಿ ರಾಯಚೂರು ಜಿಲ್ಲೆಯಲ್ಲಿ ತಾಯಂದಿರ ಮರಣ ದರ ಪ್ರತಿ ಒಂದು ಲಕ್ಷ ಜನನಗಳಿಗೆ ૩೪೪ ತಾಯಂದಿರು ಮರಣ ಹೊಂದುತ್ತಾರೆ ಎಂದು ವರದಿಯಾಗಿದೆ. ಇದೂ ಸಹ ಅಧಿಕವಾಗಿರುವುದು ಮಾನವ ಅಭಿವೃದ್ಧಿ ಸಾಧನೆಗೆ ಅಡ್ಡಿಯಾಗಿದೆ ಎಂದೇ ಹೇಳಬಹುದು. ತಾಯಂದಿರ ಮರಣ ದರಗಳಲ್ಲೂ ಸಹ ರಾಯಚೂರು ಮತ್ತು ಸಿಂಧನೂರು ತಾಲೂಕುಗಳ ಮೌಲ್ಯಗಳು ಹೆಚ್ಚಾಗಿದ್ದು ಲಿಂಗಸುಗೂರು ಮತ್ತು ದೇವದುರ್ಗ ತಾಲೂಕುಗಳಲ್ಲಿ ಅದು ಕಡಿಮೆಯಿದೆ.

೬.೧೬ ದಂಪತಿಗಳನ್ನು ರಕ್ಷಿಸುವ ಹಾಗೂ ಕುಟುಂಬ ಕಲ್ಯಾಣಕ್ಕೆ ಸಂಬಂಧಿಸಿದ ವಿಷಯಗಳು

ಅನಪೇಕ್ಷಿತ ಗರ್ಭಧಾರಣೆಯನ್ನು ತಡೆಗಟ್ಟುವ ಮತ್ತು ಎರಡು ಹೆರಿಗೆಗಳ ಮಧ್ಯೆ ಸಾಕಷ್ಟು ಕಾಲಾವಕಾಶ ಹೊಂದುವ ಅವಕಾಶವು ಮಹಿಳೆಯರ ಮತ್ತು ಮಕ್ಕಳ ಆರೋಗ್ಯವನ್ನು ನಿರ್ಧರಿಸುವ ಒಂದು ಪ್ರಮುಖ ಅಂಶವಾಗಿದೆ. ಗರ್ಭನಿರೋಧಕಗಳನ್ನು ಎಲ್ಲ ಅರ್ಹ ದಂಪತಿಗಳಿಗೆ ಎಲ್ಲೆಡೆಗೂ ಲಭ್ಯವಾಗುವ ಹಾಗೆ ಮಾಡುವುದರಿಂದ ಇದನ್ನು ಸಾಧಿಸಬಹುದಾಗಿದೆ. ಆದರೆ ಇದನ್ನೇ ಗುರಿಯಾಗಿಸಿಕೊಂಡು ಅನುಷ್ಠಾನಗೊಳಿಸಲ್ಪಟ್ಟ ಭಾರತದ ಕುಟುಂಬ ಕಲ್ಯಾಣ ಕಾರ್ಯಕ್ರಮದ ಒಂದು ವಿಫಲತೆ ಎಂದರೆ ಗರ್ಭನಿರೋಧಕಗಳನ್ನು ಬಳಸುವವರ ಪ್ರಮಾಣ ಕಡಿಮೆ ಇರುವುದು. ಸಾಕಷ್ಟು ಪ್ರಮಾಣದ ದಂಪತಿಗಳಿಗೆ ಬೇಡವಾದ ಗರ್ಭವನ್ನು ತಡೆಯುವ ಮಾರ್ಗೋಪಾಯಗಳು ಗೊತ್ತಿರುವುದಿಲ್ಲ. ಅಥವಾ ಗೊತ್ತಿದ್ದರೂ ಸೂಕ್ತ ಸಾಧನಗಳು ಅವರಿಗೆ ಲಭ್ಯವಿರುವುದಿಲ್ಲ. ಇದರ ಪರಿಣಾಮವಾಗಿ ಅನವಶ್ಯಕ ಜನನಗಳ ಮತ್ತು ಗರ್ಭಪಾತಗಳ ಸಂಖ್ಯೆ ಏರಿಕೆಯಾಗುವುದು. ಹೀಗಾದಾಗ ಒಂದೆಡೆ ಜನಸಂಖ್ಯೆ ತೀವ್ರವಾಗಿ ಹೆಚ್ಚಾಗುವುದಾದರೆ ಇನ್ನೊಂದೆಡೆ ತಾಯಿ ಮತ್ತು ಮಗುವಿನ ಆರೋಗ್ಯ ಕ್ಷೀಣಿಸಿ, ಒಟ್ಟಾರೆ ಸಾಮಾಜಿಕ ವೆಚ್ಚ ಏರುತ್ತದೆ. ಆದ್ದರಿಂದ ಗರ್ಭನಿರೋಧಕಗಳ "ಈಡೇರಿಸದ ಬೇಡಿಕೆ"ಯನ್ನು ಪರಿಹರಿಸಿದರೆ, ತಾಯಿ ಮತ್ತು ಮಗುವಿನ ಮತ್ತು ಒಟ್ಟಾರೆ ಸಮಾಜದ ಸ್ವಾಸ್ಥ್ಯವನ್ನು ಸಾಕಷ್ಟು ಪ್ರಮಾಣದಲ್ಲಿ ಸುಧಾರಿಸಬಹುದಾಗಿದೆ. ಭಾರತ ಸರಕಾರ ಕುಟುಂಬ ಕಲ್ಯಾಣ ಕಾರ್ಯಕ್ರಮಗಳ ಮೂಲಕ ಗರ್ಭನಿರೋಧಕಗಳನ್ನು ಒದಗಿಸುವ ಕ್ರಮಗಳನ್ನು ಕೈಗೊಂಡಿದೆ.

ಜಿಲ್ಲಾ ಆರೋಗ್ಯ ಮಾಹಿತಿ ನಿರ್ವಹಣೆ ವ್ಯವಸ್ಥೆಯು ನೀಡಿದ ಮಾಹಿತಿಯ ಆಧಾರದ ಮೇಲೆ ೨೦೧೧-೧೨ರಲ್ಲಿ ಯಾವುದೇ ತೆರನಾದ ಗರ್ಭನಿರೋಧಕಗಳನ್ನು ಬಳಸುವ ಶೇಕಡವಾರು ದಂಪತಿಗಳ ಪ್ರಮಾಣವು ಶೇ.೭೪ರಷ್ಟು ಇದ್ದು, ಉಳಿದ ಶೇ. ೨೬ರಷ್ಟು ದಂಪತಿಗಳು ಯಾವುದೇ ಗರ್ಭನಿರೋಧಕಗಳನ್ನು ಬಳಸುತ್ತಿಲ್ಲ. ವಾಸ್ತವವಾಗಿ ರಾಜ್ಯದ ಇತರೇ ಜಿಲ್ಲೆಗಳಲ್ಲಿ ಈ ಪ್ರಮಾಣವು

[illegible]

ಗರಿಷ್ಠ ಶೇ.೮೩ರಷ್ಟಿದ್ದು ಇದಕ್ಕೆ ಹೋಲಿಸಿದಾಗ ರಾಯಚೂರು ಜಿಲ್ಲೆಯ ಸಾಧನೆ ಪ್ರೋತ್ಸಾಹಕರವಾಗಿಲ್ಲದಿರುವುದು ಕಂಡು ಬರುತ್ತದೆ. ತಾಲೂಕುವಾರು ದೇವದುರ್ಗ ಮತ್ತು ಲಿಂಗಸುಗೂರು ತಾಲೂಕುಗಳ ಶೇ.೮೦ರಷ್ಟು ದಂಪತಿಗಳು ಗರ್ಭನಿರೋಧಕಗಳನ್ನು ಬಳಸುತ್ತಿದ್ದು, ಮಾನವಿಯಲ್ಲಿ ಶೇ.೬೫; ಸಿಂಧನೂರಿನಲ್ಲಿ ಶೇ.೭೫ ಮತ್ತು ರಾಯಚೂರಿನಲ್ಲಿ ಈ ಪ್ರಮಾಣ ಶೇ.೭೦ರಷ್ಟಿದೆ. ಹೀಗೆ ಈಡೇರಿಸದ ಬೇಡಿಕೆಯ ಪ್ರಮಾಣವು ದೇವದುರ್ಗ ತಾಲೂಕಿನಲ್ಲಿ ಶೇ.೧೮ರಷ್ಟಿದ್ದು ಮಾನವಿ ತಾಲೂಕಿನಲ್ಲಿ ಶೇ.೩೫ರಷ್ಟಿದೆ. ಇದನ್ನು ಸರಿಪಡಿಸಿ ಎಲ್ಲ ಯೋಗ್ಯ ದಂಪತಿಗಳನ್ನು ಕುಟುಂಬ ಯೋಜನೆಯ ಪರಿಧಿಯಲ್ಲಿ ತರಲು ಕ್ರಮ ಕೈಗೊಳ್ಳುವುದು ಬಹಳ ಅಗತ್ಯದ ಕಾರ್ಯವಾಗಿದೆ. ಇದರಿಂದ ಜನಸಂಖ್ಯೆಯ ಬೆಳವಣಿಗೆಯಲ್ಲಿ ಕಡಿತವಲ್ಲದೇ, ಮಹಿಳೆಯರ ಹಾಗೂ ಮಕ್ಕಳ ಆರೋಗ್ಯ ಸುಧಾರಿಸುತ್ತದೆ.

೨೦೧೧–೧೨ನೇ ಸಾಲಿನ ರಾಯಚೂರು ಜಿಲ್ಲೆಯಲ್ಲಿ ಬಳಕೆಯಾದ ವಿವಿಧ ಗರ್ಭನಿರೋಧಕಗಳ ವಿಧಾನಗಳ ಶೇಕಡಾವಾರು ಹಂಚಿಕೆಯನ್ನು ಗಮನಿಸಿದಾಗ ದೇಶದಲ್ಲಿ ಬೇರೆಡೆಯಲ್ಲಿರುವಂತೆ ರಾಯಚೂರು ಜಿಲ್ಲೆಯಲ್ಲಿ ಮಹಿಳಾ ಸಂತಾನಹರಣ ಶಸ್ತ್ರಚಿಕಿತ್ಸೆಯು ಪ್ರಮುಖ ಜನನ ನಿಯಂತ್ರಣ ಸಾಧನವಾಗಿದೆ. ತದನಂತರ ವಂಕಿ ವಿಧಾನವನ್ನು ದಂಪತಿಗಳು ಅಳವಡಿಸಿಕೊಂಡಿದ್ದಾರೆ. ಹೀಗಾಗಿ ಶೇ.೬೩ರಷ್ಟು ಜನನ ನಿಯಂತ್ರಣದ ವಿಧಾನಗಳ ಭಾರವನ್ನು ಮಹಿಳೆಯರೇ ಹೊತ್ತುಕೊಂಡಿದ್ದು ಈ ಕುಟುಂಬ ಯೋಜನೆಯ ಪದ್ಧತಿಗಳು ಲಿಂಗ ಪಕ್ಷಪಾತವನ್ನು ಸೂಚಿಸುತ್ತವೆ. ಪುರುಷರೂ ಸಹ ಸ್ವ–ಇಚ್ಛೆಯಿಂದ ಜನನ ನಿಯಂತ್ರಣ ಚಟುವಟಿಕೆಯಲ್ಲಿ ಭಾಗವಹಿಸಿದರೆ ಗರ್ಭ ನಿರೋಧಕ ಕ್ರಮಗಳ ಈಡೇರಿಸದ ಬೇಡಿಕೆಯ ಪ್ರಮಾಣವನ್ನು ಬಹಳಷ್ಟು ತಗ್ಗಿಸಬಹುದಲ್ಲದೆ ಮಹಿಳೆಯರ ಆರೋಗ್ಯವನ್ನು ಗಣನೀಯವಾಗಿ ಸುಧಾರಿಸಬಹುದು.

೬.೧೭ ಆರೋಗ್ಯ ಸಿಬ್ಬಂದಿ ಮತ್ತು ಮೂಲಭೂತ ಸೌಕರ್ಯ

ಜನರ ಆರೋಗ್ಯ ಸ್ಥಿತಿಯನ್ನು ಅಗಾಧವಾಗಿ ಪ್ರಭಾವಿತಗೊಳಿಸುವ ಅಂಶವೆಂದರೆ ಆರೋಗ್ಯ ಸೇವೆಯ ಲಭ್ಯತೆ ಮತ್ತು ದೊರೆಯುವಿಕೆ. ಒಳ್ಳೆಯ ಆರೋಗ್ಯವು ಜನರ ದಕ್ಷತೆ ಮತ್ತು ಆಯಸ್ಸನ್ನು ಉತ್ತಮಗೊಳಿಸಿ ಸಾಕಷ್ಟು ಧನಾತ್ಮಕ ಬಾಹ್ಯ ಪರಿಣಾಮವನ್ನು ಬೀರುತ್ತದೆ. ಆದ್ದರಿಂದ ಎಲ್ಲಾ ಹಂತಗಳಲ್ಲಿ ಸರ್ಕಾರಗಳು ಜನರ ಆರೋಗ್ಯ ಸುಧಾರಿಸಲು ಪ್ರತಿರೋಧಕ ಹಾಗೂ ಪರಿಹಾರಾತ್ಮಕ ಆರೋಗ್ಯ ಸೇವೆಗಳನ್ನು ಒದಗಿಸುವ ಕ್ರಮಗಳನ್ನು ತೆಗೆದುಕೊಂಡಿವೆ. ಈ ಆರೋಗ್ಯ ಸೇವೆಗಳನ್ನು ಒದಗಿಸುವ ಸರಕಾರಿ ಆರೋಗ್ಯ ಸಂಸ್ಥೆಗಳೆಂದರೆ, ಉಪ–ಕೇಂದ್ರಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು, ತಾಲೂಕು ಮತ್ತು ಜಿಲ್ಲಾ ಸಾರ್ವಜನಿಕ ಆಸ್ಪತ್ರೆಗಳು ಅಲ್ಲದೇ ವಿಶೇಷವಾಗಿ ನಿರ್ದಿಷ್ಟ ರೋಗಗಳಿಗೆ ಚಿಕಿತ್ಸೆ ನೀಡುವ ವಿಶೇಷ ಆಸ್ಪತ್ರೆಗಳು, ಸಂಶೋಧನಾ, ತರಬೇತಿ ಕೇಂದ್ರಗಳು ಮತ್ತು ಕುಟುಂಬ ಕಲ್ಯಾಣ ಕೇಂದ್ರಗಳು. ಈ ಎಲ್ಲಾ ಆರೋಗ್ಯ ಸಂಸ್ಥೆಗಳಿಗೆ ಬೇಕಾಗುವ ವೈದ್ಯರು, ದಾದಿಯರು, ಕ್ಷ–ಕಿರಣ ತಜ್ಞರು, ಔಷಧಿ ವಿತರಕರು, ಪ್ರಯೋಗಾಲಯ ತಂತ್ರಜ್ಞರು, ಪರಿಚಾರಕರನ್ನು ಸಹ ನೇಮಕ ಮಾಡುವ ಜವಾಬ್ದಾರಿಯನ್ನು

ಸರ್ಕಾರ ಹೊತ್ತುಕೊಂಡಿದೆ. ವೈದ್ಯಕೀಯ ಉಪಕರಣಗಳು, ಅಂಬುಲೆನ್ಸ್‌ಗಳು, ಔಷಧಿ ಸರಬರಾಜುಗಳನ್ನು ಸಹ ಒದಗಿಸಲಾಗುತ್ತಿದೆ.

ಈ ವಿಭಾಗದಲ್ಲಿ ರಾಯಚೂರು ಜಿಲ್ಲೆಯಲ್ಲಿ ಲಭ್ಯವಿರುವ ಆರೋಗ್ಯ ಮೂಲಸೌಕರ್ಯದ ಸ್ವರೂಪ ಮತ್ತು ಸಮರ್ಪಕತೆಯನ್ನು ವಿಶ್ಲೇಷಿಸಲಾಗಿದೆ. ಕೇಂದ್ರ ಸರಕಾರ ಆರೋಗ್ಯ ಸಂಸ್ಥೆಗಳ ಸ್ಥಾಪನೆಗೆ ಜನಸಂಖ್ಯೆಯ ಆಧಾರದ ಮೇಲೆ ಮತ್ತು ನಿರ್ದಿಷ್ಟ ಪ್ರದೇಶದ ಅಗತ್ಯಗಳಿಗೆ ಕೂಡ ಮಾನದಂಡಗಳನ್ನು ನಿಗದಿ ಮಾಡಿದೆ.

ಕೋಷ್ಟಕ–೬.೨೫

ರಾಯಚೂರು ಜಿಲ್ಲೆಯ ಆರೋಗ್ಯ ಸಂಬಂಧಿತ ಮೂಲ ಸೌಕರ್ಯಗಳು, ೨೦೧೧–೧೨

ತಾಲೂಕು	ದೇವದುರ್ಗ	ಲಿಂಗಸುಗೂರು	ಮಾನವಿ	ರಾಯಚೂರು	ಸಿಂಧನೂರು	ಜಿಲ್ಲೆ
ಉಪ ಕೇಂದ್ರಗಳು ಸೇವೆ ಒದಗಿಸುವ ಸರಾಸರಿ ಜನಸಂಖ್ಯೆ	೭೧೯೧	೭೪೪೪	೬೭೫೪	೬೧೮೭	೬೩೪೭	೬೭೫೩
ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸೇವೆ ಒದಗಿಸುವ ಸರಾಸರಿ ಜನಸಂಖ್ಯೆ	೪೧೯೪೬	೨೪೮೧೨	೩೬೦೨೩	೨೭೪೯೭	೨೮೮೫೧	೩೦೬೦೬
ಪ್ರತಿ ಸಾವಿರ ಜನರಿಗೆ ಇರುವ ವೈದ್ಯರು	೦.೦೫	೦.೦೫	೦.೭	೦.೪೫	೦.೦೪	೦.೨೬
ಪ್ರತಿ ಸಾವಿರ ಜನರಿಗೆ ಇರುವ ದಾದಿಯರು	೦.೨೨	೦.೦೫	೦.೦೭	೦.೦೬	೦.೦೮	೦.೧೦
ಜನಸಂಖ್ಯೆ ಹಾಸಿಗೆಗಳ ಅನುಪಾತ	೧ : ೧೧೬೪	೧ : ೯೩೬	೧ : ೧೨೫೭	೧ : ೧೭೩	೧ : ೭೨೭	೧ : ೪೪೧
ಆನಸಂಖ್ಯೆ ಆಂಬ್ಯುಲನ್ಸ್‌ಗಳ ಅನುಪಾತ	೧:೯೩೫೩೫	೧:೧೯೨೮೪೯	೧:೧೨೩೫೫೬	೧:೧೨೪೬೫೯	೧:೧೩೧೦೬೬	೧:೧೨೮೫೮೭

ಮೂಲ: ಜಿಲ್ಲಾ ಸಾಂಖ್ಯಿಕ ಕಚೇರಿ, ರಾಯಚೂರು

ರಾಯಚೂರು ಜಿಲ್ಲೆಯ ಆರೋಗ್ಯ ಮೂಲಸೌಕರ್ಯಗಳು ಸಮರ್ಪಕವಾಗಿಲ್ಲವೆಂಬುದನ್ನು ಕೋಷ್ಟಕ ೬.೨೫ರಲ್ಲಿನ ಮಾಹಿತಿಯು ಸ್ಪಷ್ಟಪಡಿಸುತ್ತದೆ. ತಾಲೂಕುವಾರು ಸ್ಥಿತಿಯನ್ನು ಗಮನಿಸಿದಾಗ, ಉಪ ಕೇಂದ್ರಗಳಲ್ಲಿ ಚಿಕಿತ್ಸೆ ಪಡೆಯುವ ಸರಾಸರಿ ಜನಸಂಖ್ಯೆ ೪೨೮೮ ಇದ್ದು ರಾಜ್ಯ ಮಟ್ಟದ ಅತ್ಯುತ್ತಮ ಮೌಲ್ಯ ೨೧೭೪ ಇರುವುದರಿಂದ ಜಿಲ್ಲೆಯ ಆರೋಗ್ಯ ಸೇವೆಗಳ ಅಸಮರ್ಪಕತೆಯನ್ನು ಬಿಂಬಿಸುತ್ತದೆ. ಹಾಗೆಯೇ ಪ್ರಾಥಮಿಕ ಆರೋಗ್ಯ ಕೆಂದ್ರಗಳಿಂದ ಸೇವೆಗೆ ಒಳಪಟ್ಟ ಸರಾಸರಿ ಜನಸಂಖ್ಯೆ ೨೬೫೮೩ ಇದ್ದು ರಾಜ್ಯದ ಅತ್ಯುತ್ತಮ ಮೌಲ್ಯ ೯೩೮೯ ಆಗಿದೆ. ಆದ್ದರಿಂದ ಸರಕಾರದ ಮಾನದಂಡಗಳ ಪರಿಧಿಯೊಳಗೇ ಈ ಸರಾಸರಿ ಅಂಕಿಗಳಿದ್ದರೂ ಬೇರೆ ಪ್ರದೇಶಗಳ ಜೊತೆ ಹೋಲಿಕೆ ಮಾಡಿದಾಗ ಜಿಲ್ಲೆಯಲ್ಲಿನ ಕೊರತೆ ಕಾಣುತ್ತದೆ. ಹೀಗಾಗಿ ಜನರಿಗೆ ಗುಣಮಟ್ಟದ ಆರೋಗ್ಯ ಸೇವೆಗಳನ್ನು ಒದಗಿಸಲು ಸಮರ್ಪಕ ಸಿಬ್ಬಂದಿ ಸಲಕರಣೆಗಳು ಮತ್ತು ಬೇಕಾಗಿರುವ ಔಷಧಿಗಳನ್ನು ಪೂರೈಸಲು ಒತ್ತು ನೀಡುವ ಅಗತ್ಯವಿದೆ. ಜಿಲ್ಲೆಯಲ್ಲಿ ಪ್ರತಿ ೧೦೦೦ ಜನರಿಗೆ ಒಬ್ಬ ವೈದ್ಯ ಮತ್ತು ಒಬ್ಬ ದಾದಿ ಕೂಡಾ ಲಭ್ಯವಿಲ್ಲ. ಜಿಲ್ಲೆಯಲ್ಲಿ ೪೪೧ ಜನರಿಗೆ ಒಂದು ಹಾಸಿಗೆ ಲಭ್ಯವಿದೆ. ಮತ್ತು ೧,೨೮,೫೮೭ ಜನರಿಗೆ ಕೇವಲ ಒಂದು ತುರ್ತು ಚಿಕಿತ್ಸೆ ವಾಹನ

ಲಭ್ಯವಿದೆ. ಇದು ಸಾಕಷ್ಟು ಪ್ರತಿಕೂಲಕರ ಅಂಶವಾಗಿದೆ. ಈ ಅಂಶಗಳು ತಾಲೂಕುವಾರು ಹೆಚ್ಚಿನ ಪ್ರಮಾಣದ ವ್ಯತ್ಯಾಸವನ್ನು ಹೊಂದಿದ್ದು ದೇವದುರ್ಗ ಮತ್ತು ಲಿಂಗಸುಗೂರು ತಾಲೂಕುಗಳಲ್ಲಿ ಇನ್ನೂ ಹಲವು ಉಪಕೇಂದ್ರಗಳು ದೇವದುರ್ಗ ಮತ್ತು ಮಾನವಿ ತಾಲೂಕುಗಳಲ್ಲಿ ತಲಾ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರದ ಆಗತ್ಯವಿದ್ದು ಎಲ್ಲಾ ತಾಲೂಕುಗಳಲ್ಲಿ ಆರೋಗ್ಯ ಸಿಬ್ಬಂದಿ ಮತ್ತು ಹಾಸಿಗೆಗಳ ಸಂಖ್ಯೆಯನ್ನು ಹೆಚ್ಚಿಸುವ ಅಗತ್ಯವಿದೆ. ಈ ಉಪಕ್ರಮಗಳನ್ನು ಕೈಗೊಳ್ಳುವುದರಿಂದ ರಾಯಚೂರು ಜಿಲ್ಲೆಯ ಆರೋಗ್ಯದ ಮೂಲಭೂತ ಸೌಲಭ್ಯಗಳನ್ನು ವೃದ್ಧಿಸಬಹುದಾಗಿದೆ.

ಪ್ರಸವ ಪೂರ್ವ ಆರೈಕೆ ಮತ್ತು ಗರ್ಭಿಣಿ ಮಹಿಳೆಯರಲ್ಲಿ ರಕ್ತ ಹೀನತೆ

ಆರೋಗ್ಯವಂತ ಸಮಾಜ ನಿರ್ಮಿಸುವ ಗುರಿ ಹೊಂದಿದ ಯಾವುದೇ ಸಮಾಜದಲ್ಲಿ ಪ್ರಸವಪೂರ್ವ ಆರೈಕೆಯು ಒಂದು ಪ್ರಮುಖ ಅಂಶವಾಗಿದೆ. ಭಾರತದ ಗ್ರಾಮೀಣ ಭಾಗಗಳಲ್ಲಿನ ವಾಸ್ತವ ಹಾಗೂ ತಲುಪಬೇಕಾದ ಗುರಿಗಳ ನಡುವಿನ ಅಂತರದ ಹಿನ್ನೆಲೆಯಲ್ಲಿ ಏಪ್ರಿಲ್ ೨೦೦೫ರಲ್ಲಿ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನವನ್ನು ಗ್ರಾಮೀಣ ಜನರ ಆರೋಗ್ಯ ಸ್ಥಿತಿ ಮತ್ತು ಆರೋಗ್ಯ ಸೇವೆಗಳನ್ನು ಒದಗಿಸುವ ವ್ಯವಸ್ಥೆಯನ್ನು ಸುಧಾರಿಸುವ ಉದ್ದೇಶದಿಂದ ಆರಂಭಿಸಲಾಯಿತು. ಆಶಾ ಕಾರ್ಯಕರ್ತೆಯರು ಗ್ರಾಮ ಮಟ್ಟದಲ್ಲಿ ಸರ್ಕಾರ ಒದಗಿಸುವ ಪ್ರಸವ ಪೂರ್ವ ಸೇವೆಗಳನ್ನು ಬಳಸುವ ಪ್ರಯೋಜನದಾರರನ್ನು ಪ್ರೇರೇಪಿಸುವ ನಿಯೋಗಿಗಳಾಗಿ ಪರಿಚಯಿಸಲಾಯಿತು. ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿನ ವೈದ್ಯರು ಮತ್ತು ಎ.ಎನ್.ಎಮ್.ಗಳ ಮೇಲ್ವಿಚಾರಣೆಯಲ್ಲಿ ಈ ಆಶಾ ಕಾರ್ಯಕರ್ತೆಯರು ಸಮುದಾಯ ಮತ್ತು ಸರ್ಕಾರದ ಪ್ರಥಮ ಹಂತದ ಆರೋಗ್ಯ ಸೇವೆಗಳ ಮಧ್ಯದ ಸೇತುವೆಯಾಗಿ ಕಾರ್ಯ ನಿರ್ವಹಿಸುವ ಪಾತ್ರವಹಿಸಲು ನಿಯುಕ್ತಿಗೊಂಡಿದ್ದಾರೆ. ಈ ಆರೋಗ್ಯ ಕಾರ್ಯಕರ್ತೆಯರು ಅಂಗನವಾಡಿ ಕಾರ್ಯಕರ್ತೆಯರ ಜತೆಗೂಡಿ ಭಾರತದ ಗ್ರಾಮೀಣ ಆರೋಗ್ಯ ವ್ಯವಸ್ಥೆಯ ಮುಂಚೂಣಿಯಲ್ಲಿದ್ದಾರೆ. ಅವರು ಅಭಿಯಾನದ ಅಡಿಯಲ್ಲಿ ವಂಚಿತತೆಗೊಳಗಾದ ಸಮೂಹಗಳ ಗರ್ಭಿಣಿ ಮಹಿಳೆಯರ ಆರೋಗ್ಯ ಸ್ಥಿತಿಯಲ್ಲಿ ಸುಧಾರಣೆ ತರುವ ಸಲುವಾಗಿ ಸಾರ್ವತ್ರಿಕವಾದ, ಸಮಾನವಾದ, ಪ್ರಯೋಜನದಾರರಿಗೆ ಎಟಕುವ ಬೆಲೆಯಲ್ಲಿ ಗುಣಮಟ್ಟದ ತಾಯಂದಿರ ಆರೋಗ್ಯ ಸೇವೆಗಳನ್ನು ಒದಗಿಸುವ ಧ್ಯೇಯ ಹೊಂದಿದ್ದಾರೆ (ರಾಯ್ ಮತ್ತು ಇತರರು. ೨೦೧೩). ಭಾರತದಲ್ಲಿ ಪ್ರಸವ ಪೂರ್ವ ಸೇವೆಗಳಲ್ಲಿ ಪ್ರಮುಖವಾಗಿ ವೃತ್ತಿಪರರಿಂದ ಗರ್ಭಿಣಿಯರ ತಪಾಸಣೆ, ಟಿಟ್ಯಾನಸ್ ಸೇರಿದಂತೆ ಇತರ ಪ್ರತಿರೋಧಕ ಚುಚ್ಚುಮದ್ದುಗಳ ನೀಡಿಕೆ, ಕಬ್ಬಿಣ ಮತ್ತು ಫೋಲಿಕ್ ಆಮ್ಲದ ಮಾತ್ರೆಗಳ ಪೂರೈಕೆ, ರಕ್ತದೊತ್ತಡದ ಪರೀಕ್ಷೆ ಹಾಗೂ ಪ್ರಸವ ನಂತರದ ಆರೈಕೆ ಮತ್ತು ಪೋಷಣೆಗೆ ಸಂಬಂಧಿಸಿದ ಸಲಹೆ ಮತ್ತು ಮಾಹಿತಿಗಳನ್ನೊಳಗೊಂಡ ಹಲವಾರು ಅಂಶಗಳು ಸೇರಿವೆ. ಗುಣಮಟ್ಟ ಪ್ರಸವಪೂರ್ವ ಆರೈಕೆಯೆಂದರೆ ಗರ್ಭಿಣಿಯರ ಶೀಘ್ರ ನೋಂದಣಿ, ೨೦ ವಾರಗಳ ತಪಾಸಣೆ

[illegible]

ಮತ್ತು ವೈದ್ಯರನ್ನು ಕನಿಷ್ಠ ಮೂರು ಸಾರಿ ಭೇಟಿ ನೀಡುವುದನ್ನು ಒಳಗೊಂಡಿದೆ.

ವೈದ್ಯಕೀಯ ಸಂಸ್ಥೆಗಳ ಹರಡುವಿಕೆಯಿಂದಾಗಿ ಮತ್ತು ಹೆಚ್ಚಿದ ಜಾಗೃತಿಯ ಕಾರಣದಿಂದಾಗಿ, ಪ್ರಸವ ಪೂರ್ವ ಆರೈಕೆ ಪಡೆದ ಗರ್ಭಿಣಿಯರ ಪ್ರಮಾಣ ಹೆಚ್ಚೂ ಕಡಿಮೆ ಪ್ರತಿಶತ ೧೦೦ನ್ನು ತಲುಪಿದೆ ಹಾಗೆಯೇ ಅನಿಮಿಯಾದಿಂದ ಬಳಲುತ್ತಿರುವ ಗರ್ಭಿಣಿಯರ ಪ್ರಮಾಣವು ಸುಮಾರು ಮೂರನೆಯ ಒಂದು ಭಾಗದಷ್ಟಿದ್ದು. ದೇವದುರ್ಗದಲ್ಲಿ ಕನಿಷ್ಠವಿದ್ದರೆ ಮಾನವಿಯಲ್ಲಿ ಗರಿಷ್ಠವಾಗಿದೆ.

ವಿವಿಧ ಹಂತಗಳಲ್ಲಿ ಎಲ್ಲಾ ವಯೋಮಾನದವರಿಗೆ ಅವರಿಗೆ ಬೇಕಾಗುವ ಎಲ್ಲ ರೀತಿಯ ಆರೋಗ್ಯ ಸೇವೆಗಳನ್ನು ಒದಗಿಸುವುದು ಯಾವುದೇ ಒಂದು ಆರೋಗ್ಯ ವ್ಯವಸ್ಥೆಯ ಉದ್ದೇಶವಾಗಬೇಕು. ಈ ಹಿನ್ನೆಲೆಯಲ್ಲಿ ಮಹಿಳೆಯರು, ಮುಖ್ಯವಾಗಿ ಗರ್ಭಿಣಿಯರು ಮತ್ತು ಹಾಲುಣಿಸುವ ತಾಯಂದಿರು ಮತ್ತು ಮಕ್ಕಳು ಹೆಚ್ಚಿನ ಅನಾರೋಗ್ಯಕ್ಕೆ ತುತ್ತಾಗುವ ಸಂಭವ ಇರುವುದರಿಂದ ಅವರನ್ನು ವಿಶೇಷವಾಗಿ ಪರಿಗಣಿಸಬೇಕಾಗುತ್ತದೆ. ಇದನ್ನು ಎದುರಿಸಲು ಸೂಕ್ತ ಸಂಖ್ಯೆಯ ಸ್ತ್ರೀ ರೋಗ ತಜ್ಞರ (ಗೈನಕಾಲಾಜಿಸ್ಟ್) ಮತ್ತು ಮಕ್ಕಳ ತಜ್ಞರ ಮತ್ತು ಸಂಸ್ಥೆಗಳ ಅಗತ್ಯವಿದೆ. ಭಾರತ ಹಳ್ಳಿಗಳ ನಾಡಾಗಿರುವುದರಿಂದ, ಅನಾರೋಗ್ಯದ ತಕ್ಷಣ ಚಿಕಿತ್ಸೆಗೆ ಅಥವಾ ಮೇಲಿನ ಸಂಸ್ಥೆಗಳಿಗೆ ಉಲ್ಲೇಖಿಸಿ ಕಳಿಸುವ ಸೂಕ್ತ ವ್ಯವಸ್ಥೆ ಇರಬೇಕಾಗುತ್ತದೆ. ಇದಲ್ಲದೇ, ಗರ್ಭಿಣಿಯರಿಗೆ, ಹಾಲುಣಿಸುವ ತಾಯಂದಿರಿಗೆ ಮತ್ತು ಮಕ್ಕಳಿಗೆ ಸರಿಯಾದ ಪೌಷ್ಠಿಕಾಂಶವನ್ನು ಒದಗಿಸುವುದೂ ಆರೋಗ್ಯ ವ್ಯವಸ್ಥೆಯ ಭಾಗವಾಗಿದೆ.

ಭಾರತದಲ್ಲಿ ಮಹಿಳೆಯರ ಹಾಗೂ ಮಕ್ಕಳ ಆರೋಗ್ಯ ಸೇವೆ ಒದಗಿಸುವ ಮತ್ತೊಂದು ಕಾರ್ಯಕ್ರಮವೆಂದರೆ ಸಮಗ್ರ ಶಿಶು ಅಭಿವೃದ್ಧಿ ಯೋಜನೆ. ಈ ಯೋಜನೆಯು ೬ ವರ್ಷದೊಳಗಿನ ಮಕ್ಕಳನ್ನು, ಗರ್ಭಿಣಿ ಮತ್ತು ಹಾಲುಣಿಸುವ ತಾಯಂದಿರನ್ನು ಗಮನದಲ್ಲಿರಿಸಿಕೊಂಡು ಶಿಶು ಆರೈಕೆಗೆ ಅವಶ್ಯವಾದ ಆರು ಮೂಲಭೂತ ಸೇವೆಗಳನ್ನು (ಸಣ್ಣ ವಯಸ್ಸಿನಲ್ಲಿ ಕಲಿಕೆಯ ಪ್ರಚೋದನೆ, ಆರೋಗ್ಯ ಮತ್ತು ಪೋಷಣೆ, ಶಿಕ್ಷಣ) ಸಮಗ್ರವಾಗಿ ಒದಗಿಸುತ್ತದೆ. ಸಮಗ್ರ ಶಿಶು ಅಭಿವೃದ್ಧಿ ಯೋಜನೆಯನ್ನು (ಸ.ಶಿ.ಅ.ಯೋ.) ಅಪೌಷ್ಠಿಕತೆ, ಅನಾರೋಗ್ಯ, ಕಲಿಕೆಯ ಅಲ್ಪ ಸಾಮರ್ಥ್ಯ ಮತ್ತು ಮರಣದ ವಿಷವರ್ತುಲವನ್ನು ಬೇಧಿಸುವ ಸಾಧನವಾಗಿ ಪರಿಗಣಿಸಲಾಗಿದೆ. ಸ.ಶಿ.ಅ.ಯೋಜನೆಯು ಶಿಶು ಅಭಿವೃದ್ಧಿಯಲ್ಲಿ ವಿಶ್ವದಲ್ಲಿಯೇ ಅತ್ಯಂತ ದೊಡ್ಡದಾದ ಮತ್ತು ಅನನ್ಯವಾದ ಕಾರ್ಯಕ್ರಮಗಳಲ್ಲಿ ಒಂದಾಗಿದೆ. ಈ ಯೋಜನೆಯಲ್ಲಿ ಮಕ್ಕಳಿಗೆ ನಿಯಮಿತವಾಗಿ ಆರೋಗ್ಯ ತಪಾಸಣೆ ಮಾಡಿ ಯಾವುದೇ ಮಗು ಅನಾರೋಗ್ಯ ಅಥವಾ ಅಪೌಷ್ಠಿಕತೆಯಿಂದ ಬಳಲುತ್ತಿದ್ದರೆ ಅಂತಹ ಮಕ್ಕಳನ್ನು ಸಮೀಪದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕಳುಹಿಸಿ ಚಿಕಿತ್ಸೆ ನೀಡಲಾಗುತ್ತದೆ. ಇದಲ್ಲದೇ ಮಕ್ಕಳ ಆರೋಗ್ಯ ಉತ್ತಮವಾಗಿರ ಬೇಕಾದರೆ ತಾಯಂದಿರ ಆರೋಗ್ಯವೂ ಸಹ ಉತ್ತಮವಾಗಿರಬೇಕಾಗಿರುವುದರಿಂದ, ಸ.ಶಿ.ಅ. ಯೋಜನೆಯ ಮೂಲಕ

ಗರ್ಭಿಣಿ ಮಹಿಳೆಯರಿಗೆ ಆರೋಗ್ಯ ಸೇವೆ ಮತ್ತು ಪೂರಕ ಪೌಷ್ಠಿಕಾಂಶಗಳನ್ನು ಒದಗಿಸುವುದಲ್ಲದೇ ನಂತರದ ಪ್ರಸವ ಪೂರ್ವ ಆರೈಕೆಯನ್ನು ಸಹ ಒದಗಿಸಲಾಗುತ್ತದೆ. ಇವೆಲ್ಲವನ್ನೂ ಅವರವರ ಮನೆಬಾಗಿಲಿಗೆ ದೊರಕಿಸಿಕೊಡುವುದು ಈ ಕಾರ್ಯಕ್ರಮದ ಒಂದು ಹೆಗ್ಗಳಿಕೆ.

ಸದರಿ ಕಾರ್ಯಕ್ರಮದ ಕೇಂದ್ರ ಸಂಸ್ಥೆಯಾಗಿ ಅಂಗನವಾಡಿ ಕೇಂದ್ರವು ರೂಪಿತವಾಗಿದೆ. ೬ ತಿಂಗಳ ಮಗುವಿನಿಂದ ಹಿಡಿದು ೬ ವರ್ಷದ ಮಕ್ಕಳು, ಗರ್ಭಿಣಿ ಮಹಿಳೆಯರು, ಹಾಲುಣಿಸುವ ತಾಯಂದಿರು ಮತ್ತು ಕಿಶೋರಿಯರು ಅಂಗನವಾಡಿ ಕೇಂದ್ರಗಳ ಪ್ರಯೋಜನದಾರರು. ಅಂಗನವಾಡಿಗಳು ತನ್ನ ಕಕ್ಷಿದಾರರಿಗೆ ಪೂರಕ ಪೌಷ್ಠಿಕ ಒದಗಿಸುವುದು ನಿಯಮಿತವಾದ ಆರೋಗ್ಯ ತಪಾಸಣೆ, ಸಣ್ಣ ಆರೋಗ್ಯ ಸಮಸ್ಯೆಗಳಿಗೆ ಚಿಕಿತ್ಸೆ ಮತ್ತು ಮೇಲಿನ ಸಂಸ್ಥೆಗಳಿಗೆ ಉಲ್ಲೇಖಿಸಿ ಕಳಿಸುವುದು ಲಸಿಕೆ ಹಾಕುವುದು, ಆರೋಗ್ಯ ಮತ್ತು ನೈರ್ಮಲ್ಯ ಶಿಕ್ಷಣ ಕೌಶಲ್ಯಾಭಿವೃದ್ಧಿ ತರಬೇತಿ ನೀಡುವುದು, ಕುಟುಂಬ ಕಲ್ಯಾಣದ ಮತ್ತು ಗೃಹ ನಿರ್ವಹಣೆಯ ಕುರಿತು ಸಲಹೆ ಹಾಗೂ ಮಾರ್ಗದರ್ಶನ ನೀಡುವುದು ಮತ್ತು ಮಕ್ಕಳನ್ನು ಆಟಗಳ ಮುಖಾಂತರ ಔಪಚಾರಿಕ ಶಾಲಾ ಕಲಿಕೆಗೆ ಸಜ್ಜುಗೊಳಿಸುವುದು ಮುಂತಾದ ಕಾರ್ಯಗಳನ್ನು ಮಾಡುತ್ತವೆ. ಹೀಗೆ ಅಂಗನವಾಡಿ ಕೇಂದ್ರಗಳು ಆರೋಗ್ಯ, ಪೋಷಣೆ ಹಾಗೂ ಸಾಮರ್ಥ್ಯ ನಿರ್ಮಾಣಗಳಂಥ ಕಾರ್ಯಗಳಲ್ಲಿ ತೊಡಗಿಕೊಂಡು ಮಹಿಳೆಯರನ್ನು ಹಾಗೂ ಮಕ್ಕಳನ್ನು ಸದೃಢ ಹಾಗೂ ಆರೋಗ್ಯಪೂರ್ಣವಾಗಿರಿಸುವ ಜವಾಬ್ದಾರಿ ಹೊತ್ತುಕೊಂಡಿವೆ. ಗ್ರಾಮ ಮಟ್ಟದಲ್ಲಿ ಮಹಿಳೆಯರಿಗೆ ಹಾಗೂ ಮಕ್ಕಳಿಗೆ ಸಂಬಂಧಿಸಿದ ಸಬಲಾ, ಐ.ಜಿ.ಎಮ್.ಎಸ್.ವೈ ಮತ್ತು ಸಂತಾನೋತ್ಪತ್ತಿ ಆರೋಗ್ಯ ಮುಂತಾದ ಇತರ ಕಾರ್ಯಕ್ರಮಗಳನ್ನೂ ಅನುಷ್ಠಾನಗೊಳಿಸುತ್ತಿವೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸ.ಶಿ.ಅ. ಯೋಜನೆಯ ಅನುಷ್ಠಾನದ ಉಸ್ತುವಾರಿಯನ್ನು ವಹಿಸಿಕೊಂಡಿದೆ. ಮಾರ್ಚ್ ೨೦೧೨ರ ಹೊತ್ತಿಗೆ ರಾಯಚೂರು ಜಿಲ್ಲೆಯಲ್ಲಿ ೧೩೨೪ ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದವು. ಅವುಗಳ ಕಾರ್ಯ ಚಟುವಟಿಕೆಯ ಸಾರಾಂಶಿಕ ಅಂಕಿ ಅಂಶಗಳನ್ನು ನೀಡಿದೆ.

ಅಂಗನವಾಡಿ ಕೇಂದ್ರಗಳು ಜಿಲ್ಲೆಯಾದ್ಯಂತ ಸಮನಾಗಿ ಹರಡಿಕೊಂಡಿದ್ದು ರಾಯಚೂರು, ಲಿಂಗಸೂಗೂರು ಹಾಗೂ ದೇವದುರ್ಗ ತಾಲೂಕುಗಳು ತುಲನಾತ್ಮಕವಾಗಿ ಅಧಿಕ ಸಂಖ್ಯೆಯಲ್ಲಿ ಕೇಂದ್ರಗಳನ್ನು ಹೊಂದಿವೆ. ಸ.ಶಿ.ಅ.ಯೋಜನೆಯಡಿ ನಿಗದಿಪಡಿಸುವ ಮಾನದಂಡಗಳನ್ನು ಕಾರ್ಯಗತಗೊಳಿಸಿದರೆ ಈಗ ಇರುವ ಅಂಗನವಾಡಿಗಳ ಸಂಖ್ಯೆಯ ಶೇ.೮೦ರಷ್ಟು ಹೆಚ್ಚಿನ ಸಂಖ್ಯೆಯ ಅಂಗನವಾಡಿಗಳನ್ನು ಸ್ಥಾಪಿಸಬೇಕಾಗುತ್ತದೆ. ಇವುಗಳಲ್ಲಿ ಹೆಚ್ಚಿನವುಗಳನ್ನು ರಾಯಚೂರು, ಸಿಂಧನೂರು, ಮಾನವಿ ಮತ್ತು ಲಿಂಗಸೂಗೂರು ತಾಲೂಕುಗಳಲ್ಲಿ ಸ್ಥಾಪಿಸಬೇಕಾಗುತ್ತದೆ. ದೇವದುರ್ಗ ತಾಲೂಕಿನಲ್ಲಿ ಇನ್ನೂ ಹೆಚ್ಚಿನ ೮೧ ಕೇಂದ್ರಗಳನ್ನು ಸ್ಥಾಪಿಸಬೇಕಾಗುವುದು.

ಕೋಷ್ಟಕ–೬.೨೬

ರಾಯಚೂರು ಜಿಲ್ಲೆಯ ಅಂಗನವಾಡಿ ಕೇಂದ್ರಗಳ ಕಾರ್ಯಾಚರಣೆ ಲಕ್ಷಣಗಳು, ೨೦೧೧–೧೨

ನಿಯತಕಾಲಿಕೆಗಳು	ದೇವದುರ್ಗ	ಲಿಂಗಸೂಗೂರು	ಮಾನವಿ	ರಾಯಚೂರು	ಸಿಂಧನೂರು	ಜಿಲ್ಲೆ
ಒಟ್ಟು ಅಂಗನವಾಡಿ ಕೇಂದ್ರಗಳು	೨೭೦	೨೮೯	೨೫೬	೨೭೨	೨೩೭	೧೩೨೪
ಮಾನದಂಡದ ಅನುಸಾರ ಅಗತ್ಯವಿರುವ ಹೆಚ್ಚುವರಿ ಅಂಗನವಾಡಿಗಳು	೮೧	೧೯೩	೨೦೭	೩೫೧	೨೫೫	೧೦೮೭
ಒಟ್ಟು ಫಲಾನುಭವಿಗಳು	೬೩೮೯೬	೪೭೯೯೭	೭೭೪೦೧	೫೯೯೨೬	೪೪೪೬೫	೨೯೩೬೮೫
ಪ್ರತಿ ಅಂಗನವಾಡಿ ಫಲನಾಭವಿಗಳು	೨೩೭	೧೬೬	೩೦೨	೨೨೦	೧೮೮	೨೨೨
ಅಂಗನವಾಡಿ ಸೇವೆಯ ಸರಾಸರಿ ಗುರಿಂಯ ಜನಸಂಖ್ಯೆ	೧೮೩	೧೮೯	೨೦೪	೨೪೨	೨೮೯	೨೧೯
ಫಲಾನುಭವಿಗಳು : ಅಂಗನವಾಡಿ ಶಿಕ್ಷಕರ ಅನುಪಾತ	೧೧೩	೧೦೧	೧೩೫	೧೧೫	೯೬	೧೧೩
ಫಲಾನುಭವಿಗಳು : ಸಹಾಯಕಿಯರ ಅನುಪಾತ	೧೨೧	೧೨೦	೧೫೩	೧೨೩	೧೦೦	೧೨೪
ಸ್ವಂತ ಕಟ್ಟಡ ಪ್ರತಿಶತ	೯೭	೯೦	೯೨	೯೭	೯೧	೯೩
೧ ಕಿ.ಮೀ. ವ್ಯಾಪ್ತಿಯೊಳಗೆ ಅಂಗನವಾಡಿಗಳನ್ನು ಹೊಂದಿರುವ ಗ್ರಾಮಗಳ ಪ್ರತಿಶತ	೧೦೦	೧೦೦	೧೦೦	೧೦೦	೧೦೦	೯೬.೮
ಫಲಾನುಭವಿಗಳ ವಿಂಗಡಣೆ ಪ್ರತಿಶತದಲ್ಲಿ						
ಅ) ೦–೩ ವರ್ಷಗಳು	೪೧.೫	೪೨.೧	೪೫.೮	೪೩.೩	೪೨.೩	೪೩.೨
ಆ) ೩–೬ ವರ್ಷಗಳು	೩೧.೧	೩೮.೦	೩೧.೫	೩೮.೬	೩೭.೪	೩೪.೮
ಕ) ಗರ್ಭಿಣಿ ಮಹಿಳೆ	೧೩.೪	೮.೧	೯.೮	೭.೯	೮.೮	೯.೮
ಡ) ಹಾಲೂಣಿಸುವ ತಾಯಂದಿರು	೧೨.೨	೯.೮	೧೧.೪	೮.೫	೯.೩	೧೦.೪
ಇ) ಕಿಶೋರಿಂಯರು	೧.೮	೨.೦	೧.೫	೧.೭	೨.೧	೧.೮

ಮೂಲ. ಜಿ.ಸಾಂ.ಅಧಿಕಾರಿ ರಾಯಚೂರು

ಜಿಲ್ಲೆಯ ಅಂಗನವಾಡಿಗಳು ಸೇವೆ ಒದಗಿಸುವ ಸರಾಸರಿ ಫಲಾನುಭವಿಗಳ ಸಂಖ್ಯೆಯು ನಿಗದಿತ ಮಾನದಂಡದ ಅನುಸಾರವಿದ್ದು ಬಹುತೇಕ ಅರ್ಹ ಜನರು ಅಂಗನವಾಡಿಗಳ

[illegible]

ಪ್ರಯೋಜನ ಪಡೆಯುತ್ತಿದ್ದಾರೆ. ಆದರೆ ಈ ಸಂಖ್ಯೆಯು ದೇವದುರ್ಗ ಮತ್ತು ಲಿಂಗಸೂಗೂರುಗಳಲ್ಲಿ ಕಡಿಮೆ ಇದೆ. ಪ್ರಾಯಶಃ ಜನರು ವಲಸೆ ಹೋಗುವುದರಿಂದ ಅವು ಅಂಗನವಾಡಿಗಳ ಪ್ರಯೋಜನ ಪಡೆಯುತ್ತಿಲ್ಲ. ಅಂಗನವಾಡಿ ಶಿಕ್ಷಕರ ಮತ್ತು ಕಾರ್ಯಕರ್ತರ ಸಂಖ್ಯೆಯು ಕೇಂದ್ರಗಳ ಸಂಖ್ಯೆಗೆ ಅನುಗುಣವಾಗಿ ಇರದಿರುವುದು ಅವುಗಳ ಪರಿಣಾಮಕಾರಿಕೆಯನ್ನು ಕಡಿಮೆ ಮಾಡಿರಬಹುದಾಗಿದೆ.


ಆದರೆ, ರಾಯಚೂರು ಜಿಲ್ಲೆಯ ಅಂಗನವಾಡಿಗಳ ಪ್ರಮುಖ ಕೊರತೆಯೆಂದರೆ, ಸ್ವಂತ ಕಟ್ಟಡವನ್ನು ಹೊಂದಿಲ್ಲದೇ ಇರುವುದು. ಜಿಲ್ಲೆಯಲ್ಲಿ ಹಲವಾರು ಅಂಗನವಾಡಿ ಕೇಂದ್ರಗಳು ದೇವಸ್ಥಾನಗಳಲ್ಲಿ, ಸಮುದಾಯ ಭವನಗಳಲ್ಲಿ ಅಥವಾ ಬಾಡಿಗೆ ಮನೆಗಳಲ್ಲಿ ಕಾರ್ಯನಿರ್ವಹಣೆ ಮಾಡುತ್ತಿವೆ. ರಾಯಚೂರು ಜಿಲ್ಲೆಯಲ್ಲಿ ಶೇ.೯೩ ಕೇಂದ್ರಗಳು ಸ್ವಂತ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಆದರೂ ಲಿಂಗಸೂಗೂರು, ಮಾನವಿ ಮತ್ತು ಸಿಂಧನೂರು ತಾಲೂಕುಗಳಲ್ಲಿ ಇನ್ನೂ ಬಹಳಷ್ಟು ಅಂಗನವಾಡಿಗಳಿಗೆ ಸ್ವಂತ ಕಟ್ಟಡ ಒದಗಿಸುವುದು ಅವಶ್ಯವಾಗಿದೆ. ಹೆಚ್ಚಿಗೆ ಬೇಕಾಗುವ ಅಂಗನವಾಡಿಗಳ ಸಂಖ್ಯೆಯನ್ನು ಪರಿಗಣಿಸಿದರೆ ರಾಯಚೂರು, ಲಿಂಗಸೂಗೂರು, ಸಿಂಧನೂರು ಮತ್ತು ಮಾನವಿ ತಾಲೂಕುಗಳಲ್ಲಿ ಹೆಚ್ಚಿನ ಬಂಡವಾಳ ಹೂಡಿಕೆಯ ಅಗತ್ಯತೆ ಇದೆ. ಈ ಎಲ್ಲಾ ಸಮಸ್ಯೆಗಳನ್ನು ಸರಿಪಡಿಸಲು ಹೆಚ್ಚುವರಿ ಅಂಗನವಾಡಿಗಳನ್ನು ತೆರೆದು ಅಲ್ಲಿ ಸೂಕ್ತ ಸಂಖ್ಯೆಯ ಸಿಬ್ಬಂದಿ ಮತ್ತು ಕಟ್ಟಡಗಳನ್ನು ಒದಗಿಸುವ ಸರಕಾರವು ಹೆಚ್ಚಿನ ಹೂಡಿಕೆ ಮಾಡುವುದು ಅತ್ಯಗತ್ಯವಾಗಿದೆ.

ಜಿಲ್ಲೆಯಲ್ಲಿ ಅಂಗನವಾಡಿಗಳ ಫಲಾನುಭವಿಗಳ ಒಟ್ಟು ಸಂಖ್ಯೆ ಸುಮಾರು ೨,೯೩,೬೮೫ ಇದ್ದು ಇವರಲ್ಲಿ ಬಹುತೇಕ ಫಲಾನುಭವಿಗಳು ಮಾನವಿ ಮತ್ತು ದೇವದುರ್ಗ ತಾಲೂಕುಗಳು ಒಟ್ಟು ಫಲಾನುಭವಿಗಳ ಅರ್ಧಸಂಖ್ಯೆಯನ್ನು ಹೊಂದಿವೆ. ಫಲಾನುಭವಿಗಳ ಸಂರಚನೆಯು ತಾಲೂಕುಗಳಾದ್ಯಂತ ಹೆಚ್ಚೂ ಕಡಿಮೆ ಏಕರೀತಿಯಾಗಿರುವುದು ಕಂಡುಬರುತ್ತದೆ. ಈ ಅಂಗನವಾಡಿಗಳಲ್ಲಿ ೦-೩ ವರ್ಷದ ಮಕ್ಕಳ ಪ್ರಮಾಣ ಶೇ.೪೩ರಷ್ಟಾದರೆ ಮತ್ತು ೩-೬ ವರ್ಷದ ಮಕ್ಕಳ ಪ್ರಮಾಣ ಶೇ.೩೫ರಷ್ಟು, ಕಿಶೋರಿಯರ ಪ್ರಮಾಣ ಕೇವಲ ಶೇ.೨ರಷ್ಟಿದೆ, ಉಳಿದ ಶೇ.೨೦ರಷ್ಟು ಪ್ರಯೋಜನದಾರರು ಗರ್ಭಿಣಿಯರು ಮತ್ತು ಹಾಲುಣಿಸುವ ತಾಯಂದಿರಿದ್ದಾರೆ. ಹೀಗೆ ಅಂಗನವಾಡಿಗಳು ನಿರ್ದಿಷ್ಟಪಡಿಸಿದ ಜನ ಸಮೂಹಗಳಿಗೆ ಸೇವೆ ನೀಡುತ್ತಿದ್ದರೂ ಆ ಸೇವೆಯ ಗುಣಮಟ್ಟದ ಕುರಿತು ಸಾಕಷ್ಟು ಪ್ರಶ್ನೆಗಳಿವೆ. ಎಷ್ಟು ಪ್ರತಿಶತ ಹಳ್ಳಿಗಳು ಒಂದು ಕಿಲೋಮೀಟರ್ ವ್ಯಾಪ್ತಿಯ ಒಳಗೆ ಅಂಗನವಾಡಿಯನ್ನು ಹೊಂದಿವೆ. ಎಂಬುದನ್ನು ನೋಡಿದಾಗ ಎಲ್ಲ ತಾಲೂಕುಗಳಲ್ಲಿ ಶೇ.೧೦೦ರಷ್ಟು ಹಳ್ಳಿಗಳು ಒಂದು ಕಿ.ಮೀ ವ್ಯಾಪ್ತಿಯಲ್ಲಿ ಅಂಗನವಾಡಿಗಳನ್ನು ಹೊಂದಿವೆ. ಇದಲ್ಲದೇ ಅಂಗನವಾಡಿಗಳ ಕಾರ್ಯಾಚರಣೆಯ ಪ್ರಭಾವವನ್ನು ಕೆಲ ಮಹತ್ವದ ಸೂಚಿಗಳ ಮೇಲೆ ಕಾಣಬಹುದಾಗಿದೆ. ರಕ್ತಹೀನತೆಯಿಂದ ಬಳಲುವ ಗರ್ಭಿಣಿ ಮಹಿಳೆಯರು, ಸಾಂಸ್ಥಿಕ ಹೆರಿಗೆಗಳು, ಮಕ್ಕಳ ಅಪೌಷ್ಠಿಕತೆ, ಲಸಿಕೀಕರಣದ ಪ್ರಮಾಣ, ಕಡಿಮೆ ತೂಕದ ಮಕ್ಕಳ ಜನನ ಮುಂತಾದವುಗಳನ್ನು ಹೋಲಿಸಿ ನೋಡಿದಾಗ ಅಂಗನವಾಡಿಗಳ ಕಾರ್ಯ ಅತ್ಯಂತ ಮಹತ್ವದ್ದಾಗಿ ಕಂಡು ಬರುತ್ತದೆ.

೬.೧೮ ಸಾಂಸ್ಥಿಕ ಹೆರಿಗೆ

ಆರೋಗ್ಯ ಸೇವೆಗಳ ಗುಣಮಟ್ಟ ಮತ್ತು ಜವಾಬ್ದಾರಿಯನ್ನು ಹೆರಿಗೆಗಳನ್ನು ಜರುಗಿಸುವ ರೀತಿಯಿಂದ ಅಳೆಯಬಹುದು. ಹೆರಿಗೆಯ ತಾಯಿಯ ಮತ್ತು ಮಗುವಿನ ಜೀವಿತ ಹಾಗೂ ಆರೋಗ್ಯದ ಮೇಲೆ ಪರಿಣಾಮ ಬೀರುವ ಒಂದು ಮಹತ್ವದ ಘಟನೆಯಾಗಿದೆ. ಆದ್ದರಿಂದ ಹೆರಿಗೆ ಸಮಯದಲ್ಲಿ ಸಕಾಲಿಕ ಮತ್ತು ಸೂಕ್ತವಾದ ವೈದ್ಯಕೀಯ ಉಪಾರ ಒದಗಿಸುವುದ ಅವಶ್ಯಕವಾಗಿದೆ. ಆದ್ದರಿಂದ ಹೆರಿಗೆಗಳನ್ನು ಆದಷ್ಟು ಆಸ್ಪತ್ರೆಗಳಲ್ಲಿ/ವೈದ್ಯಕೀಯ ಸಂಸ್ಥೆಗಳಲ್ಲಿ ಮಾಡಿಸುವುದು ಅತ್ಯವಶ್ಯವಾಗಿದೆ. ನುರಿತ ಪ್ರಸೂತಿ ವೈದ್ಯರ ಮೇಲ್ವಿಚಾರಣೆಯಲ್ಲಿ ಹೆರಿಗೆಗಳು ಜರುಗಿದಾಗ ಅವುಗಳಲ್ಲಿನ ತೊಡಕುಗಳ ಸಂಖ್ಯೆ ಕಡಿಮೆಯಾಗಿ ತಾಯಿ ಮತ್ತು ಮಗು ಇಬ್ಬರೂ ಬದುಕುಳಿಯುವ ಹಾಗೂ ಆರೋಗ್ಯದಿಂದಿರುವ ಸಾಧ್ಯತೆ ಹೆಚ್ಚಾಗುತ್ತದೆ. ಇದು ಸಮಾಜದ ಸಂತಾನೋತ್ಪತ್ತಿ ಆರೋಗ್ಯದ ಮುಖ್ಯ ಸೂಚಿಯಾಗಿದೆ. ವೈದ್ಯಕೀಯ ಸಂಸ್ಥೆಗಳ ಹೆಚ್ಚಳ ಮತ್ತು ಇತ್ತೀಚಿನ ಆರೋಗ್ಯ ಕವಚ (೧೦೮ ಅಂಬುಲೆನ್ಸ್ ವಾಹನ) ಕಾರ್ಯಕ್ರಮದಿಂದಾಗಿ ಸಾಂಸ್ಥಿಕ ಹೆರಿಗೆಗಳ ಪ್ರಮಾಣವು ಜಿಲ್ಲಾ ಮಟ್ಟದಲ್ಲಿ ಶೇ.೯೮ರಷ್ಟಾಗಿರುವುದನ್ನು ಚಿತ್ರ ೬.೨೭ರಲ್ಲಿ ಕಾಣಬಹುದು.

ಚಿತ್ರ ೬.೨೭. ರಾಯಚೂರು ಜಿಲ್ಲೆಯಲ್ಲಿ ಸಾಂಸ್ಥಿಕ ಹೆರಿಗೆಗಳ ಪಾಲು, ೨೦೧೧-೧೨ (ಶೇ)



ಮೂಲ: ಆರೋಗ್ಯ ನಿರ್ವಹಣೆ ಮಾಹಿತಿ ವ್ಯವಸ್ಥೆ, ರಾಯಚೂರು

ಸಾಂಸ್ಥಿಕ ಹೆರಿಗೆಯ ಪ್ರಮಾಣವು ಪ್ರಸವ ಪೂರ್ವ ಆರೈಕೆಯನ್ನು ಪಡೆಯುವ ಗರ್ಭಿಣಿ ಮಹಿಳೆಯರ ಮತ್ತು ರಕ್ತ ಹೀನತೆಯಿಂದ ಬಳಲುತ್ತಿರುವ ಮಹಿಳೆಯರ ಪ್ರಮಾಣಗಳ ಜೊತೆ ನೇರವಾದ ಸಂಬಂಧ ಹೊಂದಿದೆ. ಎಲ್ಲಾ ತಾಲೂಕುಗಳಲ್ಲಿ ವರದಿಯಾದಂತೆ ಶೇ.೯೦ಕ್ಕಿಂತ ಹೆಚ್ಚಿನ ಗರ್ಭಿಣಿ ಮಹಿಳೆಯರು ಪ್ರಸವ ಪೂರ್ವ ಆರೈಕೆಯನ್ನು ಪಡೆದುಕೊಂಡಿದ್ದಾರೆ. ಈ ಎಲ್ಲ ಉಪಕ್ರಮಗಳ ಒಂದು ಬಹಳ ಉತ್ತೇಜನಕಾರಿ ಪರಿಣಾಮವೆಂದರೆ ಸಾಂಸ್ಥಿಕ ಹೆರಿಗೆಯ




ಪ್ರಮಾಣದಲ್ಲಿನ ಹೆಚ್ಚಳ. ಅದು ಈಗ ಶೇ.೯೦ರ ಆಸುಪಾಸಿನಲ್ಲಿದ್ದು ಅದನ್ನು ೧೦೦ಕ್ಕೆ ಹೆಚ್ಚಿಸಲು ಜಿಲ್ಲೆಯಾದ್ಯಂತ ಸೂಕ್ತ ಕ್ರಮ ಕೈಗೊಳ್ಳುವುದು ಅತ್ಯವಶ್ಯವಾಗಿದೆ.

೬.೧೯ ಮಕ್ಕಳಿಗೆ ರೋಗ ನಿರೋಧಕ ಹಾಕುವುದು

ರೋಗನಿರೋಧಕ ಲಸಿಕೆ ನೀಡುವುದು ಒಂದು ಅತ್ಯಂತ ಪರಿಣಾಮಕಾರಿಯದ ಮತ್ತು ಕಡಿಮೆ ವೆಚ್ಚ ಹೊಂದಿದ ಆರೋಗ್ಯ ಕಾರ್ಯಕ್ರಮವಾಗಿದೆ. ಅದು ಮೈಯಲ್ಲಿರುವ ಬೇನೆಯನ್ನು ನಿರ್ನಾಮ ಮಾಡಿದೆಯಲ್ಲದೇ. ಪೋಲಿಯೋ ರೋಗದ ತೀವ್ರತೆಯನ್ನು ಶೇ.೯೯ರಷ್ಟು ಕಡಿಮೆ ಮಾಡಿದೆ ಮತ್ತು ಒಟ್ಟಾರೆ ಅನಾರೋಗ್ಯ, ಅಂಗವಿಕಲತೆಯನ್ನು ಕಡಿಮೆ ಮಾಡಿ, ಹಲವಾರು ಸಾವುಗಳನ್ನು ತಡೆಗಟ್ಟಿದೆ. ಮಕ್ಕಳ ಜೀವಮಾನದಲ್ಲಿ ಬರಬಹುದಾದ ಮಾರಣಾಂತಿಕ ರೋಗಗಳನ್ನು ತಡೆಗಟ್ಟುವ ಕ್ರಮವಾಗಿ ಮಕ್ಕಳಿಗೆ ಲಸಿಕೆಗಳನ್ನು ನೀಡಿ ಅವರನ್ನು ಆರೋಗ್ಯಪೂರ್ಣ ವಯಸ್ಕರನ್ನಾಗಿ ಬೆಳೆಸುವುದು ಯಾವುದೇ ಆರೋಗ್ಯ ವ್ಯವಸ್ಥೆಯ ಪ್ರಮುಖ ಬಾಧ್ಯತೆಯಾಗಿರುತ್ತದೆ. ಚಿತ್ರದಲ್ಲಿ ತೋರಿಸಿದಂತೆ ಜಿಲ್ಲೆಯ ಶೇ.೮೫ರಷ್ಟು ಮಕ್ಕಳಿಗೆ ರೋಗನಿರೋಧಕ ಲಸಿಕೆಯನ್ನು ನೀಡಲಾಗಿದೆ. ಆದರೆ ದೇವದುರ್ಗ ತಾಲೂಕಿನಲ್ಲಿ ಅದು ಕೇವಲ ಶೇ.೭೦ರಷ್ಟಿದ್ದು ಲಿಂಗಸೂಗೂರಿನಲ್ಲಿ ಬರೀ ಶೇ.೭೫ರಷ್ಟಿರುವುದು ಇನ್ನೂ ಗಮನಾರ್ಹವಾದ ಯತ್ನಗಳ ಅಗತ್ಯವನ್ನು ಸೂಚಿಸುತ್ತದೆ.

ಚಿತ್ರ-೬.೨೮. ರಾಯಚೂರು ಜಿಲ್ಲೆಯಲ್ಲಿ ಲಸಿಕೀಕರಣ ಪಡೆದ ಮಕ್ಕಳ ಶೇ.ಪ್ರಮಾಣ




ಮೂಲ: ಆರೋಗ್ಯ ನಿರ್ವಹಣೆ ಮಾಹಿತಿ ವ್ಯವಸ್ಥೆ, ರಾಯಚೂರು

ಕಡಿಮೆ ತೂಕದ ಮಕ್ಕಳು

ಜನನ ಸಮಯದಲ್ಲಿನ ಮಗುವಿನ ತೂಕವು ಮಕ್ಕಳ ಆರೋಗಕ್ಯ ಸ್ಥಿತಿಯ ಒಂದು ಬಹುಮುಖ್ಯ ಸೂಚಿಯಾಗಿದೆ. ಕಡಿಮೆ ತೂಕದಿಂದ ಜನಿಸಿದ ಮಕ್ಕಳು ನಿರಂತರವಾಗಿ ದುರ್ಬಲರಾಗಿರುತ್ತಾರಲ್ಲದೇ ಪದೇ ಪದೇ ಅನಾರೋಗ್ಯಕ್ಕೂ ತುತ್ತಾಗುತ್ತಾರೆ. ಮಗುವು

ಅಪೌಷ್ಠಿಕತೆಯಿಂದ ಹೊರಬರಬೇಕಾದರೆ ಪೂರಕ ಪೌಷ್ಠಿಕಾಂಶಗಳನ್ನು ನೀಡಿ ಅವರು ಆರೋಗ್ಯವಂತರಾಗಿ ಬೆಳೆಯುವ ಅವಕಾಶ ಕಲ್ಪಿಸಬೇಕಾಗುತ್ತದೆ. ಇದಕ್ಕೆ ಸಂಬಂಧಿಸಿದ ವಿವರಗಳನ್ನು ನೀಡಲಾಗಿದೆ.

ಚಿತ್ರ-೬.೨೯ ರಾಯಚೂರು ಜಿಲ್ಲೆಯಲ್ಲಿ ಅಪೌಷ್ಠಿಕತೆಯಿಂದ ಬಳಲುತ್ತಿರುವ ಮತ್ತು ಕಡಿಮೆ ತೂಕದಿಂದ ಜನಿಸಿದ ಮಕ್ಕಳ ಶೇ.ಪ್ರಮಾಣ, ೨೦೧೧-೧೨



ಮೂಲ: ಆರೋಗ್ಯ ನಿರ್ವಹಣೆ ಮಾಹಿತಿ ವ್ಯವಸ್ಥೆ, ರಾಯಚೂರು

ರಾಯಚೂರು ಜಿಲ್ಲೆಯಲ್ಲಿ ಕಡಿಮೆ ತೂಕದಿಂದ ಜನಿಸಿದ ಮಕ್ಕಳ ಶೇಕಡವಾರು ಪ್ರಮಾಣ ಶೇ.೨೦ರಷ್ಟಿದ್ದು, ರಾಜ್ಯದ ಇತರೆ ಜಿಲ್ಲೆಗಳಿಗೆ ಹೋಲಿಸಿದರೆ ತುಸು ಹೆಚ್ಚಾಗಿಯೇ ಇದೆ. ತಾಲೂಕುವಾರು ಲಿಂಗಸೂಗೂರು (ಶೇ.೨೮). ಮಾನವಿ (ಶೇ.೨೭) ಮತ್ತು ದೇವದುರ್ಗ (ಶೇ.೨೬) ತಾಲೂಕುಗಳಲ್ಲಿ ಸಮಸ್ಯೆಯು ತುಲನಾತ್ಮಕವಾಗಿ ತೀವ್ರವಾಗಿದೆ. ಹಾಗೆಯೇ ಒಂದು ವರ್ಷದೊಳಗಿನ ಕಡಿಮೆ ತೂಕದ ಮಕ್ಕಳ ಪ್ರಮಾಣವು ತುಲನಾತ್ಮಕವಾಗಿ ಕಡಿಮೆ ಇದೆ (ಶೇ.೧೯). ಕಡಿಮೆ ತೂಕದಿಂದ ಜನಿಸಿ ಮಕ್ಕಳ ಹಾಗೂ ಒಂದು ವರ್ಷದೊಳಗಿನವರ ಕಡಿಮೆ ತೂಕ ಹೊಂದಿರುವಿಕೆಯ ಮಧ್ಯೆ ನೇರ ಸಂಬಂಧವಿರುವುದನ್ನು ಗಮನಿಸಬಹುದು. ಮಾನವಿ ಹಾಗೂ ಲಿಂಗಸೂಗೂರು ತಾಲೂಕುಗಳಲ್ಲಿ ಕಡಿಮೆ ತೂಕ ಹೊಂದಿದ ಶಿಶುಗಳ ಪ್ರಮಾಣವು ಉಳಿದ ತಾಲೂಕಗಳಿಗೆ ಹೋಲಿಸಿದಂತೆ ಅಧಿಕವಾಗಿದೆ. ರಾಜ್ಯದ ಇತರ ಜಿಲ್ಲೆಗಳಲ್ಲಿ ಈ ಸಮಸ್ಯೆ ತುಂಬಾ ಕಡಿಮೆ ಇರುವುದರಿಂದ ಜಿಲ್ಲೆಯಾದ್ಯಂತ ಸಮಸ್ಯೆಯ ನಿರ್ವಹಣೆಗೆ ಸೂಕ್ತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾಗಿದೆ.

ಹಾಗೆಯೇ ಜಿಲ್ಲೆಯಲ್ಲಿ ಅಪೌಷ್ಠಿಕತೆಯಿಂದ ಬಳಲುತ್ತಿರುವ ಮಕ್ಕಳ ಪ್ರಮಾಣವು ಶೇ.೪೬ರಷ್ಟಿದ್ದು, ಲಿಂಗಸೂಗೂರು ತಾಲೂಕಿನಲ್ಲಿ ಶೇ.೪೧ರಿಂದ ಪ್ರಾರಂಭವಾಗಿ ಸಿಂಧನೂರು ತಾಲೂಕಿನಲ್ಲಿ ಶೇ.೪೯ರವರೆಗೆ ಪಸರಿಸಿದೆ. ರಾಯಚೂರು ಹಾಗೂ ದೇವದುರ್ಗ ತಾಲೂಕುಗಳಲ್ಲಿಯೂ ಸಹ

ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳ ಪ್ರಮಾಣವು ಹೆಚ್ಚಾಗಿದೆ. ಉಳಿದ ಜಿಲ್ಲೆಗಳಲ್ಲಿ ಈ ಸಮಸ್ಯೆ ಕಡಿಮೆ ಇರುವುದು ಉಳಿದ ಜಿಲ್ಲೆಗಳಲ್ಲಿ ಈ ಸಮಸ್ಯೆ ಕಡಿಮೆ ಇರುವುದು ಅದನ್ನು ಪರಿಹರಿಸುವ ಜಿಲ್ಲೆಯಲ್ಲಿ ತಕ್ಷಣದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಅನಿವಾರ್ಯವಾಗಿದೆ.

೬.೨೦ ಸಾಂಕ್ರಾಮಿಕ ರೋಗಗಳು

ವ್ಯಕ್ತಿಗಳ ಆರೋಗ್ಯ ಸ್ಥಿತಿಯನ್ನು ಅಳೆಯಲಿಕ್ಕೆ ಇರುವ ಮತ್ತೊಂದು ಸೂಚಿಯೆಂದರೆ ಅಸ್ವಸ್ಥತಾ ಸ್ಥಿತಿ. ಅಸ್ವಸ್ಥತೆಯು ದೀರ್ಘಕಾಲೀನ ಅಥವಾ ಅಲ್ಪಕಾಲೀನ ಆಗಿದ್ದಿರಬಹುದು. ದೀಘಕಾಲೀನ ರೋಗಗಳನ್ನು ಸುಲಭವಾಗಿ ಗುಣಪಡಿಸಲಿಕ್ಕೆ ಆಗುವುದಿಲ್ಲವಾದ್ದರಿಂದ ಅವು ಶಾಶ್ವತ ಊನಕ್ಕೆ ಕಾರಣವಾಗಬಹುದಲ್ಲದೇ ಸಾವು ಕೂಡಾ ಸಂಭವಿಸಬಹುದು. ಆದರೆ ಅಲ್ಪಾವಧಿ ಅಸ್ವಸ್ಥತೆಗಳ ಕಾರಣಗಳನ್ನು ಪತ್ತೆಹಚ್ಚುವುದರಿಂದ ತಡೆಗಟ್ಟಬಹುದಾಗಿದೆ. ಮೇಲಾಗಿ ಸಾಂಕ್ರಾಮಿಕ ರೋಗಗಳು ವ್ಯಕ್ತಿಗಳ ಉದ್ಯೋಗ ಮತ್ತು ಆದಾಯವನ್ನು ತಾತ್ಪೂರ್ತಿಕವಾಗಿ ಕಡಿತಗೊಳಿಸುವುದಲ್ಲೇ, ಅಧಿಕ ವೆಚ್ಚಕ್ಕೂ ಕಾರಣವಾಗುತ್ತವೆ. ಈ ರೋಗಗಳು ಸಾಮಾನ್ಯವಾಗಿ ಹವಾಮಾನ ಮತ್ತು ಇತರೆ ಪರಿಸರ ಸಂಬಂಧಿ ಅಂಶಗಳ ಬದಲಾವಣೆಯಿಂದಾಗಿ ಹುಟ್ಟಿ ಹರಡುತ್ತವೆಯಾದ್ದರಿಂದ ಇವುಗಳನ್ನು ಮುಂಚೆಯೇ ನಿರೀಕ್ಷಿಸಬಹುದಾಗಿದೆ. ಯಾವುದೇ ಒಂದು ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ದಕ್ಷತೆಯನ್ನು ಅದು ಎಷ್ಟು ಪರಿಣಾಮಕಾರಿಯಾಗಿ ಸಾಂಕ್ರಾಮಿಕ ರೋಗಗಳನ್ನು ನಿಯಂತ್ರಿಸಿದೆ ಅಥವಾ ನಿರ್ಮೂಲನೆ ಮಾಡಿದೆ ಎಂಬುವುದರಿಂದ ಅಳೆಯಬಹುದಾಗಿದೆ. ಸಾಂಕ್ರಾಮಿಕ ರೋಗಗಳ ಇರುವಿಕೆಯು ಯಾವುದೇ ಸಮಾಜದ ಆರೋಗ್ಯದ ಸ್ಥಿತಿಯನ್ನು ಬಿಂಬಿಸುತ್ತದೆ.

೨೦೧೧–೧೨ರಲ್ಲಿ ಜಿಲ್ಲೆಯ ಜನಸಂಖ್ಯೆಯ ಶೇ.೨ರಷ್ಟು ಜನರು ಸಾಂಕ್ರಾಮಿಕ ರೋಗಗಳಿಂದ ಬಳಲಿದ ವರದಿಯಾಗಿದೆ. ಸಿಂಧನೂರು ಮತ್ತು ರಾಯಚೂರು ತಾಲೂಕುಗಳಲ್ಲಿ ಇದು ಅಧಿಕ ಪ್ರಮಾಣದಲ್ಲಿದ್ದು, ಉಳಿದ ತಾಲೂಕುಗಳಲ್ಲಿ ಜಿಲ್ಲಾ ಮೌಲ್ಯಕ್ಕಿಂತ ಕಡಿಮೆ ಇದೆ. ಕನಿಷ್ಠ ಅಭಿವೃದ್ಧಿ ಹೊಂದಿದ ತಾಲೂಕಾದ ದೇವದುರ್ಗ ತಾಲೂಕಿನಲ್ಲಿ ಇದರ ತೀವ್ರತೆ ಕಡಿಮೆ ಇದೆ. ಹೀಗೆ ಆರ್ಥಿಕ ಅಭಿವೃದ್ಧಿಯೊಂದಿಗೆ ಸಾಂಕ್ರಾಮಿಕ ರೋಗಗಳ ಹರಡುವಿಕೆಯು ನೇತ್ಯಾತ್ಮಕ ಸಂಬಂಧ ಹೊಂದಿದೆ. ಆದರೆ ರಾಜ್ಯದ ಇತರೆಡೆ, ಸಾಂಕ್ರಾಮಿಕ ರೋಗಗಳಿಗೆ ತುತ್ತಾದ ಕನಿಷ್ಠ ಜನಸಂಖ್ಯೆಯ ಪ್ರಮಾಣ ೦.೦೦೪ ಇರುವುದನ್ನು ಗಮನಿಸಿದರೆ, ರಾಯಚೂರು ಜಿಲ್ಲೆಯ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯು ಬಹು ವಿಸ್ತೃತವಾದ ಕ್ರಮ ಕೈಗೊಳ್ಳಬೇಕಾಗಿರುವುದನ್ನು ಒತ್ತಿ ಹೇಳುತ್ತದೆ.

ವಿವಿಧ ಆರೋಗ್ಯ ಸೇವೆಗಳ ಕಾರ್ಯಕ್ಷಮತೆ

೨೦೦೫ರಲ್ಲಿ ಭಾರತದಲ್ಲಿ ಆರಂಭವಾದ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನವನ್ನು (NRHM) ೨೦೧೩ರಲ್ಲಿ ಮತ್ತೆ ರಾಷ್ಟ್ರೀಯ ಆರೋಗ್ಯ ಅಭಿಯಾನದ (NHM) ಉಪ ಅಭಿಯಾನವಾಗಿ ರೂಪಿಸಲಾಗಿದೆ. ಈ ಕಾರ್ಯಕ್ರಮಗಳಲ್ಲಿರುವ ಘಟಕಗಳೆಂದರೆ; ಆಶಾ ಕಾರ್ಯಕರ್ತೆಯರು, ರೋಗಿ ಕಲ್ಯಾಣ ಸಮಿತಿ, ಉಪ ಕೇಂದ್ರಗಳಿಗೆ ಅನ್‌ಟೈಡ್ ಅನುದಾನ, ಜನನಿ ಸುರಕ್ಷ ಯೋಜನೆ, ಪ್ರಸೂತಿ ಆರೈಕೆ, ಮಡಿಲು ಕಿಟ್ ಯೋಜನೆ, ಆರೋಗ್ಯ ಕವಚ ಮತ್ತು ರಾಷ್ಟ್ರೀಯ ಸ್ವಾಸ್ಥ್ಯಬಿಮಾ ಯೋಜನೆ.

ಇವುಗಳೆಲ್ಲ ಜಿಲ್ಲೆಯಲ್ಲಿ ಅನುಷ್ಠಾನಗೊಳ್ಳುತ್ತಿದ್ದು, ಅವು ನಿರೀಕ್ಷಿತ ಗುರಿಗಳನ್ನು ತಲುಪುವಲ್ಲಿ ಯಶಸ್ವಿಯಾಗಿವೆಯೋ ಇಲ್ಲವೋ ಎಂಬುದನ್ನು ತಿಳಿಯಲು ಬೇರೆಯದೇ ಆದ ಅಧ್ಯಯನ ಕೈಗೊಳ್ಳುವ ಅವಶ್ಯಕತೆಯಿದೆ. ಆದರೆ ಒಟ್ಟಾರೆಯಾಗಿ ನೋಡಿದಾಗ ಜಿಲ್ಲೆಯಲ್ಲಿ ಶಿಶು, ಮಕ್ಕಳ ಹಾಗೂ ತಾಯಂದಿರ ಮರಣ ಪ್ರಮಾಣಗಳಲ್ಲಿ ಇಳಿಕೆಯಾಗುತ್ತಿರುವುದು ಈ ಎಲ್ಲ ಯೋಜನೆ/ಕಾರ್ಯಕ್ರಮಗಳ ಸಂಚಿತ ಪ್ರಭಾವವೆಂದೇ ಹೇಳಬಹುದು. ಈ ಹಿನ್ನೆಲೆಯಲ್ಲಿ ಎರಡು ಪ್ರಮುಖ ಕಾರ್ಯಕ್ರಮಗಳಾದ ಜನನಿ ಸುರಕ್ಷಾ ಯೋಜನೆ ಮತ್ತು ಮಡಿಲು ಕಿಟ್ ವಿತರಣೆ ಕಾರ್ಯಕ್ರಮಗಳ ಮಾಹಿತಿಯನ್ನು ಕೋಷ್ಟಕ ೫.೮ರಲ್ಲಿ ನೀಡಲಾಗಿದೆ.

ಕೋಷ್ಟಕ–೬.೩೦

ರಾಯಚೂರು ಜಿಲ್ಲೆಯಲ್ಲಿ ತಾಯಂದಿರ ಹಾಗೂ ಮಕ್ಕಳ ಆರೋಗಕ್ಯರ ಮತ್ತು ಜೀವಿಸುವಿಕೆಯನ್ನು ಉತ್ತಮಗೊಳಿಸುವ ಕಾರ್ಯಕ್ರಮಗಳು, ೨೦೧೧–೧೨

ತಾಲೂಕು	ಅಂಬುಲೆನ್ಸ್‌ಗಳು		೨೪*೭	ಪ್ರಾ.ಆ.ಕೇಂದ್ರಗಳು	ದ.ಸು.ಯೋ	ಮಡಿಲು ಕಿಟ್
	ಸಂ.	ಪ್ರಯೋಜನ ದಾರರು	ಸಂ.	ಪ್ರಯೋಜನ ದಾರರು	ಪ್ರಯೋಜನ ದಾರರು	ಪ್ರಯೋಜನ ದಾರರು
ದೇವದುರ್ಗ	೩	೨೫೪೪	೬	೨೮೮೯	೨೧೬೬	೧೫೦೩
ಲಿಂಗಸೂಗೂರು	೨	೩೮೬೪	೧೨	೫೩೭೫	೨೮೯೯	೨೨೭೯
ಮಾನವಿ	೩	೪೦೪೪	೯	೪೨೩೧	೨೮೯೧	೨೧೭೯
ರಾಯಚೂರು	೪	೪೨೫೨	೮	೪೧೮೬	೫೭೧೩	೩೫೮೮
ಸಿಂಧನೂರು	೩	೩೧೬೮	೧೧	೩೦೩೧	೩೬೭೯	೧೫೭೪
ಜಿಲ್ಲೆ	೧೫	೧೭೮೭೨	೪೬	೧೯೭೧೨	೧೭೨೮೮	೧೧೧೨೩

ಮೂಲ: ಜಿ.ಸಾಂ.ಅಧಿಕಾರಿ ರಾಯಚೂರು

ಜನನಿ ಸುರಕ್ಷ ಯೋಜನೆ ಅಡಿಯಲ್ಲಿ ಸುಮಾರು ೧೭,೩೦೦ ಫಲಾನುಭವಿಗಳು ಪ್ರಯೋಜನ ಪಡೆದಿದ್ದು ಹೆಚ್ಚಿನವರು ರಾಯಚೂರು ಮತ್ತು ಸಿಂಧನೂರು ತಾಲೂಕುಗಳಿಗೆ ಸೇರಿದವರಾಗಿದ್ದಾರೆ. ಇದೇ ತಾಲೂಕುಗಳಲ್ಲಿ ತಾಯಂದಿರ ಮರಣ ಪ್ರಮಾಣಗಳು ಕಡಿಮೆ ಇದ್ದುದನ್ನು ಜ್ಞಾಪಿಸಿಕೊಂಡರೆ ಜನನಿ ಸುರಕ್ಷಾ ಯೋಜನೆಯು ತಾಯಂದಿರ ಮರಣ ಪ್ರಮಾಣವನ್ನು ಕಡಿಮೆ ಮಾಡುವಲ್ಲಿ ನೇರ ಪ್ರಭಾವವನ್ನು ಹೊಂದಿದೆ. ಇದಲ್ಲದೇ ಸಾಂಸ್ಥಿಕ ಹೆರಿಗೆಗಳ ಸಂಖ್ಯೆಯೂ ವೃದ್ಧಿಯಾಗಿರುವುದು ಗಮನಾರ್ಹ. ಇದಲ್ಲದೆ ಮಡಿಲು ಕಿಟ್ ಯೋಜನೆಯು ಸಹ ಹಿಂದುಳಿದ ತಾಲೂಕುಗಳಲ್ಲಿ ಹೆಚ್ಚಿನ ಪ್ರಯೋಜನವನ್ನು ಒದಗಿಸಿದೆ ಮಡಿಲು ಯೋಜನೆಯನ್ನು ಬಳಸುವುದರಲ್ಲಿಯೂ ಸಹ ಹಿಂದುಳಿದ ತಾಲೂಕುಗಳೇ ಮುಂಚೂಣಿಯಲ್ಲಿರುವುದು. ಆ ತಾಲೂಕುಗಳಲ್ಲಿನ ಪ್ರಸವದ ನಂತರದ ಶಿಶುವಿನ ಹಾಗೂ ತಾಯಿಯ ಆರೋಗ್ಯದ ಮೇಲೆ ಒಳ್ಳೆಯ ಪರಿಣಾಮ ಬೀರಿರುವುದನ್ನು ಕಾಣಬಹುದು. ಈ ಎಲ್ಲಾ ಕಾರ್ಯಕ್ರಮಗಳ ಪ್ರಮುಖ ಲಾಭವು ಸಾಂಸ್ಥಿಕ ಹೆರಿಗೆಗಳ ಮೇಲಾಗಿದೆ. ಈ ಯೋಜನೆಗಳ ಸಾಫಲ್ಯಕ್ಕೆ ನೂರಾರು ಜನ ಆಶಾ ಕಾರ್ಯಕರ್ತೆಯರು. ಒಂದು ಸೂಪರ್ ಸ್ಪೆಶಾಲಿಟಿ ಆಸ್ಪತ್ರೆ, ಐದು ತಾಲೂಕು ಆಸ್ಪತ್ರೆಗಳು, ೪೬ ನಿರಂತರ ತೆರೆದಿರುವ ೨೪೭ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಒಂದು ಸಮುದಾಯ ಆರೋಗ್ಯ ಕೇಂದ್ರ ಎಂಟು ನಗರ ಆರೋಗ್ಯ ಕೇಂದ್ರಗಳು ಮತ್ತು ೧೫ ಅಂಬುಲೆನ್ಸ್‌ಗಳು ಅವಿರತ ಶ್ರಮಪಟ್ಟಿರುವುದನ್ನು ದಾಖಲಿಸಲೇ

[illegible]


ಬೇಕಾಗುತ್ತದೆ. ಆದಾಗ್ಯೂ, ಈ ಯೋಜನೆಗಳ ಹರವು ಮತ್ತು ಪರಿಣಾಮಗಳನ್ನು ಬೇರೆಯಾಗಿಯೇ ಅಧ್ಯಯನ ಮಾಡುವ ಅವಶ್ಯಕತೆ ಇದೆ. ಸಹಸ್ರಮಾನ ಅಭಿವೃದ್ಧಿ ಗುರಿಗಳ ಈಡೇರಿಕೆಯಲ್ಲಿ ಈ ಯೋಜನೆಗಳ ಪಾತ್ರ ಹಿರಿದಾಗಿದೆ ಎಂಬುದೂ ಸತ್ಯ.

ಇವುಗಳಲ್ಲದೇ ೨೦೧೪-೧೫ರಲ್ಲಿ ಜಿಲ್ಲೆಯಲ್ಲಿ ಒಂದು ಜನರಿಕ್ ಔಷಧಿ ಮಳಿಗೆಯನ್ನು ಆರಂಭ ಮಾಡಲಾಗುತ್ತಿದ್ದು, ಮುಂದಿನ ೨೦೧೫-೧೬ನೇ ಸಾಲಿನಲ್ಲಿ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಜನರಿಕ್ ಔಷಧಿ ಮಳಿಗೆಯನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ. ಶುಚಿ ಕಾರ್ಯಕ್ರಮದಡಿ ಜಿಲ್ಲೆಯಲ್ಲಿ ೨೦೧೩-೧೪ ನೇ ಸಾಲಿನಲ್ಲಿ ಒಟ್ಟು ೨,೮೬,೪೯೧ ಸ್ಯಾನಿಟರಿ ನ್ಯಾಪ್‌ಕಿನ್‌ಗಳನ್ನು ಯುವತಿಯರಿಗೆ ನೀಡಲಾಗಿದೆ. ಪ್ರಸೂತಿ ಆರೈಕೆ ಕಾರ್ಯಕ್ರಮದಡಿ ಮಾರ್ಗಸೂಚಿಗಳನ್ವಯ ಜಿಲ್ಲೆಯಲ್ಲಿ ೨೦೧೩-೧೪ನೇ ಸಾಲಿನಲ್ಲಿ ಒಟ್ಟು ೧೪,೫೨೬ ಅರ್ಹ ಫಲಾನುಭವಿಗಳಿಗೆ ಅನುದಾನವನ್ನು ವಿತರಣೆ ಮಾಡಲಾಗಿದೆ.

೬.೨೧ ಆರೋಗ್ಯದ ಖರ್ಚುವೆಚ್ಚ

ರಾಯಚೂರು ಜಿಲ್ಲೆಯಲ್ಲಿ ೨೦೧೧-೧೨ರಲ್ಲಿ ವೈದ್ಯಕೀಯ ಆರೋಗ್ಯ, ಭಾರತೀಯ ವೈದ್ಯ ಪದ್ಧತಿ ಹಾಗೂ ಕುಟುಂಬ ಕಲ್ಯಾಣ ಕಾರ್ಯಕ್ರಮಗಳ ಮೇಲಿನ ವೆಚ್ಚವು ರೂ.೯೫೯.೫೮ ಲಕ್ಷಗಳಷ್ಟಾಗಿದ್ದಿತು. ಇದು ಜಿಲ್ಲಾ ಪಂಚಾಯತಿಯ ಒಟ್ಟು ವೆಚ್ಚದ ಶೇ.೨೩ರಷ್ಟಿದೆ. ಈ ವೆಚ್ಚದಲ್ಲಿ ಶೇ.೮೦ರಷ್ಟು ವೆಚ್ಚವು ತಾಯಿ ಹಾಗೂ ಮಕ್ಕಳ ಆರೋಗ್ಯ ವೃದ್ಧಿಗಾಗಿ ಬಳಸಲ್ಪಡುತ್ತಿರುವುದು ವಿಶೇಷ. ಆರೋಗ್ಯದ ಮೇಲಿನ ವೆಚ್ಚದ ಮತ್ತಷ್ಟು ವಿಶ್ಲೇಷಣೆ ಮಾಡುವುದಕ್ಕೋಸ್ಕರ ತಲಾ ವೆಚ್ಚ ಲೆಕ್ಕ ಹಾಕಿದ್ದು ಅದನ್ನು ಚಿತ್ರ ೫.೬ರಲ್ಲಿ ತೋರಿಸಲಾಗಿದೆ.

ಚಿತ್ರ-೬.೩೧ ರಾಯಚೂರು ಜಿಲ್ಲೆಯಲ್ಲಿ ಆರೋಗ್ಯದ ಮೇಲಿನ ತಲಾ ವೆಚ್ಚ, ೨೦೧೧-೧೨ (ರೂ)



ಮೂಲ: ಮುಖ್ಯ ಲೆಕ್ಕಾಧಿಕಾರಿ, ಜಿ.ಪಂ.ರಾಯಚೂರು

ರಾಯಚೂರು ಜಿಲ್ಲೆಯಲ್ಲಿ ೨೦೧೧-೧೨ರಲ್ಲಿ ಆರೋಗ್ಯದ ಮೇಲೆ ತಲಾ ರೂ.೨೨೨ ವ್ಯಯ ಮಾಡಲಾಗಿದ್ದು, ಇದು ತುಂಬಾ ಕಡಿಮೆ ಪ್ರಮಾಣದ್ದಾಗಿದೆ. ರಾಜ್ಯದ ಇತರ ಜಿಲ್ಲೆಗಳಲ್ಲಿ ದಾಖಲಾದ ಗರಿಷ್ಠ ವೆಚ್ಚವಾದ ರೂ. ೩೭೦೨ಕ್ಕೆ ಹೋಲಿಸಿದರೆ ಇದು ಸ್ಪಷ್ಟವಾಗುತ್ತದೆ. ಮಾನವಿ, ಸಿಂಧನೂರು ಮತ್ತು ದೇವದುರ್ಗ ತಾಲೂಕುಗಳಲ್ಲಿ ಜಿಲ್ಲಾ ಸರಾಸರಿಗಿಂತ ಹೆಚ್ಚಿನ ವೆಚ್ಚ ಇದ್ದರೆ ಲಿಂಗಸೂಗೂರು ಮತ್ತು ರಾಯಚೂರು ತಾಲೂಕುಗಳಲ್ಲಿ ಬಹಳ ಕಡಿಮೆ ವೆಚ್ಚ ಮಾಡಿರುವುದನ್ನು ಗಮನಿಸಬಹುದಾಗಿದೆ. ಹಿಂದುಳಿದ ತಾಲೂಕುಗಳಲ್ಲಿ ಹೆಚ್ಚಿನ ವೆಚ್ಚ ಮಾಡಿರುವುದು ಉತ್ತಮ ಸೂಚನೆಯಾಗಿದೆ. ಆದರೆ, ಫಲಿತಾಂಶದ ಗುಣಮಟ್ಟವನ್ನು ಪರಿಗಣಿಸಿ ಜಿಲ್ಲೆಯ ಆರೋಗ್ಯ ವೆಚ್ಚವನ್ನು ಇನ್ನೂ ಹೆಚ್ಚಿಸುವ ಅಗತ್ಯತೆ ಇದೆ.

೬.೨೨ ಆರೋಗ್ಯದ ತೂಕ ವಿಶ್ಲೇಷಣೆ

ಹಲವು ಕಾರಣ ಮತ್ತು ಪರಿಣಾಮ ಚಲಕಗಳನ್ನು ಪರಿಗಣನೆಗೆ ತೆಗೆದುಕೊಂಡು ತೂಕದ ವಿಶ್ಲೇಷಣೆಯನ್ನು ಮಾಡಲಾಗಿದೆ. ಸಾಂಸ್ಥಿಕ ಹೆರಿಗೆಗಳ ಪ್ರಮಾಣವನ್ನು ಕಡಿಮೆ ತೂಕದಿಂದ ಜನಿಸಿದ ಮಕ್ಕಳ ಪ್ರಮಾಣಕ್ಕೆ ಮತ್ತು ಶಿಶು ಮರಣ ದರಕ್ಕೆ ಹೋಲಿಸಲಾಗಿದೆ. ಮೂರರ ಮಧ್ಯೆ ನೇರ ಸಂಬಂಧ ಇರುವುದನ್ನು ಗಮನಿಸಬಹುದಾದ್ದರಿಂದ ಕಡಿಮೆ ತೂಕದಿಂದ ಜನಿಸಿದ ಮಕ್ಕಳ ಪ್ರಮಾಣ ಮತ್ತು ಶಿಶು ಮರಣ ದರಗಳನ್ನು ಕಡಿಮೆ ಮಾಡಲು ಸಾಂಸ್ಥಿಕ ಹೆರಿಗೆಗಳ ಪ್ರಮಾಣವನ್ನು ಹೆಚ್ಚಿಸಬೇಕಾದ ಅವಶ್ಯಕತೆಯನ್ನು ತೋರಿಸುತ್ತದೆ.

ತಾಯಂದಿರ ಮರಣ ದರವನ್ನು ಪ್ರಸವ ಪೂರ್ವ ಆರೈಕೆ ಪಡೆದ ಗರ್ಭಿಣಿ ಮಹಿಳೆಯರು ಮತ್ತು ಸಾಂಸ್ಥಿಕ ಹೆರಿಗೆಗಳ ಪ್ರಮಾಣಕ್ಕೆ ಹೋಲಿಸಲಾಗಿದೆ. ಈ ಮೂರರಲ್ಲೂ ಸಹ ಉತ್ತಮ ಸಂಬಂಧ ಇರುವುದು ಕಂಡು ಬರುತ್ತದೆ. ಆದ್ದರಿಂದ ತಾಯಂದಿರ ಮರಣ ದರವನ್ನು ಕಡಿಮೆ ಮಡಲು ಪ್ರಸವ ಪೂರ್ವ ಆರೈಕೆ ಪಡೆದ ಗರ್ಭಿಣಿ ಮಹಿಳೆಯರ ಮತ್ತು ಸಾಂಸ್ಥಿಕ ಹೆರಿಗೆಗಳ ಪ್ರಮಾಣದ ಹೆಚ್ಚಳದ ಅವಶ್ಯಕತೆಯಿದೆ.

ಮಕ್ಕಳ ಮರಣ ದರ ಮತ್ತೊಂದು ಮಹತ್ವದ ಅಂಶವಾಗಿದ್ದು ಅದನ್ನು ಲಸಿಕೀಕರಣಗೊಂಡ ಮಕ್ಕಳ ಮರಣ ಪ್ರಮಾಣ ಹಾಗೂ ಕಡಿಮೆ ತೂಕದಿಂದ ಜನಿಸಿದ ಮಕ್ಕಳ ಪ್ರಮಾಣಗಳ ಜೊತೆಗೆ ಹೋಲಿಸಬಹುದು. ಈ ಮೂರು ಚಲಕಗಳ ನಡುವೆ ಅತಿ ನಿಕಟವಾದ ಸಂಬಂಧ ತೋರಿಬರುತ್ತದೆ. ಆದ್ದರಿಂದ ಮಕ್ಕಳ ಮರಣ ಪ್ರಮಾಣವನ್ನು ಕಡಿಮೆ ಮಾಡಲು ಸಂಪೂರ್ಣ ಲಸಿಕೀಕರಣವಲ್ಲದೇ ಮಕ್ಕಳ ಪೌಷ್ಠಿಕತೆಯನ್ನು ಹೆಚ್ಚಿಸುವ ಅಗತ್ಯತೆಯನ್ನು ಒತ್ತಿ ಹೇಳುತ್ತದೆ.

ಮಾನವಿ ತಾಲೂಕಿನಲ್ಲಿ ಆರೋಗ್ಯ ಸೂಚಿಯ ಮೌಲ್ಯ ಕಡಿಮೆ ಇದ್ದು ಆರೋಗ್ಯದ ಮೇಲಿನ ತಲಾ ವೆಚ್ಚ ಹೆಚ್ಚಾಗಿದೆ. ಆದರೆ ರಾಯಚೂರಿನಲ್ಲಿ ಇದಕ್ಕೆ ತದ್ವಿರುದ್ದವಾದ ಪರಿಸ್ಥಿತಿ ಇದೆ. ಪ್ರಾಯಶಃ ರಾಯಚೂರು ತಾಲೂಕಿನಲ್ಲಿ ಖಾಸಗಿ ಆರೋಗ್ಯ ಸೇವೆ ನೀಡಿಕೆದಾರರು ಹೆಚ್ಚಿನ ಸಂಖ್ಯೆಯಲ್ಲಿರಬಹುದು. ಆದರೆ ಉಳಿದ ತಾಲೂಕುಗಳಲ್ಲಿ ಆರೋಗ್ಯ ವೆಚ್ಚಕ್ಕೂ ಮತ್ತು ಆರೋಗ್ಯ ಸೂಚಿಗೂ ನೇರ ಸಂಬಂಧವಿದೆ.

ಕೋಷ್ಟಕ–೬.೩೨
ರಾಯಚೂರು ಜಿಲ್ಲೆಯಲ್ಲಿ ತಾಯಂದಿರ ಹಾಗೂ ಮಕ್ಕಳ ಆರೋಗಕ್ಯರ ಮತ್ತು ಜೀವಿಸುವಿಕೆಯನ್ನು ಉತ್ತಮಗೊಳಿಸುವ ಕಾರ್ಯಕ್ರಮಗಳು, ೨೦೧೧–೧೨

	ರಾಯಚೂರು ಜಿಲ್ಲೆ				ಕರ್ನಾಟಕ			
ವಾಸ್ತವ್ಯದ ವಿಧ	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ
ಸುರಕ್ಷಿತ ಕುಡಿಯುವ ನೀರು ಲಭ್ಯತೆಯಿರುವ ಶೇ.ಕಟುಂಬಗಳು								
ಗ್ರಾಮೀಣ	೪೬.೩೭	೪೬.೫೬	೫೨.೩೩	೪೯.೭೭	೬೬.೦೫	೬೨.೨೩	೬೬.೦೫	೬೫.೭೧
ನಗರ	೭೬.೩೪	೬೮.೪೩	೮೬.೩೮	೮೩.೪೨	೮೧.೮೨	೮೨.೫೨	೮೭.೫೪	೮೬.೬೫
ಒಟ್ಟು	೫೩.೦೭	೪೮.೭೭	೬೩.೪೬	೫೮.೬೭	೭೦.೬೯	೬೭.೧೨	೭೫.೫೪	೭೪.೧೫
ಶೌಚಾಲಯ ಲಭ್ಯತೆಯಿರುವ ಶೇ.ಕುಟುಂಬಗಳು								
ಗ್ರಾಮೀಣ	೫.೪೯	೪.೩೭	೧೩.೯೩	೯.೯೯	೧೬.೩೯	೧೫.೬೪	೩೩.೨೪	೨೮.೪೧
ನಗರ	೨೯.೧೮	೨೪.೮೮	೫೭.೫೦	೫೦.೪೨	೬೭.೭೩	೬೯.೮೧	೮೮.೧೩	೮೪.೯೩
ಒಟ್ಟು	೧೦.೭೯	೬.೪೪	೨೮.೧೮	೨೦.೬೮	೩೧.೫೦	೨೮.೭೦	೫೭.೪೭	೫೧.೨೧
• ಚರಂಡಿ ವ್ಯವಸ್ಥೆ ಲಭ್ಯತೆಯಿರುವ ಶೇ.ಕುಟುಂಬಗಳು								
ಗ್ರಾಮೀಣ	೧೭.೫೭	೧೬.೩೯	೨೪.೧೨	೨೦.೯೯	೪೧.೦೪	೩೭.೪೩	೪೩.೫೮	೪೨.೫೪
ನಗರ	೭೧.೮೩	೬೪.೭೯	೮೧.೭೯	೭೮.೯೧	೮೨.೪೮	೮೨.೮೨	೮೮.೫೬	೮೭.೬೦
ಒಟ್ಟು	೨೯.೭೧	೨೧.೨೭	೪೨.೯೮	೩೬.೩೧	೫೩.೨೪	೪೮.೩೮	೬೩.೪೪	೬೦.೭೧

ಮೂಲ:– ಕರ್ನಾಟಕ ಸರಕಾರ ಜನಗಣತಿ ವರದಿ – ೨೦೧೧

ಹೀಗೆ ಆರೋಗ್ಯ ವಲಯದ ತೂಕ ವಿಶ್ಲೇಷಣೆಯಿಂದ ತಿಳಿದುಬರುವ ಅಂಶಗಳೆಂದರೆ;

* ಸಾಂಸ್ಥಿಕ ಹೆರಿಗೆಗಳ ಪ್ರಮಾಣದ ಹೆಚ್ಚಳದಿಂದ ಶಿಶುಮರಣ ದರ ಹಾಗೂ ಕಡಿಮೆ ತೂಕದಿಂದ ಜನಿಸಿದ ಮಕ್ಕಳ ಪ್ರಮಾಣದಲ್ಲಿ ಇಳಿಕೆಯಾಗುತ್ತದೆ;
* ಗರ್ಭಿಣಿ ಮಹಿಳೆಯರು ಸಂಪೂರ್ಣವಾಗಿ ಪ್ರಸವ ಪೂರ್ವ ಆರೈಕೆ ಪಡೆದರೆ ಮತ್ತು ಸಾಂಸ್ಥಿಕ ಹೆರಿಗೆಗಳ ಪ್ರಮಾಣದಲ್ಲಿ ಹೆಚ್ಚಳವಾದರೆ ತಾಯಂದಿರ ಮರಣ ದರವನ್ನು ಕಡಿಮೆ ಮಾಡಬಹುದು;
* ಸಂಪೂರ್ಣ ಲಸಿಕೀಕರಣವನ್ನು ಸಾಧಿಸಿ ಮಕ್ಕಳ ಅಪೌಷ್ಠಿಕತೆಯನ್ನು ಕಡಿಮೆ ಮಾಡಿದರೆ ಮಕ್ಕಳ ಮರಣ ಪ್ರಮಾಣ ಕಡಿಮೆಯಾಗುತ್ತದೆ.
* ಆರೋಗ್ಯದ ಮೇಲಿನ ತಲಾ ವೆಚ್ಚವನ್ನು ಹೆಚ್ಚಿಸಿದರೆ ಒಟ್ಟಾರೆ ಆರೋಗ್ಯ ಸ್ಥಿತಿಯನ್ನು ಸುಧಾರಿಸಬಹುದಾಗಿದೆ.

ಕ್ಷೇತ್ರಕಾರ್ಯ ಮಾಹಿತಿ ಆಧಾರದ ಅಧ್ಯಯನ

ಪೋಷಣೆಯು ಸುಸ್ಥಿರ ಮಾನವ ಅಭಿವೃದ್ಧಿಯಲ್ಲಿ ಬಹುಮುಖ್ಯವಾದ ಅಂಶವಾಗಿದೆ. ಅಸಮರ್ಪಕವಾದ ಪೋಷಣೆಯ ಫಲಿತಾಂಶವು, ಮಕ್ಕಳ ಉಳಿವು ಮತ್ತು ಬೆಳವಣಿಗೆಗೆ ಗಂಡಾಂತರಕಾರಿಯಾಗಿದ್ದು ತುಂಬಲಾರದಂತಹ ಹಾನಿಯನ್ನುಂಟುಮಾಡುತ್ತದೆ. ಅಪೌಷ್ಠಿಕತೆ ಒಂದು ಸಂಕೀರ್ಣ ವಿದ್ಯಮಾನವಾಗಿದ್ದು. ಇದು ಬಡತನ ಮತ್ತು ಅನಾರೋಗ್ಯದ ಕಾರಣ ಮತ್ತು ಪರಿಣಾಮವಾಗಿ ಚಕ್ರದೋಪಾದಿಯಾಗಿ ಮುಂಬರುವ ಪೀಳಿಗೆಗಳನ್ನೂ ಬಾಧಿಸುತ್ತದೆ. ಅಪೌಷ್ಠಿಕತೆಯು ವಯಸ್ಕರಲ್ಲಿ ಕೆಲಸ ಮಾಡುವ ಸಾಮರ್ಥ್ಯವನ್ನು ಕಡಿಮೆಗೊಳಿಸಿ ಮಕ್ಕಳಲ್ಲಿ ಮಾನಸಿಕ ಮತ್ತು ಮರ್ತ್ಯತೆಯನ್ನು ಹೆಚ್ಚಿಸುತ್ತದೆ. ಐದು ವರ್ಷದೊಳಗಿನ ಮಕ್ಕಳ ಮರಣಕ್ಕೆ ಅಪೌಷ್ಠಿಕತೆಯು ಶೇ.೫೦ರಷ್ಟು ಮೂಲ ಕಾರಣವಾಗಿದೆ. ಅಪೌಷ್ಠಿಕತೆಯಿಂದ ಸಾವು ಸಂಭವಿಸದಿದ್ದರೂ, ಕಿರು ಪೋಷಕಾಂಶಗಳ ಕೊರತೆಯಿಂದ ದೈಹಿಕ ಮತ್ತು ಮಾನಸಿಕ ಬೆಳವಣಿಗೆಗಳ ಮೇಲೆ

ಶಾಶ್ವತವಾದಂಥ ಪರಿಣಾಮ ಬೀರುತ್ತದೆ. ವಿಶ್ವದ ಇತರ ರಾಷ್ಟ್ರಗಳಿಗೆ ಹೋಲಿಸಿದಾಗ ಭಾರತದಲ್ಲಿ ಮಕ್ಕಳ ಅಪೌಷ್ಠಿಕತೆ ಪ್ರಮಾಣಗಳು ಆಫ್ರಿಕ ಮತ್ತು ಲ್ಯಾಟಿನ್ ಅಮೇರಿಕದ ದೇಶಗಳಿಗಿಂತಲೂ ಹೆಚ್ಚಾಗಿವೆ. ಅಪೌಷ್ಠಿಕತೆಯು ಮಕ್ಕಳ ಒಟ್ಟಾರೆ ಆರೋಗ್ಯ, ಅವರಲ್ಲಿನ ಅಸ್ವಸ್ಥತೆ ಹಾಗೂ ಮರಣ ದರಗಳನ್ನು ಪ್ರಭಾವಿಸುವ ಒಂದು ಮಹತ್ವದ ಅಂಶವಾಗಿರುತ್ತದೆ. ಆದರೆ ಅಪೌಷ್ಠಿತೆಯು ಸಾವು ಸಂಭವಿಸುವುದಕ್ಕೆ ನೇರವಾಗಿ ಕಾರಣವಲ್ಲದಿದ್ದರೂ ಮಕ್ಕಳ ಹೆಚ್ಚಿನ ಮರಣಗಳಿಗೆ ಕಾರಣೀಭೂತವಾದ ಅಂಶವಾಗಬಹುದು (ವಿಶ್ವ ಆರೋಗ್ಯ ಸಂಸ್ಥೆ, ೨೦೦೪). ಅಪೌಷ್ಠಿಕತೆಗೆ ಹಲವಾರು ಕಾರಣಗಳಿದ್ದು ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಬಡತನ, ಪೌಷ್ಠಿಕ ಆಹಾರದ ಅಲಭ್ಯತೆ, ಅಸಮರ್ಪಕ ಆಹಾರದ ಅಲಭ್ಯತೆ, ಶಿಶು ಹಾಗೂ ಮಕ್ಕಳಿಗೆ ಆಹಾರ ನೀಡುವಲ್ಲಿನ ತಪ್ಪು ಆಚರಣೆಗಳು, ಇತ್ಯಾದಿ.

ಅಪೌಷ್ಠಿಕತೆ ಸಾಮಾನ್ಯವಾಗಿ ಎಲ್ಲ ಸಾಮಾಜಿಕ ಸಮುದಾಯದ ಗುಂಪುಗಳ ಮೇಲೆ ಪರಿಣಾಮ ಬೀರುತ್ತದೆ. ಅದರಲ್ಲೂ ಮುಖ್ಯವಾಗಿ ಶಿಶುಗಳು ಮತ್ತು ಕಿರಿಯ ಮಕ್ಕಳಿಗೆ ಇದು ಅತ್ಯಂತ ಅಪಾಯಕಾರಿಯಾದುದಾಗಿದೆ. ಏಕೆಂದರೆ, ಮಕ್ಕಳ ಹೆಚ್ಚಿನ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಪೌಷ್ಠಿಕಾಂಶದ ಅಗತ್ಯತೆ ತುಂಬಾ ಇರುತ್ತದೆ. ಇನ್ನೊಂದು ಮುಖ್ಯ ಜನಸಮೂಹವೆಂದರೆ ಗರ್ಭಿಣಿ ಮಹಿಳೆಯರು. ಅಪೌಷ್ಠಿಕತೆಯಿಂದ ಬಳಲುತ್ತಿರುವ ಗರ್ಭಿಣಿ ಮಹಿಳೆ, ಮಗುವಿಗೆ ಜನ್ಮ ನೀಡಿದಾಗ ಹುಟ್ಟಿದ ಮಗು ಕಡಿಮೆ ತೂಕ ಹೊಂದುವ ಅಪಾಯ ಹೆಚ್ಚಿರುತ್ತದೆ. ಹೀಗಾಗಿ, ಶೈವಾವಸ್ಥೆಯಲ್ಲಿ ಮತ್ತು ಬಾಲ್ಯದಲ್ಲಿಯೇ ಮಗುವಿಗೆ ಬೆಳವಣಿಗೆಯು ಕುಂಠಿತವಾಗಿ ಮುಂದೆ ಅದಕ್ಕೆ ಮಾನಸಿಕ ಖಾಯಿಲೆ ಮತ್ತು ಸಾವಿನ ಅಪಾಯ ಹೆಚ್ಚಿರುತ್ತದೆ. ಅಲ್ಲದೇ, ಅಪೌಷ್ಠಿಕತೆಯಿಂದ ಬಳಲುತ್ತಿರುವ ಬಾಲಕಿಯರು ಮುಂದೆ ಮತ್ತೊಬ್ಬಳು ಅಪೌಷ್ಠಿಕತೆ ಹೊಂದಿರುವ ತಾಯಿಯಾಗುವ ಸಾಧ್ಯತೆಯಿದ್ದು ಅಂತರ ಪೀಳಿಗೆಯ ಅಪೌಷ್ಠಿಕತೆಯ ಚಕ್ರ ನಿರ್ಮಾಣವಾಗುವ ಅಪಾಯವಿರುತ್ತದೆ. ಈ ಬಡತನ-ಅಪೌಷ್ಠಿಕತೆ-ಬಡತನದ ವಿಷ ಚಕ್ರವನ್ನು ಬೇಧಿಸುವುದು ಯಾವುದೇ ಸರ್ಕಾರದ ಪ್ರಮುಖ ಆದ್ಯತೆಯಾಗಬೇಕು.

ಮೂರನೇ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ ಪ್ರಕಾರ, ಐದು ವರ್ಷದೊಳಗಿನ ಮಕ್ಕಳಲ್ಲಿ ಶೇ.೪೨.೫ರಷ್ಟು ಮಕ್ಕಳಲ್ಲಿ ಕಡಿಮೆ ತೂಕ ಕಂಡುಬಂದಿದೆ. ಮತ್ತು ಶೇ.೪೮ರಷ್ಟು ಮಕ್ಕಳಲ್ಲಿ ಬೆಳವಣಿಗೆ ಕುಂಠಿತಗೊಂಡಿದೆ (ವಯಸ್ಸಿನ ಅನುಗುಣವಾಗಿ ಕಡಿಮೆ ಎತ್ತರ ಮತ್ತು ತೀವ್ರವಾದ ಅಪೌಷ್ಠಿಕತೆ) ಮತ್ತು ಶೇ.೧೯.೮ರಷ್ಟು ಮಕ್ಕಳು ತೀವ್ರ ತೆರನಾದ ಅಪೌಷ್ಠಿತೆಯಿಂದ ಬಳಲುತ್ತಿದ್ದಾರೆ (ಎತ್ತರಕ್ಕೆ ತಕ್ಕಂತೆ ತೂಕ ಇಲ್ಲದಿರುವುದು ಮತ್ತು ತೀವ್ರವಾದ ಅಪೌಷ್ಠಿಕತೆ). ಈ ಪ್ರಮಾಣವು ಆರ್ಥಿಕವಾಗಿ ಹಿಂದುಳಿದ ರಾಜ್ಯಗಳಲ್ಲಿ ಇನ್ನೂ ಗಂಭೀರವಾಗಿದ್ದು ಶೇ.೫೦ರಷ್ಟು ಮಕ್ಕಳು ಕಡಿಮೆ ತೂಕವನ್ನು ಹೊಂದಿದ್ದಾರೆ.

ಹಾಗೆಯೇ ನಾಲ್ಕನೆಯ ಜಿಲ್ಲಾ ಮಟ್ಟದ ಆರೋಗ್ಯ ಸಮೀಕ್ಷೆಯಲ್ಲಿ ತಿಳಿಸಿರುವಂತೆ ಕಡಿಮೆ ತೂಕವನ್ನು ಹೊಂದಿರುವ ಮಕ್ಕಳ ಶೇಕಡವಾರು ಪ್ರಮಾಣ (೨.೫ ಕೆ.ಜಿ.ಗಿಂತ ಕೆಳಗಿರುವ) ರಾಯಚೂರಿನೆಲ್ಲೆಡೆ ಶೇ.೪.೫ರಷ್ಟಿದ್ದು ಜಿಲ್ಲೆಯ ಗ್ರಾಮೀಣ ಭಾಗಗಳಲ್ಲಿ ಶೇ.೩.೮ರಷ್ಟಿದೆ. ಇದು ರಾಜ್ಯಮಟ್ಟದ ಅನುಕ್ರಮ ಮೌಲ್ಯಗಳಾದ ಶೇ.೭.೬ ಹಾಗೂ ಶೇ.೮.೦ಕ್ಕಿಂತ ಕಡಿಮೆ ಇದೆ. ಆದರೆ,

ಜಿಲ್ಲೆಯಲ್ಲಿ ತಾಯಿ ಮತ್ತು ಮಗುವಿನ ಆರೋಗ್ಯಕ್ಕೆ ಸಂಬಂಧಿಸಿದಂತೆ ಗಂಭೀರ ಪರಿಣಾಮಗಳಿಗೆಡೆ ಮಾಡಿಕೊಡುತ್ತಿರುವ ಇತರ ಹಲವಾರು ಸಂದಿಗ್ಧ ಅಂಶಗಳಿದ್ದು ಅವು ಅವರ ಆರೋಗ್ಯ ಫಲಿತಗಳನ್ನು ಬಾಧಿಸುತ್ತವೆ.

ಕೋಷ್ಟಕ–೬.೩೩

ಕುಟುಂಬಗಳ ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆ

ಜಾತಿವಾರು ಪ್ರಾತಿನಿಧ್ಯ

ಕ್ರಸ	ಸಾಮಾಜಿಕ ಮತ್ತು ಆರ್ಥಿಕ ಅಂಶಗಳು	ವಿವರಗಳು	ದೇವದುರ್ಗ		ಲಿಂಗಸೂಗೂರು		ಮಾನವಿ		ಸಿಂಧನೂರು	
			ಒಟ್ಟು ಕುಟುಂಬ.	ಶೇಕಡವಾರು	ಒಟ್ಟು ಕುಟುಂಬ	ಶೇಕಡವಾರು	ಒಟ್ಟು ಕುಟುಂಬ	ಶೇಕಡವಾರು	ಒಟ್ಟು ಕುಟುಂಬ	ಶೇಕಡವಾರು
೧	ಜಾತಿಗಳು	ಪರಿಶಿಷ್ಟ ಜಾತಿ	೩೩	೩೩.೦೮	೩೫	೩೫.೦೦	೩೩	೩೩.೦೦	೩೦	೩೦.೦೦
೨		ಪರಿಶಿಷ್ಟ ಪಂಗಡ	೩೪	೩೪.೦೦	೩೦	೩೦.೦೦	೩೪	೩೪.೦೦	೨೫	೨೫.೦೦
೩		ಹಿಂದುಳಿದ ಜಾತಿ/ಒಬಿಸಿ	೨೫	೨೫.೦೦	೨೮	೨೮.೦೦	೨೫	೨೫.೦೦	೩೦	೩೦.೦೦
೪		ಸಾಮಾನ್ಯ Genaral	೦೮	೮.೦೦	೦೭	೦೭.೦೦	೦೮	೦೮.೦೦	೧೫	೧೫.೦೦
		ಒಟ್ಟು	೧೦೦	೧೦೦.೦೦	೧೦೦	೧೦೦.೦೦	೧೦೦	೧೦೦.೦೦	೧೦೦	೧೦೦.೦೦

ಮೂಲ:– ಕ್ಷೇತ್ರ ಕಾರ್ಯದ ಮಾಹಿತಿ

ರಾಯಚೂರು ಜಿಲ್ಲೆಯ ನಾಲ್ಕು ತಾಲೂಕುಗಳಲ್ಲಿ ಒಂದೊಂದು ಹಳ್ಳಿಯನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ದೇವದುರ್ಗದ ಅರಕೇರಾ ಹೋಬಳಿಯ ಮಲ್ಲಿನಾಯಕನದೊಡ್ಡಿ ಗ್ರಾಮವನ್ನು, ಲಿಂಗಸೂಗೂರು ತಾಲೂಕಿನ ಗುಡದ್ನಾಳ ಗ್ರಾಮವನ್ನು ಮಾನವಿ ತಾಲೂಕಿನ ಹಿರೇಕೊಟ್ನೇಕಲ್ ಗ್ರಾಮವನ್ನು ಹಾಗೂ

ಸಿಂಧನೂರು ತಾಲೂಕಿನ ತಿಮ್ಮಾಪೂರು ಗ್ರಾಮವನ್ನು ಆಯ್ಕೆ ಮಾಡಿಕೊಂಡು ಅಧ್ಯಯನಕ್ಕೆ ಒಳಪಡಿಸಲಾಗಿದೆ. ತಾಲೂಕುವಾರು ಸಂದರ್ಶನ ಮಾಡಿದ ಕುಟುಂಬಗಳು ಯಾವ ಜಾತಿಗೆ ಸೇರಿದ್ದಾರೆ ಎಂದು ತೋರಿಸಲಾಗಿದೆ. ದೇವದುರ್ಗ ತಾಲೂಕಿನಲ್ಲಿ (ಮಲ್ಲಿನಾಯಕದೊಡ್ಡಿ) ಶೇಕಡ. ೩೩% ಕುಟುಂಬಗಳು ಪರಿಶಿಷ್ಟ ಜಾತಿ ಸೇರಿದವರಾಗಿದ್ದು ಶೇ.೩೪% ಕುಟುಂಬಗಳು ಪರಿಶಿಷ್ಟ ಪಂಗಡಕ್ಕೆ ಸೇರಿದ್ದು ಶೇ.೨೫.೦೦ ರಷ್ಟು ಕುಟುಂಬಗಳು ಹಿಂದುಳಿದ ಜಾತಿಗೆ ಸೇರಿದವರಾಗಿದ್ದು ಶೇ.೮ರಷ್ಟು ಕುಟುಂಬಗಳು ಸಾಮಾನ್ಯ ವರ್ಗಕ್ಕೆ ಸೇರಿದವರಾಗಿದ್ದಾರೆ. ಅದೇ ರೀತಿಯಾಗಿ ಲಿಂಗಸೂಗೂರು ತಾಲೂಕಿನ (ಗುಡದ್ನಾಳ) ಗ್ರಾಮದಲ್ಲಿ ಪರಿಶಿಷ್ಟ ಜಾತಿಯವರು ಶೇ.೩೫ ಪರಿಶಿಷ್ಟ ಪಂಗಡದವರು ಶೇ.೩೦ರಷ್ಟು, ಹಿಂದುಳಿದ ವರ್ಗದವರು ಶೇ.೨೮ರಷ್ಟು ಸಾಮಾನ್ಯ ವರ್ಗದವರು ಶೇ.೦೭ರಷ್ಟು, ಮಾನವಿ ತಾಲೂಕಿನ (ಹಿರೇಕೊಟ್ನೆಕಲ್)ನಲ್ಲಿ ಪರಿಶಿಷ್ಟ ಜಾತಿಯವರು ಶೇ.೩೩ ಪರಿಶಿಷ್ಟ ಪಂಗಡದವರು ಶೇ.೩೪ರಷ್ಟು ಹಿಂದುಳಿದ ವರ್ಗದವರು, ಶೇ.೨೫ ರಷ್ಟು, ಸಾಮಾನ್ಯ ವರ್ಗಕ್ಕೆ ಸೇರಿದವರು, ಶೇ.೮ರಷ್ಟು ಹಾಗೂ ಸಿಂಧನೂರಿನ ಗ್ರಾಮದಲ್ಲಿ ಪ.ಜಾತಿಗೆ ಸೇರಿದವರು ಶೇ.೨೦ರಷ್ಟು, ಪರಿಶಿಷ್ಟ ಪಂಗಡಕ್ಕೆ ಸೇರಿದವರು, ಶೇ.೨೫ರಷ್ಟು, ಹಿಂದುಳಿದ ವರ್ಗಕ್ಕೆ ಸೇರಿದವರು ಶೇ.೩೦ರಷ್ಟು ಸಾಮಾನ್ಯ ವರ್ಗಕ್ಕೆ ಸೇರಿದವರು ಶೇ.೧೫ರಷ್ಟು ಕುಟುಂಬಗಳನ್ನು ಆಯ್ಕೆ ಮಾಡಿಕೊಂಡು ಸಂದರ್ಶನ ಮಾಡಲಾಗಿದೆ. ಅತಿ ಹೆಚ್ಚು ಬಡವರು ಪರಿಶಿಷ್ಟ ಜಾತಿ ಮತ್ತು

[illegible]

[illegible]

[illegible]	[illegible]	[illegible]	[illegible]	[illegible]

[illegible]

[illegible]

ಪರಿಶಿಷ್ಟ ಪಂಗಡದಲ್ಲಿದ್ದಾರೆ. ಇವರು ಅಭಿವೃದ್ಧಿಯಿಂದ ವಂಚಿತತೆಗೆ ಒಳಗಾಗಿರುವುದು ಕಂಡು ಬರುತ್ತದೆ. ಜನರನ್ನು ಒಳಗೊಳ್ಳುವಂತಹ ಅಭಿವೃದ್ಧಿ ಕಾರ್ಯಗಳು ರಾಯಚೂರು ಜಿಲ್ಲೆಯ ನಡೆಯದೆ ಇರುವಂತಹ ದುಸ್ಥಿತಿ ಮೇಲಿನ ಕೋಷ್ಟಕದಿಂದ ತಿಳಿದು ಬರುತ್ತದೆ.

ಕೋಷ್ಟಕ–೬.೩೪

ವಯಸ್ಸಿನ ಮಾಹಿತಿ

ಕ್ರಸ	ವಿವರಗಳು	ಒಟ್ಟು ಕುಟುಂಬ	ಶೇಕಡವಾರು
೧	೨೧ ರಿಂದ ೩೫ ವರ್ಷಗಳು	೯೨	೨೩.೦೦
೨	೩೬ ರಿಂದ ೫೦ ವರ್ಷಗಳು	೧೫೫	೩೮.೭೫
೩	೫೧ ರಿಂದ ೬೫ ವರ್ಷಗಳು	೮೫	೨೧.೨೫
೪	೬೬ ರಿಂದ ೮೦ ವರ್ಷಗಳು	೬೮	೧೭.೦೦
	ಒಟ್ಟು	೪೦೦	೧೦೦

ಮೂಲ:– ಕ್ಷೇತ್ರ ಕಾರ್ಯದ ಮಾಹಿತಿ

ಕೋಷ್ಟಕದಲ್ಲಿ ನಮೂದಿಸಲಾದ ಅಂಕಿ ಅಂಶಗಳ ಪ್ರಕಾರ ೨೧ರಿಂದ ೩೫ ವರ್ಷದೊಳಗಿನವರನ್ನು ಶೇ.೨೩ ಜನರನ್ನು ೩೬ ರಿಂದ ೫೦ ವರ್ಷದೊಳಗಿನ ಶೆ.೩೮.೭೫ ಜನರನ್ನ, ೫೧ ರಿಂದ ೬೫ ವರ್ಷಗಳೊಗಿನ ಶೇ.೨೧.೨೫ ಜನರನ್ನು, ೬೬ರಿಂದ ೮೦ ವರ್ಷಗಳು ಶೆ.೧೭ರಷ್ಟು ಜನರನ್ನು ನಾಲ್ಕು ತಾಲ್ಲೂಕಗಳಾದ, ದೇವದುರ್ಗ, ಲಿಂಗಸೂಗೂರು, ಮಾನವಿ, ಸಿಂಧನೂರುಗಳಲ್ಲಿ ಒಂದೊಂದು ಹಳ್ಳಿಯನ್ನು ಆಯ್ಕೆ ಮಾಡಿ ಪ್ರಶ್ನಾವಳಿಯ ಮೂಲಕ ಸಂದರ್ಶಿಸಲಾಗಿದೆ.

ಕೋಷ್ಟಕ–೬.೩೫

ಲಿಂಗವಾರು ಪ್ರತಿನಿಧ್ಯ ಮತ್ತು ವಿದ್ಯಾರ್ಹತೆಯ ವಿವರ

ಕ್ರಮ	ವಿವರಗಳು	ದೇವದುರ್ಗ		ಲಿಂಗಸೂಗೂರು		ಮಾನವಿ		ಸಿಂಧನೂರು	
		ಕುಟುಂಬಗಳು	ಶೇಕಡವಾರು	ಕುಟುಂಬಗಳು	ಶೇಕಡವಾರು	ಕುಟುಂಬಗಳು	ಶೇಕಡವಾರು	ಕುಟುಂಬಗಳು	ಶೇಕಡವಾರು
ಲಿಂಗ	ಪುರುಷರು	೬೬	೬೬.೦೦	೬೮	೬೮.೦೦	೭೫	೭೫.೦೦	೬೨	೬೨.೦೦
	ಮಹಿಳೆಯರು	೩೪	೩೪.೦೦	೩೨	೩೨.೦೦	೨೫	೨೫.೦೦	೩೮	೩೮.೦೦
	ಒಟ್ಟು	೧೦೦	೧೦೦.೦೦	೧೦೦	೧೦೦.೦೦	೧೦೦	೧೦೦.೦೦	೧೦೦	೧೦೦.೦೦
	ವಿದ್ಯಾರ್ಹತೆಯ ವಿವರ								
	ಅಕ್ಷರಸ್ಥರು	೩೩	೩೩.೦೦	೩೫	೩೫.೦೦	೩೪	೩೪.೦೦	೪೦	೪೦.೦೦
	ಪ್ರಾಥಮಿಕ ಶಿಕ್ಷಣ	೨೮	೨೮.೦೦	೨೯	೨೯.೦೦	೨೬	೨೬.೦೦	೨೧	೨೧.೦೦
	ಪ್ರೌಢ ಶಿಕ್ಷಣ	೨೦	೨೦.೦೦	೧೪	೧೪.೦೦	೧೯	೧೯.೦೦	೧೧	೧೧.೦೦
	ಪದವಿ ಪೂರ್ವ	೧೦	೧೦.೦೦	೧೨	೧೨.೦೦	೧೩	೧೩.೦೦	೧೫	೧೫.೦೦
	ಪದವಿ	೦೯	೯.೦೦	೧೦	೧೦.೦೦	೦೮	೮.೦೦	೧೩	೧೩.೦೦
	ಒಟ್ಟು	೧೦೦	೧೦೦.೦೦	೧೦೦	೧೦೦.೦೦	೧೦೦	೧೦೦.೦೦	೧೦೦	೧೦೦.೦೦

ಮೂಲ:– ಕ್ಷೇತ್ರ ಕಾರ್ಯದ ಮಾಹಿತಿ

ಈ ಜಿಲ್ಲೆಯ ನಾಲ್ಕು ತಾಲೂಕುಗಳಲ್ಲಿ ಸಂದರ್ಶನ ಮಾಡಿದ ಲಿಂಗದ ವಿವರಗಳನ್ನು ಈ ಕೋಷ್ಟಕದಲ್ಲಿ ನೀಡಲಾಗಿದೆ. ದೇವದುರ್ಗ ತಾಲೂಕಿನಿಂದ (ಮಲ್ಲಿನಾಯಕ ದೊಡ್ಡಿ) ಗಂಡು ಶೇ.೬೬, ಮಹಿಳೆಯರು ಶೇ.೩೪ರಷ್ಟನ್ನು, ಲಿಂಗಸೂಗೂರು ತಾಲೂಕಿನಿಂದ (ಗುಡದ್ನಾಳ) ಗಂಡು ಶೇ.೬೮, ಮಹಿಳೆಯರು ಶೇ.೩೨ರಷ್ಟು ಮಾನವಿ ತಾಲೂಕಿನಿಂದ (ಹಿರೇಕೊಡ್ನೆಕಲ್) ಶೇ ೭೫ರಷ್ಟು

ಪುರುಷರು, ಶೇ.೨೫ರಷ್ಟು ಮಹಿಳೆಯರನ್ನು ಹಾಗೂ ಸಿಂಧನೂರಿನಿಂದ ಶೇ.೬೨ರಷ್ಟು ಪುರುಷರು ಶೇ.೩೮ರಷ್ಟು ಮಹಿಳೆಯರನ್ನು ಆಯ್ಕೆ ಮಾಡಿಕೊಂಡು ಸಂದರ್ಶಿಸಲಾಗಿದೆ. ಈ ಕೋಷ್ಟಕದಲ್ಲಿ ಮುಖ್ಯವಾಗಿ ಅಧಿಕ ಪ್ರಮಾಣದಲ್ಲಿ ಪುರುಷ ಪ್ರಧಾನವಾದ ಕುಟುಂಬ ವ್ಯವಸ್ಥೆಯಿದ್ದು, ಮಹಿಳೆಯರ ಯಜಮಾನಿಕೆ ಕಡಿಮೆ ಇರುವುದು ಕಂಡುಬರುತ್ತದೆ. ಸಮಾನತೆಯ ನೆಲೆಯಲ್ಲಿ ಅಭಿವೃದ್ಧಿ ಕಾಣಬೇಕಾದರೆ ಮಹಿಳೆಯರಿಗೆ ಕೂಡ ಕುಟುಂಬದ ಯಜಮಾನಿಕೆ ನೀಡಿದರೆ ಆ ಕುಟುಂಬ ವ್ಯವಸ್ಥೆ ಅಭಿವೃದ್ಧಿಯ ಕಡೆ ಹೋಗಲು ಸಾಧ್ಯವಾಗುತ್ತದೆ.

ಅದೇ ಕೋಷ್ಟಕದಲ್ಲಿ ಶಿಕ್ಷಣದ ಬಗ್ಗೆ ನಾಲ್ಕು ತಾಲೂಕಿನ ವಿವರವನ್ನು ನೀಡಲಾಗಿದೆ. ಅನಕ್ಷರಸ್ಥರು ದೇವದುರ್ಗದಲ್ಲಿ ಶೇ.೩೩, ಲಿಂಗಸೂಗೂರಿನಲ್ಲಿ ಶೇ.೩೫ರಷ್ಟು, ಮಾನವಿಯಲ್ಲಿ ಶೇ.೩೪ರಷ್ಟು ಸಿಂಧನೂರು ತಾಲೂಕಿನಲ್ಲಿ ಶೇ.೪೦ರಷ್ಟು ಕುಟುಂಬಗಳು ಅಕ್ಷರವನ್ನು ಕಾಣದೆ ಅತ್ಯಂತ ದುಸ್ಥಿತಿಯನ್ನು ಅನುಭವಿಸುತ್ತಿವೆ. ಪ್ರಾಥಮಿಕ ಶಿಕ್ಷಣ ದೇವದುರ್ಗದಲ್ಲಿ ಶೇ.೨೮ರಷ್ಟು, ಲಿಂಗಸೂಗೂರಿನಲ್ಲಿ ಶೇ.೨೯ರಷ್ಟು, ಮಾನವಿಯಲ್ಲಿ ಶೇ.೨೬ರಷ್ಟು ಹಾಗೂ ಸಿಂಧನೂರಿನಲ್ಲಿ ಶೇ.೨೧ರಷ್ಟು ಪ್ರಾಥಮಿಕ ಶಿಕ್ಷಣವನ್ನು ಪಡೆದಿದ್ದಾರೆ. ಪ್ರೌಢ ಶಿಕ್ಷಣವನ್ನು ದೇವದುರ್ಗ ಶೇ.೨೦ರಷ್ಟು, ಲಿಂಗಸೂಗೂರು ಶೇ.೧೪ರಷ್ಟು, ಮಾನವಿ ತಾಲೂಕ ಶೇ.೧೯ರಷ್ಟು ಸಿಂಧನೂರು ತಾಲೂಕು ಶೇ.೧೧ರಷ್ಟು ಪಡೆದುಕೊಂಡಿದ್ದಾರೆ. ಪದವಿ ಪೂರ್ವ ಶಿಕ್ಷಣವನ್ನು ದೇವದುರ್ಗ ಶೇ.೧೦ರಷ್ಟು, ಲಿಂಗಸೂಗೂರು ಶೇ.೧೨ರಷ್ಟು, ಮಾನವಿ ಶೇ.೧೩ರಷ್ಟು, ಸಿಂಧನೂರು ಶೇ.೧೫ರಷ್ಟು ಪಡೆದುಕೊಂಡಿದ್ದಾರೆ. ಪದವಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ದೇವದುರ್ಗ ತಾಲೂಕು ಶೇ.೯ರಷ್ಟು, ಲಿಂಗಸೂಗೂರು ತಾಲೂಕು ಶೇ.೧೦ರಷ್ಟು, ಮಾನವಿ ಶೇ.೮ರಷ್ಟು, ಸಿಂಧನೂರು ಶೇ.೧೩ರಷ್ಟು ಪದವಿಯನ್ನು ಪಡೆದುಕೊಂಡಿದ್ದಾರೆ. ಅಮರ್ತ್ಯಸೇನ್ ಅವರು ಯಾವುದು ಬದುಕನ್ನು ಉತ್ತಮ ಪಡಿಸಲು ಸಾಧ್ಯ ಎಂದು ಹೇಳಿದ್ದಾರೋ, ಅದು ರಾಯಚೂರು ಜಿಲ್ಲೆಯಲ್ಲಿ ದುಸ್ಥಿತಿಯನ್ನು ಅನುಭವಿಸುತ್ತಿದೆ. ಡಾ.ಬಿ.ಆರ್.ಅಂಬೇಡ್ಕರ್ ಅವರು ಶಿಕ್ಷಣವು ಮನುಷ್ಯನ ಘನತೆಯನ್ನು ಹೆಚ್ಚಿಸುತ್ತದೆ ಮತ್ತು ಅನ್ಯಾಯಗಳನ್ನು ತಿಳಿದುಕೊಳ್ಳಲು ಸಹಾಯಕವಾಗುವ ಏಕೈಕ ಅಸ್ತ್ರವೆಂದು ನಂಬಿ ಸಾಧಿಸಿದ್ದರೋ, ಅಂತಹ ಮಹತ್ವದ ಹೆಜ್ಜೆ ಈ ಜಿಲ್ಲೆಯಲ್ಲಿ ಬಡವರ ಪಾಲಿಗೆ ಕನಸಾಗಿ ಉಳಿದುಕೊಂಡಿದೆ.

ಕೋಷ್ಟಕ–೬..೩೬

ಉದ್ಯೋಗಕ್ಕೆ ಸಂಬಂಧಿಸಿದ ಮಾಹಿತಿ

ಕ್ರಮ	ವಿವರಗಳು	ದೇವದುರ್ಗ		ಲಿಂಗಸೂಗೂರು		ಮಾನವಿ		ಸಿಂಧನೂರು	
		ಕುಟುಂಬಗಳು	ಶೇಕಡವಾರು	ಕುಟುಂಬಗಳು	ಶೇಕಡವಾರು	ಕುಟುಂಬಗಳು	ಶೇಕಡವಾರು	ಕುಟುಂಬಗಳು	ಶೇಕಡವಾರು
೧.	ಕೂಲಿ	೩೩	೩೩.೦೦	೨೯	೨೯.೦೦	೨೧	೨೧.೦೦	೨೮	೨೮.೦೦
೨.	ವ್ಯವಸಾಯ	೧೬	೧೬.೦೦	೧೮	೧೮.೦೦	೨೮	೨೮.೦೦	೨೦	೨೦.೦೦
೩.	ಸರ್ಕಾರಿ/ಖಾಸಗಿ ಉದ್ಯೋಗ	೧೧	೧೧.೦೦	೧೫	೧೫.೦೦	೧೨	೧೨.೦೦	೧೬	೧೬.೦೦
೪.	ವ್ಯಾಪಾರ	೧೨	೧೨.೦೦	೦೬	೬.೦೦	೧೪	೧೪.೦೦	೧೦	೧೦.೦೦
೫.	ಜೀತಗಾರರು	೭	೭.೦೦	೬	೬.೦೦	೧೦	೧೦.೦೦	೧೩	೧೩.೦೦
೬.	ವಲಸೆ	೨೧	೨೧.೦೦	೨೬	೨೬.೦೦	೧೫	೧೫.೦೦	೧೩	೧೩.೦೦
	ಒಟ್ಟು	೧೦೦	೧೦೦.೦೦	೧೦೦	೧೦೦.೦೦	೧೦೦	೧೦೦.೦೦	೧೦೦	೧೦೦.೦೦

ಮೂಲ:– ಕ್ಷೇತ್ರ ಕಾರ್ಯದ ಮಾಹಿತಿ

ಈ ಕೋಷ್ಟಕದಲ್ಲಿ ಉದ್ಯೋಗಕ್ಕೆ ಸಂಬಂಧಿಸಿದ ಮಾಹಿತಿಯನ್ನು ತಾಲೂಕುವಾರು ಶೇಕಡ ಪ್ರಮಾಣದಲ್ಲಿ ನೀಡಲಾಗಿದೆ. ದೇವದುರ್ಗದಲ್ಲಿ ಕೂಲಿ ಕುಟುಂಬಗಳು ಶೇ.೩೩ರಷ್ಟು ಲಿಂಗಸೂಗೂರಿನಲ್ಲಿ ಶೇ.೨೯ರಷ್ಟು, ಮಾನವಿಯಲ್ಲಿ ಶೇ.೨೧ರಷ್ಟು, ಹಾಗೂ ಸಿಂಧನೂರಿನಲ್ಲಿ ೨೮ರಷ್ಟು ಕುಟುಂಬಗಳು ಕೂಲಿಯನ್ನೇ ಮಾಡುತ್ತಾ ಬದುಕನ್ನು ಸಾಗಿಸುತ್ತಿವೆ. ವ್ಯವಸಾಯ ಮಾಡುವಂತಹ ಕುಟುಮಬಗಳು ದೇವದುರ್ಗ ತಾಲೂಕಿನಲ್ಲಿ ಶೇ.೧೬ರಷ್ಟು, ಲಿಂಗಸುಗೂರು ಶೇ.೧೮ರಷ್ಟು, ಮಾನವಿ ಶೇ.೨೮, ಸಿಂಧನೂರು ಶೇ.೨೦ರಷ್ಟು ಕುಟುಂಬಗಳು ವ್ಯವಸಾಯ ಮಾಡುತ್ತಿವೆ. ಉದ್ಯೋಗಕ್ಕೆ ಅದರಲ್ಲಿ ಸರ್ಕಾರಿ ಕೆಲಸದಲ್ಲಿರುವಂತ ಕುಟುಂಬಗಳ ಸಂಖ್ಯೆ ದೇವದುರ್ಗ ಶೇ.೧೧ರಷ್ಟು ಲಿಂಗಸೂಗೂರು ಶೇ.೧೫, ಮಾನವಿ ಶೇ.೧೨ರಷ್ಟು, ಸಿಂಧನೂರು ಶೇ.೧೬ರಷ್ಟು, ಉದ್ಯೋಗದಲ್ಲಿದ್ದಾರೆ. ದೇವದುರ್ಗ ತಾಲೂಕಿನಲ್ಲಿ ವ್ಯಾಪಾರಕ್ಕೆ ಸಂಬಂಧಿಸಿದಂತೆ ಶೇ.೧೨ರಷ್ಟು, ಲಿಂಗಸುಗೂರು ಶೇ.೬ರಷ್ಟು ಮಾನವಿಯಲ್ಲಿ ಶೇ.೧೪ರಷ್ಟು, ಸಿಂಧನೂರಿನಲ್ಲಿ ಶೇ.೧೦ರಷ್ಟು ಕುಟುಂಬಗಳಿವೆ. ಜೀತಗಾರರಿಗೆ ಸಂಬಂಧಿಸಿದಂತೆ ದೇವದುರ್ಗ ಶೇ.೭ರಷ್ಟು, ಲಿಂಗಸೂಗೂರು ಶೇ.೬ರಷ್ಟು, ಮಾನವಿಯಲ್ಲಿ ಶೇ.೧೦ರಷ್ಟು, ಹಾಗೂ ಸಿಂಧನೂರಿನಲ್ಲಿ ಶೇ.೧೩ರಷ್ಟು, ಜೀತಗಾರರು ಇದ್ದಾರೆ. ವಲಸೆ ದೇವದುರ್ಗದಲ್ಲಿ ಶೇ.೨೧ರಷ್ಟು, ಲಿಂಗಸೂಗೂರಿನಲ್ಲಿ ಶೇ.೨೬ರಷ್ಟು, ಮಾನವಿಯಲ್ಲಿ ಶೇ.೧೫ರಷ್ಟು, ಸಿಂಧನೂರಿನಲ್ಲಿ ಶೇ.೧೩ರಷ್ಟು ವಲಸೆಯನ್ನು ಹೋಗುತ್ತಿದ್ದಾರೆ ಒಟ್ಟಾರೆಯಾಗಿ ದೇವದುರ್ಗ ತಾಲೂಕು ದುಸ್ಥಿತಿಯಲ್ಲಿ ಮೊದಲನೆಯ ಸ್ಥಾನ ಪಡೆದುಕೊಂಡರೆ ಸಿಂಧನೂರು ತಾಲೂಕು ಅಭಿವೃದ್ಧಿಗೆ ಮುಖಮಾಡಿ ನಿಲ್ಲುವಂತ ಪ್ರಯತ್ನಗಳು ಕಂಡುಬರುತ್ತಿವೆ. ಆದರೆ ಕರ್ನಾಟಕ ಇತರ ಜಿಲ್ಲೆಗಳಿಗೆ ಹೋಲಿಸಿದರೆ ಈ ಜಿಲ್ಲೆಯ ಎಲ್ಲದರಲ್ಲಿ ತಳಮಟ್ಟದಲ್ಲಿದೆ.

ಕೋಷ್ಟಕ–೬.೩೭

ಮನೆಯ ಸ್ವರೂಪ ಹಾಗೂ ವಸ್ತುಗಳ ಮಾಹಿತಿ ವಿವರ

ಕ್ರಸ	ವಿವರಗಳು	ಒಟ್ಟು ಕುಟುಂಬಗಳು	ಶೇಕಡವಾರು
೧.	**ಮನೆಯ ಒಡೆತನ**		
	ಸ್ವಂತ ಮನೆ	೩೨೩	೮೦.೭೫
	ಬಾಡಿಗೆ ಮನೆ	೩೪	೮.೫೦
	ಸಾರ್ವಜನಿಕ ಮನೆ	೧೨	೩.೦೦
	ಇತರೆ	೩೧	೭.೫೦
	ಒಟ್ಟು	೪೦೦	೧೦೦.೦೦
೨.	**ಮನೆಯ ಸ್ವರೂಪ**		
	ಕಚ್ಚಾಮನೆ	೧೯೮	೪೯.೫೦
	ಗುಡಿಸಲು	೧೫೩	೩೮.೨೫
	ಪಕ್ಕದಮನೆ	೪೯	೧೨.೨೫
	ಆಶ್ರಮ/ಅಂಬೇಡ್ಕರ್/ ಇಂದಿರಾ ಮನೆ	೪೦೦	೧೦೦.೦೦
೩.	**ಮನೆಯ ವಸ್ತುಗಳು**		
	ಅವಶ್ಯಕ	೩೪೨	೮೫.೫೦
	ಹಿತದಾಯಕ	೫೩	೧೩.೨೫
	ಐಶಾರಾಮ	೦೫	೧.೨೫
	ಒಟ್ಟು	೪೦೦	೧೦೦.೦೦

ಮೂಲ:– ಕ್ಷೇತ್ರ ಕಾರ್ಯದ ಮಾಹಿತಿ

ಈ ಕೋಷ್ಟಕದಲ್ಲಿ ರಾಯಚೂರು ಜಿಲ್ಲೆಯ ನಾಲ್ಕು ತಾಲೂಕುಗಳ ಮನೆಯ ಒಡೆತನ ಮತ್ತು ವಸ್ತುಗಳ ಮಾಹಿತಿಯನ್ನು ನೀಡುತ್ತದೆ. ಸ್ವಂತ ಮನೆಗಳು ಈ ಜಿಲ್ಲೆಯಲ್ಲಿ (ಸಂದರ್ಶನ ಮಾಡಿದ ಪ್ರತಿ ಊರಿನಿಂದ) ಶೇ.೮೦.೭೫ರಷ್ಟು ಇದ್ದು. ಬಾಡಿಗೆ ಮನೆ ಶೇ.೮.೫೦ರಷ್ಟು ಇದ್ದು, ಸಾರ್ವಜನಿಕ ಮನೆ ಶೇ.೩ರಷ್ಟು ಹಾಗೂ ಇತರೆ ಮನೆಗಳಲ್ಲಿ ವಾಸಿಸುತ್ತಿರುವವರು ಶೇ. ೭.೫೦ರಷ್ಟು ಇರುವುದು ಕಂಡುಬಂದಿದೆ.

ಮನೆಯ ಸ್ವರೂಪವನ್ನು ನೋಡಿದಾಗ ಕಚ್ಚಾಮನೆ ಶೇ.೪೯.೫೦ರಷ್ಟು ಇದ್ದು, ಗುಡಿಸಲು ಮನೆ ಶೇ.೩೮.೨೫ರಷ್ಟು ಮತ್ತು ಪಕ್ಕಾಮನೆ ಶೇ.೧೨.೨೫ರಷ್ಟು ಮನೆಯ ಸ್ವರೂಪವನ್ನು ಹೊಂದಿವೆ. ಕಚ್ಚಾ ಮನೆಗಳೆ ಅಧಿಕ ಪ್ರಮಾಣದಲ್ಲಿರುವುದು ಕಂಡುಬರುತ್ತದೆ. ಮನೆಯಲ್ಲಿರುವ ವಸ್ತುಗಳನ್ನು ಸಂದರ್ಶನದಲ್ಲಿ ಕೇಳಿದಾಗ ಅವರಲ್ಲಿ ವಿಭಾಗ ಮಾಡಲಾಗಿದೆ. ಅವಶ್ಯಕ ವಸ್ತುಗಳು ಶೇ.೮೫.೫೦ರಷ್ಟು, ಹಿತದಾಯಕ ಶೇ.೧೩.೨೫ರಷ್ಟು ಐಶಾರಾಮಿ ವಸ್ತುಗಳು ಶೇ.೧.೨೫ರಷ್ಟು ಕುಟುಂಬಗಳು ಮಾಹಿತಿಯನ್ನು ನೀಡಿವೆ. ಪ್ರತಿನಿತ್ಯ ಬದುಕಿಗೆ ಬೇಕಾದ ಅಗತ್ಯ ವಸ್ತುಗಳು ಶೇ.೮೫.೫೦ರಷ್ಟು ಅಧಿಕ ಪ್ರಮಾಣದಲ್ಲಿ ಕಂಡುಬರುತ್ತದೆ.

ಕೋಷ್ಟಕ–೬.೩೮

ಮಕ್ಕಳು ಅರ್ಧಕ್ಕೆ ಶಾಲೆ ಬಿಡಲು ಕಾರಣ

ಕ್ರಸ	ವಿವರಗಳು	ದೇವದುರ್ಗ		ಲಿಂಗಸೂಗೂರು		ಮಾನವಿ		ಸಿಂಧನೂರು	
		ಒಟ್ಟು ಕುಟುಂಬ	ಶೇಕಡವಾರು	ಒಟ್ಟು ಕುಟುಂು	ಶೇಕಡವಾರು	ಒಟ್ಟು ಕುಟುಂು	ಶೇಕಡವಾರು	ಒಟ್ಟು ಕುಟುಂಬ	ಶೇಕಡವಾರು
೧	ಸ್ವಂತ ಜಮೀನು								
	ಇದೆ	೫೮	೫೮.೦೦	೫೯	೫೯.೦೦	೭೩	೭೩.೦೦	೬೮	೬೮.೦೦
	ಇಲ್ಲ	೪೨	೪೨.೦೦	೪೧	೪೧.೦೦	೨೭	೨೭.೦೦	೩೨	೩೨.೦೦
	ಒಟ್ಟು	೧೦೦	೧೦೦.೦೦	೧೦೦	೧೦೦.೦೦	೧೦೦	೧೦೦.೦೦	೧೦೦	೧೦೦.೦೦

ಮೂಲ:– ಕ್ಷೇತ್ರದ ಮಾಹಿತಿಯ ಆಧಾರ

ಈ ಕೋಷ್ಟಕದಲ್ಲಿ ದಾಖಲಿಸಲಾದ ಮಾಹಿತಿಗಳ ಪ್ರಕಾರ ಶಿಕ್ಷಣವನ್ನು ಕೊಡಿಸುವುದು ಪ್ರತಿಯೊಬ್ಬ ಪಾಲಕರು ಬಯಸುತ್ತಿದ್ದಾರೆ. ಆದರೆ ಕೆಲವೊಂದು ಕಾರಣಗಳಿಂದ ಮಕ್ಕಳನ್ನು ಅರ್ಧಕ್ಕೆ ಶಾಲೆ ಬಿಡುವಂತೆ ಅವರಿಗೆ ಅನೇಕ ಕಾರಣಗಳು ಎದುರಾಗಿವೆ. ಸಂದರ್ಶನ ಮಾಡಿದ ಸಂದರ್ಭದಲ್ಲಿ ದೇವದುರ್ಗ ತಾಲೂಕಿನಲ್ಲಿ ಶೇ.೧೩ರಷ್ಟು ಕುಟುಂಬಗಳು ಮನೆಯಲ್ಲಿರಲು ಕಾರಣ ನೀಡಿದೆ. ಅದೇ ರೀತಿಯಾಗಿ ಲಿಂಗಸೂಗೂರು ಶೇ.೮ರಷ್ಟು, ಮಾನವಿ ಶೇ.೧೦ರಷ್ಟು, ಸಿಂಧನೂರು ಶೇ.೧೫ರಷ್ಟು, ಮನೆಯಲ್ಲಿ ಕಾರಣವನ್ನು ನೀಡಿವೆ. ಅನಾರೋಗ್ಯಕ್ಕೆ ಕಾರಣವನ್ನು ದೇವದುರ್ಗದಲ್ಲಿ ಶೇ.೧೫ರಷ್ಟು, ಲಿಂಗಸೂಗೂರಿನಲ್ಲಿ ಶೇ.೧೨ರಷ್ಟು, ಮಾನವಿಯಲ್ಲಿ ಶೇ.೧೩ರಷ್ಟು, ಸಿಂಧನೂರಿನಲ್ಲಿ

ಶೇ.೧೬ರಷ್ಟು ಕುಟುಂಬಗಳು ಕಾರಣ ನೀಡಿವೆ. ಮಕ್ಕಳನ್ನು ನೋಡಿಕೊಳ್ಳುವ ಕಾರಣದಿಂದ ಅಂತಾ ಹೇಳಿದ ಕುಟುಂಬಗಳು ದೇವದುರ್ಗ ಶೇ.೧೮ರಷ್ಟು, ಲಿಂಗಸುಗೂರು ಶೇ.೨೧ರಷ್ಟು, ಮಾನವಿ ಶೇ.೧೫ರಷ್ಟು, ಸಿಂಧನೂರು ಶೇ.೧೮ರಷ್ಟು ಎಂದು ಹೇಳಿದ್ದಾರೆ. ವಲಸೆ ಹೋಗುವುದರಿಂದ ಅಂತಾ ದೇವದುರ್ಗದಲ್ಲಿ ಶೇ.೨೭ರಷ್ಟು, ಲಿಂಗಸುಗೂರಿನಲ್ಲಿ ಶೇ.೨೯ರಷ್ಟು, ಮಾನವಿಯಲ್ಲಿ ಶೇ.೨೮ರಷ್ಟು, ಸಿಂಧನೂರಿನಲ್ಲಿ ಶೇ.೨೨ರಷ್ಟು, ವಲಸೆಗೆ ಕಾರಣ ಕೊಟ್ಟಿದ್ದಾರೆ. ಆರ್ಥಿಕ ಸಮಸ್ಯೆಯಿಂದ ಅಂತಾ ಹೇಳಿದ ಕುಟುಂಬಗಳು ದೇವದುರ್ಗ ಶೇ.೨೭ರಷ್ಟು, ಲಿಂಗಸೂಗೂರು ಶೇ.೩೦ರಷ್ಟು, ಮಾನವಿ ಶೇ.೩೪ರಷ್ಟು, ಸಿಂಧನೂರು, ಶೇ.೨೯ರಷ್ಟು ಎಂದು ಹೇಳಿವೆ. ವಲಸೆ ಕಾರಣದಿಂದಾಗಿ ಮಕ್ಕಳನ್ನು ಅರ್ಧಕ್ಕೆ ಶಾಲೆ ಬಿಡಲು ಕಾರಣ ಅಧಿಕ ಪ್ರಮಾಣದಲ್ಲಿ ಕಂಡುಬರುತ್ತದೆ. ಈ ಜಿಲ್ಲೆಯಲ್ಲಿ ವಲಸೆಯನ್ನು ಪ್ರಮಾಣ ತಡೆದು ಅವರಿಗೆ ಉದ್ಯೋಗ, ಕೂಲಿ ವ್ಯವಸ್ಥೆ ಮಾಡುವುದರಿಂದ ಶಾಲೆ ಬಿಡುವ ಮಕ್ಕಳ ಸಮಸ್ಯೆಯನ್ನು ತಡೆಯಬಹುದಾಗಿದೆ.

ಕೋಷ್ಟಕ–೬.೩೯

ಉಳಿತಾಯ ಹಾಗೂ ಸಾಲದ ಮಾಹಿತಿ ವಿವರ

ಕ್ರಸಂ	ವಿವರಣೆ	ಒಟ್ಟು	ಶೇಕಡವಾರು
೧.	ಉಳಿತಾಯದ ವಿವರ		
	ಉಳಿತಾಯ ಇದೆ	೫೭	೧೪.೨೫
	ಉಳಿತಾಯ ಇಲ್ಲ	೩೪೩	೮೫.೭೫
	ಒಟ್ಟು	೪೦೦	೧೦೦.೦೦
	ಸಾಲದ ಮಾಹಿತಿ		
	ಸಾಲದ ಮಾಡಿದ್ದೇವೆ	೩೮೮	೯೭.೦೦
	ಸಾಲ ಮಾಡಿಲ್ಲ	೧೨	೩.೦೦
	ಒಟ್ಟು	೪೦೦	೧೦೦.೦೦

ಮೂಲ:– ಕ್ಷೇತ್ರ ಕಾರ್ಯದ ಮಾಹಿತಿ

ಇಲ್ಲಿ ಮುಖ್ಯವಾಗಿ ನಾಲ್ಕು ತಾಲೂಕನ್ನು ಒಟ್ಟಿಗೆ ಸೇರಿಸಿ ಮಾಹಿತಿಯನ್ನು ನೀಡಲಾಗಿದೆ. ಉಳಿತಾಯದ ವಿವರಕ್ಕೆ ಸಂಬಂಧಿಸಿದಂತೆ ನೋಡಿದಾಗ ಈ ಜಿಲ್ಲೆಯಲ್ಲಿ ಉಳಿತಾಯ ಇದೆ ಅಂತಾ ಹೇಳಿದ ಕುಟುಂಬಗಳು ಶೇ.೧೪.೨೫ ಮಾತ್ರ, ಉಳಿತಾಯ ಇಲ್ಲ ಅಂತಾ ಹೇಳಿದ ಕುಟುಂಬಗಳು ಶೇ.೮೫.೭೩ರಷ್ಟು. ಸಾಲದ ಮಾಹಿತಿಯನ್ನು ವಿಚಾರಿಸಿದಾಗ ಶೇ.೯೭.೦೦ರಷ್ಟು ಕುಟುಂಬಗಳು ಸಾಲ ಮಾಡಿವೆ. ಕೇವಲ ಶೇ.೩ರಷ್ಟು ಕುಟುಂಬಗಳು ಸಾಲ ಮಾಡಿಲ್ಲ ಎಂದು ಹೇಳಿವೆ. ಈ ವಿವರವನ್ನು ನೋಡಿದಾಗ ಸಾಲದಿಂದ ಜನರು ತತ್ತರಿಸುತ್ತಿದ್ದಾರೆ. ಈ ಕಾರಣವಾಗಿ ಆತ್ಮಹತ್ಯೆಗಳು ಸಹ ನಡೆಯುತ್ತಿವೆ. ಸರ್ಕಾರಗಳು ಜನರಿಗೆ ಉಚಿತವಾದ ಸಾಲದ ವ್ಯವಸ್ಥೆಯನ್ನು ಕಲ್ಪಿಸುವುದರಿಂದ ಈ ಜಿಲ್ಲೆಯ ಅಭಿವೃದ್ಧಿಗೆ ಅನುವು ಮಾಡಿಕೊಡಬೇಕಾಗಿದೆ.

ಕೋಷ್ಟಕ–೬.೪೦

ಕುಟುಂಬಗಳ ವರಮಾನಕ್ಕೆ ಸಂಬಂಧಿಸಿದ ಮಾಹಿತಿ ವಿವರ

ಕ್ರಸ	ವಿವರಗಳು	ದೇವದುರ್ಗ		ಲಿಂಗಸೂಗೂರು		ಮಾನವಿ		ಸಿಂಧನೂರು	
		ಒಟ್ಟು ಕುಟುಂಬ	ಶೇಕಡವಾರು	ಒಟ್ಟು ಕುಟುಂಬ	ಶೇಕಡವಾರು	ಒಟ್ಟು ಕುಟುಂಬ	ಶೇಕಡವಾರು	ಒಟ್ಟು ಕುಟುಂಬ	ಶೇಕಡವಾರು
೧	೫೦೦ ರಿಂದ ೧೫೦೦	೩೮	೩೮.೦೦	೩೯	೩೯.೦೦	೩೯	೩೯.೦೦	೧೩	೧೩.೦೦
೨	೧೬೦೦ ರಿಂದ ೨೫೦೦	೨೨	೨೨.೦೦	೨೩	೨೩.೦೦	೨೪	೨೪.೦೦	೨೬	೨೬.೦೦
೩	೨೬೦೦ ರಿಂದ ೩೫೦೦	೧೭	೧೭.೦೦	೧೪	೧೪.೦೦	೧೩	೧೩.೦೦	೧೫	೧೫.೦೦
೪	೩೬೦೦ ರಿಂದ ೪೫೦೦	೧೧	೧೧.೦೦	೧೩	೧೩.೦೦	೧೦	೧೦.೦೦	೨೮	೨೮.೦೦
೫	೪೬೦೦ಕ್ಕಿಂತ ಅಧಿಕ	೧೨	೧೨.೦೦	೧೧	೧೧.೦೦	೧೪	೧೪.೦೦	೧೮	೧೮.೦೦
	ಒಟ್ಟು	೧೦೦	೧೦೦.೦೦	೧೦೦	೧೦೦.೦೦	೧೦೦	೧೦೦.೦೦	೧೦೦	೧೦೦.೦೦

ಮೂಲ:– ಕ್ಷೇತ್ರದ ಮಾಹಿತಿಯ ಆಧಾರ

ಕುಟುಂಬಗಳ ವರಮಾನದ ಕುರಿತು ದಾಖಲಿಸಿರುವ ಅಂಕಿ–ಅಂಶಗಳನ್ನು ಗಮನಿಸಿದಾಗ ರಾಯಚೂರು ಜಿಲ್ಲೆಯ ನಾಲ್ಕು ತಾಲೂಕುಗಳಾದ ದೇವದುರ್ಗ, ಲಿಂಗಸೂಗೂರು, ಮಾನವಿ, ಮತ್ತು ಸಿಂಧನೂರುಗಳಲ್ಲಿ ವರಮಾನದ ವಿವರವನ್ನು ಕೋಷ್ಟಕದಲ್ಲಿ ತೋರಿಸಲಾಗಿದೆ. ೫೦೦ರಿಂದ ೧೫೦೦ ರೂಪಾಯಿಗಳಿಸುವ ಕುಟುಂಬಗಳು ಕ್ರಮವಾಗಿ ಶೇ.೩೮, ಶೇ.೩೯, ಶೇ.೩೯, ಶೇ.೧೩ ರಷ್ಟು ನಾಲ್ಕು ತಾಲೂಕುಗಳಲ್ಲಿ ಅತ್ಯಂತ ಕಡಿಮೆ ವರಮಾನವನ್ನು ಪಡೆಯುತ್ತಿವೆ. ೧.೬೦೦ರಿಂದ ೨೫೦೦ರವರೆಗೆ ಗಳಿಸುವ ಕುಟುಂಬಗಳು ದೇವದುರ್ಗ ಶೇ.೨೨, ಲಿಂಗಸೂಗೂರು ಶೇ.೨೩, ಮಾನವಿ ಶೇ.೨೪ ಹಾಗೂ ಸಿಂಧನೂರು ಶೇ.೨೬ರಷ್ಟು ಮಾತ್ರ ವರಮಾನ ಪಡೆಯುತ್ತಿವೆ. ೨,೬೦೦ರಿಂದ ೩,೫೦೦ರವರೆಗೆ ಸಂಪಾದಿಸುವ ಕುಟುಂಬಗಳು ದೇವದುರ್ಗ ಶೇ.೧೭, ಲಿಂಗಸೂಗೂರು, ಶೇ.೧೪, ಮಾನವಿ ಶೇ.೧೩ರಷ್ಟು, ಸಿಂಧನೂರು ಶೇ.೧೫ರಷ್ಟು ಪಡೆಯುತ್ತಿವೆ. ೩,೬೦೦ ರಿಂದ ೪,೫೦೦ರವರೆಗೆ ನೋಡಿದಾಗ ದೇವದುರ್ಗ ಶೇ.೧೧, ಲಿಂಗಸೂಗೂರು ಶೇ.೧೩, ಮಾನವಿ ಶೇ.೧೦, ಸಿಂಧನೂರು ಶೇ.೨೮ರಷ್ಟು ವರಮಾನ ಹೊಂದಿವೆ. ೪,೬೦೦ಕ್ಕಿಂತ ಅಧಿಕ ಸಂಪಾದನೆ ಮಾಡುವ ಕುಟುಂಬಗಳು ದೇವದುರ್ಗ ಶೇ.೧೨, ಲಿಂಗಸೂಗೂರು ಶೇ.೧೧, ಮಾನವಿ ಶೇ.೧೪ ಹಾಗೂ ಸಿಂಧನೂರು ಶೇ.೧೮ರಷ್ಟು ಸಂಪಾದಿಸುತ್ತಿವೆ. ಈ ಪ್ರತಿಕುಟುಂಬಗಳಲ್ಲಿ ಅವರ ಮಕ್ಕಳ ಮತ್ತು ಕುಟುಂಬದ ಎಲ್ಲಾ ಸದಸ್ಯರನ್ನು ಒಳಗೊಂಡ ಸಂಪಾದನೆಯಾಗಿರುತ್ತದೆ. ಒಂದು ಹೊತ್ತಿನ ಊಟಕ್ಕೆ ಪರದಾಡುವಂತಹ ಸ್ಥಿತಿ ಸಾಮಾನ್ಯ ಬಡಕುಟುಂಬಗಳಿಗೆ ಇರುವುದರಿಂದ ಉಳಿತಾಯದ ಮಾತೆ ಇಲ್ಲ ಕನಸಾಗಿ ಕಾಣುತ್ತಿದೆ.

ಕೋಷ್ಟಕ–೬.೪೧

ಕುಟುಂಬದ ಖರ್ಚಿನ ಮಾಹಿತಿ

ಕ್ರಸ‍ಂ	ವಿವರಣೆ	ಒಟ್ಟು ಕುಟುಂಬಗಳು	ಶೇಕಡವಾರು
೧	೫೦೦ ರಿಂದ್ ೧೫೦೦	೭೩	೧೮.೨೫
೨	೧೬೦೦ ರಿಂದ್ ೨೫೦೦	೭೭	೧೯.೨೫
೩	೨೬೦೦ ರಿಂದ ೩೫೦೦	೭೬	೧೯.೦೦
೪	೩೬೦೦ ರಿಂದ ೪೫೦೦	೮೨	೨೦.೫೦
೫	೪೬೦೦ ಕ್ಕಿಂತ ಅಧಿಕ	೯೨	೨೩.೦೦
	ಒಟ್ಟು	೪೦೦	೧೦೦.೦೦

ಮೂಲ:– ಕ್ಷೇತ್ರದ ಮಾಹಿತಿಯ ಆಧಾರ

ಈ ಕೋಷ್ಟಕದಲ್ಲಿ ಕುಟುಂಬದ ಖರ್ಚಿನ ವಿವರವನ್ನು ಒಟ್ಟಾರೆ ರಾಯಚೂರು ಜಿಲ್ಲೆಯ ನಾಲ್ಕು ತಾಲೂಕುಗಳ ವಿವರವನ್ನು ಒಳಗೊಂಡಿರುತ್ತದೆ. ೫೦೦ರಿಂದ ೧೫೦೦ರವರೆಗೆ ಒಟ್ಟು ಕುಟುಂಬಗಳು ಶೇ.೧೮.೨೫ರಷ್ಟು, ೧೬೦೦ ರಿಂದ ೨,೫೦೦ರವರೆಗೆ ಶೇ.೧೯,೨೫, ೨,೬೦೦ ರಿಂದ ೩,೫೦೦ರವರೆಗೆ ಶೇ.೧೯,೦೦, ೩,೬೦೦ದಿಂದ ೪,೫೦೦ವರೆಗೆ ಶೇ.೨೦,೨೫ರಷ್ಟು ಮತ್ತು ೪,೬೦೦ಕ್ಕಿಂತ ಅಧಿಕ ಖರ್ಚು ಮಾಡುವ ಕುಟುಂಬಗಳು ಶೇ.೨೩ರಷ್ಟು ಆರೋಗ್ಯಕ್ಕಾಗಿ, ಮಕ್ಕಳ ಓದಿಗಾಗಿ, ಮನೆಯ ಖರ್ಚಿಗಾಗಿ ಮುಂತಾದ ಕಾರಣಗಳಿಗೆ ಹಣವನ್ನು ಖರ್ಚು ಮಾಡುತ್ತವೆ.

ಕೋಷ್ಟಕ–೬.೪೨

ಸಾಲದ ಸಂಪೂರ್ಣ ಮಾಹಿತಿ

ಕ್ರ.ಸಂ	ವಿವರಣೆ	ಒಟ್ಟು ಕುಟುಂಬಗಳು	ಶೇಕಡವಾರು
೧	**ಸಾಲದ ಮೂಲ**		
	ಸಂಘ ಸಂಸ್ಥೆಗಳಿಂದ	೯೯	೨೪.೭೫
	ಅಧಿಕೃತ ಸಾಲ	೧೨೭	೩೧.೭೫
	ಅನಧಿಕೃತ ಸಾಲ	೧೭೪	೪೩.೫೦
	ಒಟ್ಟು	೪೦೦	೧೦೦.೦೦
೨	**ಸಾಲದ ಕಾರಣ**		
	ಕೃಷಿಗಾಗಿ ಸಾಲ	೧೦೩	೨೫.೭೫
	ಅನಾರೋಗ್ಯಕ್ಕಾಗಿ ಸಾಲ	೯೭	೨೪.೨೫
	ಮದುವೆಗಾಗಿ ಸಾಲ	೧೨೧	೩೦.೨೫
	ಮಕ್ಕಳ ಓದು	೨೩	೫.೭೫
	ವ್ಯಾಪಾರ	೧೯	೪.೭೫
	ವಲಸೆ	೩೭	೯.೨೫
	ಒಟ್ಟು	೪೦೦	೧೦೦.೦೦
೩	**ಬಡ್ಡಿದರ**		
	ಶೂನ್ಯಮಟ್ಟ	೯೩	೨೩.೨೫
	ಶೇ.೦ ಯಿಂದ ೧೫	೧೧೨	೨೮.೦೦
	ಶೇ.೧೫ಕ್ಕೂ ಅಧಿಕ ಬಡ್ಡಿದರ	೧೯೫	೪೮.೭೫
			೧೦೦.೦೦

ಮೂಲ:– ಕ್ಷೇತ್ರದ ಮಾಹಿತಿಯ ಆಧಾರ

ಸಾಲದ ಸಂಪೂರ್ಣವಾದ ಮಾಹಿತಿಯನ್ನು ಈ ಕೋಷ್ಟಕ ಒಳಗೊಂಡಿದೆ. ಈ ಜಿಲ್ಲೆಯ ನಾಲ್ಕು ತಾಲೂಕುಗಳಲ್ಲಿ ಸಾಲದ ಮೂಲವನ್ನು ಒಟ್ಟಾರೆಯಾಗಿ ಶೇಕಡವಾರಿನಲ್ಲಿ ನೀಡಲಾಗಿದೆ. ಅವರು ಪಡೆಯುವ ಸಾಲದ ಮೂಲಗಳಿಂದ ಅದನ್ನು ಶೇಕಡ ಪ್ರಮಾಣದಲ್ಲಿ ವಿವರಿಸಲಾಗಿದೆ. ಸಂಘಸಂಸ್ಥೆಗಳಿಂದ ಪಡೆಯುವ ಸಾಲ ಶೇ.೨೪.೭೫ರಷ್ಟು, ಅಧಿಕೃತ ಸಾಲ ಶೇ.೩೧.೭೫ ಪಡೆಯುತ್ತಿದ್ದಾರೆಂದು ವಿಚಾರಿಸಿದಾಗ ಬೇರೆ ಬೇರೆ ಕಾರಣಗಳನ್ನು ನೀಡಿದ್ದಾರೆ. ಅದನ್ನು

ರೀತಿಯಾಗಿ ಹೇಳಬಹುದಾಗಿದೆ. ಕೃಷಿಗಾಗಿ ಸಾಲ ಶೇ.೨೫.೭೫ರಷ್ಟು ಅನಾರೋಗ್ಯಕ್ಕಾಗಿ ಸಾಲ ಶೇ.೨೪.೨೫ರಷ್ಟು, ಮದುವೆಗಾಗಿ ಶೇ.೩೦.೨೫ರಷ್ಟು, ಮಕ್ಕಳ ಓದಿಗಾಗಿ ಶೇ.೫.೭೫ರಷ್ಟು, ವ್ಯಾಪಾರಕ್ಕಾಗಿ ಶೇ.೪.೭೫, ವಲಸೆ ಹೋಗುವುದಕ್ಕಾಗಿ ಶೇ.೯.೨೫ರಷ್ಟು ಸಾಲವನ್ನು ಪಡೆಯುತ್ತಾರೆ. ಈ ಬಹುಮುಖ್ಯವಾಗಿ ಇಲ್ಲಿ ಸಾಲದ ದುಸ್ಥಿತಿಯನ್ನು ತೋರಿಸುತ್ತದೆ.

ಕೋಷ್ಟಕ–೬.೪೩

ಜಮೀನಿನ ಮಾಹಿತಿ ವಿವರ

ಕ್ರಸ	ವಿವರಗಳು	ದೇವದುರ್ಗ		ಲಿಂಗಸೂಗೂರು		ಮಾನವಿ		ಸಿಂಧನೂರು	
		ಒಟ್ಟು ಕುಟುಂಬ	ಶೇಕಡವಾರು	ಒಟ್ಟು ಕುಟುಂಬ	ಶೇಕಡವಾರು	ಒಟ್ಟು ಕುಟುಂಬ	ಶೇಕಡವಾರು	ಒಟ್ಟು ಕುಟುಂಬ	ಶೇಕಡವಾರು
೧	ಸ್ವಂತ ಜಮೀನು								
೨	ಇದೆ	೫೮	೫೮.೦೦	೫೯	೫೯.೦೦	೭೩	೭೩.೦೦	೬೮	೬೮.೦೦
೩	ಇಲ್ಲ	೪೨	೪೨.೦೦	೪೧	೪೧.೦೦	೨೭	೨೭.೦೦	೩೨	೩೨.೦೦
	ಒಟ್ಟು	೧೦೦	೧೦೦.೦೦	೧೦೦	೧೦೦.೦೦	೧೦೦	೧೦೦.೦೦	೧೦೦	೧೦೦.೦೦

ಮೂಲ:– ಕ್ಷೇತ್ರದ ಮಾಹಿತಿಯ ಆಧಾರ

ಇಲ್ಲಿ ಜಮೀನಿನ ಮಾಹಿತಿಯನ್ನು ಒಳಗೊಂಡಿದೆ. ಸ್ವಂತ ಜಮೀನು ಇದೆ, ಇಲ್ಲ ಎಂಬ ಪ್ರಶ್ನೆಯ ಮೂಲಕ ನಾಲ್ಕು ತಾಲೂಕುಗಳಲ್ಲಿ ಸಂದರ್ಶಿಸಿದಾಗ ಸಿಕ್ಕ ಮಾಹಿತಿ ಇದಾಗಿದೆ. ಜಮೀನು ಇದೆ ಅಂತಾ ಹೇಳಿದ ಕುಟುಂಬಗಳು ದೇವದುರ್ಗದಲ್ಲಿ ಶೇ.೫೮ರಷ್ಟು, ಲಿಂಗಸೂಗೂರು ಶೇ.೫೯, ಮಾನವಿ ಶೇ.೭೩, ಹಾಗೂ ಸಿಂಧನೂರು ಶೇ.೬೮ರಷ್ಟು ಕುಟುಂಬಗಳು ಜಮೀನು ಪಡೆದುಕೊಂಡಿವೆ. ಜಮೀನು ಇಲ್ಲ ಅಂತಾ ಹೇಳಿದ ಕುಟುಂಬಗಳು ದೇವದುರ್ಗ ಶೇ.೪೨, ಲಿಂಗಸೂಗೂರು, ಶೇ.೪೧, ಮಾನವಿ ಶೇ.೨೭, ಸಿಂಧನೂರು ಶೇ.೩೨, ಕುಟುಂಬಗಳು ಭೂಮಿಯನ್ನು ಹೊಂದಿರುವುದಿಲ್ಲ, ಈ ಕುಟುಂಬಗಳು ಕೂಲಿ, ವ್ಯಾಪಾರ, ವಲಸೆಯನ್ನು ಅವಲಂಬಿಸಿವೆ.

ಕೋಷ್ಟಕ–೬.೪೪

ಕುಡಿಯುವ ನೀರಿಗೆ ಸಂಬಂಧಿಸಿದ ಮಾಹಿತಿ

ಕ್ರಸ	ವಿವರಗಳು	ದೇವದುರ್ಗ		ಲಿಂಗಸೂಗೂರು		ಮಾನವಿ		ಸಿಂಧನೂರು	
೧	ನಿಮಗೆ ಕುಡಿಯುವ ನೀರಿನ ಸೌಲಭ್ಯ	ಒಟ್ಟು ಕುಟುಂಬ	ಶೇಕಡವಾರು	ಒಟ್ಟು ಕುಟುಂಬ	ಶೇಕಡವಾರು	ಒಟ್ಟು ಕುಟುಂಬ	ಶೇಕಡವಾರು	ಒಟ್ಟು ಕುಟುಂಬ	ಶೇಕಡವಾರು
	ಇದೆ	೩೬	೩೬.೦೦	೫೮	೫೮.೦೦	೪೭	೪೭.೦೦	೪೩	೪೩.೦೦
	ಇಲ್ಲ	೬೪	೬೪.೦೦	೪೨	೪೨.೦೦	೫೩	೫೩.೦೦	೫೭	೫೭.೦೦
	ಒಟ್ಟು	೧೦೦	೧೦೦.೦೦	೧೦೦	೧೦೦.೦೦	೧೦೦	೧೦೦.೦೦	೧೦೦	೧೦೦.೦೦

ಮೂಲ:– ಕ್ಷೇತ್ರದ ಮಾಹಿತಿಯ ಆಧಾರ

ಈ ಕೋಷ್ಟಕದಲ್ಲಿ ಕುಡಿಯುವ ನೀರಿಗೆ ಸಂಬಂಧಿಸಿದ ಮಾಹಿತಿಯನ್ನು ನೀಡಲಾಗಿದೆ. ಕುಡಿಯುವ ನೀರಿನ ಸೌಲಭ್ಯ ಇದೆ ಎನ್ನುವ ಪ್ರಶ್ನೆಗೆ ದೇವದುರ್ಗದಲ್ಲಿ ಶೇ.೩೬ ಲಿಂಗಸೂಗೂರಿನಲ್ಲಿ ಶೇ.೫೮ರಷ್ಟು, ಮಾನವಿಯಲ್ಲಿ ಶೇ.೪೭, ಹಾಗೂ ಸಿಂಧನೂರಿನಲ್ಲಿ ಶೇ.೪೩ರಷ್ಟು ಕುಟುಂಬಗಳು ಇದೆ ಎಂದು ತೋರಿಸಿವೆ. ನೀರಿನ ಸೌಲಭ್ಯ ಇಲ್ಲವೆಂದು ದೇವದುರ್ಗದಲ್ಲಿ ಶೇ.೬೪, ಲಿಂಗಸೂಗೂರಿನಲ್ಲಿ ಶೇ.೪೨, ಮಾನವಿಯಲ್ಲಿ ಶೇ.೫೩ರಷ್ಟು, ಸಿಂಧನೂರಿನಲ್ಲಿ ಶೇ.೫೭ರಷ್ಟು ಕುಡಿಯುವ ನೀರಿನ ಸೌಲಭ್ಯ ಇಲ್ಲವೆಂದು ಅಂಕಿ ಅಂಶಗಳು ತೋರಿಸುತ್ತವೆ. ಕುಡಿಯುವ ನೀರಿನ ಪ್ರಮಾಣವು ಕೂಡ ಶುದ್ಧವಾಗಿರುವುದಿಲ್ಲ. ಈ ಜಿಲ್ಲೆಯ ಜನರ ಆರೋಗ್ಯದ ಮೇಲೆ ನೀರಿನ ಪರಿಣಾಮ ಬೀರುವುದನ್ನು ಸಹ ಗುರುತಿಸಲಾಗಿದೆ.

ಕೋಷ್ಟಕ–೬.೪೫

ಶೌಚಾಲಯಕ್ಕೆ ಸಂಬಂಧಿಸಿದಂತೆ ಮಾಹಿತಿ

ಕ್ರಸ	ವಿವರಗಳು	ದೇವದುರ್ಗ		ಲಿಂಗಸೂಗೂರು		ಮಾನವಿ		ಸಿಂಧನೂರು	
		ಒಟ್ಟು ಕುಟುಂಬ	ಶೇಕಡವಾರು	ಒಟ್ಟು ಕುಟುಂಬ	ಶೇಕಡವಾರು	ಒಟ್ಟು ಕುಟುಂಬ	ಶೇಕಡವಾರು	ಒಟ್ಟು ಕುಟುಂಬ	ಶೇಕಡವಾರು
೧	ಮನೆಯಲ್ಲಿ ಶೌಚಾಲಯ/ ಸಮುದಾಂಯ								
	ಇದೆ	೨೩	೨೩.೦೦	೨೬	೨೬.೦೦	೨೪	೨೪.೦೦	೩೨	೩೨.೦೦
	ಇಲ್ಲ	೭೭	೭೭.೦	೭೪	೭೪.೦೦	೭೬	೭೬.೦೦	೬೮	೬೮.೦೦
	ಒಟ್ಟು	೧೦೦	೧೦೦.೦೦	೧೦೦	೧೦೦.೦೦	೧೦೦	೧೦೦.೦೦	೧೦೦	೧೦೦.೦೦
	ಶೌಚಾಲಯ ಬಳಕೆ ಮಾಡುವ ಕುಟುಂಬಗಳು/	೧೪	೧೪.೦೦	೨೩	೨೩.೦೦	೨೪	೨೪.೦೦	೩೦	೩೦.೦೦
	ಬಂತುಲು ಪ್ರದೇಶ	೮೬	೮೬.೦೦	೭೭	೭೭.೦೦	೭೬	೭೬.೦೦	೭೦	೭೦.೦೦
	ಒಟ್ಟು	೧೦೦	೧೦೦.೦೦	೧೦೦	೧೦೦.೦೦	೧೦೦	೧೦೦.೦೦	೧೦೦	೧೦೦.೦೦

ಮೂಲ:– ಕ್ಷೇತ್ರದ ಮಾಹಿತಿಯ ಆಧಾರ

ಬಹು ಮುಖ್ಯವಾಗಿ ಶೌಚಾಲಯಕ್ಕೆ ಸಂಬಂಧಿಸಿದ ವಿವರಣೆಯನ್ನು ಈ ಕೋಷ್ಟಕ ವಿವರಿಸುತ್ತದೆ. ಈ ಜಿಲ್ಲೆ ಕಾಡುತ್ತಿರುವ ಬಹುದೊಡ್ಡ ಸಮಸ್ಯೆಗಳ ಪೈಕಿ ಒಂದಾದ ನೈರ್ಮಲ್ಯದ ಬಗ್ಗೆ ಕಾಳಜಿ ವಹಿಸಬೇಕಾಗಿದೆ. ದೇವದುರ್ಗದಲ್ಲಿ ಶೌಚಾಲಯವಿರುವ ಮನೆಗಳು ಶೇ.೨೩, ಲಿಂಗಸೂಗೂರು, ಶೇ.೨೬, ಮಾನವಿಯಲ್ಲಿ ಶೇ.೨೪, ಸಿಂಧನೂರಿನಲ್ಲಿ ಶೇ.೩೨, ಮನೆಗಳಲ್ಲಿ ಮಾತ್ರ ಶೌಚಾಲಯವಿದೆ. ಇವುಗಳಲ್ಲಿ ಕೆಲವೊಂದು ಕುಟುಂಬಗಳ ಶೌಚಾಲಯವನ್ನು ಬಳಸುವುದಿಲ್ಲ ಕಾರಣ ಕೇಳಿದರೆ ಮುಜುಗರದ ಸಂಗತಿಯನ್ನು ತಿಳಿಸುತ್ತಾರೆ. ಇನ್ನೂ ಶೌಚಾಲಯವಿಲ್ಲದ ಕುಟುಂಬಗಳು ದೇವದುರ್ಗದಲ್ಲಿ ಶೇ.೭೭, ಲಿಂಗಸೂಗೂರಿನಲ್ಲಿ ಶೇ.೭೪, ಮಾನವಿಯಲ್ಲಿ ಶೇ.೭೬, ಸಿಂಧನೂರಿನಲ್ಲಿ ಶೇ.೬೮ ಕುಟುಂಬಗಳು ಶೌಚಾಲಯವನ್ನು ಹೊಂದಿರುವುದಿಲ್ಲ. ಇವರು ಶೌಚಾಲಯಕ್ಕೆ ಬಯಲು ಪ್ರದೇಶವನ್ನು ಅವಲಂಬಿಸಿದ್ದಾರೆ. ಈ ಕಾರಣದಿಂದಾಗಿ ಹಲವಾರು ರೋಗಗಳು ಬರುವ ಸಾಧ್ಯತೆಗಳು ಹೆಚ್ಚಾಗಿದ್ದು, ಇವರಿಗೆ ಸೂಕ್ತವಾದ ಅರಿವಿನ ಕೊರತೆ ಇರುವುದರಿಂದ, ಇವರಿಗೆ ಅರಿವನ್ನು ಮೂಡಿಸುವುದರಿಂದ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದಾಗಿದೆ.

ಕೋಷ್ಟಕ–೬.೪೬

ನೈರ್ಮಲ್ಯೀಕರಣದ ಮಾಹಿತಿ

ಕ್ರ.ಸ	ವಿವರಗಳು	ದೇವದುರ್ಗ		ಲಿಂಗಸೂಗೂರು		ಮಾನವಿ		ಸಿಂಧನೂರು	
		ಒಟ್ಟು ಕುಟುಂಬ	ಶೇಕಡವಾರು	ಒಟ್ಟು ಕುಟುಂಬ	ಶೇಕಡವಾರು	ಒಟ್ಟು ಕುಟುಂಬ	ಶೇಕಡವಾರು	ಒಟ್ಟು ಕುಟುಂಬ	ಶೇಕಡವಾರು
೧	ನಿಮ್ಮ ಮನೆಗೆ ಚರಂಡಿ ವ್ಯವಸ್ಥೆ								
	ಇದೆ	೧೭	೧೭.೦೦	೧೯	೧೯.೦೦	೧೪	೧೪.೦೦	೨೧	೨೧.೦೦
	ಇಲ್ಲ	೮೩	೮೩.೦೦	೮೧	೮೧.೦೦	೮೬	೮೬.೦೦	೭೯	೭೯.೦೦
೨	ಚರಂಡಿಯಿಂದ ತೆಗೆದ ಕಸ ಎಲ್ಲಿ ಹಾಕುತ್ತಾರೆ								
	ರಸ್ತೆ ಬದಿಯಲ್ಲಿ	೮೭	೮೭.೦೦	೮೨	೮೨.೦೦	೮೩	೮೩.೦೦	೭೯	೭೯.೦೦
	ನಿಗದಿತ ಜಾಗಕ್ಕೆ	೧೩	೧೩.೦೦	೧೮	೧೮.೦೦	೧೭	೧೭.೦೦	೨೧	೨೧.೦೦
	ಒಟ್ಟು	೧೦೦	೧೦೦.೦೦	೧೦೦	೧೦೦.೦೦	೧೦೦	೧೦೦.೦೦	೧೦೦	೧೦೦.೦೦

ಮೂಲ:– ಕ್ಷೇತ್ರದ ಮಾಹಿತಿಯ ಆಧಾರ

ಈ ಕೋಷ್ಟಕವು ರಾಯಚೂರು ಜಿಲ್ಲೆಯ ೪ ತಾಲೂಕುಗಳ ನೈರ್ಮಲ್ಯದ ಬಗ್ಗೆ ವಿವರಣೆ ನೀಡುತ್ತದೆ. ದೇವದುರ್ಗದಲ್ಲಿ ಚರಂಡಿ ವ್ಯವಸ್ಥೆ ಹೊಂದಿದ ಕುಟುಂಬಗಳು ಶೇ.೧೭ ಲಿಂಗಸೂಗೂರು ಶೇ.೧೯, ಮಾನವಿ ಶೇ.೧೪, ಸಿಂಧನೂರು ಶೇ.೨೧ರಷ್ಟು ಮಾತ್ರ ಚರಂಡಿ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಚರಂಡಿ ವ್ಯವಸ್ಥೆ ಇಲ್ಲದ ಕುಟುಂಬಗಳು ದೇವದುರ್ಗದಲ್ಲಿ ಶೇ.೮೩ರಷ್ಟು, ಲಿಂಗಸೂಗೂರು ಶೇ.೮೧ರಷ್ಟು, ಮಾನವಿ ಶೇ.೮೬, ಸಿಂಧನೂರಿನಲ್ಲಿ ಶೇ.೭೯ರಷ್ಟು ಮನೆಗಳಿಗೆ ಚರಂಡಿ ವ್ಯವಸ್ಥೆ ಇರುವುದಿಲ್ಲ. ಚರಂಡಿಯಿಂದ ತೆಗೆದ ಕಸವನ್ನು ರಸ್ತೆ ಬದಿಯಲ್ಲೇ ಹಾಕುತ್ತಾರೆ. ಈ ಪ್ರಮಾಣವನ್ನು ಗಮನಿಸಿದಾಗ ದೇವದುರ್ಗ ಶೇ.೧೩, ಲಿಂಗಸೂಗೂರು ಶೇ.೧೮ರಷ್ಟು, ಮಾನವಿಯಲ್ಲಿ ಶೇ.೧೭, ಸಿಂಧನೂರಿನಲ್ಲಿ ಶೇ.೨೧ರಷ್ಟು ಕುಟುಂಬಗಳು ರಸ್ತೆ ಬದಿಯಲ್ಲೇ ಹಾಕುತ್ತಾರೆ ಎಂದು ಹೇಳಿವೆ. ಈ ಅಂಕಿ–ಅಂಶಗಳನ್ನು ಗಮನಿಸಿದಾಗ ಸ್ವಚ್ಛತೆಯ ಬಗ್ಗೆ ಸರ್ಕಾರ ತೆಗೆದುಕೊಳ್ಳುವ ಕಾರ್ಯಕ್ರಮಗಳು, ಯೋಜನೆಗಳು ಈ ಜಿಲ್ಲೆಯಲ್ಲಿ ವೈಫಲ್ಯವನ್ನು ಎದುರಿಸುತ್ತಿವೆ.

ಕೋಷ್ಟಕ–೬.೪೭

ಅಪೌಷ್ಟಿಕತೆ, ಹೆರಿಗೆ, ಕಿರಿಯ ಸಹಾಯಕರ ಭೇಟಿ, ಕುರಿತು ಮಾಹಿತಿಯ ವಿವರ

ಕ್ರ.ಸ	ವಿವರಗಳು	ದೇವದುರ್ಗ		ಲಿಂಗಸೂಗೂರು		ಮಾನವಿ		ಸಿಂಧನೂರು	
		ಒಟ್ಟು ಕುಟುಂಬ	ಶೇಕಡವಾರು	ಒಟ್ಟು ಕುಟುಂಬ	ಶೇಕಡವಾರು	ಒಟ್ಟು ಕುಟುಂಬ	ಶೇಕಡವಾರು	ಒಟ್ಟು ಕುಟುಂಬ	ಶೇಕಡವಾರು
೧	ಅಪೌಷ್ಟಿಕತೆಯಿಂದ ಬಳಲುವ ಕುಟುಂಬಗಳು	೪೫	೪೫.೦೦	೪೮	೪೮.೦೦	೩೧	೩೧.೦೦	೧೦	೧೦.೦೦
೨	ಹೆರಿಗೆ ಎಲ್ಲಿ ಮಾಡಿಸುತ್ತೀರಿ?								
	ಮನೆಯಲ್ಲಿ	೩೩	೩೩.೦೦	೩೧	೩೧.೦೦	೨೬	೨೬.೦೦	೨೨	೨೨.೦೦
	ಆಸ್ಪತ್ರೆಯಲ್ಲಿ	೬೭	೬೭.೦೦	೬೯	೬೯.೦೦	೭೪	೭೪.೦೦	೭೮	೭೮.೦೦
೩	ಕಿರಿಯ ಆರೋಗ್ಯ ಸಹಾಯಕರು ನಿಮ್ಮ ಮನೆಗೆ ಭೇಟಿ ನೀಡುತ್ತಾರೆಯೇ								
	ಹೌದು	೮೩	೮೩.೦೦	೮೩	೮೩.೦೦	೮೬	೮೬.೦೦	೮೯	೮೯.೦೦
	ಇಲ್ಲ	೧೭	೧೭.೦೦	೧೭	೧೭.೦೦	೧೪	೧೪.೦೦	೧೧	೧೧.೦೦
	ಒಟ್ಟು	೧೦೦	೧೦೦.೦೦	೧೦೦	೧೦೦.೦೦	೧೦೦	೧೦೦.೦೦	೧೦೦	೧೦೦.೦೦

ಇಲ್ಲಿ ತೋರಿಸಲಾದ ಕೋಷ್ಟಕದಲ್ಲಿ ಅಪೌಷ್ಠಿಕತೆ, ಹೆರಿಗೆ, ಕಿರಿಯ ಸಹಾಯಕರ ಭೇಟಿಯ ಕುರಿತು ವಿವರಣೆಯನ್ನು ಸಾಪೇಕ್ಷವಾಗಿ ನೀಡುತ್ತದೆ. ಅಪೌಷ್ಟಿಕತೆಯಿಂದ ಬಳಲುವ ಕುಟುಂಬಗಳು ದೇವದುರ್ಗದಲ್ಲಿ ಶೇ.೪೫, ಲಿಂಗಸೂಗೂರು ಶೇ.೪೮, ಮಾನವಿ ಶೇ.೩೧, ಸಿಂಧನೂರು ಶೇ.೧೦ರಷ್ಟು ಕುಟುಂಬಗಳು ಅಪೌಷ್ಠಿಕತೆಯಿಂದ ನರಳುತ್ತಿವೆ. ಹೆರಿಗೆಯನ್ನು ಮನೆಯಲ್ಲಿ ಮಾಡುವಂತಹ ಕುಟುಂಬಗಳು ದೇವದುರ್ಗದಲ್ಲಿ ಶೇ.೩೩, ಲಿಂಗಸೂಗೂರಿನಲ್ಲಿ ಶೇ.೩೧, ಮಾನವಿಯಲ್ಲಿ ಶೇ.೨೬, ಸಿಂಧನೂರಿನಲ್ಲಿ ಶೇ.೨೨ರಷ್ಟು ಕುಟುಂಬಗಳು ಮನೆಯಲ್ಲಿ ಹೆರಿಗೆಯನ್ನು ಮಾಡಿಸುತ್ತಿವೆ. ಆಸ್ಪತ್ರೆಯಲ್ಲಿ ಹೆರಿಗೆ ಮಾಡುವ ಕುಟುಂಬಗಳು ದೇವದುರ್ಗದಲ್ಲಿ ಶೇ.೬೭, ಲಿಂಗಸೂಗೂರಿನಲ್ಲಿ ಶೇ.೬೯, ಮಾನವಿಯಲ್ಲಿ ಶೇ.೭೪, ಸಿಂಧನೂರಿನಲ್ಲಿ ಶೇ.೭೮ರಷ್ಟು ಕುಟುಂಬಗಳು ಆಸ್ಪತ್ರೆಯಲ್ಲಿ ಹೆರಿಗೆ ಮಾಡಲಾಗುತ್ತದೆ. ಆರೋಗ್ಯ ಕಿರಿಯ ಸಹಾಯಕರು ಭೇಟಿಯನ್ನು ದೇವದುರ್ಗ ಶೇ.೮೩, ಲಿಂಗಸೂಗೂರು ಶೇ.೮೩, ಮಾನವಿಯಲ್ಲಿ ಶೇ.೮೬, ಸಿಂಧನೂರಿನಲ್ಲಿ ಶೇ.೮೯ರಷ್ಟು ಕುಟುಂಬಗಳಿಗೆ ಭೇಟಿ ನೀಡುತ್ತಾರೆ. ಇನ್ನುಳಿದ ಕುಟುಂಬಗಳಾದ ದೇವದುರ್ಗ ಶೇ.೧೭, ಲಿಂಗಸೂಗೂರು ಶೇ.೧೭, ಮಾನವಿಯಲ್ಲಿ ಶೇ.೧೪, ಸಿಂಧನೂರಿನಲ್ಲಿ ಶೆ.೧೧ರಷ್ಟು ಮನೆಗಳಿಗೆ ಭೇಟಿ ನೀಡುವುದಿಲ್ಲವೆಂದು ತಿಳಿದು ಬಂದಿದೆ. ಇಲ್ಲಿ ಬಹುಮುಖ್ಯವಾಗಿ ಗಮನಿಸಬೇಕಾದ ಸಂಗತಿಗಳೆಂದರೆ ಅಪೌಷ್ಠಿಕತೆಯಿಂದ ಎಲ್ಲಾ ತಾಲೂಕುಗಳು ಬಳಲುತ್ತಿರುವುದು. ಮಕ್ಕಳಿಗೆ ಮತ್ತು ಬಾಣಂತಿಯರಿಗೆ ಸರಿಯಾದ ಪೌಷ್ಠಿಕತೆ ಇರದೆ ಮರಣ ಹೊಂದುವುದನ್ನು ನೋಡಬಹುದಾಗಿದೆ. ಈ ಮೇಲಿನ ಅಂಕಿ–ಅಂಶಗಳಿಂದ ಈ ಭಾಗದ ಜನತೆಯ ಅಭಿವೃದ್ಧಿಗಾಗಿ ವಿಶೇಷ ಕಾಳಜಿಯನ್ನು ವಹಿಸಬೇಕಾಗಿದೆ.

ಕೋಷ್ಟಕ–೬.೪೮

ಗರ್ಭಿಣಿಯರಿಗೆ ಸಿಕ್ಕ ಸವಲತ್ತುಗಳು

ಕ್ರಸಂ	ವಿವರಗಳು	ದೇವದುರ್ಗ		ಲಿಂಗಸೂಗೂರು		ಮಾನವಿ		ಸಿಂಧನೂರು	
		ಒಟ್ಟು ಕುಟುಂಬ	ಶೇಕಡವಾರು	ಒಟ್ಟು ಕುಟುಂಬ	ಶೇಕಡವಾರು	ಒಟ್ಟು ಕುಟುಂಬ	ಶೇಕಡವಾರು	ಒಟ್ಟು ಕುಟುಂಬ	ಶೇಕಡವಾರು
೧	ತಪಾಸಣೆ/ ಹೇಗೆ ರಕ್ತ ಪರೀಕ್ಷೆ ಇತರೆ								
	ಹೌದು	೮೧	೮೧.೦೦	೮೨	೮೨.೦೦	೭೯	೭೯.೦೦	೮೬	೮೬.೦೦
	ಇಲ್ಲ	೧೯	೧೯.೦೦	೧೮	೧೮.೦೦	೨೧	೨೧.೦೦	೧೪	೧೪.೦೦
೨	ಹೆರಿಗೆ ನಂತರ ಸಿಕ್ಕ ಸವಲತ್ತುಗಳು								
	ಹೌದು	೭೩	೭೩.೦೦	೭೪	೭೪.೦೦	೭೭	೭೭.೦೦	೮೩	೮೩.೦೦
	ಇಲ್ಲ	೨೭	೨೭.೦೦	೨೬	೨೬.೦೦	೨೩	೨೩.೦೦	೧೭	೧೭.೦೦
	ಒಟ್ಟು	೧೦೦	೧೦೦.೦೦	೧೦೦	೧೦೦.೦೦	೧೦೦	೧೦೦.೦೦	೧೦೦	೧೦೦.೦೦
೩	ಸಣ್ಣ ಮಕ್ಕಳಿಗೆ ಚುಚ್ಚುಮದ್ದು ಹಾಕಿಸಿದ ವಿವರ								
	ಹಾಕಿಸಿದೆ	೮೩	೮೩.೦೦	೮೫	೮೫.೦೦	೮೩	೮೩.೦೦	೮೭	೮೭.೦೦
	ಇಲ್ಲ	೧೭	೧೭.೦೦	೧೫	೧೫.೦೦	೧೭	೧೭.೦೦	೧೩	೧೩.೦೦
	ಒಟ್ಟು	೧೦೦	೧೦೦.೦೦	೧೦೦	೧೦೦.೦೦	೧೦೦	೧೦೦.೦೦	೧೦೦	೧೦೦.೦೦
೪	ಪಡಿತರ ಚೀಟಿ ವಿವರ								
	APL	೨೩	೨೩.೦೦	೨೫	೨೫.೦೦	೨೭	೨೭.೦೦	೩೧	೩೧.೦೦
	BPL	೫೧	೫೧.೦೦	೫೨	೫೨.೦೦	೪೮	೪೮.೦೦	೫೦	೫೦.೦೦
	ಅಂತ್ಯೋದಯ	೨೬	೨೬.೦೦	೨೩	೨೩.೦೦	೨೫	೨೫.೦೦	೧೯	೧೯.೦೦
	ಒಟ್ಟು	೧೦೦	೧೦೦.೦೦	೧೦೦	೧೦೦.೦೦	೧೦೦	೧೦೦.೦೦	೧೦೦	೧೦೦.೦೦

ಮೂಲ:– ಕ್ಷೇತ್ರಕಾರ್ಯದ ಮಾಹಿತಿ

ಈ ಕೋಷ್ಠಕದಲ್ಲಿ ಗರ್ಭಿಣಿಯರಿಗೆ ಆರೋಗ್ಯದ ಇಲಾಖೆಯಿಂದ ಸಿಗುವ ಸವಲತ್ತುಗಳ ಬಗ್ಗೆ ಪೂರ್ಣವಾದ ಮಾಹಿತಿಯನ್ನು ನೀಡುತ್ತದೆ. ತಪಾಸಣೆ, ಹೆರಿಗೆ, ರಕ್ತಪರೀಕ್ಷೆಯನ್ನು ಮಾಡಲಾಗುತ್ತದೆ ಮತ್ತು ಮಾಡಲಾಗುವುದಿಲ್ಲ ಎಂಬುದಕ್ಕೆ ಪ್ರತಿ ತಾಲೂಕಿನಿಂದ ಸಂಗ್ರಹದ ಮಾಹಿತಿಯನ್ನು ಒಳಗೊಂಡಿದೆ. ತಪಾಸಣೆ, ಹೆರಿಗೆ, ರಕ್ತ ಪರೀಕ್ಷೆ ಮಾಡುತ್ತಾರೆಂದು ಹೇಳಿದ ಕುಟುಂಬಗಳು ದೇವದುರ್ಗ ಶೇ.೮೧, ಲಿಂಗಸೂಗೂರು ಶೇ.೮೨, ಮಾನವಿ ಶೇ.೭೯, ಸಿಂಧನೂರು ಶೇ.೮೬ರಷ್ಟು ಕುಟುಂಬಗಳು ಹೌದು ಎಂದು ಉತ್ತರಿಸಿವೆ. ತಪಾಸಣೆ ಮಾಡುವುದಿಲ್ಲವೆಂದು ದೇವದುರ್ಗದಲ್ಲಿ ಶೇ.೧೯, ಲಿಂಗಸೂಗೂರಿನಲ್ಲಿ ಶೇ.೧೮, ಮಾನವಿಯಲ್ಲಿ ಶೇ.೨೧, ಸಿಂಧನೂರಿನಲ್ಲಿ ಶೇ.೧೪ರಷ್ಟು ಕುಟುಂಬಗಳು ತಪಾಸಣೆ, ರಕ್ತ ಪರೀಕ್ಷೆಯಿಂದ ವಂಚಿತವಾಗಿದ್ದು, ಮರಣ ಸಂಭವಿಸುವಂತಹ ಸ್ಥಿತಿ ಇರುವುದನ್ನು ಇಲ್ಲಿ ಗಮನಿಸಬಹುದಾಗಿದೆ. ಹೆರಿಗೆ ನಂತರ ಸಿಗುವ ಸವಲತ್ತುಗಳ ಪ್ರಮಾಣ ದೇವದುರ್ಗದಲ್ಲಿ ಶೇ.೭೩, ಲಿಂಗಸೂಗೂರಿನಲ್ಲಿ ಶೇ.೭೪, ಮಾನವಿಯಲ್ಲಿ ಶೇ.೭೭ ಸಿಂಧನೂರಿನಲ್ಲಿ ಶೇ.೮೩ರಷ್ಟು ಕುಟುಂಬಗಳು ಹೆರಿಗೆ ನಂತರ ಸವಲತ್ತು ಪಡೆಯುವ ಕುಟುಂಬಗಳಾಗಿವೆ. ಹೆರಿಗೆ ನಂತರ ಸವಲತ್ತು ಸಿಕ್ಕಿಲ್ಲ ಎನ್ನುವ ಕುಟುಂಬಗಳು ದೇವದುರ್ಗದಲ್ಲಿ ಶೇ.೨೭, ಲಿಂಗಸೂಗೂರಿನಲ್ಲಿ ಶೇ.೨೬, ಮಾನವಿಯಲ್ಲಿ ಶೇ.೨೩, ಸಿಂಧನೂರಿನಲ್ಲಿ ಶೇ.೧೭ರಷ್ಟು ಕುಟುಂಬಗಳು ಹೆರಿಗೆಯ ಸವಲತ್ತಿನಿಂದ ವಂಚಿತವಾಗಿವೆ. ಮಕ್ಕಳಿಗೆ ಚುಚ್ಚು ಮದ್ದು ಹಾಕಿಸಿದ ಕುಟಂಬಗಳು ದೇವದುರ್ಗದಲ್ಲಿ ಶೇ.೮೩, ಲಿಂಗಸೂಗೂರಿನಲ್ಲಿ ಶೇ.೮೫, ಮಾನವಿಯಲ್ಲಿ ಶೇ.೮೩, ಸಿಂಧನೂರಿನಲ್ಲಿ ಶೇ.೮೭, ಕುಟುಂಬಗಳು ಮಕ್ಕಳಿಗೆ ಲಸಿಕೆಯ ವಿವರವನ್ನು ನೀಡುತ್ತದೆ. ಚುಚ್ಚು ಮದ್ದು ಹಾಕಿಸಿಲ್ಲದ ಕುಟುಂಬಗಳು ದೇವದುರ್ಗ ಶೇ.೧೭, ಲಿಂಗಸೂಗೂರು ಶೇ.೧೫, ಮಾನವಿಯಲ್ಲಿ ಶೇ.೧೭, ಸಿಂಧನೂರಿನಲ್ಲಿ ಶೇ.೧೩ರಷ್ಟು ಕುಟುಂಬಗಳು ಮಕ್ಕಳಿಗೆ ಚುಚ್ಚು ಮದ್ದು ಹಾಕಿಸಿರುವುದಿಲ್ಲ. ಈ ಕುಟುಂಬಗಳಿಗೆ ಅರಿವಿನ ಕೊರತೆ ಇರುವುದು ಕಂಡುಬರುತ್ತದೆ. ಒಟ್ಟಾರೆಯಾಗಿ ಈ ಜಿಲ್ಲೆಯು ಇನ್ನೂ ಹೆರಿಗೆ ಸಂದರ್ಭದಲ್ಲಿ ತಾಯಂದಿರ ಮರಣ ಮತ್ತು ಮಕ್ಕಳ ಮರಣ ಪ್ರಮಾಣ ಅಧಿಕವಾಗಿರುವುದನ್ನು ಹಲವಾರು ಅಧ್ಯಯನಗಳು, ಸಮೀಕ್ಷೆ ತೋರಿಸಿವೆ. ಇದನ್ನು ತಡೆಯುವ ಪ್ರಯತ್ನ ಈ ಜಿಲ್ಲೆಯಲ್ಲಿ ಮಾಡಬೇಕಾಗಿದೆ.

ಪಡಿತರ ಚೀಟಿಯ ವಿವರವನ್ನು ಸಹ ನೀಡಲಾಗಿದೆ. APL, BPL, ಅಂತ್ಯೋದಯ ಕಾರ್ಡುಗಳು ಹೊಂದಿದ ಕುಟುಂಬದ ಮಾಹಿತಿ ಈ ರೀತಿಯಾಗಿದೆ. ದೇವದುರ್ಗದಲ್ಲಿ APL ಹೊಂದಿದ ಮನೆಗಳು ಶೇ.೨೩, ಲಿಂಗಸೂಗೂರು ಶೇ.೨೫, ಮಾನವಿ ಶೇ.೨೭, ಸಿಂಧನೂರು ಶೇ.೩೧ರಷ್ಟು, BPL ಹೊಂದಿದ ಕುಟುಂಬಗಳು ದೇವದುರ್ಗದಲ್ಲಿ ಶೇ.೫೧, ಲಿಂಗಸೂಗೂರು ಶೇ.೫೨, ಮಾನವಿ ಶೇ.೪೮, ಸಿಂಧನೂರು ಶೇ.೫೦ರಷ್ಟು, ಅದೇ ರೀತಿಯಾಗಿ ಅಂತ್ಯೋದಯ ಕಾರ್ಡ್ ಹೊಂದಿದ ಕುಟುಂಬಗಳು ದೇವದುರ್ಗ ಶೇ.೨೬, ಲಿಂಗಸೂಗೂರು ಶೇ.೨೩,

ಮಾನವಿಯಲ್ಲಿ ಶೇ.೨೫, ಸಿಂಧನೂರಿನಲ್ಲಿ ಶೇ.೧೯ರಷ್ಟು ಕುಟುಂಬಗಳು ಬಡತನಕ್ಕೆ ಸಂಬಂಧಿಸಿದಂತೆ ಹೊಂದಿದ ಕಾರ್ಡ್‌ಗಳಾಗಿವೆ. ಇನ್ನೂ ಬಹುತೇಕ ಬಡಕುಟುಂಬಗಳಿಗೆ ಕಾರ್ಡ್ ದೊರೆಯದೆ ಇರುವುದು ಸಹ ಕಂಡುಬಂದಿದೆ. ಇದರಿಂದ ದೊರೆಯುವ ಅಕ್ಕಿಯು ಸರಿಯಾದ ಸಮಯಕ್ಕೆ ಸಿಗುವುದಿಲ್ಲ.

ಕೋಷ್ಟಕ-೬.೪೯

ಸರಕಾರದಿಂದ ದೊರೆತ ಸವಲತ್ತುಗಳು

ಕ್ರಸ	ವಿವರಗಳು	ದೇವದುರ್ಗ		ಲಿಂಗಸೂಗೂರು		ಮಾನವಿ		ಸಿಂಧನೂರು	
		ಒಟ್ಟು ಕುಟುಂಬ	ಶೇಕಡವಾರು	ಒಟ್ಟು ಕುಟುಂಬ	ಶೇಕಡವಾರು	ಒಟ್ಟು ಕುಟುಂಬ	ಶೇಕಡವಾರು	ಒಟ್ಟು ಕುಟುಂಬ	ಶೇಕಡವಾರು
೧	ವಸತಿ								
	ಆಶ್ರಯ ಇಂದಿರಾ ಆವಾಸ್ ಅಂಬೇಡ್ಕರ್ ಆವಾಸ್ ದೇವದಾಸಿ ವಸತಿ								
	ಸಿಕ್ಕಿದೆ	೬೩	೬೩.೦೦	೬೬	೬೬.೦೦	೮೧	೮೧.೦೦	೮೩	೮೩.೦೦
	ಇಲ್ಲ	೩೭	೩೭.೦೦	೩೪	೩೪.೦೦	೧೯	೧೯.೦೦	೧೭	೧೭.೦೦
೨	ವೃಧ್ಯಾಪ್ಯ ವೇತನ	೨೩	೨೩.೦೦	೨೬	೨೬.೦೦	೩೧	೩೧.೦೦	೩೨	೩೨.೦೦
೩	ವಿಧವಾ ವೇತನ	೦೦	೦೦.೦೦	೩	೦.೦೩	೧೨	೦.೧೨	೦೬	೦.೦೬
	ಅಂಗವಿಕಲ ವೇತನ	೩೫	೩೫.೦೦	೩೪	೩೪.೦೦	೨೩	೨೩.೦೦	೩೭	೩೭.೦೦

ಮೂಲ:- ಕ್ಷೇತ್ರಕಾರ್ಯದ ಮಾಹಿತಿ

ಈ ಕೋಷ್ಟಕವಾರು ಸರಕಾರದಿಂದ ದೊರೆತ ಸೌಲಭ್ಯಗಳ ಬಗ್ಗೆ ಮಾಹಿತಿಯನ್ನು ನೀಡುತ್ತದೆ. ವಸತಿ, ಅಶ್ರಯ ಮನೆಗಳು, ವೃದಾಪ್ಯ ವೇತನ, ವಿಧವಾ ವೇತನ, ಅಂಗವಿಕಲರ ವೇತನಕ್ಕೆ ಸಂಬಂಧಿಸಿದ ವಿವರವನ್ನು ಶೇಕಡ ಪ್ರಮಾಣದಲ್ಲಿ ವಿವರಿಸಿದೆ. ದೇವದುರ್ಗದಲ್ಲಿ ವಸತಿ ದೊರೆತ ಕುಟುಂಬಗಳು ಶೇ.೬೩, ಲಿಂಗಸೂಗೂರು ಶೇ.೬೬, ಮಾನವಿಯಲ್ಲಿ ಶೇ.೮೧, ಸಿಂಧನೂರಿನಲ್ಲಿ ಶೇ.೮೩ರಷ್ಟು ಕುಟುಂಬಗಳಿಗೆ ದೊರೆತಿವೆ. ದೊರೆಯದ ಕುಟುಂಬಗಳು ದೇವದುರ್ಗ ಶೇ.೩೭, ಲಿಂಗಸೂಗೂರು ಶೇ.೩೪, ಮಾನವಿಯಲ್ಲಿ ಶೇ.೧೯, ಸಿಂಧನೂರಿನಲ್ಲಿ ಶೇ.೧೭ರಷ್ಟು ಕುಟುಂಬಗಳು ಮನೆಯಿಲ್ಲದೆ ವಂಚಿತವಾಗಿವೆ. ವೃದಾಪ್ಯವೇತನ ಪಡೆಯುತ್ತಿರುವ ಕುಟುಂಬಗಳು ದೇವದುರ್ಗ ಶೇ.೨೩, ಲಿಂಗಸೂಗೂರು ಶೇ.೨೬, ಮಾನವಿ ಶೇ.೩೧, ಸಿಂಧನೂರು ಶೇ.೩೨ರಷ್ಟು ವೇತನ ಪಡೆಯುತ್ತವೆ. ವಿಧವಾ ವೇತನಕ್ಕೆ ಸಂಬಂಧಿಸಿದಂತೆ ದೇವದುರ್ಗದಲ್ಲಿ ಯಾವುದು ಕುಟುಂಬ ಪಡೆಯುವುದು ಸಮೀಕ್ಷೆಯಿಂದ ಕಂಡುಬಂದಿಲ್ಲ. ಲಿಂಗಸೂಗೂರಿನಲ್ಲಿ ಶೇ.೩, ಮಾನವಿಯಲ್ಲಿ ಶೇ.೧೨, ಸಿಂಧನೂರಿನಲ್ಲಿ ಶೇ.೬ರಷ್ಟು ಕಂಡುಬಂದಿದೆ. ಅಂಗವಿಕಲರ ವೇತನ ದೇವದುರ್ಗದಲ್ಲಿ ಶೇ.೩೫, ಲಿಂಗಸೂಗೂರು ಶೇ.೩೪, ಮಾನವಿಯಲ್ಲಿ ಶೇ.೨೩, ಸಿಂಧನೂರಿನಲ್ಲಿ ಶೇ.೩೭ರಷ್ಟು ಕುಟುಂಬಗಳಲ್ಲಿ ಈ ಸೌಲಭ್ಯವನ್ನು ಪಡೆಯುತ್ತಿವೆ.

ಕೋಷ್ಟಕ–೬.೫೦

ಸರಕಾರದಿಂದ ದೊರೆತ ಸೌಲಭ್ಯಗಳ ಮಾಹಿತಿ ವಿವರ

ಕ್ರಸ	ವಿವರಗಳು	ದೇವದುರ್ಗ		ಲಿಂಗಸೂಗೂರು		ಮಾನವಿ		ಸಿಂಧನೂರು	
		ಒಟ್ಟು ಕುಟುಂಬ	ಶೇಕಡವಾರು	ಒಟ್ಟು ಕುಟುಂಬ	ಶೇಕಡವಾರು	ಒಟ್ಟು ಕುಟುಂಬ	ಶೇಕಡವಾರು	ಒಟ್ಟು ಕುಟುಂಬ	ಶೇಕಡವಾರು
೧	ಭಾಗ್ಯಜ್ಯೋತಿ								
	ಸಿಕ್ಕಿದೆ	೮೮	೮೮.೦೦	೮೭	೮೭.೦೦	೯೩	೯೩.೦೦	೯೨	೯೨.೦೦
	ಇಲ್ಲ	೧೨	೧೨.೦೦	೧೩	೧೩.೦೦	೦೭	೦೭.೦೦	೦೮	೦೮.೦೦
೨	ಗಂಗಾ ಕಲ್ಯಾಣ ಯೋಜನೆ ಬೋರ್ವೆಲ್								
	ಸಿಕ್ಕಿದೆ	೪೧	೪೧.೦೦	೪೩	೪೩.೦೦	೫೨	೫೨.೦೦	೬೩	೬೩.೦೦
	ಇಲ್ಲ	೫೯	೫೯.೦೦	೫೭	೫೭೦೦	೪೮	೪೮.೦೦	೩೭	೩೭.೦೦
೩	ಬೀಜಗಳು ರೀಯಾಯತಿ ದರದಲ್ಲಿ								
	ಸಿಕ್ಕಿದೆ	೩೩	೩೩.೦೦	೪೧	೪೧.೦೦	೪೭	೪೭೦೦	೫೧	೫೧.೦೦
	ಇಲ್ಲ	೬೭	೬೭.೦೦	೫೯	೫೯.೦೦	೫೩	೫೩.೦೦	೪೯	೪೯.೦೦
	ಒಟ್ಟು	೧೦೦	೧೦೦.೦೦	೧೦೦	೧೦೦.೦೦	೧೦೦	೧೦೦.೦೦	೧೦೦	೧೦೦.೦೦

ಮೂಲ:–ಕ್ಷೇತ್ರಕಾರ್ಯದ ಮಾಹಿತಿ

ಈ ಕೋಷ್ಠಕದಲ್ಲಿ ಸರಕಾರದಿಂದ ರೈತ ಕುಟುಂಬಗಳಿಗೆ ದೊರೆತ ಸೌಲಭ್ಯದ ವಿವರವನ್ನು ನೀಡಲಾಗಿದೆ. ಭಾಗ್ಯ ಜ್ಯೋತಿ ದೊರೆತ ಮನೆಗಳು ದೇವದುರ್ಗದಲ್ಲಿ ಶೇ.೮೮, ಲಿಂಗಸೂಗೂರು ಶೇ.೮೭, ಮಾನವಿ ಶೇ.೯೩, ಸಿಂಧನೂರು ಶೇ.೯೨ರಷ್ಟು ಕುಟುಂಬಗಳು ಈ ಸೌಲಭ್ಯ ದೊರೆತಿದೆ. ಗಂಗಾಕಲ್ಯಾಣ ಯೋಜನೆಯಲ್ಲಿ ಬೋರ್ವೆಲ್ ದೊರೆತ ಕುಟುಂಬಗಳು ದೇವದುರ್ಗದಲ್ಲಿ ಶೇ.೪೧, ಲಿಂಗಸೂಗೂರು, ಶೇ.೪೩, ಮಾನವಿ ಶೇ.೫೨, ಸಿಂಧನೂರು ಶೇ.೬೩ರಷ್ಟು ಸೌಲಭ್ಯ ದೊರೆತಿದೆ. ಭಾಗ್ಯ ಜ್ಯೋತಿ ವಿದ್ಯುತ್ ದೊರೆಯದ ಕುಟುಂಬಗಳು ದೇವದುರ್ಗದಲ್ಲಿ ಶೇ.೧೨, ಲಿಂಗಸೂಗೂರು ಶೇ.೧೩, ಮಾನವಿಯಲ್ಲಿ ಶೇ.೦೭, ಸಿಂಧನೂರಿನಲ್ಲಿ ಶೇ.೮ರಷ್ಟು ಮನೆಗಳಿಗೆ ವಿದ್ಯುತ್ ಇರುವುದಿಲ್ಲ. ಗಂಗಾ ಕಲ್ಯಾಣ ಯೋಜನೆಯಿಂದ ಬೋರ್ವೆಲ್ ದೊರೆಯದ ಕುಟುಂಬಗಳು ದೇವದುರ್ಗ ಶೇ.೫೯, ಲಿಂಗಸೂಗೂರು ಶೇ.೫೭, ಮಾನವಿ ಶೇ.೪೮, ಸಿಂಧನೂರು ಶೇ.೩೭ರಷ್ಟು ಕುಟುಂಬಗಳಿಗೆ ಈ ಸೌಲಭ್ಯದಿಂದ ವಂಚಿತವಾಗಿದೆ. ಬೀಜಗಳು ರೀಯಾಯತಿ ದರದಲ್ಲಿ ಪಡೆದ ಕುಟುಂಬಗಳು ದೇವದುರ್ಗ ಶೇ.೩೩, ಲಿಂಗಸೂಗೂರು ಶೇ.೪೧, ಮಾನವಿ ಶೇ.೪೭, ಸಿಂಧನೂರು ಶೇ.೫೧ರಷ್ಟು ಪಡೆದುಕೊಂಡಿವೆ. ರಿಯಾಯತಿ ದರದಲ್ಲಿ ಬೀಜಗಳು ಪಡೆಯದೆ ಇರುವ ಕುಟುಂಬಗಳು ದೇವದುರ್ಗ ಶೇ.೬೭, ಲಿಂಗಸೂಗೂರು ಶೇ.೫೯, ಮಾನವಿ ಶೇ.೫೩, ಸಿಂಧನೂರು ಶೇ.೪೯ರಷ್ಟು ಕುಟುಂಬಗಳಿಗೆ ದೊರೆತಿರುವುದಿಲ್ಲ. ಈ ಕೋಷ್ಟಕದಿಂದ ತಿಳಿದು ಬರುವ ಸಂಗತಿಯೆಂದರೆ ಎಲ್ಲದರಲ್ಲೂ ಈ ಜಿಲ್ಲೆಯ ದುಸ್ಥಿತಿಯನ್ನು ಅನುಭವಿಸುತ್ತಿರುವುದು ಅಂಕಿ–ಅಂಶಗಳಿಂದ ಸ್ಪಷ್ಟವಾಗುತ್ತದೆ. ಇದನ್ನು ತಡೆಯುವ ಪ್ರಯತ್ನ ಈ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ತೀವ್ರವಾಗಿ ನಡೆಯಬೇಕಾಗಿದೆ.

ಕ್ಷೇತ್ರಕಾರ್ಯ ಮಾಡಿದ ಎಲ್ಲಾ ತಾಲೂಕುಗಳಲ್ಲಿ ಶಿಕ್ಷಣ, ಆರೋಗ್ಯ, ವರಮಾನ ಮೂಲಭೂತ ಸೌಲಭ್ಯಗಳು ಮುಂತಾದ ಸಂಗತಿಗಳಿಂದ ಈ ಜಿಲ್ಲೆಯು ದುಸ್ಥಿತಿಯನ್ನು ಅನುಭವಿಸುತ್ತಿರುವುದು ಅಂಕಿ ಅಂಶಗಳಿಂದ ಸ್ಪಷ್ಟವಾಗುತ್ತದೆ. ಈ ಕಾರಣದಿಂದ ರಾಯಚೂರು ಜಿಲ್ಲೆಗೆ ವಿಶೇಷ ಯೋಜನೆಗಳನ್ನು ರೂಪಿಸಿ, ಅವುಗಳನ್ನು ನೇರವಾಗಿ ಜನರಿಗೆ ತಲುಪಿಸುವ ಕಾರ್ಯ ಇಲ್ಲಿ ಆಗಬೇಕಾಗಿದೆ.

ಜಿಲ್ಲೆಯ ಆರೋಗ್ಯ ಸೌಲಭ್ಯಗಳು ಅಸಮರ್ಪಕ ಪ್ರಮಾಣದಲ್ಲಿದ್ದು, ಸಿಬ್ಬಂದಿಯ ಲಭ್ಯತೆ ಇನ್ನಷ್ಟು ಕಡಿಮೆ ಪ್ರಮಾಣದಲ್ಲಿದೆ ಮಾನದಂಡಗಳ ಅನುಸಾರ ಜಿಲ್ಲೆಗೆ ಇನ್ನೂ ಅಧಿಕ ಸಂಖ್ಯೆಯ ಅಂಗನವಾಡಿಗಳ ಕೇಂದ್ರಗಳ ಅವಶ್ಯಕತೆಯಿದೆ. ಆರೋಗ್ಯದ ಮೇಲಿನ ವೆಚ್ಚವು ಜಿ.ಪಂ.ಒಟ್ಟು ವೆಚ್ಚದ ಶೇ.೨೩ರಷ್ಟಿದ್ದು ತಲಾ ವೆಚ್ಚವು ಕೇವಲ ರೂ. ೨೨೨ರಷ್ಟಿದ್ದು ತುಂಬಾ ಕಡಿಮೆ ಇದೆ.

* ಸಾಂಸ್ಥಿಕ ಹೆರಿಗೆಗಳ ಪ್ರಮಾಣದ ಹೆಚ್ಚಳದಿಂದ ಶಿಶುಮರಣ ದರ ಹಾಗೂ ಕಡಿಮೆ ತೂಕದಿಂದ ಜನಿಸಿದ ಮಕ್ಕಳ ಪ್ರಮಾಣದಲ್ಲಿ ಇಳಿಕೆಯಾಗುತ್ತದೆ

* ಗರ್ಭಿಣಿ ಮಹಿಳೆಯರು ಸಂಪೂರ್ಣವಾಗಿ ಪ್ರಸವ ಪೂರ್ವ ಆರೈಕೆ ಪಡೆದರೆ ಮತ್ತು ಸಾಂಸ್ಥಿಕ ಹೆರಿಗೆಗಳ ಪ್ರಮಾಣದಲ್ಲಿ ಹೆಚ್ಚಳವಾದರೆ ತಾಯಂದಿರ ಮರಣ ದರವನ್ನು ಕಡಿಮೆ ಮಾಡಬಹುದು.

ಸಂಪೂರ್ಣ ಲಸಿಕೀಕರಣವನ್ನು ಸಾಧಿಸಿ ಮಕ್ಕಳ ಅಪೌಷ್ಟಿಕತೆಯನ್ನು ಕಡಿಮೆ ಮಾಡಿದರೆ ಮಕ್ಕಳ ಮರಣ ಪ್ರಮಾಣ ಕಡಿಮೆಯಾಗುತ್ತದೆ.

* ಆರೋಗ್ಯದ ಮೇಲಿನ ತಲಾ ವೆಚ್ಚವನ್ನು ಹೆಚ್ಚಿಸಿದರೆ ಒಟ್ಟಾರೆ ಆರೋಗ್ಯ ಸ್ಥಿತಿಯನ್ನು ಸುಧಾರಿಸಬಹುದಾಗಿದೆ.

ಪ.ಜಾತಿ/ಪ.ಪಂಗಡ ಹಿಂದುಳಿದ ವರ್ಗಗಳ ಮಕ್ಕಳಲ್ಲಿ ಅಧಿಕ ಪ್ರಮಾಣದ ಅಪೌಷ್ಟಿಕತೆ ಇರುವುದನ್ನು ತೋರ್ಪಡಿಸಿ, ಸಾರ್ವಜನಿಕ ಪಡಿತರ ವ್ಯವಸ್ಥೆಯು ಅವರ ಆಹಾರ ಬಳಕೆಯ ಮೇಲೆ ಉತ್ತಮ ಪರಿಣಾಮ ಬೀರಿದೆ. ಆದರೆ ಶೇ.೪೦೦ ಸ್ಯಾಂಪಲ್ ಕುಟುಂಬಗಳು ಪಡಿತರ ಖರೀದಿಗೆ ಸಾಲ ಪಡೆದಿದ್ದಾಗಿ ತಿಳಿಸಿರುವುದ ಅವರ ಆದಾಯ ಕಡಿಮೆ ಇದ್ದು ಅದನ್ನು ಹೆಚ್ಚಿಸುವ ಕ್ರಮ ತೆಗೆದುಕೊಳ್ಳುವ ಅವಶ್ಯಕತೆಯನ್ನು ಸೂಚಿಸುತ್ತದೆ.

ಕೊನೆಯ ಟಿಪ್ಪಣಿ

೧. ಕರ್ನಾಟಕ ಸರ್ಕಾರ, ೨೦೦೬, ಕರ್ನಾಟಕ ಮಾನವ ಅಭಿವೃದ್ಧಿ ವರದಿ ೨೦೦೫, ಕರ್ನಾಟಕ ಮುದ್ರಣಾಲಯ, ಬೆಂಗಳೂರು. ಪುಟ–೪೧.

೨. ಶ್ರೀನಿವಾಸ್ ಮತ್ತು ಬರ್ದಾನ್ ಕೆ, ಪ್ರಣಾಬ್ (ಸಂ), ೧೯೮೮, ರೂರಲ್ ಪಾವರ್ಟಿ ಇನ್ ಸೌಥ್ ಏಷ್ಯ, ಓಯುಪಿ, ದೆಹಲಿ.

೩. ಕರ್ನಾಟಕ ಸರ್ಕಾರ, ೨೦೦೧, ೨೦೧೧, ಕರ್ನಾಟಕ ಜನಗಣತಿ ವರದಿ ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು.

೪. ಕಲ್ಲಪುರ ಪಿ.ಬಿ, ೧೯೮೭, ವೈದ್ಯಕೀಯ ಮತ್ತು ಸಾರ್ವಜನಿಕ ಸೇವೆಗಳು, ಭಾರತ ಗ್ಯಾಸಟೀಯರ್, ಭಾರತದ ದೇಶ ಕೋಶ, ಸಂಪುಟ-೪, ಪುಟ-೬೦೫, ೬೫೭.

೫. ಡ್ರೀಜೆ ಜಿನ್ ಮತ್ತು ಅಮರ್ತ್ಯಸೇನ್, ೧೯೯೫, ಇಂಡಿಯಾ ಎಕೊನೊಮಿಕ್ ಡೆವಲಪೆಮೆಂಟ್ ಆಂಡ್ ಸೋಷಿಯಲ್ ಅಪಾರ್ಚುನಿಟಿ, ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ನ್ಯೂ ದೆಹಲಿ, ಪುಟ-೧೧.

೬. ಚಂದ್ರಶೇಖರ್ ಟಿ.ಆರ್, ೧೯೯೯, ಅಮರ್ತ್ಯಸೇನ್ ಅಭಿವೃದ್ಧಿ ಅಧ್ಯಯನಗಳು, ಕ್ರೈಸ್ಟ್ ಕಾಲೇಜ್, ಬೆಂಗಳೂರು, ಪುಟ-೩೫.

೭. ಗಾರಡಲ್, ಕ್ಲಾಸ್, ೧೯೮೪, ಹೆಲ್ಥ್ : ಬೇಸಿಕ್ ನೀಡ್ ಆ್ಯಂಡ್ ಪ್ರೇರಿಕ್ವೆಷ್ಟ್ ಫಾರ್ ಎಕೊನಮಿಕ್ ಆ್ಯಂಡ್ ಸೋಷಿಯಲ್ ಡೆವಲಪ್ಮೆಂಟ್, ಡೆವಲಪ್ಮೆಂಟ್ ಆ್ಯಂಡ್ ಕೋ-ಆಪರೇಷನ್, ಜವಾನ್, ಪುಟ-೪-೬.

೮. ಲೇವಿಸ್ ಡಬ್ಲ್ಯು ಆರ್ಥರ್, ೧೯೬೬, ಡೆವಲಪಮೆಂಟ್ ಪ್ಲಾನಿಂಗ್, ದ ಎಸೆನ್ಸಿಯಲ್ ಆರ್ಫ ಎಕೊನೊಮಿಕ್ ಪಾಲಿಸಿ, ಅಲ್ಲೆನ್ ಮತ್ತು ಅನ್‌ವಿನ್, ಲಂಡನ್, ಪುಟ-೧೧೦.

೯. ನಾರಾಯಣ ಕೆ.ವಿ, ೧೯೯೭, ಹೆಲ್ಥ್ ಆಂಡ್ ಡೆವಲಪ್‌ಮೆಂಟ್, ಇಂಟರ್‌ಸೆಕ್ಟ್ರಲ್ ಲಿಂಕೇಜ್ ಇನ್ ಇಂಡಿಯಾ, ಕಾವತ್, ನ್ಯೂ ದೆಹಲಿ, ಪುಟ-೨೮.

೧೦. ಮೂರ್ತಿ, ಮಮತ್ (ಸಂ), ೧೯೯೬, ಮೊರಲಿಟಿ, ಪೆರ್ಬಿಲಿಟಿ ಆಂಡ್ ಜೆಂಡರ್ ಬೇಸಿಸ್ ಇನ್ ಇಂಡಿಯಾ ಓಯುಪಿ, ದೆಹಲಿ, ಪುಟ-೩೬೪

೧೧. ರಾಜೇಶ್ವರಿ, ೧೯೯೬, ಜೆಂಡರ್ ಬೇಸಿಸ್ ಇನ್ ಯುಟಿಲೈಜೆಷನ್ ಆಫ್ ಹೆಲ್ತ್ ಕೇರ್ ಪೆಸಿಲಿಟೀಜ್ ಇನ್ ರೂರಲ್ ಹರಿಯಾಣ, ಇಪಿಡಬ್ಲ್ಯೂ, ವಾಲ್ಯೂಮ್, ೧೩೧, ನಂ.೮, ಪುಟ-೪೮೯, ೪೯೭.

೧೨. ಪೃಥ್ವಿ, ಬೆಲರಾಣಿ ಶರ್ಮ, ೧೯೯೪, ಎನ್‌ಸೈಕ್ಲೋಪಿಡಿಯಾ ಆಫ್ ವುಮೆನ್, ಸೊಸೈಟಿ, ಕಲ್ಚರ್, ಅನ್‌ಮೋಲ್, ನ್ಯೂ ದೆಹಲಿ, ಪುಟಟ-೨೩೬.

ಅಧ್ಯಾಯ–ಏಳು

ಸಮಾರೋಪ

ಅಧ್ಯಾಯ–ಏಳು

ಸಮಾರೋಪ

ಪೀಠಿಕೆ

ಪ್ರಸ್ತುತ ಅಧ್ಯಯನದಲ್ಲಿ ಕರ್ನಾಟಕ ರಾಜ್ಯದ ಹೈದರಾಬಾದ್ ಕರ್ನಾಟದಲ್ಲಿಯೂ ಕೂಡ ಹಿಂದುಳಿದ ರಾಯಚೂರು ಜಿಲ್ಲೆಯ ಅಭಿವೃದ್ಧಿ ಮತ್ತು ದುಸ್ಥಿತಿಯ ಸ್ಥಿತಿಗತಿಗಳನ್ನು ಪ್ರಾದೇಶಿಕ ಅಸಮಾನತೆಯನ್ನು ಮಾನವ ಅಭಿವೃದ್ಧಿ ವಿಚಾರ ಪ್ರಣಾಳಿಕೆಯ ನೆಲೆಯಿಂದ ಹಿಡಿದಿಡಲು ಪ್ರಯತ್ನಿಸಲಾಗಿದೆ.

ಯಾವುದೇ ಅಭಿವೃದ್ಧಿ ಕಾರ್ಯಕ್ರಮವು ಜನರಿಗಿರುವ ಅವಕಾಶಗಳನ್ನು ಮತ್ತು ಆಯ್ಕೆಗಳನ್ನು ವಿಸ್ತರಿಸುವಂತಿರಬೇಕು. ಆದಾಯವು ಅಭಿವೃದ್ಧಿಯ ಹಲವಾರು ಸೂಚಿಗಳಲ್ಲಿ ಒಂದು ಸೂಚಿಯಾಗಿದ್ದು, ಮಾನವ ಕಲ್ಯಾಣದ ಗುರಿಯ ಸಾಧನೆಗಿರುವ ಒಂದು ಸಾಧನ ಮಾತ್ರವಾಗಿದೆ. ಆದ್ದರಿಂದ ಇಡೀ ಅಭಿವೃದ್ಧಿ ಪ್ರಕ್ರಿಯೆಯು ಜನಕೇಂದ್ರಿತವಾಗಬೇಕಿದ್ದು, ಅವರೇ ಆ ಪ್ರಕ್ರಿಯೆಯ ನಿಯೋಗಿಗಳು ಮತ್ತು ಫಲಾನುಭವಿಗಳು ಎಂಬುದನ್ನು ಮನಗಾಣಬೇಕು. ಅಭಿವೃದ್ಧಿಯು ಹೆಚ್ಚು ಸಮಾನತೆಯಿಂದ ಕೂಡಿ ಪರಿಣಾಮಕಾರಿಯಾಗಬೇಕಾದರೆ, ಅದು ಜನರ, ಜನರಿಂದ ಮತ್ತು ಜನರಿಗಾಗಿಯೇ ಜರುಗುವ ಪ್ರಕ್ರಿಯೆಯಾಗಬೇಕು. ಇದೇ ಆಶಯವು ಮಾನವ ಅಭಿವೃದ್ಧಿ ಚಿಂತನೆಯ ಮೂಲವಾಗಿದೆ.

ಅಮರ್ತ್ಯಸೇನ್ ಅವರ ಸಾಮರ್ಥ್ಯ ವಿಧಾನವು ಮಾನವ ಅಭಿವೃದ್ಧಿಯನ್ನು ಮೂಲತಃ ಜನರ ಸಾಮರ್ಥ್ಯಗಳನ್ನು ಮತ್ತು ಆಯ್ಕೆಗಳನ್ನು ವಿಸ್ತರಿಸುವ ಪ್ರಕ್ರಿಯೆ ಎಂದು ವ್ಯಾಖ್ಯಾನಿಸುತ್ತದೆ. ಅಮರ್ತ್ಯಸೇನ್ ಅವರ ಮಾತುಗಳಲ್ಲಿ ಹೇಳುವುದಾದರೆ "ಮಾನವ ಅಭಿವೃದ್ಧಿಯು, ಅರ್ಥವ್ಯವಸ್ಥೆಯನ್ನು ಸಂಪದ್ಭರಿತಗೊಳಿಸುವುದಾಗಿದೆ." ಮಾನವ ಅಭಿವೃದ್ಧಿ ವಿಧಾನವು ಜನರೇ ರಾಷ್ಟ್ರದ ನೈಜ ಸಂಪತ್ತು ಎಂಬುದನ್ನು ಒತ್ತಿ ಹೇಳುತ್ತ, ಯಾವುದೇ ಅಭಿವೃದ್ಧಿ ವಿಧಾನವು ಜನರನ್ನು ವೈವಿಧ್ಯಮಯ

ಹಾಗೂ ಸೃಜನಾತ್ಮಕವಾಗಿ ಜೀವಿಸಲು ಅನುಕೂಲ ಮಾಡಿಕೊಡುವ ಮತ್ತು ಅವರ ಶಕ್ತಿ ಸಾಮರ್ಥ್ಯಗಳನ್ನು ವಿಸ್ತರಿಸುವ ಕಾರ್ಯಗಳನ್ನು ಮಾಡಬೇಕು. ವಿಶ್ವಸಂಸ್ಥೆಯ ಸಹಸ್ರಮಾನದ ಅಭಿವೃದ್ಧಿ ಗುರಿಗಳು ಸಹ ಮಾನವ ಅಭಿವೃದ್ಧಿಯ ಅಂಶಗಳನ್ನೇ ಪ್ರಮುಖವಾಗಿ ಗುರುತಿಸುತ್ತಿವೆ. ಮಾನವನ ಮೂಲ ಸಾಮರ್ಥ್ಯಗಳೆಂದು ಶಿಕ್ಷಣ, ಆರೋಗ್ಯ ಮತ್ತು ಜೀವನೋಪಾಯಗಳನ್ನು ಗುರುತಿಸಲಾಗಿದ್ದು,

ಫಲಿತಗಳು

ರಾಯಚೂರು ಜಿಲ್ಲೆಯ ಮಾನವ ಅಭಿವೃದ್ಧಿಯಲ್ಲಿನ ಸಾಧನೆ ಅಧಿಕ ಮರಣ ಪ್ರಮಾಣಗಳಿಂದಾಗಿ ಸ್ವಾಭಾವಿಕವಾಗಿ ಕೆಳಮಟ್ಟದಲ್ಲಿರುತ್ತದೆ. ಮೂರು ಅಭಿವೃದ್ಧಿ ವಲಯಗಳನ್ನು ಗುರುತಿಸಬಹುದಾಗಿದ್ದು, ರಾಯಚೂರು, ಸಿಂಧನೂರು ತಾಲೂಕುಗಳು ಹೆಚ್ಚು ಅಭಿವೃದ್ಧಿ ಹೊಂದಿದ ತಾಲೂಕುಗಳಾದರೆ; ದೇವದುರ್ಗ ಮತ್ತು ಮಾನವಿ ತಾಲೂಕುಗಳು ಹಿಂದುಳಿದಿದ್ದು; ಲಿಂಗಸೂಗೂರು ತಾಲೂಕು ಮಧ್ಯಮ ಸ್ಥಾನದಲ್ಲಿದೆ. ದೇವದುರ್ಗ, ಮಾನವಿ ಮತ್ತು ಸಿಂಧನೂರು ತಾಲೂಕುಗಳಲ್ಲಿ ಮಾನವ ವಂಚಿತತೆ ಅಧಿಕವಿದೆ. ರಾಯಚೂರು ತಾಲೂಕು ಅತ್ಯಂತ ಮುಂದುವರೆದ ತಾಲೂಕಾದರೆ, ದೇವದುರ್ಗವು ಅತ್ಯಂತ ಹಿಂದುಳಿದ ತಾಲೂಕಾಗಿದೆ. ಜಿಲ್ಲೆಯಲ್ಲಿ ರಾಜ್ಯದಲ್ಲಿಯೇ ಗರಿಷ್ಠ ಮರಣ (ಶಿಶು, ಮಕ್ಕಳ ಹಾಗೂ ಮಾತೃ ಮರಣ ಪ್ರಮಾಣಗಳು) ಪ್ರಮಾಣಗಳಿದ್ದು, ಕನಿಷ್ಠ ಆರೋಗ್ಯ ಸೂಚ್ಯಂಕದ ಫಲವಾಗಿ ಕಡಿಮೆ ಮಟ್ಟದ ಮಾನವ ಅಭಿವೃದ್ಧಿ ಇದೆ. ಜಿಲ್ಲೆಯಲ್ಲಿನ ಒಟ್ಟು ದಾಖಲಾತಿ ಪ್ರಮಾಣವು ಕನಿಷ್ಠವಿದ್ದು ಶಿಕ್ಷಣ ಸೂಚ್ಯಂಕದಲ್ಲೂ ಗಮನಾರ್ಹ ಸಾಧನೆ ಕಂಡುಬರುವುದಿಲ್ಲ. ಹಾಗೆಯೇ, ಆಧುನಿಕ ಅಡುಗೆ ಇಂಧನ ಹಾಗೂ ಶೌಚಾಲಯ ಲಭ್ಯವಿರುವ ಕುಟುಂಬಗಳ ಪ್ರಮಾಣ ಅತ್ಯಂತ ಕಡಿಮೆ ಇದ್ದು; ಕೃಷಿಯೇತರ ಉದ್ಯೋಗಗಳಲ್ಲಿ ಪಾಲ್ಗೊಳ್ಳುವವರ ಸಂಖ್ಯೆಯೂ ಸಹ ಕನಿಷ್ಠ ಪ್ರಮಾಣದಲ್ಲಿದೆ. ಆದ್ದರಿಂದ ಗರಿಷ್ಠ ಮಟ್ಟದ ಮರಣ ಪ್ರಮಾಣಗಳು ಮತ್ತು ಕನಿಷ್ಠ ಮಟ್ಟದ ಜೀವನ ಮಟ್ಟ ಸೂಚಿಗಳ ದೆಸೆಯಿಂದಾಗಿ ಜಿಲ್ಲೆಯ ಮಾನವ ಅಭಿವೃದ್ಧಿಯು ಕಡಿಮೆ ಇದೆ. ಪರಿಶಿಷ್ಟಜಾತಿ/ಪಂಗಡದವರಲ್ಲಿನ ಮಾನವ ಅಭಿವೃದ್ಧಿ ಸ್ಥಿತಿಯು ಇನ್ನೂ ಕಳವಳಕಾರಿಯಾಗಿದ್ದು, ಗ್ರಾಮೀಣ ಪ.ಜಾ.ಯವರು ನಗರ ಪ್ರದೇಶದಲ್ಲಿ ವಾಸಿಸುವವರಿಗಿಂತ; ಮತ್ತು ಪರಿಶಿಷ್ಟ ಪಂಗಡದವರು ಹೆಚ್ಚು ವಂಚಿತರಾಗಿರುವ ಪರಿಸ್ಥಿತಿ ಇದೆ.

* ಜಿಲ್ಲೆಯಲ್ಲಿ ಲಿಂಗ ಅಭಿವೃದ್ಧಿಯೂ ಸಹ ನಿರುತ್ಸಾಹಕರವಾಗಿದೆ. ಅಭಿವೃದ್ಧಿಯಲ್ಲಿನ ಲಿಂಗ ಅಸಮಾನತೆಗೆ ಸಂಬಂಧಿಸಿದಂತೆ, ಸಿಂಧನೂರು ಹಾಗೂ ದೇವದುರ್ಗ ತಾಲೂಕುಗಳಲ್ಲಿ ಅತ್ಯಂತ ಕಡಿಮೆ ಪ್ರಮಾಣದ ಲಿಂಗ ಅಸಮಾನತೆ ಇದ್ದರೆ, ಮಾನವಿ ತಾಲೂಕಿನಲ್ಲಿ ಅತ್ಯಂತ ಹೆಚ್ಚಿನ ಪ್ರಮಾಣದ ಲಿಂಗ ಅಸಮಾನತೆ ಇದೆ. ಮಹಿಳಾ ಸಬಲೀಕರಣ ಸೂಚಿ ಮತ್ತು ಶ್ರಮದ ಮಾರುಕಟ್ಟೆಯ ಸೂಚಿಗಳು ತುಂಬಾ ವಿಷಮವಿರುವುದರಿಂದ ಜಿಲ್ಲೆಯಲ್ಲಿ ಹೆಚ್ಚಿನ ಲಿಂಗ ಅಸಮಾನತೆ ಇದೆ. ಮಾನವಿ ತಾಲೂಕಿನಲ್ಲಿ ಮಹಿಳಾ ಆರೋಗ್ಯ ಸೂಚಿಗಳ ಮೌಲ್ಯಗಳು ಬಹಳ ಕಡಿಮೆ ಮಟ್ಟದಲ್ಲಿರುವುದರಿಂದ ಅಲ್ಲಿ ಲಿಂಗ ಅಸಮಾನತೆಯು ಅಧಿಕವಿದೆ. ಗ್ರಾಮೀಣ ಸ್ವರೂಪದ ಆರ್ಥಿಕತೆ ಮತ್ತು ಅಧಿಕ ಬಡತನದ ಕಾರಣವಾಗಿ ದೇವದುರ್ಗ, ಮಾನವಿ ಮತ್ತು ಸಿಂಧನೂರು

[illegible]

ತಾಲೂಕುಗಳಲ್ಲಿ ಮಹಿಳೆಯರು ಕೆಲಸದಲ್ಲಿ ಭಾಗಿಯಾಗಬೇಕಾದ ಅನಿವಾರ್ಯತೆ ಇರುವುದರಿಂದ ಅಲ್ಲಿ ಶ್ರಮ ಮಾರುಕಟ್ಟೆ ಸೂಚಿಯು ಸಾಪೇಕ್ಷವಾಗಿ ಉತ್ತಮವಿದೆ. ಆದರೆ ರಾಯಚೂರು ಮತ್ತು ಲಿಂಗಸುಗೂರು ತಾಲೂಕುಗಳಲ್ಲಿ ಇದಕ್ಕೆ ವ್ಯತಿರಿಕ್ತವೆಂಬಂತೆ ಮಹಿಳಾ ಸಾಕ್ಷರತೆ ಉತ್ತಮವಿದ್ದು ಅವರಿಗೆ ಸೂಕ್ತವಾದ ಉದ್ಯೋಗಾವಕಾಶಗಳು ಇರದೇ ಇರುವುದರಿಂದ ಅಲ್ಲಿ ಹೆಚ್ಚಿನ ಅಸಮಾನತೆ ಇದೆ. ಮಹಿಳೆಯರ ವಿರುದ್ಧದ ದೌರ್ಜನ್ಯಗಳು ಕಡಿಮೆಯಾಗುತ್ತಿದ್ದರೂ ಇನ್ನೂ ಗಣನೀಯ ಪ್ರಮಾಣದಲ್ಲಿವೆ.

* ಮಕ್ಕಳ ಅಭಿವೃದ್ಧಿಯಲ್ಲೂ ಸಹ ಜಿಲ್ಲೆಯ ಸಾಧನೆ ಅಷ್ಟೇನೂ ಚೆನ್ನಾಗಿಲ್ಲ. ಲಿಂಗಸುಗೂರು ತಾಲೂಕಿನಲ್ಲಿ ಗರಿಷ್ಠ ಪ್ರಮಾಣದ ಮಕ್ಕಳ ಅಭಿವೃದ್ಧಿಯಿದ್ದರೆ ದೇವದುರ್ಗದಲ್ಲಿ ಅತ್ಯಂತ ಕಡಿಮೆ ಪ್ರಮಾಣದಲ್ಲಿದೆ. ದೇವದುರ್ಗದ ಮಕ್ಕಳ ಅಭಿವೃದ್ಧಿ ಸೂಚ್ಯಂಕದ ಮೌಲ್ಯವು ಲಿಂಗಸುಗೂರು ತಾಲೂಕಿನ ಸುಮಾರು ಎರಡೂವರೆ ಪಟ್ಟು ಕಡಿಮೆ ಇದೆ. ಇದಕ್ಕೆ ಮುಖ್ಯ ಕಾರಣಗಳೆಂದರೆ ಅಧಿಕ ಪ್ರಮಾಣದ ಮಕ್ಕಳ ಮರಣ ಪ್ರಮಾಣ ಮತ್ತು ಕಡಿಮೆ ತೂಕದಿಂದ ಜನಿಸಿದ ಮಕ್ಕಳ ಪ್ರಮಾಣ ಮತ್ತು ಕನಿಷ್ಠ ಪ್ರಮಾಣದಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲಾಧಾರೆಗೆ ಸೇರಿಸಿದುದು ಆಗಿದೆ. ಲಿಂಗಸುಗೂರಿನಲ್ಲಿ ಕನಿಷ್ಠವಿರುವ ಮಕ್ಕಳ ಮರಣ ಪ್ರಮಾಣ ಮತ್ತು ಕಡಿಮೆ ತೂಕದಿಂದ ಜನಿಸಿದ ಮಕ್ಕಳ ಕಡಿಮೆ ಪ್ರಮಾಣದಲ್ಲಿರುವುದರಿಂದ ಅಲ್ಲಿ ಮಕ್ಕಳ ಅಭಿವೃದ್ಧಿ ಸೂಚ್ಯಂಕವು ಉತ್ತಮವಿದೆ. ಆದ್ದರಿಂದ ಮಕ್ಕಳ ಮರಣ ದರವನ್ನು ಮತ್ತು ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲೆಗೆ ಸೇರಿಸುವ ಪ್ರಮಾಣಗಳನ್ನು ಸುಧಾರಿಸುವುದರಿಂದ ಮಕ್ಕಳ ಅಭಿವೃದ್ಧಿ ಸಾಧ್ಯವಾಗುತ್ತದೆ.

* ಆಹಾರ ಭದ್ರತೆಯು ಲಭ್ಯತೆ (ಸ್ಥಳೀಯ ಉತ್ಪಾದನಾ ಸಾಮರ್ಥ್ಯ), ದೊರೆಗೊಳ್ಳುವಿಕೆ (ಜನರಿಗೆ ಆಹಾರ ನಿಲುಕುವಿಕೆ ಅಥವಾ ಒದಗಿಸುವಿಕೆ) ಮತ್ತು ಜೀರ್ಣಿಸಿಕೊಳ್ಳುವಿಕೆಯ (ಪೋಷಣೆಯನ್ನು ಮೈಗೂಡಿಸಿಕೊಳ್ಳಲು ಬೇಕಾಗುವ ಪೂರಕ ಅಂಶಗಳು) ಅಂಶಗಳ ಆಧಾರದ ಮೇಲೆ ಅವಲಂಬಿತವಾಗಿದೆಯೆಂದು ವ್ಯಾಖ್ಯಾನಿಸಲಾಗಿದೆ. ರಾಯಚೂರು ಜಿಲ್ಲೆಯಲ್ಲಿ ಗಣನೀಯ ಪ್ರಮಾಣದಲ್ಲಿ ಆಹಾರದ ಅಭದ್ರತೆಯಿದೆ. ಜಿಲ್ಲೆಯಲ್ಲಿನ ಆಹಾರ ಲಭ್ಯತೆಯ ಪ್ರಮಾಣ ಕನಿಷ್ಠವಿದ್ದು ಜೀರ್ಣಿಸಿಕೊಳ್ಳುವಿಕೆಯ ಅಂಶಗಳು ನಿಕೃಷ್ಟವಾಗಿವೆ. ದೊರೆಗೊಳ್ಳುವಿಕೆಯ ಸೂಚಿಗಳು ಸಾಪೇಕ್ಷವಾಗಿ ಉತ್ತಮವಿದ್ದರೂ ಅವು ಒಟ್ಟಾರೆ ಆಹಾರ ಭದ್ರತೆಯ ಮೇಲೆ ಪೂರಕ ಪರಿಣಾಮ ಬೀರಿಲ್ಲ. ತಾಲೂಕುವಾರು ಪರಿಸ್ಥಿತಿಯನ್ನು ಗಮನಿಸಿದಾಗ ವಿವಿಧ ಸೂಚಿಗಳು ಕಡಿಮೆ ಇರುವುದರಿಂದ ಆಹಾರ ಅಭದ್ರತೆಯು ಎಲ್ಲೆಡೆ ಹರಡಿರುವುದು ಗೋಚರವಾಗುತ್ತದೆ. ಒಟ್ಟಾರೆಯಾಗಿ ನೋಡಿದಾಗ ಆಹಾರ ಭದ್ರತೆ ಸೂಚ್ಯಂಕವು ಲಭ್ಯತೆ ಮತ್ತು ಜೀರ್ಣಿಸಿಕೊಳ್ಳುವಿಕೆ ಅಂಶಗಳಿಂದ ಹೆಚ್ಚು ಪ್ರಭಾವಿತವಾಗಿರುವುದನ್ನು ಕಾಣಬಹುದಾಗಿದೆ. ಆದ್ದರಿಂದ ಆದಾಯ, ಕೃಷಿಯೇತರ ಉದ್ಯೋಗ, ಮಹಿಳಾ ಸಾಕ್ಷರತೆ ಮತ್ತು ಕುಡಿಯುವ ನೀರಿನ ಸೌಲಭ್ಯಗಳನ್ನು ಉತ್ತಮಪಡಿಸಿದರೆ ಆಹಾರ ಭದ್ರತಾ ಸೂಚ್ಯಂಕದಲ್ಲಿ ಹೆಚ್ಚಳ ಸಾಧಿಸಬಹುದಾಗಿದೆ.

* ಸಿಂಧನೂರು ತಾಲೂಕಿನ ಸಂಯುಕ್ತ ತಾಲೂಕು ಅಭಿವೃದ್ಧಿ ಸೂಚ್ಯಂಕವು ಜಿಲ್ಲೆಯಲ್ಲಿ ಗರಿಷ್ಠವಿದ್ದು ರಾಯಚೂರು, ಲಿಂಗಸುಗೂರು, ಮಾನವಿ ಮತ್ತು ದೇವದುರ್ಗ ತಾಲೂಕುಗಳು ನಂತರದಲ್ಲಿ ಬರುತ್ತವೆ. ಸಂಚಿತ ತಾಲೂಕು ಅಭಿವೃದ್ಧಿ ಸೂಚ್ಯಂಕದ ಮೌಲ್ಯಗಳಲ್ಲಿ ಹೆಚ್ಚು ವ್ಯತ್ಯಾಸ ಇಲ್ಲದೇ ಇರುವುದು ಹಿಂದುಳಿದಿರುವಿಕೆಯು ಎಲ್ಲಾ ತಾಲೂಕುಗಳಲ್ಲಿ ಹರಡಿಕೊಂಡಿರುವುದನ್ನು ಸೂಚಿಸುತ್ತದೆ. ರಾಯಚೂರು ಜಿಲ್ಲೆಯಲ್ಲಿ ಪ್ರಮುಖವಾಗಿ ಶಿಕ್ಷಣ ಮತ್ತು ಆರೋಗ್ಯ ಸೂಚಿಗಳು ಸಂಚಿತ ತಾಲೂಕು ಅಭಿವೃದ್ಧಿ ಸೂಚ್ಯಂಕದ ಮೌಲ್ಯಗಳನ್ನು ನಿರ್ಧರಿಸಿರುವುದನ್ನು ಗಮನಿಸಬಹುದು. ಜಿಲ್ಲೆಯಲ್ಲಿನ ಒಟ್ಟಾರೆ ಅಭಿವೃದ್ಧಿ ಮಟ್ಟ ಕಡಿಮೆ ಇದ್ದು ಅದು ಇತರ ವಿವಿಧ ಆಯಾಮಗಳ ಮೇಲೂ ಪ್ರಭಾವ ಬೀರಿ ಜಿಲ್ಲೆಯು ಹಿಂದುಳಿಯುವುದಕ್ಕೆ ಕಾರಣವಾಗಿದೆ.

* ರಾಯಚೂರು ಜಿಲ್ಲೆಯಲ್ಲಿ ಪ.ಜಾ.ಮತ್ತು ಪ.ಪಂ.ದವರ ಜನಸಂಖ್ಯೆಯ ಪ್ರಮಾಣವು ಶೇ.೪೦ರಷ್ಟಿದ್ದು ಈ ಪ್ರಮಾಣದಲ್ಲಿರುವ ಜಿಲ್ಲೆಯಲ್ಲಿ ರಾಜ್ಯದ ಅಂಥ ಕೆಲವೇ ಜಿಲ್ಲೆಗಳಲ್ಲಿ ಒಂದಾಗಿದೆ. ಅಂದರೆ ದಲಿತರ ಅಭಿವೃದ್ಧಿಯಿಂದ ಒಟ್ಟಾರೆ ಅಭಿವೃದ್ಧಿಯ ಮೇಲೂ ಉತ್ತಮ ಪರಿಣಾಮ ಬೀರುತ್ತದೆ ಎಂದು ಹೇಳಬಹುದು. ಆದರೆ ಜಿಲ್ಲೆಯ ದಲಿತರು ಇನ್ನೂ ಅಭಿವೃದ್ಧಿಯ ಅಂಚಿನಲ್ಲಿಯೇ ಇದ್ದು ಅವರ ಶೈಕ್ಷಣಿಕ ಮತ್ತು ಸ್ವತ್ತು ಪರಿಸ್ಥಿತಿಯು ಹೀನವಾಗಿಯೇ ಇದೆ. ದಲಿತರ ಜನಸಂಖ್ಯಾ ಬೆಳವಣಿಗೆಯು ತೀವ್ರವಾಗಿರುವುದು ಅವರಿಗೆ ಸಂತಾನೋತ್ಪತ್ತಿ ಆರೋಗ್ಯದ ಸೌಲಭ್ಯಗಳು ಸಮರ್ಪಕ ಪ್ರಮಾಣದಲ್ಲಿ ದೊರೆಯದಿರುವುದನ್ನು ಮತ್ತು ಅವರು ಅವುಗಳನ್ನು ಉಪಯೋಗಿಸದಿರುವುದನ್ನು ಸೂಚಿಸುತ್ತದೆ. ಅವರ ಶಾಲಾ ದಾಖಲಾತಿ ಕಡಿಮೆ ಇದ್ದು ಕೃಷಿಯೇತರ ಉದ್ಯೋಗಾವಕಾಶಗಳು ಅವರಿಗೆ ಲಭ್ಯವಿಲ್ಲವೆಂದೇ ಹೇಳಬಹುದು. ಶಾಸನಾತ್ಮಕ ನಿಬಂಧನೆಗಳಿದ್ದಲ್ಲಿ ತಾರತಮ್ಯವು ಕಡಿಮೆ ಪ್ರಮಾಣದಲ್ಲಿದ್ದು, ಇತರ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಅದು ವಿವಿಧ ರೂಪಗಳಲ್ಲಿ ಮುಂದುವರೆದಿದೆ. ಅವರ ಹಕ್ಕುಗಳ ಕುರಿತಾದ ಜಾಗೃತಿಯನ್ನು ವೃದ್ಧಿಸಿ; ಅವರನ್ನು ಅಧಿಕ ಸಂಖ್ಯೆಯಲ್ಲಿ ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ನೇಮಕ ಮಾಡಿದರೆ, ಆ ಜನಾಂಗದವರಿಗೆ ವಿಸ್ತೃತ ಹಾಗೂ ಗುಣಮಟ್ಟದ ಸೇವೆ ಒದಗಿಸಲು ಸಹಾಯಕವಾಗುತ್ತದೆ.

* ರಾಜ್ಯಕ್ಕೆ ಹೋಲಿಸಿದರೆ ಜಿಲ್ಲೆಯ ಸಾಕ್ಷರತಾ ದರಗಳು ತುಂಬಾ ಕಡಿಮೆ ಮಟ್ಟದಲ್ಲಿ ಇವೆಯಲ್ಲದೇ, ಗ್ರಾಮೀಣ ಮತ್ತು ಮಹಿಳಾ ಸಾಕ್ಷರತೆಗಳು ತಳಮಟ್ಟದಲ್ಲಿವೆ. ಆದಾಗ್ಯೂ ಸಹ ಸಾಕ್ಷರತಾ ದರಗಳಲ್ಲಿನ ಏರಿಕೆಯು ಲಿಂಗಸುಗೂರು, ಸಿಂಧನೂರು ಹಾಗೂ ಮಾನವಿ ತಾಲೂಕುಗಳಲ್ಲಿ ಅಧಿಕವಿದ್ದು, ಗ್ರಾಮೀಣ ಮಹಿಳೆಯರಲ್ಲಿ ಅತ್ಯಧಿಕವಿದೆ.

ಸಾಕ್ಷರತೆಯಲ್ಲಿನ ಲಿಂಗ (ಪುರುಷ–ಮಹಿಳೆ) ಅಂತರಗಳೂ ಗಮನಾರ್ಹವಾಗಿದ್ದು, ಕ್ರಮೇಣ ಕಡಿಮೆಯಗುತ್ತಿರುವುದು ಒಂದು ಉತ್ತೇಜಕ ಪ್ರಕ್ರಿಯೆಯಾಗಿದೆ. ಗ್ರಾಮೀಣ ಪ್ರದೇಶದಲ್ಲಿನ ಲಿಂಗ ಅಂತರಗಳು ನಗರ ಪ್ರದೇಶಗಳಲ್ಲಿನ ಅಂತರಗಳಿಗೆ ಹೋಲಿಸಿದರೆ ಸುಮಾರು ಎರಡು ಪಟ್ಟು ಇರುವುದು ಆತಂಕಕಾರಿ. ಪ.ಜಾ/ಪ.ಪಂ.ಗಳ ಜನರ ಸಾಕ್ಷರತೆಯ ಪ್ರಮಾಣವು ಇತರರಿಗಿಂತ ಕಡಿಮೆ ಇದ್ದು, ಪ.ಪಂಗಡಗಳ ಜನರ ಸಾಕ್ಷರತೆಯ ವಂಚಿತತೆ ಬಹಳವಿದೆ.

ಶಾಲಾ ದಾಖಲಾತಿ ಏರಿಕೆ ಕಂಡಿದ್ದು, ವಿದ್ಯಾರ್ಥಿನಿಯರ ದಾಖಲಾತಿಯು ವಿದ್ಯಾರ್ಥಿಗಳ ದಾಖಲಾತಿಗಿಂತ ಅಲ್ಪ ಮಟ್ಟದ ಹೆಚ್ಚಳ ಸಾಧಿಸಿರುವುದನ್ನು ನೋಡಬಹುದಾಗಿದೆ. ಪ.ಜಾ., ಪ.ಪಂ, ಮತ್ತು ಅಲ್ಪಸಂಖ್ಯಾತ ವಿದ್ಯಾರ್ಥಿಗಳ ದಾಖಲಾತಿಯಲ್ಲಿ ಹೆಚ್ಚಳವಾಗುತ್ತಿರುವುದು ಗಮನಾರ್ಹ. ರಾಯಚೂರು ಮತ್ತು ಲಿಂಗಸುಗೂರು ತಾಲೂಕುಗಳಲ್ಲಿ ದಾಖಲಾತಿಯ ಪಾಲು ಹೆಚ್ಚಾಗಿದ್ದಿತಲ್ಲದೇ, ಆ ತಾಲೂಕಗಳಲ್ಲಿನ ಹೆಚ್ಚಳದ ಪ್ರಮಾಣವೂ ಅಧಿಕವಿದ್ದಿತು. ಜಿಲ್ಲೆಯಲ್ಲಿನ ದಾಖಲಾತಿಯಲ್ಲಿನ ಬದಲಾಣೆಯು ಪ್ರಮುಖವಾಗಿ ಹುಡುಗಿಯರ ದಾಖಲಾತಿಯಿಂದ ಪ್ರಭಾವಿಸಲ್ಪಟ್ಟಿದೆ.

ಪ್ರಾಥಮಿಕ ಹಂತದಲ್ಲಿ ಶಾಲೆ ಬಿಟ್ಟ ಮತ್ತು ಶಾಲೆಯಿಂದ ಹೊರಗಿರುವ ಹೆಣ್ಣು ಮಕ್ಕಳ ಸಂಖ್ಯೆ ಅಧಿಕವಿದ್ದು, ಈ ಸಮಸ್ಯೆಯು ಗ್ರಾಮೀನ ಪ್ರದೇಶಗಳಲ್ಲಿ ಹೆಚ್ಚಾಗಿದೆ. ಶಾಲೆಯಿಂದ ಹೊರಗುಳಿದವರನ್ನು ಶಾಲೆಗೆ ಸೇರಿಸುವ ಪ್ರಕ್ರಿಯೆ ತೃಪ್ತಿಕರವಾಗಿದೆ. ಆದರೂ ಸಹ ಪಾಲಕರನ್ನು ಮತ್ತು ಹೆಣ್ಣು ಮಕ್ಕಳನ್ನು ಪ್ರೇರೇಪಿಸುವ ಕಾರ್ಯಕ್ರಮಗಳನ್ನು ಮುಂದುವರೆಸುವುದು ಸೂಕ್ತ. ಹೀಗೆ ಪರಿಮಾಣಾತ್ಮಕವಾಗಿ ಜಿಲ್ಲೆಯಲ್ಲಿ ಪ್ರಾಥಮಿಕ ಶಿಕ್ಷಣ ಕ್ಷೇತ್ರ ಪ್ರಗತಿ ಹೊಂದಿದ್ದು, ಅಸಾಕ್ಷರತೆಯನ್ನು ಹೋಗಲಾಡಿಸುವ ಮತ್ತು ಶಾಲೆ ಬಿಡುವ ಮಕ್ಕಳ ಪ್ರಮಾಣವನ್ನು ನಿಯಂತ್ರಿಸುವಲ್ಲಿನ ಪ್ರಗತಿ ಗಮನಾರ್ಹವಾಗಿದೆ.

ಮಾಧ್ಯಮಿಕ ಶಿಕ್ಷಣದಲ್ಲಿಯೂ ಸಹ ಇಂಥದೇ ಚಿತ್ರಣವಿದ್ದು ದಾಖಲಾತಿ, ಶಾಲೆಯಲ್ಲಿ ಉಳಿಯುವವರ ಹಾಗೂ ಮುಂದುವರಿಯುವವರ ಪ್ರಮಾಣಗಳಲ್ಲಿ ಹೆಚ್ಚಳವಾಗಿದೆ. ಮಾಧ್ಯಮಿಕ ಶಾಲೆಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿಯು ವಿದ್ಯಾರ್ಥಿನಿಯರಿಗಿಂತ, ಮತ್ತು ನಗರ ಪ್ರದೇಶಗಳಲ್ಲಿ ಹೆಚ್ಚಿಗೆ ಇದ್ದಿತು.

ಜಿಲ್ಲೆಯಲ್ಲಿ ವಿದ್ಯಾರ್ಥಿ ಶಿಕ್ಷಕರ ಅನುಪಾತವು ನಿಗದಿಗೊಳಿಸಿದ ಮಾನದಂಡದೊಳಗೆ ಇದೆ. ಅದೇ ರೀತಿ, ಜಿಲ್ಲೆಯ ಶಾಲೆಗಳ ಮೂಲಭುತ ಸೌಕರ್ಯಗಳು ತುಲನಾತ್ಮಕವಾಗಿ ಉತ್ತಮವಾಗಿವೆ. ಎಸ್.ಎಸ್.ಎಲ್.ಸಿ ಹಾಗೂ ಇತರ ಬೋರ್ಡ್ ಪರೀಕ್ಷೆಗಳಲ್ಲಿನ ಪರಿಣಾಮಗಳಲ್ಲಿ ಜಿಲ್ಲೆಯ ಸಾಧನೆಯು ತೃಪ್ತಿಕರವಾಗಿಲ್ಲ. ಸರಕಾರಿ ಶಾಲೆಗಳ ವಿದ್ಯಾರ್ಥಿಗಳ ಸಾಧನೆಯು ಖಾಸಗಿ ಶಾಲೆಯವರಿಗಿಂತ ಕಡಿಮೆ ಇದ್ದು, ಖಾಸಗಿ ಅನುದಾನರಹಿತ ಶಾಲೆಗಳ ಸಾಧನೆ ಇನ್ನೂ ಹೆಚ್ಚಿನ ಮಟ್ಟದಲ್ಲಿದೆ. ಜಿಲ್ಲೆಯಲ್ಲಿ ಶಿಕ್ಷಣದ ಮೇಲಿನ ತಲಾ ವೆಚ್ಚವು ಕೇವಲ ರೂ.೪೬೦ರಷ್ಟಿದೆ. ಆದರೆ ಸದರಿ ವೆಚ್ಚವು ಸಾಕ್ಷರತೆಯಲ್ಲಿ ಹೆಚ್ಚಳ, ಮೂಲಭೂತ ಸೌಲಭ್ಯಗಳ ಸೂಚಿ ಮತ್ತು ಎಸ್.ಎಸ್.ಎಲ್.ಸಿ, ಪಿ.ಯು.ಸಿ. ಪರೀಕ್ಷೆಗಳಲ್ಲಿ ಪಾಸಾದವರ ಪ್ರಮಾಣಗಳ ಜೊತೆಗೆ ಧನಾತ್ಮಕವಾದ ಸಂಬಂಧ ಮತ್ತು ಶಾಲೆ ಬಿಡುವ ಮಕ್ಕಳ ಪ್ರಮಾಣದ ಜೊತೆಗೆ ಋಣಾತ್ಮಕ ಸಂಬಂಧ ಹೊಂದಿರುವುದರಿಂದ ಅದನ್ನು ಹೆಚ್ಚಿಸುವ ಅವಶ್ಯಕತೆಯಿದೆ.

* ಜಿಲ್ಲೆಯು ರಾಜ್ಯದ ಶೇ.೩.೫ರಷ್ಟು ಜನಸಂಖ್ಯೆಯನ್ನು ಹೊಂದಿದ್ದು ಕಡಿಮೆ ಪ್ರಮಾಣದ ನಗರೀಕರಣವನ್ನು ಹೊಂದಿದೆ. ಆದರೆ ಪ.ಜಾ/ಪ.ಪಂಗಳ ಜನರ ಪ್ರಮಾಣ ಜಿಲ್ಲೆಯಲ್ಲಿ ಅಧಿಕವಿದೆ. ಜಿಲ್ಲೆಯಲ್ಲಿ ಮರಣ ದರಗಳು ಮತ್ತು ಗರ್ಭಿಣಿಯರಲ್ಲಿನ ಅನೀಮಿಯಾ ಗರಿಷ್ಠ ಪ್ರಮಾಣದಲ್ಲಿವೆ.

ಇತ್ತೀಚೆಗೆ ಆರೋಗ್ಯ ಸಂಸ್ಥೆಗಳ ಸ್ಥಾಪನೆಯಿಂದಾಗಿ ಮತ್ತು ಉಚಿತ ಆಂಬುಲೆನ್ಸ್ ಸೇವೆಯಿಂದಾಗಿ ಸಾಂಸ್ಥಿಕ ಹೆರಿಗೆಗಳ ಪ್ರಮಾಣವು ಶೇ.೯೦ಕ್ಕೆ ತಲುಪಿದ್ದು ಅದನ್ನು ಶೇ.೧೦೦ಕ್ಕೆ ತಲುಪಿಸುವ ಪ್ರಯತ್ನಗಳಾಗಬೇಕು.

ಜಿಲ್ಲೆಯಲ್ಲಿ ಆರೋಗ್ಯ ಸೌಲಭ್ಯಗಳ ಮತ್ತು ಸಿಬ್ಬಂದಿಯ ಕೊರತೆ ಇರುವುದು ಕಂಡುಬರುತ್ತದೆ. ಗರ್ಭನಿರೋಧಕಗಳನ್ನು ಬಳಸದಿರುವ ದಂಪತಿಗಳ ಪ್ರಮಾಣವು ಶೇ.೨೬ರಷ್ಟಿದ್ದು, ಮಹಿಳೆಯರ ಸಂತಾನಹರಣ ಶಸ್ತ್ರಚಿಕಿತ್ಸೆ ಮತ್ತು ವಂಕಿಗಳು ಅತ್ಯಂತ ಪ್ರಮುಖ ಗರ್ಭನಿರೋಧಕ ಸಾಧನಗಳಾಗಿ ಬಳಸಲ್ಪಡುತ್ತಿರುವುದರಿಂದ, ಶೇ ೬೩ರಷ್ಟು ಗರ್ಭ ತಡೆಯುವ ಜವಾಬ್ದಾರಿಯನ್ನು ಮಹಿಳೆಯರೇ ನಿಭಾಯಿಸುತ್ತಿರುವುದು ಲಿಂಗ ತಾರತಮ್ಯವನ್ನು ತೋರಿಸುತ್ತದೆ. ಆರೋಗ್ಯದ ಮೇಲಿನ ತಲಾವೆಚ್ಚ ಕಡಿಮೆ ಇರುವುದು ಜಿಲ್ಲೆಯ ಆರೋಗ್ಯ ವ್ಯವಸ್ಥೆಯ ಅಭಿವೃದ್ಧಿಗೆ ಅನುಕೂಲಕರವಲ್ಲ.

